# ಭಾರತದ ಲೆಕ್ಕನಿಯಂತ್ರಕರು
# ಮತ್ತು
# ಮಹಾಲೆಕ್ಕಪರಿಶೋಧಕರ ವರದಿ

**(ಸಿವಿಲ್)**

**31 ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷ**

**ಕರ್ನಾಟಕ ಸರ್ಕಾರ**

## ವಿಷಯಸೂಚಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಪ್ರಸ್ತಾವನೆ | | ix |
| ಸ್ಥೂಲನೋಟ | | xiii |
| **ಅಧ್ಯಾಯ 1** | | |
| **ರಾಜ್ಯ ಸರ್ಕಾರದ ಹಣಕಾಸು** | | |
| ಪರಿಚಯ | 1.1 | 3 |
| ಜಮೆಗಳು ಮತ್ತು ವಿತರಣೆಗಳ ಸಾರಾಂಶ | 1.1.1 | 3 |
| ಪ್ರಮುಖ ಸೂಚಕಗಳನ್ವಯ ಆರ್ಥಿಕ ಸ್ಥಿತಿ | 1.1.2 | 4 |
| ಆರ್ಥಿಕ ಸ್ಥಿತಿಯ ತುಲನೆಗೆ ಅನುಸರಿಸಿದ ಕ್ರಮ | 1.2 | 5 |
| ಕರ್ನಾಟಕದಲ್ಲಿ ವಿತ್ತೀಯ ಸುಧಾರಣಾ ಪಥ | 1.2.1 | 6 |
| ಆರ್ಥಿಕ ನೀತಿಯ ನಿರೂಪಣೆಗಳು – 2007–08 | 1.2.2 | 6 |
| ಅಧಿನಿಯಮದಲ್ಲಿ ಸೂಚಿಸಿದ ಆರ್ಥಿಕ ಗುರಿಗಳ ಸಾಧನೆಯ ಮಾರ್ಗಸೂಚಿ | 1.2.3 | 7 |
| ಆರ್ಥಿಕ ಪರಿಸ್ಥಿತಿಯ ಮಧ್ಯಂತರ ಅವಧಿಯ ಸಮೀಕ್ಷೆ | 1.2.4 | 8 |
| ಜಮೆಗಳ ಮೊತ್ತದ ಪ್ರವೃತ್ತಿ ಮತ್ತು ಸಂಯೋಜನೆ | 1.3 | 8 |
| ರಾಜಸ್ವ ಜಮೆಗಳು | 1.3.1 | 9 |
| ಸಂಪನ್ಮೂಲಗಳ ಬಳಕೆ | 1.4 | 12 |
| ವೆಚ್ಚದ ವೃದ್ಧಿ | 1.4.1 | 12 |
| ಕಾರ್ಯ ಚಟುವಟಿಕೆಗಳಲ್ಲಿ ಒಟ್ಟು ವೆಚ್ಚದ ಪ್ರವೃತ್ತಿ | 1.4.2 | 13 |
| ರಾಜಸ್ವ ವೆಚ್ಚದ ವ್ಯಾಪ್ತಿ | 1.4.3 | 14 |
| ಬದ್ಧ ವೆಚ್ಚಗಳು | 1.4.4 | 15 |
| ಹಂಚಿಕೆಯ ಆದ್ಯತೆಗಳನ್ವಯ ವೆಚ್ಚ | 1.5 | 18 |
| ವೆಚ್ಚದ ಗುಣಮಟ್ಟ | 1.5.1 | 18 |
| ಸಾಮಾಜಿಕ ಸೇವೆಗಳ ವಿಭಾಗದ ವೆಚ್ಚ | 1.5.2 | 19 |
| ಆರ್ಥಿಕ ಸೇವೆಗಳ ಮೇಲಿನ ವೆಚ್ಚ | 1.5.3 | 20 |
| ಸ್ಥಳೀಯ ಸಂಸ್ಥೆಗಳು ಮತ್ತು ಇತರೆ ಸಂಸ್ಥೆಗಳಿಗೆ ಆರ್ಥಿಕ ಸಹಾಯ | 1.5.4 | 22 |
| ಬಳಕೆ ಪ್ರಮಾಣ ಪತ್ರಗಳನ್ನು ನೀಡುವಲ್ಲಿ ವಿಳಂಬ | 1.5.5 | 22 |
| ಲೆಕ್ಕಪತ್ರಗಳನ್ನು ಸಲ್ಲಿಸದಿರುವಿಕೆ | 1.5.6 | 23 |
| ಸ್ವಾಯುತ್ತ ಸಂಸ್ಥೆಗಳ ಕಾರ್ಯನಿರ್ವಹಣೆಯ ಲೆಕ್ಕಪರಿಶೋಧನೆ | 1.5.7 | 23 |
| ಹಣ ದುರುಪಯೋಗಗಳು, ನಷ್ಟಗಳು, ಅಪವಿನಿಯೋಗಗಳು, ಇತ್ಯಾದಿ | 1.5.8 | 23 |

| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ನಷ್ಟಗಳ ವಜಾ, ಇತ್ಯಾದಿ | 1.5.9 | 23 |
| ಆಸ್ತಿಗಳು ಮತ್ತು ಜವಾಬ್ದಾರಿಗಳು | 1.6 | 23 |
| ಅಪೂರ್ಣ ಯೋಜನೆಗಳು | 1.6.1 | 24 |
| ಹೂಡಿಕೆಗಳು ಮತ್ತು ಪ್ರತಿಫಲಗಳು | 1.6.2 | 24 |
| ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು | 1.6.3 | 25 |
| ನಗದು ಶಿಲ್ಕುಗಳ ನಿರ್ವಹಣೆ | 1.6.4 | 26 |
| ತೀರಿಕೆಯಾಗದೆ ಉಳಿದ ಜವಾಬ್ದಾರಿಗಳು | 1.7 | 26 |
| ಹಣಕಾಸು ಜವಾಬ್ದಾರಿಗಳು – ಸಾರ್ವಜನಿಕ ಋಣ ಮತ್ತು ಖಾತರಿಗಳು | 1.7.1 | 26 |
| ಖಾತರಿಗಳ ಸ್ಥಿತಿ – ಸಾಂದರ್ಭಿಕ ಜವಾಬ್ದಾರಿಗಳು | 1.7.2 | 27 |
| ಆಯವ್ಯಯದ ಹೊರಗಿನ ಸಾಲಗಳು | 1.7.3 | 28 |
| ಋಣ ಸಹಿಷ್ಣುತೆ | 1.7.4 | 29 |
| ಋಣ ಸ್ಥಿರತೆ | 1.7.5 | 30 |
| ಋಣವಲ್ಲದ ಜಮೆಗಳಲ್ಲಿನ ಏರಿಕೆಯ ಪರ್ಯಾಪ್ತತೆ | 1.7.6 | 30 |
| ಸಾಲಗಳ ನಿವ್ವಳ ಲಭ್ಯತೆ | 1.7.7 | 31 |
| ಕೊರತೆಗಳ ನಿರ್ವಹಣೆ | 1.8 | 32 |
| ವಿತ್ತೀಯ ಅನುಪಾತಗಳು | 1.9 | 34 |
| ನಿರ್ಣಯ | 1.10 | 36 |
| **ಅಧ್ಯಾಯ 2** | | |
| **ಹಂಚಿಕೆಯಲ್ಲಿನ ಆದ್ಯತೆಗಳು ಮತ್ತು ಧನ ವಿನಿಯೋಗ** | | |
| ಪರಿಚಯ | 2.1 | 39 |
| ಧನವಿನಿಯೋಗ ಲೆಕ್ಕಗಳ ಸಾರಾಂಶ | 2.2 | 39 |
| ಹಂಚಿಕೆಯ ಆದ್ಯತೆಗಳಲ್ಲಿನ ಪರಿಪಾಲನೆ | 2.3 | 40 |
| ಹಂಚಿಕೆಯ ಆದ್ಯತೆಗಳಿಗನುಗುಣವಾಗಿ ವಿನಿಯೋಗ | 2.3.1 | 40 |
| ಸತತ ಬಳಕೆಯಾಗದೇ ಉಳಿದ ಅವಕಾಶಗಳು | 2.3.3 | 41 |
| ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ | 2.3.4 | 41 |
| ಸಕ್ರಮೀಕರಣದ ಅಗತ್ಯವಿರುವ ಹೆಚ್ಚುವರಿ ವೆಚ್ಚ | 2.4 | 42 |
| ಸತತ ಹೆಚ್ಚಳಗಳು | 2.4.3 | 42 |
| ಅನಗತ್ಯ/ಸಾಕಷ್ಟಿಲ್ಲದ/ಅಧಿಕ ಪೂರಕ ಅಂದಾಜುಗಳು | 2.5 | 42 |
| ನಿಧಿಗಳ ಪುನರ್ವಿನಿಯೋಗ | 2.6 | 43 |

| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಅಯುಕ್ತ ಪುನರ್ವಿನಿಯೋಗ ಮೊತ್ತಗಳು | 2.6.1 | 43 |
| ದೋಷಯುಕ್ತ ಪುನರ್ವಿನಿಯೋಗಗಳು | 2.6.2 | 43 |
| ಹೊಂದಾಣಿಕೆ ಮಾಡದಿರುವ ವೆಚ್ಚಗಳು | 2.7 | 43 |
| ಆಯವ್ಯಯದ ಅಂದಾಜುಗಳಲ್ಲಿನ ದೋಷಗಳು | 2.8 | 44 |
| ವೆಚ್ಚದ ಒತ್ತಡ | 2.9 | 44 |
| ಹೊಸ ಸೇವೆ/ಹೊಸ ಸೇವಾ ಸಾಧನ | 2.10 | 44 |
| ಆಯವ್ಯಯ ಅವಕಾಶವಿಲ್ಲದ ವೆಚ್ಚ | 2.11 | 44 |
| ಸಾದಿಲ್ವಾರು ನಿಧಿ | 2.12 | 45 |
| ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು | 2.13 | 45 |
| **ಅಧ್ಯಾಯ 3** | | |
| **ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ** | | |
| **ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ,<br>ನಗರಾಭಿವೃದ್ಧಿ ಇಲಾಖೆ ಹಾಗೂ<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** | | |
| ಕರ್ನಾಟಕದಲ್ಲಿ ತ್ಯಾಜ್ಯ ನಿರ್ವಹಣೆ | 3.1 | 49 |
| **ಗೃಹ ಇಲಾಖೆ** | | |
| ಪೊಲೀಸ್ ಇಲಾಖೆಯಲ್ಲಿ ಗಣಕೀಕರಣ | 3.2 | 66 |
| **ಜಲ ಸಂಪನ್ಮೂಲಗಳ ಇಲಾಖೆ – ಸಣ್ಣ ನೀರಾವರಿ** | | |
| ಏತ ನೀರಾವರಿ ಯೋಜನೆಗಳು | 3.3 | 74 |
| **ಸಹಕಾರ ಇಲಾಖೆ** | | |
| ಕೃಷಿ ಸಾಲ ಮನ್ನಾ ಯೋಜನೆ ಮತ್ತು ಬಡ್ಡಿ ರಿಯಾಯಿತಿ ಯೋಜನೆಗಳು | 3.4 | 90 |
| **ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ,** | | |
| ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ರ ನಿರ್ವಹಣೆ' | 3.5 | 100 |
| **ಅಧ್ಯಾಯ 4** | | |
| **ವಹಿವಾಟುಗಳ ಲೆಕ್ಕಪರಿಶೋಧನೆ** | | |
| **ಅಧಿಕ ಪಾವತಿ/ವ್ಯರ್ಥ/ನಿಷ್ಫಲ ವೆಚ್ಚ** | 4.1 | 111 |
| **ಉನ್ನತ ಶಿಕ್ಷಣ ಇಲಾಖೆ** | | |
| ಮನೆ ಬಾಡಿಗೆ ಭತ್ಯೆಯ ಅಧಿಕ ಪಾವತಿ | 4.1.1 | 111 |

| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ಜಲ ಸಂಪನ್ಮೂಲಗಳ ಇಲಾಖೆ – ಸಣ್ಣ ನೀರಾವರಿ** | | |
| ನಿರ್ಜಲೀಕರಣಗೊಳಿಸುವ ವೆಚ್ಚಗಳ ಅಂಗೀಕರಿಸಲಾಗದ ಪಾವತಿ | 4.1.2 | 112 |
| ಅಧಿಕ ದರದಲ್ಲಿ ಪಾವತಿ | 4.1.3 | 113 |
| **ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ – ಸಂಪರ್ಕ ಮತ್ತು ಕಟ್ಟಡಗಳು** | | |
| ನಿಷ್ಫಲ ವೆಚ್ಚ | 4.1.4 | 113 |
| **ಗುತ್ತಿಗೆ ಒಪ್ಪಂದಗಳ ಉಲ್ಲಂಘನೆ, ಗುತ್ತಿಗೆದಾರರಿಗೆ ಅನುಚಿತ ಒಲವು ಮತ್ತು ತಪ್ಪಿಸಬಹುದಾಗಿದ್ದ ವೆಚ್ಚ** | 4.2 | 115 |
| **ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ – ಸಂಪರ್ಕ ಮತ್ತು ಕಟ್ಟಡಗಳು** | | |
| ಗುತ್ತಿಗೆದಾರನಿಗೆ ಅಧಿಕ ಪಾವತಿ | 4.2.1 | 115 |
| ತಪ್ಪಿಸಬಹುದಾಗಿದ್ದ ಅಧಿಕ ವೆಚ್ಚ | 4.2.2 | 115 |
| **ನಗರಾಭಿವೃದ್ಧಿ ಇಲಾಖೆ** | | |
| ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿ | 4.2.3 | 116 |
| ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿ | 4.2.4 | 117 |
| **ಕೃಷಿ ಇಲಾಖೆ** | | |
| ಕೇಂದ್ರದ ನೆರವಿನ ನಷ್ಟ | 4.2.5 | 118 |
| **ಕ್ರಮಬದ್ಧತೆ ವಿಷಯಗಳು ಮತ್ತು ಇತರೆ ಅಂಶಗಳು** | 4.3 | 119 |
| **ಶಿಕ್ಷಣ ಇಲಾಖೆ** | | |
| ಕಂಪ್ಯೂಟರ್ ನೆರವುಳ್ಳ ಕಲಿಕಾ ಕೇಂದ್ರಗಳ ಉದ್ದೇಶಗಳನ್ನು ಸಾಧಿಸದಿರುವುದು | 4.3.1 | 119 |
| **ಸಾಮಾನ್ಯ** | 4.4 | 121 |
| ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಸರಣೆ | 4.4.1 | 121 |
| ಅಸ್ವೀಕೃತ ಉಗ್ರಾಣ ಮತ್ತು ದಾಸ್ತಾನು ಲೆಕ್ಕಪತ್ರಗಳು | 4.4.2 | 123 |
| ಬಾಕಿ ಇರುವ ತಪಾಸಣಾ ವರದಿಗಳು | 4.4.3 | 124 |
| **ಅಧ್ಯಾಯ 5** | | |
| **ಆಂತರಿಕ ನಿಯಂತ್ರಣ ವ್ಯವಸ್ಥೆ** | | |
| **ಹಣಕಾಸು ಇಲಾಖೆ** | | |
| ಹಣಕಾಸು ಇಲಾಖೆಯಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ | 5.1 | 127 |

| ಅನುಬಂಧಗಳ ಪಟ್ಟಿ | | |
|---|---|---|
| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
| 1.1 | ಭಾಗ ಎ: ಸರ್ಕಾರಿ ಲೆಕ್ಕಗಳ ರೂಪರೇಷೆ ಮತ್ತು ನಮೂನೆ | 145 |
| | ಭಾಗ ಬಿ: ಹಣಕಾಸು ಲೆಕ್ಕದ ವಿನ್ಯಾಸ | 146 |
| | ಭಾಗ ಸಿ: ಅಧ್ಯಾಯ-1ರಲ್ಲಿ ಉಪಯೋಗಿಸಿರುವ ಪದಗಳ ಪಟ್ಟಿ ಮತ್ತು ಅವುಗಳ ಲೆಕ್ಕಾಚಾರದ ಆಧಾರಗಳು | 147 |
| 1.2 | 31 ಮಾರ್ಚ್ 2008ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ | 148 |
| 1.3 | ಜಮೆಗಳ ಮತ್ತು ವಿತರಣೆಗಳ ಸಾರಾಂಶ | 149 |
| 1.4 | ನಿಧಿಗಳ ಆಕರಗಳು ಮತ್ತು ಅನ್ವಯಗಳು | 152 |
| 1.5 | ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು | 153 |
| 1.6 | ರಾಜ್ಯದ ಸ್ವಂತ ಆರ್ಥಿಕ ಸುಧಾರಣಾ ಮಾರ್ಗದ ಫಲಿತಾಂಶ ಸೂಚಕಗಳು | 155 |
| 1.7 | 31 ಮಾರ್ಚ್ 2008ರಲ್ಲಿದ್ದಂತೆ ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳು | 156 |
| 1.8 | ಲೆಕ್ಕಪತ್ರಗಳನ್ನು ಸಲ್ಲಿಸದಿರುವುದು | 158 |
| 1.9 | ಸ್ವಾಯತ್ತ ಸಂಸ್ಥೆಗಳ ಕಾರ್ಯನಿರ್ವಹಣೆಯ ಲೆಕ್ಕಪರಿಶೋಧನೆ | 159 |
| 1.10 | ದುರುಪಯೋಗ, ನಷ್ಟಗಳು, ಅಪವಿನಿಯೋಗಗಳು, ಇತ್ಯಾದಿಗಳ ಇಲಾಖಾವಾರು ವಿವರಗಳು | 160 |
| 1.11 | 2007-08ರಲ್ಲಿ ವಜಾ ಮಾಡಿದ ಪ್ರಕರಣಗಳ ಇಲಾಖಾವಾರು ವಿವರಗಳು | 161 |
| 2.1 | ಹೆಚ್ಚು ಮೊತ್ತದ ಬಳಕೆಯಾಗದ ಅವಕಾಶಗಳು ಸಂಭವಿಸಿದ ಪ್ರಧಾನ ಲೆಕ್ಕ ಶೀರ್ಷಿಕೆಗಳು | 162 |
| 2.2 | ನಿಧಿಗಳ ಬಿಡುಗಡೆಯಾಗದಿದ್ದುದರಿಂದ/ಕಡಿಮೆ ಬಿಡುಗಡೆಯಾದುದರಿಂದ/ ವಿಳಂಬವಾದುದರಿಂದ ಉಂಟಾದ ಬಳಕೆಯಾಗದ ಅವಕಾಶಗಳು | 169 |
| 2.3 | ರೂ.ಒಂದು ಕೋಟಿ ಮತ್ತು ಹೆಚ್ಚಿನ ಸತತ ಬಳಕೆಯಾಗದ ಅವಕಾಶಗಳು | 172 |
| 2.4 | ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ | 175 |
| 2.5 | ಸಕ್ರಮೀಕರಣದ ಅಗತ್ಯವಿರುವ ಹೆಚ್ಚುವರಿಗಳು | 177 |
| 2.6 | ಅವಕಾಶವನ್ನು ಮೀರಿದ ಸತತ ಹೆಚ್ಚುವರಿ ವೆಚ್ಚಗಳು | 178 |
| 2.7 | ಅನಗತ್ಯವಾದ ಪೂರಕ ಅನುದಾನಗಳು | 180 |
| 2.8 | ಸಾಕಷ್ಟಿಲ್ಲದ ಪೂರಕ ಅನುದಾನಗಳು | 181 |
| 2.9 | ಹೆಚ್ಚುವರಿ ಪೂರಕ ಅನುದಾನಗಳು | 182 |
| 2.10 | ನಿಧಿಗಳ ವಿವೇಚನಾರಹಿತ ಪುನರ್ವಿನಿಯೋಗ | 183 |
| 2.11 | ದೋಷಪೂರಿತ ಪುನರ್ವಿನಿಯೋಗ ಆದೇಶಗಳು | 190 |
| 2.12 | ಆಯವ್ಯಯದಲ್ಲಿನ ತಪ್ಪುಗಳು | 193 |
| 2.13 | 2007-08ರ ನಾಲ್ಕು ತ್ರೈಮಾಸಿಕಗಳಲ್ಲಿ ವೆಚ್ಚದ ಗತಿಯನ್ನು ತೋರಿಸುವ ವಿವರಣ ಪಟ್ಟಿ | 195 |
| 2.14 | ಹೊಸ ಸೇವೆಗಳ/ಸೇವಾ ಸಾಧನಗಳ ಪ್ರಕರಣಗಳು | 196 |
| 2.15 | ಆಯವ್ಯಯ ಅವಕಾಶವಿಲ್ಲದೇ ಮಾಡಿದ ವೆಚ್ಚ | 198 |
| 2.16 | ಸಾದಿಲ್ವಾರು ನಿಧಿಯ ಮಂಜೂರಾತಿಗಳನ್ನು ಪೂರ್ಣಪ್ರಮಾಣದಲ್ಲಿ ಬಳಸದಿರುವುದು | 200 |

| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 3.1 | ಪರೀಕ್ಷಾ-ತನಿಖೆ ನಡೆಸಿದ ನಗರ ಸ್ಥಳಿಯ ಸಂಸ್ಥೆಗಳ ಪಟ್ಟಿ | 201 |
| 3.2 | ಅರಿವಳಿಕೆ ಕಾರ್ಯಕ್ರಮವನ್ನು ನಡೆಸದಿದ್ದ ನಗರ ಸ್ಥಳಿಯ ಸಂಸ್ಥೆಗಳ ಪಟ್ಟಿ | 203 |
| 3.3 | ಸ್ವಸಹಾಯ ಗುಂಪುಗಳಿಗೆ ಸಹಾಯಧನವನ್ನು ಹಂಚದಿದ್ದ ನಗರ ಸ್ಥಳಿಯ ಸಂಸ್ಥೆಗಳ ಪಟ್ಟಿ | 204 |
| 3.4 | ಉಪಕರಣ ಮತ್ತು ಸಾಧನಸಾಮಗ್ರಿಗಳಿಗಾಗಿ ನೀಡಿದ ಯಾವುದೇ ಹಣವನ್ನು ಬಳಸದ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿ | 205 |
| 3.5 | ಸ್ಯಾನಿಟರಿ ಕೆಲಸಗಾರರಿಗೆ ಸುರಕ್ಷತಾ ಗೇರ್‌ಗಳನ್ನು ಒದಗಿಸದ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿ | 206 |
| 3.6 | ನೆಲಭರ್ತಿ ಜಾಗಗಳನ್ನು ಹೊಂದಿದ ಆದರೆ ಅವುಗಳನ್ನು ಉಪಯೋಗಿಸದ ಪರೀಕ್ಷಾ-ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿ | 207 |
| 3.7 | ಊರ್ಜಿತ ಪರವಾನಗಿ ಇಲ್ಲದೆ ನಡೆಯುತ್ತಿರುವ ಆರೋಗ್ಯ ಪಾಲನಾ ಸಂಸ್ಥೆಗಳು | 208 |
| 3.8 | ಸಾರ್ವಜನಿಕರ ಆರೋಗ್ಯಕ್ಕೆ ಕುಂದು ತರುವಂತೆ ಸರ್ಕಾರಿ ಆಸ್ಪತ್ರೆಗಳು ಜೈವಿಕ-ವೈದ್ಯಕೀಯ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿದುದು | 210 |
| 3.9 | ಭೂ ಸ್ವಾಧೀನದಲ್ಲಿ ವಿಳಂಬ | 211 |
| 3.10 | ಕಾಮಗಾರಿಗಳ ದೋಷಯುಕ್ತ ನಿರ್ವಹಣೆ/ತನಿಖೆ ಅಳತೆಗಳಲ್ಲಿ ಲೋಪ | 212 |
| 3.11 | ಕಾಮಗಾರಿಯ ಹಲವಾರು ಘಟಕಗಳನ್ನು ಸಮನ್ವಯಗೊಳಿಸದಿರುವುದು | 214 |
| 3.12 | ದೋಷಯುಕ್ತ ವಿನ್ಯಾಸಗಳಿಂದ ಕಾಮಗಾರಿಯ ವ್ಯಾಪ್ತಿಯಲ್ಲಿ ಬದಲಾವಣೆ | 215 |
| 3.13 | 2004-07ರ ಅವಧಿಯಲ್ಲಿ ಜಾರಿಗೊಳಿಸಿದ ಕೃಷಿ ಸಾಲ ಮತ್ತು ಬಡ್ಡಿ ಮನ್ನಾ/ರಿಯಾಯಿತಿ ಯೋಜನೆಗಳ ವಿವರ | 217 |
| 3.14 | ಪೀಕಾರ್ಡ್ ಬ್ಯಾಂಕ್‌ಗಳು ಕೃಷಿಯೇತರ ಉದ್ದೇಶಗಳಿಗಾಗಿ ಬಡ್ಡಿ ರಿಯಾಯಿತಿ ಯೋಜನೆಯಲ್ಲಿ ಕ್ಲೈಮ್ ಮಾಡಿದ ಜಿಲ್ಲಾವಾರು ವಿವರಗಳನ್ನು ತೋರಿಸುವ ವಿವರಣಾ ಪಟ್ಟಿ | 219 |
| 3.15 | ಪೀಕಾರ್ಡ್ ಬ್ಯಾಂಕ್‌ಗಳು ಕೃಷಿಯೇತರ ಉದ್ದೇಶಗಳಿಗಾಗಿ ಬಾಕಿಗಳ ಒಂದು ಬಾರಿ ಇತ್ಯರ್ಥದ ಯೋಜನೆಯಲ್ಲಿ ಕ್ಲೈಮ್ ಮಾಡಿದ ಜಿಲ್ಲಾವಾರು ವಿವರಗಳನ್ನು ತೋರಿಸುವ ವಿವರಣಾ ಪಟ್ಟಿ | 220 |
| 3.16 | ಅವಧಿ ಸಾಲಗಳ ಮೇಲೆ ಬಡ್ಡಿ ಮತ್ತು ಸುಸ್ತಿಬಡ್ಡಿಯ ಮನ್ನಾ ಯೋಜನೆಯಲ್ಲಿ ರೈತರಿಂದ ಅಸಲಿನ ಕಡಿಮೆ ಜಮೆ/ಜಮೆ ಮಾಡದಿರುವುದರಿಂದಾಗಿ ಪಿಎಸಿಎಸ್ ಬ್ಯಾಂಕ್‌ಗಳ ಅಂಗೀಕಾರಾರ್ಹವಲ್ಲದ ಕ್ಲೈಮ್‌ಗಳನ್ನು ತೋರಿಸುವ ವಿವರಣಾ ಪಟ್ಟಿ | 221 |
| 3.17 | ಬೆಳೆ ಸಾಲ ಮನ್ನಾ ಯೋಜನೆ 2007ರ ಅಡಿಯಲ್ಲಿ ರೈತರಿಂದ ಅಸಲಿನ ಕಡಿಮೆ ಜಮೆ/ಜಮೆ ಮಾಡದಿರುವುದರಿಂದಾಗಿ ಪಿಎಸಿಎಸ್ ಬ್ಯಾಂಕ್‌ಗಳ ಅಂಗೀಕಾರಾರ್ಹವಲ್ಲದ ಕ್ಲೈಮ್‌ಗಳನ್ನು ತೋರಿಸುವ ವಿವರಣಾ ಪಟ್ಟಿ | 222 |
| 3.18 | ಪೀಕಾರ್ಡ್ ಬ್ಯಾಂಕ್‌ಗಳು ಕೃಷಿಯೇತರ ಉದ್ದೇಶಗಳಿಗಾಗಿ ಕ್ಲೈಮ್ ಮಾಡಿ ಬಡ್ಡಿ ಮನ್ನಾ ಯೋಜನೆ 2006-07ರ ಅಡಿಯಲ್ಲಿ ಪುನರ್ಭರಣೆ ಮಾಡಿದ ಜಿಲ್ಲಾವಾರು ವಿವರಗಳನ್ನು ತೋರಿಸುವ ವಿವರಣಾ ಪಟ್ಟಿ | 223 |
| 3.19 | 2006-07ರ ಬಡ್ಡಿ ಮನ್ನಾ ಯೋಜನೆ ಅಡಿಯಲ್ಲಿ ಪೀಕಾರ್ಡ್ ಬ್ಯಾಂಕ್‌ಗಳು ಮಾಡಿದ ಹೆಚ್ಚುವರಿ ಬಡ್ಡಿ ಕ್ಲೈಮ್‌ಗಳ ಜಿಲ್ಲಾವಾರು ವಿವರಗಳನ್ನು ತೋರಿಸುವ ವಿವರಣಾ ಪಟ್ಟಿ | 224 |

| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 3.20 | 2006–07ರ ಅವಧಿಯಲ್ಲಿ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ 31 ಡಿಸೆಂಬರ್ 2006ರ ನಂತರ ವಿತರಿಸಿದ ಸಾಲದ ಪ್ರಕರಣಗಳನ್ನು ತೋರಿಸುವ ವಿವರಣಾ ಪಟ್ಟಿ | 225 |
| 3.21 | ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಯೋಜನೆ 2007ರ ಅಡಿಯಲ್ಲಿ ಕೃಷಿಯೇತರ ಉದ್ದೇಶಗಳಿಗೆ ಪೀಕಾರ್ಡ್ ಬ್ಯಾಂಕ್‌ಗಳು ಕ್ಲೈಮ್ ಮಾಡಿದ ಜಿಲ್ಲಾವಾರು ವಿವರಗಳನ್ನು ತೋರಿಸುವ ವಿವರಣಾ ಪಟ್ಟಿ | 226 |
| 3.22 | ಅರಣ್ಯೇತರ ಉದ್ದೇಶಗಳಿಗಾಗಿ ಅನುಮೋದನೆಯಿಲ್ಲದೆ ಅರಣ್ಯ ಪ್ರದೇಶದ ಮಾರ್ಗಪಲ್ಲಟ | 227 |
| 3.23 | ಭಾರತ ಸರ್ಕಾರದ ಷರತ್ತುಗಳನ್ನು ಪಾಲಿಸದಿರುವುದು | 229 |
| 3.24 | ಅರಣ್ಯ ಭೂಮಿಯ ಗುತ್ತಿಗೆಗಳ ಬಾಕಿ ಇರುವ ನವೀಕರಣಗಳನ್ನು ತೋರಿಸುವ ವಿವರಣಾ ಪಟ್ಟಿ | 230 |
| 3.25 | ಪರಿಹಾರಾತ್ಮಕ ಅರಣ್ಯೀಕರಣವನ್ನು ಬೆಳೆಸುವಲ್ಲಿನ ಪ್ರಗತಿ | 232 |
| 4.1 | ಮನೆ ಬಾಡಿಗೆ ಭತ್ಯೆ – ಪಡೆದ, ಅಂಗೀಕಾರಾರ್ಹ ಮತ್ತು ವ್ಯತ್ಯಾಸಗಳ ವಿವರಗಳು | 233 |
| 4.2 | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ (ಮಂಡಳಿ) ಹುಡ್ಕೋ ಸಾಲಗಳ ಮೇಲಿನ ತಪ್ಪಿಸಬಹುದಾಗಿದ್ದ ಬಡ್ಡಿಯ ವಿವರಣಾ ಪಟ್ಟಿ | 234 |
| 4.3 | 31 ಅಕ್ಟೋಬರ್ 2008ರಲ್ಲಿದ್ದಂತೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳು ಬಾರದಿರುವ ಕಂಡಿಕೆಗಳು (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) | 235 |
| 4.4 | 31 ಅಕ್ಟೋಬರ್ 2008ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಇನ್ನೂ ಚರ್ಚೆಯಾಗಬೇಕಿರುವ ಕಂಡಿಕೆಗಳ ವಿವರಗಳು (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) | 236 |
| 4.5 | 30 ಜೂನ್ 2008ರಲ್ಲಿದ್ದಂತೆ ಬಾಕಿ ಇರುವ ತಪಾಸಣಾ ವರದಿಗಳ ವರ್ಷಾವಾರು ವಿವರಗಳು | 237 |

## ಪ್ರಸ್ತಾವನೆ

1. ಈ ವರದಿಯನ್ನು ಸಂವಿಧಾನದ 151ನೆಯ ಅನುಚ್ಛೇದದಡಿ ರಾಜ್ಯಪಾಲರಿಗೆ ಸಲ್ಲಿಸುವುದಕ್ಕಾಗಿ ಸಿದ್ಧಪಡಿಸಲಾಗಿದೆ.

2. ಈ ವರದಿಯ 1 ಮತ್ತು 2ನೇ ಅಧ್ಯಾಯಗಳು ಅನುಕ್ರಮವಾಗಿ 31 ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕಾಗಿ ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳ ಪರಿಶೀಲನೆಯಿಂದ ಉದ್ಭವಿಸಿರುವ ವಿಷಯಗಳ ಮೇಲಿನ ಅಭಿಪ್ರಾಯಗಳನ್ನು ಒಳಗೊಂಡಿವೆ.

3. 3ನೇ ಅಧ್ಯಾಯವು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ತೀರ್ಮಾನಗಳನ್ನು ವ್ಯವಹರಿಸಿದರೆ 4ನೇ ಅಧ್ಯಾಯವು ಲೋಕೋಪಯೋಗಿ ಮತ್ತು ಜಲ ಸಂಪನ್ಮೂಲಗಳ ಇಲಾಖೆಗಳನ್ನೊಳಗೊಂಡ ವಿವಿಧ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ಮುಂತಾದವುಗಳಲ್ಲಿನ ವಹಿವಾಟುಗಳ ಲೆಕ್ಕಪರಿಶೋಧನೆಯ ತೀರ್ಮಾನಗಳನ್ನು ವ್ಯವಹರಿಸುತ್ತದೆ. 5ನೇ ಅಧ್ಯಾಯ ರಾಜ್ಯದಲ್ಲಿನ ಒಂದು ಆಯ್ದ ಇಲಾಖೆಯಲ್ಲಿ ಉಪಸ್ಥಿತವಿರುವ ಆಂತರಿಕ ನಿಯಂತ್ರಣಾ ವ್ಯವಸ್ಥೆಯ ಮೇಲಿನ ಅಭಿಪ್ರಾಯಗಳನ್ನು ವ್ಯವಹರಿಸುತ್ತದೆ.

4. ಜಿಲ್ಲಾ ಪಂಚಾಯತಿಗಳು, ಶಾಸನಬದ್ಧ ನಿಗಮಗಳು ಮತ್ತು ಸರ್ಕಾರಿ ಕಂಪನಿಗಳು, ಹಾಗೂ ರಾಜಸ್ವ ಸ್ವೀಕೃತಿಗಳಿಗೆ ಸಂಬಂಧಿಸಿದ ಹಣಕಾಸು ವಹಿವಾಟುಗಳ ಲೆಕ್ಕಪರಿಶೋಧನೆಯಿಂದ ಉದ್ಭವಿಸಿದ ಅಂಶಗಳನ್ನು ಒಳಗೊಂಡ ವರದಿಗಳು ಪ್ರತ್ಯೇಕವಾಗಿ ಮಂಡಿಸಲ್ಪಡುತ್ತವೆ.

5. ಈ ವರದಿಯಲ್ಲಿ ನಮೂದಿತವಾಗಿರುವ ಪ್ರಕರಣಗಳು 2007–08ರ ವರ್ಷದಲ್ಲಿ ಲೆಕ್ಕಗಳ ಪರೀಕ್ಷಾ–ತನಿಖೆಯ ಸಮಯದಲ್ಲಿ ಗಮನಕ್ಕೆ ಬಂದವುಗಳೇ ಅಲ್ಲದೆ ಮುಂಚಿನ ವರ್ಷಗಳಲ್ಲಿ ಗಮನಿಸಿದ್ದು ಹಿಂದಿನ ವರದಿಗಳಲ್ಲಿ ವ್ಯವಹರಿಸಲಾಗದವುಗಳಲ್ಲಿ ಇರುವಂತಹವುಗಳಾಗಿವೆ; 2007–08ರ ತರುವಾಯದ ಅವಧಿಗೆ ಸಂಬಂಧಿಸಿದ ವಿಷಯಗಳನ್ನು ಕೂಡ, ಅವಶ್ಯವಿದ್ದೆಡೆಯಲ್ಲಿ, ಸೇರಿಸಲಾಗಿದೆ.

6. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಸ್ಥೂಲನೋಟ

## ಸ್ಥೂಲನೋಟ

ಈ ವರದಿಯು 2007–08ರ ಕರ್ನಾಟಕ ಸರ್ಕಾರದ ಹಣಕಾಸು ಮತ್ತು ಧನವಿನಿಯೋಗ ಲೆಕ್ಕಪತ್ರಗಳ ಮೇಲಿನ ಅಭಿಪ್ರಾಯಗಳನ್ನೊಳಗೊಂಡ ಎರಡು ಅಧ್ಯಾಯಗಳು ಹಾಗೂ ಆಯ್ದ ಯೋಜನೆಗಳ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ, ಸರ್ಕಾರದ ಇಲಾಖೆಗಳಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ ಮತ್ತು ಸರ್ಕಾರದ ಹಣಕಾಸು ವಹಿವಾಟಿನ ಲೆಕ್ಕಪರಿಶೋಧನೆಯ ಫಲಿತಾಂಶಗಳಿಂದ ಕೂಡಿದ ಮೂರು ಸಮೀಕ್ಷೆಗಳು ಎರಡು ದೀರ್ಘ ಕಂಡಿಕೆಗಳು ಮತ್ತು 10 ಕಂಡಿಕೆಗಳನ್ನೊಳಗೊಂಡ ಮೂರು ಅಧ್ಯಾಯಗಳನ್ನು ಒಳಗೊಂಡಿದೆ.

ಭಾರತ ಲೆಕ್ಕಪರಿಶೋಧನೆ ಮತ್ತು ಲೆಕ್ಕಗಳ ಇಲಾಖೆಗಾಗಿ ನಿಗದಿಪಡಿಸಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗನುಗುಣವಾಗಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ಸಾಂಖ್ಯಿಕ ಮಾದರಿ ವಿಧಾನಗಳು ಮತ್ತು ತೀರ್ಮಾನಗಳ ಆಧಾರದ ಮೇಲೆ ಲೆಕ್ಕಪರಿಶೋಧನಾ ಮಾದರಿಗಳನ್ನು ಆಯ್ಕೆ ಮಾಡಲಾಗಿದೆ. ಸರ್ಕಾರದ ಅಭಿಪ್ರಾಯಗಳನ್ನು ಪರಿಗಣಿಸಿ ಲೆಕ್ಕಪರಿಶೋಧನಾ ನಿರ್ಣಯ ಮತ್ತು ಶಿಫಾರಸುಗಳನ್ನು ಮಾಡಲಾಗಿದೆ.

ರಾಜ್ಯದ ಹಣಕಾಸು ಸ್ಥಿತಿಯ ಹಾಗೂ ಕೆಲವು ಕಾರ್ಯಕ್ರಮ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ಸರ್ಕಾರದ ಕಾರ್ಯನಿರ್ವಹಣೆ ಜೊತೆಗೆ ಹಣಕಾಸು ಇಲಾಖೆಯಲ್ಲಿನ ಆಂತರಿಕ ನಿಯಂತ್ರಣ ವ್ಯವಸ್ಥೆಯ ಮೇಲಿನ ಲೆಕ್ಕಪರಿಶೋಧನಾ ಟಿಪ್ಪಣಿಗಳ ಸಾರಾಂಶವನ್ನು ಕೆಳಗೆ ನೀಡಲಾಗಿದೆ:

## 1. ರಾಜ್ಯ ಸರ್ಕಾರದ ಹಣಕಾಸು ಸ್ಥಿತಿ

2007–08ರಲ್ಲಿ ರಾಜ್ಯದ ರಾಜಸ್ವ ಜಮೆಗಳ ಶೇಕಡ ಒಂಬತ್ತರ ವೃದ್ಧಿಗೆ ಪ್ರತಿಯಾಗಿ ರಾಜಸ್ವ ವೆಚ್ಚಗಳು ಹಿಂದಿನ ವರ್ಷಕ್ಕಿಂತ ಶೇಕಡಾ 12ರಷ್ಟು ವೃದ್ಧಿಯಾಗಿ 2006–07ರಲ್ಲಿದ್ದ ರೂ.4,152 ಕೋಟಿಗಳಿಂದ 2007–08ರಲ್ಲಿ ರೂ.3,776 ಕೋಟಿಗಳಿಗೆ ಇಳಿದು ರೂ.376 ಕೋಟಿಗಳ ರಾಜಸ್ವ ಹೆಚ್ಚಳದ ಇಳಿಕೆಯಲ್ಲಿ ಪರಿಣಮಿಸಿದೆ. ಬಂಡವಾಳ ವೆಚ್ಚದ ಹೆಚ್ಚಳದಿಂದ (ಸಾಲ ಮತ್ತು ಮುಂಗಡಗಳೂ ಸೇರಿದಂತೆ) ಮತ್ತು ಋಣವಲ್ಲದ ಬಂಡವಾಳ ಜಮೆಗಳಲ್ಲಿನ ಏರಿಕೆಯ ಫಲವಾಗಿ ವಿತ್ತೀಯ ಕೊರತೆಯು ರೂ.4,688 ಕೋಟಿಗಳಿಂದ ರೂ.5,332 ಕೋಟಿಗಳಿಗೆ ರೂ.644 ಕೋಟಿಗಳಷ್ಟು ಏರಿತು.

2007–08ರ ಅಂತ್ಯದಲ್ಲಿದ್ದಂತೆ, ಶಾಸನಬದ್ಧ ನಿಗಮಗಳು/ಸರ್ಕಾರಿ ಕಂಪನಿಗಳು ಮುಂತಾದವುಗಳಲ್ಲಿನ ಒಟ್ಟು ಹೂಡಿಕೆಯು ರೂ.22,279 ಕೋಟಿಯಿದ್ದರೆ ಪ್ರತಿಫಲವು ಕಡೆಗಣಿಸುವಷ್ಟಾಗಿತ್ತು (ರೂ. 23 ಕೋಟಿಗಳು).

ರಾಜ್ಯದ ವಿತ್ತೀಯ ಜವಾಬ್ದಾರಿಗಳು 2002–03ರಲ್ಲಿನ ರೂ.37,234 ಕೋಟಿಗಳಿಂದ 2007–08ರಲ್ಲಿ ರೂ.60,142 ಕೋಟಿಗಳಿಗೆ ಏರಿದ್ದು ಪ್ರಸಕ್ತ ವರ್ಷದಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅವುಗಳ ಅನುಪಾತವು ಶೇಕಡ 28ರಷ್ಟಿತ್ತು. ಶಾಸನಬದ್ಧ ನಿಗಮಗಳು, ಸರ್ಕಾರಿ ಕಂಪನಿಗಳು, ಮುಂತಾದವುಗಳ ಪರವಾಗಿ ರಾಜ್ಯ ಸರ್ಕಾರವು ನೀಡಿದ ಮತ್ತು ಮಾರ್ಚ್ 2008ರಲ್ಲಿದ್ದಂತೆ ಬಾಕಿ ಇರುವ ಖಾತರಿಗಳ ಮೊಬಲಗು ರೂ.10,786 ಕೋಟಿಯಾಗಿತ್ತು.

**(ಕಂಡಿಕೆಗಳು : 1.1.2, 1.6.2, 1.7.1 ಮತ್ತು 1.7.2)**

ರೂ.57,439.15 ಕೋಟಿಗಳ ಒಟ್ಟಾರೆ ಆಯವ್ಯಯ ಅವಕಾಶಗಳಿಗೆ (ಪೂರಕ ಅನುದಾನಗಳನ್ನು ಒಳಗೊಂಡು) ಪ್ರತಿಯಾಗಿ ವಾಸ್ತವ ವೆಚ್ಚವು ರೂ.48,487 ಕೋಟಿಯಾಗಿತ್ತು. ಒಟ್ಟಾರೆ ಉಪಯೋಗಿಸದ ಅವಕಾಶವಾದ ರೂ.8,952.14 ಕೋಟಿಯು 29 ಅನುದಾನಗಳು/ವಿನಿಯೋಗಗಳಲ್ಲಿನ ಬಳಕೆ ಮಾಡದ ಅವಕಾಶವಾದ ರೂ.8,957.29 ಕೋಟಿ ಮತ್ತು ಐದು ಅನುದಾನಗಳು/ವಿನಿಯೋಗಗಳಲ್ಲಿ ಆದ ಅಧಿಕ ವೆಚ್ಚ ರೂ.5.15 ಕೋಟಿಗಳ ಪರಿಣಾಮದಿಂದಾಗಿತ್ತು. ರೂ.5.15 ಕೋಟಿಗಳ ಅಧಿಕ ವೆಚ್ಚವು ಭಾರತ ಸಂವಿಧಾನದ 205ನೇ ಅನುಚ್ಛೇದದನ್ವಯ ಶಾಸಕಾಂಗದಿಂದ ಸಕ್ರಮೀಕರಣಗೊಳ್ಳುವ ಅಗತ್ಯವಿದೆ.

**(ಕಂಡಿಕೆಗಳು : 2.2 ಮತ್ತು 2.4)**

## 2. ಕರ್ನಾಟಕದಲ್ಲಿ ತ್ಯಾಜ್ಯ ನಿರ್ವಹಣೆ

ಭಾರತ ಸರ್ಕಾರವು, ಪರಿಸರ ಸಂರಕ್ಷಣೆ ಹಾಗೂ ಅದರ ಸುಧಾರಣೆಗಾಗಿ ಪೌರ ಘನತ್ಯಾಜ್ಯ ಮತ್ತು ಜೈವಿಕ-ವೈದ್ಯಕೀಯ ತ್ಯಾಜ್ಯಗಳನ್ನು ನಿಯಂತ್ರಿಸಲು ಪರಿಸರ (ಸಂರಕ್ಷಣಾ) ಅಧಿನಿಯಮ, 1986ರ ಅಡಿಯಲ್ಲಿ ನಿಯಮಗಳನ್ನು ಜಾರಿಗೊಳಿಸಿತು (1998–2000). ನೆಲ ಭರ್ತಿ ಮಾಡುವ ಜಾಗಗಳ ಅಭಿವೃದ್ಧಿಯಲ್ಲಿನ ಮತ್ತು ಮನೆಯಿಂದ ಮನೆಗೆ ಹೋಗಿ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಾಣಿಕೆ ಮಾಡಲು ಬೇಕಾಗುವ ಸಾಧನ ಮತ್ತು ಯಂತ್ರೋಪಕರಣಗಳ ಖರೀದಿಯಲ್ಲಿನ ವಿಳಂಬದಿಂದ ಪೌರ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಒದಗಿಸಿದ (2003–08) ಹಣದ ಬಳಕೆಯು ಬಹಳ ಕಡಿಮೆಯಿದ್ದಿತು. ಅನುಷ್ಠಾನ ಏಜೆನ್ಸಿಗಳಾದ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಆರೋಗ್ಯ ಪಾಲನಾ ಸಂಸ್ಥೆಗಳಿಂದ ನಿಯಮಗಳನ್ನು ಪಾಲಿಸದಿರುವುದು ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಣಾಮಕಾರಿಯಾಗಿರದ ಮೇಲ್ವಿಚಾರಣೆಯ ಜೊತೆಗೂಡಿ ಪರಿಸರ ಮಾಲಿನ್ಯ ಮತ್ತು ಆರೋಗ್ಯದ ಅಪಾಯಗಳು ಮುಂದುವರೆಯುವುದರಲ್ಲಿ ಪರಿಣಮಿಸಿತು.

**(ಕಂಡಿಕೆ : 3.1)**

## 3. ಪೊಲೀಸ್ ಇಲಾಖೆಯಲ್ಲಿ ಗಣಕೀಕರಣ

ಅಪರಾಧ ಮತ್ತು ಅಪರಾಧಿಗಳ ಮಾಹಿತಿಯುಳ್ಳ ದತ್ತ ಸಂಚಯವೊಂದನ್ನು ನಿರ್ಮಿಸಲು ಮತ್ತು ಅಪರಾಧಗಳನ್ನು ಶೀಘ್ರವಾಗಿ ಪತ್ತೆ ಮಾಡಲು ಅನುಕೂಲವಾಗುವಂತೆ ಹಲವಾರು ಚಟುವಟಿಕೆಗಳನ್ನು ಗಣಕೀಕರಣಗೊಳಿಸಲು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನವನ್ನು ಬಳಸುವ ಆರಕ್ಷಕ ಇಲಾಖೆಯ ಉಪಕ್ರಮವು ಯೋಜನೆಯಲ್ಲಿನ ನ್ಯೂನತೆಗಳಿಂದ ಮತ್ತು ಸಮನ್ವಯವಾದ ಮಾರ್ಗವನ್ನನುಸರಿಸುವ ಅಭಾವದಿಂದ ಸಫಲವಾಗಿ ಅನುಷ್ಠಾನಗೊಳ್ಳಲಿಲ್ಲ. ಅನುಷ್ಠಾನದಲ್ಲಿನ ವಿಳಂಬಗಳು, ತಾಂತ್ರಿಕ ನ್ಯೂನತೆಗಳು, ಸಮರ್ಪಕ ಸಂಪರ್ಕತೆಯ ಅಭಾವ ಮುಂತಾದವುಗಳು, ವಿವಿಧ ಯೋಜನೆಗಳಡಿ ಸೃಷ್ಟಿಸಿದ ಮಾಹಿತಿ ತಂತ್ರಜ್ಞಾನ ಆಸ್ತಿಗಳ ಮತ್ತು ಸೌಕರ್ಯಗಳ ಅಲ್ಪಮಟ್ಟದ ಬಳಕೆಯಾಗುವಲ್ಲಿ ಪರಿಣಮಿಸಿತು.

**(ಕಂಡಿಕೆ : 3.2)**

## 4. ಏತ ನೀರಾವರಿ ಯೋಜನೆಗಳು

ನೀರನ್ನು ಮೇಲೆತ್ತುವ ವಿಚಾರವನ್ನು ಭೂ ಪ್ರದೇಶದ ಸ್ಥಿತಿಗಳನುಸಾರ ನೀರಿನ ಹರಿಯುವಿಕೆಯು ಸಾಧ್ಯವಾಗದ ಎತ್ತರದ ಪ್ರದೇಶಗಳಿಗೆ ನೀರಾವರಿಗಾಗಿ ಸೂಚಿಸುತ್ತವೆ. ಇಲಾಖೆಯು ಯೋಜನೆಗಳಡಿ ಒದಗಿಸಿದ ಹಣವನ್ನು ಪೂರ್ಣವಾಗಿ ಬಳಕೆ ಮಾಡಲಿಲ್ಲ. ನೀರಿನ ಅಲಭ್ಯತೆ, ಸಾಕಷ್ಟಿಲ್ಲದ ವಿದ್ಯುತ್ ಸರಬರಾಜು ಮತ್ತು ಯಂತ್ರೋಪಕರಣಗಳ ದುರಸ್ತಿ ಕಾರಣದಿಂದ ಕಾರ್ಯಕ್ರಮವು ಕಷ್ಟಕ್ಕೆ ಒಳಗಾಯಿತು. ಇತರೆ ನೀರಾವರಿ ಯೋಜನೆಗಳೊಂದಿಗೆ ಮೇಲು ವ್ಯಾಪಿಸಿದ್ದ ಅಚ್ಚುಕಟ್ಟು ಪ್ರದೇಶಗಳನ್ನು ವರ್ಗಾವಣೆ ಮಾಡಲು ಯಾವುದೇ ಕ್ರಮಗಳನ್ನೂ ಕೈಗೊಳ್ಳಲಿಲ್ಲ. ಹನ್ನೊಂದನೇ ಹಣಕಾಸು ಆಯೋಗದ ಅನುದಾನಗಳಡಿಯಲ್ಲಿ ನಿಷ್ಕ್ರಿಯ ಏತ ನೀರಾವರಿ ಯೋಜನೆಗಳನ್ನು ಪುನಶ್ಚೇತನಗೊಳಿಸಿದ್ದರೂ ಸಹ ಅವುಗಳಲ್ಲಿ ಹೆಚ್ಚಿನ ಯೋಜನೆಗಳು ನಿಷ್ಕ್ರಿಯವಾಗಿದ್ದವು.

**(ಕಂಡಿಕೆ : 3.3)**

## 5. ಕೃಷಿ ಸಾಲಗಳ ಮನ್ನಾ ಮತ್ತು ಬಡ್ಡಿ ಸಹಾಯಧನ ಯೋಜನೆಗಳು

ರೈತರಿಗೆ ನೀಡಿದ ಕೃಷಿ ಸಾಲಗಳ ಮೇಲಿನ ಬಡ್ಡಿದರಗಳಲ್ಲಿ ಕಡಿತ, ಯಾವ ಪ್ರಕರಣದಲ್ಲಿ ರೈತರು ಸಾಲದ ಅಸಲಿನ ಮೊತ್ತಕ್ಕಿಂತ ಹೆಚ್ಚಿಗೆ ಬಡ್ಡಿಯನ್ನು ಪಾವತಿಸಿರುತ್ತಾರೋ ಅಂತಹ ಪ್ರಕರಣಗಳಲ್ಲಿ ಬಾಕಿಯಿರುವ ಅಸಲನ್ನು ಮನ್ನಾ ಮಾಡುವುದು, ಯಾವ ಪ್ರಕರಣದಲ್ಲಿ ರೈತರು ಅಸಲಿನ ಮೊತ್ತವನ್ನು ಒಂದು ನಿರ್ದಿಷ್ಟ ಅವಧಿಯೊಳಗೆ ಪಾವತಿಸಿದ್ದಾರೋ ಅಂತಹ ಪ್ರಕರಣಗಳಲ್ಲಿ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡುವುದು ಮುಂತಾದ ಹಲವಾರು ಯೋಜನೆಗಳನ್ನು ಸರ್ಕಾರವು ಅನುಮೋದಿಸಿತು (ಡಿಸೆಂಬರ್ 2004–ಮೇ 2007). ಇಲಾಖೆಯು ಕ್ಲೈಮ್‌ಗಳನ್ನು ಸಮರ್ಪಕವಾಗಿ ಪರಿಶೀಲಿಸಲಿಲ್ಲವಾದ್ದರಿಂದ ಯೋಜನೆಗಳ ಅನುಷ್ಠಾನವು ಪರಿಣಾಮಕಾರಿಯಾಗಿರಲಿಲ್ಲ. ಸಹಕಾರಿ

ಸಾಲ ಸಂಸ್ಥೆಗಳು ವಾಸ್ತವ ಸಂಗತಿಗಳನ್ನು ತಪ್ಪಾಗಿ ತಿಳಿಸಿ ಅರ್ಹವಲ್ಲದ ಕ್ಲೈಮುಗಳನ್ನು ಮಂಡಿಸಿದ್ದರಿಂದ ರೂ.110.40 ಕೋಟಿ ಅಧಿಕವಾಗಿ ಭರ್ತಿ ಮಾಡಿಕೊಡುವುದರಲ್ಲಿ ಪರಿಣಮಿಸಿತು.

**(ಕಂಡಿಕೆ : 3.4)**

## 6. ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ರ ನಿರ್ವಹಣೆ

ಅರಣ್ಯೇತರ ಉದ್ದೇಶಗಳಿಗೆ ಅರಣ್ಯ ಭೂಮಿಯನ್ನು ಮಾರ್ಗಪಲ್ಲಟ ಮಾಡುವುದಕ್ಕೆ ಭಾರತ ಸರ್ಕಾರದ ಅನುಮತಿಯು ಒಂದು ಪೂರ್ವ ಅವಶ್ಯಕತೆಯಾಗಿತ್ತು. ಅಧಿನಿಯಮದ ಉಲ್ಲಂಘನೆಗಳನ್ನು, ಭಾರತ ಸರ್ಕಾರದ ಷರತ್ತುಗಳನ್ನು ಪಾಲಿಸದಿರುವುದು ಮತ್ತು ಗುತ್ತಿಗೆ ಅವಧಿ ಪೂರ್ಣಗೊಂಡ ನಂತರ ಅರಣ್ಯ ಭೂಮಿಯನ್ನು ಮರುಪಡೆಯದಿರುವುದು ಇವುಗಳು ಮುಂದುವರೆಯುತ್ತಿರುವುದನ್ನು ಗಮನಿಸಲಾಯಿತು. ಜೀವಿ ಪರಿಸರದ ಸ್ಥಿರತೆಯ ಮೇಲೆ ಅರಣ್ಯ ಭೂಮಿಯ ಮಾರ್ಗಪಲ್ಲಟದ ವ್ಯತಿರಿಕ್ತ ಪರಿಸರ ಪ್ರಭಾವವನ್ನು ಇಲಾಖೆಯು ಅಳೆದಿರಲಿಲ್ಲ. ಪರಿಹಾರಾತ್ಮಕ ಅರಣ್ಯೀಕರಣದ ಅಡಿ ಅರಣ್ಯೀಕರಿಸಿದ ಅರಣ್ಯೇತರ ಭೂಮಿಯನ್ನು ಅಧಿಸೂಚಿಸಿರಲಿಲ್ಲ. ರೂ.17.09 ಕೋಟಿಯಷ್ಟು ಪ್ರಸ್ತುತ ನಿವ್ವಳ ಮೊತ್ತವನ್ನು ಬಳಕೆ ಏಜೆನ್ಸಿಗಳಿಂದ ವಸೂಲು ಮಾಡಿರಲಿಲ್ಲ.

**(ಕಂಡಿಕೆ : 3.5)**

## 7. ಹಣಕಾಸು ಇಲಾಖೆಯಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ

ಹಣಕಾಸು ಇಲಾಖೆಯು ರಾಜಸ್ವಗಳನ್ನು ಹಾಗೂ ಇತರ ಹಣಕಾಸು ಮೂಲಗಳನ್ನು ಸಜ್ಜುಗೊಳಿಸುವುದು ಹಾಗೂ ಸಂಗ್ರಹಿಸುವುದು, ಆಯವ್ಯಯದ ಅಂದಾಜು ಪತ್ರಗಳನ್ನು ತಯಾರಿಸುವುದು ಹಾಗೂ ಲಭ್ಯವಿರುವ ಸಂಪನ್ಮೂಲಗಳನ್ನು ಖರ್ಚುಗಳ ಹಾಗೂ ದಿನ–ನಿತ್ಯದ ನಗದು–ಶಿಲ್ಕುಗಳ ನಿರ್ವಹಣೆಯ ಬೇಡಿಕೆಗಳನ್ನು ಈಡೇರಿಸುವುದಕ್ಕಾಗಿ ಸರಿಯಾದ ರೀತಿಯಲ್ಲಿ ವಿತರಿಸುವುದು ಇವೇ ಮುಂತಾದವುಗಳನ್ನು ಒಳಗೊಂಡಂತೆ ರಾಜ್ಯ ಹಣಕಾಸುಗಳ ಒಟ್ಟಾರೆ ನಿರ್ವಹಣೆಗೆ ಜವಾಬ್ದಾರಿಯುತವಾಗಿದೆ. ಹಣಕಾಸು ಇಲಾಖೆಯ ಆಂತರಿಕ ನಿಯಂತ್ರಣ ವ್ಯವಸ್ಥೆಯ ಸಮೀಕ್ಷೆಯು ಆಯವ್ಯಯ, ವೆಚ್ಚ ಮತ್ತು ಆಡಳಿತ ನಿಯಂತ್ರಣಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಿಲ್ಲ ಎಂಬುದನ್ನು ತಿಳಿಯಪಡಿಸಿತು (2003–08). ಹಣಕಾಸು ಇಲಾಕೆಯಿಂದ ಇಲಾಖಾ ಅಂದಾಜುಗಳ ಪರಿಶೀಲನೆಯಲ್ಲಿನ ನ್ಯೂನತೆಯಿಂದ 2003–07ರ ಅವಧಿಯಲ್ಲಿ ಸತತ ಉಳಿತಾಯಗಳಿದ್ದವು. ನಿಗದಿತ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸದಿದ್ದುದು ರಾಜ್ಯ ಸಂಚಿತ ನಿಧಿಯಿಂದ ಹಣವನ್ನು ತೆಗೆದು ಸರ್ಕಾರಿ ಲೆಕ್ಕದಿಂದ ಹೊರಗಿಡುವುದರ ಮೂಲಕ ಅದನ್ನು ದುರುಪಯೋಗ ಮಾಡಿಕೊಳ್ಳುವಂತಹ ಅಪಾಯಕ್ಕೆ ಒಡ್ಡಿದಂತಾಗಿತ್ತು. 2005–08ರ ಅವಧಿಯಲ್ಲಿ ತಮ್ಮ ನಗದು ಸ್ಥಿತಿಗತಿಯು ತೃಪ್ತಿಕರವಾಗಿದ್ದರೂ ಸಹ ಸರ್ಕಾರವು ವಿವೇಚನಾರಹಿತವಾಗಿ ರೂ.1,164.92 ಕೋಟಿಯ ಮುಕ್ತ ಮಾರುಕಟ್ಟೆ ಸಾಲಗಳಿಗೆ ಮೊರೆ ಹೋಯಿತು.

**(ಕಂಡಿಕೆ : 5.1)**

## 8. ವಹಿವಾಟುಗಳ ಲೆಕ್ಕಪರಿಶೋಧನೆ

### ಅಧಿಕ ಪಾವತಿ/ವ್ಯರ್ಥ/ನಿಷ್ಫಲ ವೆಚ್ಚ

- ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಂಕರವಾಡಿ ಗ್ರಾಮದ ಬಳಿ ಕಾಗಿನ ನದಿಗೆ ಅಡ್ಡವಾಗಿ ಸೇತುವೆ–ಬಂದಾರವೊಂದರ ನಿರ್ಮಾಣಕ್ಕಾಗಿ ನಿರ್ಜಲೀಕರಣಗೊಳಿಸಲು ಗುತ್ತಿಗೆ ಒಪ್ಪಂದದ ಷರತ್ತುಗಳನ್ನು ಉಪೇಕ್ಷಿಸಿ ಗುತ್ತಿಗೆದಾರನಿಗೆ ರೂ.52.40 ಲಕ್ಷ ಪಾವತಿ ಮಾಡಲಾಯಿತು (ಅಕ್ಟೋಬರ್ 2007)

**(ಕಂಡಿಕೆ : 4.1.2)**

- ಗುಲ್ಬರ್ಗ ಜಿಲ್ಲೆಯ ಮೀಣ್ಣಾಬಾಳ್ ಗ್ರಾಮದ ಬಳಿ ಕಾಗಿನ ನದಿಯ ಮೇಲೆ ಸೇತುವೆ–ಬಂದಾರದ ನಿರ್ಮಾಣದಲ್ಲಿ ಅಗೆದು ತೆಗೆದ ಸಾಧಾರಣ ಬಂಡೆಯನ್ನು ಗಟ್ಟಿ ಬಂಡೆ ಎಂದು ತಪ್ಪಾಗಿ ವರ್ಗೀಕರಿಸಿದ್ದು ರೂ.89.47 ಲಕ್ಷ ಅಧಿಕ ಪಾವತಿಯಲ್ಲಿ ಪರಿಣಮಿಸಿತು.

**(ಕಂಡಿಕೆ : 4.1.3)**

- ಕಾಮಗಾರಿಯನ್ನು ವಹಿಸಿದ 16 ವರ್ಷಗಳ ಮತ್ತು ರೂ.17.10 ಕೋಟಿಗಳನ್ನು ವೆಚ್ಚಮಾಡಿದ ನಂತರವೂ ಬೀದರ್ ಜಿಲ್ಲೆಯ ಎರಡು ಗ್ರಾಮಗಳಿಗೆ ಸಂಪರ್ಕ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಸಾಧಿಸಲಾಗಲಿಲ್ಲ.

**(ಕಂಡಿಕೆ : 4.1.4)**

## ಗುತ್ತಿಗೆ ಒಪ್ಪಂದಗಳ ಉಲ್ಲಂಘನೆ/ಗುತ್ತಿಗೆದಾರರಿಗೆ ಅನುಚಿತ ಒಲವು/ತಪ್ಪಿಸಬಹುದಾಗಿದ್ದ ವೆಚ್ಚ

- ಬೆಂಗಳೂರಿನ ಕೋರಮಂಗಲದ ಶಿವಾಗಿಲು ಕೆರೆ ಅಂಗಳದ ಬಡಾವಣೆಯಲ್ಲಿ ಸಾರ್ವಜನಿಕ ಹರಾಜಿಗೆ ಮೊದಲು ನಿವೇಶನಗಳ ಹಕ್ಕುಪತ್ರಗಳ ಪರಿಶೀಲನೆ ಮಾಡುವಲ್ಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಫಲತೆಯು ತಪ್ಪಿಸಬಹುದಾಗಿದ್ದ ದಾವೆ ಹಾಗೂ ರೂ.77.09 ಲಕ್ಷ ಬಡ್ಡಿ ಸಹಿತ ಠೇವಣಿ ಮರುಪಾವತಿಯಲ್ಲಿ ಪರಿಣಮಿಸಿತು

**(ಕಂಡಿಕೆ : 4.2.3)**

- ನಗರ ಸ್ಥಳೀಯ ಸಂಸ್ಥೆಗಳ ಮೂಲ ಸೌಲಭ್ಯಗಳ ಸುಧಾರಣೆಗಾಗಿನ ಸಾಲ ಮರುಪಾವತಿಗಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸಕಾಲಕ್ಕೆ ರಾಜ್ಯ ಹಣಕಾಸು ಆಯೋಗದ ಅನುದಾನವನ್ನು ಬಿಡುಗಡೆ ಮಾಡುವಲ್ಲಿನ ಸರ್ಕಾರದ ವಿಫಲತೆಯು ರೂ.9.71 ಕೋಟಿ ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿಯಲ್ಲಿ ಪರಿಣಮಿಸಿತು

**(ಕಂಡಿಕೆ : 4.2.4)**

- ಕೃಷಿ ವಿಮೆಯ ಹಕ್ಕು ಬೇಡಿಕೆಗೆ ಮತ್ತು ಏಕ ಶ್ರೇಣಿಯ ಬೆಳೆ ಇಳುವರಿ ಅಂದಾಜುಗಳನ್ನು ಸಿದ್ಧಪಡಿಸುವಲ್ಲಿನ ಕೃಷಿ ಇಲಾಖೆಯ ವಿಫಲತೆಯು ಕೇಂದ್ರ ಸರ್ಕಾರದ ಪಾಲಾದ ರೂ.62.22 ಲಕ್ಷ ಬೆಳೆ ವಿಮಾ ವೆಚ್ಚವು ಪುನರ್ಭರ್ತಿಯಾಗದಿರುವಲ್ಲಿ ಪರಿಣಮಿಸಿತು

**(ಕಂಡಿಕೆ : 4.2.5)**

## ಕ್ರಮಬದ್ಧತೆ ವಿಷಯಗಳು ಮತ್ತು ಇತರೆ ಅಂಶಗಳು

- ಸರ್ವರ್‌ಗಳ ಕಾರ್ಯಾಚರಣೆಯಲ್ಲಿ ಶಿಕ್ಷಕರ ಅಪರಿಚತೆ, ಬಗೆಹರಿಸಲಾಗದ ತಾಂತ್ರಿಕ ಸಮಸ್ಯೆಗಳು ಮತ್ತು ಸಾಕಷ್ಟಿಲ್ಲದ ತಾಂತ್ರಿಕ ಬೆಂಬಲ ಇವುಗಳ ಕಾರಣದಿಂದ ರಾಜ್ಯದಲ್ಲಿನ 775 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ನೆರವುಳ್ಳ ಕಲಿಕಾ ಕೇಂದ್ರಗಳ ಮೂಲಕ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕಂಪ್ಯೂಟರ್ ಸಾಕ್ಷರತೆಯನ್ನು ನೀಡುವ ಉದ್ದೇಶವನ್ನು ರೂ.10.39 ಕೋಟಿ ವೆಚ್ಚವನ್ನು ಭರಿಸಿದಾಗ್ಯೂ ಸಾಧಿಸಲಾಗಲಿಲ್ಲ

**(ಕಂಡಿಕೆ : 4.3.1)**

# ಅಧ್ಯಾಯ – 1

# ರಾಜ್ಯ ಸರ್ಕಾರದ ಹಣಕಾಸು

# ಅಧ್ಯಾಯ – 1

## ರಾಜ್ಯ ಸರ್ಕಾರದ ಹಣಕಾಸು

## 1.1 ಪರಿಚಯ

ರಾಜ್ಯ ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ನಿರ್ವಹಿಸಲಾಗುವುದು (1) ಸಂಚಿತ ನಿಧಿ, (2) ಸಾದಿಲ್ವಾರು ನಿಧಿ ಮತ್ತು (3) ಸಾರ್ವಜನಿಕ ಲೆಕ್ಕ **(ಅನುಬಂಧ 1.1–ಭಾಗ ಎ)**. ಕರ್ನಾಟಕ ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳನ್ನು ಸಂಚಿತ ನಿಧಿಯ ರಾಜಸ್ವ ಮತ್ತು ಬಂಡವಾಳ ಜಮೆಗಳು ಮತ್ತು ವೆಚ್ಚ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳನ್ನು ಒಳಗೊಂಡ 19 ತ:ಖ್ತೆಗಳಲ್ಲಿ ನಿರೂಪಿಸಲಾಗಿದೆ. ಹಣಕಾಸು ಲೆಕ್ಕಗಳ ರೂಪರೇಷೆಗಳನ್ನು **ಅನುಬಂಧ 1.1–ಭಾಗ–ಬಿ** ಯಲ್ಲಿ ವಿವರಿಸಲಾಗಿದೆ.

### 1.1.1 ಜಮೆಗಳು ಮತ್ತು ವಿತರಣೆಗಳ ಸಾರಾಂಶ

ಕರ್ನಾಟಕ ರಾಜ್ಯದ 2007–08ರ ಹಣಕಾಸು ಲೆಕ್ಕಗಳ ತ:ಖ್ತೆ–1ರಲ್ಲಿ ಮತ್ತು ಇತರ ವಿವರಣಾ ತ:ಖ್ತೆಗಳಲ್ಲಿ ಕಾಣಸಿಗುವಂತೆ ರಾಜಸ್ವ ಜಮೆಗಳು ಮತ್ತು ವೆಚ್ಚಗಳು, ಬಂಡವಾಳ ಜಮೆಗಳು ಮತ್ತು ವೆಚ್ಚಗಳು, ಸಾದಿಲ್ವಾರು ನಿಧಿ ವಹಿವಾಟುಗಳು ಮತ್ತು ಸಾರ್ವಜನಿಕ ಲೆಕ್ಕದ ಜಮೆ–ವಿತರಣೆಗಳನ್ನು ಒಳಗೊಂಡ ರಾಜ್ಯದ ಹಣಕಾಸಿನ ಸ್ಥಿತಿಯ ಸಾರಾಂಶವನ್ನು ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ 1: ಜಮೆಗಳು ಮತ್ತು ವಿತರಣೆಗಳ ಸಾರಾಂಶ**

(ಕೋಟಿ ರೂಪಾಯಿಗಳಲ್ಲಿ)

| 2006–07 | ಜಮೆಗಳು | 2007–08 | 2006–07 | ವಿತರಣೆಗಳು | 2007–08 | | |
|---|---|---|---|---|---|---|---|
| | | | | | ಯೋಜನೆಯೇತರ | ಯೋಜನೆ | ಒಟ್ಟು |
| | | | | ಭಾಗ ಎ : ರಾಜಸ್ವ | | | |
| **37,586.94** | **ರಾಜಸ್ವ ಜಮೆಗಳು** | **41,151.14** | **33,435.43** | **ರಾಜಸ್ವ ವೆಚ್ಚಗಳು** | **29,061.95** | **8,312.82** | **37,374.77** |
| 23,301.03 | ತೆರಿಗೆ ರಾಜಸ್ವ | 25,986.76 | 10,419.42 | ಸಾಮಾನ್ಯ ಸೇವೆಗಳು | 10,786.54 | 85.24 | 10,871.78 |
| 4,098.41 | ತೆರಿಗೆಯೇತರ ರಾಜಸ್ವ | 3,357.66 | 10,936.71 | ಸಾಮಾಜಿಕ ಸೇವೆಗಳು | 8,339.59 | 4,784.09 | 13,123.68 |
| 5,374.33 | ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 6,779.23 | 10,440.24 | ಆರ್ಥಿಕ ಸೇವೆಗಳು | 8,009.82 | 3,443.49 | 11,453.31 |
| 4,813.17 | ಕೇಂದ್ರ ಸರ್ಕಾರದಿಂದ ಬಂದ ಸಹಾಯಾನುದಾನಗಳು | 5,027.49 | 1,639.06 | ಸಹಾಯಾನುದಾನಗಳು/ ವಂತಿಗೆಗಳು | 1,926.00 | – | 1,926.00 |
| | | | | ಭಾಗ ಬಿ : ಇತರೆ | | | |
| --- | **ಇತರೆ ಬಂಡವಾಳ ಜಮೆಗಳು** | **245.78** | **8,542.57** | **ಬಂಡವಾಳ ವೆಚ್ಚ** | **1,450.14** | **7,198.80** | **8,648.94** |
| | | | 320.94 | ಸಾಮಾನ್ಯ ಸೇವೆಗಳು | 55.00 | 284.02 | 339.02 |
| | | | 1,292.62 | ಸಾಮಾಜಿಕ ಸೇವೆಗಳು | 190.89 | 1,956.79 | 2,147.68 |
| | | | 6,929.01 | ಆರ್ಥಿಕ ಸೇವೆಗಳು | 1,204.25 | 4,957.99 | 6,162.24 |
| **59.97** | **ಸಾಲಗಳ ಮತ್ತು ಮುಂಗಡಗಳ ವಸೂಲಾತಿ** | **52.07** | **357.23** | **ಸಾಲ ಮತ್ತು ಮುಂಗಡಗಳ ವಿತರಣೆಗಳು** | **5.31** | **751.43** | **756.74** |
| **3,545.94** | **ಸಾರ್ವಜನಿಕ ಋಣ ಜಮೆಗಳು** | **2,356.68** | **1,749.37** | **ಸಾರ್ವಜನಿಕ ಋಣ ಮರುಪಾವತಿ** | **1,328.77** | – | **1,328.77** |
| -- | **ಸಾದಿಲ್ವಾರು ನಿಧಿ (ಪುನರ್ಭರ್ತಿ)** | **13.28** | **13.28** | **ಸಾದಿಲ್ವಾರು ನಿಧಿ** | – | – | – |
| **47,040.04** | **ಸಾರ್ವಜನಿಕ ಲೆಕ್ಕ ಜಮೆಗಳು** | **56,159.75** | **42,636.88** | **ಸಾರ್ವಜನಿಕ ಲೆಕ್ಕ ವಿತರಣೆಗಳು** | – | – | **54,054.80** |
| **4,606.64** | **ಆರಂಭ ಶಿಲ್ಕು** | **6,104.77** | **6,104.77** | **ಅಂತಿಮ ನಗದು ಶಿಲ್ಕು** | – | – | **3,919.45** |
| **92,839.53** | **ಒಟ್ಟು** | **1,06,083.47** | **92,839.53** | **ಒಟ್ಟು** | **31,846.17** | **16,263.05** | **1,06,083.47** |

ಹಿಂದಿನ ವರ್ಷಕ್ಕೆ ಹೋಲಿಸಿದರೆ 2007–08ರಲ್ಲಿನ ಜಮೆಗಳು ಮತ್ತು ವಿತರಣೆಗಳಲ್ಲಿನ ಪ್ರಮುಖ ಬದಲಾವಣೆಗಳು ಕೆಳಕಂಡಂತಿವೆ:

- ರಾಜಸ್ವ ಜಮೆಗಳು ರೂ.3,564 ಕೋಟಿಗಳಷ್ಟು ಹೆಚ್ಚಾಗಿದ್ದು ಇದು ತೆರಿಗೆ ಆದಾಯ (ರೂ.2,686 ಕೋಟಿ), ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲುಗಳ (ರೂ.1,405 ಕೋಟಿ) ಕೇಂದ್ರ ಸರ್ಕಾರದಿಂದ ಪಡೆದ ಸಹಾಯಾನುದಾನಗಳು (ರೂ.214 ಕೋಟಿ) ಮತ್ತು ತೆರಿಗೆಯೇತರ ಆದಾಯದಲ್ಲಿ ಉಂಟಾದ ಇಳಿಕೆಯಿಂದ (ರೂ.741 ಕೋಟಿ) ಭಾಗಶ: ನಿಷ್ಪರಿಣಾಮಗೊಂಡಿತು.

- ರಾಜಸ್ವ ವೆಚ್ಚವು ರೂ.3,940 ಕೋಟಿಯಷ್ಟು ಅಧಿಕವಾಗಿದೆ. ಈ ಹೆಚ್ಚಳವು ಪ್ರಮುಖವಾಗಿ ಸಾಮಾಜಿಕ ಸೇವೆಗಳ ವಿಭಾಗದಲ್ಲಿ (ರೂ.2,187 ಕೋಟಿಗಳು) ಮತ್ತು ಆರ್ಥಿಕ ಸೇವೆಗಳ ವಿಭಾಗದಲ್ಲಿ (ರೂ.1,013 ಕೋಟಿಗಳು) ಉಂಟಾಗಿದೆ.
- ಕಳೆದ ಆರು ವರ್ಷಗಳ (2002–08) ಅವಧಿಯಲ್ಲಿ ಮೊದಲ ಬಾರಿಗೆ ಇತರೆ ಬಂಡವಾಳ ಜಮೆಗಳು (ರೂ.246 ಕೋಟಿ) ಸಂಚಿತವಾಗಿದ್ದು ಇದು ಸರ್ಕಾರಿ ಜಮೀನಿನ ಮಾರಾಟದಿಂದ ಉಂಟಾಗಿದೆ.
- ಬಂಡವಾಳ ವೆಚ್ಚವು ಸಾಮಾಜಿಕ ಸೇವೆಗಳ ವಿಭಾಗದಲ್ಲಿ ರೂ.855 ಕೋಟಿಗಳಷ್ಟು ಹೆಚ್ಚಾಗಿದ್ದು, ಆರ್ಥಿಕ ಸೇವೆಗಳ ವಿಭಾಗದಲ್ಲಿ ರೂ.767 ಕೋಟಿಗಳಷ್ಟು ಕಡಿಮೆಯಾಗಿದೆ.
- ಸಾರ್ವಜನಿಕ ಋಣ ಸ್ವೀಕೃತಿಗಳಲ್ಲಿ (ಮಾರ್ಗೋಪಾಯ ಮುಂಗಡಗಳನ್ನು ಹೊರತುಪಡಿಸಿ) ರೂ.1,267 ಕೋಟಿಗಳಷ್ಟು ಕಡಿಮೆಯಾಗಿದ್ದು, ಇದು ಆಂತರಿಕ ಋಣ ಸ್ವೀಕೃತಿಗಳಲ್ಲಿನ (ರೂ.1,419 ಕೋಟಿಗಳು) ಕಡಿತದಿಂದಾಗಿ ಉಂಟಾಗಿದ್ದು ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳಲ್ಲಿ ಹೆಚ್ಚಳವಾಗಿದೆ (ರೂ.152 ಕೋಟಿ).
- ಸಾಲಗಳು ಮತ್ತು ಮುಂಗಡ ವಸೂಲಾತಿಯು ರೂ.8 ಕೋಟಿಗಳಷ್ಟು ಕಡಿಮೆಯಾಗಿದ್ದರೆ, ವಿತರಣೆಗಳು ರೂ.400 ಕೋಟಿಗಳಷ್ಟು ಹೆಚ್ಚಾಗಿದೆ.
- ಸಾರ್ವಜನಿಕ ಲೆಕ್ಕಗಳಲ್ಲಿನ ಜಮೆಗಳು ಮತ್ತು ವಿತರಣೆಗಳು ಕ್ರಮವಾಗಿ ರೂ.9,120 ಕೋಟಿಗಳು ಮತ್ತು ರೂ.11,418 ಕೋಟಿಗಳಷ್ಟು ಹೆಚ್ಚಾಗಿದೆ.
- ರಾಜ್ಯ ಸರ್ಕಾರದ ನಗದು ಶಿಲ್ಕು ರೂ.2,185 ಕೋಟಿಗಳಷ್ಟು ಕಡಿಮೆಯಗಿದೆ.

### 1.1.2 ಪ್ರಮುಖ ಸೂಚಕಗಳನ್ವಯ ಆರ್ಥಿಕ ಸ್ಥಿತಿ

ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಪ್ರಮುಖ ಸೂಚಕಗಳನ್ವಯ ಪ್ರಸಕ್ತ ಸಾಲಿನಲ್ಲಿನ ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿಯನ್ನು ಕೋಷ್ಟಕ 2ರಲ್ಲಿ ನೀಡಲಾಗಿದೆ.

**ಕೋಷ್ಟಕ – 2**

(ಕೋಟಿ ರೂಪಾಯಿಗಳಲ್ಲಿ)

| 2006–07 | ಕ್ರಮ ಸಂಖ್ಯೆ | ಪ್ರಮುಖ ಮೊತ್ತಗಳು | | 2007–08 |
|---|---|---|---|---|
| **37,587** | **1** | **ರಾಜಸ್ವ ಜಮೆಗಳು (2+3+4)** | | **41,151** |
| 23,301 | 2 | ತೆರಿಗೆ ರಾಜಸ್ವ | | 25,987 |
| 4,099 | 3 | ತೆರಿಗೆಯೇತರ ರಾಜಸ್ವ | | 3,358 |
| 10,187 | 4 | ಇತರೆ ಜಮೆಗಳು | | 11,806 |
| **60** | **5** | **ಋಣವಲ್ಲದ ಬಂಡವಾಳ ಜಮೆಗಳು** | 246 | **298** |
| | | ವಸೂಲಾದ ಸಾಲ ಮತ್ತು ಮುಂಗಡಗಳು | 52 | |
| **37,647** | **6** | **ಒಟ್ಟು ಜಮೆಗಳು (1+5)** | | **41,449** |
| **25,766** | **7** | **ಯೋಜನೇತರ ವೆಚ್ಚ (8+10+11)** | | **30,517** |
| 25,583 | 8 | ರಾಜಸ್ವ ಲೆಕ್ಕ | | 29,062 |
| 4,236 | 9 | ಬಡ್ಡಿ ಪಾವತಿಗಳು | | 4,506 |
| 132 | 10 | ಬಂಡವಾಳ ಲೆಕ್ಕ | | 1,450 |
| 51 | 11 | ಸಾಲ ಮತ್ತು ಮುಂಗಡಗಳ ವಿತರಣೆ | | 5 |
| **16,569** | **12** | **ಯೋಜನಾ ವೆಚ್ಚ (13+14+15)** | | **16,264** |
| 7,852 | 13 | ರಾಜಸ್ವ ಲೆಕ್ಕ | | 8,313 |
| 8,411 | 14 | ಬಂಡವಾಳ ಲೆಕ್ಕ | | 7,199 |
| 306 | 15 | ಸಾಲ ಮತ್ತು ಮುಂಗಡಗಳ ವಿತರಣೆ | | 752 |
| **42,335** | **16** | **ಒಟ್ಟು ವೆಚ್ಚ (7+12)** | | **46,781** |
| **– 4,688** | **17** | **ವಿತ್ತೀಯ ಕೊರತೆ [(1+5)–16)]** | | **–5,332** |
| **4,152** | **18** | **ರಾಜಸ್ವ ಹೆಚ್ಚಳ [(1–(8+13)]** | | **3,776** |
| **–452** | **19** | **ಪ್ರಾಥಮಿಕ ಹೆಚ್ಚಳ ಕೊರತೆ (–) (6–16+9)/ ಪ್ರಾಥಮಿಕ ಹೆಚ್ಚಳ (9–17)** | | **– 826** |

2007–08ನೇ ಸಾಲಿನಲ್ಲಿ ರಾಜಸ್ವ ಜಮೆಗಳಲ್ಲಿನ ರೂ.3,564 ಕೋಟಿಗಳಿಗೆ (ಶೇಕಡ 9) ಪ್ರತಿಯಾಗಿ ರಾಜಸ್ವ ವೆಚ್ಚವು ರೂ.3,940 ಕೋಟಿಗಳಷ್ಟು ಹೆಚ್ಚಾಗಿ (ಶೇಕಡ 12) ಇದು ರಾಜಸ್ವ ಲೆಕ್ಕದಲ್ಲಿನ ಹೆಚ್ಚಳದಲ್ಲಿ ಇಳಿಕೆಯಾಗಿ ಪರ್ಯವಸಾನವಾಗಿದೆ. ರಾಜಸ್ವ ಹೆಚ್ಚಳದಲ್ಲಿನ ರೂ.376 ಕೋಟಿಗಳ ಇಳಿಕೆ, ಬಂಡವಾಳ ವೆಚ್ಚದಲ್ಲಿನ ರೂ.506 ಕೋಟಿಗಳ ಏರಿಕೆ (ಸಾಲಗಳು ಮತ್ತು ಮುಂಗಡಗಳು ಸೇರಿ) ಮತ್ತು ಋಣೇತರ ಬಂಡವಾಳ ಜಮೆಗಳಲ್ಲಿನ ರೂ.238 ಕೋಟಿಗಳ ಏರಿಕೆಯಿಂದಾಗಿ ವಿತ್ತೀಯ ಕೊರತೆಯಲ್ಲಿ ರೂ.644 ಕೋಟಿಯಷ್ಟು ಏರಿಕೆಯುಂಟಾಗಿದೆ. ವಿತ್ತೀಯ ಕೊರತೆಯಲ್ಲಿನ ಏರಿಕೆ ಮತ್ತು ಬಡ್ಡಿ ಪಾವತಿಗಳಲ್ಲಿನ ರೂ.270 ಕೋಟಿಗಳು ಸೇರಿ ಪ್ರಾಥಮಿಕ ಕೊರತೆಯು ರೂ.374 ಕೋಟಿಗಳಷ್ಟು ಹೆಚ್ಚಾಗಲು ಕಾರಣವಾಗಿದೆ.

## 1.2 ಆರ್ಥಿಕ ಸ್ಥಿತಿಯ ತುಲನೆಗೆ ಅನುಸರಿಸಿದ ಕ್ರಮ

2002–03ರಿಂದ 2007–08ರ ಅವಧಿಯ ಹಣಕಾಸು ಲೆಕ್ಕಗಳ ತ:ಖ್ತೆಗಳಲ್ಲಿ ಕಾಣಿಸಲಾದ ಜಮೆಗಳು ಮತ್ತು ವೆಚ್ಚಗಳ ಪ್ರಮುಖ ಜಮಾವಣೆಗಳ ಪ್ರವೃತ್ತಿಗಳನ್ನು ವಿಶ್ಲೇಷಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಪ್ರಮುಖ ಜಮಾವಣೆಗಳ ಪ್ರವೃತ್ತಿಗಳು ಮತ್ತು ರೂಪುಗಳನ್ನು ಬಿಂಬಿಸಲು ಹನ್ನೆರಡನೇ ಹಣಕಾಸು ಆಯೋಗವು ನಿಯಮಿಸಿರುವ ಕ್ರಮಗಳು/ಮಿತಿಗಳು ಅಲ್ಲದೆ ಅದರ ಪ್ರಕ್ಷೇಪಣಗಳು ಮತ್ತು ರಾಜ್ಯ ಸರ್ಕಾರವು ತನ್ನ ವಿತ್ತೀಯ ಜವಾಬ್ದಾರಿಗಳ ಕಾಯಿದೆ ಹಾಗೂ ಕಾಯಿದೆಯಡಿ ಶಾಸಕಾಂಗದ ಮುಂದೆ ಮಂಡಿಸಬೇಕಾದ ಇತರ ವಿವರಣಾ ಪಟ್ಟಿಗಳಲ್ಲಿನ ಪ್ರಕ್ಷೇಪಣಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ರಾಜ್ಯ ಸರ್ಕಾರದ ಆರ್ಥಿಕ ಮತ್ತು ಅಂಕಿಅಂಶಗಳ ನಿರ್ದೇಶಕರು ಪ್ರಕಟಿಸಿರುವ (ಕೋಷ್ಟಕ–3) ರಾಜ್ಯದ ಒಟ್ಟು ಆಂತರಿಕ ಉತ್ಪನ್ನವನ್ನು (ಜಿಎಸ್‌ಡಿಪಿ)[1] ರಾಜ್ಯದ ಅರ್ಥ ವ್ಯವಸ್ಥೆಯ ಪ್ರಮುಖ ಸೂಚಕವೆಂದು ಭಾವಿಸಿಕೊಂಡು, ತೆರಿಗೆ ಮತ್ತು ತೆರಿಗೆಯೇತರ ಆದಾಯ, ರಾಜಸ್ವ ಮತ್ತು ಬಂಡವಾಳ ವೆಚ್ಚ, ಆಂತರಿಕ ಋಣ ಮತ್ತು ರಾಜಸ್ವ ಮತ್ತು ವಿತ್ತೀಯ ಕೊರತೆಗಳನ್ನು ಮಾರುಕಟ್ಟೆ ದರಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶತಾಂಶವಾಗಿ ನಿರೂಪಿಸಲಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಪ್ರತಿನಿಧಿಸುವ ನೆಲೆಗೆ ಸಂಬಂಧಿಸಿದಂತೆ ಏರಿಳಿತದ ಸ್ತರಗಳನ್ನು ನಿರ್ಣಯಿಸಲು ರಾಜಸ್ವ ಜಮೆಗಳು ಮತ್ತು ರಾಜಸ್ವ ವೆಚ್ಚ ಮುಂತಾದವುಗಳಿಗೆ ಪ್ಲವನ ಶೀಲತೆಯ ಪರಿಕಲ್ಪನೆಯನ್ನು ನೀಡಲಾಗಿದೆ. ಈ ಉದ್ದೇಶಕ್ಕಾಗಿ ಅಳವಡಿಸಿಕೊಂಡ ಪ್ರಮುಖ ಸೂಚಕಗಳು (1) ಜಮೆಗಳ ಮೊತ್ತದಲ್ಲಿನ ಪ್ರವೃತ್ತಿ (2) ಆಕರಗಳ ಅನ್ವಯ (3) ಆಸ್ತಿಗಳು ಮತ್ತು ಜವಾಬ್ದಾರಿಗಳು ಮತ್ತು (4) ಕೊರತೆಗಳ ನಿರ್ವಹಣೆ. ಈ ಅಂಶಗಳನ್ನು ಗಮನಿಸುವಾಗ ಸಂಪನ್ಮೂಲಗಳ ಸಜ್ಜಿಕೆಯ ಯತ್ನಗಳ ಸಂಚಿತ ಪರಿಣಾಮ, ಋಣ ಪಾವತಿ ಮತ್ತು ವಿತ್ತೀಯ ಲೋಪ ನಿವಾರಣಾ ಕ್ರಮಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಒಂದು ಸಾಮುದಾಯಿಕ ಸಂಸ್ಥೆಯಾಗಿ ರಾಜ್ಯದ ಒಟ್ಟಾರೆ ಹಣಕಾಸಿನ ನಿರ್ವಹಣೆಯನ್ನು ವಿತ್ತೀಯ ಸಮಷ್ಟಿಗಳ ಸಾಪೇಕ್ಷ ನಿರ್ವಚನಕ್ಕೆ ಸಾಮಾನ್ಯವಾಗಿ ಅನುಸರಿಸುವ ಕೆಲವು ಅನುಪಾತಗಳನ್ನು ಅನ್ವಯಿಸಿ ನಿರೂಪಿಸಲಾಗಿದೆ. ಇದಲ್ಲದೆ, ಈ ವಿಭಾಗದಲ್ಲಿ ಸರ್ಕಾರದ ಹಣಕಾಸಿನ ನಿರ್ವಹಣೆಯ ಆಯ್ದ ಸೂಚಕಗಳನ್ನು ಪಟ್ಟಿ ಮಾಡಲಾಗಿದೆ ಮತ್ತು ಈ ಸಂದರ್ಭದಲ್ಲಿ ಉಪಯೋಗಿಸಲಾಗಿರುವ ಕೆಲವು ಪದಕಟ್ಟುಗಳನ್ನು **ಅನುಬಂಧ 1.1–ಭಾಗ 'ಸಿ'**ಯಲ್ಲಿ ವಿವರಿಸಲಾಗಿದೆ. 31 ಮಾರ್ಚ್ 2008ರಲ್ಲಿದ್ದಂತೆ ಹಣಕಾಸಿನ ಸಂಕ್ಷಿಪ್ತ ಸ್ಥಿತಿ, 2007–08ರ ಪಾಲಿನ ಜಮೆಗಳ ಮತ್ತು ವಿತರಣೆಗಳ ಗೋಷ್ವಾರೆ, ನಿಧಿಗಳ ಆಕರ ಮತ್ತು ಅನ್ವಯಗಳು ಮತ್ತು ರಾಜ್ಯ ಸರ್ಕಾರದ ಹಣಕಾಸಿನ ಕಾಲಸರಣಿ ದತ್ತಾಂಶಗಳನ್ನು **ಅನುಬಂಧ 1.2ರಿಂದ 1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 3 : ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿ**

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಕೋಟಿ ರೂಪಾಯಿಗಳಲ್ಲಿ) | 1,17,919 | 1,29,181 | 1,49,854 | 1,67,975 | 1,88,274φ | 2,15,282μ |
| ಬೆಳವಣಿಗೆಯ ದರ | 7.8 | 9.6 | 16.0 | 12.1 | 12.1 | 14.3 |

φ ಕ್ಷಿಪ್ರ ಅಂದಾಜುಗಳು, μ ಸಂಭಾವ್ಯ ಅಂದಾಜುಗಳು

[1] ರಾಜ್ಯದ ಒಟ್ಟು ಆಂತರಿಕ ಉತ್ಪನ್ನವನ್ನು ರಾಜ್ಯ ಒಟ್ಟು ಆದಾಯ ಅಥವಾ ಕಾರ್ಮಿಕ ಶ್ರಮ ಮತ್ತು ಉತ್ಪನ್ನದ ಇತರ ಎಲ್ಲಾ ಅಂಶಗಳನ್ನು ಉಪಯೋಗಿಸಿಕೊಂಡು ಉತ್ಪತ್ತಿಮಾಡಿದ ಸರಕುಗಳ ಮತ್ತು ಸೇವೆಗಳ ಗುಣಾಂಕ ಮೌಲ್ಯ ಎಂದು ನಿರೂಪಿಸಬಹುದು.

### 1.2.1 ಕರ್ನಾಟಕದಲ್ಲಿ ವಿತ್ತೀಯ ಸುಧಾರಣಾ ಪಥ

ಹನ್ನೊಂದನೆ ಹಣಕಾಸು ಆಯೋಗವು ರೂಪಿಸಿದ ಸ್ಥೂಲ ಪ್ರಮಿತಿಗಳನ್ನು ಆಧಾರ ಮಾಡಿಕೊಂಡು ಕರ್ನಾಟಕ ರಾಜ್ಯ ಸರ್ಕಾರವು 2000–01ರಿಂದ 2004–05ರ ಅವಧಿಗೆ ಮೊದಲ ಮಧ್ಯಂತರ ಅವಧಿಯ ಹಣಕಾಸು ಯೋಜನೆಯನ್ನು ಪ್ರತಿಪಾದಿಸುವ ಮೂಲಕ ವಿತ್ತೀಯ ಸುಧಾರಣೆಗಳು ಮತ್ತು ಕ್ರೋಢೀಕರಣವನ್ನು ಮುಂಚೂಣಿಗೆ ತರಲಾಯಿತು. ಈ ಮಧ್ಯಂತರ ವಿತ್ತೀಯ ಯೋಜನೆಯು ಹಿಂದಿನ ವರ್ಷದ ವಿತ್ತೀಯ ಗುರಿಗಳಿಗೆ ಪ್ರತಿಯಾಗಿ ರಾಜ್ಯ ಸರ್ಕಾರದ ಸಾಧನೆಯನ್ನು ನಿರೂಪಿಸುವ ನಿರಂತರ ವಾರ್ಷಿಕ ದಾಖಲೆಯಾಗುವುದಲ್ಲದೇ ಆಯವ್ಯಯ ಪ್ರಯೋಗಕ್ಕೆ ಅಗತ್ಯವಾದ ಬಹುವಾರ್ಷಿಕ ಮಧ್ಯಂತರ ಸುಧಾರಣಾ ಹಂದರಕ್ಕೆ ಪರ್ಯಾಯವಾಗಿದೆ.

ಮಧ್ಯಂತರ ವಿತ್ತೀಯ ಯೋಜನೆಗೆ ಶಾಸನಬದ್ಧ ಆಧಾರವನ್ನು 1 ಏಪ್ರಿಲ್ 2003ರಿಂದ ಜಾರಿಗೆ ಬಂದ ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ, 2002 (ಅಧಿನಿಯಮ)ದಲ್ಲಿ ಒದಗಿಸಲಾಗಿದೆ. ಈ ಅಧಿನಿಯಮವು ರಾಜಸ್ವ ಹೆಚ್ಚಳ ವಿತ್ತೀಯ ಕೊರತೆಯಲ್ಲಿ ಇಳಿಕೆ, ವಿತ್ತ ನೀತಿಯ ಪರಿಣಾಮಕಾರಿ ಜಾರಿಯಲ್ಲಿನ ಅಡ್ಡಿಗಳ ನಿವಾರಣೆ ಮತ್ತು ಸಾಲ, ಋಣ ಮತ್ತು ಕೊರತೆಗಳಲ್ಲಿ ಮಿತಿ ಸಾಧನೆ, ಮಧ್ಯಂತರ ವಿತ್ತೀಯ ಚೌಕಟ್ಟುಗಳ ಮೂಲಕ ಹಣಕಾಸು ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಸಾಧಿಸುವ ಗುರಿಯನ್ನು ಸಾಧಿಸುವ ಮೂಲಕ ವಿತ್ತೀಯ ಸ್ಥಿರತೆ ಮತ್ತು ಸಮರ್ಥತೆಗಳನ್ನು ಖಚಿತಪಡಿಸಿಕೊಳ್ಳುವ, ಸಾಮಾಜಿಕ ಹಾಗೂ ಭೌತಿಕ ಮತ್ತು ಮಾನವ ಸಂಪನ್ಮೂಲಗಳ ವೃದ್ಧಿಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

ವಿತ್ತ ನಿರ್ವಹಣೆಯ ತತ್ವಗಳನ್ನು ಜಾರಿಗೊಳಿಸಲು ಅಧಿನಿಯಮವು ಈ ಕೆಳಕಂಡ ವಿತ್ತೀಯ ಗುರಿಗಳನ್ನು ರಾಜ್ಯ ಸರ್ಕಾರಕ್ಕೆ ನಿಗದಿಗೊಳಿಸಿದೆ.

- 2005–06ರ ಅಂತ್ಯದೊಳಗೆ ರಾಜಸ್ವ ಕೊರತೆಯನ್ನು ನೀಗಿಸುವುದು.
- 2005–06ರ ಅಂತ್ಯದೊಳಗೆ ವಿತ್ತೀಯ ಕೊರತೆಯನ್ನು ಅಂದಾಜಿಸಿದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಮೂರಕ್ಕೆ ಮೀರದಂತೆ ಇಳಿಸುವುದು.
- ಹದಿಮೂರು ಆರ್ಥಿಕ ವರ್ಷಗಳೊಳಗೆ ಅಂದರೆ, 2014–15ರ ಆರ್ಥಿಕ ವರ್ಷದ ಅಂತ್ಯದ ಹೊತ್ತಿಗೆ ಒಟ್ಟು ಜವಾಬ್ದಾರಿಗಳನ್ನು ಅಂದಾಜಿಸಿದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 25ಕ್ಕೆ ಮೀರದಂತೆ ಮಿತಗೊಳಿಸುವುದು.
- ಬಾಕಿ ಉಳಿದಿರುವ ಖಾತರಿಗಳನ್ನು ಕರ್ನಾಟಕ ಸರ್ಕಾರ ಖಾತರಿ ಮಿತಿ ಅಧಿನಿಯಮ 1999ರಲ್ಲಿ ವಿಧಿಸಿದ ಮಿತಿಯೊಳಗೆ ಇರುವಂತೆ ನಿರ್ವಹಿಸುವುದು.

ಪ್ರಕೃತಿ ವಿಕೋಪಗಳಿಂದಾಗಿ ಉಂಟಾಗುವ ಅನಿರೀಕ್ಷಿತ ವೆಚ್ಚಗಳಿಂದಾಗಿ ಇಂತಹ ಸಂದರ್ಭಗಳಲ್ಲಿ ಉಂಟಾಗುವ ವಾಸ್ತವ ವೆಚ್ಚದ ಮಟ್ಟಿಗೆ ರಾಜ್ಯದ ಹಣಕಾಸಿನ ಮೇಲೆ ಬೇಡಿಕೆ ಉಂಟಾಗಿ ರಾಜಸ್ವ ಮತ್ತು ವಿತ್ತೀಯ ಕೊರತೆಗಳು ನಿಗದಿತ ಮಿತಿಗಳನ್ನು ಮೀರಬಹುದಾಗಿದೆ.

### 1.2.2 ಆರ್ಥಿಕ ನೀತಿಯ ನಿರೂಪಣೆಗಳು – 2007–08

ರಾಜ್ಯ ಸರ್ಕಾರವು 2007–11ರ ಅವಧಿಯ ಮಧ್ಯಂತರ ವಿತ್ತೀಯ ಯೋಜನೆಯನ್ನು ರಾಜ್ಯ ಶಾಸಕಾಂಗದ ಮುಂದೆ 2007–08ರ ವಾರ್ಷಿಕ ಆಯವ್ಯಯ ಪತ್ರದ ಜೊತೆಗೆ ಮಂಡಿಸಿದ್ದು, ಅದು ಕೆಳಗಿನ ಅಂಶಗಳನ್ನು ಒಳಗೊಂಡಿದೆ:

- ರಾಜ್ಯ ಸರ್ಕಾರದ ಮಧ್ಯಂತರ ಆರ್ಥಿಕ ಗುರಿಗಳು.
- ಹಿಂದಿನ ವರ್ಷ ನಿಗದಿಗೊಳಿಸಿದ್ದ ವಿತ್ತೀಯ ಸೂಚಕಗಳ ಸಾಧನೆಯ ಮೌಲ್ಯಮಾಪನ.
- ಇತ್ತೀಚಿನ ಆರ್ಥಿಕ ಪ್ರವೃತ್ತಿಗಳು ಮತ್ತು ಬೆಳವಣಿಗೆ ಹಾಗೂ ಅಭಿವೃದ್ಧಿ ಪ್ರತೀಕ್ಷೆಗಳು.
- ಸರ್ಕಾರದ ವ್ಯವಸ್ಥಿತ ಆದ್ಯತೆಗಳು ಮತ್ತು ಪ್ರಮುಖ ಆರ್ಥಿಕ ನೀತಿಗಳು ಮತ್ತು ಅವುಗಳ ಸ್ಥಿರತೆಯ ಮೌಲ್ಯಮಾಪನ.
- ನಾಲ್ಕು ವರ್ಷಗಳ ಆವರ್ತನಾ ಗುರಿಗಳು.
- ರಾಜಸ್ವ ಕೊರತೆಗೆ ಸಂಬಂಧಿಸಿದಂತೆ ಸಮರ್ಥತೆಯ ನಿರ್ಧಾರಣೆ ಮತ್ತು ಬಂಡವಾಳ ಜಮೆಗಳನ್ನು ಫಲಪ್ರದ ಉದ್ದೇಶಗಳಿಗೆ ಬಳಸಿಕೊಳ್ಳುವುದು.

### 1.2.3 ಅಧಿನಿಯಮದಲ್ಲಿ ಸೂಚಿಸಿದ ಆರ್ಥಿಕ ಗುರಿಗಳ ಸಾಧನೆಗೆ ಮಾರ್ಗಸೂಚಿ

ರಾಜ್ಯ ಸರ್ಕಾರವು, ಅಧಿನಿಯಮದಲ್ಲಿ ಸೂಚಿಸಿರುವ ಆರ್ಥಿಕ ಗುರಿಗಳನ್ನು ಗಮನದಲ್ಲಿಟ್ಟುಕೊಂಡು 2004–05ರಿಂದ 2008–09ರ ಅವಧಿಗೆ ಗುರಿಸಾಧನೆಯ ಫಲ ಸೂಚಿಗಳ ಮೈಲಿಗಲ್ಲುಗಳನ್ನು ಗುರುತಿಸುವ ನಿರ್ದಿಷ್ಟ ಅನುಷ್ಠಾನ ದಿನಾಂಕಗಳೊಂದಿಗೆ ತನ್ನದೇ ಆದ ಆರ್ಥಿಕ ಸುಧಾರಣಾ ಮಾರ್ಗವನ್ನು ರೂಪಿಸಿಕೊಂಡಿದೆ (**ಅನುಬಂಧ 1.6**). 2007–08ರ ಮುಂಗಡ ಪತ್ರದೊಂದಿಗೆ ಮಂಡಿಸಲಾದ ರಾಜ್ಯದ ಮಧ್ಯಂತರ ಅವಧಿಯ ವಿತ್ತ ಯೋಜನೆ 2007–11 ಆಯವ್ಯಯ ಅಂದಾಜುಗಳ ಫಲಿತಾಂಶ ಸೂಚಕಗಳನ್ನು ಒಳಗೊಂಡಿದೆ. 2007–08ರಲ್ಲಿ ಪ್ರಮುಖ ಸೂಚಕಗಳಿಗೆ ಸಂಬಂಧಿಸಿದಂತೆ ಆರ್ಥಿಕ ಸುಧಾರಣಾ ಪಥ ಮತ್ತು ಮಧ್ಯಂತರ ಅವಧಿಯ ಆರ್ಥಿಕ ಯೋಜನೆಯ ನಡುವಿನ ವ್ಯತ್ಯಾಸಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ 4 – ಆರ್ಥಿಕ ಸುಧಾರಣಾ ಪಥ ಮತ್ತು ಮಧ್ಯಂತರ ಅವಧಿಯ ಆರ್ಥಿಕ ಯೋಜನೆಯ ನಡುವಿನ ವ್ಯತ್ಯಾಸ**

(ಕೋಟಿ ರೂಪಾಯಿಗಳಲ್ಲಿ)

| ಫಲಿತಾಂಶ ಸೂಚಕ | 2007–08ರ ಪ್ರಕ್ಷೇಪಣಕ್ಕೆ ಪ್ರತಿಯಾಗಿ ವಾಸ್ತ | | |
|---|---|---|---|
| | ಆರ್ಥಿಕ ಸುಧಾರಣಾ ಪಥದ ಪ್ರಕ್ಷೇಪಣ | ಆಯವ್ಯಯ ಅಂದಾಜುಗಳು | ವಾಸ್ತವಿಕ |
| ರಾಜಸ್ವ ಜಮೆಗಳು | 36,282 | 40,762 | 41,151 |
| ರಾಜಸ್ವ ವೆಚ್ಚಗಳು | 34,661 | 39,135 | 37,375 |
| ಬಂಡವಾಳ ವೆಚ್ಚ | 5,346 | 8,207 | 8,649 |
| ರಾಜಸ್ವ ಹೆಚ್ಚಳ | 1,621 | 1,627 | 3,776 |
| ವಿತ್ತೀಯ ಕೊರತೆ | 5,875 | 6,305 | 5,332 |
| ವಿತ್ತೀಯ ಕೊರತೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ (ಶೇಕಡಾವಾರಿನಲ್ಲಿ) | 32 | 31 | 28 |

2004–05ರ ಅಂತ್ಯಕ್ಕೆ ರೂ.1,638 ಕೋಟಿಗಳ ರಾಜಸ್ವ ಹೆಚ್ಚಳವನ್ನು ಮತ್ತು ವಿತ್ತೀಯ ಕೊರತೆಯನ್ನು (ರೂ.3,600 ಕೋಟಿ) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಮೂರಕ್ಕಿಂತಲೂ ಕಡಿಮೆ ದಾಖಲಿಸುವ ಮೂಲಕ ರಾಜ್ಯ ಸರ್ಕಾರವು ಅಧಿನಿಯಮದಲ್ಲಿ ನಿಗದಿಪಡಿಸಿದ ಆರ್ಥಿಕ ಗುರಿಗಳನ್ನು ಒಂದು ವರ್ಷ ಮುಂಚಿತವಾಗಿಯೇ ಸಾಧಿಸಿದೆ. ರಾಜಸ್ವ ಹೆಚ್ಚಳವು 2006–07ರಲ್ಲಿ ರೂ.4,152 ಕೋಟಿಗಳಿಗೆ ಹೆಚ್ಚಾಗಿದ್ದು 2007–08ರಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿ ರೂ.3,776 ಕೋಟಿಯಷ್ಟಿತ್ತು. ವಿತ್ತೀಯ ಕೊರತೆಯು 2005–06ರಿಂದ 2007–08ನೇ ಸಾಲಿನಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಮೂರಕ್ಕಿಂತ ಕಡಿಮೆಯಿದ್ದಿತು. ರಾಜ್ಯ ಸರ್ಕಾರವು ನೀಡಿರುವ ಖಾತರಿಗಳು (ರೂ.10,786 ಕೋಟಿ) ಎರಡನೇ ಹಿಂದಿನ ವರ್ಷದ ರಾಜಸ್ವ ಜಮೆಗಳ ಶೇಕಡಾ 80ಕ್ಕಿಂತ ಕಡಿಮೆ ಇದ್ದು, ಇದು ನಿಗದಿತ ಮಿತಿಯೊಳಗೆ ಇದ್ದಿತು. ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ವಿತ್ತೀಯ ಜವಾಬ್ದಾರಿಗಳ ಅನುಪಾತವು 2004–05ರಿಂದ ಇಳಿಮುಖವಾಗಿದ್ದು, 2007–08ರಲ್ಲಿ ಇದು ಸುಮಾರು ಶೇಕಡಾ 28ರಷ್ಟಿತ್ತು. ಇದರ ಫಲವಾಗಿ ರಾಜ್ಯ ಸರ್ಕಾರವು ಹನ್ನೊಂದನೇ ಹಣಕಾಸು ಆಯೋಗದ ಅವಧಿಗೆ ರೂ.286 ಕೋಟಿಗಳ ಉತ್ತೇಜನಾ ಅನುದಾನಗಳ ಸಂಪೂರ್ಣ ಪ್ರಯೋಜನವನ್ನು ಪಡೆಯಿತು. ಇದಲ್ಲದೆ, ಕೇಂದ್ರ ಸರ್ಕಾರದ ಋಣ ಸಂಚಯನ ಮತ್ತು ಪರಿಹಾರ ಸೌಲಭ್ಯದಡಿ[2] ರಾಜ್ಯ ಸರ್ಕಾರವು 2005–06 (ರೂ.292 ಕೋಟಿ), 2006–07 (ರೂ.276 ಕೋಟಿ) ಮತ್ತು 2007–08ನೇ (ರೂ.256 ಕೋಟಿ) ಸಾಲಿಗೆ ರೂ.824 ಕೋಟಿಗಳ ಬಡ್ಡಿ ಪರಿಹಾರ ಮತ್ತು ರೂ.1,074 ಕೋಟಿಗಳ ಕೇಂದ್ರ ಸರ್ಕಾರದ ಸಾಲ ಮನ್ನಾ ಲಾಭವನ್ನು ಪಡೆಯಿತು.

[2] ರಾಜ್ಯ ಸರ್ಕಾರಗಳ ವಿತ್ತೀಯ ಕ್ರೋಢೀಕರಣ ಮತ್ತು ರಾಜಸ್ವ ಕೊರತೆಗಳ ನಿವಾರಣೆಗೆ ಹನ್ನೆರಡನೇ ಹಣಕಾಸು ಆಯೋಗದ ಶಿಫಾರಸಿನಂತೆ ಭಾರತ ಸರ್ಕಾರವು ಋಣ ಸಂಚಯ ಪರಿಹಾರ ಸೌಲಭ್ಯವನ್ನು ಕಲ್ಪಿಸಿದ್ದು, ಇದರಡಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನೀಡಿ ಸಾಲಗಳ ಕ್ರೋಢೀಕರಣ ಮತ್ತು ಸಾಕಷ್ಟು ಪ್ರಮಾಣದಲ್ಲಿ ಬಡ್ಡಿಯ ದರ ಇಳಿಕೆಯ ಮೂಲಕ ವಿತ್ತ ಜವಾಬ್ದಾರಿ ಕಾಯಿದೆ ಮತ್ತು ಋಣ ಮನ್ನಾದ ಅವಕಾಶದಡಿ ರಾಜ್ಯ ಸರ್ಕಾರಗಳ ರಾಜಸ್ವ ಕೊರತೆಗಳ ಇಳಿಕೆಗೆ ಸಂಬಂಧಿಸಿದಂತೆ ಹಣಕಾಸು ನಿರ್ವಹಣೆಯ ಆಧಾರದ ಮೇಲೆ ಸಾಮಾನ್ಯ ಋಣ ಪರಿಹಾರವನ್ನು ನೀಡಿದೆ.

### 1.2.4 ಆರ್ಥಿಕ ಪರಿಸ್ಥಿತಿಯ ಮಧ್ಯಂತರ ಅವಧಿಯ ಸಮೀಕ್ಷೆ

ಅಧಿನಿಯಮದಲ್ಲಿನ ಸೂಚನೆಗಳ ಅನುಸರಣೆಯ ಅಂಗವಾಗಿ ರಾಜ್ಯ ಶಾಸಕಾಂಗದ ಮುಂದೆ ಮಂಡಿಸಿದ ಪ್ರಸಕ್ತ ವರ್ಷದ ಅರ್ಧವಾರ್ಷಿಕ ಸಮೀಕ್ಷಾ ವರದಿಯಂತೆ ಸೆಪ್ಟೆಂಬರ್ 2007ಕ್ಕೆ ನಿಗದಿಪಡಿಸಿದ್ದ ರಾಜಸ್ವ ಸಂಗ್ರಹಣೆಯ ಗುರಿಯನ್ನು ಸಾಧಿಸಿರಲಿಲ್ಲ. ಆದರೆ ರಾಜಸ್ವ ಜಮೆಗಳು ವರ್ಷದ ಅಂತ್ಯದ ವೇಳೆಗೆ ಆಯವ್ಯಯ ಅಂದಾಜುಗಳನ್ನು ಮೀರಿತ್ತು. ಮಧ್ಯಂತರ ಸಮೀಕ್ಷೆಯಲ್ಲಿ ಹೇಳಿದ್ದಂತೆ ವರ್ಷದ ಕೊನೆಯಲ್ಲಿ ರಾಜಸ್ವ ವೆಚ್ಚವು ಅಂದಾಜು ಮಾಡಿದ್ದಕ್ಕಿಂತಲೂ ಕಡಿಮೆಯಿದ್ದು ಬಂಡವಾಳ ವೆಚ್ಚವು ಆಯವ್ಯಯ ಅಂದಾಜುಗಳಿಗಿಂತ ಹೆಚ್ಚಾಗಿತ್ತು. ಮಧ್ಯಂತರ ಸಮೀಕ್ಷೆಯಲ್ಲಿ ನಿರೀಕ್ಷಿಸಿದ್ದಂತೆ ರಾಜಸ್ವ ಹೆಚ್ಚಳವು ಮಧ್ಯಂತರ ಸಮೀಕ್ಷೆಯ ಪ್ರಕ್ಷೇಪಣಕ್ಕಿಂತ ರೂ.1,627 ಕೋಟಿ ಹೆಚ್ಚಾಗಿದ್ದು ವಿತ್ತೀಯ ಕೊರತೆಯು ರೂ.754 ಕೋಟಿಯಷ್ಟು ಕಡಿಮೆಯಾಗಿತ್ತು.

## 1.3 ಜಮೆಗಳ ಮೊತ್ತದ ಪ್ರವೃತ್ತಿ ಮತ್ತು ಸಂಯೋಜನೆ

ರಾಜ್ಯ ಸರ್ಕಾರದ ಆದಾಯದ ಮೂಲಗಳು, ರಾಜಸ್ವ ಜಮೆಗಳು ಮತ್ತು ಬಂಡವಾಳ ಜಮೆಗಳನ್ನು ಒಳಗೊಂಡಿದೆ. ರಾಜಸ್ವ ಜಮೆಗಳು, ತೆರಿಗೆ ಆದಾಯ, ತೆರಿಗೆಯೇತರ ಆದಾಯ, ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು ಮತ್ತು ಕೇಂದ್ರ ಸರ್ಕಾರದ ಸಹಾಯಾನುದಾನಗಳನ್ನು ಒಳಗೊಂಡಿದೆ. ಬಂಡವಾಳ ಜಮೆಯು, ಹೂಡಿಕೆ ಹಿಂತೆಗೆತಗಳ ಮೂಲಕದ ಹುಟ್ಟುವಳಿ, ಸಾಲ ಮತ್ತು ಮುಂಗಡಗಳ ವಸೂಲಾತಿ, ಆಂತರಿಕ ಮೂಲಗಳಿಂದ (ಮಾರುಕಟ್ಟೆ ಸಾಲಗಳು, ಹಣಕಾಸು ಸಂಸ್ಥೆಗಳು/ವಾಣಿಜ್ಯ ಬ್ಯಾಂಕುಗಳಿಂದ) ಪಡೆದ ಋಣ ಸಂದಾಯಗಳು ಮತ್ತು ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಅಲ್ಲದೆ ಸಾರ್ವಜನಿಕ ಲೆಕ್ಕದಲ್ಲಿನ ಸಂಚಯಗಳನ್ನು ಒಳಗೊಂಡಿದೆ. ಕೋಷ್ಟಕ 5ರಲ್ಲಿ 2002–08ರ ಅವಧಿಯಲ್ಲಿ ವಿವಿಧ ಶೀರ್ಷಿಕೆಗಳಲ್ಲಿನ ಜಮೆಗಳ ಮೂಲಗಳನ್ನು ತೋರಿಸಲಾಗಿದೆ:

**ಕೋಷ್ಟಕ 5: ಜಮೆಗಳ ಮೊತ್ತದ ವೃದ್ಧಿ ಹಾಗೂ ಸಂಯೋಜನೆಗಳಲ್ಲಿನ ಪ್ರವೃತ್ತಿ**

(ಕೋಟಿ ರೂಪಾಯಿಗಳಲ್ಲಿ)

| ರಾಜ್ಯ ಆದಾಯದ ಮೂಲಗಳು | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| **I. ರಾಜಸ್ವ ಜಮೆಗಳು** | **16,169** | **20,760** | **26,570** | **30,352** | **37,587** | **41,151** |
| **II. ಬಂಡವಾಳ ಜಮೆಗಳು** | **6,361** | **8,052** | **8,556** | **5,788** | **3,606** | **2,577** |
| ಸಾಲ ಮತ್ತು ಮುಂಗಡಗಳ ವಸೂಲಿ | 928 | 64 | 47 | 124 | 60 | 52 |
| ಸಾರ್ವಜನಿಕ ಋಣ ಜಮೆಗಳು | 5,433 | 7,988 | 8,509 | 5,664 | 3,546 | 2,279 |
| ಇತರೆ ಬಂಡವಾಳ ಜಮೆಗಳು | ಶೂನ್ಯ | ಶೂನ್ಯ | ಶೂನ್ಯ | ಶೂನ್ಯ | ಶೂನ್ಯ | 246 |
| **III.. ಸಾದಿಲ್ವಾರು ನಿಧಿ** | **8** | **0** | **41** | **39** | **0** | **13** |
| **IV. ಸಾರ್ವಜನಿಕ ಲೆಕ್ಕ ಜಮೆಗಳು** | **27,879** | **30,513** | **36,325** | **38,026** | **47,040** | **56,160** |
| ಅ. ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿ | 1,399 | 1,422 | 1,521 | 1,651 | 1,748 | 1,994 |
| ಆ. ಮೀಸಲು ನಿಧಿ | 338 | 396 | 570 | 1,289 | 1,656 | 1,034 |
| ಇ. ಠೇವಣಿಗಳು ಮತ್ತು ಮುಂಗಡಗಳು | 13,428 | 14,686 | 17,211 | 15,926 | 19,073 | 19,899 |
| ಈ. ಅಮಾನತ್ತು ಮತ್ತು ಇತರೆ | 10,606 | 11,308 | 14,390 | 16,393 | 20,772 | 30,714 |
| ಉ. ಇರಸಾಲುಗಳು | 2,108 | 2,701 | 2,633 | 2,767 | 3,791 | 2,519 |
| **ಒಟ್ಟು ಜಮೆಗಳು** | **50,417** | **59,325** | **71,492** | **74,205** | **88,233** | **99,901** |

ಒಟ್ಟು ಜಮೆಗಳು 2002–03ರಲ್ಲಿ ರೂ.50,417 ಕೋಟಿಗಳಷ್ಟಿದ್ದು, 2007–08ರಲ್ಲಿ ರೂ.99,901 ಕೋಟಿಗಳಿಗೆ ಏರಿ ಶೇಕಡ 98ರಷ್ಟು ಹೆಚ್ಚಾಗಿದೆ. ಇದರಲ್ಲಿ ರಾಜಸ್ವ ಜಮೆಗಳು ರೂ.16,169 ಕೋಟಿಗಳಿಂದ ರೂ.41,151 ಕೋಟಿಗೆ ಏರಿ ಶೇಕಡಾ 154ರಷ್ಟು ಹೆಚ್ಚಾಗಿದೆ. ಈ ಅವಧಿಯಲ್ಲಿ ಸಾಲವಲ್ಲದ ಜಮೆಗಳು ರೂ.928 ಕೋಟಿಗಳಿಂದ ರೂ.298 ಕೋಟಿಗಳಿಗೆ ಇಳಿದು ಶೇಕಡ 68ರಷ್ಟು ಕಡಿಮೆಯಾಗಿದ್ದರೆ ಸಾರ್ವಜನಿಕ ಲೆಕ್ಕಜಮೆಗಳು ಈ ಅವಧಿಯಲ್ಲಿ ರೂ.27,879 ಕೋಟಿಗಳಿಂದ ರೂ.56,160 ಕೋಟಿಗಳಿಗೆ ಏರಿ ಶೇಕಡಾ 101ರಷ್ಟು ಹೆಚ್ಚಾಗಿದೆ. ಭವಿಷ್ಯದಲ್ಲಿ ವಾಪಸಾತಿಯ ಹೊಣೆಯಿರುವ ಸಾರ್ವಜನಿಕ ಋಣ ಜಮೆಗಳು ರೂ.5,433 ಕೋಟಿಯಿಂದ ರೂ.2,279 ಕೋಟಿಗಳಿಗೆ ಇಳಿದಿದ್ದು, ರಾಜ್ಯದ ಹಣಕಾಸು ಸ್ಥಿತಿಯು ಉತ್ತಮಗೊಂಡಿರುವುದನ್ನು ಸೂಚಿಸುತ್ತದೆ. ಒಟ್ಟು ಜಮೆಗಳ ಶೇಕಡಾವಾರಿನಂತೆ ರಾಜಸ್ವ ಜಮೆಗಳ ಪಾಲು ನಿಯತವಾಗಿ ಏರುಮುಖದಲ್ಲಿದ್ದು 2002–03ರಲ್ಲಿದ್ದ ಶೇಕಡ 32ರಿಂದ 2006–07ರಲ್ಲಿ 43ಕ್ಕೆ ಏರಿದ್ದು, 2007–08ರಲ್ಲಿ ಸ್ವಲ್ಪ ಇಳಿಮುಖವಾಗಿ ಶೇಕಡ 41 ಆಗಿದೆ. ಬಂಡವಾಳ ಜಮೆಗಳ ಪಾಲು ಗಣನೀಯವಾಗಿ ಇಳಿದಿದ್ದು, 2003–04ರಲ್ಲಿ ಶೇಕಡ 14 ಇದ್ದು, 2007–08ರಲ್ಲಿ ಶೇಕಡ 3ಕ್ಕೆ ಇಳಿದಿದೆ. ಸಾರ್ವಜನಿಕ ಲೆಕ್ಕಜಮೆಯ ಪಾಲು 2002–03ರಲ್ಲಿ

ಶೇಕಡ 55ರಷ್ಟಿದ್ದು, 2003–06ರ ಅವಧಿಯಲ್ಲಿ ಶೇಕಡ 51ಕ್ಕೆ ಇಳಿದಿದ್ದು ನಂತರ 2006–07ರಲ್ಲಿ ಶೇಕಡ 53ಕ್ಕೆ ಏರಿ, 2007–08ರಲ್ಲಿ ಶೇಕಡ 56ಕ್ಕೆ ಏರಿದೆ.

### 1.3.1 ರಾಜಸ್ವ ಜಮೆಗಳು

ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ–11 ರಾಜ್ಯ ಸರ್ಕಾರದ ರಾಜಸ್ವ ಜಮೆಗಳ ವಿವರಗಳನ್ನು ನೀಡುತ್ತದೆ. ರಾಜಸ್ವ ಜಮೆಗಳು ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ್ದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಅದರ ನೈಜ ತಳಹದಿಯಾಗಿದೆ. ರಾಜಸ್ವ ಜಮೆಗಳ ವೃದ್ಧಿಯ ಗತಿ ಮತ್ತು ಮೊತ್ತಗಳಲ್ಲದೆ ಈ ಜಮೆಗಳನ್ನು ಅದರ ಮೂಲ ಮತ್ತು ಕಾಲಾನುಕ್ರಮದಲ್ಲಿ ಅದರ ವಿಕಾಸವನ್ನು ಗುರುತಿಸಬೇಕಾದದ್ದು ಅಷ್ಟೇ ಮುಖ್ಯವಾಗಿದೆ. ಕೋಷ್ಟಕ–6ರಲ್ಲಿ ಒಟ್ಟಾರೆ ರಾಜಸ್ವ ಜಮೆಗಳು, ಅವುಗಳ ವೃದ್ಧಿಯ ವಾರ್ಷಿಕ ದರ, ಒಟ್ಟು ಆಂತರಿಕ ಉತ್ಪನ್ನದೊಂದಿಗೆ ಈ ಜಮೆಗಳ ಅನುಪಾತ ಮತ್ತು ಅವುಗಳ ಪ್ಲವನಶೀಲತೆಯನ್ನು ಸೂಚಿಸಲಾಗಿದೆ.

**ಕೋಷ್ಟಕ 6: ರಾಜಸ್ವ ಜಮೆಗಳು – ಮೂಲ ಪ್ರಮಿತಿಗಳು**

(ಕೋಟಿ ರೂಪಾಯಿಗಳಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ರಾಜಸ್ವ ಜಮೆಗಳು | 16,169 | 20,760 | 26,570 | 30,352 | 37,587 | 41,151 |
| ರಾಜ್ಯದ ಸ್ವಂತ ತೆರಿಗೆ | 10,440(65) | 12,570 (61) | 16,072(60) | 18,632(61) | 23,301(62) | 25,987 (63) |
| ತೆರಿಗೆಯೇತರ ರಾಜಸ್ವ | 1,278 ( 8) | 2,958 (14) | 4,473(17) | 3,875(13) | 4,099(11) | 3,358 (09) |
| ಕೇಂದ್ರ ತೆರಿಗೆಗಳ ವರ್ಗಾವಣೆಗಳು | 2,786 (17) | 3,245 (15) | 3,878(15) | 4,213(14) | 5,374(14) | 6,779 (16) |
| ಸಹಾಯಾನುದಾನಗಳು | 1,665 (10) | 1,987 (10) | 2,147( 8) | 3,632(12) | 4,813(13) | 5,027 (12) |
| ರಾಜಸ್ವ ಜಮೆಗಳ ವೃದ್ಧಿಯ ದರ (ಶೇಕಡಾವಾರು) | 5.5 | 28.4 | 27.9 | 14.2 | 23.8 | 9.0 |
| ರಾಜಸ್ವ ಜಮೆ– ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಶೇಕಡಾವಾರು) | 13.7 | 16.1 | 17.7 | 18.1 | 20.0 | 19.1 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ ರಾಜಸ್ವ ಪ್ಲವನತೆ (ಅನುಪಾತ) | 0.7 | 3.0 | 1.7 | 1.2 | 2.0 | 0.6 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ ರಾಜ್ಯದ ಸ್ವಂತ ತೆರಿಗೆಗಳ ಪ್ಲವನತೆ (ಅನುಪಾತ) | 0.8 | 2.1 | 1.7 | 1.3 | 2.1 | 0.8 |
| ರಾಜ್ಯದ ಸ್ವಂತ ತೆರಿಗೆಗಳಿಗೆ ಸಂಬಂಧಿಸಿದಂತೆ ರಾಜಸ್ವ ಪ್ಲವನತೆ (ಅನುಪಾತ) | 0.9 | 1.4 | 1.0 | 0.9 | 0.9 | 0.8 |
| ಜಿಎಸ್‌ಡಿಪಿಯ ವೃದ್ಧಿ (ಶೇಕಡಾವಾರು) | 7.8 | 9.6 | 16.0 | 12.1 | 12.1 | 14.3 |

ಸೂಚನೆ : ಪ್ರಕ್ಷೇಪಗಳಲ್ಲಿನ ಅಂಕಿಗಳು ರಾಜಸ್ವ ಜಮೆಗಳ ಶೇಕಡಾವಾರು ಸಂಯೋಜನೆಯನ್ನು ಸೂಚಿಸುತ್ತವೆ.

ರಾಜಸ್ವ ಜಮೆಗಳು 2002–03ರಲ್ಲಿ ರೂ.16,169 ಕೋಟಿಗಳಷ್ಟಿದ್ದು 2007–08ರಲ್ಲಿ ರೂ.41,151 ಕೋಟಿಗಳಿಗೆ ಏರಿದ್ದು ಕ್ರಮವೃದ್ಧಿಯನ್ನು ಸೂಚಿಸಿದೆ. 2002–08ರ ಅವಧಿಯಲ್ಲಿ ಸರಾಸರಿ ಶೇಕಡಾ 74ರಷ್ಟು ಆದಾಯವು ರಾಜ್ಯದ ಸ್ವಂತ ಮೂಲಗಳಿಂದ ಬಂದಿದೆ. ಉಳಿದ ಭಾಗವು ಕೇಂದ್ರ ಸರ್ಕಾರದಿಂದ ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲು ಮತ್ತು ಸಹಾಯಾನುದಾನಗಳ ರೂಪದಲ್ಲಿ ಬಂದಿದೆ. 2007–08ರ ರಾಜಸ್ವ ಜಮೆಗಳ ಸಂಯೋಜನೆಯನ್ನು ನಕ್ಷೆಯ ರೂಪದಲ್ಲಿ ಕೆಳಗೆ ನೀಡಲಾಗಿದೆ.



2002–08ರ ಅವಧಿಯಲ್ಲಿ ರಾಜಸ್ವ ಪ್ಲವನತೆಯು ರಾಜಸ್ವ ಜಮೆಗಳ ವೃದ್ಧಿಯ ದರಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗಳನ್ನು ಅವಲಂಬಿಸಿ 0.6ರಿಂದ 3.0ರ ನಡುವೆ ಏರಿಳಿತಗಳಿಂದ ಅಸ್ಥಿರವಾಗಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದಂತೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ದರದಲ್ಲಿ ಶೇಕಡ 2 ಅಂಕಗಳ ಏರಿಕೆಯನ್ನು ಮತ್ತು ರಾಜಸ್ವ ಜಮೆಗಳ ವೃದ್ಧಿ ದರದಲ್ಲಿನ ಶೇಕಡ 15ರಷ್ಟು ಅಂಕಗಳ ಗಣನೀಯ ಇಳಿಕೆಯನ್ನು ಪರಿಗಣಿಸಿದಾಗ 2007–08ರಲ್ಲಿ ಪ್ಲವನತೆಯ ಅನುಪಾತದಲ್ಲಿ ರಾಜ್ಯ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ ಗಣನೀಯವಾಗಿ ಕ್ಷೀಣಿಸಿರುವುದು ಕಂಡುಬಂದಿದೆ. ರಾಜಸ್ವ ಪ್ರವನತೆಯು ಪ್ರವೃತ್ತಿಯು, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ ರಾಜ್ಯದ ಸ್ವಂತ ತೆರಿಗೆಯ ಪ್ಲವನತೆಯ ಅನುಪಾತದ ಜೊತೆಜೊತೆಗೆ ಚಲಿಸುತ್ತಿರುವುದನ್ನು ಸೂಚಿಸುವುದು ಮಾತ್ರವಲ್ಲದೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಪ್ರವೃತ್ತಿಯು ರಾಜಸ್ವ ಜಮೆಯ ಶೇಕಡ 70ರಷ್ಟಕ್ಕಿಂತ ಹೆಚ್ಚು ಭಾಗವು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿರುವುದನ್ನು ಧೃಡಪಡಿಸುತ್ತದೆ.

### ತೆರಿಗೆ ಆದಾಯ

ರಾಜ್ಯದ ಸ್ವಂತ ತೆರಿಗೆ ಆದಾಯದಲ್ಲಿ, ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಯು ರಾಜ್ಯದ ಸ್ವಂತ ತೆರಿಗೆಯ ಆದಾಯದ ಮುಖ್ಯ ಮೂಲವಾಗಿದ್ದು ಅದರ ಪಾಲು ಶೇಕಡಾ 53ರಷ್ಟಿದ್ದರೆ ನಂತರದ ಸ್ಥಾನಗಳು ರಾಜ್ಯ ಅಬಕಾರಿ (ಶೇಕಡಾ 18), ಮುದ್ರಾಂಕ ಮತ್ತು ನೋಂದಣಿ (ಶೇಕಡಾ 13) ಮತ್ತು ವಾಹನಗಳ ಮೇಲಿನ ತೆರಿಗೆ (ಶೇಕಡಾ 6) ಗಳದ್ದಾಗಿದೆ. ಕೆಳಗಿನ ಕೋಷ್ಟಕ–7ರಲ್ಲಿ 2002–08ರ ಅವಧಿಯಲ್ಲಿ ರಾಜ್ಯ ತೆರಿಗೆ ಆದಾಯದ ಪ್ರಮುಖ ಒಳಾಂಗಗಳ ಪ್ರವೃತ್ತಿಯನ್ನು ನೀಡಲಾಗಿದೆ.

**ಕೋಷ್ಟಕ 7 : ತೆರಿಗೆ ಆದಾಯ**

(ಕೋಟಿ ರೂಪಾಯಿಗಳಲ್ಲಿ)

| ತೆರಿಗೆ ಆದಾಯ | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆ | 5,474 | 6,649 | 8,700 | 9,870 | 11,762 | 13,894 |
| *ವೃದ್ಧಿಯ ದರ* | 3.89 | 21.47 | 30.85 | 13.45 | 19.17 | 18.13 |
| ರಾಜ್ಯ ಅಬಕಾರಿ | 2,094 | 2,334 | 2,806 | 3,397 | 4,495 | 4,767 |
| *ವೃದ್ಧಿಯ ದರ* | 5.92 | 11.46 | 20.22 | 21.06 | 32.32 | 6.05 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 1,115 | 1,356 | 1,760 | 2,213 | 3,206 | 3,409 |
| *ವೃದ್ಧಿಯ ದರ* | 30.41 | 21.61 | 29.79 | 25.74 | 44.87 | 6.33 |
| ವಾಹನಗಳ ಮೇಲಿನ ತೆರಿಗೆ | 676 | 800 | 983 | 1,105 | 1,374 | 1,650 |
| *ವೃದ್ಧಿಯ ದರ* | –5.06 | 18.34 | 22.88 | 12.41 | 24.34 | 20.09 |

2007–08ನೇ ಸಾಲಿನಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಯ ವೃದ್ಧಿಯ ದರದಲ್ಲಿ (ಶೇಕಡ ಒಂದರಷ್ಟು) ಸ್ವಲ್ಪಮಟ್ಟಿಗೆ ಇಳಿಕೆಯಾಗಿದ್ದು ಇದು ರಾಜ್ಯ ಸರ್ಕಾರವು ತನ್ನ 2008–12ರ ಮಧ್ಯಂತರ ವಿತ್ತೀಯ ಯೋಜನೆಯಲ್ಲಿ ಹೇಳಿರುವಂತೆ ಪೆಟ್ರೋಲ್ ಮತ್ತು ಡೀಸಲ್‌ಗಳ ನಿರ್ವಹಣಾ ಬೆಲೆಯ ಪರಿಷ್ಕರಣೆ ಮಾಡದಿರುವುದು, ತೆರಿಗೆಯ ದರಗಳ ಇಳಿಕೆಯಿಂದಾಗಿ ಕೇಂದ್ರ ಮಾರಾಟ ತೆರಿಗೆ ಸಂಗ್ರಹದಲ್ಲಿನ ಇಳಿಕೆ ಮತ್ತು ವಿಶೇಷ ಪ್ರವೇಶ ತೆರಿಗೆಯ ರದ್ದುಗಳಿಂದ ಉಂಟಾಗಿದೆ. ಈ ವರ್ಷದಲ್ಲಿ ರಾಜ್ಯ ಅಬಕಾರಿ ವೃದ್ಧಿಯ ದರವು ಶೇಕಡ 32ರಿಂದ ಶೇಕಡ 6ಕ್ಕೆ ಗಣನೀಯವಾಗಿ ಇಳಿದಿದ್ದು, ಇದು ಮುಖ್ಯವಾಗಿ 2007ರ ಜುಲೈ ತಿಂಗಳಿಂದ ಸಾರಾಯಿ ಮಾರಾಟವನ್ನು ರದ್ದುಗೊಳಿಸಿರುವುದರಿಂದ ಮತ್ತು ಒಟ್ಟಾರೆ ಮದ್ಯದ ಮೇಲಿನ ತೆರಿಗೆಯ ಇಳಿಕೆಯಿಂದ ಉಂಟಾಗಿದೆ. ಮುದ್ರಾಂಕ ಹಾಗೂ ನೋಂದಣಿ ಶುಲ್ಕದ ವೃದ್ಧಿಯ ದರದಲ್ಲಿನ ಇಳಿಕೆಯು ಸ್ಥಿರಾಸ್ತಿ ಮಾರುಕಟ್ಟೆಯ ಕುಸಿತದಿಂದಾಗಿ ದಾಖಲೆಗಳ ನೋಂದಣಿಯ ಸಂಖ್ಯೆಯಲ್ಲಿ ಇಳಿಮುಖ ವಾದುದರಿಂದ ಉಂಟಾಗಿದೆ.

### ತೆರಿಗೆಯೇತರ ಆದಾಯ

ಸರ್ಕಾರದ ತೆರಿಗೆಯೇತರ ಆದಾಯವು ಸರ್ಕಾರವು ನೀಡಿದ ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ, ಈಕ್ವಿಟಿ ಹೂಡಿಕೆ ಮತ್ತು ಲೇವಾದೇವಿಗಳ ಮೇಲಿನ ಬಡ್ಡಿ, ಶುಲ್ಕ ಮತ್ತು ಜುಲ್ಮಾನೆಗಳು ಮತ್ತು ಸಾಮಾಜಿಕ ಆರ್ಥಿಕ ಸೇವೆಗಳ ಮೇಲಿನ ಬಳಕೆದಾರರ ಕರ ಇವುಗಳನ್ನು ಒಳಗೊಂಡಿದೆ. 2006–07ರಲ್ಲಿ ರೂ.4,099 ಕೋಟಿಯಷ್ಟಿದ್ದ ತೆರಿಗೆಯೇತರ ರಾಜಸ್ವವು 2007–08ರಲ್ಲಿ ರೂ.3,358 ಕೋಟಿಯಾಗಿ ಉಂಟಾದ ರೂ.741 ಕೋಟಿಗಳ ಇಳಿಕೆಯು ಮುಖ್ಯವಾಗಿ ರಾಜ್ಯ ಲಾಟರಿಗಳ

ಜಮೆಯಲ್ಲಿ ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿದ್ದು ಇದು ಏಪ್ರಿಲ್ 2007ರಿಂದ ಲಾಟರಿಗಳ ನಿಷೇಧದಿಂದ ಉಂಟಾಗಿದೆ. ತೆರಿಗೆಯೇತರ ರಾಜಸ್ವದಲ್ಲಿನ ಈ ನಷ್ಟವು ಸ್ವಲ್ಪಮಟ್ಟಿಗೆ ರಾಜಧನ ಕರದಡಿ ಹೆಚ್ಚಿನ ಆದಾಯ (ರೂ.100 ಕೋಟಿ) ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಪಂಚಾಯತ್‌ರಾಜ್ ನಿಧಿಗಳಲ್ಲಿ ಬಳಕೆಯಾಗದೆ ಉಳಿದ ಮೊತ್ತವನ್ನು ಸಂಚಿತ ನಿಧಿಗೆ ವಾಪಸ್ಸು ಮಾಡುವುದರಲ್ಲಿನ ಹೆಚ್ಚಳದಿಂದ ಸರಿ ತೂಗಿಸಿದೆ.

ಪ್ರಸಕ್ತ ಸಾಲಿನಲ್ಲಿ ಒಟ್ಟು ತೆರಿಗೆಯೇತರ ರಾಜಸ್ವಗಳಲ್ಲಿ ರೂ.2,099 ಕೋಟಿಗಳು (ಶೇಕಡ 3ರಷ್ಟು) ಕೃಷಿ, ಅರಣ್ಯ, ಮೀನುಗಾರಿಕೆ ಮತ್ತು ನೀರಾವರಿಗಳಿಂದ ಬಂದಿದೆ. ಪೋಲೀಸ್, ಕಾರಾಗೃಹ, ಲೋಕೋಪಯೋಗಿ ಮತ್ತು ಇತರ ಸಾಮಾನ್ಯ ಸೇವೆಗಳು ರೂ.679 ಕೋಟಿಗಳಷ್ಟಿದ್ದರೆ (ಶೇಕಡ 20), ಸಾಮಾಜಿಕ ಸೇವೆಗಳ ಪಾಲು ರೂ.181 ಕೋಟಿಗಳಷ್ಟಾಗಿತ್ತು (ಶೇಕಡ 5). ಡಿವಿಡೆಂಡ್ ಮತ್ತು ಬಡ್ಡಿಯ ರೂಪದಲ್ಲಿನ ಆದಾಯವು ರೂ.399 ಕೋಟಿಗಳು (ಶೇಕಡ 12).

2002–08ರ ಅವಧಿಯಲ್ಲಿ ಶಿಕ್ಷಣ, ವೈದ್ಯಕೀಯ ಮತ್ತು ಜನಾರೋಗ್ಯ, ನೀರು ಸರಬರಾಜು ಮತ್ತು ನೈರ್ಮಲ್ಯ, ನೀರಾವರಿ ಮತ್ತು ಇಂಧನಗಳಡಿಯ ರಾಜಸ್ವ ಜಮೆ ಹಾಗೂ ರಾಜಸ್ವ ವೆಚ್ಚಗಳ ಅನುಪಾತದಲ್ಲಿ ಬಳಕೆದಾರರ ಸಂಗ್ರಹಣೆಯು ನಗಣ್ಯವಾಗಿದ್ದು ಶೇಕಡ ಒಂದಕ್ಕಿಂತ ಕಡಿಮೆಯಿದ್ದಿತು.

### ಕೇಂದ್ರ ಸರ್ಕಾರದಿಂದ ಪಡೆದ ಸಹಾಯಾನುದಾನಗಳು

2002–03ರಲ್ಲಿ ರೂ.1,665 ಕೋಟಿಗಳಷ್ಟಿದ್ದ ಕೇಂದ್ರ ಸರ್ಕಾರದ ಸಹಾಯಾನುದಾನಗಳು 2007–08ರಲ್ಲಿ ರೂ.5,027 ಕೋಟಿಗಳಿಗೆ ಏರಿತು. ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ 8 – ಕೇಂದ್ರ ಸರ್ಕಾರದ ಸಹಾಯಾನುದಾನಗಳು**

**(ಕೋಟಿ ರೂಪಾಯಿಗಳಲ್ಲಿ)**

| | | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|---|
| ಯೋಜನೇತರ | | 421 | 530 | 263 | 1,736 | 2,224 | 1,531 |
| ಯೋಜನೆ | ರಾಜ್ಯ | 570 | 796 | 1,089 | 915 | 1,284 | 1,916 |
| | ಕೇಂದ್ರ | 45 | 42 | 46 | 37 | 43 | 71 |
| | ಕೇಂದ್ರ ಪುರಸ್ಕೃತ | 629 | 619 | 749 | 944 | 1,262 | 1,509 |
| **ಒಟ್ಟು** | | **1,665** | **1,987** | **2,147** | **3,632** | **4,813** | **5,027** |

2007–08ರಲ್ಲಿ ಕೇಂದ್ರ ಸರ್ಕಾರದ ಅನುದಾನಗಳಲ್ಲಿನ ರೂ.214 ಕೋಟಿಗಳ ಹೆಚ್ಚಳವು ಯೋಜನಾ ಅನುದಾನಗಳಲ್ಲಿನ ರೂ.907 ಕೋಟಿಗಳ ಹೆಚ್ಚಳದಿಂದಾಗಿದ್ದು, ಇದು ಯೋಜನೇತರ ಅನುದಾನಗಳಲ್ಲಿನ ರೂ.693 ಕೋಟಿಗಳ ಇಳಿಕೆಯಿಂದ ಸರಿದೂಗಿಸಿದೆ. ಯೋಜನಾ ಅನುದಾನಗಳಲ್ಲಿನ ಹೆಚ್ಚಳವು ಪ್ರಮುಖವಾಗಿ, ಬ್ಲಾಕ್ ಅನುದಾನಗಳು (ರೂ.385 ಕೋಟಿ), ಕೃಷಿಗಾಗಿ ಅನುದಾನಗಳು (ರೂ.154 ಕೋಟಿ) ಮತ್ತು ಇತರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ (ರೂ.102 ಕೋಟಿ) ಅನುದಾನಗಳಡಿಯಲ್ಲಿ ಉಂಟಾಗಿದೆ. ಯೋಜನೇತರ ಅನುದಾನಗಳಲ್ಲಿನ ರೂ.693 ಕೋಟಿಗಳ ಇಳಿಕೆಯು (ಹಿಂದಿನ ವರ್ಷಕ್ಕಿಂತ) ರಾಷ್ಟ್ರೀಯ ಪ್ರಕೃತಿ ವಿಕೋಪ ಸಾದಿಲ್ವಾರು ನಿಧಿಯ ಅನುದಾನಗಳು (ರೂ.316 ಕೋಟಿ) ಮತ್ತು ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿನ (ರೂ.246 ಕೋಟಿ) ಇಳಿಕೆಯಿಂದ ಉಂಟಾಗಿದೆ.

### ಕೇಂದ್ರ ತೆರಿಗೆ ವರ್ಗಾವಣೆಗಳು

ಹಿಂದಿನ ವರ್ಷಕ್ಕಿಂತ, ಕೇಂದ್ರ ಸರ್ಕಾರದ ಶುಲ್ಕಗಳಲ್ಲಿನ ರಾಜ್ಯದ ಪಾಲಿನಲ್ಲಿ ರೂಲ.1,405 ಕೋಟಿಗಳ ಹೆಚ್ಚಳವಿದ್ದು, ಇದು ಮುಖ್ಯವಾಗಿ ಕಾರ್ಪೊರೇಷನ್ ತೆರಿಗೆ (ರೂ.475 ಕೋಟಿ), ಕಾರ್ಪೊರೇಷನ್ ತೆರಿಗೆ ಹೊರತುಪಡಿಸಿ ಆದಾಯದ ಮೇಲಿನ ತೆರಿಗೆ (ರೂ.425 ಕೋಟಿ) ಮತ್ತು ಸೇವಾ ತೆರಿಗೆ (ರೂ.161 ಕೋಟಿ) ಮತ್ತು ಕೇಂದ್ರ ಅಬಕಾರಿ ಶುಲ್ಕ (ರೂ.110 ಕೋಟಿ) ಗಳಡಿಯ ಹೆಚ್ಚಳದಿಂದ ಉಂಟಾಗಿದೆ.

**ಬಾಕಿ ಇರುವ ರಾಜಸ್ವ**

ಮಾರ್ಚ್ 2008ರಲ್ಲಿದ್ದಂತೆ ಮಾರಾಟ, ವ್ಯಾಪಾರ, ಇತರೆ ತೆರಿಗೆಗಳು, ಪ್ರವೇಶತೆರಿಗೆ, ಮನೋರಂಜನಾ ತೆರಿಗೆ, ಕೃಷಿ ಆದಾಯ ತೆರಿಗೆ, ವೃತ್ತಿ ತೆರಿಗೆ, ಲಕ್ಷುರಿ ತೆರಿಗೆ, ರಾಜ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮೇಲಿನ ತೆರಿಗೆ ಮತ್ತು ಶುಲ್ಕಗಳ ಮೊತ್ತವು ರೂ.4,729 ಕೋಟಿಗಳಷ್ಟಿತ್ತು. ರೂ.682 ಕೋಟಿಗಳ ರಾಜಸ್ವವು (ವಿದ್ಯುಚ್ಛಕ್ತಿ ಮೇಲಿನ ತೆರಿಗೆ ಮತ್ತು ಶುಲ್ಕಗಳು: ರೂ.ಏಳು ಕೋಟಿ, ರಾಜ್ಯ ಅಬಕಾರಿ: ರೂ.675 ಕೋಟಿ) ಐದು ವರ್ಷಕ್ಕಿಂತಲೂ ಹಿಂದಿನಿಂದ ಬಾಕಿ ಉಳಿದಿದೆ.

## 1.4 ಸಂಪನ್ಮೂಲಗಳ ಬಳಕೆ

### 1.4.1 ವೆಚ್ಚದ ವೃದ್ಧಿ

ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳ ತ:ಖ್ತೆ–12 ರಾಜಸ್ವ ವೆಚ್ಚವನ್ನು ಒಳಶೀರ್ಷಿಕೆಯ ಹಂತದವರೆಗೂ, ಬಂಡವಾಳ ವೆಚ್ಚವನ್ನು ಪ್ರಧಾನ ಶೀರ್ಷಿಕೆಯ ಹಂತದವರೆಗೂ ವಿವರವಾಗಿ ಸೂಚಿಸುತ್ತದೆ. ರಾಜ್ಯಗಳು ತಮ್ಮ ಮಹತ್ತರ ಕಾರ್ಯಕ್ರಮಗಳ ಸಾಧನೆಗೆ ತಮ್ಮ ಪ್ರಸಕ್ತ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ನಿರ್ವಹಣೆಗೆ, ಬಂಡವಾಳ ವೆಚ್ಚ ಮತ್ತು ಹೂಡಿಕೆಗಳ ಮೂಲಕ ಈ ಸೇವೆಗಳ ಜಾಲ ವಿಸ್ತರಣೆಗೆ ಮತ್ತು ಋಣ ಸಂದಾಯ ಹೊಣೆಗಾರಿಕೆಗಳ ಪೂರೈಕೆಗೆ ತನ್ನ ಸಂಪನ್ಮೂಲಗಳನ್ನು ವರ್ಧಿಸಿಕೊಳ್ಳುತ್ತವೆ.

ಒಟ್ಟು ವೆಚ್ಚ, ಅದರ ವಾರ್ಷಿಕ ವೃದ್ಧಿಯ ದರ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವೆಚ್ಚದ ಮತ್ತು ರಾಜಸ್ವ ಜಮೆಗಳ ಅನುಪಾತ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಹಾಗೂ ರಾಜಸ್ವ ಜಮೆಗಳಿಗೆ ಸಂಬಂಧಿಸಿದಂತೆ ಅದರ ಪ್ಲವನತೆಯನ್ನು ಕೆಳಗಿನ ಕೋಷ್ಟಕ–9 ಮತ್ತು ನಂತರದ ನಕ್ಷೆ ರೂಪದಲ್ಲಿಯೂ ನಿರೂಪಿಸಲಾಗಿದೆ.

**ಕೋಷ್ಟಕ 9: ಒಟ್ಟು ವೆಚ್ಚ – ಮೂಲ ಪ್ರಮಿತಿಗಳು**

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ಒಟ್ಟು ವೆಚ್ಚ * (ಕೋಟಿ ರೂಪಾಯಿಗಳಲ್ಲಿ) | 22,379 | 25,325 | 30,217 | 34,163 | 42,335 | 46,781 |
| ವೃದ್ಧಿಯ ದರ (ಶೇಕಡ) | 5.4 | 13.2 | 19.3 | 13.1 | 23.9 | 10.5 |
| ಒಟ್ಟು ವೆಚ್ಚ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ (ಶೇಕಡ) | 19.0 | 19.6 | 20.2 | 20.3 | 22.5 | 21.7 |
| ರಾಜಸ್ವ ಜಮೆಗಳು/ಒಟ್ಟು ವೆಚ್ಚ ಅನುಪಾತ ಶೇಕಡ) | 72.2 | 82.0 | 87.9 | 88.8 | 88.8 | 88.0 |
| **ಒಟ್ಟು ವೆಚ್ಚದ ಪ್ಲವನತೆ** | | | | | | |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನದೊಂದಿಗೆ (ಅನುಪಾತ) | 0.7 | 1.4 | 1.2 | 1.1 | 2.0 | 0.7 |
| ರಾಜಸ್ವ ಜಮೆಗಳೊಂದಿಗೆ (ಅನುಪಾತ) | 1.0 | 0.5 | 0.7 | 0.9 | 1.0 | 1.2 |

* ಒಟ್ಟು ವೆಚ್ಚವು ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಹಾಗೂ ಸಾಲ ಮತ್ತು ಮುಂಗಡಗಳನ್ನು ಒಳಗೊಂಡಿದೆ




* ಸಾಲಗಳ ಹಾಗೂ ಮುಂಗಡಗಳ ಬಟವಾಡೆಯನ್ನು ಒಳಗೊಂಡಿದೆ

ಒಟ್ಟು ವೆಚ್ಚವು 2002–03ರಲ್ಲಿದ್ದ ರೂ.22,379 ಕೋಟಿಗಳಿಂದ 2007–08ರಲ್ಲಿ ರೂ.46,781 ಕೋಟಿಗಳಿಗೆ ಏರಿದೆ (ಶೇಕಡ 109). 2002–03ರಲ್ಲಿ ಒಟ್ಟು ವೆಚ್ಚದ ಶೇಕಡ 84ರಷ್ಟಿದ್ದ ರಾಜಸ್ವ ವೆಚ್ಚವು 2007–08ರಲ್ಲಿ ಶೇಕಡ 80ಕ್ಕೆ ಇಳಿದಿತ್ತು. ಬಂಡವಾಳ ವೆಚ್ಚವು (ಸಾಲ ಮತ್ತು ಮುಂಗಡಗಳೂ ಸೇರಿದಂತೆ) 2002–03ರಲ್ಲಿ ರೂ.3,564 ಕೋಟಿಗಳಷ್ಟಿದ್ದು, 2007–08ರಲ್ಲಿ ರೂ.9,406 ಕೋಟಿಗಳಿಗೆ ಏರಿ ಶೇಕಡ 164ರಷ್ಟು ಹೆಚ್ಚಾಗಿದೆ. ಇದು 2007–08ರಲ್ಲಿ ಒಟ್ಟು ವೆಚ್ಚದ ಶೇಕಡ 20ರಷ್ಟಿದ್ದು 2002–03ರಲ್ಲಿ ಶೇಕಡ 16ರಷ್ಟಿತ್ತು. 2007–08ರಲ್ಲಿ ಯೋಜನಾ ಬಂಡವಾಳ ವೆಚ್ಚವು ಒಟ್ಟು ಬಂಡವಾಳ ವೆಚ್ಚದ ಶೇಕಡ 85ರಷ್ಟಿತ್ತು. ಇದರಲ್ಲಿ ಶೇಕಡ 17ರಷ್ಟನ್ನು (ರೂ.1,507 ಕೋಟಿಗಳು) ಆಯವ್ಯಯದ ಹೊರಗಿನ ಸಾಲಗಳ ವಾಪಸಾತಿಗೆ ಖರ್ಚು ಮಾಡಲಾಗಿತ್ತು.

ರಾಜಸ್ವ ಜಮೆಗಳಿಗೆ ಸಂಬಂಧಿಸಿದಂತೆ ಒಟ್ಟು ವೆಚ್ಚದ ಪ್ಲವನತೆಯ ಅನುಪಾತವು ಕಳೆದ ಮೂರು ವರ್ಷಗಳಲ್ಲಿ ಒಂದರ ಆಸುಪಾಸಿನಲ್ಲಿದ್ದು ಇದು ಒಟ್ಟು ವೆಚ್ಚದ ಏರಿಕೆಯು ರಾಜಸ್ವ ಲಭ್ಯತೆಯ ಮೇಲೆಯೇ ನಿರ್ಧಾರಿತವಾಗಿರುವುದನ್ನು ಸೂಚಿಸುತ್ತದೆ. ಇದರ ಫಲವಾಗಿ ಒಟ್ಟು ವೆಚ್ಚ–ರಾಜಸ್ವ ಜಮೆಗಳ ಸ್ವೀಕೃತಿಯ ಅನುಪಾತ 2004–08ರ ಅವಧಿಯಲ್ಲಿ ಶೇಕಡ 88ರಿಂದ 89ರಲ್ಲಿ ಉಳಿದಿದೆ.

### 1.4.2 ಕಾರ್ಯ ಚಟುವಟಿಕೆಗಳಲ್ಲಿ ಒಟ್ಟು ವೆಚ್ಚದ ಪ್ರವೃತ್ತಿ

ಕಾರ್ಯಚಟುವಟಿಕೆಗಳ ಪರಿಭಾಷೆಯಲ್ಲಿ ಒಟ್ಟು ವೆಚ್ಚವನ್ನು ಬಡ್ಡಿ ಪಾವತಿ ಸೇರಿದಂತೆ ಸಾಮಾನ್ಯ ಸೇವೆಗಳು, ಸಾಮಾಜಿಕ ಮತ್ತು ಆರ್ಥಿಕ ಸೇವೆಗಳು, ಸಹಾಯಧನಗಳು ಮತ್ತು ಸಾಲ ಮತ್ತು ಮುಂಗಡಗಳ ಮೇಲಿನ ವೆಚ್ಚಗಳ ಸಂಯೋಜನೆಯೆಂದು ಪರಿಗಣಿಸಬಹುದು. ಒಟ್ಟು ವೆಚ್ಚದಲ್ಲಿ (ಸಾಲ ಮತ್ತು ಮುಂಗಡಗಳ ವಿತರಣೆ ಸೇರಿದಂತೆ) ಈ ಅಂಗಗಳ ತತ್ಸಬಂಧ ಪಾಲನ್ನು ಕೋಷ್ಟಕ 10ರಲ್ಲಿ ಮತ್ತು ನಂತರದ ನಕ್ಷಾ ರೂಪದಲ್ಲಿ ತೋರಿಸಲಾಗಿದೆ.

**ಕೋಷ್ಟಕ 10: ವೆಚ್ಚದ ಅಂಗಗಳು – ತತ್ಸಂಬಂಧ ಪಾಲು**

(ಶೇಕಡವಾರಿನಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ಸಾಮಾನ್ಯ ಸೇವೆಗಳು | 32.1 | 36.2 | 33.2 | 30.0 | 25.4 | 24.0 |
| *ಇದರಲ್ಲಿ ಬಡ್ಡಿ ಪಾವತಿಗಳು* | 45.8 | 40.5 | 37.8 | 36.7 | 39.4 | 40.2 |
| ಸಾಮಾಜಿಕ ಸೇವೆಗಳು | 29.6 | 29.2 | 27.2 | 29.3 | 28.9 | 32.6 |
| ಆರ್ಥಿಕ ಸೇವೆಗಳು | 32.9 | 28.1 | 35.0 | 36.4 | 41.0 | 37.6 |
| ಸಹಾಯಾನುದಾನಗಳು ಮತ್ತು ವಂತಿಗೆಗಳು | 2.6 | 2.5 | 2.6 | 3.4 | 3.9 | 4.2 |
| ಸಾಲಗಳು ಮತ್ತು ಮುಂಗಡಗಳು | 2.8 | 4.0 | 2.0 | 0.9 | 0.8 | 1.6 |




ಈ ಅಂಗಗಳ ಸಾಪೇಕ್ಷ ಪಾಲಿನ ಚಲನೆಯು ಒಟ್ಟು ವೆಚ್ಚದಲ್ಲಿ ಸಾಮಾಜಿಕ ಸೇವೆಗಳ ಪಾಲು 2002–03ರಲ್ಲಿದ್ದ ಶೇಕಡ 30ರಿಂದ 2007–08ರಲ್ಲಿ ಶೇಕಡ 33ಕ್ಕೆ ಏರಿರುವುದನ್ನು, ಅನಭಿವೃದ್ಧಿಯೆಂದು ಪರಿಗಣಿಸಲಾಗಿರುವ ಸಾಮಾನ್ಯ ಸೇವೆಗಳ ಸಾಪೇಕ್ಷ ಪಾಲು 2002–03ರಲ್ಲಿದ್ದ ಶೇಕಡ 32ರಿಂದ

2007–08ರಲ್ಲಿ ಶೇಕಡ 24ಕ್ಕೆ ಇಳಿದಿರುವುದನ್ನು ಸೂಚಿಸುತ್ತದೆ. ಆರ್ಥಿಕ ಸೇವೆಗಳ ಮೇಲಿನ ವೆಚ್ಚದ ಪಾಲು 2002–03ರಲ್ಲಿ ಶೇಕಡ 33ರಷ್ಟಿದ್ದು 2007–08ರಲ್ಲಿ ಶೇಕಡ 38ಕ್ಕೆ ಏರಿದ್ದು, ನಡುವೆ ಏರಿಳಿತಗಳನ್ನು ಕಂಡಿದೆ. 2002–08ರಲ್ಲಿ ಸಹಾಯಾನುದಾನಗಳ ಪಾಲು ಏರಿಕೆಯ ಪ್ರವೃತ್ತಿಯನ್ನು ಸೂಚಿಸುತ್ತಿದ್ದರೆ, ಸಾಲಗಳುಮತ್ತು ಮುಂಗಡಗಳು ಅಸ್ಥಿರತೆಯನ್ನು ಸೂಚಿಸಿದೆ.

### 1.4.3 ರಾಜಸ್ವ ವೆಚ್ಚದ ವ್ಯಾಪ್ತಿ

ರಾಜ್ಯದ ಒಟ್ಟು ವೆಚ್ಚದಲ್ಲಿ ರಾಜಸ್ವ ವೆಚ್ಚದ ಪಾಲು ಪ್ರಧಾನವಾಗಿದೆ. ರಾಜಸ್ವ ವೆಚ್ಚವು ಹಾಲಿ ಇರುವ ಸೇವೆಗಳ ಮಟ್ಟವನ್ನು ಕಾಯ್ದುಕೊಳ್ಳಲು ಮತ್ತು ಹಿಂದಿನ ಹೊಣೆಗಳ ಪಾವತಿಗಾಗಿ ವ್ಯಯವಾಗುತ್ತಿದ್ದು ರಾಜ್ಯದ ಮೂಲಸೌಲಭ್ಯಗಳಿಗೆ ಮತ್ತು ಸೇವಾಜಾಲಕ್ಕೆ ಯಾವುದೇ ಸೇರ್ಪಡೆಯಾಗಿಲ್ಲ. ಒಟ್ಟಾರೆ ರಾಜಸ್ವ ವೆಚ್ಚ, ಅದರ ವೃದ್ಧಿಯ ದರ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜಸ್ವ ವೆಚ್ಚದ, ರಾಜಸ್ವ ಜಮೆಗಳ ಅನುಪಾತ ಮತ್ತು ಅದರ ಪ್ಲವನತೆಗಳನ್ನು ಕೋಷ್ಟಕ–11ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 11 : ರಾಜಸ್ವ ವೆಚ್ಚ – ಮೂಲ ಪ್ರಮಿತಿಗಳು**

(ಕೋಟಿ ರೂಪಾಯಿಗಳಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ರಾಜಸ್ವ ವೆಚ್ಚ | 18,815 | 21,285 | 24,932 | 28,041 | 33,435 | 37,375 |
| ಯೋಜನೇತರ ರಾಜಸ್ವ ವೆಚ್ಚ | 15,570 | 17,732 | 19,807 | 22,972 | 25,583 | 29,062 |
| ಯೋಜನಾ ರಾಜಸ್ವ ವೆಚ್ಚ | 3,245 | 3,553 | 5,125 | 5,069 | 7,852 | 8,313 |
| **ವೃದ್ಧಿಯ ಗತಿ (ಶೇಕಡ)** | | | | | | |
| ಯೋಜನೇತರ ರಾಜಸ್ವ ವೆಚ್ಚ | 6.2 | 13.9 | 11.7 | 16.0 | 11.4 | 13.6 |
| ಯೋಜನಾ ರಾಜಸ್ವ ವೆಚ್ಚ | –17.7 | 9.5 | 44.2 | –1.1 | 54.9 | 5.9 |
| ಯೋಜನೇತರ ರಾಜಸ್ವ ವೆಚ್ಚ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಶೇಕಡ) | 13.2 | 13.7 | 13.2 | 13.7 | 13.6 | 13.5 |
| ಯೋಜನೇತರ ರಾಜಸ್ವ ವೆಚ್ಚ ಒಟ್ಟು ವೆಚ್ಚದ ಶತಾಂಶ | 69.6 | 70.0 | 65.5 | 67.2 | 60.4 | 62.1 |
| ಯೋಜನೇತರ ರಾಜಸ್ವ ವೆಚ್ಚ ರಾಜಸ್ವ ಜಮೆಗಳ ಶತಾಂಶ | 96.3 | 85.4 | 74.5 | 75.7 | 68.1 | 70.6 |
| **ರಾಜಸ್ವ ವೆಚ್ಚದ ಪ್ಲವನತೆ** | | | | | | |
| ರಾಜ್ಯ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ (ಅನುಪಾತ) | 0.1 | 1.4 | 1.1 | 1.0 | 1.6 | 0.8 |
| ರಾಜಸ್ವ ಜಮೆಗಳು (ಅನುಪಾತ) | 0.2 | 0.5 | 0.6 | 0.9 | 0.8 | 1.2 |

2002–03ರಲ್ಲಿ ರೂ.18,815 ಕೋಟಿಯಿದ್ದ ರಾಜಸ್ವ ವೆಚ್ಚವು 2007–08ರಲ್ಲಿ ರೂ.37,375 ಕೋಟಿಯಾಗಿ ಶೇಕಡ 99ರಷ್ಟು ಏರಿಕೆಯಾಗಿದೆ. ಯೋಜನಾ ರಾಜಸ್ವ ವೆಚ್ಚವು ರೂ.3,245 ಕೋಟಿಗಳಿಂದ ರೂ.8,313 ಕೋಟಿಗಳಾಗಿ ಶೇಕಡ 156ರಷ್ಟು ಏರಿಕೆಯಾಗಿದ್ದು ಯೋಜನೇತರ ರಾಜಸ್ವ ವೆಚ್ಚವು ರೂ.15,570 ಕೋಟಿಗಳಿಂದ ರೂ.29,062 ಕೋಟಿಗಳಿಗೆ ಏರಿದೆ (ಶೇಕಡ 87ರಷ್ಟು ಏರಿಕೆ). 2007–08ರಲ್ಲಿ ಯೋಜನೇತರ ರಾಜಸ್ವ ವೆಚ್ಚವು ಒಟ್ಟು ವೆಚ್ಚದ ಶೇಕಡ 78ರಷ್ಟು ಮತ್ತು ರಾಜಸ್ವ ಜಮೆಗಳ ಶೇಕಡ 71ರಷ್ಟಿದೆ. ಹಿಂದಿನ ವರ್ಷಕ್ಕಿಂತ 2007–08ರಲ್ಲಿನ ರೂ.3,479 ಕೋಟಿಗಳ ಏರಿಕೆಯು ಮುಖ್ಯವಾಗಿ ಸಹಾಯಧನ ನೀಡಿಕೆ (ರೂ.451 ಕೋಟಿ), ವೇತನ (ರೂ.1,594 ಕೋಟಿ), ನಿವೃತ್ತಿ ವೇತನ ಪಾವತಿ (ರೂ.745 ಕೋಟಿ) ಮತ್ತು ಬಡ್ಡಿಪಾವತಿ (ರೂ.270 ಕೋಟಿ) ಗಳಲ್ಲಿ ಕಂಡುಬಂದಿದೆ. ಹನ್ನೆರಡನೇ ಹಣಕಾಸು ಆಯೋಗವು ರಾಜ್ಯದ ಯೋಜನೇತರ ರಾಜಸ್ವ ಕೊರತೆ/ಹೆಚ್ಚಳಗಳ ವಿಕೇಂದ್ರೀಕರಣ ಪೂರ್ವ ಸ್ಥಿತಿಯನ್ನು ಅಂದಾಜಿಸುವಾಗ ಮಾಡಿದ ಪ್ರಮಾಣಕ ನಿರ್ಧಾರಣಕ್ಕೆ ಪ್ರತಿಯಾಗಿ 2005–08ರ ಅವಧಿಯಲ್ಲಿ ಯೋಜನೇತರ ರಾಜಸ್ವ ವೆಚ್ಚದ ಪ್ರವೃತ್ತಿಯು ವಾಸ್ತವ ಯೋಜನೇತರ ರಾಜಸ್ವ ವೆಚ್ಚವು ಹನ್ನೆರಡನೇ ಹಣಕಾಸು ಆಯೋಗದ ಪ್ರಕ್ಷೇಪಣಕ್ಕಿಂತಲೂ ಹೆಚ್ಚಾಗಿರುವುದನ್ನು ಕೆಳಗಿನ ಕೋಷ್ಟಕವು ಸೂಚಿಸುತ್ತದೆ.

(ಕೋಟಿ ರೂಪಾಯಿಗಳಲ್ಲಿ)

| | ಹನ್ನೆರಡನೇ ಹಣಕಾಸು ಆಯೋಗದ ಪ್ರಮಾಣಕ ಅಂದಾಜು | ವಾಸ್ತವ ವೆಚ್ಚ |
|---|---|---|
| 2005–06 | 17,001 | 22,972 |
| 2006–07 | 18,473 | 25,583 |
| 2007–08 | 21,735 | 29,062 |

ಯೋಜನಾ ವೆಚ್ಚದಲ್ಲಿನ ರೂ.461 ಕೋಟಿಗಳ ಹೆಚ್ಚಳವು ಮುಖ್ಯವಾಗಿ ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ (ರೂ.252 ಕೋಟಿ), ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ (ರೂ.69 ಕೋಟಿ) ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ರೂ.45 ಕೋಟಿ) ಗಳಲ್ಲಿ ಕಂಡುಬಂದಿದೆ.

### 1.4.4 ಬದ್ಧ ವೆಚ್ಚಗಳು

#### ಸಂಬಳದ ಮೇಲಿನ ವೆಚ್ಚಗಳು

2002–03ರಲ್ಲಿ ರೂ.4,941 ಕೋಟಿಯಿದ್ದ ಸಂಬಳದ ಮೇಲಿನ ವೆಚ್ಚವು 2007–08ರಲ್ಲಿ ರೂ.8,169 ಕೋಟಿಗಳಿಗೆ ಏರಿದೆ. ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ 12 – ಸಂಬಳದ ಮೇಲಿನ ವೆಚ್ಚ**

(ಕೋಟಿ ರೂಪಾಯಿಗಳಲ್ಲಿ)

| ಶೀರ್ಷಿಕೆಗಳು | 2002–03 | 2003–04 | 2004–05 | 2005–06 | 2006–07 | 2007–08[3] |
|---|---|---|---|---|---|---|
| ಸಂಬಳದ ಮೇಲಿನ ವೆಚ್ಚ [4] | 4,940.70 | 5,322.76 | 5,392.15 | 5,932.49 | 6,526.52 | 8,168.73 |
| ಯೋಜನೇತರ | 4,634.00 | 5,007.07 | 5,074.62 | 5,597.59 | 6,110.82 | 7,705.26 |
| ಯೋಜನೆ[5] | 297.70 | 315.69 | 317.53 | 334.90 | 315.70 | 463.47 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾವಾರು | 4.2 | 4.1 | 3.6 | 3.5 | 3.5 | 3.8 |
| ರಾಜಸ್ವ ಜಮೆಗಳಿಗೆ ಶೇಕಡಾವಾರು | 30.6 | 25.6 | 20.3 | 19.5 | 17.4 | 19.8 |

ರಾಜಸ್ವ ಜಮೆಗಳ ಶತಾಂಶದಂತೆ ಸಂಬಳದ ಮೇಲಿನ ವೆಚ್ಚವು 2006–07ರಲ್ಲಿ ಶೇಕಡ 17ರಷ್ಟಿದ್ದು ವೇತನ ಆಯೋಗದ ಶಿಫಾರಸುಗಳ ಅನುಷ್ಠಾನದಿಂದಾಗಿ ಪ್ರಸಕ್ತ ವರ್ಷದಲ್ಲಿ ಶೇಕಡ 20ಕ್ಕೆ ಏರಿತ್ತು. ಆದರೂ ಇದು ರಾಜಸ್ವ ವೆಚ್ಚದ (ನಿವೃತ್ತಿ ವೇತನ ಮತ್ತು ಬಡ್ಡಿ ಪಾವತಿಗಳ ನಿವ್ವಳ) ಶೇಕಡ 28ರ ಆಸುಪಾಸಿನಲ್ಲಿದ್ದು ಹನ್ನೆರಡನೇ ಹಣಕಾಸು ಆಯೋಗವು ಶಿಫಾರಸು ಮಾಡಿದ್ದ ಶೇಕಡ 35ರ ಒಳಗೆ ಇದ್ದಿತು. 2007–08ರಲ್ಲಿ ಸಂಬಳದ ಮೇಲಿನ ವೆಚ್ಚವು ಹನ್ನೆರಡನೇ ಹಣಕಾಸು ಆಯೋಗವು ಪ್ರಕ್ಷೇಪಿಸಿದ್ದ ರೂ.6,907 ಕೋಟಿಗಳಿಗಿಂತಲೂ ರೂ.1,262 ಕೋಟಿಗಳಷ್ಟು ಹೆಚ್ಚಾಗಿದ್ದರೂ ಆಯವ್ಯಯ ಅಂದಾಜುಗಳಿಗಿಂತ (ಮಧ್ಯಂತರ ಆರ್ಥಿಕ ಯೋಜನೆ) ರೂ.378 ಕೋಟಿಯಷ್ಟು ಕಡಿಮೆಯಾಗಿದೆ.

#### ನಿವೃತ್ತಿ ವೇತನ ಪಾವತಿಗಳು

2002–03ರಿಂದ 2007–08ನೇ ವರ್ಷಗಳಲ್ಲಿ ನಿವೃತ್ತಿ ವೇತನದ ಮೇಲಿನ ವೆಚ್ಚದ ವರ್ಷವಾರು ವಿವರಗಳು ಈ ಕೆಳಕಂಡಂತಿವೆ:

**ಕೋಷ್ಟಕ 13 – ನಿವೃತ್ತಿವೇತನಗಳ ಮೇಲಿನ ವೆಚ್ಚ**

(ಕೋಟಿ ರೂಪಾಯಿಗಳಲ್ಲಿ)

| ಶೀರ್ಷಿಕೆ | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ನಿವೃತ್ತಿ ವೇತನದ ಮೇಲಿನ ವೆಚ್ಚ | 1,773 | 1,901 | 2,157 | 2,237 | 2,496 | 3,241 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾವಾರಿನಂತೆ | 1.5 | 1.5 | 1.4 | 1.3 | 1.3 | 1.5 |
| ರಾಜಸ್ವ ಜಮೆಗಳ ಶೇಕಡಾವಾರಿನಂತೆ | 11.0 | 9.2 | 8.1 | 7.4 | 6.6 | 7.9 |

2007–08ರಲ್ಲಿ ನಿವೃತ್ತಿವೇತನ ಪಾವತಿಯ ವೆಚ್ಚವು (ರೂ.3,241 ಕೋಟಿ) ಒಟ್ಟು ರಾಜಸ್ವ ಜಮೆಗಳ ಶೇಕಡ 8ರಷ್ಟಿತ್ತು. ಪ್ರಸಕ್ತ ಸಾಲಿನಲ್ಲಿ ನಿವೃತ್ತಿ ವೇತನದಲ್ಲಿನ ಹೆಚ್ಚಳವು (ರೂ.745 ಕೋಟಿ) ರಾಜ್ಯ ವೇತನ ಆಯೋಗದ ಅನುಷ್ಠಾನದಿಂದ ಉಂಟಾಗಿದೆ. 2007–08ರಲ್ಲಿ ನಿವೃತ್ತಿ ವೇತನದ ಮೇಲಿನ ವೆಚ್ಚವು ಹಣಕಾಸು ಆಯೋಗದ ಪ್ರಕ್ಷೇಪಣಕ್ಕಿಂತಲೂ ರೂ.32 ಕೋಟಿಗಳಷ್ಟು ಅಧಿಕವಾಗಿದ್ದರೂ

[3] ರಾಜ್ಯ ವಲಯದ ವಾಸ್ತವಿಕ ವೆಚ್ಚ (ರೂ.3,511.43 ಕೋಟಿ) ಮತ್ತು ಜಿಲ್ಲಾ ವಲಯದ ವೆಚ್ಚ (ಪರಿಷ್ಕೃತ ಅಂದಾಜುಗಳು) (ರೂ.4,657.30 ಕೋಟಿ)

[4] ಪಂಚಾಯತ್ ರಾಜ್ ಸಂಸ್ಥೆಗಳ ವೇತನ ವೆಚ್ಚವನ್ನು ಒಳಗೊಂಡಿದೆ. ಆಧಾರ: ಹಣಕಾಸು ಇಲಾಖೆ

[5] ಕೇಂದ್ರ ಪ್ರಾಯೋಜಿತ ಯೋಜನೆಗಳಡಿಯಲ್ಲಿನ ವೇತನಗಳನ್ನು ಒಳಗೊಂಡಿದೆ

ಆಯವ್ಯಯ ಅಂದಾಜುಗಳಿಗಿಂತಲೂ (ಮಧ್ಯಂತರ ಅವಧಿಯ ಹಣಕಾಸು ಯೋಜನೆ) ರೂ.175 ಕೋಟಿಗಳಷ್ಟು ಕಡಿಮೆಯಾಯಿತು.

**ಬಡ್ಡಿ ಪಾವತಿಗಳು**

2002–08ರ ಅವಧಿಯಲ್ಲಿ ರಾಜ್ಯ ಸರ್ಕಾರವು ಪಾವತಿಸಿದ ಬಡ್ಡಿಯ ವಿವರಗಳನ್ನು ಮತ್ತು ರಾಜಸ್ವ ಜಮೆಗಳು ಮತ್ತು ರಾಜಸ್ವ ವೆಚ್ಚಗಳಿಗೆ ಅವುಗಳ ಶೇಕಡಾವಾರುಗಳನ್ನು ಕೋಷ್ಟಕ 14ರಲ್ಲಿ ನೀಡಲಾಗಿದೆ:

**ಕೋಷ್ಟಕ 14– ಬಡ್ಡಿ ಪಾವತಿಗಳು**

| ವರ್ಷ | ರಾಜಸ್ವ ಜಮೆಗಳು | ರಾಜಸ್ವ ವೆಚ್ಚ | ಬಡ್ಡಿ ಪಾವತಿ | ಬಡ್ಡಿ ಪಾವತಿಯ ಶೇಕಡಾವಾರು ಪ್ರಮಾಣ | |
|---|---|---|---|---|---|
| | (ಕೋಟಿ ರೂಪಾಯಿಗಳಲ್ಲಿ) | | | ರಾಜಸ್ವ ಜಮೆಗಳು | ರಾಜಸ್ವ ವೆಚ್ಚ |
| 2002–2003 | 16,169 | 18,815 | **3,292** | 20.4 | 17.5 |
| 2003–2004 | 20,760 | 21,285 | **3,710** | 17.9 | 17.4 |
| 2004–2005 | 26,570 | 24,932 | **3,794** | 14.3 | 15.2 |
| 2005–2006 | 30,352 | 28,041 | **3,765** | 12.4 | 13.4 |
| 2006–2007 | 37,587 | 33,435 | **4,236** | 11.3 | 12.7 |
| 2007–2008 | 41,151 | 37,375 | **4,506** | 10.9 | 12.1 |

ಬಡ್ಡಿ ಪಾವತಿಯು 2002–03ರಲ್ಲಿ ರೂ.3,292 ಕೋಟಿಗಳಷ್ಟಿದ್ದು, 2007–08ರಲ್ಲಿ ರೂ.4,506 ಕೋಟಿಗಳಾಗಿ ರೂ.1,214 ಕೋಟಿಗಳಷ್ಟು ಅಧಿಕವಾಗಿದೆ. ಬಡ್ಡಿಪಾವತಿಗಳ ವೆಚ್ಚದ ಬಹುಪಾಲು ಅಂದರೆ ರೂ.1,961 ಕೋಟಿಗಳು–ಶೇಕಡ 44ರಷ್ಟು ಭಾಗವು ಎನ್‌ಎಸ್‌ಎಸ್‌ಎಫ್ ಸಾಲಗಳಿಗೆ ಸೇರಿದ್ದು, ಈ ಸಾಲಗಳು ಏಪ್ರಿಲ್ 2007ರಿಂದ ಶೇಕಡ 100 ಅಂಕಗಳಷ್ಟಾಗಿದೆ.

ರಾಜಸ್ವ ಜಮೆಗಳಿಗೆ ಬಡ್ಡಿ ಪಾವತಿಯ ಅನುಪಾತವು ರಾಜ್ಯದ ಋಣ ಸಹಿಷ್ಣುತೆಯನ್ನು ನಿರ್ಧರಿಸುತ್ತದೆ. 2007–08ರಲ್ಲಿ ಬಡ್ಡಿಪಾವತಿಯು ರಾಜಸ್ವ ಜಮೆಗಳ ಶೇಕಡ 11ರಷ್ಟಿದ್ದು, ಇದು ಹನ್ನೆರಡನೇ ಹಣಕಾಸು ಆಯೋಗವು ನಿಗದಿಸಿದ ಶೇಕಡ 15ರ ಮಿತಿಯೊಳಗಿತ್ತು.

**ಸಹಾಯಧನಗಳು**

ಯಾವುದೇ ಸುಖೀ ರಾಜ್ಯದಲ್ಲಿ ಸಮಾಜದ ಅನನುಕೂಲ ವರ್ಗಗಳಿಗೆ ಸಹಾಯಧನ/ಆರ್ಥಿಕ ಬೆಂಬಲ ನೀಡಿಕೆ ಮತ್ತು ಶಿಕ್ಷಣ, ವಸತಿ, ಆರೋಗ್ಯ, ಮುಂತಾದ ಅರ್ಹ ಕ್ಷೇತ್ರಗಳಿಗೆ ಅವಕಾಶ ನೀಡುವುದು ವಿಶೇಷವೇನಲ್ಲ. ಸಹಾಯಧನಗಳನ್ನು ವ್ಯಕ್ತವಾಗಿ ಅಲ್ಲದೆ, ಪ್ರಜೆಗಳಿಗೆ ಸಹಾಯರೂಪದ ಸಾರ್ವಜನಿಕ ಸೇವೆಗಳನ್ನು ಒದಗಿಸುವುದರ ಮೂಲಕ ಅವ್ಯಕ್ತವಾಗಿಯೂ ವಿತರಿಸಲಾಗುತ್ತದೆ. ಆರ್ಥಿಕ ಸಂಸ್ಥೆಗಳಿಗೆ ಆಯವ್ಯಯ ಬೆಂಬಲ, ಹೂಡಿಕೆಗಳ ಮೇಲಿನ ಅಪರ್ಯಾಪ್ತ ಪ್ರತಿಫಲಗಳು, ಸರ್ಕಾರವು ನೀಡುವ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಬಳಕೆಯ ದರದ ಅಲ್ಪ ವಸೂಲಾತಿಗಳು ಅವ್ಯಕ್ತ ಸಹಾಯಧನಗಳ ವರ್ಗಕ್ಕೆ ಸೇರುತ್ತದೆ. ರಾಜ್ಯ ಸರ್ಕಾರವು ನೀಡಿದ ಸಹಾಯಧನಗಳ ಪ್ರವೃತ್ತಿಯನ್ನು ಕೋಷ್ಟಕ–15ರಲ್ಲಿ ನೀಡಲಾಗಿದೆ.

**ಕೋಷ್ಟಕ 15 – ಸಹಾಯಧನಗಳು**

| ವರ್ಷ | ಮೊತ್ತ (ಕೋಟಿ ರೂಪಾಯಿಗಳಲ್ಲಿ) | ಹಿಂದಿನ ವರ್ಷಕ್ಕಿಂತ ಶೇಕಡಾವಾರು ಹೆಚ್ಚಳ (+)/ಇಳಿಕೆ (–) | ರಾಜಸ್ವ ವೆಚ್ಚದಲ್ಲಿ ಸಹಾಯಧನದ ಶೇಕಡಾವಾರು ಪ್ರಮಾಣ |
|---|---|---|---|
| 2002–03 | 2,230 | (–) 22 | 12 |
| 2003–04 | 2,066 | (–) 07 | 10 |
| 2004–05 | 2,732 | 32 | 11 |
| 2005–06 | 3,712 | 36 | 13 |
| 2006–07 | 4,355 | 17 | 13 |
| 2007–08 | 5,420 | 24 | 14 |

2007–08ರಲ್ಲಿ ಸಹಾಯಧನವು ಮುಖ್ಯವಾಗಿ ವಿದ್ಯುಚ್ಛಕ್ತಿ (ರೂ.2,300 ಕೋಟಿ), ಸಹಕಾರ (ರೂ.1,793 ಕೋಟಿ), ಆಹಾರ (ರೂ.651 ಕೋಟಿ) ಮತ್ತು ಸಾರಿಗೆ (ರೂ.230 ಕೋಟಿ) ಕ್ಷೇತ್ರಗಳಲ್ಲಿ ನೀಡಲಾಗಿದ್ದು, ವಿವರಗಳನ್ನು ಕೆಳಗೆ ನೀಡಲಾಗಿದೆ.

### ವಿದ್ಯುಚ್ಛಕ್ತಿ

ವಿದ್ಯುಚ್ಛಕ್ತಿ ವಿಭಾಗವು ಅಧಿಕವಾಗಿ ಸಹಾಯಧನ ಪಡೆಯುವುದು ಮುಂದುವರೆದಿದ್ದು, ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳಿಗೆ, ಗ್ರಾಮೀಣ ವಿದ್ಯುದೀಕರಣ (ರೂ.1,650 ಕೋಟಿಗಳು), ನಿವೃತ್ತಿವೇತನ ವಂತಿಗೆ (ರೂ.589 ಕೋಟಿಗಳು), ನೀರಾವರಿ ಪಂಪ್‌ಸೆಟ್‌ಗಳ ಸಕ್ರಮೀಕರಣ (ರೂ.45 ಕೋಟಿಗಳು), ಸ್ಥಿರ ಮೀಟರ್ ಸಂಪರ್ಕ (ರೂ.13 ಕೋಟಿಗಳು) ಗಳಿಂದಾಗಿ ಉಂಟಾದ ನಷ್ಟವನ್ನು ತುಂಬಲು ಸಹಾಯಧನವನ್ನು ನೀಡಲಾಗಿದೆ. ಈ ವರ್ಷದ ವಿದ್ಯುಚ್ಛಕ್ತಿ ಸಹಾಯಧನದಲ್ಲಿ ಮೈಸೂರು ಸಿಮೆಂಟ್ ಲಿಮಿಟೆಡ್‌ಗೆ ಪರ್ಯಾಯ ಇಂಧನ ಬಳಕೆಗಾಗಿ ನೀಡಿದ ರೂ.1.82 ಕೋಟಿಗಳು ಸೇರಿದೆ. ಈ ಕಂಪನಿಯು ನೀಡಿದ ನಿಯಂತ್ರಿತ ಇಂಧನ ಉತ್ಪಾದನೆಗೆ ಬಳಸಿದ ಡೀಸಲ್‌ನ ಮಾರಾಟ ತೆರಿಗೆಯ ವಾಪಸಾತಿಯಲ್ಲಿ ವಿಳಂಬವಾಗಿತ್ತು. ಕಾನೂನಿನನ್ವಯ ಈ ವಿಳಂಬಕ್ಕೆ ಬಡ್ಡಿ ನೀಡಬೇಕೆಂದು ಕರ್ನಾಟಕ ಉಚ್ಚ ನ್ಯಾಯಾಲಯವು ನಿರ್ದೇಶನ ನೀಡಿದ್ದರಿಂದ ತಪ್ಪಿಸಿಕೊಳ್ಳಬಹುದಾಗಿದ್ದ ಬಡ್ಡಿ ಪಾವತಿಯನ್ನು (ರೂ.1.82 ಕೋಟಿ), ರಾಜ್ಯದ ಲೆಕ್ಕಗಳಲ್ಲಿ ಸಹಾಯಧನವಾಗಿ ತೋರಿಸಲಾಗಿದೆ.

ಈ ವರ್ಷದಲ್ಲಿ ಗ್ರಾಮೀಣ ವಿದ್ಯುದೀಕರಣದ ವಿದ್ಯುಚ್ಛಕ್ತಿ ಸಹಾಯಧನದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ವಿದ್ಯುತ್ ಹಣಕಾಸು ನಿಗಮ ಮತ್ತು ಗ್ರಾಮೀಣ ವಿದ್ಯುದೀಕರಣ ನಿಗಮಗಳ ಸಾಲಗಳ ತೀರಿಕೆಯ ಸಲುವಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ನೀಡಿದ ರೂ.113 ಕೋಟಿಗಳು ಸೇರಿಲ್ಲ. ಸರ್ಕಾರವು ಈ ಸಾಲಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿರುವುದರಿಂದ ರಾಜ್ಯದ ಹಣಕಾಸು ಲೆಕ್ಕಗಳು ಈ ಹೊಣೆಗಳನ್ನು ತೋರಿಸಿಲ್ಲ. ಅದೇ ರೀತಿ ರಾಜ್ಯ ಸರ್ಕಾರವು 2006–07ರಲ್ಲಿ ರೂ.130 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಈ ಋಣವನ್ನು 2008–09ರ ಆಯವ್ಯಯದ ಹೊರಗಿನ ಋಣಗಳಡಿಯಲ್ಲಿ ತೋರಿಸುವುದಾಗಿ ಹೇಳಿತ್ತು (ನವೆಂಬರ್ 2007). ಇದು 2007–11ರ ಮಧ್ಯಂತರ ಆರ್ಥಿಕ ಯೋಜನೆಯಲ್ಲಿ 2008–09ರಿಂದ ಆಯವ್ಯಯ ಹೊರಗಿನ ಸಾಲಗಳನ್ನು ತಪ್ಪಿಸುವುದಾಗಿ ಹೇಳಿದ್ದ ಸರ್ಕಾರದ ಬದ್ಧತೆಗೆ ವಿರುದ್ಧವಾಗಿದೆ. ಆದರೆ ಈ ಹೊಣೆಗಾರಿಕೆಯನ್ನು ಆಯವ್ಯಯದ ಹೊರಗಿನ ಜವಾಬ್ದಾರಿಗಳಲ್ಲಿ ತೋರಿಸಿಲ್ಲ.

### ಸಹಕಾರ

ಸಹಕಾರ ವಿಭಾಗದಲ್ಲಿ ನೀಡಿದ ರೂ.1,793 ಕೋಟಿಗಳ ಸಹಾಯಧನವು ರೂ.1,250 ಕೋಟಿಯಷ್ಟು ಕೃಷಿ ಸಾಲ ಮನ್ನಾ ಮತ್ತು ರೂ.542 ಕೋಟಿಗಳ ಬಡ್ಡಿ ಮನ್ನಾವನ್ನು ಒಳಗೊಂಡಿದೆ. ಸಹಕಾರ ವಿಭಾಗದ ಸಹಾಯಧನವು ಹಿಂದಿನ ವರ್ಷಕ್ಕಿಂತ ರೂ.972 ಕೋಟಿಗಳಷ್ಟು ಹೆಚ್ಚಾಗಿದ್ದು ಇದು ಮುಖ್ಯವಾಗಿ ರೂ.750 ಕೋಟಿಗಳಷ್ಟು ಕೃಷಿ ಸಾಲ ಮನ್ನಾದಿಂದಾಗಿ ಉಂಟಾಗಿದೆ.

### ಆಹಾರ

ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಆಹಾರಧಾನ್ಯಗಳ ಮಾರುವ ಬೆಲೆಗೂ ಮತ್ತು ಕೊಳ್ಳುವ ಬೆಲೆಗೂ ನಡುವಿನ ವ್ಯತ್ಯಾಸವನ್ನು ತುಂಬಲು ನೀಡುವ ಆಹಾರ ಸಹಾಯಧನವು 2006–07ರಲ್ಲಿ ರೂ.750 ಕೋಟಿಗಳಷ್ಟಿದ್ದು 2007–08ರಲ್ಲಿ ರೂ.650 ಕೋಟಿಗೆ ಇಳಿದಿದೆ. ಒಂದು ಕೋಟಿ ರೂಪಾಯಿಗಳ ಸಹಾಯಧನವನ್ನು ಕೇಂದ್ರ ಪುರಸ್ಕೃತ ಅನ್ನಪೂರ್ಣ ಯೋಜನೆಯಡಿ ಹಿರಿಯ ನಾಗರೀಕರಿಗೆ ಆಹಾರ ಭದ್ರತೆಗಾಗಿ ನೀಡಲಾಗಿದೆ.

### ಸಾರಿಗೆ

2006–07ರಲ್ಲಿ ರೂ.273 ಕೋಟಿಗಳಷ್ಟಿದ್ದ ಸಾರಿಗೆ ಸಹಾಯಧನವು 2007–08ರಲ್ಲಿ ರೂ.230 ಕೋಟಿಗೆ ಇಳಿದಿದೆ. ಶೇಕಡ 40ರಷ್ಟು ಸಹಾಯಧನವು (ರೂ.92 ಕೋಟಿ) ಸ್ವಾತಂತ್ರ್ಯ ಹೋರಾಟಗಾರರಿಗೆ, ಅಂಗವಿಕಲರಿಗೆ, ವಿದ್ಯಾರ್ಥಿಗಳಿಗೆ ನೀಡಿದ ಉಚಿತ ರಿಯಾಯಿತಿ ಸೌಲಭ್ಯಕ್ಕೆ ಸಂಬಂಧಿಸಿದೆ.

ನಿವೃತ್ತಿವೇತನ, ಬಡ್ಡಿ ಪಾವತಿಗಳು ಮತ್ತು ವೇತನಗಳ ಮೇಲಿನ ವೆಚ್ಚದ ಪ್ರವೃತ್ತಿಯನ್ನು ನಕ್ಷೆಯ ರೂಪದಲ್ಲಿ ಕೆಳಗೆ ನೀಡಲಾಗಿದೆ.




## 1.5 ಹಂಚಿಕೆಯ ಆದ್ಯತೆಗಳನ್ವಯ ವೆಚ್ಚ

### 1.5.1 ವೆಚ್ಚದ ಗುಣಮಟ್ಟ

ರಾಜ್ಯದಲ್ಲಿ ಲಭ್ಯವಿರುವ ಉತ್ತಮ ಸಾಮಾಜಿಕ ಮತ್ತು ಭೌತಿಕ ಮೂಲ ಸೌಲಭ್ಯಗಳು ವೆಚ್ಚದ ಗುಣಮಟ್ಟವನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ ಒಟ್ಟು ವೆಚ್ಚ ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಬಂಡವಾಳ ವೆಚ್ಚದ ಅನುಪಾತ ಮತ್ತು ಪ್ರಸಕ್ತ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಪ್ರಭಾವಶಾಲಿಯಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಖರ್ಚು ಮಾಡುವ ರಾಜಸ್ವ ವೆಚ್ಚದ ಭಾಗವು ವೆಚ್ಚದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಒಟ್ಟು ವೆಚ್ಚಕ್ಕೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಈ ಅಂಗಗಳ ಅನುಪಾತ ಹೆಚ್ಚಾಗಿದ್ದಷ್ಟೂ ವೆಚ್ಚದ ಗುಣಮಟ್ಟವು ಉತ್ತಮವಾಗಿರುತ್ತದೆ. 2002–08ರ ಅವಧಿಯಲ್ಲಿನ ಈ ಅನುಪಾತಗಳನ್ನು ಕೋಷ್ಟಕ–16ರಲ್ಲಿ ನೀಡಲಾಗಿದೆ:

**ಕೋಷ್ಟಕ 16: ವೆಚ್ಚದ ಗುಣಮಟ್ಟದ ಸೂಚಕಗಳು**

(ಕೋಟಿ ರೂಪಾಯಿಗಳಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| **ಬಂಡವಾಳ ವೆಚ್ಚ** | 2,936 | 3,029 | 4,674 | 5,822 | 8,543 | 8,649 |
| **ರಾಜಸ್ವ ವೆಚ್ಚದಲ್ಲಿ** | 18,815 | 21,285 | 24,932 | 28,041 | 33,435 | 37,375 |
| ಸಾಮಾಜಿಕ ಮತ್ತು ಆರ್ಥಿಕ ಸೇವೆಗಳು | | | | | | |
| *ಸಂಬಳ ಅಂಶ* | 3,589.85 | 3,796.47 | 3,887.09 | 4,315.20 | 4,791.43 | 5,982.91 |
| *ಸಂಬಳೇತರ ಅಂಶ* | 7,538.82 | 7,820.27 | 10,346.18 | 12,530.91 | 16,585.52 | 18,594.08 |
| **ಒಟ್ಟು ವೆಚ್ಚಕ್ಕೆ ಶೇಕಡಾವಾರು ಪ್ರಮಾಣ (ಸಾಲಗಳನ್ನು ಮತ್ತು ಮುಂಗಡಗಳನ್ನು ಹೊರತುಪಡಿಸಿ)** | | | | | | |
| ಬಂಡವಾಳ ವೆಚ್ಚ | 13.50 | 12.46 | 15.79 | 17.19 | 20.35 | 18.79 |
| ರಾಜಸ್ವ ವೆಚ್ಚ | 86.50 | 87.54 | 84.21 | 82.81 | 79.65 | 81.21 |
| **ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಶೇಕಡಾವಾರು ಪ್ರಮಾಣ** | | | | | | |
| ಬಂಡವಾಳ ವೆಚ್ಚ | 2.50 | 2.34 | 3.12 | 3.47 | 4.54 | 4.02 |
| ರಾಜಸ್ವ ವೆಚ್ಚ | 16.00 | 16.50 | 16.60 | 16.70 | 17.80 | 17.36 |

ಮೇಲಿನ ಕೋಷ್ಟಕವು 2002–08ರ ಅವಧಿಯಲ್ಲಿ ಬಂಡವಾಳ ವೆಚ್ಚವು ರೂ.5,713 ಕೋಟಿಗಳಷ್ಟು ಹೆಚ್ಚಾಗಿರುವುದನ್ನು ತೋರಿಸುತ್ತದೆ. ಒಟ್ಟು ವೆಚ್ಚದ ಶತಾಂಶವಾಗಿ ಬಂಡವಾಳ ವೆಚ್ಚವು 2003–08ರಲ್ಲಿ ಸರಾಸರಿ ಶೇಕಡ 17ರಷ್ಟಿದ್ದು ನಡುವಿನ ವರ್ಷಗಳಲ್ಲಿ ಏರಿಳಿತಗಳನ್ನು ಕಂಡಿದೆ. ರಾಜ್ಯದ ಆಂತರಿಕ ಉತ್ಪನ್ನದ ಶತಾಂಶವಾಗಿಯೂ ಸಹ ಇದು ಸರಾಸರಿ ಶೇಕಡ ಮೂರರ ಸಾಪೇಕ್ಷ ಸ್ಥಿರತೆಯನ್ನು 2003–08ರ ಅವಧಿಯಲ್ಲಿ ಸೂಚಿಸಿದ್ದು ನಡುವಿನ ವರ್ಷಗಳಲ್ಲಿ ವ್ಯತ್ಯಾಸವನ್ನು ಕಂಡಿತ್ತು. ರಾಜಸ್ವ ವೆಚ್ಚದಲ್ಲಿನ ಸಂಬಳ ಭಾಗವು ಅದಕ್ಕೆ ಸದೃಶವಾದ ಸಹಾಯಾನುದಾನ ಭಾಗವನ್ನು ಒಳಗೊಂಡಿಲ್ಲವಾದ್ದರಿಂದ ವೆಚ್ಚ ಪ್ರವೃತ್ತಿಯಲ್ಲಿ ಸಂಬಳದ ಮೇಲಿನ ವೆಚ್ಚಕ್ಕೆ ಸ್ಪಷ್ಟವಾದ ಗೆರೆಯನ್ನು ಎಳೆಯಲು ಕಷ್ಟಕರವಾಗಿದ್ದು, 2003–04ರಿಂದ ಸಂಬಳೇತರ ಭಾಗವು (ನಿವ್ವಳ ಸಹಾಯಧನ) ಏರಿರುವುದು ಕಂಡುಬಂದಿದೆ.

### 1.5.2 ಸಾಮಾಜಿಕ ಸೇವೆಗಳ ವಿಭಾಗದ ವೆಚ್ಚ

ಮೂಲ ಶಿಕ್ಷಣಕ್ಕೆ ಒತ್ತು, ಆರೋಗ್ಯ ಸೇವೆಗಳು, ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳು ಮುಂತಾದ ಮಾನವೀಯ ಅಭಿವೃದ್ಧಿ ಸೂಚಕಗಳು ಬಡತನ ನಿರ್ಮೂಲನ ಮತ್ತು ಆರ್ಥಿಕ ಪ್ರಗತಿಗೆ ನೇರವಾಗಿ ಸಂಬಂಧಿಸಿರುವುದರಿಂದ ರಾಜ್ಯದಲ್ಲಿ ಈ ಸೇವೆಗಳಿಗೆ ಸಂಬಂಧಿಸಿದ ಪ್ರಗತಿ ಹಾಗೂ ದಕ್ಷತೆಗಳನ್ನು ಅಳೆಯುವುದು ವಿವೇಚನಾಪೂರ್ವ ಕಾರ್ಯವಾಗುತ್ತದೆ. 2002–08ರಲ್ಲಿ, ರಾಜ್ಯ ಸರ್ಕಾರವು ರಾಜ್ಯದಲ್ಲಿ ಸಾಮಾಜಿಕ ಸೇವೆಗಳನ್ನು ವಿಸ್ತರಿಸುವ ಹಾಗೂ ದೃಢಗೊಳಿಸುವ ಸಲುವಾಗಿ ಮಾಡಿದ ವೆಚ್ಚಗಳ ಸಾರಾಂಶವನ್ನು ಕೋಷ್ಟಕ–17 ನೀಡುತ್ತದೆ:

**ಕೋಷ್ಟಕ 17 – ಸಾಮಾಜಿಕ ಸೇವೆಗಳ ಮೇಲಿನ ವೆಚ್ಚಗಳು**

(ಕೋಟಿ ರೂಪಾಯಿಗಳಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | | | | | | |
| **ರಾಜಸ್ವ ವೆಚ್ಚದಲ್ಲಿ** | **3,564.01** | **3,766.02** | **4,357.91** | **4,837.40** | **5,703.21** | **6,811.21** |
| *ಸಂಬಳ ಭಾಗ* [6] | 2,017.82 | 2,142.56 | 2,292.74 | 2,606.79 | 3,019.53 | 3,742.21 |
| *ಸಂಬಳೇತರ ಭಾಗ* | 1,546.19 | 1,623.46 | 2,065.17 | 2,230.61 | 2,683.68 | 3,069.00 |
| **ಬಂಡವಾಳ ವೆಚ್ಚ** | **6.71** | **5.31** | **4.92** | **52.67** | **54.98** | **120.77** |
| **ಒಟ್ಟು** | **3,570.72** | **3,771.33** | **4,362.83** | **4,890.07** | **5,758.19** | **6,931.98** |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | | | | | | |
| **ರಾಜಸ್ವ ವೆಚ್ಚದಲ್ಲಿ** | **953.65** | **958.93** | **1,035.61** | **1,138.50** | **1,206.66** | **1,477.94** |
| *ಸಂಬಳ ಭಾಗ* [6] | 570.10 | 581.78 | 573.95 | 616.03 | 651.87 | 855.75 |
| *ಸಂಬಳೇತರ ಭಾಗ* | 383.55 | 377.15 | 461.66 | 522.47 | 554.79 | 622.19 |
| **ಬಂಡವಾಳ ವೆಚ್ಚ** | **50.47** | **36.77** | **8.30** | **7.69** | **142.95** | **354.24** |
| **ಒಟ್ಟು** | **1,004.12** | **995.70** | **1,043.91** | **1,146.19** | **1,349.61** | **1,832.18** |
| ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | | | | | | |
| **ರಾಜಸ್ವ ವೆಚ್ಚದಲ್ಲಿ** | **576.04** | **794.22** | **857.89** | **911.77** | **1,205.44** | **1,493.06** |
| *ಸಂಬಳ ಭಾಗ* | 12.02 | 13.34 | 12.86 | 14.69 | 14.54 | 17.30 |
| *ಸಂಬಳೇತರ ಭಾಗ* | 564.02 | 780.88 | 845.03 | 897.08 | 1,190.90 | 1,475.76 |
| **ಬಂಡವಾಳ ವೆಚ್ಚ** | **167.32** | **288.81** | **411.38** | **969.78** | **925.48** | **1,431.53** |
| **ಒಟ್ಟು** | **743.36** | **1,083.03** | **1,269.27** | **1,881.55** | **2,130.92** | **2,924.59** |
| ಇತರೆ ಸಾಮಾಜಿಕ ಸೇವೆಗಳು | | | | | | |
| **ರಾಜಸ್ವ ವೆಚ್ಚದಲ್ಲಿ** | **1,232.55** | **1,445.87** | **1,471.34** | **2,011.12** | **2,821.40** | **3,341.47** |
| *ಸಂಬಳ ಭಾಗ* [6] | 189.40 | 207.16 | 216.59 | 214.12 | 249.89 | 318.35 |
| *ಸಂಬಳೇತರ ಭಾಗ* | 1,043.15 | 1,238.71 | 1,254.75 | 1,797.00 | 2,571.51 | 3,023.12 |
| **ಬಂಡವಾಳ ವೆಚ್ಚ** | **70.80** | **96.32** | **61.44** | **75.16** | **169.21** | **241.14** |
| **ಒಟ್ಟು** | **1,303.35** | **1,542.19** | **1,532.78** | **2,086.28** | **2,990.61** | **3,582.61** |
| ಸಾಮಾಜಿಕ ಸೇವೆಗಳು | | | | | | |
| **ರಾಜಸ್ವ ವೆಚ್ಚದಲ್ಲಿ** | **6,326.25** | **6,965.04** | **7,722.75** | **8,898.79** | **10,936.71** | **13,123.68** |
| *ಸಂಬಳ ಭಾಗ* [6] | 2,789.34 | 2,944.84 | 3,096.14 | 3,451.63 | 3,935.83 | 4,933.61 |
| *ಸಂಬಳೇತರ ಭಾಗ* | 3,536.91 | 4,020.20 | 4,626.61 | 5,447.16 | 7,000.88 | 8,190.07 |
| **ಬಂಡವಾಳ ವೆಚ್ಚ** | **295.30** | **427.21** | **486.04** | **1,105.30** | **1,292.62** | **2,147.68** |
| **ಒಟ್ಟು ಮೊತ್ತ** | **6,621.55** | **7,392.25** | **8,208.79** | **10,004.09** | **12,229.33** | **15,271.36** |

6 ಪಂಚಾಯತ್ ರಾಜ್ ಸಂಸ್ಥೆಗಳ ವೇತನ ವೆಚ್ಚವನ್ನು ಒಳಗೊಂಡಿದೆ. ಆಧಾರ: ಹಣಕಾಸು ಇಲಾಖೆ

ಸಾಮಾಜಿಕ ಸೇವೆಗಳ ಮೇಲಿನ ವೆಚ್ಚವು 2002–03ರಲ್ಲಿ ರೂ.6,622 ಕೋಟಿಗಳಷ್ಟಿದ್ದು 2007–08ರಲ್ಲಿ ರೂ.15,271 ಕೋಟಿಗಳಿಗೆ ಏರಿದೆ. ಪ್ರಸಕ್ತ ಸಾಲಿನಲ್ಲಿ ರೂ.32,887 ಕೋಟಿಗಳ ಅಭಿವೃದ್ಧಿ ವೆಚ್ಚದಲ್ಲಿ ಸಾಮಾಜಿಕ ಸೇವೆಗಳಿಗೆ ಮಾಡಿದ ವೆಚ್ಚವು ಶೇಕಡ 46ರಷ್ಟಿದೆ.

ಸಾಮಾಜಿಕ ಸೇವೆಗಳ ವಿಭಾಗದಲ್ಲಿ ಬಡ್ಡಿ ಮನ್ನಾದ ವೆಚ್ಚವನ್ನು ಪ್ರಧಾನ ಶೀರ್ಷಿಕೆ 2235–ಸಾಮಾಜಿಕ ಭದ್ರತೆ ಮತ್ತು ಕಲ್ಯಾಣದಡಿ ವರ್ಗೀಕರಿಸಬೇಕಿತ್ತು. ಆದರೆ 2007–08ರಲ್ಲಿ ಇದಕ್ಕೆ ಸಂಬಂಧಿಸಿದ ರೂ.542 ಕೋಟಿಗಳ ವೆಚ್ಚವನ್ನು ಆರ್ಥಿಕ ಸೇವೆಗಳ ವಿಭಾಗದಲ್ಲಿ 2425–ಸಹಕಾರ ಶೀರ್ಷಿಕೆಯಡಿ ರಾಜ್ಯ ಸರ್ಕಾರದ ಆಯವ್ಯಯ ಅಂದಾಜುಗಳನ್ವಯ ತೋರಿಸಲಾಗಿದೆ. ಇದರಿಂದಾಗಿ ಸಾಮಾಜಿಕ ಸೇವೆಗಳಡಿಯಲ್ಲಿ ವೆಚ್ಚವನ್ನು ರೂ.542 ಕೋಟಿಗಳಷ್ಟು ಕಡಿಮೆ ತೋರಿಸಲಾಗಿದೆ. ಇದನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಅಭಿವೃದ್ಧಿ ವೆಚ್ಚದಲ್ಲಿ ಸಾಮಾಜಿಕ ಸೇವೆಗಳ ಪಾಲು ಶೇಕಡ 48ರಷ್ಟಾಗುತ್ತದೆ.

ಸಾಮಾಜಿಕ ಸೇವೆಗಳಡಿ ರಾಜಸ್ವ ವೆಚ್ಚವು 2002–03ರಲ್ಲಿ ರೂ.6,326 ಕೋಟಿಗಳಷ್ಟಿದ್ದು 2007–08ರಲ್ಲಿ ರೂ.13,124 ಕೋಟಿಗಳಿಗೆ ಏರಿ ಶೇಕಡ 107ರಷ್ಟು ಹೆಚ್ಚಾಗಿದ್ದರೆ, ಬಂಡವಾಳ ವೆಚ್ಚವು ರೂ.295 ಕೋಟಿಯಿಂದ ರೂ.2,148 ಕೋಟಿಗೆ ಏರಿದೆ. ಈ ವರ್ಷದಲ್ಲಿ ಬಂಡವಾಳ ವೆಚ್ಚದಲ್ಲಿನ ರೂ.855 ಕೋಟಿಗಳ (ಶೇಕಡ 66) ಗಣನೀಯ ಏರಿಕೆಯು ಮುಖ್ಯವಾಗಿ ನೀರು ಸರಬರಾಜು ಅಡಿ ರೂ.411 ಕೋಟಿ ಮತ್ತು ನಗರಾಭಿವೃದ್ಧಿ ಅಡಿ ರೂ.148 ಕೋಟಿಗಳಿಂದ ಉಂಟಾಗಿದೆ. ಸಾಮಾಜಿಕ ಸೇವೆಗಳಡಿ ಈ ವರ್ಷದ ಬಂಡವಾಳ ವೆಚ್ಚವು ಆಯವ್ಯಯದ ಹೊರಗಿನ ಸಾಲಗಳ ಮರುಪಾವತಿಯ ರೂ.237 ಕೋಟಿಗಳು ಸೇರಿದ್ದು (ಶೇಕಡ 11) ಇದು ಮುಖ್ಯವಾಗಿ ಕರ್ನಾಟಕ ಗೃಹ ಮಂಡಳಿಗೆ (ರೂ.120 ಕೋಟಿ) ಕರ್ನಾಟಕ ಭೂ ಸೇನಾ ನಿಗಮ (ರೂ.34 ಕೋಟಿ) ಮತ್ತು ಕೊಳಚೆ ನಿರ್ಮೂಲನಾ ಮಂಡಳಿಗೆ (ರೂ.30 ಕೋಟಿ) ಹುಡ್ಕೋ ಸಾಲದ ಮರುಪಾವತಿಗೆ ನೀಡಿದ ಮೊತ್ತವನ್ನು ಒಳಗೊಂಡಿದೆ.

ಸಾಮಾಜಿಕ ಸೇವೆಗಳ ವಿಭಾಗದಲ್ಲಿ ರಾಜಸ್ವ ವೆಚ್ಚದಲ್ಲಿನ ಸಂಬಳದ ಭಾಗವು 2002–03ರಲ್ಲಿ ಶೇಕಡ 44ರಷ್ಟಿದ್ದು 2007–08ರಲ್ಲಿ ಶೇಕಡ 37ಕ್ಕೆ ಇಳಿದಿದ್ದರೆ, ಸಂಬಳೇತರ ಭಾಗವು ಶೇಕಡ 56ರಿಂದ ಶೇಕಡ 63ಕ್ಕೆ ಏರಿದೆ.

2005–10ರ ನಿರ್ಣಯಾವಧಿಯಲ್ಲಿ ರಾಜ್ಯಗಳ ಹಂಚಿಕೆ ಪೂರ್ವ ಯೋಜನೇತರ ರಾಜಸ್ವ ಕೊರತೆ/ಹೆಚ್ಚಳಗಳನ್ನು ಅಂದಾಜಿಸಲು ವೆಚ್ಚಗಳ ಅಗತ್ಯದ ಪ್ರಕ್ಷೇಪಣ ಮಾಡುವಾಗ (ಇದು ಯೋಜನೇತರ ರಾಜಸ್ವ ವೆಚ್ಚ ಕೊರತೆಯ ಅನುದಾನ ಮತ್ತು ರಾಜ್ಯ ಹಣಕಾಸು ಯೋಜನೆಯ ಪುನರ್ರಚನೆಗೆ ಆಧಾರವಾಗಿದೆ) ಹನ್ನೆರಡನೇ ಹಣಕಾಸು ಆಯೋಗವು ವಿವಿಧ ವಿಭಾಗಗಳಲ್ಲಿನ ಯೋಜನೇತರ ರಾಜಸ್ವ ವೆಚ್ಚಕ್ಕೆ ಬೇರೆ ಬೇರೆ ವೃದ್ಧಿಯ ದರವನ್ನು ನಿಗದಿಪಡಿಸಿದ್ದು, ಇದು ಪರೋಕ್ಷವಾಗಿ ನಿರ್ಣಯಾವಧಿಯಲ್ಲಿ ವೆಚ್ಚಗಳ ಮಾದರಿಯಲ್ಲಿ ಬದಲಾವಣೆಗಳನ್ನು ಸೂಚಿಸಿದೆ. ಹನ್ನೆರಡನೇ ಹಣಕಾಸು ಆಯೋಗವು, ರಾಜ್ಯದಲ್ಲಿ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಗುಣಮಟ್ಟವು ಸುಧಾರಿಸಬೇಕಾದ ಅಗತ್ಯವನ್ನು ಗುರುತಿಸಿ, ಶಿಕ್ಷಣ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣಗಳಡಿ ಯಲ್ಲಿನ ಯೋಜನೇತರ ವೆಚ್ಚವು ಶೇಕಡ ಐದರಿಂದ ಆರಕ್ಕೆ ಹೆಚ್ಚಾಗಬೇಕೆಂದು ಅದೇ ಸಮಯದಲ್ಲಿ ಯೋಜನೇತರ ಶೀರ್ಷಿಕೆಗಳಲ್ಲಿ ಸಂಬಳೇತರ ವೆಚ್ಚವು ವಾರ್ಷಿಕ ಶೇಕಡ 30ರಷ್ಟು ಹೆಚ್ಚಾಗಬೇಕೆಂದು ಶಿಫಾರಸು ಮಾಡಿದೆ. ಆದರೆ ಪ್ರಸಕ್ತ ಸಾಲಿನ ಹಣಕಾಸು ಲೆಕ್ಕಗಳು ಸೂಚಿಸುವ ಪ್ರವೃತ್ತಿಗಳಿಂದ ಯೋಜನೇತರ ಸಂಬಳ ವೆಚ್ಚವು ಶಿಕ್ಷಣ ಮತ್ತು ಆರೋಗ್ಯ ಹಾಗೂ ಕುಟುಂಬ ಕಲ್ಯಾಣಗಳಡಿ ಕ್ರಮವಾಗಿ ಶೇಕಡ 27 ಮತ್ತು ಶೇಕಡ 28ರಷ್ಟು ಹೆಚ್ಚಾಗಿದೆ. ಈ ವಿಭಾಗಗಳಲ್ಲಿ ಸಂಬಳೇತರ ಭಾಗವು ಕ್ರಮವಾಗಿ ಶೇಕಡ 17 ಮತ್ತು ಶೇಕಡ 29ರಷ್ಟು ಹೆಚ್ಚಾಗಿದೆ.

### 1.5.3 ಆರ್ಥಿಕ ಸೇವೆಗಳ ಮೇಲಿನ ವೆಚ್ಚ

ಆರ್ಥಿಕ ಸೇವೆಗಳ ಮೇಲಿನ ವೆಚ್ಚವು ನೇರವಾಗಿ ಅಥವಾ ಪರೋಕ್ಷವಾಗಿ ರಾಜ್ಯದ ಅರ್ಥ ವ್ಯವಸ್ಥೆಯೊಳಗಿನ ಉತ್ಪಾದನಾ ಸಾಮರ್ಥ್ಯವನ್ನು ಉತ್ತಮಗೊಳಿಸುವ ವೆಚ್ಚಗಳನ್ನು ಒಳಗೊಂಡಿದೆ. ಆರ್ಥಿಕ ಸೇವೆಗಳ ಮೇಲಿನ ವೆಚ್ಚವು (ರೂ.17,616 ಕೋಟಿ) ಒಟ್ಟು ರೂ.32,887 ಕೋಟಿಗಳ ಅಭಿವೃದ್ಧಿ ವೆಚ್ಚದ ಶೇಕಡ 54ರಷ್ಟಿತ್ತು. ವಾಸ್ತವವಾಗಿ ಆರ್ಥಿಕ ಸೇವೆಗಳ ವೆಚ್ಚದ ಭಾಗವನ್ನು ರೂ.542 ಕೋಟಿಗಳಷ್ಟು ಹೆಚ್ಚಾಗಿ ತೋರಿಸಿರುವುದರಿಂದ (ಕಂಡಿಕೆ 1.5.2 ನೋಡಿ) ಇದು ಶೇಕಡ 52ರಷ್ಟು ಇರುತ್ತದೆ. ಆರ್ಥಿಕ ಸೇವೆಗಳ ವಿಭಾಗದಲ್ಲಿ, ಆದ್ಯತೆಯ ಭಾಗಗಳಾದ ಕೃಷಿ ಮತ್ತು ಸಂಬಂಧಿತ

ಚಟುವಟಿಕೆಗಳು (ರೂ.4,597 ಕೋಟಿಗಳು), ನೀರಾವರಿ ಮತ್ತು ಪ್ರವಾಹ ನಿಯಂತ್ರಣ (ರೂ.3,720 ಕೋಟಿಗಳು) ಮತ್ತು ಇಂಧನಗಳ (ರೂ.2,741 ಕೋಟಿಗಳು) ಮೇಲಿನ ವೆಚ್ಚವು ಆರ್ಥಿಕ ಸೇವೆಗಳ ಮೇಲಿನ ಒಟ್ಟು ವೆಚ್ಚದ ಶೇಕಡಾ 63ರಷ್ಟಿತ್ತು. 2002–08ರಲ್ಲಿ ಪ್ರಮುಖ ಪ್ರವೃತ್ತಿಗಳು ಕೆಳಕಂಡಂತಿತ್ತು.

**ಕೋಷ್ಟಕ 18 : ಆರ್ಥಿಕ ಸೇವೆಗಳ ವಿಭಾಗದ ವೆಚ್ಚ**

(ಕೋಟಿ ರೂಪಾಯಿಗಳಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| **ಕೃಷಿ ಸಂಬಂಧಿತ ಚಟುವಟಿಕೆಗಳು** | | | | | | |
| **ರಾಜಸ್ವ ವೆಚ್ಚದಲ್ಲಿ** | **1,077.10** | **1,348.92** | **2,064.90** | **2,866.65** | **3,140.84** | **4,518.05** |
| ಸಂಬಳ ಭಾಗ [7] | *413.68* | *430.70* | *420.01* | *459.07* | *467.08* | *585.37* |
| ಸಂಬಳೇತರ ಭಾಗ | *663.42* | *918.22* | *1,644.89* | *2,407.58* | *2,673.76* | *3,932.68* |
| **ಬಂಡವಾಳ ವೆಚ್ಚ** | **22.95** | **7.45** | **18.80** | **17.17** | **33.15** | **78.93** |
| **ಒಟ್ಟು** | **1,100.05** | **1,356.37** | **2,083.71** | **2,883.82** | **3,173.99** | **4,596.98** |
| **ನೀರಾವರಿ ಮತ್ತು ಪ್ರವಾಹ ನಿಯಂತ್ರಣ** | | | | | | |
| **ರಾಜಸ್ವ ವೆಚ್ಚದಲ್ಲಿ** | **206.73** | **179.06** | **213.91** | **215.81** | **294.42** | **278.52** |
| ಸಂಬಳ ಭಾಗ [7] | *128.48* | *140.36* | *92.42* | *89.40* | *76.66* | *88.58* |
| ಸಂಬಳೇತರ ಭಾಗ | *78.25* | *38.70* | *121.49* | *126.41* | *217.76* | *189.94* |
| **ಬಂಡವಾಳ ವೆಚ್ಚ** | **2,028.46** | **1,881.46** | **3,009.73** | **3,329.69** | **4,115.74** | **3,441.50** |
| **ಒಟ್ಟು** | **2,235.19** | **2,060.52** | **3,223.64** | **3,545.50** | **4,410.16** | **3,720.02** |
| **ವಿದ್ಯುಚ್ಛಕ್ತಿ ಮತ್ತು ಇಂಧನ** | | | | | | |
| **ರಾಜಸ್ವ ವೆಚ್ಚದಲ್ಲಿ** | **1,906.92** | **1,733.05** | **1,896.71** | **1,836.93** | **2,402.01** | **2,307.76** |
| ಸಂಬಳ ಭಾಗ | *0.09* | *0.09* | *0.13* | *0.25* | *0.13* | *0.18* |
| ಸಂಬಳೇತರ ಭಾಗ | *1,906.83* | *1,732.96* | *1,896.58* | *1,836.68* | *2,401.88* | *2,307.58* |
| **ಬಂಡವಾಳ ವೆಚ್ಚ** | --- | --- | --- | **50.00** | **430.47** | **432.90** |
| **ಒಟ್ಟು** | **1,906.92** | **1,733.05** | **1,896.71** | **1,886.93** | **2,832.48** | **2,740.66** |
| **ಸಾರಿಗೆ** | | | | | | |
| **ರಾಜಸ್ವ ವೆಚ್ಚದಲ್ಲಿ** | **395.79** | **311.43** | **617.60** | **756.10** | **1,563.98** | **1,325.53** |
| ಸಂಬಳ ಭಾಗ | *16.21* | *17.80* | *15.01* | *18.27* | *19.21* | *22.27* |
| ಸಂಬಳೇತರ ಭಾಗ | *379.58* | *293.63* | *602.59* | *737.83* | *1,544.77* | *1,303.26* |
| **ಬಂಡವಾಳ ವೆಚ್ಚ** | **423.08** | **510.21** | **895.82** | **1,030.45** | **1,823.50** | **1,511.62** |
| **ಒಟ್ಟು** | **818.87** | **821.64** | **1,513.42** | **1,786.55** | **3,387.48** | **2,837.15** |
| **ಇತರೆ ಆರ್ಥಿಕ ಸೇವೆಗಳು** | | | | | | |
| **ರಾಜಸ್ವ ವೆಚ್ಚದಲ್ಲಿ** | **1,215.88** | **1,079.24** | **1,717.39** | **2,271.83** | **3,038.99** | **3,023.45** |
| ಸಂಬಳ ಭಾಗ [7] | *242.04* | *262.68* | *263.37* | *296.58* | *292.52* | *352.90* |
| ಸಂಬಳೇತರ ಭಾಗ | *973.84* | *816.56* | *1,454.02* | *1,975.25* | *2,746.47* | *2,670.55* |
| **ಬಂಡವಾಳ ವೆಚ್ಚ** | **90.36** | **74.63** | **127.08** | **71.40** | **526.15** | **697.29** |
| **ಒಟ್ಟು** | **1,306.24** | **1,153.87** | **1,844.47** | **2,343.23** | **3,565.14** | **3,720.74** |
| **ಆರ್ಥಿಕ ಸೇವೆಗಳು** | | | | | | |
| **ರಾಜಸ್ವ ವೆಚ್ಚದಲ್ಲಿ** [7] | **4,802.42** | **4,651.70** | **6,510.52** | **7,947.32** | **10,440.24** | **11,453.31** |
| ಸಂಬಳ ಭಾಗ | *800.51* | *851.63* | *790.95* | *863.57* | *855.60* | *1,049.30* |
| ಸಂಬಳೇತರ ಭಾಗ | *4,001.91* | *3,800.07* | *5,719.57* | *7,083.75* | *9,584.64* | *10,404.01* |
| **ಬಂಡವಾಳ ವೆಚ್ಚ** | **2,564.85** | **2,473.75** | **4,051.43** | **4,498.71** | **6,929.01** | **6,162.24** |
| **ಒಟ್ಟು ಮೊತ್ತ** | **7,367.27** | **7,125.45** | **10,561.95** | **12,446.03** | **17,369.25** | **17,615.55** |

ಆರ್ಥಿಕ ಸೇವೆಗಳ ವಿಭಾಗದಲ್ಲಿ ರಾಜಸ್ವ ವೆಚ್ಚವು 2002–03ರಲ್ಲಿ ರೂ.4,802 ಕೋಟಿಗಳಿದ್ದು 2007–08ರಲ್ಲಿ ರೂ.11,453 ಕೋಟಿಗೆ ಏರಿ ಶೇಕಡ 138ರಷ್ಟು ಹೆಚ್ಚಾಗಿದೆ. ಬಂಡವಾಳ ವೆಚ್ಚವು ರೂ.2,565 ಕೋಟಿಯಿಂದ ರೂ.6,162 ಕೋಟಿಗಳಿಗೆ ಏರಿ ಶೇಕಡ 140ರಷ್ಟು ಹೆಚ್ಚಾಗಿದೆ. ಈ ವರ್ಷದಲ್ಲಿ ಆರ್ಥಿಕ ಸೇವೆಗಳಡಿಯಲ್ಲಿ ಬಂಡವಾಳ ವೆಚ್ಚವು ರೂ.767 ಕೋಟಿಗಳಷ್ಟು (ಶೇಕಡ 11) ಕಡಿಮೆಯಾಗಿದ್ದು, ಇದು ಭಾರಿ ಮತ್ತು ಮಧ್ಯಮ ನೀರಾವರಿಯಡಿಯಲ್ಲಿ ರೂ.657 ಕೋಟಿಗಳಷ್ಟು ಕಡಿಮೆಯಾಗಿರುವುದರಿಂದ ಉಂಟಾಗಿದೆ. ಆರ್ಥಿಕ ಸೇವೆಗಳಡಿಯ ಬಂಡವಾಳ ವೆಚ್ಚವು ರೂ.1,215 ಕೋಟಿಗಳ ಆಯವ್ಯಯದ ಹೊರಗಿನ ಸಾಲಗಳ ಮರುಪಾವತಿಯನ್ನು (ಶೇಕಡ 20) ಒಳಗೊಂಡಿದ್ದು ಇದು ಪ್ರಮುಖವಾಗಿ ಕೃಷ್ಣ

[7] ಪಂಚಾಯತ್ ರಾಜ್ ಸಂಸ್ಥೆಗಳ ವೇತನ ವೆಚ್ಚವನ್ನು ಒಳಗೊಂಡಿದೆ. ಆಧಾರ: ಹಣಕಾಸು ಇಲಾಖೆ

ಭಾಗ್ಯ ಜಲನಿಗಮ ಮತ್ತು ಕರ್ನಾಟಕ ನೀರಾವರಿ ನಿಗಮಗಳಿಗೆ ಈ ವಿಶೇಷ ಉದ್ದೇಶ ಸಾಧನಗಳು ಮಾಡಿರುವ ಸಾಲಗಳ ಮರುಪಾವತಿಗೆ ನೀಡಿದ ರೂ.913 ಕೋಟಿಗಳನ್ನು ಒಳಗೊಂಡಿದೆ.

ಆರ್ಥಿಕ ಸೇವೆಗಳ ಮೇಲಿನ ರಾಜಸ್ವ ವೆಚ್ಚದಲ್ಲಿ ಸಂಬಳದ ಭಾಗವು 2002–03ರಲ್ಲಿ ಶೇಕಡ 17ರಷ್ಟಿದ್ದು 2007–08ರಲ್ಲಿ ಶೇಕಡ 9ಕ್ಕೆ ಇಳಿದಿದ್ದು ಸಂಬಳೇತರ ಭಾಗವು ಶೇಕಡ 83ರಿಂದ 91ಕ್ಕೆ ಏರಿದೆ. ಹಿಂದಿನ ವರ್ಷಕ್ಕಿಂತಲೂ ಈ ವರ್ಷ ರಾಜಸ್ವ ವೆಚ್ಚದಲ್ಲಿನ ಸಂಬಳೇತರ ವೆಚ್ಚವು ರೂ.819 ಕೋಟಿಗಳ ಹೆಚ್ಚಳವನ್ನು ತೋರಿಸಿದೆ. ಆದರೆ 2006–07 ಮತ್ತು 2007–08ರಲ್ಲಿನ ರೂ.4,311 ಕೋಟಿ ಮತ್ತು ರೂ.5,307 ಕೋಟಿಗಳ ಸಹಾಯಧನವನ್ನು ಪರಿಗಣಿಸಿದರೆ (ಇದು ರಾಜಸ್ವ ವೆಚ್ಚದ ಸಂಬಳೇತರ ಭಾಗದಲ್ಲಿ ತೋರಿಸಿತ್ತು) ವಾಸ್ತವ ಹೆಚ್ಚಳವು ರೂ.177 ಕೋಟಿಗಳಾಗಿರುತ್ತದೆ. ಬಂಡವಾಳ ವೆಚ್ಚದಲ್ಲಿ ಆಯವ್ಯಯದ ಹೊರಗಿನ ಸಾಲಗಳ ಮರುಪಾವತಿ ಮತ್ತು ರಾಜಸ್ವ ವೆಚ್ಚದ ಸಂಬಳೇತರ ಭಾಗದಲ್ಲಿ ಸಹಾಯಧನಗಳ ಭಾಗವೂ ಸೇರಿರುವುದರಿಂದ ಕೋಷ್ಟಕ 18ರಲ್ಲಿ ತೋರಿಸಿರುವ ಪ್ರವೃತ್ತಿಗಳ ಆಧಾರದ ಮೇಲೆ ವೆಚ್ಚದ ಗುಣಮಟ್ಟದ ಬಗ್ಗೆ ವ್ಯಾಖ್ಯಾನ ಮಾಡುವುದು ಕಷ್ಟವಾಗುತ್ತದೆ.

### 1.5.4 ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಆರ್ಥಿಕ ಸಹಾಯ

2002–08ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಅನುದಾನಗಳ ರೂಪದಲ್ಲಿ ನೀಡಿದ ಆರ್ಥಿಕ ಸಹಾಯದ ಮೊತ್ತವನ್ನು ಕೋಷ್ಟಕ–19ರಲ್ಲಿ ನೀಡಲಾಗಿದೆ.

**ಕೋಷ್ಟಕ 19 : ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಆರ್ಥಿಕ ಸಹಾಯ**

(ಕೋಟಿ ರೂಪಾಯಿಗಳಲ್ಲಿ)

| ವಿವರ | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ಪಂಚಾಯತ್‌ರಾಜ್ ಸಂಸ್ಥೆಗಳು | 4,515.66 | 4,524.31 | 4,956.93 | 6,088.61 | 7,767.93 | 9,122.39 |
| ನಗರ ಸ್ಥಳೀಯ ಸಂಸ್ಥೆಗಳು | 644.42 | 892.48 | 1,169.85 | 1,605.85 | 2,113.48 | 2,468.20 |
| ಶಿಕ್ಷಣ ಸಂಸ್ಥೆಗಳು (ವಿಶ್ವವಿದ್ಯಾನಿಲಯಗಳು ಸೇರಿ) | 646.99 | 603.16 | 688.93 | 695.62 | 750.27 | 878.23 |
| ಸಹಕಾರಿ ಸಂಘಗಳು ಮತ್ತು ಸಹಕಾರಿ ಸಂಸ್ಥೆಗಳು | 5.00 | 57.62 | 167.65 | 955.45 | 882.98 | 1,895.60 |
| ಇತರೆ ಸಂಸ್ಥೆಗಳು ಹಾಗೂ ನಿಕಾಯಗಳು (ಶಾಸನಬದ್ಧ ಸಂಸ್ಥೆಗಳೂ ಸೇರಿ) | 1,863.28 | 1,702.81 | 1,745.28 | 1,837.43 | 2,400.54 | 2,361.00 |
| **ಒಟ್ಟು** | **7,675.35** | **7,780.38** | **8,728.64** | **11,182.96** | **13,915.20** | **16,725.42** |
| ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಶೇಕಡಾವಾರು ಹೆಚ್ಚಳ | **3** | **1** | **12** | **28** | **24** | **20** |
| ರಾಜಸ್ವ ಜಮೆಗಳು | 16,168.76 | 20,759.88 | 26,569.66 | 30,352.05 | 37,586.94 | 41,151.14 |
| ರಾಜಸ್ವ ಜಮೆಯಲ್ಲಿ ಸಹಾಯದ ಶತಾಂಶ | 47 | 37 | 33 | 37 | 37 | 41 |
| ರಾಜಸ್ವ ವೆಚ್ಚ | 18,814.50 | 21,284.71 | 24,931.85 | 28,040.89 | 33,435.43 | 37,374.77 |
| ರಾಜಸ್ವ ವೆಚ್ಚದಲ್ಲಿ ಸಹಾಯದ ಶತಾಂಶ | 41 | 37 | 35 | 40 | 42 | 45 |
| ಒಟ್ಟು ಸಹಾಯದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ನೀಡಿದ ಸಹಾಯದ ಶತಾಂಶ | 59 | 58 | 57 | 54 | 56 | 55 |

ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಿದ ಸಹಾಯವು 2002–03ರಲ್ಲಿ ರೂ.4,516 ಕೋಟಿಗಳಷ್ಟಿದ್ದು, 2007–08ರಲ್ಲಿ ರೂ.9,122ಗಳಿಗೆ ಏರಿದ್ದರೆ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಸಹಾಯವು ರೂ.644 ಕೋಟಿಗಳಿಂದ ರೂ.2,468 ಕೋಟಿಗಳಿಗೆ ಏರಿತ್ತು. ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಿದ ಒಟ್ಟು ರೂ.9,122 ಕೋಟಿಗಳಲ್ಲಿ ರೂ.4,657 ಕೋಟಿಗಳನ್ನು (ಶೇಕಡ 51) 2007–08ರಲ್ಲಿ ಸಂಬಳ ಪಾವತಿಗೆ ನೀಡಲಾಗಿದ್ದು, ಇದು ಶಿಕ್ಷಣ, ನೀರು ಸರಬರಾಜು ಮತ್ತು ನೈರ್ಮಲ್ಯ, ವಸತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮುಂತಾದ ರಾಜ್ಯ ಸರ್ಕಾರದ ಕಾರ್ಯಕ್ಷೇತ್ರಗಳು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲ್ಪಟ್ಟಿರುವುದರಿಂದ ಉಂಟಾಗಿದೆ. ಇತರೆ ಸಂಸ್ಥೆಗಳಿಗೆ ಮತ್ತು ನಿಕಾಯಗಳಿಗೆ ನೀಡಿದ ಸಹಾಯದಲ್ಲಿ (ರೂ.2,361 ಕೋಟಿಗಳು) ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳಿಗೆ ನೀಡಿದ ಸಹಾಯಧನ ವೆಚ್ಚವಾದ ರೂ.2,300 ಕೋಟಿಗಳೂ ಸೇರಿದೆ.

### 1.5.5 ಬಳಕೆ ಪ್ರಮಾಣ ಪತ್ರಗಳನ್ನು ನೀಡುವಲ್ಲಿ ವಿಳಂಬ

2007–08ರವರೆಗೂ ನೀಡಿರುವ ಅನುದಾನ ಮತ್ತು ಸಾಲಗಳ ಮೊತ್ತ ರೂ.938 ಕೋಟಿಗಳಿಗೆ ಸಂಬಂಧಿಸಿದ 2,290 ಬಳಕೆ ಪ್ರಮಾಣ ಪತ್ರಗಳಲ್ಲಿ, ರೂ.834 ಕೋಟಿಗಳ ಮೊತ್ತದ ಬಳಕೆ ಪ್ರಮಾಣ

ಪತ್ರಗಳು ಸಲ್ಲಿಕೆಯಾಗದೆ ಬಾಕಿ ಉಳಿದಿದ್ದವು. ಇಲಾಖಾವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳನ್ನು **ಅನುಬಂಧ 1.7ರಲ್ಲಿ** ನೀಡಲಾಗಿದೆ.

### 1.5.6 ಲೆಕ್ಕಪತ್ರಗಳನ್ನು ಸಲ್ಲಿಸದಿರುವಿಕೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ನಿಯಮಗಳು) ಅಧಿನಿಯಮ, 1971 ಅನುಚ್ಛೇದ 14 ಮತ್ತು 15ರ ಅನ್ವಯ ಲೆಕ್ಕಪರಿಶೋಧನೆಗೆ ಒಳಪಡುವ ಸಂಸ್ಥೆಗಳನ್ನು ಗುರುತಿಸುವ ಸಲುವಾಗಿ ಸರ್ಕಾರ/ಇಲಾಖಾ ಮುಖ್ಯಸ್ಥರು ಪ್ರತಿ ವರ್ಷವೂ ವಿವಿಧ ಸಂಸ್ಥೆಗಳಿಗೆ ನೀಡಿದ ಹಣಕಾಸು ಸಹಾಯ ಮತ್ತು ಸಹಾಯದ ಉದ್ದೇಶಗಳನ್ನು ಮತ್ತು ಸಂಸ್ಥೆಗಳ ಒಟ್ಟು ವೆಚ್ಚದ ವಿವರವಾದ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಬೇಕಾಗಿರುತ್ತದೆ. ಮಾರ್ಚ್ 2008ರಲ್ಲಿದ್ದಂತೆ ಸರ್ಕಾರದ 16 ಇಲಾಖೆಗಳು (**ಅನುಬಂಧ 1.8**) 2007–08ರ ಸಾಲಿನ ವಿವರಗಳನ್ನು ಸಲ್ಲಿಸಿರುವುದಿಲ್ಲ.

### 1.5.7 ಸ್ವಾಯುತ್ತ ಸಂಸ್ಥೆಗಳ ಕಾರ್ಯನಿರ್ವಹಣೆಯ ಲೆಕ್ಕಪರಿಶೋಧನೆ

ರಾಜ್ಯದಲ್ಲಿನ ಎಂಟು ಸ್ವಾಯುತ್ತ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಿಕೊಡಲಾಗಿದೆ. ಲೆಕ್ಕಪರಿಶೋಧನೆಯ ಹೊಣೆ, ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳ ಸಲ್ಲಿಕೆ, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯ ನೀಡಿಕೆ ಮತ್ತು ಶಾಸಕಾಂಗದಲ್ಲಿ ಅದರ ಮಂಡನೆಯ ಸ್ಥಿತಿಯನ್ನು **ಅನುಬಂಧ 1.9ರಲ್ಲಿ** ಸೂಚಿಸಲಾಗಿದೆ.

### 1.5.8 ಹಣ ದುರುಪಯೋಗಗಳು, ನಷ್ಟಗಳು, ಅಪವಿನಿಯೋಗಗಳು, ಇತ್ಯಾದಿ

31 ಮಾರ್ಚ್ 2008ರವರೆಗಿನ ಅವಧಿಯಲ್ಲಿ ರೂ.10.02 ಕೋಟಿಗಳಷ್ಟು ಸರ್ಕಾರಿ ಹಣದ ದುರುಪಯೋಗ, ಅಪವಿನಿಯೋಗಗಳ, ಅಂತಿಮ ಕ್ರಮವು ಬಾಕಿ ಇರುವ 216 ಪ್ರಕರಣಗಳನ್ನು ರಾಜ್ಯ ಸರ್ಕಾರವು ವರದಿ ಮಾಡಿತ್ತು. ಈ ಪ್ರಕರಣಗಳಲ್ಲಿ ಅಂತಿಮ ಕ್ರಮ ಬಾಕಿ ಇದ್ದಿತು. ಇಲಾಖಾವಾರು ಬಾಕಿ ಇರುವ ಪ್ರಕರಣಗಳನ್ನು **ಅನುಬಂಧ 1.10ರಲ್ಲಿ** ನೀಡಲಾಗಿದೆ.

### 1.5.9 ನಷ್ಟಗಳ ವಜಾ ಇತ್ಯಾದಿ

ಈ ವರ್ಷದಲ್ಲಿ ಐದು ಇಲಾಖೆಗಳ ಒಂಬತ್ತು ಪ್ರಕರಣಗಳಲ್ಲಿ ಉಂಟಾದ ರೂ.15.06 ಕೋಟಿಗಳ ನಷ್ಟವನ್ನು ಸರ್ಕಾರವು ವಜಾ ಮಾಡಿದೆ. ವಿವರಗಳನ್ನು **ಅನುಬಂಧ 1.11ರಲ್ಲಿ** ನೀಡಲಾಗಿದೆ.

## 1.6 ಆಸ್ತಿಗಳು ಮತ್ತು ಜವಾಬ್ದಾರಿಗಳು

ಸರ್ಕಾರದ ಪ್ರಚಲಿತವಿರುವ ಲೆಕ್ಕಪದ್ಧತಿಯಲ್ಲಿ ಸರ್ಕಾರಕ್ಕೆ ಸೇರಿದ ಜಮೀನು, ಕಟ್ಟಡ ಮುಂತಾದ ಸ್ಥಿರ ಆಸ್ತಿಗಳ ಸಮಗ್ರ ಲೆಕ್ಕಗಳನ್ನು ನಿರ್ವಹಿಸುವುದಿಲ್ಲ. ಆದರೂ ಸರ್ಕಾರದ ಲೆಕ್ಕಗಳು ಅದರ ಹಣಕಾಸು ಜವಾಬ್ದಾರಿಗಳನ್ನು ಮತ್ತು ವೆಚ್ಚದ ಮೂಲಕ ನಿರ್ಮಿಸಿದ ಸ್ಥಿರ ಆಸ್ತಿಗಳ ವಿವರಗಳನ್ನು ಒಳಗೊಂಡಿರುತ್ತದೆ. **ಅನುಬಂಧ–1.2ರಲ್ಲಿ** 31 ಮಾರ್ಚ್ 2007ಕ್ಕೆ ಹೋಲಿಸಿದಂತೆ 31 ಮಾರ್ಚ್ 2008ರಂದು ಇರುವ ಜವಾಬ್ದಾರಿ ಮತ್ತು ಆಸ್ತಿಗಳ ಗೋಷ್ವಾರೆಯನ್ನು ನೀಡಲಾಗಿದೆ. ಈ ವಿವರಣೆಯಲ್ಲಿ ತೋರಿಸಿರುವ ಜವಾಬ್ದಾರಿಗಳು ಮುಖ್ಯವಾಗಿ ಆಂತರಿಕ ಋಣ, ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಸಾರ್ವಜನಿಕ ಲೆಕ್ಕದಲ್ಲಿನ ಜಮೆಗಳು ಮತ್ತು ಮೀಸಲು ನಿಧಿಗಳನ್ನು ಒಳಗೊಂಡಿದ್ದರೆ, ಸ್ಥಿರ ಆಸ್ತಿಗಳು ಮುಖ್ಯವಾಗಿ ಬಂಡವಾಳ ವೆಚ್ಚ ಮತ್ತು ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ನಗದು ಶಿಲ್ಕುಗಳನ್ನು ಒಳಗೊಂಡಿದೆ. ಆದರೂ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವ ರಾಜ್ಯ ಸರ್ಕಾರದ ಜವಾಬ್ದಾರಿಗಳಲ್ಲಿ ನಿವೃತ್ತಿ ಹೊಂದಲಿರುವ/ನಿವೃತ್ತಿ ಹೊಂದಿರುವ ರಾಜ್ಯ ಸರ್ಕಾರಿ ನೌಕರರಿಗೆ ನೀಡಬೇಕಾದ ನಿವೃತ್ತಿವೇತನ ಮತ್ತು ನಿವೃತ್ತಿ ಸೌಲಭ್ಯಗಳು/ರಾಜ್ಯ ಸರ್ಕಾರ ನೀಡಿರುವ ಖಾತರಿಗಳು/ಭರವಸೆ ಪತ್ರಗಳು ಮತ್ತು ವಿಶೇಷ ಉದ್ದೇಶ ಸಾಧನಗಳ ಮೂಲಕ ಸರ್ಕಾರ ಪಡೆದಿರುವ ಆಯವ್ಯಯದ ಹೊರಗಿನ ಸಾಲಗಳೆಂದು ಕರೆಯಲಾಗುವ ಸಾಲಗಳು ಸೇರಿರುವುದಿಲ್ಲ. **ಅನುಬಂಧ–1.2ರಲ್ಲಿ** ತೋರಿಸಿರುವಂತೆ ಸ್ಥಿರ ಆಸ್ತಿಯ ವೃದ್ಧಿಯ ದರವು 2006–07ರಲ್ಲಿದ್ದ ಶೇಕಡಾ 22ರಿಂದ 2007–08ರಲ್ಲಿ ಶೇಕಡಾ 12ಕ್ಕೆ ಇಳಿದಿದ್ದರೆ ಜವಾಬ್ದಾರಿಗಳ ವೃದ್ಧಿಯ ದರವು ಶೇಕಡಾ 11ರಿಂದ ಶೇಕಡಾ 6ಕ್ಕೆ ಇಳಿದಿದೆ.

### 1.6.1 ಅಪೂರ್ಣ ಯೋಜನೆಗಳು

ಅಪೂರ್ಣ ಯೋಜನೆಗಳು/ಕಾಮಗಾರಿಗಳು, ರಾಜ್ಯ ಸರ್ಕಾರವು ವೆಚ್ಚದ ಆದ್ಯತೆಗಳನ್ನು ನಿರ್ಣಯಿಸುವಲ್ಲಿ ಮತ್ತು ತನ್ನ ಸಂಪನ್ಮೂಲಗಳನ್ನು ಈ ಕಾಮಗಾರಿಗಳು/ಯೋಜನೆಗಳಿಗೆ ಸಮರ್ಪಕವಾಗಿ ಹಂಚಿಕೆ ಮಾಡುವಲ್ಲಿ ವಿಫಲವಾಗಿರುವುದನ್ನು ಪ್ರತಿಬಿಂಬಿಸುತ್ತದೆ. ರಾಜ್ಯ ಹಣಕಾಸು ಲೆಕ್ಕಗಳಲ್ಲಿ ನೀಡಿರುವ ಹೆಚ್ಚುವರಿ ವಿವರಣಾಪಟ್ಟಿಯಲ್ಲಿ ಈ ಕಾಮಗಾರಿಗಳ ವಿವರಗಳನ್ನು ನೀಡಲಾಗಿದೆ. ರಾಜ್ಯ ಸರ್ಕಾರದ ಇಲಾಖೆಗಳು ವರದಿ ಮಾಡಿರುವಂತೆ ಇಂತಹ 429 ಅಪೂರ್ಣ ಯೋಜನೆಗಳು/ ಕಾಮಗಾರಿಗಳು ಇವೆ. 2007–08ರ ಅಂತ್ಯಕ್ಕೆ ಈ ಕಾಮಗಾರಿಗಳ ಮೇಲಿನ ವೆಚ್ಚವು ರೂ.1,480.29 ಕೋಟಿಗಳಷ್ಟಿದ್ದು ಇದು ಈ ಕಾಮಗಾರಿಗಳಿಗೆ ಮಂಜೂರಾದ ರೂ.1,144.64 ಕೋಟಿಗಳ ಶೇಕಡ 29ರಷ್ಟಿದೆ.

### 1.6.2 ಹೂಡಿಕೆಗಳು ಮತ್ತು ಪ್ರತಿಫಲಗಳು

ರಾಜ್ಯ ಸರ್ಕಾರವು 31 ಮಾರ್ಚ್ 2008ರ ಅಂತ್ಯಕ್ಕೆ ರೂ.22,279 ಕೋಟಿಗಳನ್ನು 84 ಸರ್ಕಾರಿ ಕಂಪನಿಗಳಲ್ಲಿ (ರೂ.20,735 ಕೋಟಿ), 17 ಶಾಸನಬದ್ಧ ನಿಗಮಗಳಲ್ಲಿ (ರೂ.1,172 ಕೋಟಿ), 44 ಕೂಡು ಬಂಡವಾಳ ಕಂಪನಿಗಳಲ್ಲಿ (ರೂ.34 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳಲ್ಲಿ (ರೂ.338 ಕೋಟಿ) ಬಂಡವಾಳವಾಗಿ ಹೂಡಿದೆ (ಕೋಷ್ಟಕ–20).

**ಕೋಷ್ಟಕ 20 : ಹೂಡಿಕೆಯ ಮೇಲಿನ ಪ್ರತಿಫಲ**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ವರ್ಷದ ಅಂತ್ಯಕ್ಕೆ ಹೂಡಿಕೆ | ಪ್ರತಿಫಲದ ಮೊತ್ತ | ಶೇಕಡಾವಾರು ಪ್ರತಿಫಲ | ಸರ್ಕಾರಿ ಸಾಲಗಳ ಮೇಲಿನ ನಿರ್ಧಾರಿತ ಸರಾಸರಿ ಬಡ್ಡಿಯ ದರ ಮಾರುಕಟ್ಟೆ ಸಾಲಗಳು (ಶೇಕಡ) | ಬಡ್ಡಿಯ ದರ ಮತ್ತು ಪ್ರತಿಫಲದ ವ್ಯತ್ಯಾಸ |
|---|---|---|---|---|---|
| 2002–2003 | 6,150.37 | 21.3 | 0.4 | 9.4 | 9.0 |
| 2003–2004 | 7,984.19 | 18.0 | 0.2 | 9.4 | 9.2 |
| 2004–2005 | 10,741.40 | 16.7 | 0.2 | 8.5 | 8.3 |
| 2005–2006 | 14,052.53 | 16.9 | 0.1 | 7.6 | 7.5 |
| 2006–2007 | 18,698.37 | 19.5 | 0.1 | 7.7 | 7.6 |
| 2007–2008 | 22,279.35 | 23.4 | 0.1 | 7.6 | 7.5 |

ಪ್ರಸಕ್ತ ಸಾಲಿನಲ್ಲಿ ಸರ್ಕಾರದ ಹೂಡಿಕೆಗಳು ರೂ.3,581 ಕೋಟಿಗಳಷ್ಟಿದ್ದು ಇದರಲ್ಲಿ ಸರ್ಕಾರಿ ಕಂಪನಿಗಳಲ್ಲಿ (ರೂ.3,479 ಕೋಟಿ) ಶಾಸನಬದ್ಧ ನಿಗಮಗಳಲ್ಲಿ (ರೂ.100 ಕೋಟಿ) ಮತ್ತು ಕೂಡು ಬಂಡವಾಳ ಮತ್ತು ಸಹಕಾರಿ ಸಂಸ್ಥೆಗಳಲ್ಲಿ ತಲಾ ಒಂದು ಕೋಟಿಯಷ್ಟು ಹೂಡಿಕೆಯಾಗಿದೆ. ಹೂಡಿಕೆಗಳ ಮೇಲಿನ ಪ್ರತಿಫಲವು 2002–08ರ ಅವಧಿಯಲ್ಲಿ ಶೇಕಡ 0.1ರಿಂದ 0.4ರಷ್ಟಿದ್ದು ಸರ್ಕಾರವು ತನ್ನ ಸಾಲಗಳ ಮೇಲೆ ಸರಾಸರಿ ಶೇಕಡ 8ರಿಂದ ಶೇಕಡ 9ರಷ್ಟು ಬಡ್ಡಿಯನ್ನು ನೀಡಿದೆ. ಸರ್ಕಾರವು ರೂ.3,421 ಕೋಟಿಗಳ ಮೊತ್ತವನ್ನು ಹೂಡಿರುವ 27 ಕಂಪನಿಗಳ ಒಟ್ಟು ಸಂಚಿತ ನಷ್ಟವು ರೂ.3,319 ಕೋಟಿಗಳಷ್ಟಿದ್ದು, ಈ ಕೆಳಗೆ ಕಾಣಿಸಿರುವ ಪ್ರಮುಖ ಕಂಪನಿಗಳು (ಆರ್ಥಿಕ ಸೇವೆಗಳ ವಿಭಾಗದಲ್ಲಿ) ಇದರಲ್ಲಿ ಸೇರಿವೆ.

**ಕೋಷ್ಟಕ : 21**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಕಂಪನಿ | ಹೂಡಿಕೆ | ಸಂಚಿತ ನಷ್ಟ | |
|---|---|---|---|---|
| | | | ಮೊತ್ತ | ವರ್ಷಾಂತ್ಯ |
| 1. | ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ | 1,217.37 | 71.45 | 2006–07 |
| 2. | ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ | 920.55 | 504.86 | 2006–07 |
| 3. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ | 468.67 | 166.09 | 2006–07 |
| **ಒಟ್ಟು** | | **2,606.59** | **742.4** | |

### 1.6.3 ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು

ರಾಜ್ಯ ಸರ್ಕಾರವು ನಿಗಮಗಳು, ಕಂಪನಿಗಳು, ಸಹಕಾರಿ ಸಂಸ್ಥೆಗಳಲ್ಲಿ ಬಂಡವಾಳ ಹೂಡುವುದರ ಜೊತೆಗೆ ಅನೇಕ ಸಂಸ್ಥೆ/ಸಂಘಗಳಿಗೆ ಸಾಲ ಮತ್ತು ಮುಂಗಡಗಳನ್ನು ನೀಡುತ್ತದೆ. ಮಾರ್ಚ್ 2008ರ ಅಂತ್ಯಕ್ಕೆ ಬಾಕಿ ಇರುವ ಸಾಲ ಮತ್ತು ಮುಂಗಡಗಳ ಮೊತ್ತ ರೂ.6,946 ಕೋಟಿಗಳಷ್ಟಿತ್ತು (ಕೋಷ್ಟಕ–22).

**ಕೋಷ್ಟಕ 22 : ರಾಜ್ಯ ಸರ್ಕಾರವು ನೀಡಿರುವ ಸಾಲ ಮತ್ತು ಮುಂಗಡಗಳ ಮೇಲೆ ಪಡೆದ ಸರಾಸರಿ ಬಡ್ಡಿ**

(ಕೋಟಿ ರೂಪಾಯಿಗಳಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ಆರಂಭ ಶಿಲ್ಕು | 4,556.46 | 4,256.04 | 5,202.95 | 5,767.53 | 5,943.58 | 6,240.83 |
| ಪ್ರಸಕ್ತ ವರ್ಷದಲ್ಲಿ ನೀಡಿದ ಮುಂಗಡ | 627.58 | 1,011.20 | 611.43 | 299.60 | 357.23 | 756.74 |
| ಪ್ರಸಕ್ತ ವರ್ಷದಲ್ಲಿನ ಮರುಪಾವತಿ | 928.00 | 64.29 | 46.85 | 123.55 | 59.97 | 52.07 |
| **ಅಂತಿಮ ಶಿಲ್ಕು** | **4,256.04** | **5,202.95** | **5,767.53** | **5,943.58** | **6,240.83** | **6,945.50** |
| ನಿವ್ವಳ ಸೇರಿಕೆ (+)/ಇಳಿಕೆ (–) | –300.42 | 946.91 | 564.58 | 176.05 | 297.26 | 704.67 |
| ಬಡ್ಡಿ ಸ್ವೀಕೃತಿ (ಕೋಟಿ ರೂಪಾಯಿಗಳಲ್ಲಿ) | 19.98 | 96.27 | 88.18 | 94.95 | 38.49 | 58.46 |
| ಬಾಕಿ ಇರುವ ಸಾಲ ಮುಂಗಡಗಳ ಶೇಕಡಾವಾರು ಪ್ರಮಾಣದಲ್ಲಿ ಬಡ್ಡಿಯ ಸ್ವೀಕೃತಿ | 0.4 | 2.0 | 1.6 | 1.6 | 0.6 | 0.8 |
| ಸರಾಸರಿ ಬಡ್ಡಿ | 9.4 | 9.4 | 8.5 | 7.6 | 7.7 | 7.6 |
| ಸರಾಸರಿ ಬಡ್ಡಿ ಮತ್ತು ಬಡ್ಡಿ ಸ್ವೀಕೃತಿಗಳ ನಡುವಿನ ವ್ಯತ್ಯಾಸ (ಶೇಕಡ) | 9.0 | 7.4 | 6.9 | 6.0 | 7.1 | 6.8 |

ಪ್ರಸಕ್ತ ಸಾಲಿನಲ್ಲಿ ಸರ್ಕಾರವು ರೂ.757 ಕೋಟಿಗಳ ಸಾಲವನ್ನು ನೀಡಿದೆ. 16 ಪ್ರಕರಣಗಳಲ್ಲಿ ರೂ.751 ಕೋಟಿಗಳಿಗೆ ಮರು ಪಾವತಿಯ ನಿಬಂಧನೆ ಮತ್ತು ಷರತ್ತುಗಳನ್ನು ವಿಧಿಸಲಾಗಿಲ್ಲ. ಈ ವರ್ಷ ನೀಡಿದ ಸಾಲಗಳಲ್ಲಿ ಮೂರು ಸರ್ಕಾರಿ ಕಂಪನಿಗಳ ಖಾತರಿ ಹೊಣೆಗಾರಿಕೆಯ ತೀರಿಕೆಗಾಗಿ ನೀಡಿದ ರೂ.88 ಕೋಟಿಗಳು, ಒಂದು ಸಹಕಾರಿ ಸಂಸ್ಥೆ (ರೂ.3 ಕೋಟಿ) ಅಲ್ಲದೆ ಒಂದು ಶಾಸನಬದ್ಧ ಮಂಡಳಿಗೆ ಸಾಲ ಮರುಪಾವತಿಗಾಗಿ ನೀಡಿದ ರೂ.91 ಕೋಟಿಗಳು ಸೇರಿದೆ.

ಹಣಕಾಸು ಲೆಕ್ಕಗಳ ತ:ಖ್ತೆ 5(ii)ರಲ್ಲಿ ನಮೂದಿಸಿರುವಂತೆ ಮಾರ್ಚ್ 2008ರ ಅಂತ್ಯದಲ್ಲಿ 63 ಸರ್ಕಾರಿ ಮತ್ತು ಸಹಕಾರಿ ಸಂಸ್ಥೆಗಳಿಂದ (ಇವುಗಳ ಲೆಕ್ಕಗಳನ್ನು ಮಹಾಲೇಖಾಪಾಲರ ಕಛೇರಿಯಲ್ಲಿ ಇಡಲಾಗಿದೆ) ರೂ.2,242 ಕೋಟಿಯ (ಅಸಲು: ರೂ.777 ಕೋಟಿ, ಬಡ್ಡಿ: ರೂ.1,465 ಕೋಟಿ) ವಸೂಲಿಯು ಅವಧಿ ಮೀರಿದೆ. ಇದರಲ್ಲಿ ಸುಮಾರು ಶೇಕಡ 50ರಷ್ಟು ಐದು ಪ್ರಮುಖ ಸುಸ್ತಿದಾರರಿಗೆ; – ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಗೃಹ ಮಂಡಳಿ, ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆ ಮತ್ತು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್, – ಸಂಬಂಧಿಸಿದೆ. ಈ ಪ್ರಕರಣಗಳಲ್ಲಿ ಅವಧಿ ಮೀರಿದ ಬಡ್ಡಿಯ ಮೊತ್ತವು (ರೂ.732 ಕೋಟಿ) ಬಾಕಿ ಇರುವ ಅಸಲಿನ (ರೂ.366 ಕೋಟಿ) ಎರಡರಷ್ಟಿದೆ.

ರಾಜ್ಯ ಸರ್ಕಾರವು ಜುಲೈ 2007ರಲ್ಲಿ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನ (ಕರ್ನಾಟಕ ರಾಜ್ಯ ಸ್ವಾಯುತ್ತ ಸಂಸ್ಥೆ) ಬಾಕಿ ಇರುವ ಸಾಲದ ಮೇಲಿನ ಬಡ್ಡಿ ರೂ.7.11 ಕೋಟಿಯನ್ನು ಮನ್ನಾ ಮಾಡಲು ಆದೇಶ ನೀಡಿದೆ. ಈ ಹೊಂದಾಣಿಕೆಯನ್ನು ಮಾಡಲು ನಿರ್ದೇಶನ ಬಾರದಿದ್ದುದರಿಂದ ಇದನ್ನು ಸರ್ಕಾರದ ಲೆಕ್ಕಗಳಲ್ಲಿ ಸೇರಿಸಿಲ್ಲ. ಇದರಿಂದಾಗಿ ಹಣಕಾಸು ಲೆಕ್ಕಗಳ ತ:ಖ್ತೆ 5(ii)ರಲ್ಲಿ ಇದನ್ನು ಆಸ್ತಿಯ ಕಡೆ ಇನ್ನೂ ಸೂಚಿಸಲಾಗುತ್ತಿದೆ. 2008–12ರ ಮಧ್ಯಂತರ ಹಣಕಾಸು ಯೋಜನೆಯೂ ಸಹ ಇಂತಹ ಕೆಲವು ಪ್ರಕರಣಗಳನ್ನು ತೋರಿಸಿದ್ದು, ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳಲ್ಲಿ ಸಂಪೂರ್ಣ ಮಾಹಿತಿಯನ್ನು ಬಿಂಬಿಸಿಲ್ಲವಾದ್ದರಿಂದ ಲೆಕ್ಕ ಹೊಂದಾಣಿಕೆಯ ಮುಖ್ಯ ಪ್ರಯತ್ನವನ್ನು ಆದ್ಯತೆಯ ಮೇರೆಗೆ ಮಾಡಬೇಕಾಗಿದೆ.

### 1.6.4 ನಗದು ಶಿಲ್ಕಿನ ನಿರ್ವಹಣೆ

ಸಾಮಾನ್ಯವಾಗಿ ರಾಜ್ಯ ಸಂಪನ್ಮೂಲಗಳ ಹರಿವು ಅದರ ವೆಚ್ಚದ ಹೊರೆಗೆ ಸಮವಾಗಿರಬೇಕಾದುದು ಅಪೇಕ್ಷಣೀಯ. ಆದರೆ ಸಂಪನ್ಮೂಲ ಹರಿವು ಹಾಗೂ ವೆಚ್ಚದ ಹೊಣೆಗಳ ನಡುವಿನ ತಾತ್ಕಾಲಿಕ ಅಸಮತೆಯನ್ನು ಸರಿತೂಗಿಸಲು ಅರ್ಥೋಪಾಯ ಮುಂಗಡಗಳು–ಸಾಮಾನ್ಯ ಮತ್ತು ವಿಶೇಷ–ಎಂಬ ವ್ಯವಸ್ಥೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮಾಡಿದೆ. ಸಾಮಾನ್ಯ ಅರ್ಥೋಪಾಯ ಮುಂಗಡಗಳ ನಿರ್ವಹಣಾ ಮಿತಿಯನ್ನು ರಾಜಸ್ವ ಜಮೆಗಳ ಮೂರು ವರ್ಷಗಳ ಸರಾಸರಿಯ ಮೇಲೆ ಲೆಕ್ಕ ಹಾಕಲಾಗುತ್ತದೆ ಮತ್ತು ವಿಶೇಷ ಅರ್ಥೋಪಾಯ ಮುಂಗಡಗಳ ಮಿತಿಯನ್ನು ರಾಜ್ಯ ಸರ್ಕಾರದ ಭದ್ರತಾ ಹಿಡುವಳಿಯ ಆಧಾರದ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸುತ್ತದೆ. ಪ್ರಸಕ್ತ ವರ್ಷದಲ್ಲಿ ಸಾಮಾನ್ಯ ಅರ್ಥೋಪಾಯ ಮುಂಗಡಗಳನ್ನು ರೂ.625 ಕೋಟಿಗಳಿಗೆ ನಿಗದಿಪಡಿಸಲಾಗಿತ್ತು. ವಿಶೇಷ ಅರ್ಥೋಪಾಯ ಮುಂಗಡಗಳ ನಿರ್ವಹಣಾ ಮಿತಿಯು (ರಾಜ್ಯದ ಭದ್ರತಾ ಹಿಡುವಳಿಗಳನ್ನು ಆಧರಿಸಿ) ಪ್ರಸಕ್ತ ಸಾಲಿನಲ್ಲಿ ರೂ.699.75 ಕೋಟಿಗಳು ಮತ್ತು ರೂ.3,732 ಕೋಟಿಗಳ ನಡುವೆ ಇದ್ದಿತು. ರಾಜ್ಯ ಸರ್ಕಾರವು ಬಳಸಿಕೊಂಡ ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳು ಮತ್ತು ಅದರ ಮೇಲೆ ನೀಡಿದ ಬಡ್ಡಿ ಪಾವತಿಯ ವಿವರಗಳನ್ನು ಕೆಳಗಿನ ಕೋಷ್ಟಕ–23ರಲ್ಲಿ ನೀಡಲಾಗಿದೆ.

**ಕೋಷ್ಟಕ 23 : ರಾಜ್ಯದ ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್ ಮತ್ತು ಅದರ ಮೇಲಿನ ಬಡ್ಡಿ ಪಾವತಿ**

(ಕೋಟಿ ರೂಪಾಯಿಗಳಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| **ಅರ್ಥೋಪಾಯ ಮುಂಗಡಗಳು** | | | | | | |
| ಪ್ರಸಕ್ತ ಸಾಲಿನಲ್ಲಿ ಪಡೆದದ್ದು | 4,045.45 | 4,623.92 | 1,462.79 | –– | ––– | 78.13 |
| ಬಡ್ಡಿ ಪಾವತಿ | 5.22 | 7.94 | 1.2 | –– | ––– | 0.04 |
| ಪಡೆದ ದಿನಗಳ ಸಂಖ್ಯೆ | 170 | 163 | 61 | –– | ––– | 4 |
| **ಓವರ್‌ಡ್ರಾಫ್ಟ್** | | | | | | |
| ಪ್ರಸಕ್ತ ಸಾಲಿನಲ್ಲಿ ಪಡೆದದ್ದು | 47.84 | 757.72 | –– | –– | ––– | – |
| ಬಡ್ಡಿ ಪಾವತಿ | 0.01 | 0.9 | –– | –– | ––– | – |
| ಪಡೆದ ದಿನಗಳ ಸಂಖ್ಯೆ | 1 | 33 | –– | –– | ––– | – |

2007–08ರಲ್ಲಿ ಸರ್ಕಾರವು ತನ್ನ ಜಮೆ ಮತ್ತು ವೆಚ್ಚಗಳ ಅಸಮತೆಯನ್ನು ಸರಿತೂಗಿಸಲು ನಾಲ್ಕು ದಿನಗಳು ಮಾತ್ರ ರೂ.78 ಕೋಟಿ ಮೊತ್ತದ ವಿಶೇಷ ಅರ್ಥೋಪಾಯ ಮುಂಗಡಗಳನ್ನು ಪಡೆದಿತ್ತು. ಈ ವರ್ಷದಲ್ಲಿ ರಾಜ್ಯದ ಹಣಕಾಸಿನ ಸ್ಥಿತಿಯು ಸ್ಥಿರವಾಗಿ ಮುಂದುವರೆದಿದ್ದು ರಾಜ್ಯ ಸರ್ಕಾರವು ಓವರ್ ಡ್ರಾಫ್ಟ್‌ಗಳನ್ನು ಪಡೆದಿರಲಿಲ್ಲ. ವರ್ಷದ ಕೊನೆಯಲ್ಲಿ ರಾಜ್ಯದ ನಗದು ಶಿಲ್ಕು ರೂ.3,919 ಕೋಟಿಯಿದ್ದಿತು. ರಾಜ್ಯ ಸರ್ಕಾರವು ಹೆಚ್ಚಿನ ನಗದು ಶಿಲ್ಕು ಹೊಂದಿರುವುದರಿಂದ ರಾಜ್ಯ ಅಭಿವೃದ್ಧಿ ಸಾಲಗಳ ಹಿಂದಿರುಗಿಸುವುದರ ಸಾಧ್ಯತೆಯನ್ನು ರಿಸರ್ವ್ ಬ್ಯಾಂಕ್ ಸಹಾಯದಿಂದ ಪ್ರಯತ್ನಿಸಬಹುದಾಗಿದೆ. ಇದರಿಂದ ಭವಿಷ್ಯದ ಬಡ್ಡಿ ಹೊಣೆಯನ್ನು ಕಡಿಮೆ ಮಾಡಬಹುದು.

## 1.7 ತೀರಿಕೆಯಾಗದೆ ಉಳಿದ ಜವಾಬ್ದಾರಿಗಳು

ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮದಲ್ಲಿ ಹೇಳಿರುವಂತೆ ಒಟ್ಟು ಜವಾಬ್ದಾರಿಗಳು ರಾಜ್ಯದ ಸಂಚಿತ ನಿಧಿ ಮತ್ತು ಸಾರ್ವಜನಿಕ ಲೆಕ್ಕದಡಿಯ ಜವಾಬ್ದಾರಿಗಳಾಗಿವೆ.

### 1.7.1 ಹಣಕಾಸು ಜವಾಬ್ದಾರಿಗಳು – ಸಾರ್ವಜನಿಕ ಋಣ ಮತ್ತು ಖಾತರಿಗಳು

ಜವಾಬ್ದಾರಿಗಳಲ್ಲಿ ಸಾರ್ವಜನಿಕ ಋಣ ಮತ್ತು ಇತರೆ ಜವಾಬ್ದಾರಿಗಳು ಎಂಬ ಎರಡು ಭಾಗಗಳಿವೆ. ಸಾರ್ವಜನಿಕ ಋಣವು ರಾಜ್ಯದ ಆಂತರಿಕ ಋಣವನ್ನು ಒಳಗೊಂಡಿದ್ದು ಅದನ್ನು ವಾರ್ಷಿಕ ಹಣಕಾಸು ನಿರೂಪಣೆಗಳಲ್ಲಿ ಸಂಚಿತ ನಿಧಿ–ಬಂಡವಾಳ ಲೆಕ್ಕದಡಿ ತೋರಿಸಲಾಗುವುದು. ಇದು ಮಾರುಕಟ್ಟೆ ಸಾಲ, ಭಾರತೀಯ ರಿಸರ್ವ್ ಬ್ಯಾಂಕಿಗೆ ನೀಡಿದ ವಿಶೇಷ ಭದ್ರತೆಗಳು, ಮತ್ತು ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮತ್ತು ಮುಂಗಡಗಳನ್ನು ಒಳಗೊಂಡಿದೆ. ಭಾರತದ ಸಂವಿಧಾನವು ರಾಜ್ಯ ಸರ್ಕಾರ ತನ್ನ

ಸಂಚಿತ ನಿಧಿಯ ಭದ್ರತೆಯ ಮೇಲೆ ರಾಜ್ಯ ವಿಧಾನಮಂಡಲವು ಕಾಲಕಾಲಕ್ಕೆ ಅಧಿನಿಯಮಗಳ ಮೂಲಕ ನಿಗದಿಪಡಿಸಿದ ಮಿತಿಯೊಳಗೆ ಭಾರತದ ಎಲ್ಲೆಯೊಳಗೆ ಸಾಲ ಮಾಡಲು ಮತ್ತು ಖಾತರಿಗಳನ್ನು ನೀಡಲು ಅವಕಾಶ ಕಲ್ಪಿಸಿದೆ. ಇತರ ಜವಾಬ್ದಾರಿಗಳು ಸಾರ್ವಜನಿಕ ಲೆಕ್ಕದ ಒಂದು ಭಾಗವಾಗಿ, ಸಣ್ಣ ಉಳಿತಾಯ ಯೋಜನೆ, ಭವಿಷ್ಯನಿಧಿಗಳಡಿಯ ಠೇವಣಿಗಳು ಮತ್ತು ಇತರ ಠೇವಣಿಗಳನ್ನು ಒಳಗೊಂಡಿದೆ.

ಕೆಳಗೆ ಕಾಣಿಸಿದ ಕೋಷ್ಟಕ–24 ರಾಜ್ಯ ಸರ್ಕಾರದ ಹಣಕಾಸು ಜವಾಬ್ದಾರಿಗಳು, ಅದರ ಏರಿಕೆಯ ಪ್ರಮಾಣ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದೊಡನೆ ರಾಜಸ್ವ ಜಮೆಗಳೊಡನೆ ಮತ್ತು ಸ್ವಂತ ಆದಾಯ ಮೂಲಗಳೊಡನೆ ಈ ಜವಾಬ್ದಾರಿಗಳ ಅನುಪಾತವನ್ನು ತೋರಿಸುವುದರೊಂದಿಗೆ ಈ ಪ್ರಮಿತಿಗಳಿಗೆ ಸಂಬಂಧಿಸಿದಂತೆ ಹಣಕಾಸು ಜವಾಬ್ದಾರಿಗಳ ಪ್ಲವನತೆಯನ್ನು ತೋರಿಸುತ್ತದೆ.

**ಕೋಷ್ಟಕ 24 : ವಿತ್ತೀಯ ಜವಾಬ್ದಾರಿಗಳು – ಮೂಲ ಪ್ರಮಿತಿಗಳು**

(ಮೊತ್ತ: ಕೋಟಿ ರೂಪಾಯಿಗಳಲ್ಲಿ, ಅನುಪಾತ ಶೇಕಡಾವಾರಿನಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ವಿತ್ತೀಯ ಜವಾಬ್ದಾರಿಗಳು | 37,234 | 41,967 | 46,940 | 52,236 | 57,682 | 60,142 |
| ವೃದ್ಧಿಯ ದರ (ಶೇಕಡ) | 14.3 | 12.7 | 11.8 | 11.3 | 10.4 | 4.3 |
| **ವಿತ್ತೀಯ ಜವಾಬ್ದಾರಿಗಳಿಗೆ ಕೆಳಗಿನವುಗಳ ಅನುಪಾತ** | | | | | | |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಶೇಕಡ) | 31.6 | 32.5 | 31.3 | 31.1 | 30.6 | 27.9 |
| ರಾಜಸ್ವ ಜಮೆಗಳು (ಶೇಕಡ) | 230.3 | 202.1 | 176.7 | 172.1 | 153.5 | 146.1 |
| ಸ್ವಂತ ಸಂಪನ್ಮೂಲಗಳು (ಶೇಕಡ) | 317.8 | 270.3 | 228.5 | 232.1 | 210.5 | 204.9 |
| **ಕೆಳಗಿನವುಗಳಿಗೆ ವಿತ್ತೀಯ ಜವಾಬ್ದಾರಿಯ ಪ್ಲವನತೆ** | | | | | | |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಅನುಪಾತ) | 1.8 | 1.3 | 0.7 | 0.9 | 0.8 | 0.3 |
| ರಾಜಸ್ವ ಜಮೆಗಳು (ಶೇಕಡ) | 2.6 | 0.4 | 0.4 | 0.8 | 0.4 | 0.5 |
| ಸ್ವಂತ ಸಂಪನ್ಮೂಲಗಳು (ಶೇಕಡ) | 2.0 | 0.4 | 0.4 | 1.2 | 0.5 | 0.6 |

ರಾಜ್ಯದ ವಿತ್ತೀಯ ಜವಾಬ್ದಾರಿಗಳು 2002–03ರಲ್ಲಿ ರೂ.37,234 ಕೋಟಿಗಳಷ್ಟಿದ್ದು 2007–08ರಲ್ಲಿ ರೂ.60,142 ಕೋಟಿಗಳಿಗೆ ಏರಿದ್ದು, ಇದು ಸಂಚಿತ ನಿಧಿ ಜವಾಬ್ದಾರಿಗಳು (ರೂ.42,873 ಕೋಟಿಗಳು) ಮತ್ತು ಸಾರ್ವಜನಿಕ ಲೆಕ್ಕದ ಜವಾಬ್ದಾರಿಗಳನ್ನು (ರೂ.17,269 ಕೋಟಿಗಳು) ಒಳಗೊಂಡಿದೆ. ರಾಜ್ಯ ಸರ್ಕಾರದ ವಿತ್ತೀಯ ಜವಾಬ್ದಾರಿಗಳ ವೃದ್ಧಿಯ ದರ ಇಳಿಮುಖವಾಗಿದ್ದು, 2002–03ರಲ್ಲಿದ್ದ ಶೇಕಡ 14ರಿಂದ 2007–08ರಲ್ಲಿ ಶೇಕಡ 4ಕ್ಕೆ ಜಾರಿದೆ. 2007–08ರಲ್ಲಿ ವಿತ್ತೀಯ ಜವಾಬ್ದಾರಿಗಳ ವೃದ್ಧಿಯ ದರವು 2006–07ರಲ್ಲಿದ್ದಂತೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಗಿಂತಲೂ ಕಡಿಮೆಯಾಗಿ ಮುಂದುವರೆದಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿತ್ತೀಯ ಜವಾಬ್ದಾರಿಗಳ ಪ್ಲವನತೆಯು 2002–03ರಲ್ಲಿನ 1.8ರಿಂದ 2007–08ರಲ್ಲಿ 0.3ಕ್ಕೆ ಇಳಿದಿದೆ.

ಹನ್ನೆರಡನೆ ವಿತ್ತ ಆಯೋಗದ ಶಿಫಾರಸಿನ ಮೇರೆಗೆ ಎಲ್ಲಾ ರಾಜ್ಯಗಳೂ ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಯೂ ಸೇರಿದಂತೆ ಎಲ್ಲಾ ಸಾಲಗಳ ತೀರುವಳಿಗೆ ಒಂದು ಋಣ ಪರಿಹಾರ ನಿಧಿಯನ್ನು ಸ್ಥಾಪಿಸಬೇಕಾಗಿದೆ. ರಾಜ್ಯ ಸರ್ಕಾರವು ಮುಕ್ತ ಮಾರುಕಟ್ಟೆ ಸಾಲಗಳ ತೀರುವಳಿಗೆ ಈಗಾಗಲೇ ಒಂದು ಋಣ ಪರಿಹಾರ ನಿಧಿಯನ್ನು ಸ್ಥಾಪಿಸಿದೆ. ಆದರೆ 1999–2000ದಿಂದ ಈ ನಿಧಿಗೆ ಯಾವುದೇ ವಂತಿಗೆಯನ್ನು ನೀಡಿಲ್ಲ ಮತ್ತು ಇದಕ್ಕೆ ಯಾವುದೇ ಕಾರಣವನ್ನೂ ನೀಡಿಲ್ಲ. ಋಣ ಪರಿಹಾರ ನಿಧಿಯನ್ನು ಪುನಶ್ಚೇತನಗೊಳಿಸಬೇಕಾಗಿದೆ.

### 1.7.2 ಖಾತರಿಗಳ ಸ್ಥಿತಿ – ಸಾಂದರ್ಭಿಕ ಜವಾಬ್ದಾರಿಗಳು

ಸರ್ಕಾರವು ಖಾತರಿ ನೀಡಲಾಗಿರುವ ಸಾಲಗಾರನು ಸುಸ್ತಿದಾರನಾದಾಗ ಖಾತರಿಗಳು ರಾಜ್ಯದ ಸಂಚಿತ ನಿಧಿಯ ಮೇಲಿನ ಸಾಂದರ್ಭಿಕ ಜವಾಬ್ದಾರಿಗಳಾಗಿ ಪರಿಣಮಿಸುತ್ತವೆ. ರಾಜ್ಯ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ–6ರಲ್ಲಿ ನೀಡಿರುವಂತೆ 2002–03ರಿಂದ ರಾಜ್ಯ ಸರ್ಕಾರವು ಖಾತರಿ ನೀಡಿರುವ ಗರಿಷ್ಠ ಮೊತ್ತ ಮತ್ತು ವರ್ಷದ ಕೊನೆಯಲ್ಲಿ ಬಾಕಿ ಇರುವ ಖಾತರಿಗಳನ್ನು ಕೋಷ್ಟಕ–25ರಲ್ಲಿ ನೀಡಲಾಗಿದೆ.

**ಕೋಷ್ಟಕ 25 : ಕರ್ನಾಟಕ ಸರ್ಕಾರವು ನೀಡಿರುವ ಖಾತರಿಗಳು**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ಖಾತರಿ ನೀಡಿರುವ ಗರಿಷ್ಠ ಮೊತ್ತ | ಬಾಕಿ ಇರುವ ಖಾತರಿಗಳ ಮೊತ್ತ | ಬಾಕಿ ಇರುವ ಖಾತರಿಗಳ ಗರಿಷ್ಠ ಮೊತ್ತಕ್ಕೆ ಹಿಂದಿನ ಎರಡನೇ ವರ್ಷದ ರಾಜಸ್ವ ಜಮೆಗಳ ಶೇಕಡಾವಾರು |
|---|---|---|---|
| 2002–03 | 20,973 | 13,314 | 90 |
| 2003–04 | 21,225 | 14,179 | 93 |
| 2004–05 | 19,910 | 11,574 | 72 |
| 2005–06 | 20,107 | 8,984 | 43 |
| 2006–07 | 19,793 | 9,879 | 37 |
| 2007–08 | 23,109 | 10,786 | 36 |

ಕರ್ನಾಟಕ ಸರ್ಕಾರದ ಖಾತರಿಗಳ ಮಿತಿ ಕಾಯಿದೆ, 1999ರ ಅನ್ವಯ ಯಾವುದೇ ವರ್ಷದ ಅಂತ್ಯದಲ್ಲಿ ಬಾಕಿ ಇರುವ ಖಾತರಿಗಳು ಹಿಂದಿನ ಎರಡನೆ ವರ್ಷದ ರಾಜಸ್ವ ಜಮೆಗಳ ಶೇಕಡ 80ರ ಮಿತಿಯೊಳಗೆ ಇರಬೇಕಾಗಿದೆ. 2007–08ರ ಅಂತ್ಯಕ್ಕೆ ಬಾಕಿ ಇರುವ ಖಾತರಿಗಳು 2005–06ರ ರಾಜಸ್ವ ಜಮೆಗಳ ಶೇಕಡ 36ರಷ್ಟಿದ್ದರೂ, 2008–2012ರ ಮಧ್ಯಂತರ ಅವಧಿಯ ವಿತ್ತೀಯ ಯೋಜನೆಯಲ್ಲಿ ಹೇಳಿರುವಂತೆ ಬಾಕಿ ಇರುವ ಖಾತರಿಗಳಿಂದ ಉಂಟಾಗಬಹುದಾದ ಹಾನಿಗಳ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲು ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಹನ್ನೆರಡನೇ ಹಣಕಾಸು ಆಯೋಗವು ಖಾತರಿಗಳಿಂದ ಆಗಬಹುದಾದ ನಷ್ಟ ಅಂದಾಜಿನ ಆಧಾರದ ಮೇಲೆ ನಿರ್ಧರಿಸಲಾದ ಖಾತರಿ ಶುಲ್ಕಗಳ ಮೂಲಕ ಖಾತರಿ ವಿಮೋಚನಾ ನಿಧಿಯನ್ನು ಸ್ಥಾಪಿಸಲು ಇನ್ನೂ ಕ್ರಮ ತೆಗೆದುಕೊಳ್ಳಬೇಕಾಗಿದೆ.

2007–08ರಲ್ಲಿ ಸರ್ಕಾರವು ರೂ.91 ಕೋಟಿಗಳ ಖಾತರಿ ಜವಾಬ್ದಾರಿಯನ್ನು ತೀರಿಸಿದ್ದು, ಇದನ್ನು ಸಂಬಂಧಪಟ್ಟ ನಾಲ್ಕು ಸಂಸ್ಥೆಗಳಿಗೆ ಸಾಲವೆಂದು ಪರಿಗಣಿಸಲಾಗಿದೆ.

2007–08ರಲ್ಲಿ ರೂ.77 ಕೋಟಿಗಳ ಖಾತರಿ ಶುಲ್ಕವನ್ನು ಸರ್ಕಾರದ ಲೆಕ್ಕಕ್ಕೆ 'ಇತರೆ ಸಾಮಾನ್ಯ ಸೇವೆಗಳು' ಶೀರ್ಷಿಕೆಯಡಿ ಜಮಾ ಮಾಡಲಾಗಿದ್ದು ಇದನ್ನು ಖಾತರಿ ಮೀಸಲು ನಿಧಿಗೆ ವರ್ಗಾಯಿಸಲಾಗಿಲ್ಲ.

ವಸೂಲಾದ ಖಾತರಿ ಶುಲ್ಕವನ್ನು ಮತ್ತು ಖಾತರಿ ಜವಾಬ್ದಾರಿಗಳನ್ನು ತೀರಿಸಲು ಮಾಡಿದ ವೆಚ್ಚವನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾವಣೆ ಮಾಡದಿರುವುದರಿಂದ ಸಂಚಿತ ನಿಧಿಯಲ್ಲಿನ ರಾಜಸ್ವ ಜಮೆಗಳನ್ನು/ ಬಂಡವಾಳ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗಿದೆ.

## 1.7.3 ಆಯವ್ಯಯದ ಹೊರಗಿನ ಸಾಲಗಳು

ರಾಜ್ಯ ಸರ್ಕಾರಗಳು ಮಾಡುವ ಸಾಲಗಳನ್ನು ಭಾರತ ಸಂವಿಧಾನದ ಅನುಚ್ಛೇದ 293ರ ಅಡಿ ನಿಯಂತ್ರಿಸಲಾಗಿದೆ. ಕೋಷ್ಟಕ–24ರಲ್ಲಿ ತೋರಿಸಿರುವ ಜವಾಬ್ದಾರಿಗಳ ಜೊತೆಗೆ ರಾಜ್ಯ ಸರ್ಕಾರವು ಸರ್ಕಾರಿ ಕಂಪನಿಗಳು/ನಿಗಮಗಳು ಮಾಡಿರುವ ಸಾಲಗಳಿಗೆ ಖಾತರಿಯನ್ನು ನೀಡಿದೆ. ಈ ಕಂಪನಿಗಳು, ನಿಗಮಗಳು ರಾಜ್ಯದ ಆಯವ್ಯಯ ಅಂದಾಜುಗಳ ಹೊರಗೆ ಪ್ರಕ್ಷೇಪಿಸಿರುವ ವಿವಿಧ ರಾಜ್ಯ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಾರುಕಟ್ಟೆ/ಹಣಕಾಸು ಸಂಸ್ಥೆಗಳಿಂದ ಸಾಲಗಳನ್ನು ಪಡೆದಿದೆ. ರಾಜ್ಯ ಸರ್ಕಾರದ ಯೋಜನಾ ಕಾರ್ಯಕ್ರಮಗಳ ಅಂದಾಜುಗಳಲ್ಲಿ ಈ ಕಾರ್ಯಕ್ರಮಗಳು ಆಯಾ ಕಂಪನಿಗಳ/ನಿಗಮಗಳ ಸಂಪನ್ಮೂಲದ ಮೂಲಕ ಅನುಷ್ಠಾನಗೊಳ್ಳುತ್ತವೆ ಎಂದು ಪ್ರಕ್ಷೇಪಿಸಿದ್ದರೂ ವಾಸ್ತವವಾಗಿ ಇವುಗಳಲ್ಲಿ ಅನೇಕ ಸಂಸ್ಥೆಗಳು ಮಾಡಿರುವ ಸಾಲಗಳು ಅಂತಿಮವಾಗಿ 'ಆಯವ್ಯಯದ ಹೊರಗಿನ ಸಾಲಗಳು' ಎಂದು ಕರೆಯಲಾಗುವ ರಾಜ್ಯ ಸರ್ಕಾರದ ಬದ್ಧ ಜವಾಬ್ದಾರಿಗಳಾಗಿ ಪರಿಣಮಿಸುತ್ತವೆ. ಸಂವಿಧಾನದ ಅನುಚ್ಛೇದ 293(3)ರಲ್ಲಿ ಈ ರೀತಿಯ ಸಾಲಗಳಿಗೆ ಯಾವುದೇ ಅವಕಾಶವಿಲ್ಲದಿದ್ದರೂ ರಾಜ್ಯ ಸರ್ಕಾರವು ಆಯವ್ಯಯದ ಹೊರಗಿನ ಸಾಲಗಳಿಗೆ ಮೊರೆ ಹೋಗಿರುವುದಕ್ಕೆ ಹಣಕಾಸು ಇಲಾಖೆ ನೀಡಿರುವ ಮಾಹಿತಿಗಳು ಸಾಕ್ಷ್ಯವನ್ನು ಒದಗಿಸುತ್ತವೆ. ಕೋಷ್ಟಕ–26ರಲ್ಲಿ ರಾಜ್ಯ ಸರ್ಕಾರವು 2002–08ರ ಅವಧಿಯಲ್ಲಿ ಮಾಡಿರುವ ಆಯವ್ಯಯದ ಹೊರಗಿನ ಸಾಲಗಳ ಪ್ರವೃತ್ತಿಯನ್ನು ತೋರಿಸಿದರೆ, ಕೋಷ್ಟಕ–27 ಸಂಸ್ಥಾವಾರು ಸಾಲಗಳ ಸ್ಥಿತಿಯನ್ನು ನೀಡುತ್ತದೆ.

**ಕೋಷ್ಟಕ 26 : ಆಯವ್ಯಯದ ಹೊರಗಿನ ಸಾಲಗಳ ಪ್ರವೃತ್ತಿ**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | 2002–03 | 2003–04 | 2004–05 | 2005–06 | 2006–07 | 2007–08 (ಪರಿಷ್ಕೃತ ಅಂದಾಜು) |
|---|---|---|---|---|---|---|
| ಮಧ್ಯಂತರ ವಿತ್ತ ಯೋಜನೆಯ ಪ್ರಕಾರ ಮೊತ್ತ♠ | 1,388 | 1,129 | 838 | 1,078 | 845 | 720 |

♠ ಈ ಅಂಕಿಗಳು ಹಣಕಾಸು ಸಂಸ್ಥೆಗಳ ಅಂಕಿಗಳೊಂದಿಗೆ ಹೊಂದಾಣಿಕೆಯಾಗಬೇಕಿದೆ

**ಕೋಷ್ಟಕ 27 : ಆಯವ್ಯಯದ ಹೊರಗಿನ ಸಾಲಗಳ ಸಂಸ್ಥಾವಾರು ವಿವರಗಳು**

(ಕೋಟಿ ರೂಪಾಯಿಗಳಲ್ಲಿ)

| ಕಂಪನಿ/ನಿಗಮ/ಮಂಡಳಿ | ಆಯವ್ಯಯ ಹೊರಗಿನ ಸಾಲಗಳು | | | 2006–07ರವರೆಗೆ ಅಸಲಿನ ಮರುಪಾವತಿ | |
|---|---|---|---|---|---|
| | 2006–07 ರವರೆಗೆ | 2007–08ನೇ ಸಾಲಿನಲ್ಲಿ | ಒಟ್ಟು | ಅಸಲು | ಬಡ್ಡಿ |
| ಕೃಷ್ಣ ಭಾಗ್ಯ ಜಲ ನಿಗಮ | 2,433.17 | 50.00 | 2483.17 | 947.48 | 411.83 |
| ಕರ್ನಾಟಕ ನೀರಾವರಿ ನಿಗಮ | 859.10 | -- | 859.10 | 221.10 | 75.98 |
| ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ | 534.14 | 102.82 | 636.96 | 63.80 | 5.64 |
| ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ | 650.63 | -- | 650.63 | 58.94 | 55.04 |
| ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿ | 117.90 | -- | 117.90 | 20.71 | 9.30 |
| ಕರ್ನಾಟಕ ಪೊಲೀಸ್ ವಸತಿ ನಿಗಮ | 280.93 | -- | 280.93 | 30.54 | 0.38 |
| ಕರ್ನಾಟಕ ಭೂಸೇನಾ ನಿಗಮ | 1.60 | -- | 1.60 | 9.36 | 19.44 |
| ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ | 8.06 | -- | 8.06 | 0.99 | 0.75 |
| ಕಾವೇರಿ ನೀರಾವರಿ ನಿಗಮ ನಿಯಮಿತ | 789.55 | -- | 789.55 | 0.00 | 40.06 |
| ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ | 76.30 | -- | 76.30 | 34.32 | 30.34 |
| ಕರ್ನಾಟಕ ಸಣ್ಣ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ | 211.87 | -- | 211.87 | 2.17 | 17.94 |
| **ಒಟ್ಟು** | **5,963.25** | **152.82** | **6116.07** | **1389.41** | **666.70** |

* ಮಾಹಿತಿಯು ಕಂಪನಿಗಳು/ನಿಗಮಗಳು ಒದಗಿಸಿದಂತಿವೆ

ಆಯವ್ಯಯದ ಹೊರಗಿನ ಸಾಲಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಮಾರ್ಚ್ 2008ರ ಅಂತ್ಯಕ್ಕೆ ಒಟ್ಟು ಜವಾಬ್ದಾರಿಗಳು ಕೋಷ್ಟಕ 24ರಲ್ಲಿ ತೋರಿಸಿರುವ ರೂ.60,142 ಕೋಟಿಗಳಿಗೆ ಬದಲಾಗಿ ರೂ.64,869 ಕೋಟಿಗಳಷ್ಟಾಗುತ್ತದೆ[8]. ಇದರಿಂದಾಗಿ, ವರ್ಷಾಂತ್ಯಕ್ಕೆ ಆರ್ಥಿಕ ಜವಾಬ್ದಾರಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಶೇಕಡ 30ರಷ್ಟು ಹೆಚ್ಚಾಗುತ್ತದೆ.

### 1.7.4 ಋಣ ಸಹಿಷ್ಣುತೆ

ಸರ್ಕಾರವು ಭವಿಷ್ಯದಲ್ಲಿ ಜವಾಬ್ದಾರಿಗಳ ಹೊಣೆಯ ತೀರಿಕೆಯನ್ನು ಮುಂಗಾಣುವಂತಿದ್ದರೆ ಮತ್ತು ಋಣ–ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ನಿರ್ವಹಿಸಲಾಗದ ಮಟ್ಟಕ್ಕೆ ಬೆಳೆಯದಿದ್ದರೆ, ಜವಾಬ್ದಾರಿಗಳನ್ನು ಸಹಿಷ್ಣುವೆಂದು ಪರಿಗಣಿಸಲಾಗುವುದು. ತನ್ನ ಪ್ರಸಕ್ತ ಆದಾಯವನ್ನು ಋಣ ತೀರಿಕೆಯ ಪೂರೈಕೆಗೆ ಸಾಕಾಗುವಷ್ಟು ಉತ್ಪತ್ತಿ ಮಾಡಿಕೊಳ್ಳಲಾಗದ ಸರ್ಕಾರವು ತನ್ನ ಹೊಣೆಗಳಿಗೆ ಸಂಬಂಧಿಸಿದಂತೆ ಸುಸ್ತಿಯಾಗುವುದು ಅಥವಾ ಹಳೆಯ ಋಣಗಳನ್ನು ತೀರಿಸಲು ಹೆಚ್ಚು ಸಾಲಗಳನ್ನು ಮಾಡುವಂತಾಗುವುದು ಮತ್ತು ಇದರಿಂದಾಗಿ ತನ್ನ ಪ್ರಸಕ್ತ ಜಮಾ–ಖರ್ಚುಗಳಲ್ಲಿ ಅಸಮತೋಲನ ಉಂಟಾಗುವುದು. ರಾಜ್ಯದ ಸಾಲ ತೀರಿಕೆಯ ಶಕ್ತಿ ಮತ್ತು ಸಹಿಷ್ಣುತೆ ಪರಸ್ಪರ ಸಂಬಂಧ ಹೊಂದಿದ್ದು ಋಣ ಸಹಿಷ್ಣುತೆಯು ಇಲ್ಲವಾದಲ್ಲಿ ರಾಜ್ಯದ ಸಾಲ ತೀರಿಕೆಯ ಸ್ಥಿತಿ ಆತಂಕಕಾರಿಯಾಗುತ್ತದೆ. ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ ಅಥವಾ ಡೋಮರ್ಸ್ ಅಂತರ, ಸಾಲವಾಗಿ ಪಡೆದ ಹಣದಲ್ಲಿ ನಿವ್ವಳ ಲಭ್ಯತೆ ಮತ್ತು ಬಡ್ಡಿ ಪಾವತಿಯ ಏರಿಕೆಯ ಭಾರವನ್ನು ಭರಿಸಲು ರಾಜಸ್ವ ಜಮೆಗಳಲ್ಲಿನ ಏರಿಕೆಯ ಪರ್ಯಾಪ್ತತೆ ಮತ್ತು ಪ್ರಾಥಮಿಕ ವೆಚ್ಚಗಳ ಪರಿಭಾಷೆಯಲ್ಲಿ ರಾಜ್ಯದ ಋಣ ಸಹಿಷ್ಣುತೆಯನ್ನು ಪರೀಕ್ಷಿಸಲಾಗಿದೆ.

[8] ವಿತ್ತೀಯ ಜವಾಬ್ದಾರಿಗಳು: ರೂ.60,142 ಕೋಟಿ + ಆಯವ್ಯಯದ ಹೊರಗಿನ ಸಾಲಗಳು: ರೂ.6,116 ಕೋಟಿ – ಅಸಲು ಮರುಪಾವತಿ: ರೂ.1,389 ಕೋಟಿ

### 1.7.5 ಋಣ ಸ್ಥಿರತೆ

ಋಣ ಸಹಿಷ್ಣುತೆಗೆ ಅತಿ ಮುಖ್ಯವಾದ ನಿಯಮವೆಂದರೆ ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತದಲ್ಲಿ ದೃಢತೆಯನ್ನು ಸಾಧಿಸುವುದು. ಡೋಮರ್‌ನ ಋಣ ಸ್ಥಿರತೆಯ ಸೂತ್ರದ ಪ್ರಕಾರ, ಅರ್ಥ ವ್ಯವಸ್ಥೆಯ ವೃದ್ಧಿದರವು ಸಾಲಗಳ ಹೊಣೆಯನ್ನು ಮೀರಿದ್ದರೆ, ಪ್ರಾಥಮಿಕ ಶಿಲ್ಕುಗಳು ಧನಾತ್ಮಕ/ ಸೊನ್ನೆ/ಅತಿಯಾಗದ ಋಣಾತ್ಮಕವಾಗಿದ್ದ ಪಕ್ಷದಲ್ಲಿ ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಸ್ಥಿರವಾಗಿರುತ್ತದೆ. ಪ್ರಾಥಮಿಕ ಕೊರತೆ ಮತ್ತು ಮೊತ್ತಗಳ ಪ್ರಾಪ್ತಿಯು ಋಣಾತ್ಮಕವಾಗಿದ್ದರೆ ಋಣ–ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಹೆಚ್ಚಾಗಿ ಸಾರ್ವಜನಿಕ ಋಣಗಳ ಮಟ್ಟವು ಅಸಹಿಷ್ಣುವಾಗಿರುವುದನ್ನು ಸೂಚಿಸುತ್ತದೆ. ಮೊತ್ತಗಳ ವ್ಯಾಪ್ತಿ ಮತ್ತು ಪ್ರಾಥಮಿಕ ಕೊರತೆಯು ಧನಾತ್ಮಕವಾಗಿದ್ದರೆ ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಕಡಿಮೆಯಾಗಿ ಸಾರ್ವಜನಿಕ ಋಣವು ಸಹಿಷ್ಣುವಾಗಿರುವುದನ್ನು ಸೂಚಿಸುತ್ತದೆ.

**ಕೋಷ್ಟಕ 28 : ಋಣ ಸಹಿಷ್ಣುತೆ – ಬಡ್ಡಿಯ ದರ ಮತ್ತು *ಜಿಎಸ್‌ಡಿಪಿಯ* ವೃದ್ಧಿ**

(ಶೇಕಡಾವಾರಿನಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ಸರಾಸರಿ ಬಡ್ಡಿ ದರ | 9.4 | 9.4 | 8.5 | 7.6 | 7.7 | 7.6 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿ | 7.8 | 9.6 | 16.0 | 12.1 | 12.1 | 14.3 |
| ಬಡ್ಡಿಯ ಹರಹು | –1.6 | 0.2 | 7.5 | 4.5 | 4.4 | 6.7 |
| ಮೊತ್ತದ ಹರಹು (ಕೋಟಿ ರೂಪಾಯಿಗಳಲ್ಲಿ) | –595.74 | 83.93 | 3,520.50 | 2,350.62 | 2,538.00 | 4,029.51 |
| ಪ್ರಾಥಮಕ ಕೊರತೆ (–)/ ಪ್ರಾಥಮಿಕ ಹೆಚ್ಚಳ (+) (ಕೋಟಿ ರೂಪಾಯಿಗಳಲ್ಲಿ) | –1,990.00 | –791.00 | 194 | 78 | –452.00 | – 826 |

2002–04ರ ಅವಧಿಯಲ್ಲಿ ಮೊತ್ತದ ಹರಹು ಮತ್ತು ಪ್ರಾಥಮಿಕ ಕೊರತೆಯು ಋಣಾತ್ಮಕವಾಗಿದ್ದು, ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತದಲ್ಲಿ ಹೆಚ್ಚಳವುಂಟಾಗಿತ್ತು. ಆನಂತರ ಮೊತ್ತದ ಹರಹು ಪ್ರಾಥಮಿಕ ಕೊರತೆ ಅಥವಾ ಹೆಚ್ಚಳಗಳೊಂದಿಗೆ ಧನಾತ್ಮಕವಾಗಿ ತಿರುಗಿದ್ದು ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತದಲ್ಲಿ ಇಳಿಕೆಯಾಗಿದೆ. ಈ ಪ್ರವೃತ್ತಿಗಳು ರಾಜ್ಯದ ಋಣ ಸ್ಥಿರತೆಯನ್ನು ಸೂಚಿಸುತ್ತದೆ. ಇದು ರಾಜ್ಯದ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಋಣ ಕ್ಷಮತೆಯು ಉತ್ತಮಗೊಳ್ಳುತ್ತಿರುವುದನ್ನು ಸೂಚಿಸುತ್ತದೆ.

### 1.7.6 ಋಣವಲ್ಲದ ಜಮೆಗಳಲ್ಲಿನ ಏರಿಕೆಯ ಪರ್ಯಾಪ್ತತೆ

ಬಡ್ಡಿ ಪಾವತಿಯ ಹೊಣೆಯಲ್ಲಿನ ಏರಿಕೆಯನ್ನು ಮತ್ತು ಪ್ರಾಥಮಿಕ ವೆಚ್ಚದ ಏರಿಕೆಯನ್ನು ಭರಿಸಲು ರಾಜ್ಯದ ಸಾಲವಲ್ಲದ ಜಮೆಗಳು ಪರ್ಯಾಪ್ತವಾಗಿರುವುದು, ಋಣ ಸಹಿಷ್ಣುತೆಯ ಮತ್ತೊಂದು ಸೂಚಕವಾಗಿದೆ. ಋಣೇತರ ಜಮೆಗಳು ಏರುಮುಖದಲ್ಲಿದ್ದು, ಬಡ್ಡಿಯ ಹೊಣೆಯನ್ನು ಪ್ರಾಥಮಿಕ ವೆಚ್ಚದ ಏರಿಕೆಯನ್ನು ಭರಿಸುವಂತಾದರೆ, ಋಣ ಸಹಿಷ್ಣುತೆಯು ಗಣನೀಯವಾಗಿ ಸುರಳಿತವಾಗುತ್ತದೆ. ನಿರಂತರ ಋಣಾತ್ಮಕ ಸಂಪನ್ಮೂಲ ಅಂತರವು ಋಣದ ಅಸಹಿಷ್ಣುತೆಯನ್ನು ಸೂಚಿಸಿದರೆ, ಧನಾತ್ಮಕ ಸಂಪನ್ಮೂಲ ಅಂತರವು ರಾಜ್ಯದ ಋಣ ಸಹಿಷ್ಣುತೆಯ ಕ್ಷಮತೆಯನ್ನು ಗಟ್ಟಿಗೊಳಿಸುತ್ತದೆ. ಕೆಳಗಿನ ಕೋಷ್ಟಕ–29, 2002–08ರ ಅವಧಿಯ ಸಂಪನ್ಮೂಲ ಅಂತರವನ್ನು ಸೂಚಿಸುತ್ತದೆ.

**ಕೋಷ್ಟಕ 29**

(ಕೋಟಿ ರೂಪಾಯಿಗಳಲ್ಲಿ)

| ಅವಧಿ | ಏರಿಕೆ | | | | ಸಂಪನ್ಮೂಲ ಅಂತರ |
|---|---|---|---|---|---|
| | ಋಣವಲ್ಲದ ಜಮೆಗಳು | ಪ್ರಾಥಮಿಕ ವೆಚ್ಚ | ಬಡ್ಡಿ ಪಾವತಿ | ಒಟ್ಟು ವೆಚ್ಚ | |
| 1 | 2 | 3 | 4 | 5=(3+4) | 6=(2–5) |
| 2002–03 | 1,741 | –399 | 609 | 210 | 1,531 |
| 2003–04 | 3,727 | 2,052 | 418 | 2,470 | 1,257 |
| 2004–05 | 5,793 | 3,563 | 84 | 3,647 | 2,146 |
| 2005–06 | 3,859 | 3,138 | –29 | 3,109 | 750 |
| 2006–07 | 7,171 | 4,923 | 471 | 5,394 | 1,777 |
| 2007–08 | 3,802 | 3,670 | 270 | 3,940 | –138 |

2002–07ರ ಅವಧಿಯಲ್ಲಿ ರಾಜ್ಯವು ಧನಾತ್ಮಕ ಸಂಪನ್ಮೂಲ ಅಂತರವನ್ನು ನಿರ್ವಹಿಸಿದ್ದು (ಅಂತರ ವರ್ಷ ವ್ಯತ್ಯಯಗಳಿದ್ದರೂ) ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಸಹಿಷ್ಣುತೆಯಲ್ಲಿ ಪರ್ಯಾಪ್ತತೆಯನ್ನು ಸೂಚಿಸಿದೆ. ಆದರೆ ಹಿಂದಿನ ನಾಲ್ಕು ವರ್ಷಗಳಲಿ (2003–07) ಶೇಕಡ 23ಕ್ಕಿಂತ ಸ್ವಲ್ಪ ಹೆಚ್ಚಾಗಿದ್ದ ಸರಾಸರಿ ವೃದ್ಧಿಯ ದರಕ್ಕೆ ಹೋಲಿಸಿದರೆ, 2007–08ರಲ್ಲಿ ರಾಜಸ್ವ ಜಮೆಗಳು ಶೇಕಡ 9ರಷ್ಟು ಮಾತ್ರ ಹೆಚ್ಚಾಗಿವೆ. ಋಣವಲ್ಲದ ಜಮೆಗಳಲ್ಲಿ ಹಿಂದಿನ ವರ್ಷಕ್ಕಿಂತ 2007–08ರಲ್ಲಿ ರೂ.3,369 ಕೋಟಿಗಳ ಗಣನೀಯ ಇಳಿಕೆಯಾಗಿದ್ದು, ಹಿಂದಿನ ವರ್ಷಗಳಲ್ಲಿ ಧನಾತ್ಮಕವಾಗಿದ್ದ ಸಂಪನ್ಮೂಲ ಅಂತರವು ಈ ವರ್ಷದಲ್ಲಿ ಋಣಾತ್ಮಕ ಅಂತರವಾಗಿ ಬದಲಾಗಿದೆ. ಆದರೂ ಋಣಾತ್ಮಕ ಸಂಪನ್ಮೂಲ ಅಂತರವು ರೂ.138 ಕೋಟಿಗಳು ಮಾತ್ರವಿದ್ದು, ಇದು ರಾಜ್ಯದ ಋಣ ಸಹಿಷ್ಣುತೆಯ ಮೇಲೆ ಗಣನೀಯ ಪ್ರಭಾವವನ್ನು ಬೀರುವುದಿಲ್ಲ.

### 1.7.7 ಸಾಲಗಳ ನಿವ್ವಳ ಲಭ್ಯತೆ

ರಾಜ್ಯದ ಋಣ ಸಹಿಷ್ಣತೆಯು (i) ಒಟ್ಟು ಸಾಲ ಜಮೆಗಳಿಗೆ ಋಣ ವಿಮೋಚನೆಯ (ಅಸಲು + ಬಡ್ಡಿ ಪಾವತಿ) ಅನುಪಾತ ಮತ್ತು (ii)ಸಾಲವಾಗಿ ಪಡೆದ ಮೊತ್ತಗಳ ಉಪಯೋಗವನ್ನು ಆಧರಿಸಿದೆ. ಋಣ ವಿಮೋಚನೆ ಮತ್ತು ಋಣ ಜಮೆಗಳ ಅನುಪಾತವು ಋಣ ಜಮೆಗಳು ಎಷ್ಟರಮಟ್ಟಿಗೆ ಋಣ ವಿಮೋಚನೆಗೆ ಒಳಪಟ್ಟಿವೆ ಮತ್ತು ಸಾಲವಾಗಿ ಪಡೆದ ಮೊತ್ತಗಳ ನಿವ್ವಳ ಲಭ್ಯತೆ ಎಷ್ಟಿದೆ ಎಂಬುದನ್ನು ಸೂಚಿಸುತ್ತದೆ. ಸರ್ಕಾರದ ಋಣ ಸಮಸ್ಯೆಗೆ ಪರಿಹಾರವು ಸಾಲವಾಗಿ ಪಡೆದ ಮೊತ್ತಗಳ ಬಳಕೆಯಲ್ಲಿಯೇ ಅಡಗಿದೆ. ಅಂದರೆ, (ಅ) ಅವು ರಾಜಸ್ವ ವೆಚ್ಚಕ್ಕೆ ಉಪಯೋಗವಾಗಿಲ್ಲ ಮತ್ತು (ಆ) ಅವುಗಳನ್ನು ದಕ್ಷತೆಯಿಂದ ಮತ್ತು ಉತ್ಪಾದನಾತ್ಮಕವಾದ ಬಂಡವಾಳ ವೆಚ್ಚಕ್ಕೆ ಉಪಯೋಗಿಸಲಾಗಿದ್ದು, ಇವು ನೇರ ಪ್ರತಿಫಲವನ್ನು ನೀಡಲಿದೆ ಅಥವಾ ಸಾಮಾನ್ಯವಾಗಿಯೇ ಸರ್ಕಾರದ ಆದಾಯವನ್ನು ವೃದ್ಧಿಗೊಳಿಸುವ ಆರ್ಥಿಕ ಉತ್ಪಾದನೆಯಲ್ಲಿ ಹೆಚ್ಚಳವನ್ನು ಉಂಟು ಮಾಡಿದೆ ಎಂಬುದನ್ನು ಅವಲಂಬಿಸಿದೆ.

ಕೆಳಗಿನ ಕೋಷ್ಟಕ 30 ಕಳೆದ ಆರು ವರ್ಷಗಳಲ್ಲಿ ರಾಜ್ಯ ಸರ್ಕಾರದ ಆಂತರಿಕ ಋಣ ಮತ್ತು ಇತರ ವಿತ್ತೀಯ ಜವಾಬ್ದಾರಿಗಳ ಜಮೆ ಮತ್ತು ಮರುಪಾವತಿಗಳ ಸ್ಥಿತಿಯನ್ನು ನೀಡುತ್ತದೆ.

**ಕೋಷ್ಟಕ 30 : ಸಾಲ ನಿಧಿಗಳ ನಿವ್ವಳ ಲಭ್ಯತೆ**

**(ಕೋಟಿ ರೂಪಾಯಿಗಳಲ್ಲಿ)**

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| **ಆಂತರಿಕ ಋಣ^** | | | | | | |
| ಜಮೆಗಳು | 3,888.52 | 6,531.33 | 6,953.68 | 4,994.89 | 2,891.48 | 1472.55 |
| ಮರುಪಾವತಿ (ಅಸಲು + ಬಡ್ಡಿ) | 1,618.53 | 2,523.27 | 2,666.13 | 2,910.82 | 3,925.98 | 3902.66 |
| ನಿವ್ವಳ ಲಭ್ಯತೆ | 2,269.99 | 4,008.06 | 4,287.55 | 2,084.07 | –1,034.50 | –2430.11 |
| ನಿವ್ವಳ ಲಭ್ಯತೆ (ಶೇಕಡಾ) | 58 | 61 | 62 | 42 | --- | -- |
| **ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮತ್ತು ಮುಂಗಡಗಳು** | | | | | | |
| ಜಮೆಗಳು | 1,544.22 | 1,457.00 | 1,555.75 | 668.66 | 654.46 | 806.00 |
| ಮರುಪಾವತಿ (ಅಸಲು + ಬಡ್ಡಿ) | 2,932.84 | 4,196.92 | 4,703.74 | 1,132.66 | 1,491.41 | 1194.69 |
| ನಿವ್ವಳ ಲಭ್ಯತೆ | –1,388.62 | –2,739.92 | –3,147.99 | –464.00 | –836.95 | –388.69 |
| ನಿವ್ವಳ ಲಭ್ಯತೆ (ಶೇಕಡಾ) | – | – | – | – | --- | – |
| **ಇತರೆ ಜವಾಬ್ದಾರಿಗಳು** | | | | | | |
| ಜಮೆಗಳು | 15,077.11 | 16,426.71 | 19,227.98 | 18,806.35 | 22,435.86 | 22922.95 |
| ಮರುಪಾವತಿ (ಅಸಲು + ಬಡ್ಡಿ) | 14,582.31 | 16,671.81 | 19,188.30 | 18,895.15 | 19,354.70 | 22149.60 |
| ನಿವ್ವಳ ಲಭ್ಯತೆ | 494.80 | –245.10 | 39.68 | –88.80 | 3,081.16 | 773.35 |
| ನಿವ್ವಳ ಲಭ್ಯತೆ (ಶೇಕಡಾ) | 3 | – | 0.2 | – | 14 | 3 |
| **ಒಟ್ಟು ಜವಾಬ್ದಾರಿಗಳು** | | | | | | |
| ಜಮೆಗಳು | 20,509.85 | 24,415.04 | 27,737.41 | 24,469.90 | 25,981.80 | 25201.50 |
| ಮರುಪಾವತಿ (ಅಸಲು + ಬಡ್ಡಿ) | 19,133.68 | 23,392.06 | 26,558.17 | 22,938.63 | 24,772.09 | 27246.95 |
| ನಿವ್ವಳ ಲಭ್ಯತೆ | 1,376.17 | 1,023.04 | 1,179.24 | 1,531.27 | 1,209.71 | –2045.45 |
| ನಿವ್ವಳ ಲಭ್ಯತೆ (ಶೇಕಡಾ) | 7 | 4 | 4 | 6 | 5 | – |

^ ಇದರಲ್ಲಿ ರಿಸರ್ವ್ ಬ್ಯಾಂಕ್‌ನಿಂದ ಪಡೆದ ಅರ್ಥೋಪಾಯ ಮುಂಗಡ/ಓವರ್‌ಡ್ರಾಫ್ಟ್‌ಗಳು ಸೇರಿಲ್ಲ.

ಋಣ ವಿಮೋಚನಾ ಅನುಪಾತವು ಕಳೆದ ಐದು ವರ್ಷಗಳ ಅವಧಿಯಲ್ಲಿ ಮೊದಲ ಬಾರಿಗೆ 2007–08ರಲ್ಲಿ ಒಟ್ಟು ಜವಾಬ್ದಾರಿಗಳನ್ನು ಮೀರಿದ್ದು, ಪ್ರಸಕ್ತ ಸಾಲಿನಲ್ಲಿನ ಹೊಸ ಋಣ ಜಮೆಗಳಿಗಿಂತಲೂ ಹಳೆಯ ಋಣ ಜವಾಬ್ದಾರಿಗಳನ್ನು ತೀರಿಸಲು ಮಾಡಿದ ಮರುಪಾವತಿಗಳು ಗಣನೀಯವಾಗಿ ಹೆಚ್ಚಾಗಿದೆ. ಪ್ರಸಕ್ತ ಸಾಲಿನಲ್ಲಿ ಸರ್ಕಾರವು ರೂ.1,473 ಕೋಟಿಗಳ ಆಂತರಿಕ ಋಣ, ರೂ.806 ಕೋಟಿಗಳಷ್ಟು ಕೇಂದ್ರ ಸರ್ಕಾರದಿಂದ ಸಾಲ ಮತ್ತು ರೂ.22,923 ಕೋಟಿಗಳಷ್ಟು ಇತರ ಮೂಲಗಳ ಸಾಲಗಳನ್ನು ಪಡೆದಿದ್ದು ರೂ.3,903 ಕೋಟಿಗಳಷ್ಟು ಆಂತರಿಕ ಋಣ, ರೂ.1,195 ಕೋಟಿಗಳಷ್ಟು ಕೇಂದ್ರ ಸರ್ಕಾರದ ಸಾಲಗಳ ಮರುಪಾವತಿ ಮಾಡಿದ್ದು ರೂ.22,150 ಕೋಟಿಗಳಷ್ಟು ಇತರ ಜವಾಬ್ದಾರಿಗಳನ್ನು ಬಡ್ಡಿ ಸಮೇತ ತೀರಿಸಿದ್ದು, ಈ ವರ್ಷದಲ್ಲಿ ಋಣ ಜಮೆಗಳಲ್ಲಿ ರೂ.2045 ಕೋಟಿಗಳ ನಿವ್ವಳ ಇಳಿಕೆ ಕಂಡುಬಂದಿದೆ.

## 1.8 ಕೊರತೆಗಳ ನಿರ್ವಹಣೆ

### 1.8.1 ಕೊರತೆಗಳ ಪ್ರವೃತ್ತಿಗಳು

ಸರ್ಕಾರದ ಲೆಕ್ಕಗಳಲ್ಲಿನ ಕೊರತೆಗಳು, ಅದರ ಜಮೆಗಳು ಮತ್ತು ವೆಚ್ಚಗಳ ನಡುವಿನ ವ್ಯತ್ಯಾಸವನ್ನು ಸೂಚಿಸುತ್ತವೆ. ಈ ಕೊರತೆಯ ಸ್ವರೂಪವು ರಾಜ್ಯದ ಹಣಕಾಸು ನಿರ್ವಹಣೆಯ ವಿವೇಚನಾ ಸೂಚಕವಾಗಿದೆ. ಮುಂದುವರೆದು, ಈ ಕೊರತೆಗಳನ್ನು ತುಂಬಲು ಅನುಸರಿಸಿದ ಮಾರ್ಗಗಳು ಮತ್ತು ಹೀಗೆ ಸಂಗ್ರಹಿಸಿದ ಸಂಪನ್ಮೂಲಗಳನ್ನು ಅನ್ವಯಿಸಿದ ರೀತಿಗಳು ವಿತ್ತೀಯ ಸ್ವಾಸ್ಥ್ಯಕ್ಕೆ ಮುಖ್ಯ ಸೂಚಕಗಳಾಗಿವೆ. ಕೋಷ್ಟಕ 31ರಲ್ಲಿ ರಾಜ್ಯದ ವಿತ್ತೀಯ ಸಮತೆಯ ಸ್ಥಿತಿಯನ್ನು ಸೂಚಿಸುವ ಆರ್ಥಿಕ ಪ್ರಮಿತಿಗಳ ಪ್ರವೃತ್ತಿಗಳನ್ನು ನಿರೂಪಿಸಲಾಗಿದೆ.

**ಕೋಷ್ಟಕ 31 : ವಿತ್ತೀಯ ಅಸಮತೋಲನಗಳು – ಮೂಲ ಪ್ರಮಿತಿಗಳು**

(ಮೌಲ್ಯ ಕೋಟಿ ರೂಪಾಯಿಗಳಲ್ಲಿ ಮತ್ತು ಅನುಪಾತಗಳು ಶೇಕಡಾವಾರಿನಲ್ಲಿ)

| ಪ್ರಮಿತಿಗಳು | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| ರಾಜಸ್ವ ಕೊರತೆ (–)/ರಾಜಸ್ವ ಹೆಚ್ಚಳ (+) | –2,646 | –525 | 1,638 | 2,311 | 4,152 | 3,776 |
| ವಿತ್ತೀಯ ಕೊರತೆ | 5,282 | 4,501 | 3,600 | 3,687 | 4,688 | 5,332 |
| ಪ್ರಾಥಮಿಕ ಕೊರತೆ (–)/ಪ್ರಾಥಮಿಕ ಹೆಚ್ಚಳ (+) | –1,990 | –791 | 194 | 78 | –452 | –826 |
| ರಾಜಸ್ವ ಕೊರತೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 2.24 | 0.41 | --- | --- | --- | -- |
| ವಿತ್ತೀಯ ಕೊರತೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 4.50 | 3.50 | 2.40 | 2.20 | 2.50 | 2.50 |
| ಪ್ರಾಥಮಿಕ ಕೊರತೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 1.69 | 0.61 | 0.13 | 0.05 | 0.24 | 0.38 |
| ರಾಜಸ್ವ ಕೊರತೆ/ವಿತ್ತೀಯ ಕೊರತೆ | 50.1 | 11.7 | --- | --- | --- | -- |

ರಾಜಸ್ವ ಹೆಚ್ಚಳವು, ರಾಜಸ್ವ ವೆಚ್ಚಕ್ಕಿಂತ ರಾಜಸ್ವ ಜಮೆಗಳು ಅಧಿಕವಾಗಿರುವುದನ್ನು ಸೂಚಿಸುತ್ತದೆ. 2004–05ನೇ ಸಾಲಿನಿಂದ ರಾಜ್ಯ ಹಣಕಾಸು ಸ್ಥಿತಿಯು ರಾಜಸ್ವ ಹೆಚ್ಚಳವನ್ನು ತೋರಿಸಿದ್ದು, 2006–07ರಲ್ಲಿ ರೂ.1,638 ಕೋಟಿಯಿಂದ ರೂ.4,152 ಕೋಟಿಗೆ ಏರಿದ್ದು, 2007–08ರಲ್ಲಿ ರೂ.3,776 ಕೋಟಿಗೆ ಇಳಿದಿದೆ. ಪ್ರಸಕ್ತ ಸಾಲಿನಲ್ಲಿ ರಾಜಸ್ವ ಹೆಚ್ಚಳದಲ್ಲಿನ ಇಳಿಕೆಯು ರಾಜಸ್ವ ಜಮೆಗಳಲ್ಲಿನ ರೂ.3,564 ಕೋಟಿಗಳ ಹೆಚ್ಚಳಕ್ಕೆ (ಶೇಕಡ 9) ಪ್ರತಿಯಾಗಿ ರಾಜಸ್ವ ವೆಚ್ಚದಲ್ಲಿನ ರೂ.3,940 ಕೋಟಿಗಳ (ಶೇಕಡ 12) ಏರಿಕೆಯಿಂದ ಉಂಟಾಗಿದೆ. ರಾಜಸ್ವ ಜಮೆಗಳಲ್ಲಿ ಶೇಕಡ 70ಕ್ಕಿಂತಲೂ ಹೆಚ್ಚಿನ ಭಾಗ ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದ್ದು, ಹಿಂದಿನ ವರ್ಷದಲ್ಲಿ ಶೇಕಡ 22ರಷ್ಟಿದ್ದ ರಾಜ್ಯದ ಸ್ವಂತ ಸಂಪನ್ಮೂಲದ ವೃದ್ಧಿಯ ದರವು 2007–08ರಲ್ಲಿ ಸಾಪೇಕ್ಷವಾಗಿ ಶೇಕಡ 7ರಷ್ಟಾಗಿ (ಇದು ಮುಖ್ಯವಾಗಿ ತೆರಿಗೆಯೇತರ ಜಮೆಗಳಲ್ಲಿ ರೂ.741 ಕೋಟಿಗಳ ನಿಚ್ಚಳ ಇಳಿಕೆಯಿಂದಾಗಿದೆ), ಇದು ರಾಜಸ್ವ ಹೆಚ್ಚಳದಲ್ಲಿ ಹಿಂದಿನ ವರ್ಷಕ್ಕಿಂತ 2007–08ರಲ್ಲಿ ರೂ.376 ಕೋಟಿಗಳಷ್ಟು ಕಡಿಮೆಯಾಗಿ ಫಲಿತವಾಗಿದೆ.

2007–08ರಲ್ಲಿ ಋಣೇತರ ಬಂಡವಾಳ ಜಮೆಗಳಲ್ಲಿ ರೂ.238 ಕೋಟಿಗಳಷ್ಟು ಏರಿಕೆಯಿದ್ದರೂ ಬಂಡವಾಳ ವೆಚ್ಚದಲ್ಲಿ (ಸಾಲ ಮತ್ತು ಮುಂಗಡಗಳು ಸೇರಿದಂತೆ) ರೂ.506 ಕೋಟಿಗಳ ಏರಿಕೆ ಮತ್ತು ರಾಜಸ್ವ ಹೆಚ್ಚಳದಲ್ಲಿನ ಇಳಿಕೆಯಿಂದಾಗಿ ಹಿಂದಿನ ವರ್ಷಕ್ಕಿಂತಲೂ 2007–08ರಲ್ಲಿ ವಿತ್ತೀಯ ಕೊರತೆಯಲ್ಲಿ ರೂ.644 ಕೋಟಿಗಳ ಏರಿಕೆಯಾಗಿದೆ. ವಿತ್ತಿಯ ಕೊರತೆಯಲ್ಲಿನ ಏರಿಕೆ ಮತ್ತು ಬಡ್ಡಿ ಪಾವತಿಯಲ್ಲಿನ ರೂ.270 ಕೋಟಿ ಏರಿಕೆಯು, ಪ್ರಾಥಮಿಕ ಕೊರತೆಯಲ್ಲಿನ ರೂ.374 ಕೋಟಿಗಳ ಏರಿಕೆಗೆ ಕಾರಣವಾಗಿದೆ.




## 1.8.2 ಕೊರತೆ/ಹೆಚ್ಚಳಗಳ ಗುಣಮಟ್ಟ

ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಗಳ ಅನುಪಾತ ಮತ್ತು ಪ್ರಾಥಮಿಕ ರಾಜಸ್ವ ಕೊರತೆ[9] ಮತ್ತು ಬಂಡವಾಳ ವೆಚ್ಚಗಳಾಗಿ (ಸಾಲ ಮತ್ತು ಮುಂಗಡಗಳೂ ಸೇರಿ) ಪ್ರಾಥಮಿಕ ಕೊರತೆಯ[10] ವಿಘಟನೆಯು ರಾಜ್ಯದ ಹಣಕಾಸಿನ ಕೊರತೆಗಳ ಗುಣಮಟ್ಟವನ್ನು ಸೂಚಿಸುತ್ತದೆ. ರಾಜಸ್ವ ಕೊರತೆಗೆ ವಿತ್ತೀಯ ಕೊರತೆಯ ಅನುಪಾತವು ಪ್ರಸಕ್ತ ಬಳಕೆಗೆ ಸಾಲವಾಗಿ ಪಡೆದ ಮೊತ್ತವು ಎಷ್ಟರಮಟ್ಟಿಗೆ ಉಪಯೋಗಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ. ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಗಳ ಅನುಪಾತವು 2001–02ರಲ್ಲಿ ಶೇಕಡ 56ರಷ್ಟಿದ್ದು 2003–04ರಲ್ಲಿ ಶೇಕಡ 12ಕ್ಕೆ ಇಳಿದು, ನಂತರ ರಾಜಸ್ವ ಲೆಕ್ಕಗಳು ಹೆಚ್ಚಳಕ್ಕೆ ತಿರುಗಿತ್ತು. ಈ ವಿಶ್ಲೇಷ ಪಥವು 2004–08ರ ಅವಧಿಯಲ್ಲಿ ಕೊರತೆಯ ಗುಣಮಟ್ಟದಲ್ಲಿ ಸ್ಥಿರವಾದ ಪ್ರಗತಿಯನ್ನು ತೋರಿಸಿದ್ದು, ಸಾಲವಾಗಿ ಪಡೆದ ಮೊತ್ತಗಳು ರಾಜ್ಯದ ಆಸ್ತಿ ನಿರ್ಮಿತಿಯ ವಿಸ್ತರಣೆಯ ಚಟುವಟಿಕೆಗಳಿಗೆ ಬಳಕೆಯಾಗಿರುವುದನ್ನು ಸೂಚಿಸುತ್ತದೆ. ಕೆಳಕಾಣಿಸಿದ ಕೋಷ್ಟಕ 32 2002–08ರ ಅವಧಿಯಲ್ಲಿ ಪ್ರಾಥಮಿಕ ಕೊರತೆ ಅಥವಾ ಹೆಚ್ಚಳಗಳಿಗೆ ಕಾರಣವಾದ ಅಂಶಗಳನ್ನು ವಿಂಗಡಿಸಿ ತೋರಿಸಿದೆ.

[9] ಪ್ರಾಥಮಿಕ ಕೊರತೆಯು ಬಡ್ಡಿ ಪಾವತಿಗಳ ನಿವ್ವಳ ವಿತ್ತೀಯ ಕೊರತೆಯಾಗಿ ನಿರೂಪಿಸಲಾಗಿದ್ದು, ಇದು ಹಾಲಿ ವರ್ಷದಲ್ಲಿನ ಹಣಕಾಸು ವ್ಯವಹಾರಗಳ ಫಲಿತವಾದ ಕೊರತೆಗಳ ಮಟ್ಟವನ್ನು ಸೂಚಿಸುತ್ತದೆ.

[10] ಪ್ರಾಥಮಿಕ ರಾಜಸ್ವ ಕೊರತೆಯು ರಾಜ್ಯದ ಬಡ್ಡಿಯೇತರ ರಾಜಸ್ವ ವೆಚ್ಚ ಮತ್ತು ಅದರ ಋಣೇತರ ಜಮೆಗಳ ನಡುವಿನ ಅಂತರವಾಗಿ ನಿರೂಪಿಸಲಾಗಿದ್ದು, ಇದು ರಾಜ್ಯದ ಋಣೇತರ ಜಮೆಗಳು, ರಾಜಸ್ವ ಲೆಕ್ಕದಡಿ ಮಾಡಿದ ಪ್ರಾಥಮಿಕ ವೆಚ್ಚಗಳನ್ನು ಭರಿಸಲು ಎಷ್ಟರಮಟ್ಟಿಗೆ ಬಳಕೆಯಾಗಿದೆ ಎಂಬುದನ್ನು ಸೂಚಿಸುತ್ತದೆ.

**ಕೋಷ್ಟಕ 32 : ಪ್ರಾಥಮಿಕ ಕೊರತೆ/ಹೆಚ್ಚಳ –ಅಂಶಗಳ ವಿಂಗಡಣೆ**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ಸಾಲವಲ್ಲದ ಜಮೆಗಳು | ಪ್ರಾಥಮಿಕ ರಾಜಸ್ವ ವೆಚ್ಚ | ಬಂಡವಾಳ ವೆಚ್ಚ | ಸಾಲಗಳು ಮತ್ತು ಮುಂಗಡಗಳು | ಪ್ರಾಥಮಿಕ ವೆಚ್ಚ | ಪ್ರಾಥಮಿಕ ರಾಜಸ್ವ ಕೊರತೆ (–)/ಹೆಚ್ಚಳ (+) | ಪ್ರಾಥಮಿಕ ಕೊರತೆ (–) ಹೆಚ್ಚಳ (+) |
|---|---|---|---|---|---|---|---|
| 1 | 2 | 3 | 4 | 5 | 6(3+4+5) | 7 (2–3) | 8 (2–6) |
| **2002–03** | 17,097 | 15,523 | 2,936 | 628 | 19,087 | 1,574 | –1,990 |
| **2003–04** | 20,824 | 17,575 | 3,029 | 1,011 | 21,615 | 3,249 | –791 |
| **2004–05** | 26,617 | 21,138 | 4,674 | 611 | 26,423 | 5,479 | 194 |
| **2005–06** | 30,476 | 24,276 | 5,822 | 300 | 30,398 | 6,200 | 78 |
| **2006–07** | 37,647 | 29,199 | 8,543 | 357 | 38,099 | 8,448 | –452 |
| **2007–08** | 41,449 | 32,869 | 8,649 | 757 | 42,275 | 8,580 | –826 |

2003–08ರ ಅವಧಿಯಲ್ಲಿ ರಾಜ್ಯದ ಪ್ರಾಥಮಿಕ ಕೊರತೆ ಅಥವಾ ಹೆಚ್ಚಳಕ್ಕೆ ಕಾರಣವಾದ ಅಂಶಗಳ ವಿಂಗಡಣೆಯು, ಈ ಅವಧಿಯುದ್ದಕ್ಕೂ ಪ್ರಾಥಮಿಕ ಕೊರತೆಗೆ ರಾಜ್ಯ ಸರ್ಕಾರವು ಮಾಡಿದ ಬಂಡವಾಳ ವೆಚ್ಚ ಮತ್ತು ವಿತರಿಸಿದ ಸಾಲ ಮತ್ತು ಮುಂಗಡಗಳು ಕಾರಣ ಎಂಬುದನ್ನು ಸ್ಪಷ್ಟಪಡಿಸಿದೆ. ಅಂದರೆ, ರಾಜ್ಯ ಋಣೇತರ ಜಮೆಗಳು, ರಾಜಸ್ವ ಲೆಕ್ಕದಲ್ಲಿನ ಪ್ರಾಥಮಿಕ ವೆಚ್ಚದ[11] ಅಗತ್ಯವನ್ನು ಭರಿಸಲು ಸಾಕಾದಷ್ಟಿತ್ತು. ಆದರೆ ಋಣೇತರ ಜಮೆಗಳ ಹೆಚ್ಚಳವು ಬಂಡವಾಳ ಲೆಕ್ಕದಡಿಯ ವೆಚ್ಚಗಳ ಅಗತ್ಯವನ್ನು ಭರಿಸಲು ಸಾಕಷ್ಟಿಲ್ಲದ ಕಾರಣ 2002–04 ಮತ್ತು 2006–08ರ ಎರಡು ಅವಧಿಗಳಲ್ಲಿ ಪ್ರಾಥಮಿಕ ಕೊರತೆ ಉಂಟಾಗಿತ್ತು. ಆದರೆ 2004–05 ಮತ್ತು 2005–06ನೇ ಸಾಲಿನಲ್ಲಿ ರಾಜಸ್ವ ಮತ್ತು ಬಂಡವಾಳ ಲೆಕ್ಕಗಳೆರಡರಲ್ಲೂ ಋಣೇತರ ಜಮೆಯು ವೆಚ್ಚದ ಅಗತ್ಯವನ್ನು ಭರಿಸಲು ಸಾಕಷ್ಟಿದ್ದುದರಿಂದ ಪ್ರಾಥಮಿಕ ಹೆಚ್ಚಳದಲ್ಲಿ ಫಲಿತವಾಗಿತ್ತು. ಈ ಪ್ರವೃತ್ತಿಗಳು ಹಿಂದಿನ ವರ್ಷಗಳಲ್ಲಿ ಬಂಡವಾಳ ವೆಚ್ಚದ ಏರಿಕೆಯು ಎಷ್ಟರ ಮಟ್ಟಿಗೆ ಪ್ರಾಥಮಿಕ ಕೊರತೆಗೆ ಕಾರಣವಾಗಿತ್ತೆಂಬುದನ್ನೂ ರಾಜ್ಯದ ಆರ್ಥಿಕ ಉತ್ಪಾದನಾ ಕ್ಷಮತೆಯನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸುವ ಅಗತ್ಯತೆಯನ್ನೂ ಸೂಚಿಸುತ್ತದೆ.

## 1.9 ವಿತ್ತೀಯ ಅನುಪಾತಗಳು

ರಾಜ್ಯದ ಹಣಕಾಸಿನ ವ್ಯವಸ್ಥೆಯು ಸಹಿಷ್ಣುತೆ, ನಮ್ಯತೆ ಮತ್ತು ಅಭೇದ್ಯತೆಗಳನ್ನು ಹೊಂದಿರಬೇಕು. 2002–08ರ ಅವಧಿಯಲ್ಲಿ ರಾಜ್ಯ ಸರ್ಕಾರದ ಹಣಕಾಸಿನ ಸಂಕ್ಷೇಪ ಸ್ಥಿತಿಯನ್ನು ಕೆಲವು ನಿರ್ದಿಷ್ಟ ಪ್ರಮುಖ ಸೂಚಕಗಳ ಹಿನ್ನೆಲೆಯಲ್ಲಿ, ಸಂಪನ್ಮೂಲಗಳ ಪರ್ಯಾಪ್ತತೆ, ಹಾಗೂ ಅವುಗಳ ಪರಿಣಾಮಕಾರಿ ಬಳಕೆ ಗಮನ ಹರಿಸಬೇಕಾದ ಪ್ರಮುಖ ಅಂಶಗಳು, ಮುಖ್ಯವಾದ ವಸ್ತುಸ್ಥಿತಿಗಳ ಪ್ರಸ್ತುತತೆಗಳನ್ನು ನಿರ್ಣಯಿಸಲು ಸಹಾಯವಾಗುವಂತೆ ಕೆಳಗೆ ಕಾಣಿಸಿರುವ ಕೋಷ್ಟಕ–33ರಲ್ಲಿ ನಿರೂಪಿಸಲಾಗಿದೆ.

**ಕೋಷ್ಟಕ 33 : ವಿತ್ತೀಯ ಸ್ವಾಸ್ಥ್ಯದ ಸೂಚಕಗಳು (ಶೇಕಡಾವಾರಿನಲ್ಲಿ)**

| ವಿತ್ತೀಯ ಅನುಪಾತಗಳು | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| **ಸಂಪನ್ಮೂಲ ಸಂಗ್ರಹಣೆ** | | | | | | |
| ರಾಜಸ್ವ ಜಮೆಗಳು/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 13.7 | 16.1 | 17.7 | 18.1 | 20.0 | 19.1 |
| ರಾಜಸ್ವ ಪ್ಲವನತೆ | 0.7 | 3.0 | 1.7 | 1.2 | 2.0 | 0.6 |
| ಸ್ವಂತ ತೆರಿಗೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 8.8 | 9.7 | 10.7 | 11.1 | 12.4 | 12.1 |
| **ವೆಚ್ಚ ನಿರ್ವಹಣೆ** | | | | | | |
| ಒಟ್ಟು ವೆಚ್ಚ/ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 19.0 | 19.6 | 20.2 | 20.3 | 22.5 | 21.7 |
| ರಾಜಸ್ವ ಜಮೆಗಳು/ಒಟ್ಟು ವೆಚ್ಚ | 72.2 | 82.0 | 87.9 | 88.8 | 88.8 | 88.0 |
| ರಾಜಸ್ವ ವೆಚ್ಚ/ಒಟ್ಟು ವೆಚ್ಚ | 84.1 | 84.0 | 82.5 | 82.1 | 79.0 | 79.9 |
| ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಲ್ಲಿನ ಸಂಬಳ ವೆಚ್ಚ/ ರಾಜಸ್ವ ವೆಚ್ಚ | 19.1 | 17.8 | 15.6 | 15.4 | 14.3 | 16.0 |
| ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಸಂಬಳೇತರ ವೆಚ್ಚ/ರಾಜಸ್ವ ವೆಚ್ಚ | 40.1 | 36.7 | 41.5 | 44.7 | 49.6 | 49.7 |
| ಬಂಡವಾಳ ವೆಚ್ಚ/ಒಟ್ಟು ವೆಚ್ಚ | 13.5 | 12.4 | 15.8 | 17.2 | 20.4 | 18.8 |
| ಸಾಮಾಜಿಕ ಮತ್ತು ಆರ್ಥಿಕ ವೆಚ್ಚಗಳಲ್ಲಿ ಬಂಡವಾಳ ವೆಚ್ಚ/ಒಟ್ಟು ವೆಚ್ಚ | 13.1 | 11.9 | 15.4 | 16.5 | 19.6 | 18.0 |
| ರಾಜಸ್ವ ಜಮೆಯೊಂದಿಗೆ ಒಟ್ಟು ವೆಚ್ಚದ ಪ್ಲವನತೆ | 1.0 | 0.5 | 0.7 | 0.9 | 1.0 | 1.2 |
| ರಾಜಸ್ವ ಜಮೆಯೊಂದಿಗೆ ರಾಜಸ್ವ ವೆಚ್ಚದ ಪ್ಲವನತೆ | 0.2 | 0.5 | 0.6 | 0.9 | 0.8 | 1.2 |

[11] ರಾಜ್ಯದ ಪ್ರಾಥಮಿಕ ರಾಜಸ್ವ ವೆಚ್ಚವನ್ನು ಬಡ್ಡಿಪಾವತಿ ನಿವ್ವಳ ಒಟ್ಟು ವೆಚ್ಚವನ್ನಾಗಿ ನಿರೂಪಿಸಬಹುದು. ಇದು ಪ್ರಸಕ್ತ ಸಾಲಿನಲ್ಲಿನ ವ್ಯವಹಾರಗಳ ಮೇಲಿನ ವೆಚ್ಚವನ್ನು ಸೂಚಿಸುತ್ತದೆ.

| ವಿತ್ತೀಯ ಅನುಪಾತಗಳು | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| **ವಿತ್ತೀಯ ಅಸಮತೆಗಳ ನಿರ್ವಹಣೆ** | | | | | | |
| ರಾಜಸ್ವ ಕೊರತೆ (–)/ ರಾಜಸ್ವ ಹೆಚ್ಚಳ (+) (ಕೋಟಿ ರೂಪಾಯಿಗಳಲ್ಲಿ) | –2,646 | –525 | 1,638 | 2,311 | 4,152 | 3776 |
| ವಿತ್ತೀಯ ಕೊರತೆ (ಕೋಟಿ ರೂಪಾಯಿಗಳಲ್ಲಿ) | 5,282 | 4,501 | 3,600 | 3,687 | 4,688 | 5,332 |
| ಪ್ರಾಥಮಿಕ ಕೊರತೆ (–)/ ಪ್ರಾಥಮಿಕ ಹೆಚ್ಚಳ (+) (ಕೋಟಿ ರೂಪಾಯಿಗಳಲ್ಲಿ) | –1,990 | –791 | 194 | 78 | –452 | –826 |
| ರಾಜಸ್ವ ಕೊರತೆ/ವಿತ್ತೀಯ ಕೊರತೆ | 50.1 | 11.7 | --- | --- | --- | -- |
| **ವಿತ್ತೀಯ ಹೊಣೆಗಳ ನಿರ್ವಹಣೆ** | | | | | | |
| ವಿತ್ತೀಯ ಜವಾಬ್ದಾರಿಗಳು/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 31.6 | 32.5 | 31.3 | 31.1 | 30.6 | 27.9 |
| ವಿತ್ತೀಯ ಜವಾಬ್ದಾರಿಗಳು/ರಾಜಸ್ವ ಜಮೆಗಳು | 230.3 | 202.1 | 176.7 | 172.1 | 153.5 | 146.1 |
| ರಾಜಸ್ವ ಜಮೆಗಳೊಂದಿಗೆ ವಿತ್ತೀಯ ಜವಾಬ್ದಾರಿಗಳ ಪ್ಲವನತೆ | 2.6 | 0.4 | 0.4 | 0.8 | 0.4 | 0.5 |
| ಸ್ವಂತ ಜಮೆಗಳೊಂದಿಗೆ ವಿತ್ತೀಯ ಜವಾಬ್ದಾರಿಗಳ ಪ್ಲವನತೆ | 2.0 | 0.4 | 0.4 | 1.2 | 0.5 | 0.6 |
| ಪ್ರಾಥಮಿಕ ಕೊರತೆಗೆ ಪರಸ್ಪರವಾಗಿ ಮೊತ್ತಗಳ ಹಂಚಿಕೆ | 3.34 | – 9.5 | – | – | – 0.18 | – 0.20 |
| ನಿವ್ವಳ ನಿಧಿಯ ಲಭ್ಯತೆ (ಶೇಕಡಾವಾರು) | 7 | 4 | 4 | 6 | 5 | – |
| ಹೂಡಿಕೆಗಳ ಮೇಲಿನ ಪ್ರತಿಫಲ (ಕೋಟಿ ರೂಪಾಯಿಗಳಲ್ಲಿ) | 21.3 | 18.0 | 16.7 | 16.9 | 19.5 | 23.4 |
| **ಇತರೆ ವಿತ್ತೀಯ ಸ್ವಾಸ್ಥ್ಯ ಸೂಚಕಗಳು** | | | | | | |
| ಪ್ರಸಕ್ತ ರಾಜಸ್ವದಲ್ಲಿನ ಉಳಿಕೆ (ಕೋಟಿ ರೂಪಾಯಿಗಳಲ್ಲಿ) | (–) 645 | 1,571 | 4,879 | 5,483 | 9,415 | 8,593 |
| ವಿತ್ತೀಯ ಆಸ್ತಿಗಳು/ಜವಾಬ್ದಾರಿಗಳು | 0.7 | 0.7 | 0.8 | 0.8 | 0.9 | 1.0 |

ರಾಜಸ್ವ ಜಮೆಗಳ ಮತ್ತು ರಾಜ್ಯದ ಸ್ವಂತ ತೆರಿಗೆಗಳಿಗೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತಗಳ ಪ್ರವೃತ್ತಿಗಳು ರಾಜ್ಯದ ಸಂಪನ್ಮೂಲಗಳ ಪರ್ಯಾಪ್ತತೆ ಮತ್ತು ಲಭ್ಯತೆಯನ್ನು ಸೂಚಿಸುತ್ತದೆ. ರಾಜಸ್ವ ಜಮೆಗಳು ತೆರಿಗೆ ಮತ್ತು ತೆರಿಗೆಯೇತರ ಆದಾಯಗಳಲ್ಲದೆ ಕೇಂದ್ರ ಸರ್ಕಾರದಿಂದ ಬಂದ ವರ್ಗಾವಣೆಗಳನ್ನು ಒಳಗೊಂಡಿದೆ. ರಾಜಸ್ವ ಜಮೆ–ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು 2002–09ರ ಅವಧಿಯಲ್ಲಿ ಏರುಮುಖವಾಗಿದ್ದು ಪ್ರಸಕ್ತ ಸಾಲಿನಲ್ಲಿ 2006–07ರಲ್ಲಿದ್ದ ಶೇಕಡ 20ಕ್ಕೆ ಹೋಲಿಸಿದರೆ ಸ್ವಲ್ಪ ಮಟ್ಟಿನ ಇಳಿಕೆಯನ್ನು ಕಂಡು ಶೇಕಡ 19ರಷ್ಟಿದೆ. ರಾಜಸ್ವ ಜಮೆಗಳ ಪ್ರವೃತ್ತಿಗಳ ಜೊತೆ ಜೊತೆಗೆ ಸ್ವಂತ ತೆರಿಗೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಏರುಮುಖವಾಗಿದ್ದು ಪ್ರಸಕ್ತ ಸಾಲಿನಲ್ಲಿ ಮಾತ್ರ ಸ್ವಲ್ಪ ಮಟ್ಟಿನ ಇಳಿಕೆಯನ್ನು ಕಂಡಿದೆ. 2007–08ರಲ್ಲಿನ ಶೇಕಡ 12ರಷ್ಟಿರುವ ಈ ಅನುಪಾತವು ಈ ವರ್ಷದ ಸರ್ಕಾರದ ಆಯವ್ಯಯ ಅಂದಾಜುಗಳ ಪೂರೈಕೆಯಾಗಿರುವುದು ಮಾತ್ರವಲ್ಲದೆ ಇದು ಪ್ರಸಕ್ತ ವರ್ಷದ ರಾಷ್ಟ್ರೀಯ ಸರಾಸರಿಗೆ ಸಮನಾಗಿದೆ.

ರಾಜ್ಯದ ವೆಚ್ಚ ನಿರ್ವಹಣೆಗೆ ಸಂಬಂಧಿಸಿದ ವಿವಿಧ ಅನುಪಾತಗಳು ಅದರ ವೆಚ್ಚದ ಗುಣಮಟ್ಟ ಮತ್ತು ಸಂಪನ್ಮೂಲ ಸಜ್ಜಿಕೆಯ ಪ್ರಯತ್ನಗಳಿಗೆ ಸಂಬಂಧಿಸಿದಂತೆ ಇವುಗಳ ಸಹಿಷ್ಣುತೆಯನ್ನು ಸೂಚಿಸುತ್ತದೆ. ರಾಜಸ್ವ ವೆಚ್ಚವು ಒಟ್ಟು ವೆಚ್ಚ ಪ್ರತಿಶತವಾಗಿ 2002–03ರಲ್ಲಿದ್ದ 84ರಿಂದ 2006–07ರಲ್ಲಿ 79ಕ್ಕೆ ಇಳಿದಿದ್ದು ಸತತ ಇಳಿಕೆಯ ಪ್ರವೃತ್ತಿಯನ್ನು ಸೂಚಿಸಿದ್ದು, 2007–08ರಲ್ಲಿ ಒಂದು ಪ್ರತಿಶತ ಹೆಚ್ಚಾಗಿದ್ದು ಇದು ಮುಖ್ಯವಾಗಿ ಸಾಲ ಮನ್ನಾ, ವೇತನ ಆಯೋಗದ ಅನುಷ್ಠಾನದಿಂದ ಸಂಬಳ–ನಿವೃತ್ತಿವೇತನಗಳಲ್ಲಿನ ಏರಿಕೆಯಿಂದ ಉಂಟಾಗಿದೆ. ಒಟ್ಟು ವೆಚ್ಚದ ಪ್ಲವನತೆಯ ಅನುಪಾತದ ಏರಿಕೆಯು ರಾಜಸ್ವ ಜಮೆ ಸಂಬಂಧಿಸಿದಂತೆ ರಾಜಸ್ವ ವೆಚ್ಚಕ್ಕೆ ಹೋಲಿಸಿದರೆ ರಾಜ್ಯ ಸರ್ಕಾರವು ಬಂಡವಾಳ ವೆಚ್ಚದ ಮೂಲಕ ಸ್ಥಿರಾಸ್ತಿಗಳ ನಿರ್ಮಿತಿಗೆ ಒಲವು ತೋರಿಸಿರುವುದು ಕಂಡುಬರುತ್ತದೆ. ರಾಜ್ಯದ ವೆಚ್ಚ ನಿರ್ವಹಣೆಗೆ ಸಂಬಂಧಿಸಿದ ಹಲವು ಅನುಪಾತಗಳು ವೆಚ್ಚದ ಗುಣಮಟ್ಟ ಮತ್ತು ಸಹಿಷ್ಣುತೆಗಳಲ್ಲಿ ಸಂಪನ್ಮೂಲ ಕ್ರೋಢೀಕರಣದ ಸಜ್ಜಿಕೆಗೆ ಸಂಬಂಧಿಸಿದಂತೆ ಉತ್ತಮ ಪ್ರಗತಿಯನ್ನು ಸೂಚಿಸಿವೆ. ಕಳೆದ ಮೂರು ವರ್ಷಗಳಲ್ಲಿ (2005–08) ಒಟ್ಟು ವೆಚ್ಚದ ಶೇಕಡ 88ರಷ್ಟು ಭಾಗವನ್ನು ಭರಿಸಲು ರಾಜಸ್ವ ಜಮೆಗಳನ್ನು ಅವಲಂಬಿಸಿರುವುದನ್ನು ನೋಡಿದಾಗ ಶೇಕಡ 12ರಷ್ಟು ವೆಚ್ಚವು ಮಾತ್ರ ಸಾಲದ ಮೂಲಕ ಪಡೆದ ಮೊತ್ತಗಳಲ್ಲಿ ಭರಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ. ಇದು ವಿತ್ತೀಯ ಜವಾಬ್ದಾರಿಗಳು–ರಾಜಸ್ವ ಜಮೆಗಳ ಅನುಪಾತದಲ್ಲಿನ ಇಳಿಕೆಯಲ್ಲಿ ಪ್ರತಿಫಲಿಸಿದೆ.

2007–08ರಲ್ಲಿ ಮುಂದುವರೆದ ರಾಜಸ್ವ ಹೆಚ್ಚಳ ಮತ್ತು ವಿತ್ತೀಯ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಮೂರಕ್ಕಿಂತಲೂ ಕೆಳಗೆ ನಿರ್ವಹಿಸುವುದರ ಜೊತೆಗೆ ನಿರಂತರ ಧನಾತ್ಮಕ ಪ್ರಸಕ್ತ ರಾಜಸ್ವದಲ್ಲಿನ ಉಳಿಕೆಯು ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿಯ ಸಹಿಷ್ಣುತೆಯನ್ನು ಸೂಚಿಸುತ್ತದೆ. ಇದರಿಂದಾಗಿ 2002–08ರ ಅವಧಿಯಲ್ಲಿ ರಾಜ್ಯದ ಸ್ಥಿರಾಸ್ತಿ ಬೆಂಬಲದ ವಿತ್ತೀಯ ಜವಾಬ್ದಾರಿಗಳು ಸತತವಾಗಿ ಪ್ರಗತಿಯಲ್ಲಿರುವುದು ಮತ್ತು ಸ್ಥಿರಾಸ್ತಿಗಳು 2007–08ರಲ್ಲಿ ಜವಾಬ್ದಾರಿಗಳಿಗೆ ಸಂಪೂರ್ಣವಾಗಿ ಸಮನಾಗಿರುವುದು ಕಂಡುಬಂದಿದೆ.

## 1.10 ನಿರ್ಣಯ

ರಾಜ್ಯವು ರಾಜಸ್ವ ಹೆಚ್ಚಳವನ್ನು ಮುಂದುವರೆಸಿಕೊಂಡು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಾಪೇಕ್ಷವಾಗಿ ವಿತ್ತೀಯ ಕೊರತೆಯನ್ನು ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ 2002ರಲ್ಲಿ ವಿಧಿಸಿದಂತೆ ಶೇಕಡ ಮೂರರ ಒಳಗೆ ಇಟ್ಟಿತ್ತು. ಆದರೆ ರಾಜ್ಯದ ಹಣಕಾಸು ಸ್ಥಿತಿಯನ್ನು ಕೊರತೆಯ ಸೂಚಕಗಳ ದೃಷ್ಟಿಯಲ್ಲಿ ನೋಡಿದಾಗ, 2007–08ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಂತೆ, ಕ್ಷೀಣತೆಯು ಕಂಡುಬಂದಿದ್ದು, ಇದು ರಾಜಸ್ವ ಹೆಚ್ಚಳದಲ್ಲಿನ ಇಳಿಕೆ ಮತ್ತು ವಿತ್ತೀಯ ಮತ್ತು ಪ್ರಾಥಮಿಕ ಕೊರತೆಗಳಲ್ಲಿನ ಏರಿಕೆಯಿಂದ ಉಂಟಾಗಿದೆ. ಪ್ರಸಕ್ತ ಸಾಲಿನ ಆರ್ಥಿಕ ನಿರ್ವಾಹದಲ್ಲಿನ ಇಳಿಕೆಯು ಪ್ರಾಥಮಿಕವಾಗಿ, ಕಳೆದ ವರ್ಷ ಶೇಕಡ 22ರಷ್ಟಿದ್ದ ವೃದ್ಧಿಯ ದರವು 2007–08ರಲ್ಲಿ ಶೇಕಡ 7ಕ್ಕೆ ಇಳಿದಿರುವುದರಿಂದ ಉಂಟಾಗಿ, ಇದು ಹಿಂದಿನ ವರ್ಷಕ್ಕಿಂತ ಈ ವರ್ಷ ತೆರಿಗೆಯೇತರ ಆದಾಯದಲ್ಲಿ ರೂ.741 ಕೋಟಿಗಳಷ್ಟು ಕಡಿಮೆಯಾಗಿರುವುದರಿಂದ ಉಂಟಾಗಿದೆ. ರಾಜ್ಯದ ವೆಚ್ಚದ ರೀತಿಯಲ್ಲಿ, ಒಟ್ಟು ವೆಚ್ಚದ ಶೇಕಡಾಂಶವಾಗಿ ರಾಜಸ್ವ ವೆಚ್ಚವು ಒಟ್ಟು ವೆಚ್ಚದ ಪ್ರಮುಖ ಭಾಗವಾಗಿ ಮುಂದುವರೆದಿದ್ದು, 2007–08ರಲ್ಲಿ ಒಟ್ಟು ವೆಚ್ಚದ ಶೇಕಡ 80ರಷ್ಟಿತ್ತು. ಅಲ್ಲದೆ ಯೋಜನೇತರ ರಾಜಸ್ವ ವೆಚ್ಚವು ರೂ.29,062 ಕೋಟಿಯಷ್ಟಾಗಿ ಇದು ಹನ್ನೆರಡನೇ ಹಣಕಾಸು ಆಯೋಗದ ಪ್ರಮಾಣಕ ಪ್ರಕ್ಷೇಪಣದ ರೂ.21,735 ಕೋಟಿಯನ್ನು ಮೀರಿದ್ದಿತು. ಅಲ್ಲದೆ ಯೋಜನೇತರ ವೆಚ್ಚದೊಳಗೆ ನಾಲ್ಕು ಅಂಗಗಳಾದ ಸಂಬಳ ವೆಚ್ಚ, ನಿವೃತ್ತಿವೇತನ ಜವಾಬ್ದಾರಿ, ಬಡ್ಡಿ ಪಾವತಿ ಮತ್ತು ಸಹಾಯಧನಗಳ ಪಾಲು ಯೋಜನೇತರ ರಾಜಸ್ವ ವೆಚ್ಚದ ಶೇಕಡ 73ರಷ್ಟನ್ನು ಆಕ್ರಮಿಸಿಕೊಂಡಿರುವುದನ್ನು ಸೂಚಿಸುತ್ತದೆ. ರಾಜ್ಯ ಸರ್ಕಾರವು ಕೆಲವು ನಿಗಮ/ಕಂಪನಿಗಳಿಗೆ ನೀಡಿದ್ದ ಖಾತರಿಗಳ ಹೊಣೆಗಾರಿಕೆಯಿಂದಾಗಿ, ಸರ್ಕಾರವು ಅವುಗಳ ಸಾಲಗಳ ತೀರಿಕೆಯನ್ನು ಆಯಾ ಕಂಪನಿಗಳಿಗೆ ಮತ್ತೆ ಸಾಲವಾಗಿ ಪರಿವರ್ತಿಸಿರುವುದು ಮತ್ತು ಕೆಲವು ವಿಶೇಷ ಉದ್ದೇಶ ಸಾಧನಗಳು ಮಾಡಿದ್ದ ಆಯವ್ಯಯದ ಹೊರಗಿನ ಹೊರಗಿನ ಸಾಲಗಳನ್ನು ಸರ್ಕಾರವೇ ಮರುಪಾವತಿ ಮಾಡಿದ್ದು ಅವುಗಳನ್ನು ಬಂಡವಾಳ ವೆಚ್ಚವಾಗಿ ಪರಿಭಾವಿಸಿರುವುದರಿಂದ ವೆಚ್ಚದ ಗುಣಮಟ್ಟವು ಕಳವಳಕಾರಿಯಾಗಿ ಮುಂದುವರೆದಿದೆ. ಆದರೆ ಬಂಡವಾಳ ವೆಚ್ಚದಲ್ಲಿ ಆಯವ್ಯಯ ಹೊರಗಿನ ಸಾಲಗಳ ತೀರಿಕೆಯ ಪಾಲು ಕಳೆದ ವರ್ಷ ಶೇಕಡ 28ರಷ್ಟಿದ್ದು ಈ ವರ್ಷ ಶೇಕಡ 17ಕ್ಕೆ ಇಳಿದಿದೆ. ಏರುತ್ತಿರುವ ವಿತ್ತೀಯ ಜವಾಬ್ದಾರಿಗಳು, ನಗಣ್ಯವಾದ ಪ್ರತಿಫಲ ದೊರಕಿಸುತ್ತಿರುವ ಸರ್ಕಾರದ ಬಂಡವಾಳ ಹೂಡಿಕೆಗಳು ಮತ್ತು ಸಾಲಗ ಮತ್ತು ಮುಂಗಡಗಳ ಮೇಲಿನ ಬಡ್ಡಿಯ ವಸೂಲಾತಿಯಲ್ಲಿನ ಅಪರ್ಯಾಪ್ತತೆಗಳು ರಾಜ್ಯದ ಮಧ್ಯಮಾವಧಿ–ದೀರ್ಘಾವಧಿ ಆಯವ್ಯಯಗಳನ್ನು ಒತ್ತಡಕ್ಕೆ ಸಿಲುಕಿಸುವುದರಿಂದ ಯೋಜನೇತರ ರಾಜಸ್ವ ವೆಚ್ಚಗಳನ್ನು ಕುಗ್ಗಿಸುವುದರೊಂದಿಗೆ ಮುಂಬರುವ ವರ್ಷಗಳಲ್ಲಿ ತೆರಿಗೆ ಮತ್ತು ತೆರಿಗೆಯೇತರ ಮೂಲಗಳ ಮೂಲಕ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

# ಅಧ್ಯಾಯ 2

## ಹಂಚಿಕೆಯಲ್ಲಿನ ಆದ್ಯತೆಗಳು ಮತ್ತು ಧನ ವಿನಿಯೋಗ

# ಅಧ್ಯಾಯ 2

# ಹಂಚಿಕೆಯಲ್ಲಿನ ಆದ್ಯತೆಗಳು ಮತ್ತು ಧನವಿನಿಯೋಗ

## 2.1 ಪರಿಚಯ

ವಾರ್ಷಿಕವಾಗಿ ಸಿದ್ಧಪಡಿಸಲಾಗುವ ಧನವಿನಿಯೋಗ ಲೆಕ್ಕಗಳು ಹಲವಾರು ನಿರ್ದಿಷ್ಟ ಸೇವೆಗಳ ಮೇಲಿನ ವೆಚ್ಚವನ್ನು (ಬಂಡವಾಳ ಮತ್ತು ರಾಜಸ್ವ) ಆಯವ್ಯಯದ ಧನವಿನಿಯೋಗ ಅಧಿನಿಯಮದಿಂದ ಅಧಿಕರಿಸಲ್ಪಟ್ಟವುಗಳಿಗೆ ಪ್ರಭೃತ ಮತ್ತು ಪುರಸ್ಕೃತ ಎರಡೂ ಬಾಬ್ತುಗಳ ಬಗ್ಗೆ ಮುಖಾಮುಖಿಯಾಗಿ ಸೂಚಿಸುತ್ತದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನಡೆಸಲ್ಪಡುವ ಧನವಿನಿಯೋಗದ ಲೆಕ್ಕಪರಿಶೋಧನೆಯು ವಿವಿಧ ಅನುದಾನಗಳಡಿಯಲ್ಲಿ ವಾಸ್ತವಿಕವಾಗಿ ಮಾಡಿದ ವೆಚ್ಚವು ಧನವಿನಿಯೋಗ ಅಧಿನಿಯಮದಡಿ ನೀಡಿದ ಅಧಿಕಾರದೊಳಗಿದೆಯೇ ಮತ್ತು ಸಂವಿಧಾನದ ಉಪಬಂಧಗಳಡಿಯಲ್ಲಿ ಪ್ರಭೃತಗೊಳಿಸಬೇಕಾದ ವೆಚ್ಚವನ್ನು ಹಾಗೆ ಪ್ರಭೃತಗೊಳಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಬಯಸುತ್ತದೆ. ಇದಲ್ಲದೆ ಹಾಗೆ ಮಾಡಿದ ವೆಚ್ಚವು ಕಾನೂನು, ಸುಸಂಬದ್ಧ ನಿಯಮಗಳು, ನಿಬಂಧನೆಗಳು ಮತ್ತು ಸೂಚನೆಗಳಿಗೆ ಅನುಗುಣವಾಗಿದೆಯೇ ಎಂಬುದನ್ನೂ ಸಹ ಖಚಿತಪಡಿಸಿಕೊಳ್ಳುತ್ತದೆ.

## 2.2 ಧನವಿನಿಯೋಗ ಲೆಕ್ಕಗಳ ಸಾರಾಂಶ

2007–08ರಲ್ಲಿ 29 ಅನುದಾನ/ವಿನಿಯೋಗಗಳಿಗೆ ಪ್ರತಿಯಾಗಿ ವಾಸ್ತವ ವೆಚ್ಚದ ಸಂಕ್ಷಿಪ್ತ ಸ್ಥಿತಿಯು ಈ ಕೆಳಗಿನಂತಿತ್ತು:

(ಕೋಟಿ ರೂಪಾಯಿಗಳಲ್ಲಿ)

| ವೆಚ್ಚದ ರೂಪ | | ಮೂಲ ಅನುದಾನ/ ವಿನಿಯೋಗ | ಪೂರಕ ಅನುದಾನ/ ವಿನಿಯೋಗ | ಒಟ್ಟು | ವಾಸ್ತವ ವೆಚ್ಚ | ಬಳಸದ ಅವಕಾಶ (–) /ಅವಕಾಶವನ್ನು ಮೀರಿದ ವೆಚ್ಚ (+) |
|---|---|---|---|---|---|---|
| ಪುರಸ್ಕೃತ | ರಾಜಸ್ವ | 3,4870.40 | 2,740.54 | 37,610.94 | 33,013.93 | (–)4,597.01 |
| | ಬಂಡವಾಳ | 9,115.48 | 2,217.76 | 11,333.24 | 8,805.81 | (–)2,527.43 |
| | ಸಾಲಗಳು ಮತ್ತು ಮುಂಗಡಗಳು | 646.35 | 302.18 | 948.53 | 756.74 | (–)191.79 |
| **ಒಟ್ಟು ಪುರಸ್ಕೃತ** | | **44,632.23** | **5,260.48** | **49,892.71** | **42,576.48** | **(–)7,316.23** |
| ಪ್ರಭೃತ | ರಾಜಸ್ವ | 4,891.40 | 5.57 | 4,896.97 | 4,581.75[1] | (–)315.22 |
| | ಬಂಡವಾಳ | --- | --- | --- | --- | --- |
| | ಸಾರ್ವಜನಿಕ ಋಣ | 2,649.47 | --- | 2,649.47 | 1,328.77 | (–)1,320.70 |
| **ಒಟ್ಟು ಪ್ರಭೃತ** | | **7,540.87** | **5.57** | **7,546.44** | **5,910.52** | **(–)1,635.92** |

ರೂ.8,952.14 ಕೋಟಿಯ[2] ಸಮಗ್ರ ಬಳಸದ ಅವಕಾಶವು ಮೂರು ಅನುದಾನಗಳು/ವಿನಿಯೋಗಗಳಲ್ಲಿ ಹೆಚ್ಚುವರಿ ವೆಚ್ಚವಾದ ರೂ.5.15 ಕೋಟಿಗಳಿಂದ ಭಾಗಶ: ಪ್ರತಿತೋಲನಗೊಂಡ 29 ಅನುದಾನಗಳು/ ವಿನಿಯೋಗಗಳಲ್ಲಿನ ರೂ.8,957.29 ಕೋಟಿಯ ಬಳಸದೇ ಉಳಿದ ಅವಕಾಶದಿಂದ ಉಂಟಾಯಿತು. (ವಿವರಗಳಿಗೆ 2006–07ರ ಧನವಿನಿಯೋಗ ಲೆಕ್ಕಗಳನ್ನು ನೋಡಿ). ಗಣನೀಯವಾದ ವ್ಯತ್ಯಾಸಗಳಿಗೆ ಕಾರಣಗಳನ್ನು ವಿವರಿಸಲು ವಿವರವಾದ ಧನವಿನಿಯೋಗ ಲೆಕ್ಕಗಳನ್ನು ನಿಯಂತ್ರಣಾಧಿಕಾರಿಗಳಿಗೆ ಕಳುಹಿಸಲಾಗಿದ್ದು ವಿವರಣೆಗಳು ಬಂದಿರುವುದಿಲ್ಲ (ನವೆಂಬರ್ 2008).

[1] ವೆಚ್ಚವು ಪ್ರಧಾನ ಶೀರ್ಷಿಕೆ '2014'ರಲ್ಲಿನ ಅವಕಾಶವು ಪ್ರಭೃತದ ಬದಲಿಗೆ ಪುರಸ್ಕೃತದಲ್ಲಿದ್ದ ರೂ.0.50 ಕೋಟಿಯನ್ನು ಹೊರತುಪಡಿಸಿದೆ

[2] ಒಟ್ಟಾರೆ ಬಳಸದ ಅವಕಾಶವನ್ನು ಒಟ್ಟಾರೆ ಅಂಕಿಗಳಿಗೆ ತಂದಿರುವುದರಿಂದ ಮೇಲಿನ ಕೋಷ್ಟಕದಿಂದ ರೂ.0.01 ಕೋಟಿಗಳಷ್ಟು ವ್ಯತ್ಯಾಸವಿದೆ

## 2.3 ಹಂಚಿಕೆಯ ಆದ್ಯತೆಗಳ ಪರಿಪಾಲನೆ

### 2.3.1 ಹಂಚಿಕೆಯ ಆದ್ಯತೆಗಳಿಗನುಗುಣವಾಗಿ ವಿನಿಯೋಗ

2007–08ರಲ್ಲಿನ ರೂ.8,957.29 ಕೋಟಿಗಳ ಒಟ್ಟು ಬಳಕೆಯಾಗದೆ ಉಳಿದ ಅವಕಾಶಗಳಲ್ಲಿ ರೂ.100 ಕೋಟಿಗಳಿಗಿಂತ ಹೆಚ್ಚಾಗಿ ಬಳಕೆಯಾಗದೆ ಉಳಿದ ಅವಕಾಶಗಳು 15 ಅನುದಾನ/ವಿನಿಯೋಗಗಳಲ್ಲಿ ಕಂಡುಬಂದಿತ್ತು. ಋಣ ಸೇವೆಗಳು, ನಗರಾಭಿವೃದ್ಧಿ, ಜಲ ಸಂಪನ್ಮೂಲಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮುಂತಾದ ಕ್ಷೇತ್ರಗಳಲ್ಲಿ ಅಧಿಕವಾದ, ಬಳಸದೆ ಉಳಿದ ಅವಕಾಶಗಳು ಕಂಡುಬಂದಿದ್ದು ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನ | ಒಟ್ಟು ಅವಕಾಶ | ವೆಚ್ಚ | ಬಳಕೆಯಾಗದೇ ಉಳಿದ ಅವಕಾಶ |
|---|---|---|---|---|
| 1 | 1–ಕೃಷಿ ಮತ್ತು ತೋಟಗಾರಿಕೆ | | | |
| | ರಾಜಸ್ವ – ಪುರಸ್ಕೃತ | 1,648.54 | 1,239.81 | 408.73 |
| 2 | 2–ಪಶು ಸಂಗೋಪನೆ ಮತ್ತು ಮೀನುಗಾರಿಕೆ | | | |
| | ರಾಜಸ್ವ–ಪುರಸ್ಕೃತ | 460.43 | 318.48 | 141.95 |
| 3 | 3–ಹಣಕಾಸು | | | |
| | ರಾಜಸ್ವ – ಪುರಸ್ಕೃತ | 4,207.57 | 3,979.04 | 228.53 |
| 4 | 7–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ | | | |
| | ಬಂಡವಾಳ – ಪುರಸ್ಕೃತ | 1,685.39 | 1,300.69 | 384.70 |
| | ಬಂಡವಾಳ – ಪುರಸ್ಕೃತ | 1,712.15 | 1,116.00 | 596.15 |
| 5 | 10–ಸಮಾಜ ಕಲ್ಯಾಣ | | | |
| | ರಾಜಸ್ವ–ಪುರಸ್ಕೃತ | 1,335.91 | 1,233.66 | 102.25 |
| 6 | 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | | | |
| | ರಾಜಸ್ವ – ಪುರಸ್ಕೃತ | 894.63 | 752.06 | 142.57 |
| 7 | 14–ಕಂದಾಯ | | | |
| | ರಾಜಸ್ವ–ಪುರಸ್ಕೃತ | 1,825.68 | 1,699.52 | 126.16 |
| | ಕಂದಾಯ–ಪುರಸ್ಕೃತ | 163.65 | 55.85 | 107.80 |
| 8 | 17– ಶಿಕ್ಷಣ | | | |
| | ರಾಜಸ್ವ – ಪುರಸ್ಕೃತ | 7,073.13 | 6,755.26 | 317.87 |
| 9 | 18–ವಾಣಿಜ್ಯ ಮತ್ತು ಕೈಗಾರಿಕೆ | | | |
| | ರಾಜಸ್ವ–ಪುರಸ್ಕೃತ | 1,369.12 | 1,072.15 | 296.97 |
| 10 | 19–ನಗರಾಭಿವೃದ್ಧಿ | | | |
| | ರಾಜಸ್ವ – ಪುರಸ್ಕೃತ | 4,192.00 | 2,997.05 | 1,194.95 |
| | ಬಂಡವಾಳ – ಪುರಸ್ಕೃತ | 726.38 | 571.05 | 155.33 |
| 11 | 20–ಲೋಕೋಪಯೋಗಿ ಕಾಮಗಾರಿಗಳು | | | |
| | ರಾಜಸ್ವ – ಪುರಸ್ಕೃತ | 1,555.42 | 1,211.17 | 344.25 |
| | ಬಂಡವಾಳ – ಪುರಸ್ಕೃತ | 1,960.97 | 1,743.25 | 217.72 |
| 12 | 21– ಜಲ ಸಂಪನ್ಮೂಲಗಳು | | | |
| | ಬಂಡವಾಳ – ಪುರಸ್ಕೃತ | 4,611.87 | 3,443.22 | 1,168.65 |
| 13 | 22–ಆರೋಗ್ಯ ಮತ್ತು ಕುಟುಂಬ ಕಲ್ಯಾಣ | | | |
| | ರಾಜಸ್ವ – ಪುರಸ್ಕೃತ | 1,663.58 | 1,419.83 | 243.75 |
| 14 | 26–ಯೋಜನೆ, ಸಂಖ್ಯಾಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ | | | |
| | ರಾಜಸ್ವ – ಪ್ರಭೃತ | 602.89 | 424.13 | 178.76 |
| 15 | 29– ಋಣ ಸೇವೆಗಳು | | | |
| | ರಾಜಸ್ವ – ಪ್ರಭೃತ | 4,818.21 | 4,505.78 | 312.43 |
| | ಬಂಡವಾಳ – ಪ್ರಭೃತ | 2,649.47 | 1,328.77 | 1,320.70 |
| | **ಒಟ್ಟು** | 45,156.99 | 37,166.77 | 7,990.22 |

ಈ 15 ಅನುದಾನಗಳಲ್ಲಿ/ವಿನಿಯೋಗಗಳಲ್ಲಿನ ಯಾವ ಪ್ರಧಾನ ಶೀರ್ಷಿಕೆಗಳಡಿಯಲ್ಲಿ ಪ್ರಮುಖ ಭಾಗಗಳಲ್ಲಿ ಅವಕಾಶಗಳು ಬಳಕೆಯಾಗದೆ ಉಳಿದಿದೆ ಎಂಬ ವಿವರಗಳನ್ನು **ಅನುಬಂಧ 2.1**ರಲ್ಲಿ ನೀಡಲಾಗಿದೆ.

ಕೆಲವು ಪ್ರಧಾನ ಶೀರ್ಷಿಕೆಗಳಡಿಯಲ್ಲಿ ಬಳಕೆಯಾಗದೆ ಉಳಿದ ಅವಕಾಶಗಳಿಗೆ ಮೂರು ಇಲಾಖೆಗಳು ನೀಡಿರುವ ಕಾರಣಗಳನ್ನು ಕೆಳಗೆ ನೀಡಲಾಗಿದೆ.

**ನಗರಾಭಿವೃದ್ಧಿ ಇಲಾಖೆ**

- ಪ್ರಧಾನ ಶೀರ್ಷಿಕೆ '2217'ರಲ್ಲಿ ಯೋಜನೆಗಳಿಗೆ ಭಾರತ ಸರ್ಕಾರದಿಂದ ಅನುಮತಿ ದೊರೆಯುವಲ್ಲಿನ ವಿಳಂಬದಿಂದ ಮತ್ತು ಕೇಂದ್ರದ ಪಾಲಿನ ಕಡಿಮೆ ಬಿಡುಗಡೆಯಿಂದ ರೂ.821.44 ಕೋಟಿಗಳಷ್ಟು ಅವಕಾಶವು ಬಳಕೆಯಾಗಿರುವುದಿಲ್ಲ.

**ಜಲ ಸಂಪನ್ಮೂಲಗಳು**

- ಪ್ರಧಾನ ಶೀರ್ಷಿಕೆ '4702'ರಲ್ಲಿ ಪ್ರಧಾನ ಕಾಮಗಾರಿಗಳಿಗೆ ನಿಧಿಗಳನ್ನು ಬಳಸಿಕೊಳ್ಳದಿರುವುದರಿಂದ, ಪ್ರಧಾನ ಕಾಮಗಾರಿಗಳಿಗೆ ರಾಜ್ಯ ಸರ್ಕಾರದ ಅನುಮತಿ ದೊರೆಯದಿರುವುದರಿಂದ, ಟೆಂಡರ್‌ಗಳನ್ನು ಅಂತಿಮಗೊಳಿಸುವಲ್ಲಿನ ವಿಳಂಬ ಇತ್ಯಾದಿಗಳಿಂದ ರೂ.486.08 ಕೋಟಿ ಅವಕಾಶವು ಬಳಕೆಯಾಗಿರುವುದಿಲ್ಲ.

**ಋಣ ಸೇವೆಗಳು**

- ಪ್ರಧಾನ ಶೀರ್ಷಿಕೆ '2049'ರಲ್ಲಿ ಹಣಕಾಸು ಇಲಾಖೆಯು ಅವಶ್ಯಕತೆಗಿಂತ ಹೆಚ್ಚಿನ ಅವಕಾಶವನ್ನು ಮಾಡಿದ್ದು ರೂ.198.51 ಕೋಟಿಯು ಬಳಸದ ಅವಕಾಶವಾಗುವುದರಲ್ಲಿ ಪರಿಣಮಿಸಿತು.

- ಪ್ರಧಾನ ಶೀರ್ಷಿಕೆ '6003'ರಲ್ಲಿ ನಗದು ಶಿಲ್ಕಿನ ಕೊರತೆಯಷ್ಟು ಮಾತ್ರ ವಿಶೇಷ ಅರ್ಥೋಪಾಯ ಮುಂಗಡಗಳ ಸೌಲಭ್ಯಗಳನ್ನು ಪಡೆದಿದ್ದರಿಂದ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ಓವರ್‌ಡ್ರಾಫ್ಟ್ ಸೌಲಭ್ಯದ ಬಳಕೆ ಮಾಡದಿದ್ದುದರಿಂದ ರೂ.1,271.87 ಕೋಟಿ ಅವಕಾಶವು ಬಳಕೆಯಾಗಿರುವುದಿಲ್ಲ.

**2.3.2** ಎಂಟು ಅನುದಾನಗಳ 55 ಪ್ರಕರಣಗಳಲ್ಲಿ (ರೂ.754.43 ಕೋಟಿಗಳು) ಸರ್ಕಾರದಿಂದ ಹಣ ಬಿಡುಗಡೆಯಾಗದಿದ್ದ/ಕಡಿಮೆ ಬಿಡುಗಡೆಯಾದ/ವಿಳಂಬವಾಗಿ ಬಿಡುಗಡೆಯಾದ ಕಾರಣದಿಂದ ಮತ್ತು ಸರ್ಕಾರದಿಂದ ಮಂಜೂರಾತಿ ಬರದಿದ್ದರಿಂದ/ತಡವಾಗಿ ಬಂದಿದ್ದರಿಂದ ಬಳಕೆಯಾಗದೆ ಉಳಿದ ಅವಕಾಶವಿತ್ತು (**ಅನುಬಂಧ 2.2**). ಇವುಗಳನ್ನು ಆರ್ಥಿಕ ವರ್ಷದ ಕೊನೆಯ ದಿನ ಅಧ್ಯರ್ಪಣೆ ಮಾಡಲಾಯಿತು.

### 2.3.3 ಸತತ ಬಳಕೆಯಾಗದೇ ಉಳಿದ ಅವಕಾಶಗಳು

ಹದಿನಾರು ಅನುದಾನಗಳಿಗೆ ಸಂಬಂಧಿಸಿದ 74 ಪ್ರಕರಣಗಳಲ್ಲಿ ರೂ.ಒಂದು ಕೋಟಿಗೆ ಮೀರಿದ ಅವಕಾಶಗಳು ಹಿಂದಿನ ಮೂರು ವರ್ಷಗಳಿಂದ ಸತತವಾಗಿ ಬಳಕೆಯಾಗದೇ ಉಳಿದಿದ್ದವು **(ಅನುಬಂಧ 2.3)**

### 2.3.4 ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ

ಸರ್ಕಾರವು ರೂಪಿಸಿರುವ ನಿಯಮಗಳಿಗೆ ಅನುಸಾರವಾಗಿ ಉಳಿತಾಯಗಳನ್ನು ನಿರೀಕ್ಷಿಸಿದಂತೆಲ್ಲಾ ಅವುಗಳನ್ನು ಪೂರ್ಣವಾಗಿ ಅಥವಾ ಭಾಗಶ: ಇಲಾಖೆಗಳು ಆರ್ಥಿಕ ಇಲಾಖೆಗೆ ಅಧ್ಯರ್ಪಣೆ ಮಾಡಬೇಕಾಗಿರುತ್ತದೆ. ಆದರೆ 28 ಅನುದಾನ/ವಿನಿಯೋಗಗಳಲ್ಲಿನ ರೂ.8,833.71 ಕೋಟಿಗಳಷ್ಟು[3] ಬಳಕೆಯಾಗದ ಅವಕಾಶಗಳಲ್ಲಿ ರೂ.2,693.14 ಕೋಟಿಗಳನ್ನು (ಶೇಕಡ 30) ಆರ್ಥಿಕ ವರ್ಷದ ಕೊನೆಯ ದಿನದಂದು ಅಧ್ಯರ್ಪಣೆ ಮಾಡಲಾಗಿತ್ತು. ರೂ.6,140.57 ಕೋಟಿಗಳು (ಶೇಕಡ 70) ಅಧ್ಯರ್ಪಣೆಯಾಗದೆ ಉಳಿದಿತ್ತು (**ಅನುಬಂಧ 2.4**).

[3] ಇದರಲ್ಲಿ ನಾಲ್ಕು ಅನುದಾನಗಳಲ್ಲಿ ಪೂರ್ಣವಾಗಿ ಅಧ್ಯರ್ಪಣೆಗೊಂಡ ರೂ.12.87 ಕೋಟಿಗಳು ಮತ್ತು ಎರಡು ಅನುದಾನದಲ್ಲಿ ಅಧಿಕವಾಗಿ ಅಧ್ಯರ್ಪಣೆಯಾದ ರೂ.110.71 ಕೋಟಿಗಳನ್ನು ಹೊರತುಪಡಿಸಿ

## 2.4 ಸಕ್ರಮೀಕರಣದ ಅಗತ್ಯವಿರುವ ಹೆಚ್ಚುವರಿ ವೆಚ್ಚ

**2.4.1** ಭಾರತ ಸಂವಿಧಾನದ 205ನೇ ಅನುಚ್ಛೇದದ ಮೇರೆಗೆ ಯಾವುದೇ ಅನುದಾನ/ವಿನಿಯೋಗದಲ್ಲಿನ ಅವಕಾಶವನ್ನು ಮೀರಿ ವೆಚ್ಚವಾದ ಮೊತ್ತವನ್ನು ರಾಜ್ಯ ಶಾಸಕಾಂಗದಿಂದ ಸಕ್ರಮೀಕರಿಸಿಕೊಳ್ಳಬೇಕಾದುದು ಕಡ್ಡಾಯವಾಗಿದೆ. ಆದರೆ, 1989–90ರಿಂದ 2006–07ರ ವರ್ಷಗಳಲ್ಲಿನ ರೂ.8,503.19 ಕೋಟಿಗಳಷ್ಟು ಅವಕಾಶವನ್ನು ಮೀರಿ ಆದ ವೆಚ್ಚಗಳು ಇದುವರೆಗೂ ಸಕ್ರಮಗೊಂಡಿರುವುದಿಲ್ಲ (ನವೆಂಬರ್ 2008) (**ಅನುಬಂಧ.2.5**).

**2.4.2** 2007–08ನೇ ಸಾಲಿನಲ್ಲಿ ಮೂರು ಅನುದಾನ/ವಿನಿಯೋಗಗಳಡಿಯಲ್ಲಿ ಸಕ್ರಮವಾಗ ಬೇಕಾಗಿದ್ದ ಅಧಿಕ ವೆಚ್ಚವಾದ ರೂ.5.15 ಕೋಟಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ:

(ಮೊತ್ತ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನ ಮತ್ತು ವಿಭಾಗ | ಅವಕಾಶ | ವೆಚ್ಚ | ಅಧಿಕ |
|---|---|---|---|---|
| 1 | ***4–ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ*** | | | |
| | ರಾಜಸ್ವ ಪ್ರಭೃತ | 59,05,96,000 | 59,07,37,713 | 1,41,713 |
| 2 | ***8–ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ*** | | | |
| | ರಾಜಸ್ವ ಪ್ರಭೃತ | 8,21,48,000 | 11,55,51,464 | 3,34,03,464 |
| | ಬಂಡವಾಳ ಪುರಸ್ಕೃತ | 5,53,75,000 | 6,60,89,515 | 1,07,14,515 |
| 3 | ***27–ಕಾನೂನು*** | | | |
| | ಬಂಡವಾಳ ಪುರಸ್ಕೃತ | 5,61,64,000 | 6,34,00,501 | 72,36,501 |
| | **ಒಟ್ಟು** | **78,42,83,000** | **83,57,79,193** | **5,14,96,193** |

'ಸಿವಿಲ್ ಮುಂಗಡಗಳು' ಅಡಿಯಲ್ಲಿ ಮಾಡಿದ್ದ ಹಿಂದಿನ ವರ್ಷಕ್ಕೆ ಸಂಬಂಧಿಸಿದ ವೆಚ್ಚವನ್ನು ಈ ಶೀರ್ಷಿಕೆಯಲ್ಲಿ ಮಾಡಿದ್ದು ಪ್ರಧಾನ ಶೀರ್ಷಿಕೆ '4406' ರಡಿಯಲ್ಲಿ ರೂ.1.14 ಕೋಟಿ ಅಧಿಕ ವೆಚ್ಚಕ್ಕೆ ಕಾರಣವೆಂದು ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯು ನೀಡಿದ ಕಾರಣವಾಗಿತ್ತು.

### 2.4.3 ಸತತ ಹೆಚ್ಚಳಗಳು

ಎಂಟು ಅನುದಾನಗಳ 26 ಪ್ರಕರಣಗಳಲ್ಲಿ ಕಳೆದ ಮೂರು ವರ್ಷಗಳಿಂದ ಸತತವಾಗಿ ಅವಕಾಶಕ್ಕಿಂತ ಹೆಚ್ಚಾಗಿ ವೆಚ್ಚವಾಗಿದೆ (**ಅನುಬಂಧ 2.6**).

## 2.5 ಅನಗತ್ಯ/ಸಾಕಷ್ಟಿಲ್ಲದ/ಅಧಿಕ ಪೂರಕ ಅಂದಾಜುಗಳು

ಪ್ರಸಕ್ತ ವರ್ಷದಲ್ಲಿ ಮಾಡಿದ ಪೂರಕ ಅವಕಾಶ (ರೂ.5,266.05 ಕೋಟಿ) ಮೂಲ ಅವಕಾಶದ (ರೂ.52,173.10 ಕೋಟಿ) ಶೇಕಡ 10ರಷ್ಟಿದ್ದು ಹಿಂದಿನ ವರ್ಷದಲ್ಲಿ ಇದು ಶೇಕಡ 16ರಷ್ಟಿತ್ತು.

**2.5.1** ಹನ್ನೆರಡು ಅನುದಾನ/ವಿನಿಯೋಗಗಳಲ್ಲಿ 21 ಸವಿವರ/ಉದ್ದೇಶಸೂಚಕ ಶೀರ್ಷಿಕೆಗಳಲ್ಲಿ ಮಾಡಿದ ರೂ.94.13 ಕೋಟಿಗಳ ಪೂರಕ ಅವಕಾಶವು ಅನಗತ್ಯವಾಗಿತ್ತು ಎಂಬುದು ಕಂಡುಬಂದಿತು (**ಅನುಬಂಧ 2.7**).

**2.5.2** ಏಳು ಅನುದಾನಗಳಿಗೆ ಸಂಬಂಧಿಸಿದ 11 ಸವಿವರ ಶೀರ್ಷಿಕೆಗಳಡಿಯಲ್ಲಿ ಪೂರಕ ಅವಕಾಶಗಳ ಮೂಲಕ ಪಡೆದ ರೂ.44.06 ಕೋಟಿಗಳು ಸಾಕಷ್ಟಿರಲಿಲ್ಲವಾಗಿ ರೂ.24.41 ಕೋಟಿಗಳಷ್ಟು ಅಧಿಕ ವೆಚ್ಚವನ್ನು ಹೊಂದಾಣಿಕೆ ನಡೆಸಿಲ್ಲದಿರುವುದು ಕಂಡುಬಂದಿದೆ (**ಅನುಬಂಧ 2.8**).

**2.5.3** ಹದಿನೈದು ಅನುದಾನ/ವಿನಿಯೋಗಗಳಲ್ಲಿನ 25 ಸವಿವರ ಶೀರ್ಷಿಕೆಗಳಡಿ ಪೂರಕ ಅನುದಾನಗಳ ಮೂಲಕ ಪಡೆದ ರೂ.416.20 ಕೋಟಿಗಳು ಅಗತ್ಯವಿದ್ದುದಕ್ಕಿಂತ ಹೆಚ್ಚಾಗಿದ್ದು ರೂ.150.74 ಕೋಟಿಗಳು ಬಳಕೆಯಾಗದೆ ಉಳಿಯುವುದರಲ್ಲಿ ಫಲಿತವಾಗಿತ್ತು (**ಅನುಬಂಧ 2.9**).

## 2.6 ನಿಧಿಗಳ ಪುನರ್ವಿನಿಯೋಗ

ವಿತರಣೆಗಾಗಿನ ಅನುದಾನ ಅಥವಾ ವಿನಿಯೋಗಗಳು ಆಯಾ ಲೆಕ್ಕಗಳಡಿಯಲ್ಲಿನ ಉಪಶೀರ್ಷಿಕೆ/ ಸವಿವರ ಶೀರ್ಷಿಕೆ/ಉದ್ದೇಶಸೂಚಕ ಶೀರ್ಷಿಕೆಗಳ ಪ್ರಕಾರ ಹಂಚಿಕೆಯಾಗಿರುತ್ತದೆ. ಸಕ್ಷಮ ಕಾರ್ಯಪಾಲಕ ಅಧಿಕಾರಿಗಳು ಅನುದಾನ ಅಥವಾ ವಿನಿಯೋಗದೊಳಗೆ ಸಂಬಂಧಿಸಿದ ಆರ್ಥಿಕ ವರ್ಷದ ಅಂತ್ಯದೊಳಗೆ ಆಯಾ ಅನುದಾನ ಅಥವಾ ವಿನಿಯೋಗಗಳ ಒಳಗೆ ವಿನಿಯೋಗದ ಪ್ರಾಥಮಿಕ ಘಟಕಗಳ ನಡುವೆ ಮೊತ್ತಗಳ ಪುನರ್ವಿನಿಯೋಗಕ್ಕೆ ಅನುಮೋದನೆ ನೀಡಬಹುದಾಗಿದೆ. ಅನುದಾನದ ಯಾವ ಘಟಕದಿಂದ ಮೊತ್ತಗಳನ್ನು ವರ್ಗಾವಣೆ ಮಾಡಲಾಗುವುದೋ ಆ ಘಟಕದಲ್ಲಿ ಮೊತ್ತಗಳನ್ನು ಪೂರ್ಣವಾಗಿ ಬಳಸಿಕೊಳ್ಳುವುದಿಲ್ಲ ಅಥವಾ ಅದು ಉಳಿತಾಯದಲ್ಲಿ ಪರಿಣಮಿಸುತ್ತದೆ ಎಂದು ನಿರೀಕ್ಷಿಸಿದ್ದರೆ ಅಥವಾ ತಿಳಿದಿದ್ದರೇ ಮಾತ್ರ ಮೊತ್ತಗಳ ಪುನರ್ವಿನಿಯೋಗವನ್ನು ಮಾಡಬಹುದಾಗಿದೆ.

### 2.6.1 ನಿಧಿಗಳ ಅಯುಕ್ತ ಪುನರ್ವಿನಿಯೋಗ

ಐವತ್ತೆಂಟು ಪ್ರಕರಣಗಳಲ್ಲಿ, ಪುನರ್ವಿನಿಯೋಗವನ್ನು ಅಯುಕ್ತವಾಗಿ ಮಾಡಲಾಗಿದ್ದು, ಇವು ಅವಕಾಶಗಳು ಬಳಕೆಯಾಗದೇ ಉಳಿದುದರಲ್ಲಿ ಮತ್ತು ರೂ.0.25 ಕೋಟಿಗಳ ಅವಕಾಶವನ್ನು ಮೀರಿ ವೆಚ್ಚವಾಗಿರುವುದರಲ್ಲಿ ಫಲಿತವಾಗಿದೆ (**ಅನುಬಂಧ 2.10**). ಇವುಗಳಲ್ಲಿ:

- ಹನ್ನೊಂದು ಪ್ರಕರಣಗಳಲ್ಲಿ ಪುನರ್ವಿಯೋಗದ ಮೂಲಕ ಒದಗಿಸಿದ ರೂ.19.42 ಕೋಟಿಗಳಷ್ಟು ಹೆಚ್ಚುವರಿ ಮೊತ್ತವು, ಅಂತಿಮ ವೆಚ್ಚವು ಅವಕಾಶಕ್ಕಿಂತ ರೂ.9.23 ಕೋಟಿಗಳಷ್ಟು ಅಧಿಕವಾಗಿದ್ದರಿಂದ, ಸಾಕಷ್ಟಿರಲಿಲ್ಲವೆಂದು ಸಾಬೀತಾಯಿತು.

- ಇಪ್ಪತ್ತೊಂದು ಪ್ರಕರಣಗಳಲ್ಲಿ ರೂ.398.19 ಕೋಟಿಗಳನ್ನು ಪುನರ್ವಿನಿಯೋಗದ ಮೂಲಕ ಹಿಂತೆಗೆದಿದ್ದರೂ ಸಹ ರೂ.421.39 ಕೋಟಿಗಳು ಬಳಕೆಯಾಗದೇ ಉಳಿದಿದ್ದರಿಂದ ಬಳಕೆಯಾಗದೇ ಉಳಿದ ಅವಕಾಶಗಳನ್ನು ಸರಿಯಾಗಿ ನಿರ್ಧರಿಸಿರಲಿಲ್ಲ.

- ಇಪ್ಪತ್ತನಾಲ್ಕು ಪ್ರಕರಣಗಳಲ್ಲಿ ಪುನರ್ವಿನಿಯೋಗದ ಮೂಲಕ ಒದಗಿಸಲಾಗಿದ್ದ ರೂ.125.90 ಕೋಟಿಯಷ್ಟು ಹೆಚ್ಚುವರಿ ಮೊತ್ತದಲ್ಲಿ ರೂ.42.95 ಕೋಟಿಗಳು ಬಳಕೆಯಾಗದೇ ಉಳಿದಿತ್ತು ಮತ್ತು ಪುನರ್ವಿನಿಯೋಗವು ಅಧಿಕವಾಗಿತ್ತೆಂದು ಸಾಬೀತಾಯಿತು.

- ಎರಡು ಪ್ರಕರಣಗಳಲ್ಲಿ ಪುನರ್ವಿನಿಯೋಗದ ಮೂಲಕ ಹಿಂತೆಗೆದ ರೂ.7.62 ಕೋಟಿಗಳು, ಅಂತಿಮ ವೆಚ್ಚವು ನಿವ್ವಳ ಅವಕಾಶವನ್ನು ರೂ.5.37 ಕೋಟಿಗಳಷ್ಟು ಮೀರಿದ್ದರಿಂದ, ಅಯುಕ್ತ ಪುನರ್ವಿನಿಯೋಗದಲ್ಲಿ ಪರಿಣಮಿಸಿದವು.

### 2.6.2 ದೋಷಯುಕ್ತ ಪುನರ್ವಿನಿಯೋಗಗಳು

2007–08ರಲ್ಲಿ ರೂ.7,195.01 ಕೋಟಿ ಮೊತ್ತವನ್ನೊಳಗೊಂಡ 256 ಪುನರ್ವಿನಿಯೋಗದ ಆದೇಶಗಳನ್ನು ನೀಡಲಾಗಿದ್ದು ಇದರಲ್ಲಿ ರೂ.165.42 ಕೋಟಿ ಮೊತ್ತದ 44 ಪುನರ್ವಿನಿಯೋಗ ಆದೇಶಗಳನ್ನು ಲೆಕ್ಕಗಳಲ್ಲಿ ಪರಿಗಣಿಸಲಾಗಿಲ್ಲ. ಈ ಆದೇಶಗಳು ಮಂಜೂರಾತಿಯ ಅಧಿಕಾರವನ್ನು ಮೀರಿದ, ಅಥವಾ ಹೊಸ ಸೇವೆಗಳಿಗೆ ಸಂಬಂಧಿಸಿದ್ದ ಪ್ರಕರಣಗಳಾಗಿದ್ದ ಅಥವಾ ಸಕ್ಷಮ ಅಧಿಕಾರಿಯ ಸಹಿಯಿಲ್ಲದ ಅಥವಾ ಹಣಕಾಸು ಇಲಾಖೆಯ ಪೂರ್ವಾನುಮತಿ ಇಲ್ಲದೆ ಹೊರಡಿಸಿದ ಆದೇಶಗಳಾಗಿದ್ದವು. ಕೆಲವು ದೃಷ್ಟಾಂತಗಳನ್ನು **ಅನುಬಂಧ 2.11**ರಲ್ಲಿ ನೀಡಲಾಗಿದೆ.

## 2.7 ಹೊಂದಾಣಿಕೆ ಮಾಡದಿರುವ ವೆಚ್ಚಗಳು

ಇಲಾಖಾ ಅಧಿಕಾರಿಗಳು ವೆಚ್ಚದ ಮೇಲೆ ಸೂಕ್ತ ನಿಯಂತ್ರಣವನ್ನು ಸಾಧಿಸಲು ತಮ್ಮ ಲೆಕ್ಕಪುಸ್ತಕಗಳಲ್ಲಿ ದಾಖಲಿಸಿರುವ ವೆಚ್ಚವನ್ನು ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಇವರ ಪುಸ್ತಕಗಳಲ್ಲಿ ದಾಖಲಿಸಿರುವ ವೆಚ್ಚದ ಅಂಕಿಗಳೊಂದಿಗೆ ಹೊಂದಾಣಿಕೆ ಮಾಡಬೇಕೆಂದು ಸರ್ಕಾರದಿಂದ ಸ್ಥಾಯಿ ಸೂಚನೆಗಳನ್ನು ನೀಡಲಾಗಿದೆ.

2007–08ರಲ್ಲಿ 212 ಮುಖ್ಯ ನಿಯಂತ್ರಣಾಧಿಕಾರಿಗಳಲ್ಲಿ 36 ಅಧಿಕಾರಿಗಳು ರೂ.19,802.05 ಕೋಟಿಗಳಷ್ಟು ವೆಚ್ಚವನ್ನು (ತಾವು ಮಾಡಿರುವ ರೂ.46,023.71 ಕೋಟಿಯ ವೆಚ್ಚದ ಶೇಕಡ 43) ಹೊಂದಾಣಿಕೆ ಮಾಡಿರಲಿಲ್ಲ. ರೂ.756.74 ಕೋಟಿ ಸಾಲ ಮತ್ತು ಮುಂಗಡಗಳನ್ನು ಬಟವಾಡೆ ಮಾಡಿದ 23 ನಿಯಂತ್ರಣಾಧಿಕಾರಿಗಳು ವೆಚ್ಚದ ಅಂಕಿಗಳನ್ನು ಹೊಂದಾಣಿಕೆ ಮಾಡಿಲ್ಲ.

## 2.8 ಆಯವ್ಯಯದ ಅಂದಾಜುಗಳಲ್ಲಿನ ದೋಷಗಳು

ಮೂಲ ಅವಕಾಶಗಳನ್ನು ಮಾಡಿದ ಅನುದಾನದಿಂದ ಬೇರೆ ಅನುದಾನದಡಿಯಲ್ಲಿ ಪೂರಕ ಅವಕಾಶಗಳನ್ನು ಪಡೆದ ಕಾರಣದಿಂದಾದ ರೂ.32.87 ಕೋಟಿಗಳನ್ನೊಳಗೊಂಡ ಆಯವ್ಯಯ ಅಂದಾಜುಗಳಲ್ಲಿನ ದೋಷಗಳ ಹನ್ನೊಂದು ಪ್ರಕರಣಗಳನ್ನು ಗಮನಿಸಲಾಯಿತು.

ಇದಲ್ಲದೆ, ಎಂಟು ಪ್ರಕರಣಗಳಲ್ಲಿ ತಿದ್ದುಪಡಿ ಚೀಟಿಗಳನ್ನು ಗಣನೆಗೆ ತೆಗೆದುಕೊಂಡಿಲ್ಲದ ಕಾರಣ ರೂ.3,947.48 ಕೋಟಿಗಳನ್ನೊಳಗೊಂಡ ಆಯವ್ಯಯ ಅಂದಾಜುಗಳಲ್ಲಿನ ದೋಷಗಳನ್ನು ಗಮನಿಸಲಾಯಿತು (**ಅನುಬಂಧ 2.12**).

## 2.9 ವೆಚ್ಚದ ಒತ್ತಡ

ಹಣಕಾಸು ನಿಯಮಗಳು ವೆಚ್ಚಗಳನ್ನು ವರ್ಷಪೂರ್ತಿ ಸಮನಾಗಿ ಹಂಚಿಕೆ ಮಾಡಬೇಕೆಂದು ನಿರೀಕ್ಷಿಸುತ್ತವೆ. ವೆಚ್ಚದ ಒತ್ತಡವನ್ನು ವಿಶೇಷವಾಗಿ ಆರ್ಥಿಕ ವರ್ಷದ ಕೊನೆಯ ತಿಂಗಳುಗಳಲ್ಲಿ ಇಂತಹ ಒತ್ತಡವನ್ನು ಆರ್ಥಿಕ ನಿಯಮಗಳ ಉಲ್ಲಂಘನೆಯೆಂದು ಪರಿಗಣಿಸಲಾಗುತ್ತದೆ. **ಅನುಬಂಧ 2.13ರಲ್ಲಿ** ತೋರಿಸಿದಂತೆ ವರ್ಷದ ನಾಲ್ಕು ತ್ರೈಮಾಸಿಕಗಳಲ್ಲಿ ಮತ್ತು 2008ರ ಮಾರ್ಚ್ ತಿಂಗಳಿನಲ್ಲಿ ಮಾಡಿದ ವೆಚ್ಚದ ಸ್ಥಿತಿಯು, 17 ಪ್ರಕರಣಗಳಲ್ಲಿ ಮಾರ್ಚ್ 2008ರಲ್ಲಿ ಮಾಡಿದ ವೆಚ್ಚವೇ ವರ್ಷದ ಒಟ್ಟು ವೆಚ್ಚದ ಶೇಕಡ 32ರಿಂದ 94ರಷ್ಟು ಇದ್ದುದನ್ನು ವಿಶದಿಸುತ್ತದೆ.

## 2.10 ಹೊಸ ಸೇವೆ/ಹೊಸ ಸೇವಾ ಸಾಧನ

ವಾರ್ಷಿಕ ವಿತ್ತ ನಿರೂಪಣೆಯಲ್ಲಿ (ಆಯವ್ಯಯ) ಉದ್ದೇಶಿಸಿರದ ಹೊಸ ಸೇವೆಗಳ ಮೇಲಿನ ವೆಚ್ಚವನ್ನು ಶಾಸಕಾಂಗದ ನಿರ್ದಿಷ್ಟ ಅನುಮೋದನೆಯ ನಂತರವೇ ಮಾಡಬೇಕೆಂದು ಸಂವಿಧಾನದ 205ನೇ ಅನುಚ್ಛೇದವು ನಿಯಮಿಸುತ್ತದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಸರ್ಕಾರವು 'ಹೊಸ ಸೇವೆ', 'ಹೊಸ ಸೇವಾ ಸಾಧನ'ಗಳ ಬಾಬ್ತುಗಳನ್ನು ನಿರ್ಧರಿಸಲು ಅನುಸರಿಸಬೇಕಾದ ಹಲವಾರು ಮಾನದಂಡಗಳನ್ನು ವಿಧಿಸುವ ಆದೇಶಗಳನ್ನು ಹೊರಡಿಸಿದೆ. ಇನ್ನಿತರ ಅಂಶಗಳ ಜೊತೆಗೆ, ಇವು ಅನುದಾನ/ವಿನಿಯೋಗದ ಅವಕಾಶದ ಎರಡರಷ್ಟನ್ನು ಮೀರಿದ ವೆಚ್ಚ ಅಥವಾ ಒಂದು ಕೋಟಿ ರೂಪಾಯಿಗಳು, ಇವುಗಳಲ್ಲಿ ಯಾವುದು ಹೆಚ್ಚೋ ಅದನ್ನು ಮೀರಿದ ಬಾಬ್ತುಗಳನ್ನು 'ಹೊಸ ಸೇವೆ'ಯ ಒಂದು ಬಾಬ್ತು ಎಂದು ಪರಿಗಣಿಸಬೇಕು ಎಂದು ನಿಗದಿಪಡಿಸುತ್ತವೆ.

ಮೂರು ಅನುದಾನಗಳನ್ನೊಳಗೊಂಡ 15 ಪ್ರಕರಣಗಳಲ್ಲಿ, ರೂ.38.55 ಕೋಟಿಯ ಮೊತ್ತವಾಗುವ ವೆಚ್ಚವನ್ನು 'ಹೊಸ ಸೇವೆ/ಹೊಸ ಸೇವಾ ಸಾಧನ'ವೆಂದು ಪರಿಗಣಿಸಬೇಕಾಗಿದ್ದು ಆ ವೆಚ್ಚವನ್ನು ಶಾಸಕಾಂಗದ ಅನುಮೋದನೆಯಿಲ್ಲದೆ ಮಾಡಲಾಯಿತು (**ಅನುಬಂಧ 2.14**).

## 2.11 ಆಯವ್ಯಯ ಅವಕಾಶವಿಲ್ಲದ ವೆಚ್ಚ

ಆಯವ್ಯಯ ಕೈಪಿಡಿಯಲ್ಲಿ ನಿರ್ದೇಶಿಸಿರುವಂತೆ ಅವಕಾಶವನ್ನು ಮಾಡದ ಯಾವುದೇ ಯೋಜನೆ/ ಸೇವೆಗಳ ಮೇಲೆ ವೆಚ್ಚವನ್ನು ಮಾಡುವಂತಿಲ್ಲ. ಆದಾಗ್ಯೂ, ಪರೀಕ್ಷಾ–ತನಿಖೆಯಲ್ಲಿ ಕಂಡುಬಂದಂತೆ ಏಳು ಅನುದಾನಗಳ 10 ಪ್ರಕರಣಗಳಲ್ಲಿ ರೂ.16.58 ಕೋಟಿಗಳ ವೆಚ್ಚವನ್ನು ಮೂಲ ಅಥವಾ ಪೂರಕ ಅಂದಾಜುಗಳಲ್ಲಿ ಅವಕಾಶ ಇಲ್ಲದೆ ಮಾಡಲಾಗಿದೆ (**ಅನುಬಂಧ 2.15**).

## 2.12 ಸಾದಿಲ್ವಾರು ನಿಧಿ

ಭಾರತದ ಸಂವಿಧಾನದ ಅನುಚ್ಛೇದ 267(2) ಮತ್ತು 283(2)ರ ನಿಬಂಧನೆಗಳಡಿಯಲ್ಲಿ ರಾಜ್ಯ ಸರ್ಕಾರವು ಸಾದಿಲ್ವಾರು ನಿಧಿ ಅಧಿನಿಯಮ, 1957ರಡಿ ರಾಜ್ಯ ಸಾದಿಲ್ವಾರು ನಿಧಿಯನ್ನು ಸ್ಥಾಪಿಸಲಾಗಿದೆ. ಶಾಸನ ಸಭೆಯ ಅನುಮೋದನೆಯನ್ನು ಪಡೆಯುವವರೆಗೂ ಕಾಯಲು ಸಾಧ್ಯವಿಲ್ಲದ ಅನಿರೀಕ್ಷಿತ–ತಕ್ಷಣ ಸ್ವರೂಪದ ವೆಚ್ಚಗಳನ್ನು ಭರಿಸಲು ಮಾತ್ರ ಈ ನಿಧಿಯಿಂದ ಮುಂಗಡಗಳನ್ನು ಪಡೆಯಬಹುದಾಗಿದೆ. ಈ ನಿಧಿಯು ಮುಂಗಡ ಹಣದ ಸ್ವರೂಪದಲ್ಲಿದ್ದು, ಇದರ ಮೂಲಧನವು ರೂ.80 ಕೋಟಿಗಳಷ್ಟಿದೆ.

2007–08ರಲ್ಲಿ ರೂ.42.35 ಕೋಟಿ ಮೊತ್ತದ 20 ಮಂಜೂರಾತಿಗಳನ್ನು ಹೊರಡಿಸಲಾಗಿತ್ತು. ಸಾದಿಲ್ವಾರು ನಿಧಿಯ ಕಾರ್ಯಾಚರಣೆಯ ಸಮೀಕ್ಷೆಯು ಈ ಕೆಳಕಂಡವುಗಳನ್ನು ಬಹಿರಂಗಪಡಿಸಿತು:

- ನಾಲ್ಕು ಪ್ರಕರಣಗಳಲ್ಲಿ ಅಗತ್ಯವಾದ ಮೊತ್ತಕ್ಕಿಂತಲೂ ಹೆಚ್ಚಿನ ಮೊತ್ತದ ಮುಂಗಡಗಳಿಗೆ ಮಂಜೂರಾತಿಯನ್ನು ಪಡೆಯಲಾಗಿತ್ತು. ಈ ಪ್ರಸಂಗಗಳಲ್ಲಿ ತೆಗೆದ ಮೊತ್ತವು ಮಂಜೂರಾದ ಮೊತ್ತದ ಶೇಕಡ 12 ಮತ್ತು 79ರ ನಡುವೆ ಇದ್ದಿತು (**ಅನುಬಂಧ 2.16**).

## 2.13 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

### 2.13.1 ಪರಿಚಯ

1958ರ ಸಾದಿಲ್ವಾರು ವೆಚ್ಚ ಕೈಪಿಡಿಯು (ಕೈಪಿಡಿ) ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಗೆ (ಡಿಡಿಓ) ತಕ್ಷಣದ ಸಾದಿಲ್ವಾರು ವೆಚ್ಚಗಳಿಗೆ ಬೇಕಾದ ಮೊತ್ತಗಳನ್ನು, ಅವುಗಳಿಗೆ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ತಮ್ಮ ನಿಯಂತ್ರಣಾಧಿಕಾರಿಗಳಿಗೆ ಮೇಲು ಸಹಿ ಮಾಡಿ ಮಹಾಲೇಖಾಪಾಲರಿಗೆ (ಲೆಕ್ಕಗಳು ಮತ್ತು ಹಕ್ಕುದಾರಿ) ರವಾನೆ ಮಾಡುವ ನಿಬಂಧನೆಗೊಳಪಟ್ಟು, ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣ ತೆಗೆಯಲು ಅನುಮತಿ ನೀಡಿದೆ. ನಿಯಂತ್ರಣಾಧಿಕಾರಿಗಳು ತತ್‌ಕ್ಷಣದ ವಿತರಣೆಗೆ ಬೇಕಾದ ಹೊರತು ಹಣವನ್ನು ಖಜಾನೆಯಿಂದ ತೆಗೆದಿಲ್ಲವೆಂಬುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ.

2003–08ರ ಅವಧಿಯಲ್ಲಿ ಒಂಭತ್ತು[4] ಜಿಲ್ಲೆಗಳಲ್ಲಿನ ಐದು[5] ಇಲಾಖೆಗಳ 55 ಡಿಡಿಓಗಳ ರೂ.135.47 ಕೋಟಿ ಮೊತ್ತದ 10,930 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಮೀಕ್ಷೆಯನ್ನು ಲೆಕ್ಕಪರಿಶೋಧನೆಯು ಮಾರ್ಚ್–ಜೂನ್ 2008ರ ಅವಧಿಯಲ್ಲಿ ನಡೆಸಿತು. ಸಮೀಕ್ಷೆಯಲ್ಲಿ ಗಮನಿಸಿದ ಮುಖ್ಯ ಅಂಶಗಳನ್ನು ಕೆಳಗಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ.

### 2.13.2 ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸದಿರುವಿಕೆ/ವಿಳಂಬವಾಗಿ ಸಲ್ಲಿಸಿರುವಿಕೆ

ಕೈಪಿಡಿಯ ನಿಯಮ 37(3)ನೆಯ ಪ್ರಕಾರ ಡಿಡಿಓಗಳು ತಾವು ತೆಗೆದ ಸಾದಿಲ್ವಾರು ಬಿಲ್ಲುಗಳಿಗೆ ಸಂಬಂಧಿಸಿದ ಸವಿವರ ಬಿಲ್ಲುಗಳನ್ನು ತಮ್ಮ ನಿಯಂತ್ರಣಾಧಿಕಾರಿಗಳಿಗೆ ಮೇಲು ಸಹಿ ಮಾಡಲು ಸಾದಿಲ್ವಾರು ಬಿಲ್ಲುಗಳನ್ನು ತೆಗೆದ ತಿಂಗಳ ನಂತರದ ಮೊದಲ ವಾರದೊಳಗೆ ಕಳುಹಿಸಬೇಕಾಗಿದೆ. ನಿಯಂತ್ರಣಾಧಿಕಾರಿಗಳು ಈ ಬಿಲ್ಲುಗಳ ಮೇಲುಸಹಿಯ ನಂತರ ಅದೇ ತಿಂಗಳ 15ನೇ ತಾರೀಖಿನೊಳಗೆ ಮಹಾಲೇಖಪಾಲರಿಗೆ (ಲೆಕ್ಕ ಮತ್ತು ಹಕ್ಕುದಾರಿ) ಕಳುಹಿಸಬೇಕು.

---

[4] ಬೆಂಗಳೂರು (ನಗರ), ಬೆಂಗಳೂರು (ಗ್ರಾಮಾಂತರ), ಬಿಜಾಪುರ, ಚಿಕ್ಕಮಗಳೂರು, ಗುಲ್ಬರ್ಗ, ಕೋಲಾರ, ಮೈಸೂರು, ತುಮಕೂರು ಮತ್ತು ಉಡುಪಿ

[5] ಗೃಹ ಮತ್ತು ಸಾರಿಗೆ (ಪೊಲೀಸ್), ಕೃಷಿ (ಜಲಾನಯನ), ರೇಷ್ಮೆ (ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು), ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ವೈದ್ಯಕೀಯ ಶಿಕ್ಷಣ) ಮತ್ತು ವಾರ್ತಾ

ಜುಲೈ 2008ರಲ್ಲಿದ್ದಂತೆ, ಕೆಳಗೆ ವಿವರಿಸಿದಂತೆ, ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾ–ತನಿಖೆ ನಡೆಸಿದ 55ಡಿಡಿಓಗಳಲ್ಲಿ 15 ಡಿಡಿಓಗಳು 309 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೇಲೆ ತೆಗೆದ ರೂ.3.74 ಕೋಟಿಗಳಿಗೆ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ತಮ್ಮ ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸಿರಲಿಲ್ಲ.

(ಕೋಟಿ ರೂಪಾಯಿಗಳಲ್ಲಿ)

| ಇಲಾಖೆ | ಡಿಡಿಓಗಳ ಸಂಖ್ಯೆ | ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆ | ಮೊತ್ತ |
|---|---|---|---|
| ಗೃಹ ಮತ್ತು ಸಾರಿಗೆ (ಪೊಲೀಸ್) | 02 | 13 | 0.80 |
| ಕೃಷಿ (ಜಲಾನಯನ) | 04 | 169 | 1.06 |
| ರೇಷ್ಮೆ (ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು) | 01 | 2 | 0.02 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ವೈದ್ಯಕೀಯ ಶಿಕ್ಷಣ) | 04 | 48 | 1.73 |
| ವಾರ್ತಾ | 04 | 77 | 0.13 |
| ಒಟ್ಟು | 15 | 309 | 3.74 |

ಇದಲ್ಲದೆ, ಪರೀಕ್ಷಾ–ತನಿಖೆ ನಡೆಸಿದ ಇಲಾಖೆಗಳಲ್ಲಿ, 2003–08ರ ಅವಧಿಯಲ್ಲಿ 42 ಡಿಡಿಓಗಳು ತೆಗೆದ ರೂ.90.69 ಕೋಟಿಗಳ ಮೊತ್ತದ 4,534 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಮಹಾಲೇಖಾಪಾಲರಿಗೆ ಕಳುಹಿಸುವಲ್ಲಿ ಎರಡು ವರ್ಷಗಳವರೆಗಿನ ವಿಳಂಬಗಳು ಉಂಟಾಗಿದ್ದು, ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

(ಕೋಟಿ ರೂಪಾಯಿಗಳಲ್ಲಿ)

| ವಿಳಂಬ | ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆ | ಮೊತ್ತ |
|---|---|---|
| ಒಂದು ತಿಂಗಳು | 1,426 | 16.36 |
| ಆರು ತಿಂಗಳುಗಳು | 2,317 | 59.29 |
| ಒಂದು ವರ್ಷ | 680 | 12.34 |
| ಎರಡು ವರ್ಷಗಳು | 111 | 2.70 |
| ಒಟ್ಟು | **4,534** | **90.69** |

ಇಲಾಖೆಗಳು ಆಡಳಿತಾತ್ಮಕ ಕಾರಣಗಳನ್ನು ವಿಳಂಬಕ್ಕೆ ಅಧ್ಯಾರೋಪಿಸಿದವು.

# ಅಧ್ಯಾಯ 3
# ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

- 3.1 ಕರ್ನಾಟಕದಲ್ಲಿ ತ್ಯಾಜ್ಯ ನಿರ್ವಹಣೆ
- 3.2 ಪೊಲೀಸ್ ಇಲಾಖೆಯಲ್ಲಿ ಗಣಕೀಕರಣ
- 3.3 ಏತ ನೀರಾವರಿ ಯೋಜನೆಗಳು
- 3.4 ಕೃಷಿ ಸಾಲ ಮನ್ನಾ ಯೋಜನೆ ಮತ್ತು ಬಡ್ಡಿ ರಿಯಾಯಿತಿ ಯೋಜನೆಗಳು
- 3.5 ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ರ ನಿರ್ವಹಣೆ

# ಅಧ್ಯಾಯ 3

# ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

ಈ ಅಧ್ಯಾಯವು 'ಕರ್ನಾಟಕದಲ್ಲಿ ತ್ಯಾಜ್ಯ ನಿರ್ವಹಣೆ', 'ಪೊಲೀಸ್ ಇಲಾಖೆಯಲ್ಲಿ ಗಣಕೀಕರಣ' ಮತ್ತು 'ಏತ ನೀರಾವರಿ ಯೋಜನೆಗಳು' ಇವುಗಳ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಒಳಗೊಂಡಿದೆ. ಇದಲ್ಲದೆ, 'ಕೃಷಿ ಸಾಲ ಮನ್ನಾ ಯೋಜನೆ ಮತ್ತು ಬಡ್ಡಿ ರಿಯಾಯಿತಿ ಯೋಜನೆಗಳು', ಹಾಗೂ 'ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ರ ಕಾರ್ಯನಿರ್ವಹಣೆ' ಇವುಗಳ ಮೇಲಿನ ಎರಡು ದೀರ್ಘ ಕಂಡಿಕೆಗಳನ್ನು ಒಳಗೊಂಡಿದೆ.

## ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ನಗರಾಭಿವೃದ್ಧಿ ಇಲಾಖೆ<br>ಹಾಗೂ<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

## 3.1 ಕರ್ನಾಟಕದಲ್ಲಿ ತ್ಯಾಜ್ಯ ನಿರ್ವಹಣೆ

**ಮುಖ್ಯಾಂಶಗಳು**

***ಭಾರತ ಸರ್ಕಾರವು ಪರಿಸರ ಸಂರಕ್ಷಣೆ ಹಾಗೂ ಅದರ ಸುಧಾರಣೆಗಾಗಿ ಪೌರ ಘನತ್ಯಾಜ್ಯ ಮತ್ತು ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ನಿಯಂತ್ರಿಸಲು ಪರಿಸರ (ಸಂರಕ್ಷಣಾ) ಅಧಿನಿಯಮ, 1986ರ ಅಡಿಯಲ್ಲಿ ನಿಯಮಗಳನ್ನು ಜಾರಿಗೊಳಿಸಿತು (1998–2000). ಕಾರ್ಯಗತಗೊಳಿಸುವ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಆರೋಗ್ಯ ಪಾಲನಾ ಸಂಸ್ಥೆಗಳಿಂದ ಈ ನಿಯಮಗಳ ಜಾರಿಯಲ್ಲಿ ಉಂಟಾದ ಲೋಪದಿಂದಾಗಿ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಣಾಮಕಾರಿಯಲ್ಲದ ಮೇಲ್ವಿಚಾರಣೆಯ ಕಾರಣದಿಂದ ಪರಿಸರ ಮಾಲಿನ್ಯ ಮತ್ತು ತತ್ಸಂಬಂಧ ಆರೋಗ್ಯ ಹಾನಿಯ ಅಪಾಯಗಳು ಮುಂದುವರೆಯುವುದರಲ್ಲಿ ಪರಿಣಮಿಸಿತು.***

**ಮೂಲದಲ್ಲಿಯೇ ಪೌರ ಘನತ್ಯಾಜ್ಯವನ್ನು ಬೇರ್ಪಡಿಸಲು ಸಮುದಾಯದ ಸಹಭಾಗಿತ್ವವನ್ನು ಪಡೆಯುವಲ್ಲಿ ಹಾಗೂ ಈ ಕಾರ್ಯದಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ತೊಡಗಿಸುವಲ್ಲಿ ಇರಬೇಕಾಗಿದ್ದ ನಿರಂತರ ಪ್ರಯತ್ನಗಳ ಕೊರತೆಯಿಂದಾಗಿ ತ್ಯಾಜ್ಯ ವಸ್ತುಗಳ ಸಂಸ್ಕರಣೆ ಕಷ್ಟಕರವಾಯಿತು.**

**(ಕಂಡಿಕೆ : 3.1.7.3)**

**ನೆಲಭರ್ತಿ ಜಾಗಗಳ ಸ್ವಾಧೀನ, ಅವುಗಳ ಅಭಿವೃದ್ಧಿ ಹಾಗೂ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಬೇಕಾಗಿದ್ದ ಸಾಧನ–ಸಲಕರಣೆಗಳನ್ನು ಖರೀದಿಸುವಲ್ಲಿ ಉಂಟಾದ ವಿಳಂಬದಿಂದಾಗಿ ರೂ.85.63 ಕೋಟಿ ಮೊತ್ತವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖರ್ಚಾಗದೇ ಉಳಿಯಿತು.**

**(ಕಂಡಿಕೆ : 3.1.6)**

**ನೆಲಭರ್ತಿ ಜಾಗಗಳಲ್ಲಿನ ವೈಜ್ಞಾನಿಕ ಸಂಸ್ಕರಣಾ ಸೌಲಭ್ಯಗಳ ಕೊರತೆ ಮತ್ತು ಪೌರಾಡಳಿತ ನಿರ್ದೇಶಕರು ನಿಗದಿಪಡಿಸಿದ್ದ ಸಂಸ್ಕರಣಾ ವಿಧಾನಗಳನ್ನು ಪಾಲಿಸುವಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ವಿಫಲತೆಯು ಮಿಶ್ರ ತ್ಯಾಜ್ಯ ವಸ್ತುಗಳನ್ನು ಬಹಿರಂಗವಾಗಿ ಚೆಲ್ಲುವಲ್ಲಿ ಹಾಗೂ ಪರಿಸರ ಮಾಲಿನ್ಯಗೊಳಿಸುವಲ್ಲಿ ಪರಿಣಮಿಸಿತು.**

**(ಕಂಡಿಕೆಗಳು: 3.1.7.6 ಮತ್ತು 3.1.7.7)**

**ಸಂಸ್ಕರಿಸದ ಹಾಗೂ ಬೇರ್ಪಡಿಸದ ಘನತ್ಯಾಜ್ಯ ವಸ್ತುಗಳನ್ನು ಪರಿಸರ–ಸೂಕ್ಷ್ಮ ಅರಣ್ಯ ಪ್ರದೇಶದಲ್ಲಿ ವಿಲೇವಾರಿ ಮಾಡಿದ್ದು ವನ್ಯಜೀವಿಗಳನ್ನು ಅಪಾಯಕೊಡ್ಡಿತ್ತು.**

**(ಕಂಡಿಕೆ: 3.1.9.3)**

**ಐದು ಲಕ್ಷಕ್ಕೂ ಕಡಿಮೆ ಜನಸಂಖ್ಯೆ ಇರುವ ಸ್ಥಳಗಳಲ್ಲಿ ನೆಲಸಿದ್ದ ಆರೋಗ್ಯ ಪಾಲನಾ ಸಂಸ್ಥೆಗಳು ಜೈವಿಕ–ವೈದ್ಯಕೀಯ ತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಕಡೆಗಣಿಸಿ ಜೈವಿಕ–ವೈದ್ಯಕೀಯ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಿದ್ದು ಪರಿಸರ ಮಾಲಿನ್ಯವಾಗುವಲ್ಲಿ ಪರಿಣಮಿಸಿತು.**

**(ಕಂಡಿಕೆ 3.1.8.3)**

**ಬಳ್ಳಾರಿ ನಗರದಲ್ಲಿದ್ದ ಸಾಮಾನ್ಯ ಜೈವಿಕ–ವೈದ್ಯಕೀಯ ತ್ಯಾಜ್ಯಗಳ ಸಂಸ್ಕರಣೆ ಮತ್ತು ವಿಲೇವಾರಿ ಸಂಸ್ಥೆಯೊಂದು ತನಗೆ ಒಪ್ಪಿಸಿದ್ದ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ನಿಯಮಗಳಿಗನುಸಾರವಾಗಿ ನಿರ್ವಹಿಸದಿದ್ದುದು ಪರಿಸರ ಮಾಲಿನ್ಯವಾಗುವಲ್ಲಿ ಪರಿಣಮಿಸಿತು.**

**(ಕಂಡಿಕೆ : 3.1.8.4)**

**ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮೇಲ್ವಿಚಾರಣೆಯ ಅನುಪಸ್ಥಿತಿಯಲ್ಲಿ ಪೌರ ಘನತ್ಯಾಜ್ಯ ಹಾಗೂ ಜೈವಿಕ–ವೈದ್ಯಕೀಯ ತ್ಯಾಜ್ಯವಸ್ತುಗಳು ಅವೈಜ್ಞಾನಿಕ ರೀತಿಯಲ್ಲಿ ವಿಲೇವಾರಿಯಾಗಿ ಅದರಿಂದ ಸಾರ್ವಜನಿಕ ಆರೋಗ್ಯ ಹಾಗೂ ಜಲ ಸಂಪನ್ಮೂಲಗಳಿಗೆ ಅಪಾಯ ತಂದೊಡ್ಡಿದಂತಾಯಿತು.**

**(ಕಂಡಿಕೆಗಳು: 3.1.10.1 ಮತ್ತು 3.1.10.2)**

## 3.1.1 ಪರಿಚಯ

ಭಾರತ ಸರ್ಕಾರವು ಪರಿಸರ (ಸಂರಕ್ಷಣೆ) ಅಧಿನಿಯಮ, 1986ರ ಅಡಿ ತನಗೆ ಅನುಗ್ರಹಿತವಾದ ಅಧಿಕಾರವನ್ನು ಚಲಾಯಿಸಿ ಪೌರ ಘನತ್ಯಾಜ್ಯ ಹಾಗೂ ಜೈವಿಕ–ವೈದ್ಯಕೀಯ ತ್ಯಾಜ್ಯ ವಸ್ತುಗಳನ್ನು ನಿಯಂತ್ರಿಸಿ ತನ್ಮೂಲಕ ಪರಿಸರವನ್ನು ಸಂರಕ್ಷಿಸಿ ಸುಧಾರಿಸಲು ಹಾಗೂ ಮಾನವ ಮತ್ತು ಇತರೆ ಜೀವಿಗಳಿಗೆ ಅದರಿಂದ ಉಂಟಾಗುವ ಆರೋಗ್ಯ ಹಾನಿಗಳನ್ನು ತಡೆಗಟ್ಟಲು ಈ ಕೆಳಗಿನ ನಿಯಮಗಳನ್ನು ಜಾರಿಗೊಳಿಸಿತು:

- ಪೌರ ಘನತ್ಯಾಜ್ಯ (ವ್ಯವಸ್ಥೆ ಮತ್ತು ನಿರ್ವಹಣೆ) ನಿಯಮಗಳು, 2000
- ಜೈವಿಕ–ವೈದ್ಯಕೀಯ ತ್ಯಾಜ್ಯ (ವ್ಯವಸ್ಥೆ ಮತ್ತು ನಿರ್ವಹಣೆ) ನಿಯಮಗಳು, 1998

ಪೌರ ಘನತ್ಯಾಜ್ಯ ನಿಯಮಗಳು ಘನತ್ಯಾಜ್ಯಗಳ ಸಂಗ್ರಹಣೆ, ಬೇರ್ಪಡಿಸುವಿಕೆ, ಶೇಖರಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿ ಮಾಡುವ ಜವಾಬ್ದಾರಿಯುಳ್ಳ ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆಗೂ ಅನ್ವಯಿಸುತ್ತವೆ ಹಾಗೂ ಈ ನಿಯಮಗಳಡಿ ನಿಗದಿಪಡಿಸಿದ ಕಾರ್ಯಾನುಸೂಚಿಯ ಅನುಸಾರ ಅನುಪಾಲನೆಯನ್ನು ಮಾಡಬೇಕೆಂತಲೂ ವಿಧಿಸಿರುತ್ತವೆ. ಯಾವುದೇ ಸ್ವರೂಪದಲ್ಲಿರುವ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ಉತ್ಪಾದಿಸುವ, ಸ್ವೀಕರಿಸುವ, ಸಂಸ್ಕರಿಸುವ, ಸಂಗ್ರಹಿಸುವ, ಕೂಡಿಸುವ, ಸಾಗಿಸುವ ಮತ್ತು ವಿಲೇವಾರಿ/ನಿರ್ವಹಣೆ ಮಾಡುವ ಎಲ್ಲಾ ಆರೋಗ್ಯ ಪಾಲನಾ ಸಂಸ್ಥೆಗಳಿಗೆ ಜೈವಿಕ–ವೈದ್ಯಕೀಯ ತ್ಯಾಜ್ಯ (ವ್ಯವಸ್ಥೆ ಮತ್ತು ನಿರ್ವಹಣೆ) ನಿಯಮಗಳು ಅನ್ವಯಿಸಿದ್ದವು. ಜೈವಿಕ–ವೈದ್ಯಕೀಯ ತ್ಯಾಜ್ಯ ನಿಯಮಗಳಿಗನುಸಾರ ತ್ಯಾಜ್ಯಗಳನ್ನು ನಿರ್ವಹಣೆ ಮಾಡುವುದು ಮತ್ತು ಮಾನವನ ಆರೋಗ್ಯ ಹಾಗೂ ಪರಿಸರಕ್ಕೆ ಪ್ರತಿಕೂಲ ಪರಿಣಾಮವಾಗದಂತೆ ಖಚಿತಪಡಿಸಿಕೊಳ್ಳಲು ಬೇಕಾದ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುವುದು ಜೈವಿಕ–ವೈದ್ಯಕೀಯ ತ್ಯಾಜ್ಯಗಳ ಉತ್ಪಾದನೆ ಮಾಡುವ ಪ್ರತಿಯೊಂದು ಆರೋಗ್ಯ ಪಾಲನಾ ಸಂಸ್ಥೆಯ ಕರ್ತವ್ಯವಾಗಿರುತ್ತದೆ.

## 3.1.2 ಸಂಘಟನಾ ವ್ಯವಸ್ಥೆ

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮತ್ತು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ರಾಜ್ಯದಲ್ಲಿ ಉಳಿದ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳು ಪೌರ ಘನತ್ಯಾಜ್ಯ ನಿಯಮಗಳನ್ನು ಜಾರಿಗೊಳಿಸುವುದನ್ನು ಮೇಲುಸ್ತುವಾರಿ ಮಾಡಲು ಜವಾಬ್ದಾರರಾಗಿರುತ್ತಾರೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಜೈವಿಕ–ವೈದ್ಯಕೀಯ ತ್ಯಾಜ್ಯ ನಿಯಮಗಳಡಿ ಆರೋಗ್ಯ ಪಾಲನಾ ಸಂಸ್ಥೆಗಳಿಗೆ ಅಧಿಕಾರ ಪತ್ರ ನೀಡಿ ಅವುಗಳಿಂದ ನಿಯಮಗಳ ಅನುಪಾಲನೆಯನ್ನು ಮೇಲುಸ್ತುವಾರಿ ಮಾಡಲು ನಿಯಮಗಳಡಿ ನೇಮಿಸಿದ್ದ ಅಧಿಕಾರಿಯಾಗಿದ್ದರು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪೌರ ಘನತ್ಯಾಜ್ಯ ಹಾಗೂ ಜೈವಿಕ–ವೈದ್ಯಕೀಯ ತ್ಯಾಜ್ಯ ನಿಯಮಗಳ ಪರಿಣಾಮಕಾರಿ ಜಾರಿಯನ್ನು ಮೇಲುಸ್ತುವಾರಿ ಮಾಡುವ ಜವಾಬ್ದಾರಿಯನ್ನು ಹೊಂದಿತ್ತು.

### 3.1.3 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳುವುದು ಲೆಕ್ಕಪರಿಶೋಧನೆಯ ಉದ್ದೇಶಗಳಾಗಿದ್ದಿತು:

- ನಿಧಿ ಪೂರೈಕೆ ಹಾಗೂ ಮೂಲಭೂತ ಸೌಕರ್ಯಗಳು ನಿಯಮಗಳ ಪರಿಪಾಲನೆಗೆ ಸಾಕಷ್ಟಿತ್ತೇ ಮತ್ತು ನಿಧಿಯನ್ನು ಮಿತವಾಗಿ, ದಕ್ಷತೆಯಿಂದ ಹಾಗೂ ಪರಿಣಾಮಕಾರಿಯಾಗಿ ಉಪಯೋಗಿಸಲಾಯಿತೇ;
- ಪೌರ ಘನತ್ಯಾಜ್ಯ ಹಾಗೂ ಜೈವಿಕ–ವೈದ್ಯಕೀಯ ತ್ಯಾಜ್ಯ ವಸ್ತುಗಳಿಗೆ ಸಂಬಂಧಪಟ್ಟ ನಿಯಮಗಳ ಅನುಸರಣೆ ಆಗುತ್ತಿತ್ತೇ;
- ಅನುಷ್ಠಾನಗೊಳಿಸುವ ಏಜೆನ್ಸಿಗಳಿಂದ/ಜೈವಿಕ–ವೈದ್ಯಕೀಯ ತ್ಯಾಜ್ಯಗಳ ಉತ್ಪಾದಕರಿಂದಾದ ನಿಯಮ ಉಲ್ಲಂಘನೆಯನ್ನು ತನಿಖೆ ಮಾಡಲು ಮೇಲುಸ್ತುವಾರಿ ಸಂಯೋಜನೆಯು ಪರಿಣಾಮಕಾರಿಯಾಗಿತ್ತೇ; ಮತ್ತು
- ಸರ್ಕಾರವು ನಿಯಮ ಜಾರಿಯಿಂದಾದ ಪ್ರಭಾವ ಮೌಲ್ಯಮಾಪನ ಮಾಡಿತ್ತೇ.

### 3.1.4 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು 2003–08ರ ಅವಧಿಗೆ 2008ರ ಫೆಬ್ರವರಿ–ಜೂನ್ ಮಾಹೆಗಳ ನಡುವೆ ನಡೆಸಲಾಯಿತು. ನಗರಾಭಿವೃದ್ಧಿ ಇಲಾಖೆ, ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಇಲಾಖೆ, ಪೌರಾಡಳಿತ ನಿರ್ದೇಶಕರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ 50 ನಗರ ಸ್ಥಳೀಯ ಸಂಸ್ಥೆಗಳು[1] (**ಅನುಬಂಧ 3.1**), 220 ಆರೋಗ್ಯ ಪಾಲನಾ ಸಂಸ್ಥೆಗಳು, 12 ಜಿಲ್ಲೆಗಳಲ್ಲಿ[2] ಮಾಲಿನ್ಯ ನಿಯಂತ್ರಣ ಮಂಡಳಿಯ 14 ಪ್ರಾದೇಶಿಕ ಕಛೇರಿಗಳ ದಾಖಲೆಗಳನ್ನು ಬಹುಹಂತ ಸ್ತರೀಕೃತ ನಮೂನಾ ವಿಧಾನವನ್ನು ಅನುಸರಿಸಿ ಪರೀಕ್ಷಾ–ತನಿಖೆ ನಡೆಸಲಾಯಿತು ಮತ್ತು ಲೆಕ್ಕಪರಿಶೋಧನ ಜ್ಞಾಪನಾ ಪತ್ರಗಳು/ಪ್ರಶ್ನಾವಳಿಗಳಿಗೆ ಉತ್ತರಗಳನ್ನು ಪಡೆಯಲಾಯಿತು. ಇದಲ್ಲದೆ ಪರೀಕ್ಷಾ–ತನಿಖೆ ನಡೆಸಿದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ನೆಲಭರ್ತಿ ಜಾಗಗಳನ್ನು (ಲ್ಯಾಂಡ್ ಫಿಲ್ ಸೈಟ್ಸ್) ಮತ್ತು ಎಲ್ಲಾ 220 ಆರೋಗ್ಯ ಪಾಲನಾ ಸಂಸ್ಥೆಗಳ ಜೈವಿಕ–ವೈದ್ಯಕೀಯ ತ್ಯಾಜ್ಯಗಳ ಸಂಸ್ಕರಣೆ ಹಾಗೂ ವಿಲೇವಾರಿ ವ್ಯವಸ್ಥೆಗಳನ್ನು ಜಂಟಿಯಾಗಿ ಲೆಕ್ಕಪರಿಶೋಧನಾ ಅವಧಿಯಲ್ಲಿ ಪರಿವೀಕ್ಷಿಸಲಾಯಿತು. ಲೆಕ್ಕಪರಿಶೋಧನಾ ಉದ್ದೇಶಗಳನ್ನು ನಗರಾಭಿವೃದ್ಧಿ ಇಲಾಖೆ ಹಾಗೂ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಕಾರ್ಯದರ್ಶಿಗಳಿಗೆ ಏಪ್ರಿಲ್ 2008ರಲ್ಲಿ ಪ್ರತ್ಯೇಕವಾಗಿ ನಡೆಸಿದ ಆರಂಭಿಕ ಸಮಾಲೋಚನಾ ಸಭೆಗಳಲ್ಲಿ ವಿವರಿಸಲಾಯಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶಗಳನ್ನು ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಡನೆ 14 ನವೆಂಬರ್ 2008ರಂದು ನಡೆದ ನಿರ್ಗಮನ ಸಮಾಲೋಚನಾ ಸಭೆಯಲ್ಲಿ ಚರ್ಚಿಸಲಾಯಿತು. ಗಮನಿಸಿದ ಅಂಶಗಳು ಹಾಗೂ ಶಿಫಾರಸುಗಳನ್ನು ಪ್ರಧಾನ ಕಾರ್ಯದರ್ಶಿಯವರು ಒಪ್ಪಿಕೊಂಡಿದ್ದು ಅವುಗಳನ್ನು ಈ ಸಮೀಕ್ಷೆಯಲ್ಲಿ ಅಳವಡಿಸಲಾಗಿದೆ.

### 3.1.5 ಲೆಕ್ಕಪರಿಶೋಧನಾ ಮಾನದಂಡ

ಈ ಕೆಳಗಿನವುಗಳು ಲೆಕ್ಕಪರಿಶೋಧನಾ ಮಾನದಂಡಗಳಾಗಿದ್ದವು:

- ಪೌರ ಘನತ್ಯಾಜ್ಯ (ವ್ಯವಸ್ಥೆ ಮತ್ತು ನಿರ್ವಹಣೆ) ನಿಯಮಗಳು
- ಜೈವಿಕ–ವೈದ್ಯಕೀಯ ತ್ಯಾಜ್ಯ (ವ್ಯವಸ್ಥೆ ಮತ್ತು ನಿರ್ವಹಣೆ) ನಿಯಮಗಳು
- ಸರ್ಕಾರದ ಮತ್ತು ಪೌರಾಡಳಿತ ನಿರ್ದೇಶಕರ ಸುತ್ತೋಲೆ ಸೂಚನೆಗಳು
- ವಾರ್ಷಿಕ ವರದಿಗಳು ಮತ್ತು ಆಯವ್ಯಯ ದಾಖಲೆಗಳು

[1] ಒಂದು ನಗರ ಪಾಲಿಕೆ (ಬಿಬಿಎಮ್‌ಪಿ), ಏಳು ನಗರಸಭೆಗಳು, 15 ನಗರ ಪುರಸಭೆಗಳು, 20 ಪಟ್ಟಣ ಪುರಸಭೆಗಳು ಮತ್ತು ಏಳು ಪಟ್ಟಣ ಪಂಚಾಯತಿಗಳು

[2] ಬೆಂಗಳೂರು, ಬೆಳಗಾವಿ, ಬಾಗಲಕೋಟೆ, ಬಳ್ಳಾರಿ, ಹಾಸನ, ದಾವಣಗೆರೆ, ದಕ್ಷಿಣಕನ್ನಡ, ಧಾರವಾಡ, ಮೈಸೂರು, ಗುಲ್ಬರ್ಗ, ಉತ್ತರಕನ್ನಡ ಮತ್ತು ಉಡುಪಿ

## ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

### 3.1.6 ನಿಯಮಗಳ ಅನುಷ್ಠಾನಕ್ಕೆ ಹಣ ಬಳಕೆ

**ನೆಲಭರ್ತಿ ಜಾಗಗಳಲ್ಲಿನ ಅಭಿವೃದ್ಧಿಯಲ್ಲಿನ ಮತ್ತು ಸಾಧನ ಸಲಕರಣೆಗಳ ಖರೀದಿಯಲ್ಲಿನ ವಿಳಂಬಗಳಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ರೂ.85.63 ಕೋಟಿ ಬಳಕೆಯಾಗದೇ ಉಳಿದಿತ್ತು**

ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಭಾರತ ಸರ್ಕಾರವು ಹನ್ನೊಂದು ಮತ್ತು ಹನ್ನೆರಡನೇ ಹಣಕಾಸು ಆಯೋಗದ ಅನುದಾನಗಳಿಂದ ಹಣವನ್ನು 2003–08ರ ಅವಧಿಯಲ್ಲಿ ಒದಗಿಸಿತು. ಇದಲ್ಲದೆ 'ಕರ್ನಾಟಕ ನಗರಾಭಿವೃದ್ಧಿ ಹಾಗೂ ಕರಾವಳಿ ಪರಿಸರ ನಿರ್ವಹಣಾ ಯೋಜನೆ' (ಕುಡ್‌ಸೆಂಪ್) ಮತ್ತು 'ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ' (ಕೆಯುಐಡಿಪಿ) ಇವುಗಳಡಿಯಲ್ಲಿ ಏಷಿಯನ್ ಅಭಿವೃದ್ಧಿ ಬ್ಯಾಂಕ್ ಆರ್ಥಿಕ ನೆರವಿನಿಂದ ಆಯ್ದ ನಗರ ಸ್ಥಳೀಯ ಸಂಸ್ಥೆಗಳಿಗೆ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಇದೇ ಅವಧಿಯಲ್ಲಿ ಹಣವನ್ನು ಒದಗಿಸಲಾಯಿತು. ಆದರೆ ಜೈವಿಕ–ವೈದ್ಯಕೀಯ ತ್ಯಾಜ್ಯ ನಿಯಮಗಳ ಜಾರಿಗೆ ಯಾವುದೇ ಹಣವೂ ಬಿಡುಗಡೆಯಾಗಲಿಲ್ಲ.

2003–08ರ ಅವಧಿಯಲ್ಲಿ ರಾಜ್ಯದಲ್ಲಿ ಹಣಕಾಸು ಆಯೋಗ, ಕರ್ನಾಟಕ ನಗರಾಭಿವೃದ್ಧಿ ಹಾಗೂ ಕರಾವಳಿ ಪರಿಸರ ನಿರ್ವಹಣಾ ಯೋಜನೆ ಮತ್ತು ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ ಇವುಗಳಿಂದ ಪೌರ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಬಿಡುಗಡೆಯಾದ ಹಣದ ವಿವರಗಳು ಕೆಳಗಿನಂತಿವೆ:

**ಕೋಷ್ಟಕ 1: ನಗರ ಸ್ಥಳೀಯ ಸಂಸ್ಥೆಗಳಿಂದ ಹಣಕಾಸು ಆಯೋಗ ಅನುದಾನಗಳ ಬಳಕೆ**

(ಕೋಟಿ ರೂಪಾಯಿಗಳಲ್ಲಿ)

| | 2003–04 | | 2004–05 | | 2005–06 | | 2006–07 | | 2007–08 | | ಒಟ್ಟು | | |
|---|---|---|---|---|---|---|---|---|---|---|---|---|---|
| | ಬಿ | ವೆ | ಬಿ | ವೆ | ಬಿ | ವೆ | ಬಿ | ವೆ | ಬಿ | ವೆ | ಬಿ | ವೆ | ಉ |
| ಭೂ ಖರೀದಿ | 14.38 | 3.74 | 0.43 | 3.15 | 1.03 | 2.13 | 0.20 | 1.25 | 1.11 | 1.52 | 17.15 | 11.79 | 5.36 |
| ನೆಲಭರ್ತಿ ಜಾಗದ ಅಭಿವೃದ್ಧಿ | 0 | 0 | 0.13 | 0 | 24.41 | 8.17 | 8.43 | 6.15 | 16.92 | 5.95 | 49.89 | 20.27 | 29.62 |
| ಸಾಧನ ಸಲಕರಣೆಗಳು | 0.14 | 0 | 4.58 | 3.11 | 39.26 | 15.26 | 21.77 | 9.13 | 15.65 | 4.56 | 81.40 | 32.06 | 49.34 |
| ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ | 0 | 0 | 0.33 | 0.25 | 0.56 | 0.45 | 1.01 | 0.23 | 0.60 | 0.26 | 2.50 | 1.19 | 1.31 |
| **ಒಟ್ಟು** | **14.52** | **3.74** | **5.47** | **6.51** | **65.26** | **26.01** | **31.41** | **16.76** | **34.28** | **12.29** | **150.94** | **65.31** | **85.63** |

ಬಿ – ಬಿಡುಗಡೆಯಾದ ಹಣ; ವೆ – ವೆಚ್ಚವಾದ ಹಣ; ಉ – ಉಳಿಕೆ

ಕುಡ್‌ಸೆಂಪ್ ಯೋಜನೆಯಡಿ 10 ನಗರ ಸ್ಥಳೀಯ ಸಂಸ್ಥೆಗಳಿಗೆ[3] ಹಾಗೂ ಕೆಯುಐಡಿಪಿ ಯೋಜನೆಯಡಿ ನಾಲ್ಕು[4] ನಗರ ಸ್ಥಳೀಯ ಸಂಸ್ಥೆಗಳಿಗೆ ಕ್ರಮವಾಗಿ ಬಿಡುಗಡೆಯಾದ ರೂ.31.21 ಕೋಟಿ ಮತ್ತು ರೂ.7.44 ಕೋಟಿ ಹಣವನ್ನು ಈ ಸಂಸ್ಥೆಗಳು ಸಂಪೂರ್ಣವಾಗಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಉಪಯೋಗಿಸಿಕೊಂಡಿದ್ದವು (ಮಾರ್ಚ್ 2008).

**ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಣದ ಬಳಕೆಯು ಬಹಳ ಕಡಿಮೆಯಿದ್ದಿತು**

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಬಿಡುಗಡೆಯಾದ ಮತ್ತು ಅವುಗಳಿಂದ ಬಳಕೆಯಾದ ಹಣದ ವಿವರಗಳು ಈ ಕೆಳಕಂಡಂತ್ತಿತ್ತು:

**ಕೋಷ್ಟಕ 2: ಪರೀಕ್ಷಾ–ತನಿಖೆಗೆ ಒಳಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಬಳಸಿಕೊಂಡ ಹಣಕಾಸು ಆಯೋಗದ ಅನುದಾನದ ವಿವರಗಳು**

(ಕೋಟಿ ರೂಪಾಯಿಗಳಲ್ಲಿ)

| | ಬಿಡುಗಡೆಯಾದದ್ದು | ಬಳಕೆಯಾದದ್ದು | ಬಳಕೆಯಾಗದ ಉಳಿಕೆ |
|---|---|---|---|
| ಭೂ ಖರೀದಿ | 5.96 | 4.33 | 1.63 |
| ನೆಲಭರ್ತಿ ಜಾಗದ ಅಭಿವೃದ್ಧಿ | 16.02 | 6.45 | 9.57 |
| ಸಾಧನ ಸಲಕರಣೆಗಳು | 28.94 | 10.63 | 18.31 |
| ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ | 0.80 | 0.42 | 0.38 |
| **ಒಟ್ಟು** | **51.72** | **21.83** | **29.89** |

[3] ದಕ್ಷಿಣಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಮಂಗಳೂರು, ಉಡುಪಿ, ಕುಂದಾಪುರ, ಪುತ್ತೂರು, ಉಲ್ಲಾಳ, ಕಾರವಾರ, ಭಟ್ಕಳ, ಸಿರ್ಸಿ, ದಾಂಡೇಲಿ ಮತ್ತು ಅಂಕೋಲ

[4] ಮೈಸೂರು, ತುಮಕೂರು, ರಾಮನಗರ, ಚನ್ನಪಟ್ಟಣ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರವಾನಗಿ ಪತ್ರ ಪಡೆಯುವಲ್ಲಿನ ವಿಳಂಬವಲ್ಲದೆ ಸಾಧನ–ಸಲಕರಣೆಗಳ ಖರೀದಿ, ನೆಲಭರ್ತಿ ಜಾಗಗಳ ಅಭಿವೃದ್ಧಿ ಕಾಮಗಾರಿಗಳಿಗೆ ಗುತ್ತಿಗೆದಾರರ ನೇಮಕದಲ್ಲಾದ ವಿಳಂಬಗಳು ಮತ್ತು ಕಾಮಗಾರಿಗಳ ಮಂದಗತಿಯಿಂದಾಗಿ ಬಹಳಷ್ಟು ಹಣವು ಖರ್ಚಾಗದೇ ಉಳಿಯುವಂತಾಯಿತು.

## 3.1.7 ಪೌರ ಘನತ್ಯಾಜ್ಯ ವಸ್ತುಗಳ ನಿರ್ವಹಣೆ

### 3.1.7.1 ಪೌರ ಘನತ್ಯಾಜ್ಯ ವಸ್ತುಗಳ ಸಂಸ್ಕರಣೆ ಹಾಗೂ ವಿಲೇವಾರಿ ಸೌಲಭ್ಯಗಳನ್ನು ಸ್ಥಾಪಿಸುವಲ್ಲಿ ಉಂಟಾದ ಅತಿ ವಿಳಂಬ

**219 ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಕೇವಲ 189 ನಗರ ಸ್ಥಳೀಯ ಸಂಸ್ಥೆಗಳು ನೆಲಭರ್ತಿ ಜಾಗಗಳನ್ನು ಸ್ವಾಧೀನಪಡಿಸಿಕೊಂಡಿದ್ದವು ಮತ್ತು ಅವುಗಳಲ್ಲಿ 87 ನೆಲಭರ್ತಿ ಜಾಗಗಳನ್ನು ಇನ್ನೂ ಅಭಿವೃದ್ಧಿಗೊಳಿಸಿರಲಿಲ್ಲ**

ತ್ಯಾಜ್ಯ ವಸ್ತುಗಳ ಸಂಸ್ಕರಣೆ ಮತ್ತು ವಿಲೇವಾರಿ ಸೌಲಭ್ಯಗಳನ್ನು ಎಲ್ಲ ನಗರ ಸ್ಥಳೀಯ ಸಂಸ್ಥೆಗಳು 31 ಡಿಸೆಂಬರ್ 2003ರ ಒಳಗಾಗಿಯಾದರೂ ಸ್ಥಾಪಿಸಬೇಕೆಂದು ಪೌರ ಘನತ್ಯಾಜ್ಯ (ವ್ಯವಸ್ಥೆ ಮತ್ತು ನಿರ್ವಹಣೆ) ನಿಯಮಗಳು ವಿಧಿಸಿದ್ದವು. ರಾಜ್ಯದಲ್ಲಿನ 219 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 189 ಸ್ಥಳೀಯ ಸಂಸ್ಥೆಗಳು (ಶೇಕಡ 86) ಮಾತ್ರ 31 ಮಾರ್ಚ್ 2008ರ ವೇಳೆಗೆ ನೆಲಭರ್ತಿ ಜಾಗಗಳನ್ನು ಹೊಂದಿದ್ದವು. ಇವುಗಳಲ್ಲಿ 87 ಸ್ಥಳೀಯ ಸಂಸ್ಥೆಗಳ ನೆಲಭರ್ತಿ ಜಾಗಗಳು ಇನ್ನೂ ಅಭಿವೃದ್ಧಿಯಾಗಿ ಬಳಕೆಗೆ ಬರಬೇಕಿತ್ತು. ತತ್ಪರಿಣಾಮವಾಗಿ ಸಂಸ್ಕರಿಸದ ತ್ಯಾಜ್ಯ ವಸ್ತುಗಳನ್ನು ಈ ನಗರ ಸ್ಥಳೀಯ ಸಂಸ್ಥೆಗಳು ನೆಲಭರ್ತಿ ಜಾಗದಲ್ಲಿ ಅಥವಾ ಬಯಲು ಪ್ರದೇಶದಲ್ಲಿ ಸುರಿಯುತ್ತಿದ್ದು ಅದು ಅಂತರ್ಜಲ/ಮೇಲ್ಮೈ ಜಲ ಮತ್ತು ಸುತ್ತಲಿನ ಗಾಳಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತ್ತು. ಭೂ ವಿವಾದಗಳು ಮತ್ತು ವ್ಯಾಜ್ಯಗಳು, ನೆಲಭರ್ತಿ ಜಾಗಗಳ ಅಭಿವೃದ್ಧಿಗೆ ಗುತ್ತಿಗೆದಾರರನ್ನು ನೇಮಿಸುವಲ್ಲಿನ ವಿಳಂಬ ಹಾಗೂ ಈ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬಗಳಿಂದಾಗಿ ಸಂಸ್ಕರಣೆ ಮತ್ತು ವಿಲೇವಾರಿ ಸೌಕರ್ಯಗಳನ್ನು ಸ್ಥಾಪಿಸುವಲ್ಲಿ ವಿಳಂಬವಾಯಿತು ಎಂದು ಪೌರಾಡಳಿತ ನಿರ್ದೇಶಕರು ತಿಳಿಸಿದರು (ಮೇ 2008).

ಬೆಂಗಳೂರು ಮಹಾನಗರದಲ್ಲಿ ದಿನಂಪ್ರತಿ 3,000 ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು ಅದರಲ್ಲಿ ಕೇವಲ 600 ಟನ್ ಘನತ್ಯಾಜ್ಯವನ್ನು ಸಂಸ್ಕರಿಸುವಷ್ಟು (ಶೇಕಡ 20) ಸೌಕರ್ಯವನ್ನು ಮಾತ್ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಹೊಂದಿತ್ತು ಮತ್ತು ಉಳಿದ 2,400 ಟನ್ ತ್ಯಾಜ್ಯ ವಸ್ತುಗಳನ್ನು ಯಾವುದೇ ರೀತಿ ಸಂಸ್ಕರಣೆ ಮಾಡದೆ ಪರಿಸರ ಮಾಲಿನ್ಯವಾಗುವಂತೆ ಬಯಲು ಪ್ರದೇಶದಲ್ಲಿ ಅಥವಾ ಪರಿತ್ಯಜಿಸಲ್ಪಟ್ಟ ಕಲ್ಲುಗಣಿಗಳಲ್ಲಿ ಚೆಲ್ಲಲಾಗುತ್ತಿತ್ತು.

### 3.1.7.2 ನೆಲಭರ್ತಿ ಜಾಗಗಳ ಸುತ್ತ 'ಅಭಿವೃದ್ಧಿರಹಿತ ಪ್ರದೇಶವನ್ನು' ಘೋಷಿಸದಿರುವುದು

ಪೌರ ಘನತ್ಯಾಜ್ಯ (ವ್ಯವಸ್ಥೆ ಮತ್ತು ನಿರ್ವಹಣೆ) ನಿಯಮಗಳ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳು ನೆಲಭರ್ತಿ ಜಾಗಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಜಲ ಮೂಲ (ತೆರೆದ ಬಾವಿಗಳು, ಕೊಳವೆ ಬಾವಿಗಳು, ನೀರಿನ ತೊಟ್ಟಿ, ಇತ್ಯಾದಿ) ಕಲುಷಿತವಾಗದಂತೆ ಹಾಗೂ ಭೂ ಮಾಲಿನ್ಯವಾಗದಂತೆ ಖಚಿತಪಡಿಸಿಕೊಳ್ಳಲು ಆ ಪ್ರದೇಶವನ್ನು 'ಅಭಿವೃದ್ಧಿರಹಿತ ಪ್ರದೇಶವೆಂದು' ಘೋಷಿಸಬೇಕಿತ್ತು. ಆದರೆ ಪರೀಕ್ಷಾ–ತನಿಖೆಗೆ ಒಳಪಟ್ಟ ಯಾವುದೇ ನಗರ ಸ್ಥಳೀಯ ಸಂಸ್ಥೆಯು ಪಟ್ಟಣ ಯೋಜನಾ ಪ್ರಾಧಿಕಾರದ ಮೂಲಕ ಅಭಿವೃದ್ಧಿರಹಿತ ಪ್ರದೇಶವನ್ನು ಘೋಷಿಸಲು ಕ್ರಮವನ್ನು ತೆಗೆದುಕೊಂಡಿರಲಿಲ್ಲ. ಇನ್ನು ಮುಂದೆ ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಾಗಿ ನಗರ ಸ್ಥಳೀಯ ಸಂಸ್ಥೆಗಳು ಉತ್ತರಿಸಿದವು (ಫೆಬ್ರವರಿ–ಜೂನ್ 2008).

### 3.1.7.3 ಮೂಲದಲ್ಲೇ ಪೌರ ಘನತ್ಯಾಜ್ಯ ವಸ್ತುಗಳ ಬೇರ್ಪಡಿಕೆಯಾಗದಿರುವುದು

**ಸ್ಥಳೀಯ ಕಲ್ಯಾಣ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ಮೂಲದಲ್ಲೇ ಪೌರ ಘನತ್ಯಾಜ್ಯ ವಸ್ತುಗಳ ಬೇರ್ಪಡಿಕೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತೊಡಗಿಸಲಿಲ್ಲ**

ನಿಯಮಗಳನುಸಾರ ಪೌರ ಘನತ್ಯಾಜ್ಯ ವಸ್ತುಗಳನ್ನು ಕೊಳೆಯುವ (ಸಾವಯವ) ಮತ್ತು ಕೊಳೆಯದ ತ್ಯಾಜ್ಯಗಳೆಂದು ಮೂಲದಲ್ಲಿಯೇ ವಿಂಗಡಿಸಿ ಪ್ಲಾಸ್ಟಿಕ್, ಕಾಗದ, ಗಾಜು, ಲೋಹ ಇತ್ಯಾದಿ ಪುನರ್ಬಳಕೆಯಾಗುವ ತ್ಯಾಜ್ಯಗಳನ್ನು ಹಿಂಪಡೆಯಬೇಕು. ಕೊಳೆಯುವ ತ್ಯಾಜ್ಯಗಳನ್ನು ಕಾಂಪೋಸ್ಟ್ ವಿಧಾನದಲ್ಲಿ ಅಥವಾ ಎರೆಹುಳು ಗೊಬ್ಬರ ವಿಧಾನದ ಮೂಲಕ ಸ್ಥಿರೀಕರಣಗೊಳಿಸಬಹುದಾಗಿದ್ದು ಜಡ ವಸ್ತುಗಳನ್ನು ನೆಲಭರ್ತಿ ಹೊಂಡಗಳಲ್ಲಿ ವಿಲೇವಾರಿ ಮಾಡಬಹುದಾಗಿತ್ತು. ಅಂತೆಯೇ ಪ್ಲಾಸ್ಟಿಕ್, ಕಾಗದ ಮತ್ತು ಗಾಜಿನ ತಯಾರಿಕೆಯಲ್ಲಿ ಉಪಯೋಗಿಸಬಹುದಾಗಿತ್ತು. ಪೌರ ಘನತ್ಯಾಜ್ಯ ವಸ್ತುಗಳನ್ನು ಮೂಲದಲ್ಲಿಯೇ ಸಂಪೂರ್ಣ ಬೇರ್ಪಡಿಕೆಯಾಗುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು

ಬೇರ್ಪಡಿಸಿದ ತ್ಯಾಜ್ಯಗಳನ್ನು ಪುನರ್ಬಳಕೆ ಮಾಡುವುದನ್ನು ಉತ್ತೇಜಿಸುವುದಕ್ಕಾಗಿ ನಗರ ಸ್ಥಳೀಯ ಸಂಸ್ಥೆಗಳು ನಾಗರಿಕ ಜಾಗೃತಿ ಕಾರ್ಯಕ್ರಮಗಳನ್ನು ಸಂಘಟಿಸಿ ತ್ಯಾಜ್ಯ ವಸ್ತುಗಳನ್ನು ಬೇರ್ಪಡಿಸಲು ಸಮುದಾಯ ಸಹಭಾಗಿತ್ವವನ್ನು ಪಡೆಯಬೇಕು ಎಂದು ನಿಯಮಗಳು ತಿಳಿಸುತ್ತವೆ. ಇದಕ್ಕಾಗಿ ಸ್ಥಳೀಯ ಕಲ್ಯಾಣ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳೊಡನೆ ನಿಯತಕಾಲಿಕ ಸಭೆಗಳನ್ನು ನಗರ ಸ್ಥಳೀಯ ಸಂಸ್ಥೆಗಳು ಏರ್ಪಡಿಸಬೇಕಿತ್ತು. ಈ ಸಂಬಂಧವಾಗಿ ಪೌರ ಘನತ್ಯಾಜ್ಯ ವಸ್ತುಗಳ ವೈಜ್ಞಾನಿಕ ನಿರ್ವಹಣೆಯ ವಿವಿಧ ಅಂಶಗಳನ್ನು ಅಧ್ಯಯನ ಮಾಡಿ ವರದಿ ಮಾಡಲು ಉಚ್ಚ ನ್ಯಾಯಾಲಯದಿಂದ ನೇಮಿಸಲ್ಪಟ್ಟ ಸಮಿತಿಯೂ ಸಹ ತ್ಯಾಜ್ಯ ವಸ್ತುಗಳ ಬೇರ್ಪಡಿಕೆ ಮತ್ತು ಅವುಗಳ ಪುನರ್ಬಳಕೆಗೆ ಅನುವಾಗುವಂತೆ ಸ್ಥಳೀಯ ಕಲ್ಯಾಣ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲ ಚಿಂದಿ ಆಯುವವರನ್ನು ಮನೆಗಳಿಂದ ಹಾಗೂ ವಾಣಿಜ್ಯ ಮಳಿಗೆಗಳಿಂದ ನೇರವಾಗಿ ಕಸವನ್ನು ಸಂಗ್ರಹಿಸುವ ಕೆಲಸಕ್ಕೆ ತೊಡಗಿಸಬೇಕು ಎಂದು ಶಿಫಾರಸು ಮಾಡಿತ್ತು (2001).

ಪರೀಕ್ಷಾ-ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳ ದಾಖಲೆಗಳ ಪರಿಶೀಲನೆಯಿಂದ ತಿಳಿದು ಬಂದಿದ್ದೇನೆಂದರೆ ಕೇವಲ 35 ನಗರ ಸ್ಥಳೀಯ ಸಂಸ್ಥೆಗಳು ಮಾತ್ರ ನಾಗರಿಕ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದ್ದವು ಮತ್ತು ಉಳಿದ 15 ನಗರ ಸ್ಥಳೀಯ ಸಂಸ್ಥೆಗಳು ಹಣದ ಲಭ್ಯತೆಯಿದ್ದರೂ ಕೂಡ ಕಾರ್ಯಕ್ರಮಗಳನ್ನು ನಡೆಸಲಿಲ್ಲ (**ಅನುಬಂಧ 3.2**). ನಿರಂತರ ಪ್ರಯತ್ನಗಳ ಕೊರತೆಯಿಂದಾಗಿ ಜಾಗೃತಿ ಕಾರ್ಯಕ್ರಮ ನಡೆಸಿದ 35 ನಗರ ಸ್ಥಳೀಯ ಸಂಸ್ಥೆಗಳು ಕೂಡ ಸಮುದಾಯ ಸಹಭಾಗಿತ್ವವನ್ನು ಪಡೆಯಲಾಗದೇ ಮೂಲದಲ್ಲಿಯೇ ತ್ಯಾಜ್ಯ ವಸ್ತಗಳನ್ನು ಬೇರ್ಪಡಿಸುವ ಉದ್ದೇಶವನ್ನು ಸಾಧಿಸಲಾಗಲಿಲ್ಲ. ಯಾವುದೇ ನಗರ ಸ್ಥಳೀಯ ಸಂಸ್ಥೆಯೂ ಕಸ ಸಂಗ್ರಹಣೆಯಲ್ಲಿ ಚಿಂದಿ ಆಯುವವರನ್ನು ತೊಡಗಿಸಲಿಲ್ಲ. ತತ್ಪರಿಣಾಮವಾಗಿ, ಪರೀಕ್ಷಾ-ತನಿಖೆ ನಡೆಸಿದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳೂ ಮಿಶ್ರ ತ್ಯಾಜ್ಯಗಳನ್ನೇ ಸಂಗ್ರಹಿಸಿ ನೆಲಭರ್ತಿ ಜಾಗಕ್ಕೆ ಸಾಗಿಸುತ್ತಿದ್ದವು.

### 3.1.7.4 ಮನೆ-ಮನೆಯಿಂದ ಕಸ ಸಂಗ್ರಹ ಮಾಡುವಲ್ಲಿ ವಿಳಂಬ

**ನಗರ ಸ್ಥಳೀಯ ಸಂಸ್ಥೆಗಳು ಸ್ವ-ಸಹಾಯ ಗುಂಪುಗಳನ್ನು ಸಜ್ಜುಗೊಳಿಸದಿದ್ದುದರಿಂದ ಮನೆ-ಮನೆಯಿಂದ ಪೌರ ಘನತ್ಯಾಜ್ಯಗಳನ್ನು ಸಂಗ್ರಹಿಸುವುದು ಸಾಧ್ಯವಾಗಲಿಲ್ಲ**

ನಗರ ಪ್ರದೇಶಗಳಲ್ಲಿ ಕಸವನ್ನು ಚೆಲ್ಲಾಡುವುದನ್ನು ನಿಲ್ಲಿಸಲು ನಗರ ಸ್ಥಳೀಯ ಸಂಸ್ಥೆಗಳು ಸ್ವಸಹಾಯ ಸಂಸ್ಥೆಗಳು ಅಥವಾ ಖಾಸಗೀ ನಿರ್ವಾಹಕರು ಅಥವಾ ತನ್ನ ಸ್ವಂತ ಸಿಬ್ಬಂದಿಯ (ಪೌರ ಕಾರ್ಮಿಕರು) ಮೂಲಕ ಮನೆ-ಮನೆಯಿಂದ ಕಸವನ್ನು ಸಂಗ್ರಹಿಸಲು ಏರ್ಪಾಡು ಮಾಡಿ ಅದನ್ನು ಸಾಧಿಸಬೇಕೆಂದು ನಿಯಮಗಳು ನಿಗದಿಪಡಿಸಿದ್ದವು. ಇದಕ್ಕಾಗಿ, ಕುಟುಂಬಗಳಿಂದ ಮತ್ತು ವಾಣಿಜ್ಯ ಸಂಸ್ಥೆಗಳಾದ ಹೋಟೆಲ್‌ಗಳು, ಛತ್ರಗಳು, ಸಮುದಾಯ ಭವನಗಳು ಇವುಗಳಿಂದ ಅಲ್ಪ ದರದಲ್ಲಿ ಬಳಕೆದಾರ ಕರವನ್ನು ವಸೂಲಿ ಮಾಡಲು ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಕೂಡ ನೀಡಲ್ಪಟ್ಟಿತ್ತು. ಮನೆ-ಮನೆಯಿಂದ ಕಸ ಸಂಗ್ರಹಣೆ ಮಾಡುವ ಕಾರ್ಯದಲ್ಲಿ ತೊಡಗಿದ್ದ ಸ್ವಸಹಾಯ ಗುಂಪುಗಳಿಗೆ ಕಸ ಸಂಗ್ರಹಣೆ ವಾಹನಗಳಾದ ತಳ್ಳುಗಾಡಿಗಳು, ತ್ರಿಚಕ್ರ ಸೈಕಲ್‌ಗಳು ಮತ್ತು ಆಟೋ ಟಿಪ್ಪರ್‌ಗಳನ್ನು ಖರೀದಿಸಲು ಮೂಲಬೆಲೆಯ ಅರ್ಧದಷ್ಟು ಹಣವನ್ನು ಹನ್ನೆರಡನೇ ಹಣಕಾಸು ಆಯೋಗದಿಂದ ಒದಗಿಸಲ್ಪಟ್ಟ ಅನುದಾನದಿಂದ ಸಹಾಯಧನವನ್ನಾಗಿ ಕೊಡಲು ಅವಕಾಶ ಮಾಡಿತ್ತು.

ಪರೀಕ್ಷಾ-ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳ ದಾಖಲೆಗಳಿಂದ ಈ ಕೆಳಗಿನವುಗಳು ತಿಳಿದುಬಂದಿತು:

- ನಾಲ್ಕು ನಗರ ಸ್ಥಳೀಯ ಸಂಸ್ಥೆಗಳು[5] ಮಾತ್ರ ಮನೆ-ಮನೆಯಿಂದ ಕಸವನ್ನು ಸಂಗ್ರಹಿಸುವ ಕಾರ್ಯವನ್ನು ಸಂಪೂರ್ಣವಾಗಿ ಸಾಧಿಸಿದ್ದು, 25 ನಗರ ಸ್ಥಳೀಯ ಸಂಸ್ಥೆಗಳು ಭಾಗಶ: ಮಾತ್ರ (ಒಟ್ಟು ಕುಟುಂಬಗಳ ಶೇಕಡ 4ರಿಂದ 80) ಸಾಧಿಸಿದ್ದವು.
- 21 ನಗರ ಸ್ಥಳೀಯ ಸಂಸ್ಥೆಗಳ ಪಟ್ಟಣ ವ್ಯಾಪ್ತಿಯಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಿಸುವ ಕಾರ್ಯ ಇನ್ನೂ ಪ್ರಾರಂಭವಾಗಬೇಕಿದ್ದು, ಕುಟುಂಬದವರೇ ಪೌರ ಘನತ್ಯಾಜ್ಯಗಳನ್ನು ಕಸದ ತೊಟ್ಟಿಗಳಿಗೆ (ದ್ವಿತೀಯ ಹಂತದ ಶೇಖರಣಾ ಸೌಲಭ್ಯಗಳು) ನೇರವಾಗಿ ತಂದು ಹಾಕುತ್ತಿದ್ದರು.
- ಈ 21 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 12 ನಗರ ಸ್ಥಳೀಯ ಸಂಸ್ಥೆಗಳಿಗೆ ರೂ.50.07 ಲಕ್ಷ ಸಹಾಯಧನ ಬಿಡುಗಡೆಯಾಗಿದ್ದರೂ ಸಹ ಸ್ವಸಹಾಯ ಗುಂಪುಗಳಿಗೆ ಮನೆಮನೆಯಿಂದ ಕಸ ಸಂಗ್ರಹಣೆ ಮಾಡುವ ವಾಹನಗಳನ್ನು ಖರೀದಿಸಲು ಸಹಾಯಧನ ಹಂಚುವ ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ (**ಅನುಬಂಧ 3.3**).

[5] ಬಿಬಿಎಂಪಿ, ನಗರಪಾಲಿಕೆ-ಮೈಸೂರು, ನಗರಪಾಲಿಕೆ-ಮಂಗಳೂರು ಮತ್ತು ನಗರಪಾಲಿಕೆ-ಹುಬ್ಬಳ್ಳಿ-ಧಾರವಾಡ

ಬಳಕೆದಾರರ ಕರ ಸಂಗ್ರಹಣೆಯಲ್ಲಿನ ತೀವ್ರ ಕೊರತೆಯಿಂದಾಗಿ ಮನೆ–ಮನೆಯಿಂದ ಕಸ ಸಂಗ್ರಹಣೆ ಕೈಗೊಳ್ಳಲು ಸ್ವಸಹಾಯ ಗುಂಪುಗಳು ಮುಂದೆ ಬಾರದಿರುವುದು ಮತ್ತು ಈ ವಾಹನಗಳನ್ನು ಖರೀದಿಸಲು ಸರಬರಾಜುದಾರರೊಡನೆ ಒಪ್ಪಂದಗಳನ್ನು ಮಾಡಿಕೊಳ್ಳುವಲ್ಲಿನ ವಿಳಂಬಗಳು ಮನೆ–ಮನೆಯಿಂದ ಕಸ ಸಂಗ್ರಹಣೆ ಪ್ರಾರಂಭಿಸುವುದಕ್ಕೆ ತಡವಾಯಿತು ಎಂದು ನಗರ ಸ್ಥಳೀಯ ಸಂಸ್ಥೆಗಳು ಉತ್ತರಿಸಿದವು (ಫೆಬ್ರವರಿ–ಜೂನ್ 2008). ಆದರೆ ಪೌರಾಡಳಿತ ನಿರ್ದೇಶಕರು ಸೂಚಿಸಿದಂತೆ (ಮೇ 2007) ಸ್ವಸಹಾಯ ಗುಂಪುಗಳ ಪ್ರತಿಕ್ರಿಯೆ ಉತ್ತೇಜಕಾರಿಯಾಗಿಲ್ಲದಿದ್ದರೆ ಇತರೆ ಪರ್ಯಾಯಗಳನ್ನು (ಖಾಸಗೀ ನಿರ್ವಾಹಕರು ಅಥವಾ ಪೌರಕಾರ್ಮಿಕರ ಮೂಲಕ) ನಗರ ಸ್ಥಳೀಯ ಸಂಸ್ಥೆಗಳು ಪ್ರಯತ್ನಿಸಿ ನೋಡಬೇಕಿತ್ತು. ಮನೆ–ಮನೆಯಿಂದ ಕಸ ಸಂಗ್ರಹಣೆ ಸಾಧಿಸುವಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ವಿಫಲತೆಯು ಸಾರ್ವಜನಿಕ ಸ್ಥಳಗಳಲ್ಲಿ ಕಸ ಚೆಲ್ಲಾಡುವುದನ್ನು ತಪ್ಪಿಸಲಾಗದಂತಾಯಿತು.

### 3.1.7.5 ಘನತ್ಯಾಜ್ಯ ನಿರ್ವಹಣೆಗೆ ಬೇಕಾಗಿದ್ದ ಸಾಧನ ಸಲಕರಣೆಗಳನ್ನು ಖರೀದಿಸುವಲ್ಲಿ ಆದ ವಿಳಂಬ

**ಸಾಧನ – ಸಲಕರಣೆಗಳ ಸರಬರಾಜುದಾರರೊಂದಿಗಿನ ಒಪ್ಪಂದಗಳನ್ನು ನಿರ್ವಹಣೆ ಮಾಡುವಲ್ಲಿನ ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳ ಅಸಾಮರ್ಥ್ಯದಿಂದ ರೂ.18.31 ಕೋಟಿಗಳನ್ನು ಬಳಸಿಕೊಳ್ಳಲಾಗಲಿಲ್ಲ**

2003–08ರ ಅವಧಿಯಲ್ಲಿ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಗೆ (ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ) ಹಣಕಾಸು ಆಯೋಗದ ಅನುದಾನದಿಂದ ಘನತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ಸಾಧನ ಹಾಗೂ ಸಲಕರಣೆಗಳನ್ನು ಖರೀದಿಸಲು ಪೌರಾಡಳಿತ ನಿರ್ದೇಶಕರು ರೂ.81.40 ಕೋಟಿಗಳನ್ನು ಬಿಡುಗಡೆ ಮಾಡಿದರು. ಅಗತ್ಯವಿದ್ದ ಸಾಧನ–ಸಲಕರಣೆಗಳೆಂದರೆ, ಪ್ರಾಥಮಿಕ ಹಂತದಲ್ಲಿ ಸಂಗ್ರಹಿಸುವ ವಾಹನಗಳಾದ ಆಟೋ ಟಿಪ್ಪರ್‌ಗಳು, ತ್ರಿಚಕ್ರ ವಾಹನಗಳು, ಮನೆ–ಮನೆಗಳಿಂದ ತ್ಯಾಜ್ಯ ಸಂಗ್ರಹಿಸುವ ತಳ್ಳುಗಾಡಿಗಳು, ದ್ವಿತೀಯ ಹಂತದ ಶೇಕರಣಾ ತೊಟ್ಟಿಗಳು, ಸಾಗಾಣಿಕೆ ವಾಹನಗಳಾದ ಡಂಪರ್ ಪ್ಲೇಸರ್‌ಗಳು ಮತ್ತು ಟ್ರ್ಯಾಕ್ಟರ್ ಪ್ಲೇಸರ್‌ಗಳು ಹಾಗೂ ಬೀದಿ ಕಸ ಗುಡಿಸುವ ಸಾಮಾನುಗಳು ಮತ್ತು ಕೊಳೆಗೇರಿಗಳಿಂದ ತ್ಯಾಜ್ಯ ಸಂಗ್ರಹಿಸಲು ಬೇಕಾದ ಸಂಗ್ರಹಣಾ ಉಪಕರಣಗಳು.

ಪರೀಕ್ಷಾ–ತನಿಖೆ ನಡೆಸಿದ 50 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 27 ನಗರ ಸ್ಥಳೀಯ ಸಂಸ್ಥೆಗಳು **(ಅನುಬಂಧ 3.4)** ಈ ಉದ್ದೇಶಕ್ಕಾಗಿ ಪಡೆದುಕೊಂಡ ರೂ.11.68 ಕೋಟಿಗಳಲ್ಲಿ ಯಾವ ಮೊತ್ತವನ್ನೂ ಬಳಸಿಕೊಳ್ಳಲಿಲ್ಲ. ಉಳಿದ 23 ಸಂಸ್ಥೆಗಳು ಮಾರ್ಚ್ 2008ರವರೆಗೆ ಬಿಡುಗಡೆಯಾದ ರೂ.17.68 ಕೋಟಿಗಳಲ್ಲಿ ಕೇವಲ ರೂ.10.63 ಕೋಟಿಗಳನ್ನು ಮಾತ್ರ ವೆಚ್ಚ ಮಾಡಿದ್ದವು. ಒಟ್ಟಾರೆ ವೆಚ್ಚವಾಗದ ಮೊತ್ತ 31ನೇ ಮಾರ್ಚ್ 2008ರ ವೇಳೆಗೆ ರೂ.18.31 ಕೋಟಿಗಳಾಗಿತ್ತು.

ಟೆಂಡರ್‌ಗಳ ಪರಿಷ್ಕರಣೆಯಲ್ಲಿ ಆದ ದೋಷಗಳಿಂದಾಗಿ ರದ್ದಾದ ಟೆಂಡರ್‌ಗಳು, ಮರು ಟೆಂಡರ್‌ಗಳನ್ನು ಕರೆದದ್ದು ಹಾಗೂ ನಿಧಾನಗತಿಯಲ್ಲಿ ಸಾಗಿದ ಟೆಂಡರ್ ಪರಿಷ್ಕರಣೆ ಇತ್ಯಾದಿ ಕಾರಣಗಳಿಂದ ಉಪಕರಣಗಳನ್ನು ಖರೀದಿಸುವಲ್ಲಿ ವಿಳಂಬವಾಯಿತು ಎಂದು ಪೌರಾಡಳಿತ ನಿರ್ದೇಶಕರು ಸ್ಪಷ್ಟೀಕರಣ ನೀಡಿದರು (ಮೇ 2008).

ನಗರ ಸ್ಥಳೀಯ ಸಂಸ್ಥೆಗಳ ವತಿಯಿಂದ ಸಾಧನ–ಸಲಕರಣೆಗಳನ್ನು ಖರೀದಿಸುವಲ್ಲಿ ಉಂಟಾದ ವಿಳಂಬದ ಹಿನ್ನೆಲೆಯಲ್ಲಿ ಫೆಬ್ರವರಿ 2008ರಲ್ಲಿ ಸಾಧನ ಸಲಕರಣೆಗಳನ್ನು ಖರೀದಿಸಲು ಜಿಲ್ಲಾ ಮಟ್ಟದ ಕೇಂದ್ರೀಕೃತ ವ್ಯವಸ್ಥೆಯನ್ನು ಸ್ಥಾಪಿಸಿ ಜಿಲ್ಲಾಧಿಕಾರಿಗಳು ಟೆಂಡರ್ ಕರೆದು ಸಾಧನ–ಸಲಕರಣೆಗಳನ್ನು ಪಡೆದುಕೊಳ್ಳಬೇಕೆಂದು ಸರ್ಕಾರವು ಆದೇಶಿಸಿತು. ಜುಲೈ 2008ರವರೆಗೆ ಈ ಪ್ರಕ್ರಿಯೆ ಕೂಡ ಮುಗಿಯದಿರುವುದು ಕಂಡುಬಂದು ತ್ಯಾಜ್ಯ ನಿರ್ವಹಣೆಯ ಕಾರ್ಯ ಜಾರಿಯಾಗುವಲ್ಲಿ ವಿಳಂಬವಾಯಿತು. ಅಲ್ಲದೇ ಪೌರ ಕಾರ್ಮಿಕರು ತಮ್ಮ ಕೈಯಾರೆ ಕಸ ಎತ್ತುವ ಹಳೆಯ ಪದ್ಧತಿಯೇ ಮುಂದುವರೆದಿತ್ತು. ಆದರೆ 16 ನಗರ ಸ್ಥಳೀಯ ಸಂಸ್ಥೆಗಳು **(ಅನುಬಂಧ 3.5)** ತಮ್ಮ ಪೌರಕಾರ್ಮಿಕರಿಗೆ ಸುರಕ್ಷಾ ಕವಚಗಳಾದ ಏಪ್ರನ್, ಮುಸುಕು ತೆರೆಗಳು, ಗಮ್‌ಬೂಟ್‌ಗಳು, ಕೈ ಗ್ಲೋಸ್‌ಗಳು ಮುಂತಾದ ರಕ್ಷಣಾ ಕವಚಗಳನ್ನು ಒದಗಿಸಿಲ್ಲದಿರುವುದು ಕಂಡುಬಂದಿತು.

### 3.1.7.6 ಪೌರ ಘನತ್ಯಾಜ್ಯದ ಸಂಸ್ಕರಣೆ ಮತ್ತು ವಿಲೇವಾರಿ

ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳ ದಾಖಲೆಗಳಿಂದ ಹಾಗೂ ಇಲಾಖಾ ಸಿಬ್ಬಂದಿಯೊಡನೆ ಕಸ ಸುರಿಯುವ ನಿವೇಶನಗಳ ಜಂಟಿ ಪರಿವೀಕ್ಷಣೆಯಿಂದ ಕಂಡುಬಂದದ್ದೇನೆಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮೈಸೂರು ನಗರ ಪಾಲಿಕೆ ಮತ್ತು ಮಂಗಳೂರು ನಗರ

ಪಾಲಿಕೆಗಳ ಹೊರತಾಗಿ ಯಾವ ನಗರ ಸ್ಥಳೀಯ ಸಂಸ್ಥೆಗಳೂ ಪೌರ ಘನತ್ಯಾಜ್ಯ ನಿರ್ವಹಣಾ ನಿಯಮಗಳ ಪ್ರಕಾರ ತ್ಯಾಜ್ಯವನ್ನು ಸಂಸ್ಕರಿಸುತ್ತಿರಲಿಲ್ಲ. ಬಹುತೇಕ ಸಂಸ್ಥೆಗಳು ಕಸ ಸುರಿಯುವ ನಿವೇಶನಗಳ ಬಳಿ ತ್ಯಾಜ್ಯ ಸಂಸ್ಕರಣೆ ಮಾಡುವ ಸಾವಯವ ಘಟಕಗಳನ್ನು ಹೊಂದದೇ ಇದ್ದುದರಿಂದ ಪೌರಾಡಳಿತ ನಿರ್ದೇಶಕರು ಘನತ್ಯಾಜ್ಯದ ವೈಜ್ಞಾನಿಕ ಸಂಸ್ಕರಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಘನತ್ಯಾಜ್ಯದಿಂದ ಹೊರಸೂಸುವ ಅಂತರ್ಜಲವನ್ನು ಮಲಿನಗೊಳಿಸುವ 'ಲೀಚೆಟ್'[6] ಉತ್ಪಾದನೆಯನ್ನು ತಡೆಗಟ್ಟುವ ಸಲುವಾಗಿ ಒಂದು ಪರ್ಯಾಯ ಕಾರ್ಯವಿಧಾನವನ್ನು ನಿಯಮಿಸಿದರು. ಸಾರಾಂಶದಲ್ಲಿ ಈ ಕಾರ್ಯವಿಧಾನ ಈ ರೀತಿ ಇದ್ದಿತು:

- ಮೂಲದಲ್ಲೇ ತ್ಯಾಜ್ಯದ ವಿಂಗಡಣೆಯನ್ನು ಕನಿಷ್ಠ ಎರಡು ಗುಂಪುಗಳಾಗಿ ವಿಂಗಡಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಅವು ಯಾವುವೆಂದರೆ ತೇವವಿರುವ ಅಥವಾ ಕೊಳೆಯಬಹುದಾದ ತ್ಯಾಜ್ಯ ಮತ್ತು ಒಣ ತ್ಯಾಜ್ಯ ಅಥವಾ ಕೊಳೆಯಲಾರದ ತ್ಯಾಜ್ಯ. ತೇವ ತ್ಯಾಜ್ಯವನ್ನು ನೆಲಭರ್ತಿ ಜಾಗದಲ್ಲಿ ವಿಶೇಷವಾಗಿ ಅಗೆಯಲಾದ ಗುಂಡಿಗಳಲ್ಲಿ ಸುರಿಯಬೇಕು ಮತ್ತು ಕೊಳೆಯಲಾರದ ಅಥವಾ ಜಡ ತ್ಯಾಜ್ಯವನ್ನು ವಿಶೇಷವಾಗಿ ರಚಿಸಿದ ಗುಂಡಿಗಳಲ್ಲಿ ಭರ್ತಿ ಮಾಡಬೇಕು ಎಂಬುದಾಗಿ ನಿಗದಿಪಡಿಸಿತ್ತು.
- ಲೀಚೆಟ್ ದ್ರವವು ಅಂತರ್ಜಲ ಮತ್ತು ಅಕ್ಕಪಕ್ಕದ ಭೂಮಿಗೆ ಸೋರುವುದನ್ನು ತಪ್ಪಿಸಲು ಅಂತರ್ಜಲ ಮಟ್ಟಕ್ಕಿಂತ ಕನಿಷ್ಠ ಎರಡು ಮೀಟರ್ ಎತ್ತರದಲ್ಲಿರುವ ಮಟ್ಟದವರೆಗೆ ಕಾಂಪೋಸ್ಟ್ ಗುಂಡಿಗಳನ್ನು ತೋಡಬೇಕು ಮತ್ತು ಗುಂಡಿಯ ತಳಭಾಗವನ್ನು 30 ಸೆಂಟಿಮೀಟರ್‌ನಷ್ಟು ದಪ್ಪ ಇರುವ ಗಟ್ಟಿಮಣ್ಣಿನ ಪದರದಿಂದ ಮುಚ್ಚಬೇಕು.
- ಕೊಳೆಯುವಿಕೆಯಿಂದ ಉತ್ಪಾದನೆಯಾಗುವ ಕ್ರಿಮಿಗಳನ್ನು ಹಾಗೂ ಅದರಿಂದಾಗುವ ವಾಯು ಮಾಲಿನ್ಯವನ್ನು ತಡೆಗಟ್ಟಲು ಕೊಳೆಯುವ ತ್ಯಾಜ್ಯವನ್ನು ಕಾಂಪೋಸ್ಟ್ ಗುಂಡಿಗಳಲ್ಲಿ ಹರಡಿ ಅದರ ಮೇಲೆ ಹತ್ತು ಸೆಂಟೀಮೀಟರ್ ದಪ್ಪದ ಮಣ್ಣಿನ ಪದರವನ್ನು ಒದಗಿಸಿ ಪ್ರತಿನಿತ್ಯ ಯಾಂತ್ರಿಕವಾಗಿ ಸಾಂದ್ರೀಕರಿಸಬೇಕು. ಹೀಗೆ ಗುಂಡಿಯು ನೆಲಮಟ್ಟದಿಂದ 45 ಸೆಂಟಿಮೀಟರ್ ಆಳದವರೆಗೆ ಭರ್ತಿ ಆದ ಮೇಲೆ ಸಾಕಷ್ಟು ಮಣ್ಣಿನಿಂದ ಮುಚ್ಚಿ ನೀರು ಒಳಗೆ ಸೋರದಂತೆ ಹಾಗೂ ಮಣ್ಣಿನ ಸವಕಳಿ ಆಗದಂತೆ ಯಾಂತ್ರಿಕವಾಗಿ ಸಾಂದ್ರೀಕರಿಸಬೇಕು. 45 ದಿನಗಳಲ್ಲಿ ಸಾವಯವ ಪ್ರಕ್ರಿಯೆಯು ಮುಗಿದ ಮೇಲೆ ಗುಂಡಿಯನ್ನು ತೆರೆದು ಗೊಬ್ಬರವನ್ನು ಜರಡಿ ಹಿಡಿಯುವ ಮೂಲಕ ಕಾಂಪೋಸ್ಟ್ ಕಣಗಳನ್ನು ಹಾಗೂ ಪುನರ್ಬಳಕೆ ಮಾಡಬಲ್ಲ ಜಡವಸ್ತುಗಳೇನಾದರೂ ಗೊಬ್ಬರದಲ್ಲಿ ಸೇರಿಕೊಂಡಿದ್ದಲ್ಲಿ ಅವುಗಳನ್ನು ಹಿಂಪಡೆಯಬೇಕು.

**ಪರಿಕ್ಷಾ-ತನಿಖೆ ನಡೆಸಿದ ಯಾವುದೇ ನಗರ ಸ್ಥಳೀಯ ಸಂಸ್ಥೆಗಳೂ ತ್ಯಾಜ್ಯದ ವೈಜ್ಞಾನಿಕ ಸಂಸ್ಕರಣೆಯ ಕಾರ್ಯವನ್ನು ಪೌರಾಡಳಿತ ನಿರ್ದೇಶಕರು ಸೂಚಿಸಿದ ಮಾದರಿಯಲ್ಲಿ ಕೈಗೊಂಡಿರಲಿಲ್ಲ**

**3.1.7.7** ನೆಲಭರ್ತಿ ಜಾಗಗಳ ಜಂಟಿ ಪರಿವೀಕ್ಷಣೆ ಸಮಯದಲ್ಲಿ ಗಮನಿಸಿದಂತೆ ನೆಲಭರ್ತಿ ಜಾಗವನ್ನು ಹೊಂದಿದ್ದಂತಹ 40 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಯಾವುದೇ ನಗರ ಸ್ಥಳೀಯ ಸಂಸ್ಥೆಯು ಘನತ್ಯಾಜ್ಯ ವಸ್ತುಗಳನ್ನು ಪೌರಾಡಳಿತ ನಿರ್ದೇಶಕರು ಸೂಚಿಸಿದ ಕಾರ್ಯವಿಧಾನದಂತೆ ಸಂಸ್ಕರಿಸಲಿಲ್ಲ. ವಾಸ್ತವವೇನೆಂದರೆ, 18 ನಗರ ಸ್ಥಳೀಯ ಸಂಸ್ಥೆಗಳು ನೆಲಭರ್ತಿ ಜಾಗಗಳನ್ನು ಉಪಯೋಗಿಸದೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅಧಿಕಾರ ನೀಡಿಲ್ಲದ ಬಯಲು ಪ್ರದೇಶಗಳಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸುರಿಯುತ್ತಿದ್ದವು (**ಅನುಬಂಧ 3.6**). 19 ನಗರ ಸ್ಥಳೀಯ ಸಂಸ್ಥೆಗಳು ಕಾಂಪೋಸ್ಟ್/ಇಂಜಿನಿಯರಿಂಗ್ ಗುಂಡಿಗಳ ಉತ್ಖನನ ಕೆಲಸ ಕೈಗೊಂಡಿದ್ದು ಉಳಿದ ಮೂರು ನಗರ ಸ್ಥಳೀಯ ಸಂಸ್ಥೆಗಳು ಈ ನಿಟ್ಟಿನಲ್ಲಿ ಇನ್ನೂ ಕ್ರಮ ಕೈಗೊಳ್ಳಬೇಕಿತ್ತು. ಪರಿಣಾಮವಾಗಿ, ಘನತ್ಯಾಜ್ಯ ವಸ್ತುಗಳು ಸಂಸ್ಕರಣೆಯಾಗದೇ ವಿಲೇವಾರಿಯಾಗುತ್ತಿದ್ದವು. ತ್ಯಾಜ್ಯ ವಸ್ತುಗಳ ಬೇರ್ಪಡೆಯಾಗದಿದ್ದುದರಿಂದ ಪೌರಾಡಳಿದ ನಿರ್ದೇಶಕರು ನಿಗದಿಪಡಿಸಿದ ಕಾರ್ಯವಿಧಾನವನ್ನು ಅನುಸರಿಸಿಯೂ ವೈಜ್ಞಾನಿಕ ವಿಲೇವಾರಿ ಸಾಧ್ಯವಿತ್ತೇ ಎಂಬ ಅನುಮಾನಕ್ಕೆ ದಾರಿ ಮಾಡಿಕೊಟ್ಟಿತ್ತು.

### 3.1.7.8 ಘನತ್ಯಾಜ್ಯದ ಅವೈಜ್ಞಾನಿಕ ಸಂಸ್ಕರಣೆ

ಪೌರ ಘನತ್ಯಾಜ್ಯ ಸಂಸ್ಕರಣ ಕಾರ್ಯ ನಡೆಸುತ್ತಿರುವ ನಗರ ಸ್ಥಳೀಯ ಸಂಸ್ಥೆಗಳಾದ ಬಿಬಿಎಮ್‌ಪಿ ಮತ್ತು ಕಾರವಾರ ನಗರಸಭೆಗಳಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಯಿತು.

[6] ಘನತ್ಯಾಜ್ಯ ವಸ್ತುಗಳಿಂದ ಹೊರಸೂಸುವ ರಸಾಯನಿಕಗಳನ್ನು ಒಳಗೊಂಡಂತೆ ಕರಗಿದ ವಸ್ತುಗಳನ್ನು ಹೊಂದಿರುವಂತಹ ದ್ರವ ವಸ್ತು

**ಕಾರವಾರ ನಗರಸಭೆಯು ನಿರ್ಮಲೀಕರಣ ನೆಲಭರ್ತಿ ನಿವೇಶನದಲ್ಲಿ ಮಿಶ್ರ ತ್ಯಾಜ್ಯವನ್ನು ವಿಲೇವಾರಿ ಮಾಡಿ ಅನಾರೋಗ್ಯಕರ ಪರಿಸ್ಥಿತಿಯನ್ನು ಸೃಷ್ಟಿಸಿತು**

ಕಾರವಾರ ನಗರಸಭೆ ಘನತ್ಯಾಜ್ಯ ನಿರ್ವಹಣೆಗೆ ಅಂಗೀಕರಿಸಿದ ಕ್ರಿಯಾಯೋಜನೆಯಲ್ಲಿ ನಮೂದಿಸಿದ ಪ್ರಕಾರ, ಕೊಳೆಯುವ ತ್ಯಾಜ್ಯವನ್ನು ಸಂಸ್ಕರಿಸಲು ಒಂದು ಸಾವಯವ ಘಟಕವನ್ನು ನಿರ್ಮಿಸುವುದು ಮತ್ತು ಜಡ ತ್ಯಾಜ್ಯಗಳ ವಿಲೇವಾರಿಗಾಗಿ ಒಂದು ನಿರ್ಮಲೀಕರಣ ನೆಲಭರ್ತಿ ಜಾಗವನ್ನು ನಿಯೋಜಿಸುವುದೂ ಸೇರಿತ್ತು. ಸಾವಯವ ಘಟಕ ಹಾಗೂ ನಿರ್ಮಲೀಕರಣ ನೆಲಭರ್ತಿ ಜಾಗ ಇವೆರಡನ್ನೂ ಒಂದೇ ನಿವೇಶನದಲ್ಲಿ ಉದ್ದೇಶಿಸಲಾಗಿತ್ತು. ನೆಲಭರ್ತಿ ಜಾಗದ ಜಂಟಿ ಪರಿವೀಕ್ಷಣೆಯಲ್ಲಿ ಕಂಡುಬಂದಂತೆ ಸಾವಯವ ಘಟಕದ ಸ್ಥಾಪನೆಯಾಗಿರಲಿಲ್ಲ ಹಾಗೂ ಮಿಶ್ರಗೊಂಡ ತ್ಯಾಜ್ಯವನ್ನು ನಿರ್ಮಲೀಕರಣ ನೆಲಭರ್ತಿ ಜಾಗದಲ್ಲಿ ಸುರಿದು ಮಣ್ಣಿನ ಪದರ ಹಾಸಿ ಗಟ್ಟಿ ಮಾಡಲಾಗುತ್ತಿದ್ದು ಲೀಚೆಟ್ ದ್ರವದ ಸಂಗ್ರಹಣೆ ಹಾಗೂ ಸಂಸ್ಕರಣೆಗಾಗಿ ಬೇರೆ ಬೇರೆಯಾದ ಲೀಚೆಟ್ ಮತ್ತು ಆಕ್ಸಿಡೇಶನ್ ಹೊಂಡಗಳನ್ನು ನಿರ್ಮಿಸಲಾಗಿತ್ತು. ಈ ನೆಲಭರ್ತಿ ಜಾಗವು ವಾಸಪ್ರದೇಶ ಹಾಗೂ ವಿದ್ಯುತ್ ತಂತಿಗಳಿಗೆ ಹತ್ತಿರವಿದ್ದು ತ್ಯಾಜ್ಯದ ಮೇಲು ಹೊದಿಕೆ ಸಾಕಷ್ಟಿರದೆ ಸಾಂದ್ರೀಕರಣ ಮಾಡುವಲ್ಲಿನ ಕೊರತೆಯ ಜೊತೆಗೆ ವಾಹನಗಳ ಓಡಾಟದಿಂದಾಗಿ ತ್ಯಾಜ್ಯ ವಸ್ತುಗಳು ಹೊರಕ್ಕೆ ಚೆಲ್ಲಾಡಿ ಕೊಳೆತು ಅಸಹ್ಯವಾದ ವಾಸನೆಯನ್ನು ಹೊರಸೂಸುತ್ತಿದ್ದು ಕಂಡುಬಂದಿತು. ಅಲೆಮಾರಿ ಪ್ರಾಣಿಗಳು, ಹಕ್ಕಿಗಳು ಮತ್ತು ನೊಣಗಳು ಈ ಪ್ರದೇಶದಲ್ಲಿ ತುಂಬಿಕೊಂಡು ಸಮಗ್ರ ಕಾರ್ಯಾಚರಣೆಯು ಅವೈಜ್ಞಾನಿಕವಾಗುವುದರಲ್ಲಿ ಪರಿಣಮಿಸಿತು. ಅರಣ್ಯ ಇಲಾಖೆಯು ಸದ್ಯದಲ್ಲೇ ಸಾವಯವ ಘಟಕ ನಿರ್ಮಾಣಕ್ಕಾಗಿ ಭೂಮಿಯನ್ನು ಬಿಡುಗಡೆ ಮಾಡಲಿದ್ದು ತದನಂತರ ಘಟಕ ನಿರ್ಮಾಣಕ್ಕಾಗಿ ಸರ್ಕಾರದಿಂದ ಧನಸಹಾಯ ಕೋರಲು ಕ್ರಮ ಕೈಗೊಳ್ಳಲಾಗುವುದು ಎಂದು ನಗರಸಭೆ ಉತ್ತರಿಸಿತು (ಜೂನ್ 2008). ಆದಾಗ್ಯೂ, ನಗರಸಭೆಯು ಸಾವಯವ ಘಟಕದ ನಿರ್ಮಾಣ ಆಗುವವರೆಗೆ ಪೌರಾಡಳಿತ ನಿರ್ದೇಶಕರು ಸೂಚಿಸಿದ ಕಾರ್ಯವಿಧಾನದಂತೆ ತ್ಯಾಜ್ಯಗಳ ಬೇರ್ಪಡಿಸುವಿಕೆ ಮತ್ತು ಅವುಗಳ ಸಂಸ್ಕರಣೆಯನ್ನು ಖಚಿತಪಡಿಸಿಕೊಳ್ಳಬೇಕಾಗಿತ್ತು.

**ಬೆಂಗಳೂರಿನ ಹರಳಕುಂಟೆ ಸಾವಯವ ಘಟಕದಲ್ಲಿ ಲೀಚೆಟ್ ಸಂಗ್ರಹಕ್ಕೆ ಮತ್ತು ಸಂಸ್ಕರಣೆಗೆ ಸೌಲಭ್ಯವಿರಲಿಲ್ಲ**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಹರಳಕುಂಟೆ ಮತ್ತು ಮಾವಳ್ಳಿಪುರದಲ್ಲಿ ಒಂದೊಂದು ಸಾವಯವ ಘಟಕವನ್ನು ಹೊಂದಿತ್ತು. ಹರಳಕುಂಟೆ ಘಟಕವನ್ನು ಕರ್ನಾಟಕ ಸಾವಯವ ಅಭಿವೃದ್ಧಿ ನಿಗಮವು ನಿಭಾಯಿಸುತ್ತಿದ್ದು ಅದು ದಿನವೊಂದಕ್ಕೆ 300 ಟನ್ ತ್ಯಾಜ್ಯವನ್ನು ಸಂಸ್ಕರಿಸುವ ಸಾಮರ್ಥ್ಯ ಹೊಂದಿದ್ದು ಮಾವಳ್ಳಿಪುರ ಘಟಕ ದಿನವೊಂದಕ್ಕೆ 600 ಟನ್ ಪೌರ ಘನತ್ಯಾಜ್ಯವನ್ನು ಸಂಸ್ಕರಿಸುವ ಸಾಮರ್ಥ್ಯ ಹೊಂದಿತ್ತು. ಆದರೆ ವಾಸ್ತವವಾಗಿ ಮಾವಳ್ಳಿಪುರ ಘಟಕದಲ್ಲಿ ದಿನಕ್ಕೆ ಕೇವಲ 300 ಟನ್ ಪೌರ ಘನತ್ಯಾಜ್ಯವನ್ನು ಸಂಸ್ಕರಿಸಲಾಗಿದ್ದು ಜಡತ್ಯಾಜ್ಯ ವಸ್ತುಗಳನ್ನು ಮತ್ತು ಸಂಸ್ಕರಣಾ ನಂತರದ ತಿರಸ್ಕೃತ ವಸ್ತುಗಳನ್ನು ನೆಲಭರ್ತಿ ಸ್ಥಳಗಳಲ್ಲಿ ಪ್ರತ್ಯೇಕವಾಗಿ ವಿಲೇವಾರಿ ಮಾಡಲಾಗುತ್ತಿತ್ತು. ಆದುದರಿಂದ ಬಿಬಿಎಮ್‌ಪಿ ಬೆಂಗಳೂರು ನಗರದಲ್ಲಿ ದಿನವೊಂದಕ್ಕೆ ಉತ್ಪಾದನೆಯಾಗುತ್ತಿದ್ದ 3,000 ಟನ್ ತ್ಯಾಜ್ಯದ ಪೈಕಿ ಕೇವಲ ಶೇಕಡ 20 ಭಾಗವನ್ನು ಮಾತ್ರ ಸಂಸ್ಕರಿಸಲು ಸಾಧ್ಯವಾಗಿತ್ತು. ಮಾವಳ್ಳಿಪುರದ ಘಟಕದಲ್ಲಿ ಮಾತ್ರ ಪೌರ ಘನತ್ಯಾಜ್ಯ ಮತ್ತು ಲೀಚೆಟ್ ಸಂಸ್ಕರಣೆ ಪೌರ ಘನತ್ಯಾಜ್ಯ ನಿಯಮಾನುಸಾರ ಇದ್ದು ಅದೇ ಹರಳಕುಂಟೆ ಘಟಕದಲ್ಲಿ ಸಂಸ್ಕರಿಸದ ಲೀಚೆಟ್ ಸಾವಯವ ಘಟಕದಿಂದ ಅಗರ ಲೀಚೆಟ್ ಸಂಸ್ಕರಣಾ ಘಟಕಕ್ಕೆ ಹರಿದುಬರಲು ಅನುವು ಮಾಡಿದ್ದ ಭೂಗತ ಕೊಳವೆ ಮಾರ್ಗ ನಿರ್ಮಾಣ ಕಾರ್ಯ ಅಪೂರ್ಣವಾಗಿದ್ದು ಇದರಿಂದ ಸಂಸ್ಕರಿಸದ ಲೀಚೆಟ್ ಬಿಡುಗಡೆಹೊಂದಿ ಸುತ್ತಮುತ್ತಲಿನ ಜಲಪ್ರದೇಶಗಳು ಕಲುಷಿತವಾಗುವಲ್ಲಿ ಪರಿಣಮಿಸಿತು.

**ಹರಳಕುಂಟೆ ಸಾವಯವ ಘಟಕದಲ್ಲಿ ಸ್ವೀಕರಿಸಿದ ಪೌರ ಘನತ್ಯಾಜ್ಯದ ಪರಿಮಾಣವು ಘಟಕದ ಸಂಸ್ಕರಣಾ ಸಾಮರ್ಥ್ಯಕ್ಕೂ ಮೀರಿದ ಕಸದ ಸಂಗ್ರಹಣೆಯಲ್ಲಿ ಪರಿಣಮಿಸಿತು**

ಹರಳಕುಂಟೆ ಸಾವಯವ ಘಟಕವು ದಿನಂಪ್ರತಿ 450 ಟನ್ ಘನತ್ಯಾಜ್ಯವನ್ನು ಸ್ವೀಕರಿಸುತ್ತಿದ್ದು ಅದರ ಪ್ರತಿಷ್ಟಿತ ಸಾಮರ್ಥ್ಯವಾದ 300 ಟನ್‌ಗೆ ಬದಲು 150 ಟನ್ ಘನತ್ಯಾಜ್ಯವನ್ನು ಮಾತ್ರ ಸಂಸ್ಕರಿಸುತ್ತಿದ್ದು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮವು ಬಿಬಿಎಮ್‌ಪಿಗೆ ಬರೆದ ಪತ್ರವೊಂದರಲ್ಲಿ (ಸೆಪ್ಟಂಬರ್ 2007) ತನ್ನ ಸಾಮರ್ಥ್ಯಕ್ಕೆ ಮೀರಿ ಕೆಲಸ ಮಾಡುತ್ತಿದ್ದು ಹೆಚ್ಚುವರಿ ಹಣ ಮತ್ತು ಯಂತ್ರೋಪಕರಣಗಳನ್ನು ಒದಗಿಸದಿದ್ದರೆ ನಿರಂತರವಾಗಿ ಹೆಚ್ಚುತ್ತಿರುವ ಪೌರ ಘನತ್ಯಾಜ್ಯದ ಹೊರೆಯನ್ನು ಸಂಸ್ಕರಿಸಲಾಗದು ಎಂದು ತಿಳಿಸಿತು. ತನ್ನ ಆವರಣದಲ್ಲಿ ಆಗಲೇ ಶೇಖರಣೆಯಾದ ಘನತ್ಯಾಜ್ಯದ ಪರಿಮಾಣ 3.47 ಲಕ್ಷ ಟನ್ (ಆಗಸ್ಟ್ 2007) ಎಂದೂ ವರದಿ ಮಾಡಿತ್ತು. ಆದಾಗ್ಯೂ, ಬಿಬಿಎಮ್‌ಪಿ ಅವಶ್ಯವಿದ್ದ ಹಣ ಮತ್ತು ಯಂತ್ರೋಪಕರಣಗಳನ್ನು ಕೊಡುವ ಬಗ್ಗೆ ಇನ್ನೂ ಯಾವ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ಕಸ ಸುರಿಯುವ ಪ್ರಾಂಗಣದ ಜಂಟಿ ಪರಿವೀಕ್ಷಣೆಯ ಸಮಯದಲ್ಲಿ ತ್ಯಾಜ್ಯಗಳು ಬೇರ್ಪಡದಿರುವುದನ್ನು ಹಾಗೂ ತೆರೆದಿಟ್ಟದ್ದನ್ನೂ ಗಮನಿಸಲಾಯಿತು. ಯಾವುದೇ ಸಂಗ್ರಹಣೆ ಸೌಕರ್ಯವಿಲ್ಲದೆ ಮತ್ತು ಸಂಸ್ಕರಣೆಯಾಗದೆ ಲೀಚೆಟ್ ಮುಕ್ತವಾಗಿ ಹರಿಯುತ್ತಿದ್ದುದು ಕಂಡುಬಂದಿತು. ಸಂಸ್ಕರಣಾ ವ್ಯವಸ್ಥೆಯಲ್ಲಿನ ಕೊರತೆಯ ಕಾರಣದಿಂದ ಮತ್ತು ಪೌರ ಘನತ್ಯಾಜ್ಯ

ವಸ್ತುಗಳು ಹೊರಗಾಳಿಗೆ ತೆಗೆದಿಟ್ಟಿದ್ದರಿಂದ ಸುತ್ತಲಿನ ಗಾಳಿಯು ಮಾಲಿನ್ಯಗೊಂಡಿದ್ದು ಅಂತರ್ಜಲವು ಕಲ್ಮಶಗೊಳ್ಳುವ ಸಾಧ್ಯತೆ ಹೆಚ್ಚಾಗಿತ್ತು.

#### 3.1.7.9 ಜೈವಿಕ–ವೈದ್ಯಕೀಯ ತ್ಯಾಜ್ಯ ಮತ್ತು ಪೌರ ಘನತ್ಯಾಜ್ಯಗಳ ಬೆರೆಯುವಿಕೆ ಮತ್ತು ಪೌರ ಘನತ್ಯಾಜ್ಯದ ದಹನ

ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳ ನೆಲಭರ್ತಿ ಜಾಗಗಳ ಜಂಟಿ ಪರಿವೀಕ್ಷಣೆಯ ಸಮಯದಲ್ಲಿ ಎಂಟು[7] ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜೈವಿಕ–ವೈದ್ಯಕೀಯ ತ್ಯಾಜ್ಯವು ಪೌರ ಘನತ್ಯಾಜ್ಯದೊಡನೆ ಬೆರೆತಿದ್ದು ಏಳು[8] ನಗರ ಸ್ಥಳೀಯ ಸಂಸ್ಥೆಗಳು ತಮ್ಮಲ್ಲಿನ ಪೌರ ಘನತ್ಯಾಜ್ಯವನ್ನು ತೆರೆದ ವಾತಾವರಣದಲ್ಲಿ ದಹನ ಮಾಡುತ್ತಿದ್ದುದನ್ನು ಗಮನಿಸಲಾಯಿತು. ಚಿಂದಿ ಆಯುವವರು ಗಾಜು ಮತ್ತು ಕಬ್ಬಿಣವನ್ನು ಪಡೆಯಲು ತ್ಯಾಜ್ಯಕ್ಕೆ ಬೆಂಕಿ ಇಟ್ಟು ಸುಡುತ್ತಿದ್ದಾರೆ ಎಂದು ನಗರ ಸ್ಥಳೀಯ ಸಂಸ್ಥೆಗಳು ತಿಳಿಸಿದವು. ವಾಸ್ತವವಾಗಿ ನಗರ ಸ್ಥಳೀಯ ಸಂಸ್ಥೆಗಳು ನಿಯಮಾನುಸಾರ ತ್ಯಾಜ್ಯ ವಿಲೇವಾರಿ ಮಾಡದೇ ಇರುವುದರಿಂದ ಮತ್ತು ನೆಲಭರ್ತಿ ಜಾಗಕ್ಕೆ ಜನರ ಅನಧಿಕೃತ ಪ್ರವೇಶವನ್ನು ತಡೆಗಟ್ಟಲು ವಿಫಲರಾಗಿದ್ದರಿಂದ ಈ ಸ್ಪಷ್ಟೀಕರಣ ಸಮರ್ಥನೀಯವಲ್ಲ.

### 3.1.8 ಜೈವಿಕ–ವೈದ್ಯಕೀಯ ತ್ಯಾಜ್ಯ ನಿರ್ವಹಣೆ

220 ಆರೋಗ್ಯ ಪಾಲನಾ ಸಂಸ್ಥೆಗಳ ಜಂಟಿ ಪರಿವೀಕ್ಷಣೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಗಳ ಕಡತಗಳ ಪರಿಶೀಲನೆಯಿಂದ ಜೈವಿಕ–ವೈದ್ಯಕೀಯ ತ್ಯಾಜ್ಯ ನಿರ್ವಹಣಾ ನಿಯಮಗಳ ಪಾಲನೆಯಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಯಿತು:

#### 3.1.8.1 ಜೈವಿಕ–ವೈದ್ಯಕೀಯ ತ್ಯಾಜ್ಯಗಳ ಸಂಸ್ಕರಣೆ ಮತ್ತು ವಿಲೇವಾರಿ ವ್ಯವಸ್ಥೆಗಳ ಕೊರತೆ

**ಗ್ರಾಮಾಂತರ ಪ್ರದೇಶಗಳ ಬಹಳಷ್ಟು ಆರೋಗ್ಯ ಪಾಲನಾ ಸಂಸ್ಥೆಗಳು ಯಾವುದೇ ರೀತಿಯ ಸಂಸ್ಕರಣೆ ಮತ್ತು ವಿಲೇವಾರಿ ವ್ಯವಸ್ಥೆಯನ್ನು ಹೊಂದಿರಲಿಲ್ಲ**

220 ಆರೋಗ್ಯ ಪಾಲನಾ ಸಂಸ್ಥೆಗಳ ಪೈಕಿ 56 ಸಂಸ್ಥೆಗಳು (ಬೆಂಗಳೂರು, ಬೆಳಗಾವಿ, ದಾವಣಗೆರೆ, ಗುಲ್ಬರ್ಗಾ, ಹಾಸನ, ಮೈಸೂರು, ಮಂಗಳೂರು, ಧಾರವಾಡ ಮತ್ತು ಉಡುಪಿ) ಖಾಸಗಿ ವಲಯದವರು ಸ್ಥಾಪಿಸಿದ ಸಾಮಾನ್ಯ ಜೈವಿಕ–ವೈದ್ಯಕೀಯ ಸಂಸ್ಕರಣೆ ಮತ್ತು ವಿಲೇವಾರಿ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತಿದ್ದವು. ಆದರೆ ಉಳಿದ 164 ಆರೋಗ್ಯ ಪಾಲನಾ ಸಂಸ್ಥೆಗಳು ತಮ್ಮದೇ ಆದ ಸ್ವಂತ ಸಂಸ್ಕರಣೆ ಮತ್ತು ವಿಲೇವಾರಿ ವ್ಯವಸ್ಥೆಯನ್ನು ಹೊಂದಿರಲಿಲ್ಲ ಹಾಗೂ ಯಾವುದೇ ಅಧಿಕೃತ ಸಾಮಾನ್ಯ ವ್ಯವಸ್ಥೆಗೂ ಚಂದಾದಾರರಾಗಿರಲಿಲ್ಲ.

#### 3.1.8.2 ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧಿಕಾರ ಪತ್ರ ನೀಡಿಕೆ

**ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ 52 ಆರೋಗ್ಯ ಪಾಲನಾ ಸಂಸ್ಥೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧಿಕಾರ ಪತ್ರವಿಲ್ಲದೇ ಕೆಲಸ ಮಾಡುತ್ತಿದ್ದವು**

ಜೈವಿಕ–ವೈದ್ಯಕೀಯ ತ್ಯಾಜ್ಯ ನಿರ್ವಹಣಾ ನಿಯಮಗಳ ಪ್ರಕಾರ ಅಧಿಕಾರ ಪತ್ರ ನೀಡುವ ಅಥವಾ ನವೀಕರಿಸುವ ಪ್ರಾಧಿಕಾರವು ಅರ್ಜಿದಾರರಿಗೆ ಅಧಿಕಾರ ಪತ್ರ ನೀಡುವ ಅಥವಾ ನವೀಕರಿಸುವ ಮುನ್ನ ಅರ್ಜಿದಾರರು ನಿಯಮಗಳ ಪ್ರಕಾರ ಜೈವಿಕ–ವೈದ್ಯಕೀಯ ತ್ಯಾಜ್ಯ ನಿರ್ವಹಣೆಗೆ ಅವಶ್ಯಕವಾದ ಸಾಮರ್ಥ್ಯವನ್ನು ಹೊಂದಿದ್ದಾರೆಯೇ ಇಲ್ಲವೇ ಎಂದು ಸೂಕ್ತ ವಿಚಾರಣೆಯಿಂದ ಖಚಿತಪಡಿಸಿಕೊಳ್ಳಬೇಕು. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಯಾವುದೇ ಸಾಮಾನ್ಯ ವ್ಯವಸ್ಥೆಗೆ ಚಂದಾದಾರರಾಗಿರದ ಆರೋಗ್ಯ ಪಾಲನಾ ಸಂಸ್ಥೆಗಳ ಪರಿವೀಕ್ಷಣೆಯಲ್ಲಿ ಕಂಡುಬಂದಂತೆ ಈ ಸಂಸ್ಥೆಗಳು ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ನಿಯಮಗಳಿಗನುಸಾರವಾಗಿ ನಿರ್ವಹಣೆ ಮಾಡಲು ಶಕ್ತರಾಗಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳದೇ ಅವುಗಳಿಗೆ ಅಧಿಕಾರಪತ್ರ ಅಥವಾ ನವೀಕರಣವನ್ನು ಪ್ರಾದೇಶಿಕ ಕಛೇರಿಗಳು ಮಾಡುತ್ತಿದ್ದವು. ಈ ನ್ಯೂನತೆಯಿಂದಾಗಿ ಪರಿಸರ ಮಾಲಿನ್ಯ ಹೆಚ್ಚಾಗಿದ್ದೇ ಅಲ್ಲದೆ ಅನಾರೋಗ್ಯಕರ ಪರಿಸ್ಥಿತಿ ನಿರ್ಮಾಣದಿಂದ ಸಾರ್ವಜನಿಕ ಸ್ವಾಸ್ಥ್ಯಕ್ಕೆ ಅಪಾಯ ತಂದೊಡ್ಡಿತ್ತು.

[7] ಹರಿಹರ ನಗರಸಭೆ, ಸಂಕೇಶ್ವರ ಪುರಸಭೆ, ಗೋಕಾಕ ನಗರಸಭೆ, ನಿಪ್ಪಾಣಿ ನಗರಸಭೆ, ಇಳಕಲ್ ನಗರಸಭೆ, ಮುಧೋಳ ಪುರಸಭೆ, ಹೊಸಪೇಟೆ ನಗರಸಭೆ ಮತ್ತು ಜಮಖಂಡಿ ನಗರಸಭೆ

[8] ದಾವಣಗೆರೆ ನಗರಪಾಲಿಕೆ, ಗೋಕಾಕ ನಗರಸಭೆ, ಬಾಗಲಕೋಟೆ ನಗರಸಭೆ, ಜಮಖಂಡಿ ನಗರಸಭೆ, ಹೊಸಪೇಟೆ ನಗರಸಭೆ, ಗುಲ್ಬರ್ಗ ನಗರಸಭೆ ಮತ್ತು ನಿಪ್ಪಾಣಿ ನಗರಸಭೆ

ದಾಖಲೆಗಳ ಪರಿಶೀಲನೆಯಿಂದ 164 ಆರೋಗ್ಯ ಪಾಲನಾ ಸಂಸ್ಥೆಗಳ ಪೈಕಿ 52 ಸಂಸ್ಥೆಗಳು (**ಅನುಬಂಧ 3.7**) ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರ ಪತ್ರ ಪಡೆಯದೇ ಕೆಲಸ ಮಾಡುತ್ತಿದ್ದವು ಎಂದು ತಿಳಿದುಬಂದಿತು. ಲೆಕ್ಕಪರಿಶೋಧನೆಯಲ್ಲಿ ಈ ನ್ಯೂನತೆಯನ್ನು ಗಮನಿಸಿದ ನಂತರ ಪ್ರಾದೇಶಿಕ ಕಛೇರಿಗಳು ನಿಯಮಗಳ ಪ್ರಕಾರ ಅಧಿಕಾರ ಪತ್ರ ನೀಡುವ ದೆಸೆಯಲ್ಲಿ ಈ ಸಂಸ್ಥೆಗಳ ನೋಂದಣಿ ಕಾರ್ಯವನ್ನು ಕೈಗೊಂಡವು.

### 3.1.8.3 ಆಳದಲ್ಲಿ ಹೂಳುವ ವ್ಯವಸ್ಥೆಯಲ್ಲಿ ನ್ಯೂನತೆಗಳು

ಜೈವಿಕ–ವೈದ್ಯಕೀಯ ತ್ಯಾಜ್ಯ ನಿಯಮಗಳ ಪ್ರಕಾರ ಐದು ಲಕ್ಷಕ್ಕೂ ಕಡಿಮೆ ಜನಸಂಖ್ಯೆಯುಳ್ಳ ಸ್ಥಳಗಳಲ್ಲಿ ಆರೋಗ್ಯ ಪಾಲನಾ ಸಂಸ್ಥೆಗಳು ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ನಿಯಮದಲ್ಲಿ ನಿಗದಿಪಡಿಸಲಾದ ವಿಶಿಷ್ಟತೆಗಳ ಪ್ರಕಾರ ಆಳವಾದ ಹೂಳುಗುಂಡಿಗಳಲ್ಲಿ ವಿಲೇವಾರಿ ಮಾಡಬೇಕಾಗಿತ್ತು. ಆಳವಾಗಿ ಹೂಳುವ ಮಾನದಂಡಗಳ ಪ್ರಕಾರ ಗುಂಡಿಗಳ ನಿವೇಶನಕ್ಕೆ ನಿಗದಿತ ಪ್ರಾಧಿಕಾರದಿಂದ ಅಧಿಕಾರ ಪತ್ರ ಹೊಂದಿರಬೇಕು ಮತ್ತು ಗುಂಡಿಯನ್ನು ಎರಡು ಮೀಟರ್ ಆಳ ತೆಗೆದು ತ್ಯಾಜ್ಯವನ್ನು ಅದರ ಅರ್ಧ ಮಟ್ಟಕ್ಕೆ ಮಾತ್ರ ತುಂಬಬೇಕೆಂಬ ನಿಯಮವಿದೆ. ನಂತರ ಭೂಮಟ್ಟದಿಂದ 50 ಸೆಂಟಿಮೀಟರ್ ಕೆಳಗಿನವರೆಗೆ ಸುಣ್ಣದ ಪದರವನ್ನು ಹರಡಿ ಉಳಿದ ಸ್ಥಳವನ್ನು ಮಣ್ಣಿನಿಂದ ತುಂಬಬೇಕು. ಗುಂಡಿಗಳು ವಸತಿ ಪ್ರದೇಶ ಹಾಗೂ ಜಲ ಮೂಲಗಳಿಂದ ದೂರ ಇದ್ದು ಮಾಲಿನ್ಯ ಉಂಟಾಗದಂತೆ ಇರಬೇಕು.

ಪ್ರತಿ ಬಾರಿ ತ್ಯಾಜ್ಯ ವಸ್ತುಗಳನ್ನು ಗುಂಡಿಯಲ್ಲಿ ಸುರಿದಾಗ 10 ಸೆಂಟಿಮೀಟರ್ ಮಣ್ಣಿನ ಪದರವನ್ನು ಹರಡಬೇಕು ಮತ್ತು ಯಾವುದೇ ಪ್ರಾಣಿಗಳು ಗುಂಡಿಯ ಹತ್ತಿರ ಬಾರದಂತೆ ಮಾಡಲು ಗುಂಡಿಯ ಮೇಲ್ಭಾಗವನ್ನು ತುಕ್ಕು ಹಿಡಿಯದ ಕಬ್ಬಿಣದ ಬಲೆಯಿಂದ ಮುಚ್ಚಬೇಕು.

**ಪರಿಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿನ ಸರ್ಕಾರಿ ಆಸ್ಪತ್ರೆಗಳು ಜೈವಿಕ–ವೈದ್ಯಕೀಯ ತ್ಯಾಜ್ಯವನ್ನು ನಿಯಮಗಳಿಗನುಸಾರವಾಗಿ ಸಂಸ್ಕರಿಸುತ್ತಿರಲಿಲ್ಲ**

164 ಆರೋಗ್ಯ ಪಾಲನಾ ಸಂಸ್ಥೆಗಳ ಆಳದ ಹೂಳು ಗುಂಡಿಗಳ ಜಂಟಿ ಪರಿವೀಕ್ಷಣೆಯಲ್ಲಿ ಗಮನಿಸಿದಂತೆ ಯಾವೊಂದು ಆರೋಗ್ಯ ಪಾಲನಾ ಸಂಸ್ಥೆಯೂ ನಿಯಮಗಳಲ್ಲಿನ ವಿಶಿಷ್ಟತೆಗಳ ಪ್ರಕಾರ ಹಳ್ಳವನ್ನು ನಿರ್ವಹಿಸಿರಲಿಲ್ಲ. ಪರೀಕ್ಷಾ–ತನಿಖೆ ನಡೆಸಿದ ಬಾಗಲಕೋಟೆ, ಗುಲ್ಬರ್ಗಾ, ಬಳ್ಳಾರಿ, ದಾವಣಗೆರೆ, ಬೆಳಗಾಂ, ಮೈಸೂರು, ಕಾರವಾರ, ಹಾಸನ ಮತ್ತು ಉಡುಪಿ ಜಿಲ್ಲೆಗಳಲ್ಲಿನ 21 ಸರ್ಕಾರಿ ಆಸ್ಪತ್ರೆಗಳು ತಮ್ಮ ಅಂಗಳಗಳಲ್ಲಿಯೇ ತೋಡಿದ ಹೂಳುಗುಂಡಿಗಳಲ್ಲಿ ಎಲ್ಲಾ ತರಹದ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ಸುರಿಯುತ್ತಿದ್ದವು ಮತ್ತು ಜಿಲ್ಲೆಗಳಲ್ಲಿನ ಐದು ಆರೋಗ್ಯ ಪಾಲನಾ ಸಂಸ್ಥೆಗಳು ಪೌರ ಘನತ್ಯಾಜ್ಯವನ್ನು ವಿಲೇವಾರಿಗಾಗಿ ಪುರಸಭೆಯ ಸಿಬ್ಬಂದಿಗೆ ಹಸ್ತಾಂತರ ಮಾಡುತ್ತಿದ್ದವು. ಇವಲ್ಲದೆ, ಹರಿತವಾದ ವಸ್ತುಗಳು, ರಕ್ತಸಿಕ್ತ ಮತ್ತು ದೇಹಸ್ರವಗಳಿಂದ ಕೂಡಿದ ತ್ಯಾಜ್ಯ (ಹತ್ತಿ, ಬ್ಯಾಂಡೇಜ್ ಬಟ್ಟೆ, ಕೊಳೆಯಾದ ಪ್ಲಾಸ್ಟರ್ ಪಟ್ಟಿಗಳು, ಹಾಸಿಗೆ–ಹೊದಿಕೆಗಳು, ಇತ್ಯಾದಿ) ಇವೇ ಮುಂತಾದ ಜೈವಿಕ–ವೈದ್ಯಕೀಯ ತ್ಯಾಜ್ಯಗಳು 15 ಸರ್ಕಾರೀ ಆಸ್ಪತ್ರೆಗಳ (**ಅನುಬಂಧ 3.8**) ಅಂಗಳದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು ಸಾರ್ವಜನಿಕ ಆರೋಗ್ಯಕ್ಕೆ ಅಪಾಯ ತಂದೊಡ್ಡಿದ್ದವು. ಈ ತ್ಯಾಜ್ಯಗಳನ್ನು ಬಯಲಲ್ಲಿ ಸುಡುತ್ತಿದ್ದು ಪರಿಸರ ಮಾಲಿನ್ಯವಾಗುತ್ತಿದ್ದುದನ್ನು ಜಂಟಿ ಪರಿವೀಕ್ಷಣೆಯ ಸಮಯದಲ್ಲಿ ಗಮನಿಸಲಾಯಿತು. ಜೈವಿಕ ವೈದ್ಯಕೀಯ ತ್ಯಾಜ್ಯಗಳನ್ನು ವಿಲೇವಾರಿ ಮಾಡುವ ಗುಂಡಿಗಳನ್ನು ನಿಯಮದಂತೆ ಮಣ್ಣಿನಿಂದ ಮುಚ್ಚಲಾಗಿರಲಿಲ್ಲ. ತತ್ಪರಿಣಾಮವಾಗಿ ಅಲೆಮಾರಿ ಪ್ರಾಣಿಗಳು ಈ ಗುಂಡಿಗಳ ಬಳಿ ಓಡಾಡುತ್ತಿದ್ದು ನೊಣಗಳು ಈ ಸ್ಥಳದಲ್ಲಿ ತುಂಬಿಕೊಂಡಿದ್ದು ಸುತ್ತಮುತ್ತಲಿನ ಇಡೀ ಪ್ರದೇಶವು ಅನಾರೋಗ್ಯಕರವಾಗಿತ್ತು.



**ಚನ್ನರಾಯಪಟ್ಟಣದ ಸರ್ಕಾರೀ ಆಸ್ಪತ್ರೆಯ ಆವರಣದಲ್ಲಿದ್ದ ಜೈವಿಕ–ವೈದ್ಯಕೀಯ ತ್ಯಾಜ್ಯದ ಗುಂಡಿಗಳ ಬಳಿ ಇದ್ದ ಬೀದಿ ನಾಯಿಗಳು (10 ಜೂನ್ 2008)**

ಈ ನ್ಯೂನತೆಗಳು ಆವಶ್ಯಕ ಸಿಬ್ಬಂದಿ ಹಾಗೂ ಹಣದ ಕೊರತೆಯಿಂದ ಉಂಟಾಗಿವೆ ಎಂದು ಆಸ್ಪತ್ರೆಯ ಅಧಿಕಾರಿಗಳು ಅಧ್ಯಾರೋಪಿಸಿದರು. ನಲವತ್ತೆಂಟು ಆಸ್ಪತ್ರೆಗಳು ಹರಿತವಾದ ತ್ಯಾಜ್ಯಗಳಾದ ಸೂಜಿ, ಪಿಚಕಾರಿಗಳು, ಗಾಜು, ಚಾಕು, ಬ್ಲೇಡು ಮುಂತಾದವುಗಳನ್ನು ವಿಲೇವಾರಿ ಮಾಡುವ ಮುನ್ನ ಅವುಗಳಲ್ಲಿರುವ ಸೋಂಕು ನಿವಾರಿಸಿ ಮೊಂಡುಗೊಳಿಸುತ್ತಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಅದೇ ರೀತಿ ಉಪಯೋಗಿಸಿ ತಿರಸ್ಕರಿಸಿದ ಬಾಟಲ್‌ಗಳು, ಕೊಳವೆಗಳು, ಅಂತರ್ನಾಳ ಸೂಜಿಗಳು, ಟ್ಯೂಬ್‌ಗಳು, ಕ್ಯಾಥೆಟರ್ ಮುಂತಾದ ತ್ಯಾಜ್ಯಗಳನ್ನು ಗುಜರಿ ವ್ಯಾಪಾರಿಗಳಿಗೆ, ಚಿಂದಿ ಆಯುವವರಿಗೆ ಮತ್ತು ಸ್ಥಳೀಯ ವ್ಯಾಪಾರಿಗಳಿಗೆ ಆರೋಗ್ಯ ಪಾಲನಾ ಸಂಸ್ಥೆಗಳು ಮಾರಾಟ ಮಾಡುತ್ತಿದ್ದವು. ಇವುಗಳನ್ನು ನಿಯಮಗಳ ಪ್ರಕಾರ ಪುನರ್ಬಳಕೆಯಾಗದಂತೆ ತಡೆಯಲು ಸೋಂಕು ನಿವಾರಣೆಗೊಳಿಸಿ, ಮೊಂಡುಗೊಳಿಸಿ ಆಳವಾದ ಹಳ್ಳಗಳಲ್ಲಿ ನಿಯಮಗಳ ವಿಶಿಷ್ಟತೆಗಳ ಪ್ರಕಾರ ಹೂಳಬೇಕಾಗಿತ್ತು. ಗೋಕಾಕದಲ್ಲಿರುವ ಒಂದು ಆರೋಗ್ಯ ಪಾಲನಾ ಸಂಸ್ಥೆಯು ತನ್ನ ದ್ರವ ತ್ಯಾಜ್ಯವನ್ನು ಎದುರಿಗಿರುವ ಮುಖ್ಯರಸ್ತೆಯ ಬದಿಯಲ್ಲಿ ಒಂದು ಕೊಳೆಯುವ ಹೊಂಡ ತೋಡಿ ಅದರಲ್ಲಿ ತುಂಬುತ್ತಿದ್ದುದು ಕಂಡು ಬಂದಿದ್ದು, ಇವುಗಳನ್ನು ಸರಿಪಡಿಸುವ ದಿಸೆಯಲ್ಲಿ ಸ್ಥಳೀಯ ಪೌರ ಅಧಿಕಾರಿಗಳು ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇನ್ನೂ ಕಾರ್ಯೋನ್ಮುಖರಾಗಬೇಕಿತ್ತು.



**ಗೋಕಾಕದ ನವಜೀವನ್ ಆಸ್ಪತ್ರೆಯಲ್ಲಿ ದ್ರವ ತ್ಯಾಜ್ಯವನ್ನು ಬೀದಿಗೆ ಬಿಟ್ಟಿರುವುದು (17 ಏಪ್ರಿಲ್ 2008)**

### 3.1.8.4 ಸಾಮಾನ್ಯ ಜೈವಿಕ–ವೈದ್ಯಕೀಯ ತ್ಯಾಜ್ಯದ ಸಂಸ್ಕರಣೆ ಮತ್ತು ವಿಲೇವಾರಿ ಸೌಕರ್ಯಗಳಲ್ಲಿ ನ್ಯೂನತೆಗಳು

**ನಿರ್ವಾಹಕರು ನಡೆಸುತ್ತಿದ್ದ ಸಾಮಾನ್ಯ ಜೈವಿಕ–ವೈದ್ಯಕೀಯ ತ್ಯಾಜ್ಯ ಸಂಸ್ಕರಣಾ ಮತ್ತು ವಿಲೇವಾರಿ ಸೌಕರ್ಯಗಳಲ್ಲಿ ಅನೇಕ ನ್ಯೂನತೆಗಳಿದ್ದವು**

ಜೈವಿಕ–ವೈದ್ಯಕೀಯ ಸಂಸ್ಕರಣೆ ಹಾಗೂ ವಿಲೇವಾರಿಗಾಗಿ ಖಾಸಗಿ ನಿರ್ವಾಹಕರು ಸ್ಥಾಪಿಸಿದ್ದ ಸಾಮಾನ್ಯ ಸೌಕರ್ಯಗಳು ಬೆಂಗಳೂರು, ಬೆಳಗಾವಿ, ದಾವಣಗೆರೆ, ಗುಲ್ಬರ್ಗ, ಹುಬ್ಬಳ್ಳಿ, ಮಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕಾರ್ಯಾಚರಣೆ ಮಾಡುತ್ತಿದ್ದವು. ಈ ಸಾಮಾನ್ಯ ಸೌಕರ್ಯಗಳಿಗೆ ಚಂದಾದಾರರಾಗಿದ್ದ 56 ಆರೋಗ್ಯ ಪಾಲನಾ ಸಂಸ್ಥೆಗಳನ್ನು ಲೆಕ್ಕಪರಿಶೋಧನೆ ಸಮಯದಲ್ಲಿ ಜಂಟಿಯಾಗಿ ಪರಿವೀಕ್ಷಣೆ ಮಾಡಲಾಗಿ, ಈ ಕೆಳಕಂಡ ನ್ಯೂನತೆಗಳು ಕಂಡುಬಂದವು:

- ಹನ್ನೊಂದು ಆರೋಗ್ಯ ಪಾಲನಾ ಸಂಸ್ಥೆಗಳು ನಿಯಮಗಳಿಗೆ ವಿರುದ್ಧವಾಗಿ ಮೂಲದಲ್ಲಿ ತ್ಯಾಜ್ಯಗಳ ಬೇರ್ಪಡಿಸುವಿಕೆ, ಬಣ್ಣ–ಸಂಕೇತ ವ್ಯವಸ್ಥೆ ಹಾಗೂ ತ್ಯಾಜ್ಯವಿರುವ ಚೀಲ/ಡಬ್ಬಗಳ ಮೇಲೆ ಗುರುತಿನ ಚೀಟಿಗಳನ್ನು ಹಚ್ಚುವುದು, ಇವು ಯಾವುದನ್ನೂ ಆಚರಣೆ ಮಾಡುತ್ತಿರಲಿಲ್ಲ.
- ಅನುಮತಿ ಇಲ್ಲದಿದ್ದಾಗ್ಯೂ ಸಂಸ್ಕರಿಸದ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ಆರು[9] ಆರೋಗ್ಯ ಪಾಲನಾ ಸಂಸ್ಥೆಗಳು ಉತ್ಪತ್ತಿಯಾದ 48 ಗಂಟೆಗಳಿಗೂ ಮೀರಿ ಒಂದು ವಾರದ ತನಕ ಸಂಗ್ರಹಿಸಿಟ್ಟಿದ್ದವು. ಇದು ನಿಯಮಗಳಿಗೆ ವ್ಯತಿರಿಕ್ತವಾಗಿತ್ತಷ್ಟೇ ಅಲ್ಲದೆ ಸೋಂಕು ಹರಡುವ ಅಪಾಯ ಸಂಭವಕ್ಕೂ ದಾರಿ ಮಾಡಿಕೊಟ್ಟಿತ್ತು.

---

9 ಸಾರ್ವಜನಿಕ ಆಸ್ಪತ್ರೆ–ಹೊಳೆನರಸೀಪುರ, ರಾಜೀವ್ ಆಸ್ಪತ್ರೆ–ಹಾಸನ, ಎಸ್‌ಎಸ್‌ಎಮ್ ಆಸ್ಪತ್ರೆ–ಹಾಸನ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ–ಕೆ.ಆರ್.ನಗರ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ–ಹುಣಸೂರು ಮತ್ತು ಬಹುಸಾರ್ ನರ್ಸಿಂಗ್ ಹೋಮ್–ಹುಣಸೂರು

- ಬೆಂಗಳೂರಿನ ಸೆಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಉತ್ಪತ್ತಿಯಾದ ವಿವಿಧ ವರ್ಗದ ಜೈವಿಕ–ವೈದ್ಯಕೀಯ ತ್ಯಾಜ್ಯಗಳು ಮೂಲದಲ್ಲಿಯೇ ಬೇರ್ಪಟ್ಟಿದ್ದರೂ ಸಾಮಾನ್ಯ ಸಂಸ್ಕರಣಾ ಸೌಲಭ್ಯಕ್ಕೆ ಸಾಗಿಸುವ ಮುನ್ನ ಈ ಎಲ್ಲ ತ್ಯಾಜ್ಯಗಳೂ ಒಂದೇ ಬುಟ್ಟಿಗೆ ಹಾಕಲ್ಪಟ್ಟು ಬೆರೆತು ಹೋಗಿದ್ದವು.
- ಹಾಸನದ ಎಸ್‌ಎಸ್‌ಎಮ್ ಆಸ್ಪತ್ರೆಯು ಸಾಮಾನ್ಯ ಸಂಸ್ಕರಣಾ ಮತ್ತು ವಿಲೇವಾರಿ ಸೌಕರ್ಯವೊಂದಕ್ಕೆ ಚಂದಾದಾರರಾಗಿದ್ದರೂ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ನಗರಸಭೆಯ ಕಸದ ತೊಟ್ಟಿಯಲ್ಲೇ ವಿಲೇವಾರಿ ಮಾಡುತ್ತಿತ್ತು. ಆಸ್ಪತ್ರೆಯಲ್ಲಿ ಉತ್ಪತ್ತಿಯಾದ ದ್ರವ ರೂಪದ ತ್ಯಾಜ್ಯಗಳನ್ನು ಸಂಸ್ಕರಣೆ ಮಾಡದೇ ಮೋರಿಗೆ ಬಿಡಲಾಗುತ್ತಿತ್ತು.

**ಬಳ್ಳಾರಿಯ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯು ನಗರದ ಎಲ್ಲ ಆರೋಗ್ಯ ಪಾಲನಾ ಸಂಸ್ಥೆಗಳಲ್ಲಿನ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ಸ್ವೀಕರಿಸಿ ಅದನ್ನು ನಿಯಮಗಳನುಸಾರ ಸಂಸ್ಕರಿಸುತ್ತಿರಲಿಲ್ಲ**

- ಬಳ್ಳಾರಿ ನಗರದಲ್ಲಿದ್ದ ವಿಜಯನಗರ ವೈದ್ಯಕೀಯ–ವಿಜ್ಞಾನ ಸಂಸ್ಥೆಯು (ವಿಮ್ಸ್) ಆ ನಗರದಲ್ಲಿದ್ದ ಎಲ್ಲಾ ಆರೋಗ್ಯ ಪಾಲನಾ ಸಂಸ್ಥೆಗಳಲ್ಲಿ ಉತ್ಪತ್ತಿಯಾಗುವ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ಸ್ವೀಕರಿಸಿ, ಸಂಸ್ಕರಣೆ ಹಾಗೂ ವಿಲೇವಾರಿ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧಿಕಾರ ಪತ್ರ ಹೊಂದಿತ್ತು (31 ಡಿಸೆಂಬರ್ 2007ರವರೆಗೆ). ಈ ಸಾಮಾನ್ಯ ಸೌಕರ್ಯ ವ್ಯವಸ್ಥೆಯಲ್ಲಿ ವಾಯು ಮಾಲಿನ್ಯ ನಿರೋಧಕ ಸಾಧನವಿಲ್ಲದ ಒಂದು ದಹನಕುಂಡ (ಇನ್ಸಿನರೇಟರ್) ಮಾತ್ರ ಇದ್ದು ವಿವಿಧ ವರ್ಗದ ತ್ಯಾಜ್ಯಗಳನ್ನು ಸಂಸ್ಕರಿಸಲು ಬೇಕಾದ ಆಟೋಕ್ಲೇವ್, ಮೈಕ್ರೋವೇವ್ ಮತ್ತು ಸೂಜಿಗಳನ್ನು ತೊಡೆದುಹಾಕುವ ಶ್ರೆಡರ್ಸ್ ಮುಂತಾದವುಗಳಿರಲಿಲ್ಲ. ಇದ್ದ ಒಂದೇ ದಹನಕುಂಡವು ನಿಯಮಗಳಿಗನುಸಾರವಾದ ಕಾರ್ಯಾಚರಣಾ ಮಾನದಂಡಗಳಿಗೆ ಅನುರೂಪವಾಗಿರಲಿಲ್ಲ. ಇಷ್ಟೆಲ್ಲಾ ನ್ಯೂನತೆಗಳಿದ್ದಿದ್ದರಿಂದ ವಿಮ್ಸ್ ಎಲ್ಲಾ ವರ್ಗದ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ಆರೋಗ್ಯ ಪಾಲನಾ ಸಂಸ್ಥೆಗಳಿಂದ ಸಂಗ್ರಹಿಸಿ ಅವುಗಳನ್ನು ನಿಯಮಗಳಿಗನುಸಾರವಾಗಿ ಸಂಸ್ಕರಿಸಿ ವಿಲೇವಾರಿ ಮಾಡಲು ಶಕ್ತವಾಗಿರಲಿಲ್ಲ. ಈ ಸೌಕರ್ಯ ವ್ಯವಸ್ಥೆಯ ಜಂಟಿ ಪರಿವೀಕ್ಷಣೆಯ ಸಮಯದಲ್ಲಿ ವಿವಿಧ ವರ್ಗಗಳ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ಬಯಲಲ್ಲಿ ದಹನ ಮಾಡುತ್ತಿದ್ದುದು ಹಾಗೂ ಭಾಗಶ: ಉರಿದ ತ್ಯಾಜ್ಯಗಳು ಪ್ರಾಂಗಣದಲ್ಲೆಲ್ಲಾ ಹರಡಿದ್ದನ್ನು ಗಮನಿಸಲಾಯಿತು. ಅಲೆಮಾರಿ ಪ್ರಾಣಿಗಳು ಪ್ರಾಂಗಣದಲ್ಲೆಲ್ಲಾ ಓಡಾಡುತ್ತಿದ್ದುದನ್ನು ಹಾಗೂ ರಕ್ತಸಿಕ್ತವಾದ ಮತ್ತು ದೇಹಸ್ರವಗಳಿಂದ ಕಲುಷಿತವಾದ ಘನ ತ್ಯಾಜ್ಯಗಳನ್ನು ಯಾವುದೇ ರೀತಿಯ ಸಂಸ್ಕರಣೆ ಮಾಡದೇ ಸೋಂಕು ಅಪಾಯ ಸಂಭವವಿರುವಂತೆ ಬಿಸಾಡಿದುದನ್ನು ಗಮನಿಸಲಾಯಿತು.




ಬಳ್ಳಾರಿಯ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ಜೈವಿಕ–ವೈದ್ಯಕೀಯ ತ್ಯಾಜ್ಯವನ್ನು ದಹನ ಮಾಡುತ್ತಿರುವುದು

## 3.1.9 ಇತರೆ ವಿಷಯಗಳು

### 3.1.9.1 ನೆಲಭರ್ತಿ ಜಾಗದಲ್ಲಿ ಅಕ್ರಮ ಗಣಿಗಾರಿಕೆ

**ಹೊಸಪೇಟೆ ನಗರಸಭೆಯ ನೆಲಭರ್ತಿ ಜಾಗವನ್ನು ಘನತ್ಯಾಜ್ಯ ನಿರ್ವಹಣೆಯ ಬದಲಿಗೆ ಗಣಿಗಾರಿಕೆಗೆ ಬಳಸಲಾಗುತ್ತಿತ್ತು**

ನೆಲಭರ್ತಿ ಜಾಗದ ಅಭಿವೃದ್ಧಿಗಾಗಿ ಹೊಸಪೇಟೆ ನಗರ ಸಭೆಗೆ ಬಳ್ಳಾರಿ ಜಿಲ್ಲಾಧಿಕಾರಿಗಳು 35 ಎಕರೆ ಜಮೀನು ಹಂಚಿಕೆ ಮಾಡಿ (ಮೇ 2006) ಘನತ್ಯಾಜ್ಯ ನಿರ್ವಹಣೆಗಾಗಿ ರೂ.80.64 ಲಕ್ಷ ಬಿಡುಗಡೆ ಮಾಡಿದರು. ಕಾಂಪೌಂಡ್ ಗೋಡೆ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ನವೆಂಬರ್ 2006ರಲ್ಲಿ ಕರೆಯಲಾದ ಟೆಂಡರನ್ನು ಕಾರ್ಯವಿಧಾನ ಆಚರಣೆಯಲ್ಲಿದ್ದ ಲೋಪದೋಷಗಳಿಂದಾಗಿ ಜನವರಿ 2007ರಲ್ಲಿ ರದ್ದುಪಡಿಸಲಾಯಿತು. ಟೆಂಡರ್ ರದ್ದುಪಡಿಸಿದ ನಂತರ ನೆಲಭರ್ತಿ ಜಾಗದಲ್ಲಿ ಭೂಮಿಯನ್ನು ಸಮತಟ್ಟ ಮಾಡುವ ಕಾರ್ಯ ಕೈಗೊಂಡು ಅದರಿಂದ ಒದಗುವ ಮಣ್ಣಿನಲ್ಲಿ ಕಬ್ಬಿಣದ

ಅದಿರಿನ ಅಂಶ ಹೆಚ್ಚಾಗಿರುವುದರಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮೂಲಕ ಅದನ್ನು ಹರಾಜು ಮಾಡಬೇಕೆಂಬ ಠರಾವನ್ನು ನಗರಸಭೆಯು ಅಂಗೀಕರಿಸಿದ್ದನ್ನು ದಾಖಲೆಗಳಿಂದ ಗಮನಿಸಲಾಯಿತು. ಇದರಿಂದ ಬರುವ ಆದಾಯವನ್ನು ನಗರಸಭೆಗೆ ವಿನಿಯೋಗಿಸುವುದು ಎಂತಲೂ ಪ್ರಸ್ತಾವಿಸಲಾಯಿತು. ಗಣಿಗಾರಿಕೆಯು ಪ್ರಗತಿಯಲ್ಲಿದ್ದಾಗ (ಜನವರಿ 2008) ಆ ಜಾಗದಲ್ಲಿ ಗಣಿಗಾರಿಕೆ ಹಕ್ಕುಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ದಾವೆಗಳಿರುವುದರಿಂದ ಗಣಿಗಾರಿಕೆಯನ್ನು ಮುಂದುವರೆಸಬಾರದೆಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಮುಂದಿನ ಕಾರ್ಯಾಚರಣೆಯನ್ನು ನಿಲ್ಲಿಸಿತು. ಹರಾಜಿನ ಮೂಲಕ ಅಗೆದ ಮಣ್ಣನ್ನು ವಿಲೇವಾರಿ ಮಾಡುವ ಠರಾವನ್ನು ಅಂದಿನ ಆಡಳಿತಾಧಿಕಾರಿಗಳ (ಜಿಲ್ಲಾಧಿಕಾರಿ) ಅನುಮೋದನೆಯ ಮೇರೆಗೆ ಅಕ್ರಮ ಗಣಿಗಾರಿಕೆ ಚಟುವಟಿಕೆಗಳನ್ನು ತಡೆಗಟ್ಟುವ ಉದ್ದೇಶದಿಂದ ಅಂಗೀಕರಿಸಲಾಯಿತು ಎಂದು ಲೆಕ್ಕಪರಿಶೋಧನೆಯ ಅವಲೋಕನಕ್ಕೆ ನಗರ ಸಭೆಯು ಉತ್ತರಿಸಿತು. ಆದರೆ, ಭೂಮಿ ಲಭ್ಯವಾಗಿ ಎರಡು ವರ್ಷಗಳು ಗತಿಸಿದರೂ ನೆಲಭರ್ತಿ ಜಾಗವನ್ನು ಅಭಿವೃದ್ಧಿ ಪಡಿಸಲು ನಗರಸಭೆಯು ಯಾವುದೇ ತ್ವರಿತ ಕ್ರಮವನ್ನು ತೆಗೆದುಕೊಳ್ಳಲಿಲ್ಲ, ಬದಲಾಗಿ ಗಣಿಗಾರಿಕೆ ನಡೆಸಲು ತೀರ್ಮಾನಿಸಿತು ಎಂಬುದು ವಾಸ್ತವ ಸಂಗತಿಯಾಗಿತ್ತು. ಹಾಲಿ ಇದ್ದ ಭೂ ಮಟ್ಟಗಳನ್ನು ಪರಿಗಣಿಸಿ ಸಮತಟ್ಟು ಮಾಡುವ ಕಾಮಗಾರಿಗೆ ಒಂದು ಅಂದಾಜನ್ನು ಕೂಡ ನಗರಸಭೆಯು ತಯಾರಿಸಿರಲಿಲ್ಲ. ಹೀಗೆ ನೆಲಭರ್ತಿ ಜಾಗದಲ್ಲಿ ಗಣಿಗಾರಿಕೆಯನ್ನು ತೆಗೆದುಕೊಳ್ಳುವಂತಹ ಆಡಳಿತಾಧಿಕಾರಿಯವರ ವಿವೇಚನಾರಹಿತ ತೀರ್ಮಾನವು ಘನತ್ಯಾಜ್ಯ ವಸ್ತುಗಳ ವೈಜ್ಞಾನಿಕ ವಿಲೇವಾರಿಯು ಭೂಮಿ ಮತ್ತು ಹಣದ ಲಭ್ಯತೆ ಇದ್ದಾಗ್ಯೂ ಸಹ ವಿಳಂಬವಾಗುವಲ್ಲಿ ಪರಿಣಮಿಸಿತು. ಆಡಳಿತಾಧಿಕಾರಿಯವರ (ಜಿಲ್ಲಾಧಿಕಾರಿ, ಬಳ್ಳಾರಿ) ಅಭಿಪ್ರಾಯ ಸ್ವೀಕೃತವಾಗಿಲ್ಲ (ಆಗಸ್ಟ್ 2008).

### 3.1.9.2 ವಿವೇಚನಾರಹಿತ ಭೂ ಪರಿತ್ಯಾಗದಿಂದ ವಿಳಂಬಗೊಂಡ ನೆಲಭರ್ತಿ ಜಾಗದ ಅಭಿವೃದ್ಧಿ

**ಗುಲ್ಬರ್ಗಾ ನಗರ ಸಭೆಯು ನೆಲಭರ್ತಿ ಜಾಗವನ್ನು ಅಭಿವೃದ್ಧಿಪಡಿಸುವಲ್ಲಿ ಎರಡು ವರ್ಷಗಳಿಗೂ ಮೆಲ್ಪಟ್ಟು ಸಮಯವನ್ನು ವ್ಯರ್ಥಮಾಡಿಕೊಂಡಿತು**

ಸರ್ಕಾರವು ಗುಲ್ಬರ್ಗಾ ತಾಲ್ಲೂಕು ಉದನೂರು ಗ್ರಾಮದಲ್ಲಿ 28.5 ಎಕರೆ ಸರ್ಕಾರಿ ಜಮೀನನ್ನು ಗುಲ್ಬರ್ಗ ನಗರಪಾಲಿಕೆಗೆ ಪೌರ ಘನತ್ಯಾಜ್ಯ ನಿರ್ವಹಣೆಯ ಉದ್ದೇಶಕ್ಕಾಗಿ ಫೆಬ್ರವರಿ 2004ರಲ್ಲಿ ಹಂಚಿಕೆ ಮಾಡಿತು ಮತ್ತು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ನೆಲಭರ್ತಿ ಸೌಲಭ್ಯಗಳನ್ನು ಸ್ಥಾಪಿಸಿ ಪೌರ ಘನತ್ಯಾಜ್ಯಗಳ ಸಂಸ್ಕರಣೆ ಮಾಡಲು ಅಧಿಕಾರ ಪತ್ರ ನೀಡಿತು (ಸೆಪ್ಟಂಬರ್ 2004). ಆದಾಗ್ಯೂ, ನೆಲಭರ್ತಿ ಜಾಗಕ್ಕೆ ಕೂಡುರಸ್ತೆ ನಿರ್ಮಿಸುವುದು ಬಹಳ ದುಬಾರಿ (ರೂ.ಒಂದು ಕೋಟಿ) ಎಂಬ ಕಾರಣದಿಂದ ನಗರಪಾಲಿಕೆ ಮುಂದಿನ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಆದುದರಿಂದ ಈ ಉದ್ದೇಶಕ್ಕಾಗಿ ಬೇರೊಂದು ಸೂಕ್ತ ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳುವಂತೆ ಪೌರಾಡಳಿತ ನಿರ್ದೇಶಕರು ನಗರಪಾಲಿಕೆಗೆ ನಿರ್ದೇಶಿಸಿದರು (ನವೆಂಬರ್ 2006). 32.25 ಎಕರೆ ವಿಸ್ತೀರ್ಣದ ರೂ.65.25 ಲಕ್ಷ ಬೆಲೆ ಬಾಳುವ ಮತ್ತೊಂದು ನಿವೇಶನವನ್ನು ಖಣದಾಳ್ ಗ್ರಾಮದಲ್ಲಿ ಗುರುತಿಸಲಾಯಿತು. ಶೇಕಡ 75ರಷ್ಟು ಮೌಲ್ಯವನ್ನು ಭೂ ಮಾಲೀಕರಿಗೆ ಪಾವತಿ ಮಾಡಿ ಉಳಿದ ಹಣವನ್ನು ಗುಲ್ಬರ್ಗಾ ತಾಲ್ಲೂಕು ಉಪ ವಿಭಾಗಾಧಿಕಾರಿಗಳ ಬಳಿ ಠೇವಣಿ ಇಡಲಾಯಿತು (ಜೂನ್ 2007). ಆದರೆ ಚಾಲ್ತಿಯಲ್ಲಿದ್ದ ಕೋರ್ಟ್ ದಾವೆಗಳ ಕಾರಣ ಭೂಮಿಯ ಸ್ವಾಧೀನತೆಯನ್ನು ಪಡೆಯಲಾಗಲಿಲ್ಲ. ಈ ಮಧ್ಯೆ, ಖಣದಾಳ್ ಗ್ರಾಮದ ನಿವೇಶನದಲ್ಲಿ ನೆಲಭರ್ತಿ ಜಾಗದ ಸ್ಥಾಪನೆಗೆ ರಾಜ್ಯ ಪರಿಸರ ಪ್ರಭಾವ ನಿರ್ಧರಣಾ ಪ್ರಾಧಿಕಾರದಿಂದ ಪರಿಸರಾತ್ಮಕ ಪರವಾನಗಿಯನ್ನು ಪಡೆದು ನಂತರ ತನ್ನಿಂದ ಅಧಿಕಾರ ಪತ್ರ ಪಡೆಯಬೇಕು ಎಂಬುದಾಗಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಆಗ್ರಹಿಸಿತು. ಆ ವೇಳೆಗೆ ಉದನೂರು ಗ್ರಾಮದ ಸರ್ಕಾರೀ ಜಮೀನಿಗೆ ಕೂಡು ರಸ್ತೆಯ ನಿರ್ಮಾಣವನ್ನು ರಾಜ್ಯ ಲೋಕೋಪಯೋಗಿ ಇಲಾಖೆಯು ಕೈಗೊಂಡಿದ್ದರಿಂದ ಆ ನಿವೇಶನವನ್ನೇ ಸ್ವಾಧೀನಪಡಿಸಿಕೊಳ್ಳಲು ನಗರಪಾಲಿಕೆಯು ತೀರ್ಮಾನಿಸಿತು (ಡಿಸೆಂಬರ್ 2007).

ಹೀಗೆ ಉದನೂರು ಗ್ರಾಮದ ನೆಲಭರ್ತಿ ಜಾಗದ ಅಭಿವೃದ್ಧಿಗೆ ಭೂಮಿ ಹಂಚಿಕೆಯಾದ ಎರಡು ವರ್ಷಗಳ ನಂತರವೂ ಯಾವುದೇ ಕ್ರಮ ತೆಗೆದುಕೊಳ್ಳದೇ ಹಾಗೂ ತೀರ್ಮಾನವಾಗದೇ ಇದ್ದ ಕೋರ್ಟ್ ದಾವೆಗಳನ್ನು ಗಮನಿಸದೇ ಮತ್ತು ಪರಿಸರಾತ್ಮಕ ಪರವಾನಗಿಯನ್ನು ತೆಗೆದುಕೊಳ್ಳುವ ಅಗತ್ಯದ ಬಗ್ಗೆ ಯೋಚಿಸದೇ ಖಣದಾಳ್ ಗ್ರಾಮದ ಭೂ ಮಾಲೀಕರಿಗೆ ಮುಂಗಡ ಹಣ ಪಾವತಿ ಮಾಡಿದ ನಗರ ಪಾಲಿಕೆಯ ವಿವೇಚನಾರಹಿತ ಕ್ರಮವು ನೆಲಭರ್ತಿ ಜಾಗವನ್ನು ಸ್ಥಾಪಿಸುವಲ್ಲಿನ ವಿಳಂಬವಷ್ಟೇ ಅಲ್ಲದೆ ರೂ.65.25 ಲಕ್ಷದಷ್ಟು ಸರ್ಕಾರಿ ಹಣವು ಬಂಧಿತವಾಗುವುದರಲ್ಲಿ ಪರಿಣಮಿಸಿತು.

### 3.1.9.3 ಪರಿಸರ–ಸೂಕ್ಷ್ಮ ಅರಣ್ಯ ಪ್ರದೇಶದಲ್ಲಿ ಪೌರ ಘನತ್ಯಾಜ್ಯಗಳ ವಿಲೇವಾರಿ

ಅರಣ್ಯ (ಸಂರಕ್ಷಣೆ) ಕಾಯಿದೆ, 1980ರ ಉಪಬಂಧಗಳಡಿ ಭಾರತ ಸರ್ಕಾರದ ಅನುಮೋದನೆಯೊಂದಿಗೆ ಅರಣ್ಯ ಇಲಾಖೆಯು ಅರಣ್ಯ ಭೂಮಿಯನ್ನು ಉತ್ತರಕನ್ನಡ ಜಿಲ್ಲೆಯ ಐದು[10] ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿತು.

**ನಗರ ಸ್ಥಳೀಯ ಸಂಸ್ಥೆಗಳು ಸಂಸ್ಕರಿಸದ ಮತ್ತು ಬೇರ್ಪಡಿಸದ ಪೌರ ಘನತ್ಯಾಜ್ಯಗಳನ್ನು ಪರಿಸರಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ಚೆಲ್ಲುತ್ತಿದ್ದವು**

ಈ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಕೊಳೆಯುವ, ಪುನರ್ಬಳಕೆಯಾಗುವ ಹಾಗೂ ಅಪಾಯಕಾರಿ ತ್ಯಾಜ್ಯಗಳನ್ನೊಳಗೊಂಡ ಬೇರ್ಪಡಿಸದ ಘನತ್ಯಾಜ್ಯಗಳನ್ನು ಅರಣ್ಯ ಪ್ರದೇಶದಲ್ಲಿದ್ದ ನೆಲಭರ್ತಿ ಜಾಗಗಳಲ್ಲಿ ಚೆಲ್ಲುತ್ತಿದ್ದುದನ್ನು ದಾಖಲೆಗಳಿಂದ ಗಮನಿಸಲಾಯಿತು. ಪೌರ ಘನತ್ಯಾಜ್ಯಗಳನ್ನು ನಿಯಮಗಳಿಗನುಸಾರವಾಗಿ ವೈಜ್ಞಾನಿಕ ಸಂಸ್ಕರಣೆ ಮಾಡುವುದನ್ನು ಈ ನಗರ ಸ್ಥಳೀಯ ಸಂಸ್ಥೆಗಳು ಖಚಿತಪಡಿಸಿಕೊಳ್ಳಲಿಲ್ಲ. ಪೌರ ಘನತ್ಯಾಜ್ಯ ನಿರ್ವಹಣೆಯ ನಿಯಮಗಳನ್ವಯ ಅರಣ್ಯಗಳಲ್ಲಿ ನೆಲಭರ್ತಿ ಜಾಗಗಳ ಸ್ಥಾಪನೆಯನ್ನು ನಿಷೇದಿಸಲಾಗಿದೆ. ಅರಣ್ಯ ಭೂಮಿಯನ್ನು ಘನ ತ್ಯಾಜ್ಯ ನಿರ್ವಹಣೆಗೆ ಮಂಜೂರು ಮಾಡುವ ಮುನ್ನ ಅರಣ್ಯ (ಸಂರಕ್ಷಣೆ) ಕಾಯಿದೆಯಡಿ ನಗರ ಸ್ಥಳೀಯ ಸಂಸ್ಥೆಗಳು ಪಾಲಿಸಲೇ ಬೇಕಾದ ಯಾವುದೇ ನಿರ್ದಿಷ್ಟ ಷರತ್ತುಗಳನ್ನು ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ವಿಧಿಸಿರಲಿಲ್ಲ. ಇದಕ್ಕೆ ಸಂಬಂಧಿಸಿದ ಲೆಕ್ಕಪರಿಶೋಧನಾ ಪ್ರಶ್ನೆಗೆ ಉತ್ತರಿಸುತ್ತಾ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿರಸಿ ಇನ್ನು ಮುಂದೆ ಪೌರ ಘನತ್ಯಾಜ್ಯ ನಿಯಮಗಳಿಗೆ ಅನುಸಾರವಾಗಿಯೇ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಬೇಕೆಂದು ಷರತ್ತು ವಿಧಿಸಿ ನಗರ ಸ್ಥಳೀಯ ಸಂಸ್ಥೆಗಳೊಂದಿಗೆ ಪೂರಕ ಒಪ್ಪಂದಗಳನ್ನು ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು (ಅಕ್ಟೋಬರ್ 2008).



**ಕಾರವಾರ ನಗರಸಭೆಯಿಂದ ಸಂಸ್ಕರಿಸದ ಮತ್ತು ಮಿಶ್ರಿತ ಪೌರ ಘನತ್ಯಾಜ್ಯದ ವಿಲೇವಾರಿ (3 ಜೂನ್ 2008)**

## 3.1.10 ತ್ಯಾಜ್ಯ ನಿರ್ವಹಣೆಯ ಮೇಲ್ವಿಚಾರಣೆ

### 3.1.10.1 ಪೌರ ಘನತ್ಯಾಜ್ಯ ನಿಯಮಗಳು

**ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಂತರ್ಜಲ, ಸುತ್ತಲಿನ ಗಾಳಿ ಮತ್ತು ಲೀಚೆಟ್ ಗುಣಮಟ್ಟದ ಮೇಲ್ವಿಚಾರಣೆಯು ಪರಿಣಾಮಕಾರಿಯಾಗಿರಲಿಲ್ಲ**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಯಾವುದೇ ಪ್ರಾದೇಶಿಕ ಕಛೇರಿಯೂ ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಅಂತರ್ಜಲ, ಸುತ್ತಲಿನ ಗಾಳಿ, ಲೀಚೆಟ್ ದ್ರವ ಮತ್ತು ಕಾಂಪೋಸ್ಟ್ ಗುಣಮಟ್ಟಕ್ಕೆ ಸಂಬಂಧಿಸಿದ ಮಾನದಂಡಗಳ ಅನುಪಾಲನೆಯ ಮೇಲ್ವಿಚಾರಣೆ ನಡೆಸಿರಲಿಲ್ಲ. ಅಧಿಕಾರ ಪತ್ರ ಹಾಗೂ ಅದರ ನವೀಕರಣವನ್ನು ಸಂಸ್ಕರಣೆ ಮತ್ತು ವಿಲೇವಾರಿ ಸೌಕರ್ಯಗಳ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳದೇ ಹಾಗೂ ಮಾನದಂಡ ಅನುಪಾಲನೆಯ ಮೇಲ್ವಿಚಾರಣೆ ನಡೆಸದೇ ವಾಡಿಕೆಯಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿತ್ತು. ಇದಲ್ಲದೇ ಪೌರ ಘನತ್ಯಾಜ್ಯ

[10] ಕಾರವಾರ ನಗರಸಭೆ, ಕುಮಟಾ ಪುರಸಭೆ, ಭಟ್ಕಳ ಪುರಸಭೆ, ಹೊನ್ನಾವರ ಪಟ್ಟಣ ಪಂಚಾಯತಿ ಮತ್ತು ಅಂಕೋಲ ಪಟ್ಟಣ ಪಂಚಾಯತಿ

ವಸ್ತುಗಳನ್ನು ಸುರಿಯುವ ಪ್ರದೇಶಗಳ ಸುತ್ತಮುತ್ತ ಅಂತರ್ಜಲ ಗುಣಮಟ್ಟವನ್ನು ಪರೀಕ್ಷಿಸದೇ ಇದ್ದುದರಿಂದ ಸಾರ್ವಜನಿಕ ಆರೋಗ್ಯವನ್ನು ಅಪಾಯಕ್ಕೊಳಪಡಿಸಿದಂತಾಗಿತ್ತು.

### 3.1.10.2 ನೀರಿನ ಗುಣಮಟ್ಟ ಮೇಲ್ವಿಚಾರಣೆ

ಪೌರ ಘನತ್ಯಾಜ್ಯ ನಿಯಮಗಳ ಪ್ರಕಾರ ಯಾವುದೇ ನೆಲಭರ್ತಿ ಜಾಗವನ್ನು ಸ್ಥಾಪಿಸುವುದಕ್ಕೆ ಮುನ್ನ ಆ ಪ್ರದೇಶದಲ್ಲಿನ ಅಂತರ್ಜಲದ ಗುಣಮಟ್ಟವನ್ನು ಪರೀಕ್ಷಿಸಿ ದಾಖಲಿಸಿ ಅದನ್ನು ಆಧಾರವಾಗಿಟ್ಟುಕೊಂಡು ತದನಂತರ ನೆಲಭರ್ತಿ ಜಾಗದ ಪರಿಧಿಯಿಂದ ಐವತ್ತು ಮೀಟರ್ ಒಳಗಿನ ಪ್ರದೇಶದ ಅಂತರ್ಜಲವನ್ನು ನಿಯತಕಾಲಿಕವಾಗಿ (ಪ್ರತಿ ಋತುವಿನಲ್ಲಿ) ಪರೀಕ್ಷೆಗೊಳಪಡಿಸಿ ಸ್ವೀಕಾರಾರ್ಹ ಮಿತಿಗೂ ಮೀರಿ ಅಂತರ್ಜಲವು ಕಲುಷಿತಗೊಂಡಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ನೆಲಭರ್ತಿ ಜಾಗದ ಸುತ್ತ ಮುತ್ತಲೂ ಇರುವ ಅಂತರ್ಜಲವನ್ನು ಕುಡಿಯುವ ಮತ್ತು ನೀರಾವರಿ ಒಳಗೊಂಡು ಎಲ್ಲಾ ಉದ್ದೇಶಗಳಿಗೆ ಉಪಯೋಗಿಸಲು ಅದರ ಗುಣಮಟ್ಟವನ್ನು ಈ ರೀತಿ ಪರೀಕ್ಷಿಸಿದ ನಂತರವೇ ಪರಿಗಣಿಸಬೇಕಾಗಿತ್ತು.

**ಹರಳಕುಂಟೆ ಮತು ಬೆಳಗಾವಿಯ ಖಾಸ್‌ಬಾಗ್ ಕಾಂಪೋಸ್ಟ್ ಸ್ಥಾವರಗಳ ಬಳಿಯ ಅಂತರ್ಜಲವು ಬಳಸಲು ಯೋಗ್ಯವಿರಲಿಲ್ಲ**

ಈ ಉಪಬಂಧಗಳಿಗೆ ವ್ಯತಿರಿಕ್ತವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಗುಲ್ಬರ್ಗಾ ಮತ್ತು ಬೆಳಗಾವಿ ನಗರಪಾಲಿಕೆಗಳು ಮತ್ತು ಉಡುಪಿ ನಗರಸಭೆ ಇವುಗಳನ್ನು ಹೊರತುಪಡಿಸಿ ಇನ್ನಾವ ಪರೀಕ್ಷಾ-ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಯೂ ಅಂತರ್ಜಲ ಗುಣಮಟ್ಟದ ಮೂಲ ದಾಖಲೆಗಳನ್ನು ನಿರ್ವಹಿಸಿರಲಿಲ್ಲ. ಅಂತರ್ಜಲ ಗುಣಮಟ್ಟದ ನಿಯತಕಾಲಿಕ ಪರೀಕ್ಷೆಗಳನ್ನು ಈ ನಗರ ಸ್ಥಳೀಯ ಸಂಸ್ಥೆಗಳು ನಡೆಸಿರಲಿಲ್ಲ. ತತ್ಪರಿಣಾಮವಾಗಿ ನೆಲಭರ್ತಿಜಾಗದ ಸುತ್ತಮುತ್ತಲಿನ ಅಂತರ್ಜಲವು ಕುಡಿಯುವ ಹಾಗೂ ನೀರಾವರಿ ಉದ್ದೇಶಗಳಿಗೆ ಅರ್ಹವಾಗಿತ್ತೇ ಎಂಬುದನ್ನು ಪರಿಶೀಲಿಸಲಾಗಲಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಳಗಾವಿ ನಗರಪಾಲಿಕೆಗಳು ಅಂತರ್ಜಲ ಮಾದರಿಯನ್ನು ಲೆಕ್ಕಪರಿಶೋಧನೆಯ ಸೂಚನೆಯ ಮೇರೆಗೆ ಪರೀಕ್ಷೆಗೆ ಒಳಪಡಿಸಿದಾಗ ಅವುಗಳ ವರದಿಗಳ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಹರಳಕುಂಟೆ ಕಾಂಪೋಸ್ಟ್ ಸ್ಥಾವರದ ಬಳಿಯ ಮತ್ತು ಬೆಳಗಾವಿಯ ಖಾಸ್‌ಬಾಗ್ ಬಳಿಯ ಅಂತರ್ಜಲವು ಪೌರ ಘನತ್ಯಾಜ್ಯ ನಿಯಮಗಳಲ್ಲಿ ನಿಗದಿಪಡಿಸಿರುವ ಮಟ್ಟಕ್ಕೆ ಇರಲಿಲ್ಲ ಮತ್ತು ಅವು ಬಳಸಲು ಯೋಗ್ಯವಿರಲಿಲ್ಲವೆಂಬುದು ತಿಳಿದುಬಂದಿತು. ಈ ವಿಚಾರದಲ್ಲಿ ಈವರೆಗೆ ಯಾವುದೇ ಪರಿಹಾರಾತ್ಮಕ ಕ್ರಮಗಳನ್ನು ಈ ನಗರ ಸ್ಥಳೀಯ ಸಂಸ್ಥೆಗಳು ತೆಗೆದುಕೊಂಡಿರಲಿಲ್ಲ.

### 3.1.10.3 ಜೈವಿಕ-ವೈದ್ಯಕೀಯ ತ್ಯಾಜ್ಯ ನಿಯಮಗಳು

ಪ್ರಾದೇಶಿಕ ಕಛೇರಿಗಳು ಆರೋಗ್ಯ ಪಾಲನಾ ಸಂಸ್ಥೆಗಳ ನಿಯತಕಾಲಿಕ ತಪಾಸಣೆಯನ್ನು ಖಚಿತಪಡಿಸಿಕೊಳ್ಳಲಿಲ್ಲ. ಪರೀಕ್ಷಾ-ತನಿಖೆ ನಡೆಸಿದ 220 ಆರೋಗ್ಯ ಪಾಲನಾ ಸಂಸ್ಥೆಗಳ ಪೈಕಿ 98 ಆರೋಗ್ಯ ಪಾಲನಾ ಸಂಸ್ಥೆಗಳ ತಪಾಸಣೆಯನ್ನು ಸಂಬಂಧಪಟ್ಟ ಪ್ರಾದೇಶಿಕ ಕಛೇರಿಯು ಅವುಗಳು ಪ್ರಾರಂಭವಾದಾಗಿನಿಂದ ಒಂದು ಬಾರಿಯೂ ಕೈಗೊಂಡಿರಲಿಲ್ಲ. 15 ಆರೋಗ್ಯ ಪಾಲನಾ ಸಂಸ್ಥೆಗಳ ತಪಾಸಣೆಯನ್ನು ಒಂದು ಬಾರಿ ಮಾತ್ರ ಮಾಡಲಾಗಿತ್ತು ಮತ್ತು ಉಳಿದ 107 ಸಂಸ್ಥೆಗಳ ತಪಾಸಣೆಯನ್ನು ನಿಯತಕಾಲಿಕವಾಗಿ ಮಾಡಿದ್ದರೂ ಸಹ ಯಾವುದೇ ತಪಾಸಣಾ ವರದಿಯು ಕಂಡುಬರಲಿಲ್ಲ.

## 3.1.11 ಪರಿಣಾಮದ ಅಧ್ಯಯನ

**ಸರ್ಕಾರವು ತ್ಯಾಜ್ಯ ನಿರ್ವಹಣಾ ನಿಯಮಗಳ ಅನುಷ್ಠಾನದ ಪರಿಣಾಮದ ಅಧ್ಯಯನವನ್ನು ಮಾಡಿರಲಿಲ್ಲ**

ರಾಜ್ಯದಲ್ಲಿ ತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಜಾರಿಗೊಳಿಸುವ ಸಂಸ್ಥೆಗಳು ಮತ್ತು ತ್ಯಾಜ್ಯ ವಸ್ತುಗಳ ಉತ್ಪಾದಕರು ನಿಯಮಗಳನ್ನು ಉಲ್ಲಂಘನೆ ಮಾಡುತ್ತಿರುವುದು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮೇಲ್ವಿಚಾರಣೆಯ ಕೊರತೆಯು ಮೇಲ್ನೋಟಕ್ಕೆ ಗೋಚರವಾಗುವಂತಿದ್ದರೂ ಸರ್ಕಾರವು ಈ ನಿಯಮಗಳ ಅನುಷ್ಠಾನದ ಪ್ರಭಾವ ನಿರ್ಧಾರಣೆಯನ್ನು ಇನ್ನೂ ಮಾಡಿರಲಿಲ್ಲ.

### 3.1.12 ನಿರ್ಣಯ

ಸೂಕ್ತ ನೆಲಭರ್ತಿ ಜಾಗಗಳ ಅಲಭ್ಯತೆ, ಅವುಗಳನ್ನು ಅಭಿವೃದ್ಧಿಪಡಿಸುವಲ್ಲಿನ ತಪ್ಪಿಸಬಹುದಾಗಿದ್ದ ವಿಳಂಬ ಹಾಗೂ ಸರಬರಾಜು ಒಪ್ಪಂದಗಳನ್ನು ನಿರ್ವಹಣೆ ಮಾಡುವಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ಅಸಮರ್ಥತೆ ಇವುಗಳಿಂದಾಗಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಮೀಸಲಾಗಿದ್ದ ಹಣ ಬಳಕೆಯು ಪರಿಣಾಮಕಾರಿಯಾಗಿರಲಿಲ್ಲ. ಪೌರ ಘನತ್ಯಾಜ್ಯ ಹಾಗೂ ಜೈವಿಕ–ವೈದ್ಯಕೀಯ ತ್ಯಾಜ್ಯ ನಿಯಮಗಳು ಜಾರಿಯಾಗಿ ಎಂಟು ವರ್ಷಗಳು ಗತಿಸಿದ್ದಾಗ್ಯೂ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಆರೋಗ್ಯ ಪಾಲನಾ ಸಂಸ್ಥೆಗಳಿಂದ ಅವುಗಳ ಅನುಪಾಲನೆ ಅಸಮರ್ಪಕವಾಗಿ ಮುಂದುವರೆದಿತ್ತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮೇಲ್ವಿಚಾರಣೆ ಪರಿಣಾಮಕಾರಿಯಾಗಿರಲಿಲ್ಲವಾದ್ದರಿಂದ ಪೌರ ಘನತ್ಯಾಜ್ಯಗಳು ಹಾಗೂ ಜೈವಿಕ–ವೈದ್ಯಕೀಯ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡುವ ಮೂಲಕ ಪರಿಸರವನ್ನು ಸಂರಕ್ಷಿಸಿ ಸುಧಾರಿಸಬೇಕೆಂಬ ಉದ್ದೇಶವು ಸಫಲವಾಗದಿರುವಲ್ಲಿ ಪರಿಣಮಿಸಿತು.

### 3.1.13 ಶಿಫಾರಸುಗಳು

- ತ್ಯಾಜ್ಯ ವಸ್ತುಗಳನ್ನು ಕೈಯಾರೆ ವಿಲೇವಾರಿ ಮಾಡುವ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಸಲುವಾಗಿ ಮತ್ತು ಪೌರ ಘನತ್ಯಾಜ್ಯಗಳನ್ನು ನಿರ್ಮಲ ಪರಿಸ್ಥಿತಿಯಲ್ಲಿ ಶೇಖರಿಸಿ ಸಾಗಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸಾಧನ–ಸಲಕರಣೆಗಳ ಪೂರೈಕೆಯನ್ನು ತೀವ್ರಗೊಳಿಸಬೇಕು.
- ಒಂದು ಅವಧಿಬದ್ಧ ರೀತಿಯಲ್ಲಿ ನೆಲಭರ್ತಿ ಜಾಗಗಳನ್ನು ಸ್ವಾಧೀನಪಡಿಸಿಕೊಂಡು ಅವುಗಳನ್ನು ಅಭಿವೃದ್ಧಿ ಪಡಿಸುವಂತೆ ಪೌರಾಡಳಿತ ನಿರ್ದೇಶಕರು ಖಚಿತಪಡಿಸಿಕೊಳ್ಳಬೇಕು.
- ಒಂದು ಅವಧಿಬದ್ಧ ರೀತಿಯಲ್ಲಿ ಮನೆಮನೆಯಿಂದ ಕಸ ಸಂಗ್ರಹಣೆಯನ್ನು ಸಂಪೂರ್ಣವಾಗಿ ಸಾಧಿಸಲು ಸ್ವಸಹಾಯ ಗುಂಪುಗಳನ್ನು ಸಜ್ಜುಗೊಳಿಸಬೇಕು ಮತ್ತು ಅವಶ್ಯವಿದ್ದಲ್ಲಿ ನಾಗರೀಕರಿಂದ ಬಳಕೆದಾರ–ಕರ ಪಾವತಿಯ ಅನುಪಸ್ಥಿತಿಯಿಂದಾಗಿ ಆಗಿರುವ ನಷ್ಟವನ್ನು ಅವರಿಗೆ ಭರಿಸಿಕೊಡಬೇಕು.
- ತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸುವುದನ್ನು ಖಚಿತಪಡಿಸಿಕೊಳ್ಳಲು ಸ್ಥಳೀಯ ಕಲ್ಯಾಣ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಚಿಂದಿ ಆಯುವವರನ್ನು ತ್ವರಿತವಾಗಿ ತೊಡಗಿಸಬೇಕು.
- ಎಲ್ಲಾ ನಗರ/ಪಟ್ಟಣಗಳಲ್ಲಿ ಕಾಂಪೋಸ್ಟ್ ಸ್ಥಾವರಗಳು ಹಾಗೂ ನೆಲಭರ್ತಿ ಜಾಗಗಳು ಸ್ಥಾಪನೆಯಾಗುವವರೆಗೂ ವಾಯು ಮಾಲಿನ್ಯ ಮತ್ತು ಅಂತರ್ಜಲ ಕಲುಷಿತವಾಗುವುದನ್ನು ತಡೆಗಟ್ಟಲು ಪೌರಾಡಳಿತ ನಿರ್ದೇಶಕರು ಘನತ್ಯಾಜ್ಯಗಳನ್ನು ಸಂಸ್ಕರಿಸಲು ನಿಗದಿಪಡಿಸಿರುವ ಕಾರ್ಯ ವಿಧಾನಗಳನ್ನು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ಅನುಸರಿಸುವಂತೆ ದೃಢಪಡಿಸಿಕೊಳ್ಳಬೇಕು.
- ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನೆಲಭರ್ತಿ ಜಾಗಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಅಂತರ್ಜಲ, ಸುತ್ತಲಿನ ಗಾಳಿ ಮತ್ತು ಲೀಚೆಟ್ ದ್ರವದ ಗುಣಮಟ್ಟವನ್ನು ನಿಯತಕಾಲಿಕವಾಗಿ ಮೇಲ್ವಿಚಾರಿಸಬೇಕು ಮತ್ತು ನಿಯಮಗಳ ಅನುಪಾಲನೆಯನ್ನು ಖಚಿತಪಡಿಸಿಕೊಂಡೇ ಅಧಿಕಾರ ಪತ್ರ ನೀಡಬೇಕು ಹಾಗೂ ಅದರ ನವೀಕರಣ ಮಾಡಬೇಕು.
- ಐದು ಲಕ್ಷಕ್ಕೂ ಕಡಿಮೆ ಜನಸಂಖ್ಯೆಯುಳ್ಳ ಊರುಗಳಲ್ಲಿರುವ ಆರೋಗ್ಯ ಪಾಲನಾ ಸಂಸ್ಥೆಗಳು ಕನಿಷ್ಠ ಜೈವಿಕ–ವೈದ್ಯಕೀಯ ನಿಯಮಗಳಲ್ಲಿ ನಿಗದಿಪಡಿಸಿದ ಮಾನದಂಡಗಳಿಗನುಸಾರವಾಗಿ ಆಳವಾದ ಹೂಳು ಗುಂಡಿಗಳಲ್ಲಿ ತ್ಯಾಜ್ಯಗಳನ್ನು ವಿಲೇವಾರಿ ಮಾಡುತ್ತಿವೆ ಎಂಬುದನ್ನು ಖಚಿತಪಡಿಸಿಕೊಂಡ ನಂತರವೇ ಅಧಿಕಾರ ಪತ್ರಗಳನ್ನು ನೀಡಬೇಕು ಮತ್ತು ಅವುಗಳ ನವೀಕರಣ ಮಾಡಬೇಕು.

ಈ ವಿಷಯವನ್ನು ಸೆಪ್ಟೆಂಬರ್ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

# ಗೃಹ ಇಲಾಖೆ

## 3.2 ಪೊಲೀಸ್ ಇಲಾಖೆಯಲ್ಲಿ ಗಣಕೀಕರಣ

**ಮುಖ್ಯಾಂಶಗಳು**

***ಅಪರಾಧಗಳ ತ್ವರಿತ ಪತ್ತೆ ಹಾಗೂ ಅದಕ್ಕಾಗಿ ಇಲಾಖಾ ಸೇವೆಗಳನ್ನು ಉತ್ತಮಗೊಳಿಸಲು ಅಪರಾಧ ಮತ್ತು ಅಪರಾಧಿಗಳ ಮಾಹಿತಿಯುಳ್ಳ ದತ್ತ ಸಂಚಯವೊಂದನ್ನು ನಿರ್ಮಿಸಲು, ತನ್ನ ವಿವಿಧ ಚಟುವಟಿಕೆಗಳನ್ನು ಗಣಕೀಕರಿಸಲು ಹಾಗೂ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನಗಳನ್ನು ಬಳಸಲು ಇಲಾಖೆಯು ಅನೇಕ ಉಪಕ್ರಮಗಳನ್ನು ಅನುಷ್ಠಾನಗೊಳಿಸಿತು. ಆದಾಗ್ಯೂ, ಸಾಕಷ್ಟಿಲ್ಲದ ಯೋಜನೆ ಹಾಗೂ ಸಮಗ್ರ ಮಾಹಿತಿ ತಂತ್ರಜ್ಞಾನ ಕಾರ್ಯನೀತಿಯೊಂದಿಲ್ಲದೆ ಉಪಕ್ರಮಗಳನ್ನು ಕೈಗೊಂಡಿದ್ದುದು ಉದ್ದೇಶಗಳು ಈಡೇರುವಲ್ಲಿನ ವಿಳಂಬಕ್ಕೆ ದಾರಿ ಮಾಡಿಕೊಟ್ಟಿತು.***

**ಒಂದು ಸಮನ್ವಯ ದೃಷ್ಟಿಕೋನ ಹಾಗೂ ದಾಖಲಿಸಿದ ಮಾಹಿತಿ ತಂತ್ರಜ್ಞಾನ, ಕಾರ್ಯನೀತಿಯನ್ನು ಅಳವಡಿಸಿಕೊಳ್ಳದೇ ಗಣಕೀಕರಣ ಉಪಕ್ರಮಗಳನ್ನು ತುಂಡುತುಂಡಾಗಿ ಹಾಗೂ ವೈಯಕ್ತಿಕವಾಗಿ ಕೈಗೊಂಡಿದ್ದರಿಂದ ಅನುಷ್ಠಾನದ ವಿಳಂಬ ಹಾಗೂ ಪ್ರಯತ್ನವು ದ್ವಿಗುಣಿಸುವಲ್ಲಿ ಪರಿಣಮಿಸಿತು.**

**(ಕಂಡಿಕೆ : 3.2.5)**

**ವಿನ್ಯಾಸದಲ್ಲಿನ ಅಸಾಂಗತ್ಯಗಳು, ಸಂಪರ್ಕತೆಯ ತೊಂದರೆಗಳು, ಸಾಕಷ್ಟಿಲ್ಲದ ಹೂಡುವಳಿ/ಹುಟ್ಟುವಳಿ ನಿಯಂತ್ರಣಗಳು ಹಾಗೂ ದತ್ತಸಂಚಯದ ನಿರ್ವಹಣೆಯಲ್ಲಿನ ನ್ಯೂನತೆಗಳು ಅಪರಾಧ ಹಾಗೂ ಅಪರಾಧಿಗಳ ಮಾಹಿತಿ ವ್ಯವಸ್ಥೆಯ ದತ್ತಸಂಚಯವನ್ನು ಅಪೂರ್ಣ ಹಾಗೂ ನಂಬಲನರ್ಹವಾಗಿ ಮಾಡಿದವು.**

**(ಕಂಡಿಕೆ : 3.2.6)**

**ಮಾರ್ಚ್ 2001ರಲ್ಲಿ ಪ್ರಾರಂಭಗೊಂಡು ಮೂರು ವರ್ಷಗಳಲ್ಲಿ ಪೂರ್ಣಗೊಳ್ಳಬೇಕಾಗಿದ್ದ ಪೊಲೀಸ್ ಐಟಿ–2000 ತಂತ್ರಾಂಶ ಪ್ಯಾಕೇಜನ್ನು ರೂ.1.33 ಕೋಟಿ ಹಣವನ್ನು ಹೂಡಿದ ನಂತರವೂ ಬಳಕೆದಾರರ ಸ್ವೀಕಾರ ಪರೀಕ್ಷೆಗಳನ್ನು ಪೂರ್ಣಗೊಳಿಸದ ಕಾರಣ ಈವರೆಗೂ ಚಾಲ್ತಿ ಮಾಡಲಾಗಿರಲಿಲ್ಲ.**

**(ಕಂಡಿಕೆ : 3.2.7)**

**ಅಭಿವೃದ್ಧಿಯಲ್ಲಿನ ವಿಳಂಬದ ಕಾರಣ, 2003ರಲ್ಲಿ ರೂ.47.39 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಿದ ಜಿ–ಕೇರ್ ಅನ್ವಯವನ್ನು, ಅಕ್ಟೋಬರ್ 2004ರೊಳಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅನುಷ್ಠಾನಗೊಳಿಸುವ ಗುರಿಗೆ ಪ್ರತಿಯಾಗಿ ಇದುವರೆಗೂ 10 ಸ್ಥಳಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲು ಸಾಧ್ಯವಾಗಿತ್ತು.**

**(ಕಂಡಿಕೆ : 3.2.8)**

### 3.2.1 ಪರಿಚಯ

ಕರ್ನಾಟಕ ಸರ್ಕಾರದ ಪೊಲೀಸ್ ಇಲಾಖೆಯು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನವನ್ನು ಬಳಸಿಕೊಂಡು ತನ್ನ ಕಾರ್ಯನಿರ್ವಹಣೆಯನ್ನು ಸುಧಾರಿಸಲು ಅನೇಕ ಗಣಕೀಕರಣ ಯೋಜನೆಗಳನ್ನು ಕೈಗೊಂಡಿದೆ ಹಾಗೂ ಅನುಷ್ಠಾನಗೊಳಿಸಿದೆ. ಹಿಂದಿನ ಐದು ವರ್ಷಗಳಲ್ಲಿ ಇಲಾಖೆಯ ಪೊಲೀಸ್ ಗಣಕ ವಿಭಾಗವು ಕೈಗೊಂಡ/ಪೂರ್ಣಗೊಳಿಸಿದ ಈ ಕೆಳಕಂಡ ಮುಖ್ಯ ಮಾಹಿತಿ ತಂತ್ರಜ್ಞಾನ ಉಪಕ್ರಮಗಳನ್ನು ಈ ಸಮೀಕ್ಷೆಯು ಒಳಗೊಂಡಿದೆ.

- ಜಿಲ್ಲೆ/ರಾಜ್ಯ/ರಾಷ್ಟ್ರೀಯ ಸ್ಥರಗಳಲ್ಲಿ ಏಕರೀತಿಯ ವಿನ್ಯಾಸವುಳ್ಳ ಅಪರಾಧ ಮಾಹಿತಿಯ ದತ್ತಸಂಚಯವೊಂದನ್ನು ನಿರ್ಮಿಸಲು ಅಪರಾಧ ಮತ್ತು ಅಪರಾಧಿಗಳ ಮಾಹಿತಿ ವ್ಯವಸ್ಥೆಗೆ ಭಾರತ ಸರ್ಕಾರದಿಂದ ಹಣಕಾಸು ಒದಗಿಸಲ್ಪಟ್ಟಿತು. 2004–05ರಲ್ಲಿ ಅಪರಾಧ ಮತ್ತು ಅಪರಾಧಿಗಳ ಮಾಹಿತಿ ವ್ಯವಸ್ಥೆಯ ಬದಲಿಗೆ "ಸಾಮಾನ್ಯ ಸಮಗ್ರ ಆರಕ್ಷಕ ಅನ್ವಯ" ವೆಂಬ ಹೊಸ ತಂತ್ರಾಂಶ ಪ್ಯಾಕೇಜನ್ನು ಆರಕ್ಷಕ ಠಾಣೆಯ ಮಟ್ಟದಲ್ಲಿ ಜಾರಿಗಳಿಸಲು ಯೋಜಿಸಲಾಗಿತ್ತು.

- ಪೊಲೀಸ್ ಐಟಿ–2000 ಯೋಜನೆಯು ಅಪರಾಧ ಮತ್ತು ಅಪರಾಧಿಗಳ ಮಾಹಿತಿಯಲ್ಲದೆ, ಆಡಳಿತ, ಹಣಕಾಸು, ಪತ್ತೆದಾರಿ ದಳ, ವಿಧಿವಿಜ್ಞಾನ ಪ್ರಯೋಗಾಲಯ, ತರಬೇತಿಯಂತಹ ಇಲಾಖೆಯ ಮುಖ್ಯ ಚಟುವಟಿಕೆಗಳಿಗೂ ವ್ಯಾಪಿಸಿತ್ತು.
- ಘಟಿಸಿದ ಅಪರಾಧಗಳ ಮಾಹಿತಿಯನ್ನು ಶೇಖರಿಸಲು ಹಾಗೂ ಪುನರ್ಗಳಿಸಲು ಮತ್ತು ಅವುಗಳ ಭೌಗೋಳಿಕ ನಿರೂಪಣೆಯ ಸೌಕರ್ಯದೊಂದಿಗೆ ಪ್ರದೇಶವಾರು ವಿಶ್ಲೇಷಣೆಗಾಗಿ ರೂಪಿಸಿದ ಭೌಗೋಳಿಕ ಮಾಹಿತಿ ವ್ಯವಸ್ಥೆ ಆಧಾರಿತ ಅಪರಾಧ ವಿಶ್ಲೇಷಣೆ ಮತ್ತು ವರದಿ ಚಾಲಕ ತಂತ್ರಾಂಶ.

## 3.2.2 ಸಂಘಟನಾ ವ್ಯವಸ್ಥೆ

ಕರ್ನಾಟಕ ಸರ್ಕಾರದ ಪೊಲೀಸ್ ಇಲಾಖೆಯು ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಆಡಳಿತಾತ್ಮಕ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ ಮತ್ತು ಪೊಲೀಸ್ ಮಹಾನಿರ್ದೇಶಕರ ಹಾಗೂ ಮಹಾ ನಿರೀಕ್ಷಕರು ಮುಖ್ಯಸ್ಥರಾಗಿದ್ದಾರೆ. ಪೊಲೀಸ್ ಗಣಕ ವಿಭಾಗದಿಂದ ಕೈಗೊಂಡ ಗಣಕೀಕರಣ ಕಾರ್ಯವು ವಿಭಾಗದ ಮುಖ್ಯಸ್ಥರಾದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಎಡಿಜಿಪಿ)/ಪೊಲೀಸ್ ಮಹಾ ನಿರೀಕ್ಷಕರು (ಐಜಿಪಿ) ಇವರಿಂದ ಅನುಷ್ಠಾನಗೊಳಿಸಲ್ಪಟ್ಟಿತ್ತು. ಇವರಿಗೆ ಉಪ ಮಹಾ ನಿರೀಕ್ಷಕರು (ಡಿಐಜಿ) ನೆರವಾಗುತ್ತಿದ್ದರು.

## 3.2.3 ಲೆಕ್ಕಪರಿಶೋಧನಾ ಉದ್ದೇಶಗಳು

ಸಕಾಲಿಕ ಪೂರ್ಣಗೊಳಿಸುವಿಕೆ, ಕೊಳ್ಳುವಿಕೆಯಲ್ಲಿನ ಮಿತವ್ಯಯ ಹಾಗೂ ದಕ್ಷತೆ, ನಿಯಂತ್ರಣಗಳ ಪರಿಣಾಮಕಾರಿತ್ವ, ಮಾಹಿತಿ ತಂತ್ರಜ್ಞಾನ ಆಸ್ತಿಗಳ ಬಳಕೆ ಮತ್ತು ವಿವಿಧ ಯೋಜನೆಗಳ ಉದ್ದೇಶಗಳ ಸಮಗ್ರ ಸಾಧನೆಗಳಿಗೆ ಸಂಬಂಧಿಸಿದಂತೆ ಮಾಹಿತಿ ತಂತ್ರಜ್ಞಾನ ಉಪಕ್ರಮಗಳ ಮೌಲ್ಯನಿರ್ಣಯ ಮಾಡುವುದು ಈ ಸಮೀಕ್ಷೆಯ ಉದ್ದೇಶವಾಗಿತ್ತು.

## 3.2.4 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

ಪೊಲೀಸ್ ಗಣಕ ವಿಭಾಗದಿಂದ 2000ನೇ ಇಸವಿಯಿಂದ ಆರಂಭಗೊಂಡು ಹಿಂದಿನ ಐದು ವರ್ಷಗಳಲ್ಲಿ (2003–08) ಪೂರ್ಣಗೊಂಡ ಮುಖ್ಯ ಗಣಕೀಕರಣ ಚಟುವಟಿಕೆಗಳ ಮೌಲ್ಯಮಾಪನಕ್ಕೆ ಈ ಸಮೀಕ್ಷೆಯು ಸೀಮಿತವಾಗಿದ್ದಿತು. ಇಲಾಖೆಯ ಪೊಲೀಸ್ ಗಣಕ ವಿಭಾಗ, ಬೆಂಗಳೂರು, ಬೆರಳಚ್ಚು ವಿಭಾಗ, ಬೆರಳಚ್ಚು ಹಾಗೂ ಜಿ–ಕೇರ್ ಘಟಕಗಳು, ಬೆಂಗಳೂರು, ಎರಡು[11] ಜಿಲ್ಲಾ ಪೊಲೀಸ್ ಕಛೇರಿಗಳು ಮತ್ತು ಐದು[12] ಪೊಲೀಸ್ ಠಾಣೆಗಳ ಪರೀಕ್ಷಾ–ತನಿಖೆಯನ್ನು ಜನವರಿ 2008 ಹಾಗೂ ಏಪ್ರಿಲ್ 2008ರ ಅವಧಿಯಲ್ಲಿ ನಡೆಸಲಾಯಿತು. ಪ್ರವೇಶ ಹಾಗೂ ನಿರ್ಗಮನ ಸಮಾಲೋಚನಾ ಸಭೆಗಳನ್ನು ಕ್ರಮವಾಗಿ ಜನವರಿ 2008 ಮತ್ತು ಜೂನ್ 2008ರಲ್ಲಿ ನಡೆಸಲಾಯಿತು.

## ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

ತಂತ್ರಾಂಶ ಅಭಿವೃದ್ಧಿ, ಯಂತ್ರಾಂಶ ಕೊಳ್ಳುವಿಕೆ, ಸಕಾಲಿಕ ಪೂರ್ಣಗೊಳಿಸುವಿಕೆ, ದತ್ತಸಂಚಯದ ನಿರ್ವಹಣೆ, ಮಾಹಿತಿ ತಂತ್ರಜ್ಞಾನ ಆಸ್ತಿಗಳ ಬಳಕೆ ಇವುಗಳಿಗೆ ಸಂಬಂಧಿಸಿದಂತೆ ಆಯ್ದ ಮಾಹಿತಿ ತಂತ್ರಜ್ಞಾನ ಉಪಕ್ರಮಗಳ ಯೋಜನೆ ಹಾಗೂ ಅನುಷ್ಠಾನದಲ್ಲಿ ಗಮನಿಸಿದ ನ್ಯೂನತೆಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 3.2.5 ಮಾಹಿತಿ ತಂತ್ರಜ್ಞಾನ ನೀತಿ ಹಾಗೂ ಕಾರ್ಯನೀತಿ

ಇಲಾಖೆಯ ಗಣಕೀಕರಣವನ್ನು ಯಾವುದೇ ಸಮನ್ವಯತೆ ಇಲ್ಲದೆ ತುಂಡುತುಂಡಾಗಿ ಕೈಗೊಳ್ಳಲಾಗಿತ್ತು. ವಿವಿಧ ಯೋಜನೆಗಳನ್ನು ಒಟ್ಟಾರೆ ಇಲಾಖೆಯ ಪೂರ್ವನಿರ್ಧಾರಿತ ಮಾಹಿತಿ ತಂತ್ರಜ್ಞಾನ

[11] ಪೊಲೀಸ್ ಆಯುಕ್ತರು, ಬೆಂಗಳೂರು ಮತ್ತು ಪೊಲೀಸ್ ಅಧೀಕ್ಷಕರು, ಉತ್ತರಕನ್ನಡ

[12] ಆನೇಕಲ್, ಬಸವನಗುಡಿ, ಕಲಾಸಿಪಾಳ್ಯ, ಕಾರವಾರ ಮತ್ತು ಉಡುಪಿ

**ಒಂದು ಯುಕ್ತ ಮಾಹಿತ ತಂತ್ರಜ್ಞಾನ ಯೋಜನೆಯ ಅನುಪಸ್ಥಿತಿಯಲ್ಲಿ ಗಣಕೀಕರಣದ ಗರಿಷ್ಟ ಪ್ರಯೋಜನಗಳನ್ನು ಪಡೆಯಲಾಗದಂತಾಯಿತು**

ಕಾರ್ಯನೀತಿಯ ದಾರಿಯಲ್ಲಿ ಅನುಷ್ಠಾನಗೊಳಿಸುವ ಬದಲು ಇಲಾಖೆಯ ಬೇರೆ ಬೇರೆ ವಿಭಾಗಗಳು ಬೇರೆ ಬೇರೆ ಚಟುವಟಿಕೆಗಳ ಪ್ರದೇಶಗಳಲ್ಲಿ ಅನೇಕ ಯೋಜನೆಗಳನ್ನು ಸ್ವತಂತ್ರವಾಗಿ ಹಾಗೂ ಪ್ರತ್ಯೇಕವಾಗಿ ಕೈಗೊಂಡವು. ಮಾರ್ಚ್ 2004ರಲ್ಲಿ, ಭಾರತ ಸರ್ಕಾರವು, ವಾರ್ಷಿಕ ಯೋಜನೆಯಲ್ಲಿ ಸೇರಿಸುವ ಮೊದಲು, ಗಣಕೀಕರಣವು ಪೊಲೀಸ್ ಆಧುನೀಕರಣದ ಒಂದು ಆದ್ಯತೆಯ ಕ್ಷೇತ್ರವಾದ್ದರಿಂದ ಅದನ್ನು ವಾರ್ಷಿಕ ಯೋಜನೆಗಳಲ್ಲಿ ಸೇರಿಸುವ ಮೊದಲು ಒಂದು ಯೋಜನೆಯನ್ನು ರೂಪಿಸಿ, ಭಾರತ ಸರ್ಕಾರದ ರಾಷ್ಟ್ರೀಯ ಅಪರಾಧ ದಾಖಲೆಗಳ ವಿಭಾಗದಿಂದ (ಎನ್‌ಸಿಆರ್‌ಬಿ) ಅದನ್ನು ಪರಿಶೀಲಿಸಿಕೊಳ್ಳಬೇಕು ಎಂದು ಭಾರತ ಸರ್ಕಾರವು ಮಾರ್ಚ್ 2004ರಲ್ಲಿ ಸೂಚಿಸಿತ್ತು. ಆದಾಗ್ಯೂ ಅಂತಹ ಯಾವುದೇ ಯೋಜನೆಯನ್ನು ರೂಪಿಸಿ ಮಂಡಿಸಿರಲಿಲ್ಲ.

ಮುಂದುವರೆದು, ಇಲಾಖೆಯು ವಿವಿಧ ಗಣಕೀಕರಣ ಅನ್ವಯಗಳ ಅಭಿವೃದ್ಧಿ ಹಾಗೂ ಅನುಷ್ಠಾನಕ್ಕಾಗಿ ಯಾವುದೇ ರಚನಾತ್ಮಕ ಮಾರ್ಗವನ್ನು ಅಳವಡಿಸಿಕೊಳ್ಳಲಿಲ್ಲ. ಪ್ರತಿ ಯೋಜನಾ ವ್ಯವಸ್ಥೆಯ ಸ್ವಭಾವ ಹಾಗೂ ವ್ಯಾಪ್ತಿಯಂತಹ ಮಹತ್ವದ ಮಾಹಿತಿಗಳಿರುವ ದಸ್ತಾವೇಜೀಕರಣವು ಇರಲಿಲ್ಲ. ತಂತ್ರಾಂಶವನ್ನು ಅಭಿವೃದ್ಧಿಪಡಿಸುವ ಮೊದಲು ಬಳಕೆದಾರನ ಅಗತ್ಯತೆಗಳನ್ನು ವಿವರಿಸುವ ಹಾಗೂ ಔಪಚಾರಿಕ ತಾಂತ್ರಿಕ ಕಾರ್ಯಸಾಧ್ಯತೆಗಳ ಬಗ್ಗೆ ಒಂದು ಅಧ್ಯಯನ ಮಾಡುವುದಕ್ಕಾಗಿ ಕಾರ್ಯವಿಧಾನವು ಇರಲಿಲ್ಲ. ಸಮನ್ವಯ ಮಾರ್ಗವೊಂದರ ಅನುಪಸ್ಥಿತಿಯು ಗಣಕೀಕರಣ ಶ್ರಮದ ದ್ವಿಗುಣವಾಗುವಿಕೆ ಹಾಗೂ ಮಾಹಿತಿ ತಂತ್ರಜ್ಞಾನ ಆಸ್ತಿಗಳ ಕಡಿಮೆ ಪ್ರಮಾಣದ ಬಳಕೆಯಲ್ಲಿ ಪರಿಣಮಿಸಿತು.

ಒಂದು ಸಮಗ್ರ ಯೋಜನೆಯನ್ನು ರೂಪಿಸಲಾಗದಿದ್ದರಿಂದ ಒಂದರೊಳಗೊಂದು ಸೇರಿ ಸಮಗ್ರವಾಗುವ ಶಕ್ಯವಿರುವ ಬೇರೆ ಬೇರೆ ಯೋಜನೆಗಳನ್ನು ಕೈಗೊಳ್ಳಲಾಯಿತು ಮತ್ತು ಅನ್ವಯಗಳ ಅನುಕಲನವು ಮಾಹಿತಿ ತಂತ್ರಜ್ಞಾನ ಕಾರ್ಯನೀತಿಯನ್ನು ಜಾರಿಗೊಳಿಸುವಲ್ಲಿನ ಕೊನೆಯ ಹಂತ ಎಂದು ಇಲಾಖೆಯು ತಿಳಿಸಿತು (ಆಗಸ್ಟ್ 2008). ಮುಂದುವರೆದು ಎನ್‌ಸಿಆರ್‌ಬಿಯಿಂದ ಪೂರೈಕೆಯಾದ ತಂತ್ರಾಂಶವು ಹಾಗೂ ಇತರ ತಂತ್ರಾಂಶ ಪ್ಯಾಕೇಜುಗಳು ಬೇರೆ ಬೇರೆ ತತ್ವಗಳಿಂದ ಕೂಡಿದ್ದು, ಅನುಕಲನವನ್ನು ಯೋಜನೆಯ ಎರಡನೆಯ ಹಂತದಲ್ಲಿ ಪ್ರತ್ಯೇಕವಾಗಿ ಕೈಗೊಳ್ಳಲಾಗುವುದು ಎಂದೂ ತಿಳಿಸಿತು. ಇಲಾಖೆಯ ಉತ್ತರವು ಮಾಹಿತಿ ತಂತ್ರಜ್ಞಾನ ಉಪಕ್ರಮಗಳನ್ನು ಒಂದು ಮಾಹಿತಿ ತಂತ್ರಜ್ಞಾನ ಕಾರ್ಯನೀತಿಯಿಲ್ಲದೆ ಕೈಗೊಳ್ಳಲಾಗಿತ್ತು ಎಂಬುದನ್ನು ದೃಢೀಕರಿಸಿತು.

## 3.2.6 ಅಪರಾಧ ಅಪರಾಧಿಗಳ ಮಾಹಿತಿ ವ್ಯವಸ್ಥೆ

1994–95ರಲ್ಲಿ ಎನ್‌ಸಿಆರ್‌ಬಿಯಿಂದ ಪೂರೈಕೆಯಾದ ಅಪರಾಧ ಅಪರಾಧಿಗಳ ಮಾಹಿತಿ ವ್ಯವಸ್ಥೆಯ ತಂತ್ರಾಂಶವನ್ನು ಕರ್ನಾಟಕದಲ್ಲಿ ಆರಕ್ಷಕ ಇಲಾಖೆಯು ಅನುಷ್ಠಾನಗೊಳಿಸಲು ಪ್ರಾರಂಭಿಸಿತು. ಯಂತ್ರಾಂಶ ಹಾಗೂ ಮೂಲಭೂತ ಸೌಕರ್ಯಕ್ಕೆ ಬೇಕಾಗುವ ಹಣಕಾಸನ್ನು ಭಾರತ ಸರ್ಕಾರವು ಒದಗಿಸಿಕೊಟ್ಟಿತು. ಪ್ಯಾಕೇಜಿನ ಅನುಷ್ಠಾನವು, ಜಿಲ್ಲೆ/ರಾಜ್ಯ/ರಾಷ್ಟ್ರೀಯ ಸ್ಥರದಲ್ಲಿ ಏಕರೀತಿಯ ವಿನ್ಯಾಸವುಳ್ಳ ಅಪರಾಧ ಮಾಹಿತಿಯ ದತ್ತ ಸಂಚಯವೊಂದನ್ನು ನಿರ್ಮಿಸುವ ಗುರಿಯನ್ನು ಹೊಂದಿತ್ತು. ಅಪರಾಧಿಗಳ ಶೀಘ್ರ ಪತ್ತೆ ಹಾಗೂ ಕಾಗದದ ಕೆಲಸವನ್ನು ಕಡಿಮೆಗೊಳಿಸಲು ಅನುವಾಗುವಂತೆ ಆರಕ್ಷಕ ತನಿಖಾಧಿಕಾರಿಗಳಿಗೆ ಸಮಂಜಸವಾದ ಅಪರಾಧ ಮತ್ತು ಅಪರಾಧಿಗಳ ಮಾಹಿತಿಯೊಂದಿಗೆ ನೆರವು ನೀಡುವ ಉದ್ದೇಶದಿಂದ ಎನ್‌ಸಿಆರ್‌ಬಿಯು 2000–01ರಲ್ಲಿ ಪ್ಯಾಕೇಜನ್ನು ಬದಲಾಯಿಸಿತು. ಬದಲಾಯಿಸಿದ ತಂತ್ರಾಂಶದ ಪ್ಯಾಕೇಜಿನ ಅನುಷ್ಠಾನವು 2001ರಲ್ಲಿ ಪ್ರಾರಂಭಿಸಲ್ಪಟ್ಟು ಹಿಂದಿನ ಐದು ವರ್ಷಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಪೂರ್ಣಗೊಂಡಿತ್ತು.

ಅನೇಕ ವಿನ್ಯಾಸ ಹಾಗೂ ಅಭಿವೃದ್ಧಿಯಲ್ಲಿನ ನ್ಯೂನತೆಗಳು, ವ್ಯವಸ್ಥೆಯ ನಿರ್ವಹಣೆಗೆ ಸಾಕಷ್ಟಿಲ್ಲದ ಶ್ರಮ ಹಾಗೂ ಸಂಪರ್ಕದ ತೊಂದರೆಗಳು, ಈ ಕೆಳಕಂಡ ಕಂಡಿಕೆಗಳಲ್ಲಿ ವಿವರಿಸಿದಂತೆ, ಉದ್ದೇಶಗಳನ್ನು ಪೂರ್ಣಗೊಳಿಸದ ಅಪೂರ್ಣ ಹಾಗೂ ವಿಶ್ವಾಸಾರ್ಹವಲ್ಲದ ದತ್ತ ಸಂಚಯಕ್ಕೆ ದಾರಿ ಮಾಡಿಕೊಟ್ಟಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### 3.2.6.1 ರೂಪುರೇಷೆಯಲ್ಲಿನ ಅಸಾಂಗತ್ಯಗಳು

(1) ದತ್ತ ನಮೂದಿಕೆಯನ್ನು ಆರಕ್ಷಕ ಠಾಣೆಯ ಸ್ಥರದಲ್ಲಿ ಮಾಡಲಾಗುತ್ತಿತ್ತು, ಕನ್ನಡದಲ್ಲಿ ದತ್ತವನ್ನು ನಮೂದಿಸಲು ಅನುಕೂಲವಿಲ್ಲದ್ದರಿಂದ, ಕನ್ನಡದಿಂದ ಆಂಗ್ಲ ಭಾಷೆಗೆ ಅನುವಾದ ಮಾಡುವಾಗಿನ

ತಪ್ಪುಗಳು, ವಿವಿಧ ನಮೂನೆಗಳ ಎಲ್ಲಾ ವರ್ಗಗಳನ್ನು ತುಂಬುವಾಗ ಲೋಪದೋಷಗಳು ಆಗುವಲ್ಲಿ ಪರಿಣಮಿಸಿದವು.

(2) ಪರೀಕ್ಷಾ–ತನಿಖೆ ಮಾಡಿದ ಒಂದು ಜಿಲ್ಲಾ ಸ್ಥರದ ಕಛೇರಿಯಲ್ಲಿ ದತ್ತ ನಮೂದಿಕೆಯ ತಪ್ಪುಗಳಿಂದಾಗಿ, ಪೊಲೀಸ್ ಠಾಣೆಗಳಿಂದ ಸ್ವೀಕೃತವಾದ ದತ್ತವನ್ನು ಕ್ರೋಢೀಕರಿಸಿದ ದತ್ತ ಸಂಚಯಕ್ಕೆ ನೇರವಾಗಿ ಅನುಕಲನ ಮಾಡಲು ಸಾಧ್ಯವಾಗಲಿಲ್ಲ. ಅಂತಹ ಪ್ರಕರಣಗಳಲ್ಲಿ ಅನುಕಲನದ ಮೊದಲು ತಪ್ಪುಗಳನ್ನು ತಿದ್ದಲು ಶೋಧಕ ಪ್ರಶ್ನೆಗಳನ್ನು ಹಾಕಲಾಗುತ್ತಿತ್ತು.

(3) ಪ್ಯಾಕೇಜಿನಲ್ಲಿ ವರ್ಗಾವಣೆಯ ಕಾರ್ಯಕ್ಕೆ ಅನುವು ಮಾಡಿಲ್ಲದ ಕಾರಣ ಬೇರೆ ಆರಕ್ಷಕ ಠಾಣೆಗಳಿಗೆ ಪ್ರಕರಣಗಳ ವರ್ಗಾವಣೆಯನ್ನು ವ್ಯವಸ್ಥೆಯ ಮೂಲಕ ಮಾಡಲಾಗುತ್ತಿರಲಿಲ್ಲ; ಆದ್ದರಿಂದ ಅಂತಹ ವರ್ಗಾವಣೆಗಳನ್ನು ಷರಾ ಕಲಮಿನಲ್ಲಿ ಒಂದು ಟಿಪ್ಪಣಿಯ ಮೂಲಕ ನಮೂದಿಸಲಾಗುತ್ತಿತ್ತು.

(4) ಪರೀಕ್ಷಾ–ತನಿಖೆ ನಡೆಸಲಾದ ಕಛೇರಿಗಳಲ್ಲಿ ಮಾಸ್ಟರ್‌ಗಳ ಸೃಷ್ಟಿಯನ್ನು ವ್ಯವಸ್ಥಿತವಾಗಿ ದಸ್ತಾವೇಜೀಕರಣಗೊಳಿಸಿರಲಿಲ್ಲ ಮತ್ತು ಮಾಸ್ಟರ್‌ಗಳನ್ನು ಮಾರ್ಪಡಿಸಿ ಕೋಡ್‌ಗಳನ್ನು ಸೃಷ್ಟಿಸಿಲ್ಲವಾದ್ದರಿಂದ ದತ್ತ ನಮೂದಿಕೆಯನ್ನು ಮಾಡಲಾಗುತ್ತಿರಲಿಲ್ಲ. ಇಲಾಖೆಯ ಪ್ರಕಾರ ಎನ್‌ಸಿಆರ್‌ಬಿಯಿಂದ ಪೂರೈಕೆಯಾದ ಸ್ಥಳೀಯ ಬಳಕೆಗೆ ವಿಧೇಯವಲ್ಲದ ತಂತ್ರಾಂಶದ ಮಿತಿಗಳು ಇದಕ್ಕೆ ಕಾರಣವಾದವು.

### 3.2.6.2 ಸಂಪರ್ಕದ ತೊಂದರೆಗಳು

ಸಂಪರ್ಕದ ತೊಂದರೆಗಳು/ಮಂದಗತಿಯ ದತ್ತ ವರ್ಗಾವಣೆಯಿಂದ ಪೊಲೀಸ್ ಠಾಣೆಗಳಿಂದ ದತ್ತವನ್ನು ಜಿಲ್ಲಾ ಕಛೇರಿಗೆ/ಅಡಕ ಮುದ್ರಿಕೆ/ಬಾಹ್ಯ ದೃಢ ಮುದ್ರಿಕೆ ಮೂಲಕ ತರಲಾಗುತ್ತಿತ್ತು. ಆದ ಕಾರಣ, ಒಂದು ಪೊಲೀಸ್ ಠಾಣೆಯಿಂದ ಇನ್ನೊಂದಕ್ಕೆ ಹೋಲಿಕೆ ಮಾಡುವ ಉದ್ದೇಶಕ್ಕಾಗಿ ಇತ್ತೀಚಿನ ಮಾಹಿತಿಯನ್ನು ಜಿಲ್ಲಾ/ರಾಜ್ಯ ಸರ್ವರ್‌ಗಳಿಗೆ ವರ್ಗಾವಣೆ ಮಾಡಲು ಸಾಧ್ಯವಿರಲಿಲ್ಲ.

ಪ್ರತಿ ಪ್ರಥಮ ಮಾಹಿತಿ ವರದಿಯ (ಎಫ್‌ಐಆರ್) ನಕಲನ್ನು ಜಿಲ್ಲಾ ಪೊಲೀಸ್ ಕಛೇರಿಗಳಿಗೆ ವರಿಷ್ಠ ಅಧಿಕಾರಿಗಳಿಗೆ ವರದಿಗಳನ್ನು ತಯಾರು ಮಾಡಲು, ಕಳಿಸಿಕೊಡಲಾಗುತ್ತಿತ್ತು. ಬೇಕಾದ ಎಲ್ಲಾ ದತ್ತವು ಲಭ್ಯವಿದ್ದರೂ ಸಹ ಸಂಪರ್ಕತೆ ಹಾಗೂ ದತ್ತ ವರ್ಗಾವಣೆಯ ತೊಂದರೆಗಳಿಂದ ಸಿಸಿಐಎಸ್ ಪ್ಯಾಕೇಜು ವರದಿಯ ಉತ್ಪಾದನೆಗೆ ಸಹಕಾರಿಯಾಗಲಿಲ್ಲ. ಬೇರೆ ಆರಕ್ಷಕ ಠಾಣೆಗಳೊಂದಿಗೆ ರಿಯಲ್–ಟೈಮ್ ಸಂಪರ್ಕತೆಯ ಅನುಪಸ್ಥಿತಿಯಿಂದ ಒಮ್ಮೆ ಅನುಗೊಳಿಸಿದ್ದ ಅಪರಾಧ ವಿವರಗಳನ್ನು ದತ್ತ ಸಂಚಯದಲ್ಲಿ ಸಾದೃಶ್ಯ ಪ್ರಕರಣಗಳೊಡನೆ ಹೋಲಿಕೆ ಮಾಡಲಾಗುತ್ತಿರಲಿಲ್ಲ.

### 3.2.6.3 ಸಾಕಷ್ಟಿಲ್ಲದ ಹೂಡುವಳಿ/ಹುಟ್ಟುವಳಿ ನಿಯಂತ್ರಣಗಳು

(1) ದತ್ತ ಗ್ರಹಣದ ಪೂರ್ವದಲ್ಲಿ ಎಲ್ಲಾ ಅಪರಾಧ ಮತ್ತು ಅಪರಾಧಿಗಳ ಮಾಹಿತಿಯನ್ನೊಳಗೊಂಡ ಸಮಗ್ರ ತನಿಖಾ ಫಾರಂಗಳನ್ನು (ಐಐಎಫ್) ತುಂಬಲು ಆರಕ್ಷಕ ಠಾಣೆಗಳಿಗೆ ನಿರ್ದೇಶಿಸಲಾಗಿತ್ತು. ಆದಾಗ್ಯೂ ಪರೀಕ್ಷಾ–ತನಿಖೆಯಲ್ಲಿ ಗಮನಿಸಿದ ಕಛೇರಿಗಳಲ್ಲಿ ಈ ಆಭ್ಯಾಸವನ್ನು ಅಪರೂಪವಾಗಿ ಅನುಸರಿಸಲಾಗುತ್ತಿತ್ತು. ಇದು ದತ್ತ ನಮೂದಿಕೆಯ ತುಂಡುತುಂಡಾದ ರೀತಿಯಲ್ಲಾಗುವುದು ಹಾಗೂ ಕೆಲವು ದತ್ತವು ಬಿಟ್ಟುಹೋಗುವುದು ಮತ್ತು ಗ್ರಹಿಕೆಯಾಗದಿರುವುದರಲ್ಲಿ ಪರಿಣಮಿಸಿತು.

(2) ಮುಂದುವರೆದು, ಮೂಲ ದಾಖಲೆಗಳು ಸಿಸಿಐಎಸ್‌ನಡಿ ರೂಪುಗೊಳ್ಳದೆ ವಿವಿಧ ಕಾಯ್ದೆ ಮತ್ತು ನಿಯಮಗಳ ಪ್ರಕಾರ ರೂಪುಗೊಂಡಿದ್ದ ಕಾರಣ, ಹೂಡುವಳಿ ಮಾಹಿತಿಗೆ ಆಧಾರವಾಗಿದ್ದ ಕೆಲವು ಮೂಲ ದಾಖಲೆಗಳು ಎಲ್ಲಾ ಕ್ಷೇತ್ರಗಳಿಗೆ ಮಾಹಿತಿಯನ್ನು ಹೊಂದಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಪರೀಕ್ಷಾ–ತನಿಖೆ ಮಾಡಲಾದ ಪೊಲೀಸ್ ಠಾಣೆಗಳ ನಿರ್ವಾಹಕರಿಗೆ ಕೆಲವು ದತ್ತ ಹೂಡುವಳಿಯ ಮೂಲದ ಬಗ್ಗೆ ಅರಿವಿರಲಿಲ್ಲ.

(3) ಒಂದು ದತ್ತನಮೂದಿಕೆಯ ಪರದೆಯನ್ನು ಸಾಕಷ್ಟಿಲ್ಲದ ದೃಢೀಕರಣಗಳ ನಿಯಂತ್ರಣದ ಕಾರಣ ಎಫ್‌ಐಆರ್‌ಗಳ ಸಂಖ್ಯೆ, ಅಪರಾಧದ ಪ್ರಧಾನ ಶೀರ್ಷಿಕೆಯ ವಿವರಗಳಂತಹ ಕೆಲವು ಕ್ಷೇತ್ರಗಳನ್ನು ನಮೂದಿಸದೇ ಬಿಟ್ಟಾಗ ವ್ಯವಸ್ಥೆಯು ಒಂದು ದೋಷ ಸಂದೇಶವನ್ನು ಪ್ರದರ್ಶಿಸುತ್ತಿತ್ತು ಮತ್ತು ಅದನ್ನು ನಿರ್ಲಕ್ಷಿಸಿದಾಗ ಅಪೂರ್ಣ ದತ್ತಗ್ರಹಿಕೆಗೆ ದಾರಿಯಾಗುವಂತೆ ಅನುಗೊಳಿಸಿದ್ದ ದತ್ತವನ್ನು ಉಳಿಸಲು ಅವಕಾಶ ಮಾಡಿಕೊಡುತ್ತಿತ್ತು.

(4) ಅಸ್ತಿತ್ವದಲ್ಲಿರುವ ಸೂಚನೆಗಳ ಪ್ರಕಾರ, ಗಣಕಯಂತ್ರಗಳು ಕೆಲಸ ಮಾಡದೇ ಇರುವ ಸಂದರ್ಭಗಳಲ್ಲಿ ವಿನ:, ಉಳಿದಂತೆ ನ್ಯಾಯಾಲಯಗಳಿಗೆ ಮಂಡಿಸಬೇಕಾದ ಎಫ್‌ಐಆರ್‌ಗಳನ್ನು ನಿರ್ವಿವಾದವಾಗಿ ಗಣಕಯಂತ್ರಗಳಲ್ಲೇ ಮುದ್ರಿಸಬೇಕು. ಆದಾಗ್ಯೂ ಸಿಸಿಐಎಸ್‌ನ್ನು ಕನ್ನಡ ಭಾಷೆಗೆ ಸಹಕರಿಸುವಂತೆ ರೂಪಿಸಿಲ್ಲದ್ದರಿಂದ ಕೆಲವು ಆರಕ್ಷಕ ಠಾಣೆಗಳಲ್ಲಿ ಕೈಬರಹದ ಎಫ್‌ಐಆರ್‌ಗಳನ್ನೇ ದಾಖಲಿಸಲಾಗುತ್ತಿತ್ತು ಎಂಬುದನ್ನು ಗಮನಿಸಲಾಯಿತು.

(5) 45 ಅಡಕಗಳನ್ನೊಳಗೊಂಡ 'ವರದಿಗಳು' ಪರಿವಿಡಿಯು ಪರೀಕ್ಷಾ–ತನಿಕೆ ಮಾಡಿದ ಎರಡು ಪೊಲೀಸ್ ಠಾಣೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಇದು ದೈನಂದಿನ ಕೆಲಸದಲ್ಲಿ ದತ್ತ ಸಂಚಯವನ್ನು ಹೆಚ್ಚಾಗಿ ಬಳಸಲಾಗುತ್ತಿರಲಿಲ್ಲ ಎಂಬುದನ್ನು ಸೂಚಿಸಿತು.

(6) ಪರೀಕ್ಷಾ–ತನಿಖೆ ಮಾಡಿದ ಯಾವುದೇ ಕಛೇರಿಯಲ್ಲಿ ಬಳಕೆದಾರನ ಪರಾಮರ್ಶೆಗೆ ಬಳಕೆದಾರನ ಕೈಪಿಡಿಗಳು ಅಥವಾ ಕಾರ್ಯಾಚರಣೆ ಕೈಪಿಡಿಗಳು ತಕ್ಷಣಕ್ಕೆ ಲಭ್ಯವಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಅಂತಹ ಕೈಪಿಡಿಗಳನ್ನು ಒದಗಿಸುವದರಿಂದ ದತ್ತ ಗ್ರಹಿಕೆಯ ಗುಣಮಟ್ಟವನ್ನು ಉತ್ತಮಗೊಳಿಸಬಹುದಾಗಿತ್ತು.

### 3.2.6.4 ಸಿಸಿಐಎಸ್ ದತ್ತ ಸಂಚಯದ ನಿರ್ವಹಣೆ

ದತ್ತ ಸಂಚಯದ ನಿರ್ವಹಣೆಯಲ್ಲಿನ ಅನೇಕ ನ್ಯೂನತೆಗಳು ಯಾವುದೇ ಅರ್ಥಪೂರ್ಣ ಆಡಳಿತ ಮಂಡಳಿ ನಿರ್ಣಯಗಳನ್ನು ಕೈಗೊಳ್ಳಲು ಉಪಯೋಗವಿಲ್ಲದ ಅಪೂರ್ಣ ಮತ್ತು ನಂಬಲರ್ಹವಲ್ಲದ ದತ್ತಸಂಚಯದಲ್ಲಿ ಪರಿಣಮಿಸಿತು ಎಂಬುದನ್ನು ಲೆಕ್ಕಪರಿಶೋಧನೆಯು ಈ ಕೆಳಕಂಡ ನಿದರ್ಶನಗಳಲ್ಲಿ ಗಮನಿಸಿತು.

(1) ಅನೇಕ ಪರಿವಿಡಿ/ಉಪ ಪರಿವಿಡಿಗಳಲ್ಲಿ ಪಠ್ಯ/ಹೂಡುವಳಿ ದತ್ತವನ್ನು ಚಿತ್ರ ಶೋಧನೆಯ ಮೂಲಕ ಗ್ರಹಣ ಮಾಡಲು ಅನುವು ಮಾಡಲಾಗಿದೆ. ಆದಾಗ್ಯೂ ಪರೀಕ್ಷಾ–ತನಿಖೆ ಮಾಡಿದ ಎಲ್ಲಾ ಆರಕ್ಷಕ ಠಾಣೆಗಳಲ್ಲೂ ಚಿತ್ರಶೋಧಗಳನ್ನು ಸ್ಥಾಪಿಸಿರಲಿಲ್ಲ ಅಥವಾ ಅವು ಕಾರ್ಯ ನಿರ್ವಹಿಸುತ್ತಿರಲಿಲ್ಲವಾದ್ದರಿಂದ ಚಿತ್ರ ಶೋಧನೆ ಮಾಡಲು ಸಾಧ್ಯವಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ದತ್ತ ಸಂಚಯಗಳು ಅಂತಹ ಎಲ್ಲಾ ಚಿತ್ರ/ಪಠ್ಯ ದತ್ತವನ್ನು ಹೊಂದಿರಲಿಲ್ಲವಾದ್ದರಿಂದ ಅಪೂರ್ಣವಾಗಿದ್ದವು.

(2) ಒದಗಿಸಿದ ದತ್ತದ ವಿಶ್ಲೇಷಣೆಯು ದತ್ತಸಂಚಯವು ಅನೇಕ ನಮೂನೆಗಳು/ಕ್ಷೇತ್ರಗಳಲ್ಲಿ ಅಪೂರ್ಣವಾಗಿದ್ದಿತು ಎಂಬುದನ್ನು ತೋರಿಸಿಕೊಟ್ಟಿತು. ಕೆಲವು ಆರಕ್ಷಕ ಠಾಣೆಗಳಲ್ಲಿ ಎಫ್‌ಐಆರ್‌ಗಳ ಮತ್ತು ದಸ್ತಗಿರಿಯ ವಿವರಗಳ ಪ್ರಮುಖ ಮಾಹಿತಿಯನ್ನು ಶೇಖರಿಸಬೇಕಾದ ಕೋಷ್ಟಕಗಳಲ್ಲಿ ದತ್ತ ನಮೂದಿಕೆಯನ್ನು ಮಾಡಿರಲಿಲ್ಲ. ಇದರಿಂದ ತನಿಖಾಧಿಕಾರಿಗಳಿಗೆ ದತ್ತವು ಹೆಚ್ಚು ಉಪಯೋಗವಿರಲಿಲ್ಲ. ಪರೀಕ್ಷಾ ತನಿಖೆ ಮಾಡಿದ ಪೊಲೀಸ್ ಠಾಣೆಗಳಲ್ಲಿ ದಸ್ತಗಿರಿ ಮಾಡಿದ ವ್ಯಕ್ತಿಗಳ ವಿವರಗಳನ್ನು ಶೇಖರಿಸಲು ಗೊತ್ತುಮಾಡಿದ್ದ ನಾಲ್ಕು ಕೋಷ್ಟಕಗಳ 15 ಇತರ ಕ್ಷೇತ್ರಗಳಲ್ಲಿ ಅಪೂರ್ಣತೆಯು ಶೇಕಡ 90ಕ್ಕಿಂತ ಹೆಚ್ಚಾಗಿದ್ದಿತು.

(3) ಪರೀಕ್ಷಾ ತನಿಖೆ ಮಾಡಿದ ಪೊಲೀಸ್ ಠಾಣೆಗಳಲ್ಲಿ ಹಳೆ ಅವಧಿಗಳ ದತ್ತ ನಮೂದಿಕೆಯು ಬಾಕಿ ಇದ್ದಿತು.

ಈ ರೀತಿ ಅನುಷ್ಠಾನದಲ್ಲಿನ ಲೋಪಗಳು, ಸಮರ್ಪಕ ಸಂಪರ್ಕತೆಯ ಅಭಾವ ಹಾಗೂ ದತ್ತ ಸಂಚಯದಲ್ಲಿನ ನಿರ್ವಹಣೆಯ ಸಮಸ್ಯೆಗಳಿಂದ ಸಿಸಿಐಎಸ್ ಅನ್ವಯದ ಪೂರ್ಣ ಉಪಯುಕ್ತತೆಯನ್ನು ಸಾಧಿಸಲಾಗದೆ ಯೋಜನೆಯ ಉದ್ದೇಶವು ಸಫಲವಾಗಲಿಲ್ಲ. ಸಿಸಿಐಎಸ್‌ನ್ನು ಮುಖ್ಯವಾಗಿ ಉನ್ನತ ಮಟ್ಟದ ಅಧಿಕಾರಿಗಳಿಗೆ ವ್ಯವಸ್ಥಾಪನಾ ಮಾಹಿತಿ ವ್ಯವಸ್ಥೆ ತಂತ್ರಾಂಶವಾಗಿ ಎನ್‌ಸಿಆರ್‌ಬಿಯಿಂದ ಅಭಿವೃದ್ಧಿಪಡಿಸಿ ಪೂರೈಸಲಾಗಿತ್ತು ಎಂದು ಇಲಾಖೆಯು ತಿಳಿಸಿತು ಮತ್ತು ಅದು ಅನೇಕ ರೂಪುರೇಷೆಗಳಲ್ಲಿನ ನ್ಯೂನತೆಗಳು ಮತ್ತು ನಮನೀಯತೆಯ ಅಭಾವದಿಂದ ಕೂಡಿತ್ತು ಎಂದು ಒಪ್ಪಿಕೊಂಡಿತು. ಸಂಪರ್ಕತೆಯ ಅಭಾವದಿಂದ ಅನೇಕ ಉಪಕ್ರಮವಿಧಿಗಳನ್ನು ಉಪಯೋಗಿಸಲಿಲ್ಲ ಮತ್ತು ಇಲಾಖೆಯು ಅದನ್ನು ಸಾಧ್ಯವಾದಷ್ಟು ಗ್ರಾಹಕೀಯಗೊಳಿಸಲು ಪ್ರಯತ್ನಿಸಿತ್ತು ಎಂದೂ ತಿಳಿಸಿತು. ಇದರಿಂದ ಸಿಸಿಐಎಸ್ ಅನುಷ್ಠಾನಗೊಂಡ ಏಳು ವರ್ಷಗಳ ನಂತರವೂ ಅತ್ಯುತ್ತಮ ಉಪಯುಕ್ತತೆಯನ್ನು ಪಡೆಯಲು ಸಾಧ್ಯವಾಗಲಿಲ್ಲ ಎಂಬ ಅಂಶವು ದೃಢಪಟ್ಟಿತು.

### 3.2.6.5 ತರಬೇತಿ ಹೊಂದಿದ ಸಿಬ್ಬಂದಿಯ ಕೊರತೆ

ಆರಕ್ಷಕ ಠಾಣೆಗಳಲ್ಲಿ ತರಬೇತಿ ಹೊಂದಿದ ವ್ಯಕ್ತಿಗಳ ಲಭ್ಯತೆಯು ಬಹಳ ಕಡಿಮೆ ಇದ್ದಿತು ಎಂಬುದನ್ನು ಗಮನಿಸಲಾಯಿತು. ತರಬೇತಿ ಹೊಂದಿದವರಿಗೂ ಸಹ ಆಗಿಂದಾಗ್ಯೆ ಬೇರೆ ಕೆಲಸಗಳನ್ನು ವಹಿಸಲಾಗುತ್ತಿತ್ತು. ಪರಿಣಾಮವಾಗಿ ದತ್ತ ನಮೂದಿಕೆಯ ಕೆಲಸವು ವಿಳಂಬವಾಯಿತು ಮತ್ತು ಹಳೆಯ ಅವಧಿಯ ದತ್ತ ನಮೂದಿಕೆಯ ಬಾಕಿ ಕೆಲಸವನ್ನು ಸುಲಭವಾಗಿ ನಿರ್ವಹಿಸಲಾಗಲಿಲ್ಲ. ತಂತ್ರಾಂಶದ ಪ್ಯಾಕೇಜನ್ನು ಉಪಯೋಗಿಸುತ್ತಿದ್ದ ಕೆಲವು ನಿರ್ವಾಹಕರಿಗೆ ಔಪಚಾರಿಕವಾಗಿ ತರಬೇತಿ ಆಗಿರಲಿಲ್ಲ. ಪರೀಕ್ಷಾ–ತನಿಖೆ ನಡೆಸಿದ ಒಂದು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ನಾಲ್ಕು ವ್ಯಕ್ತಿಗಳು ಆಡಳಿತಗಾರರಾಗಿ ತರಬೇತಿ ಹೊಂದಿದ್ದರೂ ಸಹ ಯಾರನ್ನೂ ಆಡಳಿತಗಾರನಾಗಿ ಕಾರ್ಯ ನಿರ್ವಹಿಸಲು ನಿಯಮಿಸಿರಲಿಲ್ಲ. ಈ ಕೆಳಕಂಡ ಕೋಷ್ಟಕವು ತರಬೇತಿ ಹೊಂದಿದ ಸಿಬ್ಬಂದಿಯ ಕೊರತೆಯನ್ನು ತೋರಿಸುತ್ತದೆ.

**ಕೋಷ್ಟಕ 1: ತರಬೇತಿ ಹೊಂದಿದ ಸಿಬ್ಬಂದಿಯ ಕೊರತೆ**

| ಪೊಲೀಸ್ ಠಾಣೆ | ಕಾರ್ಯನಿರತ ಸಿಬ್ಬಂದಿಯ ಸಂಖ್ಯೆ | ತರಬೇತಿ ಹೊಂದಿದ ಸಿಬ್ಬಂದಿಯ ಸಂಖ್ಯೆ |
|---|---|---|
| ಕಲಾಸಿಪಾಳ್ಯಂ | 128 | ಶೂನ್ಯ |
| ಬಸವನಗುಡಿ | 91 | 02 |
| ಆನೇಕಲ್ | 53 | 03 |

ಪ್ರತಿಯೊಬ್ಬ ನೌಕರನಿಗೂ ತರಬೇತಿ ಕೊಡಲು ಮತ್ತು ರಿಫ್ರೆಶರ್ ಕೋರ್ಸ್‌ಗಳಿಂದ ಅವನ ಜ್ಞಾನವನ್ನು ಪರಿಷ್ಕರಿಸಲು ಯಾವುದೇ ಅಂತರ/ಅಂತಿಮ ದಿನವನ್ನು ನಿಗದಿ ಮಾಡುವ ಕಾರ್ಯನೀತಿ ಇರಲಿಲ್ಲ. ಮುಂದುವರೆದು ತಮ್ಮ ದೈನಂದಿನ ಕಾರ್ಯಗಳನ್ನು ನಿರ್ವಹಿಸುವಾಗ ನೌಕರನು ಎದುರಿಸುತ್ತಿರುವ ತೊಂದರೆಗಳನ್ನು ದಾಖಲೀಕರಣಗೊಳಿಸಿ, ತರಬೇತುದಾರರಿಗೆ ಅವುಗಳನ್ನು ಪರಿಹರಿಸಲು ಅನುವಾಗುವಂತೆ ಮಾಡುವ ಯಾವುದೇ ಕಾರ್ಯವಿಧಾನವೂ ಇರಲಿಲ್ಲ. ಉಪಯುಕ್ತತೆ ಕಾರ್ಯವಿಧಾನ ಮತ್ತು ದತ್ತವನ್ನು ಗ್ರಹಿಸಬಹುದಾದ ಮೂಲ ದಾಖಲೆಗಳ ಅರಿವಿಲ್ಲದಿದ್ದುದರಿಂದ ಆರಕ್ಷಕ ಠಾಣೆಗಳು ಕೆಲವು ಪರಿವಿಡಿಗಳನ್ನು ಬಳಸುತ್ತಿರಲಿಲ್ಲ.

### 3.2.6.6 ಸಿಪಾದ ಪರಿಚಯ

2004–05ರಲ್ಲಿ ಭಾರತ ಸರ್ಕಾರವು ಆರಕ್ಷಕ ಠಾಣೆಯ ಸ್ಥರದಲ್ಲಿ ಅನುಷ್ಠಾನಗೊಳಿಸಲು "ಸಾಮಾನ್ಯ ಸಮಗ್ರ ಆರಕ್ಷಕ ಅನ್ವಯ" (ಸಿಪಾ) ಎಂಬ ಹೊಸ ಪ್ಯಾಕೇಜನ್ನು ಪರಿಚಯಿಸಲು ಪ್ರಸ್ತಾಪಿಸಿತು. ಅದರಂತೆ ಪೊಲೀಸ್ ಠಾಣೆಗಳಲ್ಲಿ ಜಾಲಗಳನ್ನು ಸ್ಥಾಪಿಸಲು ಗಣಕಯಂತ್ರಗಳ ಖರೀದಿ ಕೂಡ ರಾಜ್ಯ ಸರ್ಕಾರದಿಂದ ಮಂಜೂರಾಯಿತು. ಯೋಜನೆಯನ್ನು ಹಂತಹಂತವಾಗಿ, ಅಂದರೆ, 2004–05ರಲ್ಲಿ ಶೇಕಡ 10ರಂತೆ, 2006–07ರಲ್ಲಿ ಶೇಕಡ 30ರಂತೆ ಮತ್ತು ಬಾಕಿಯನ್ನು 2007–08ರಲ್ಲಿ ಪೂರ್ಣಗೊಳಿಸುವಂತೆ ಅನುಷ್ಠಾನಗೊಳಿಸಬೇಕಿತ್ತು. ಆದಾಗ್ಯೂ, ಇಲಾಖೆಯು 2004–05ರಲ್ಲಿ ಶೇಕಡ ಹತ್ತರಷ್ಟು ಪೊಲೀಸ್ ಠಾಣೆಗಳಿಗೆ ಅವಶ್ಯಕತೆಯಿದ್ದ ಯಂತ್ರಾಂಶವನ್ನು 2005–06ರಲ್ಲಿ ಶೇಕಡ 30ರಷ್ಟು ಮತ್ತು ಉಳಿಕೆಯನ್ನು 2006–08ರಲ್ಲಿ ಖರೀದಿಸಿತು. ಇದುವರೆಗೂ ಒಟ್ಟು ರೂ.10.92 ಕೋಟಿಗಳಷ್ಟು ವೆಚ್ಚ ಮಾಡಲಾಗಿತ್ತು. ದೆಹಲಿಯ ಎನ್‌ಐಸಿಯವರಿಂದ ತಂತ್ರಾಂಶದ ಅಭಿವೃದ್ಧಿಯು ಆಗಬೇಕಿತ್ತು. ಆದರೂ ತಂತ್ರಾಂಶವು ಇಲಾಖೆಗೆ ಇನ್ನೂ ತಲುಪಿರಲಿಲ್ಲ ಎಂಬುದನ್ನು ಗಮನಿಸಲಾಯಿತು (ಆಗಸ್ಟ್ 2008). ಕೆಲವು ಪೊಲೀಸ್ ಠಾಣೆಗಳಲ್ಲಿ ಹೊಸ ಅನ್ವಯ ಪ್ಯಾಕೇಜನ್ನು ಅನುಷ್ಠಾನ ಮಾಡಲು ಪೂರೈಸಲಾಗಿದ್ದ ಕಾರ್ಯಾಚರಣೆ ವ್ಯವಸ್ಥೆಯನ್ನು (ಲಿನೆಕ್ಸ್) ತೆಗೆದುಹಾಕಲಾಗಿತ್ತು ಮತ್ತು ದೈನಂದಿನ ಉಪಯೋಗಕ್ಕಾಗಿ ವಿಂಡೋಸ್ ಕಾರ್ಯಾಚರಣೆ ವ್ಯವಸ್ಥೆಯನ್ನೇ ಬಳಸಲಾಗುತ್ತಿತ್ತು.

ಸಿಪಾದ ಅಭಿವೃದ್ಧಿಗೆ ಮುಂಚಿತವಾಗಿಯೇ ಗಣಕಯಂತ್ರಗಳನ್ನು ಖರೀದಿಸಿದ್ದರಿಂದ ರೂ.10.92 ಕೋಟಿಗಳಷ್ಟು ನಿಧಿಯು ದಿಗ್ಬಂಧನವಾಗುವಲ್ಲಿ ಪರಿಣಮಿಸಿತು ಮತ್ತು ಕಡಿಮೆ ಉಪಯೋಗಕ್ಕೆ ದಾರಿ ಮಾಡಿಕೊಟ್ಟಿತು.

### 3.2.7 ಪೊಲೀಸ್ ಐಟಿ 2000 ಯೋಜನೆ

ಕರ್ನಾಟಕದಲ್ಲಿನ ಆರಕ್ಷಕ ಇಲಾಖೆಯ ಎಲ್ಲಾ ಚಟುವಟಿಕೆಗಳನ್ನು ಗಣಕೀಕರಣಗೊಳಿಸಲು ರೂ.16.35 ಕೋಟಿಗಳಷ್ಟು ಅಂದಾಜು ವೆಚ್ಚದಲ್ಲಿ ಮೂರು ವರ್ಷಗಳಲ್ಲಿ ಪೂರ್ಣಗೊಳಿಸಬೇಕಿದ್ದ 'ಪೊಲೀಸ್ ಐಟಿ 2000' ಯೋಜನೆಯನ್ನು ರಾಜ್ಯ ಸರ್ಕಾರವು ಅನುಮೋದಿಸಿತು (ನವೆಂಬರ್ 1999). ವ್ಯವಸ್ಥೆಯ ಅಗತ್ಯತೆಯ ಸ್ಪಷ್ಟೋಕ್ತಿಯ (ಎಸ್‌ಆರ್‌ಎಸ್) ತಯಾರಿಕೆಯನ್ನು ಸಿಎಂಸಿ ಅವರಿಗೆ ವಹಿಸಲಾಗಿತ್ತು. ಅದನ್ನು ಕಂಪನಿಯು ಸೆಪ್ಟಂಬರ್ 2001ರಲ್ಲಿ ತಲುಪಿಸಿತು. ತಂತ್ರಾಂಶದ ಅಭಿವೃದ್ಧಿಗೆ ಸೆಪ್ಟೆಂಬರ್ 2002ರಲ್ಲಿ ಟೆಂಡರ್‌ಗಳನ್ನು ಕರೆಯಲಾಯಿತು ಮತ್ತು ಫೆಬ್ರವರಿ 2004ರಲ್ಲಿ ರೂ.1.90 ಕೋಟಿ ವೆಚ್ಚದಲ್ಲಿ ಕಾರ್ಯವನ್ನು ವಿಪ್ರೋ ಲಿಮಿಟೆಡ್‌ಗೆ ವಹಿಸಲಾಯಿತು. ಇಲ್ಲಿಯವರೆಗೂ ಅವರಿಗೆ ರೂ.1.33 ಕೋಟಿಗಳನ್ನು ಪಾವತಿಸಿದ್ದರೂ ಕೂಡ ಅಭಿವೃದ್ಧಿಪಡಿಸಿದ ಅನ್ವಯ ಪ್ಯಾಕೇಜು, ಬಳಕೆದಾರರ ಒಪ್ಪಿಗೆ ಪರೀಕ್ಷೆಗಳು ಅಪೂರ್ಣವಾಗಿದ್ದರಿಂದ ಇನ್ನೂ ಬಿಡುಗಡೆಯಾಗಬೇಕಿತ್ತು (ಆಗಸ್ಟ್ 2008).

ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯು, ಯಂತ್ರಾಂಶದ ಖರೀದಿಗೆ ಮೊದಲು ಯೋಜನೆಯ ಹಾದಿ ನಕ್ಷೆ ಹಾಗೂ ಇಲಾಖೆಯ ಸಂಪೂರ್ಣ ಗಣಕೀಕರಣಕ್ಕೆ ಯಂತ್ರಾಂಶ, ತಂತ್ರಾಂಶ ಮತ್ತು ಸಂಪರ್ಕತೆಯಂತಹ ಹೂಡುವಳಿಗಳ ಮೈಲುಗಲ್ಲುಗಳ ತಯಾರಿಕೆಯು ಅಪೇಕ್ಷಣೀಯ ಎಂದು ಭಾವಿಸಿದ್ದರೂ (ಆಗಸ್ಟ್ 2000), ಯೋಜನೆಯ ಸ್ವಭಾವ ಹಾಗೂ ವ್ಯಾಪ್ತಿಯನ್ನು ವಿವರಿಸುವ ಯಾವುದೇ ಯೋಜನಾ ಉಪಕ್ರಮದ ದಾಖಲೆಗಳನ್ನು ರೂಪಿಸಿರಲಿಲ್ಲ.

ಇಲಾಖೆಯು, ಮಾರಾಟಗಾರರು, ಅನ್ವಯದ ವ್ಯಾಪ್ತಿಯನ್ನು ಸಮರ್ಪಕವಾಗಿ ಗಣನೆಗೆ ತೆಗೆದುಕೊಳ್ಳದೆ ಅದನ್ನು ತಲುಪಿಸಲು ಒಪ್ಪಿದುದು ಅನೇಕ ಅಸಾಮ್ಯತೆಗಳಲ್ಲಿ ಪರಿಣಮಿಸಿತು ಮತ್ತು ಯೋಜನೆಯನ್ನು ತಲುಪಿಸುವ ದಿನಾಂಕಗಳನ್ನು ಅಗತ್ಯತೆಯ ಸ್ಪಷ್ಟತೆ ಮತ್ತು ಯೋಜನೆಯ ಅಂದಾಜಿನ ಪೂರ್ವದಲ್ಲಿ ನಿಶ್ಚಯಿಸಿದುದು ಅನೈಜವಾಗಿ ತಿರುಗಿತು ಎಂದು ತಿಳಿಸಿತು (ಆಗಸ್ಟ್ 2008). ಯೋಜನೆಯನ್ನು ಸಮರ್ಪಕವಾಗಿ ಯೋಜಿಸದೆ ಅನುಷ್ಠಾನಗೊಳಿಸಿದುದನ್ನು ಉತ್ತರವು ದೃಢೀಕರಿಸಿತು

### 3.2.8 ಭೌಗೋಳಿಕ ಮಾಹಿತಿ ವ್ಯವಸ್ಥೆ ಆಧಾರಿತ ಅಪರಾಧ ವಿಶ್ಲೇಷಣೆ ಮತ್ತು ವರದಿ ಚಾಲಕ ಸಾಧನ

ಇಲಾಖೆಯ ಕೋರಿಕೆಯ ಮೇರೆಗೆ ಕರ್ನಾಟಕ ಸರ್ಕಾರ ದೂರ ಸಂವೇದಿ ಅನ್ವಯ ಕೇಂದ್ರವು (ಕೆಎಸ್‌ಆರ್‌ಎಸ್‌ಎಸಿ) ಗ್ರಾಹಕೀಯಗೊಳಿಸದೊಂದು ಅನ್ವಯವಾದ ಭೌಗೋಳಿಕ ಮಾಹಿತಿ ವ್ಯವಸ್ಥೆ ಆಧಾರಿತ ಅಪರಾಧ ವಿಶ್ಲೇಷಣೆ ಮತ್ತು ವರದಿ ಚಾಲಕ ಸಾಧನದ (ಜಿ–ಕೇರ್) ಯೋಜನಾ ಪ್ರಸ್ತಾವನೆಯನ್ನು ರಾಜ್ಯ ಅಪರಾಧ ದಾಖಲೆಗಳ ವಿಭಾಗಕ್ಕೆ ಸಲ್ಲಿಸಿತು. ಯೋಜನೆಯು ನಿರ್ಣಯ ಕೈಗೊಳ್ಳುವವರಿಗೆ ಅಪರಾಧ ದತ್ತವನ್ನು ಅವುಗಳ ಭೌಗೋಳಿಕ ಸ್ಥಾನದ ಉಲ್ಲೇಖದೊಂದಿಗೆ ಶೇಕರಿಸಲು, ವಿಶ್ಲೇಷಿಸಲು ಮತ್ತು ಪುನರ್ಗಳಿಸಲು ಅನುಕೂಲಗೊಳಿಸುವ ಉದ್ದೇಶ ಹೊಂದಿತ್ತು. ಯೋಜನೆಯ ಒಟ್ಟು ವೆಚ್ಚವನ್ನು ರೂ.47.39 ಲಕ್ಷಗಳೆಂದು ಅಂದಾಜಿಸಲಾಗಿತ್ತು ಮತ್ತು ಜೂನ್ 2003ರಲ್ಲಿ ಪೂರ್ಣ ಮೊತ್ತವನ್ನು ಪಾವತಿಸಲಾಯಿತು. ತದನಂತರ ಅಕ್ಟೋಬರ್ 2003ರಲ್ಲಿ ಕೆಎಸ್‌ಆರ್‌ಎಸ್‌ಎಸಿ ಯೊಂದಿಗೆ 12 ತಿಂಗಳೊಳಗಾಗಿ ಯೋಜನೆಯ ಅನುಷ್ಠಾನಕ್ಕಾಗಿ ಒಡಂಬಡಿಕೆಯ ಜ್ಞಾಪನ ಪತ್ರವೊಂದನ್ನು (ಎಂಓಯು) ದಾಖಲಿಸಲಾಯಿತು. ಯೋಜನೆಯ ಅನುಷ್ಠಾನದಲ್ಲಿ ವಿಳಂಬ ಹಾಗೂ ದೋಷಯುಕ್ತ ಅನುಷ್ಠಾನಕ್ಕೆಡೆ ಮಾಡುವಂತಹ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಯಿತು.

(i) ಯೋಜನೆಯನ್ನು ಕೈಗೊಳ್ಳುವ ಮೊದಲು ಬಳಕೆದಾರನ ಅಗತ್ಯತೆಗಳನ್ನು ಏಜೆನ್ಸಿಗೆ ವಿವರಿಸಲಿಲ್ಲ. ಯೋಜನೆಯು ಎಂಓಯು ಪ್ರಕಾರ ಅಕ್ಟೋಬರ್ 2004ರಲ್ಲಿ ಪೂರ್ಣಗೊಳಿಸಬೇಕಾಗಿದ್ದರೂ ಅಗತ್ಯತೆಯ ಸ್ಪಷ್ಟೋಕ್ತಿಯನ್ನು ಮೇ 2005ರಲ್ಲಿ ಏಜೆನ್ಸಿಗೆ ಸಲ್ಲಿಸಲಾಯಿತು.

(ii) ಮತಗಟ್ಟೆಗಳು ಮತ್ತು ಗಸ್ತು ಸಂಖ್ಯೆ ಮುಂತಾದವುಗಳಂತಹ ಹೆಚ್ಚುವರಿ ಅಳತೆಗೋಲುಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಲು ಅನುವು ಮಾಡಿಕೊಡುವಂತೆ ಆಗಸ್ಟ್ 2006ರಲ್ಲಿ ಏಜೆನ್ಸಿಗೆ ಒಂದು ಹೊಸ ಕೋರಿಕೆ ಮಾಡಿದ್ದು ಸ್ಪಷ್ಟೋಕ್ತಿಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಬಳಕೆದಾರರ ಅಗತ್ಯತೆಗಳನ್ನು ವಿಶ್ಲೇಷಿಸಿರಲಿಲ್ಲ ಹಾಗೂ ವಿವರಿಸಿರಲಿಲ್ಲ ಎಂಬುದನ್ನು ಸೂಚಿಸಿತು.

(iii) ಯೋಜನೆಯನ್ನು ಬಿಡುಗಡೆಗೊಳಿಸುವ ಮೊದಲು ಮಾರಾಟಗಾರರಿಂದ/ಇಲಾಖೆಯಿಂದ ಅಭಿವೃದ್ಧಿಗೊಳಿಸಿದ ಅನ್ವಯ ಪ್ಯಾಕೇಜಿನ ಘಟಕ ಪರೀಕ್ಷೆ, ಕಾರ್ಯ ಸಾಧನೆಯ ಪರೀಕ್ಷೆ ಮತ್ತು ಅಂತಿಮವಾಗಿ ಬಳಕೆದಾರನ ಸ್ವೀಕಾರ ಪರೀಕ್ಷೆಗಳನ್ನು ನಡೆಸಿರುವುದನ್ನು ಸೂಚಿಸಲು ಯಾವುದೇ ದಾಖಲೆಗಳಿರಲಿಲ್ಲ.

(iv) ಕಳುವಿನ ಪ್ರಕರಣಗಳು (ದ್ವಿಚಕ್ರ, ನಾಲ್ಕು ಚಕ್ರಗಳು) ಅಪರಾಧಗಳು (ಘೋರ ಅಥವಾ ಘೋರವಲ್ಲದ) ಮುಂತಾದವುಗಳನ್ನು ವರ್ಗಾವಾರು ನಮೂದಿಸಲು ತಂತ್ರಾಂಶವು ಅನುವು ಮಾಡಿರಲಿಲ್ಲ. ಮುಂದುವರೆದು ಎಲ್ಲಾ ಪ್ರಮುಖ ರಸ್ತೆಗಳು/ಹೆಗ್ಗುರುತುಗಳನ್ನು ಸೂಚಿಸುವುದರೊಂದಿಗೆ ಸರಹದ್ದಿನ ನಕ್ಷೆಗಳು ಪರಿಪೂರ್ಣವಾಗಿರಲಿಲ್ಲ.

ಆದಾಗ್ಯೂ ಮೇ 2007ರಲ್ಲಿ ಬೆಂಗಳೂರಿನ ಆರು ವಲಯಗಳಲ್ಲಿ ಮತ್ತು ಬಾಗಲಕೋಟೆ, ಗದಗ, ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಅನ್ವಯ ಪ್ಯಾಕೇಜನ್ನು ಹತ್ತು ಸ್ಥಳಗಳಲ್ಲಿ ಅನುಷ್ಠಾನಗೊಳಿಸಲಾಗಿತ್ತು. ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಅನ್ವಯ ಪ್ಯಾಕೇಜು ಇನ್ನೂ ಅನುಷ್ಠಾನವಾಗಬೇಕಾಗಿದ್ದುದು (ಆಗಸ್ಟ್ 2008) ಐದು ವರ್ಷಗಳ ನಂತರವೂ ರೂ.47 ಲಕ್ಷಗಳ ಮೇಲ್ಪಟ್ಟು ಹೂಡಿಕೆಯು ಫಲಪ್ರದವಾಗದಿರುವಲ್ಲಿ ಪರಿಣಮಿಸಿತು. ವ್ಯಾಪ್ತಿಯ ಕಾರಣ ವಿಳಂಬವಾಯಿತು ಮತ್ತು ಹತ್ತು ಸ್ಥಳಗಳಲ್ಲಿ ಅನುಷ್ಠಾನದ ನಂತರವೂ ಸ್ವೀಕೃತವಾದ ಪ್ರತಿಕ್ರಿಯೆಗಳ ಆಧಾರದ ಮೇಲೆ ಮುಂದಿನ ಬದಲಾವಣೆಗಳನ್ನು ಮಾಡಲಾಗುತ್ತಿದೆ ಎಂದು ತಿಳಿಸಿತು (ಆಗಸ್ಟ್ 2008). ಮುಂದುವರೆದು ಮಾರ್ಚ್ 2009ರೊಳಗೆ ಅನುಷ್ಠಾನವನ್ನು ಪೂರ್ಣಗೊಳಿಸಲಾಗುವುದು ಎಂದೂ ತಿಳಿಸಲಾಯಿತು. ಉತ್ತರವು ಯೋಜನೆಗೊಳಿಸುವಲ್ಲಿನ ಹಾಗೂ ಯೋಜನೆಯ ಮೇಲ್ವಿಚಾರಣೆಯ ಕೊರತೆಯ ಜಿ–ಕೇರ್ ಉದ್ದೇಶಗಳು ವಿಳಂಬವಾಗಿ ಸಾಧಿಸುವುದರಲ್ಲಿ ಪರಿಣಮಿಸಿತು ಎಂಬುದನ್ನು ದೃಢೀಕರಿಸಿತು.

### 3.2.9 ನಿರ್ಣಯ

ಸೇವೆಗಳ ಗುಣಮಟ್ಟವನ್ನು ಉತ್ತಮಗೊಳಿಸಲು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನವನ್ನು ಬಳಸುವ ಆರಕ್ಷಕ ಇಲಾಖೆಯ ಉಪಕ್ರಮವು ಯೋಜನೆಗಳನ್ನು ಮಾಡುವಲ್ಲಿನ ನ್ಯೂನತೆಗಳು ಮತ್ತು ಸಮನ್ವಯವಾದ ಮಾರ್ಗವನ್ನನುಸರಿಸುವ ಅಭಾವದಿಂದ ಅದರ ಉದ್ದೇಶಗಳನ್ನು ಸಾಧಿಸಲಾಗಲಿಲ್ಲ. ಅನುಷ್ಠಾನದಲ್ಲಿನ ವಿಳಂಬಗಳು, ತಾಂತ್ರಿಕ ನ್ಯೂನತೆಗಳು, ಸಮರ್ಪಕ ಸಂಪರ್ಕತೆಯ ಅಭಾವ ಮುಂತಾದವುಗಳು, ವಿವಿಧ ಯೋಜನೆಗಳಡಿ ಸೃಷ್ಟಿಸಿದ ಮಾಹಿತಿ ತಂತ್ರಜ್ಞಾನ ಆಸ್ತಿಗಳ ಮತ್ತು ಸೌಕರ್ಯಗಳ ಅಲ್ಪಮಟ್ಟದ ಬಳಕೆಯಾಗುವಲ್ಲಿ ಪರಿಣಮಿಸಿತು.

### 3.2.10 ಶಿಫಾರಸುಗಳು

- ಜಿಲ್ಲಾ ಸ್ಥರದಲ್ಲಿ ಸಿಸಿಐಎಸ್‌ನ ಅನುಷ್ಠಾನದಲ್ಲಾದ ನ್ಯೂನತೆಗಳು ಮರುಕಳಿಸದಂತೆ ತಡೆಗಟ್ಟುವ ದೃಷ್ಟಿಯಿಂದ ಆರಕ್ಷಕ ಠಾಣೆಯ ಸ್ಥರದಲ್ಲಿ ಸಿಪಾ ಅನ್ವಯದ ಅನುಷ್ಠಾನಕ್ಕೆ ಇಲಾಖೆಯು ಕಾಲಪರಿಮಿತಿ ಮತ್ತು ಪ್ರಮುಖ ಕಾರ್ಯ ನಿರ್ವಹಿಸುವ ಅಧಿಕಾರಿಗಳಿಗೆ ಜವಾಬ್ದಾರಿಗಳನ್ನು ವಹಿಸುವುದರೊಂದಿಗೆ ಸಮಗ್ರವಾದ ಯೋಜನೆಯೊಂದನ್ನು ವಿಕಸಿಸಬೇಕು.

- ವಿವಿಧ ಸ್ಥರಗಳಲ್ಲಿ ಕಂಪ್ಯೂಟರ್ ಅನ್ವಯಗಳನ್ನು ನಡೆಸಲು ತರಬೇತಿ ಹೊಂದಿದ ಸಾಕಷ್ಟು ಸಿಬ್ಬಂದಿಯನ್ನು ಹೊಂದಿರುವಂತೆ ತರಬೇತಿಯ ವಿಷಯವನ್ನು ಕೇಂದ್ರೀಕರಿಸುವುದು.

- ಇಲಾಖೆಯು ಪೊಲೀಸ್ ಐಟಿ–2000 ಮತ್ತು ಜಿ–ಕೇರ್ ನಂತಹ ಅನ್ವಯಗಳ ಅನುಷ್ಠಾನದ ಪರಿಸ್ಥಿತಿಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುವುದು ಮತ್ತು ರಾಜ್ಯದೆಲ್ಲೆಡೆ ಅನುಷ್ಠಾನಗೊಳಿಸಲು ಸಮಯಬದ್ಧ ಯೋಜನೆಯೊಂದನ್ನು ರೂಪಿಸುವುದು.

# ಜಲ ಸಂಪನ್ಮೂಲ ಇಲಾಖೆ – ಸಣ್ಣ ನೀರಾವರಿ

## 3.3 ಏತ ನೀರಾವರಿ ಯೋಜನೆಗಳು

**ಮುಖ್ಯಾಂಶಗಳು**

***ಭೂ ಪ್ರದೇಶದ ಸ್ಥಿತಿಗಳನುಸಾರ ನೀರಿನ ಹರಿಯುವಿಕೆಯು ಸಾಧ್ಯವಾಗದ ಎತ್ತರದ ಪ್ರದೇಶಗಳಿಗೆ ನೀರಾವರಿಗಾಗಿ ನೀರಿನ ಎತ್ತುವಿಕೆಯನ್ನು ಏತ ನೀರಾವರಿ ಯೋಜನೆಗಳು ಸೂಚಿಸುತ್ತವೆ. ನೀರಿನ ಅಲಭ್ಯತೆ, ಸಾಕಾಗದಷ್ಟು ವಿದ್ಯುಚ್ಛಕ್ತಿಯ ಸರಬರಾಜು, ಯಂತ್ರಗಳಿಗೆ ದುರಸ್ತಿಗಳು ಮತ್ತು ಇತರ ನೀರಾವರಿ ಯೋಜನೆಗಳ ಜೊತೆ ನೀರಾವರಿಗೊಳಪಡಿಸುವ ಪ್ರದೇಶಗಳ ಮೇಲು ಸೇರುವಿಕೆಯಿಂದ ಈ ವ್ಯವಸ್ಥೆಯು ತೊಂದರೆಗೊಳಗಾಯಿತು. ತತ್ಪರಿಣಾಮವಾಗಿ ನೀರಾವರಿಗೊಳಪಡಿಸುವ ಪ್ರದೇಶಗಳಲ್ಲಿ ಸಾಧಿಸಬೇಕಿದ್ದ ಉದ್ದೇಶದ ಗುರಿಯು ಈಡೇರಲಿಲ್ಲ.***

**2003–08ರ ಅವಧಿಯಲ್ಲಿ ಯೋಜನೆ ಮತ್ತು ಯೋಜನೇತರ ವ್ಯವಸ್ಥೆಗಳಡಿಯಲ್ಲಿ ವೆಚ್ಚದೊಂದಿಗೆ ಆಯವ್ಯಯ ಹಂಚಿಕೆಯಲ್ಲಿ ಕ್ರಮವಾಗಿ ಶೇಕಡ 16ರಿಂದ 74 ಮತ್ತು ಶೇಕಡ 21ರಿಂದ 47ರಷ್ಟು ಕೊರತೆಯಿದ್ದಿತು.**

**(ಕಂಡಿಕೆ: 3.3.6)**

**2002–03ರಿಂದ 2006–07ರವರೆಗೆ ತೊಂಬತ್ತು ಸಾವಿರ ಹೆಕ್ಟೇರುಗಳಿಂದ 1.06 ಲಕ್ಷ ಹೆಕ್ಟೇರುಗಳಷ್ಟಿದ್ದ ವಿನ್ಯಾಸಿತ ಸಂಭಾವ್ಯ ನೀರಾವರಿಗೆ ಪ್ರತಿಯಾಗಿ ನೀರಾವರಿಗೊಳಗಾದ ಪ್ರದೇಶವು ವಾಸ್ತವವಾಗಿ ಎಂಟು ಸಾವಿರ ಹೆಕ್ಟೇರುಗಳಿಂದ 27 ಸಾವಿರ ಹೆಕ್ಟೇರುಗಳು ಮಾತ್ರವಾಗಿ ಕೊರತೆಯ ಶೇಕಡಾವಾರು ಪ್ರಮಾಣವು 70 ಮತ್ತು 92ರ ನಡುವೆಯಿದ್ದಿತು.**

**(ಕಂಡಿಕೆ: 3.3.7)**

**42,115 ಹೆಕ್ಟೇರುಗಳ ಅಚ್ಚುಕಟ್ಟು ಸೇರಿದ್ದ 211 ಏತ ನೀರಾವರಿ ಯೋಜನೆಗಳು ನೀರು/ವಿದ್ಯುತ್ ಸರಬರಾಜಿನ ಅಲಭ್ಯತೆ ಮತ್ತು ದುರಸ್ತಿಗಳು ಮುಂತಾದವುಗಳಿಂದ ನಿಷ್ಕ್ರಿಯವಾಗಿದ್ದವು.**

**(ಕಂಡಿಕೆ: 3.3.7.1)**

**ಕಾಮಗಾರಿಯ ವ್ಯಾಪ್ತಿಯಲ್ಲಿ ಬದಲಾವಣೆಗಳು, ನೀರು, ವಿದ್ಯುತ್ತಿನ ಅಲಭ್ಯತೆ ಮತ್ತು ಇತರ ಯೋಜನೆಗಳ ಜೊತೆ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟಿನ ಮೇಲು ಸೇರುವಿಕೆ ಮುಂತಾದ ಪ್ರಕರಣಗಳಿದ್ದು ಕಾಮಗಾರಿಗಳ ಪ್ರಾರಂಭದ ಮುನ್ನ ಕೈಗೆತ್ತಿಕೊಂಡ ಭೂ ಮಾಪನ ಮತ್ತು ತನಿಖೆಯ ಅವಾಸ್ತವಿಕತೆಯನ್ನು ಸೂಚಿಸುವಂತೆ ಯೋಜನೆಗಳು ನಿಷ್ಕ್ರಿಯವಾಗಿ ಉಳಿಯುವಲ್ಲಿ ಪರಿಣಮಿಸಿದ್ದವು.**

**(ಕಂಡಿಕೆ: 3.3.8)**

**ಯೋಜನೆಗಳ ಕಾರ್ಯನಿರ್ವಹಣೆಯು ಭೂ ಸ್ವಾಧೀನದ ವಿಳಂಬ, ಕಾಮಗಾರಿಗಳ ದೋಷಪೂರಿತ ನಿರ್ವಹಣೆ, ಕಾಮಗಾರಿಯ ಹಲವು ಭಾಗಗಳು ಏಕಕಾಲದಲ್ಲಿ ಸಂಭವಿಸದಿರುವುದು, ಇವುಗಳಿಂದ ಯೋಜನೆಗಳು ಅಪೂರ್ಣವಾಗಿ ಉಳಿಯುವಂತೆ, ತೊಂದರೆಗೊಳಗಾದವು. ಇವು ಸೂಚಿತವಾಗಿದ್ದ ಏತ ನೀರಾವರಿ ಯೋಜನೆಗಳ ಉದ್ದೇಶವನ್ನು ಸಾಧಿಸದಿರುವಲ್ಲಿ ಪರಿಣಮಿಸಿದವು.**

**(ಕಂಡಿಕೆ: 3.3.9)**

**ಭಾರೀ/ಮಧ್ಯಮ ನೀರಾವರಿ ಯೋಜನೆಗಳ ಜಲಾನಯನ ವ್ಯಾಪ್ತಿಯಲ್ಲಿ ಬರುವ ಹದಿನಾರು ಏತ ನೀರಾವರಿ ಯೋಜನೆಗಳು, ಇತರ ನೀರಾವರಿ ಯೋಜನೆಗಳ ಜೊತೆ ಅಚ್ಚುಕಟ್ಟಿನ ಮೇಲು ವ್ಯಾಪಿಸುವಿಕೆಯಿದ್ದರೂ ರೂ.2.30 ಕೋಟಿ ವೆಚ್ಚದಲ್ಲಿ ಪುನಶ್ಚೇತನಗೊಂಡವು.**

**(ಕಂಡಿಕೆ: 3.3.9.4)**

**ಇಲಾಖೆಯು ಏತ ನೀರಾವರಿ ಯೋಜನೆಗಳ ಯಂತ್ರೋಪಕರಣಗಳ ಸರಬರಾಜಿನ ಗುತ್ತಿಗೆಗಳಲ್ಲಿ ರೂ.43.85 ಕೋಟಿಯಷ್ಟು ಕೇಂದ್ರ ಅಬಕಾರಿ ಸುಂಕ ವಿನಾಯಿತಿಯನ್ನು ಪಡೆಯಲು ವಿಫಲವಾಯಿತು; ಇವುಗಳಲ್ಲಿ ರೂ.13.18 ಕೋಟಿಗೆ ವಿನಾಯಿತಿ ಪ್ರಮಾಣ ಪತ್ರಗಳನ್ನು ಗುತ್ತಿಗೆದಾರರಿಗೆ ನೀಡಲಾಗಿತ್ತು.**

**(ಕಂಡಿಕೆ : 3.3.10.3)**

**2003–07ರ ಅವಧಿಯಲ್ಲಿ 71 ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ನಿರ್ವಹಣೆಗೆ ರೂ.5.91 ಕೋಟಿ ಹಣವನ್ನು ವ್ಯಯಿಸಲಾಯಿತು.**

**(ಕಂಡಿಕೆ: 3.3.12.2)**

**ಹನ್ನೊಂದನೆಯ ಹಣಕಾಸು ಆಯೋಗದ ಸಹಾಯಧನಗಳಡಿಯಲ್ಲಿ ಪುನಶ್ಚೇತನಕ್ಕೊಳಗಾದ 256 ಏತ ನೀರಾವರಿ ಯೋಜನೆಗಳ ಪೈಕಿ ರೂ.12.34 ಕೋಟಿ ವೆಚ್ಚದಲ್ಲಿ ಪುನಶ್ಚೇತನಗೊಂಡ 86 ಏತ ನೀರಾವರಿ ಯೋಜನೆಗಳು 19,581 ಹೆಕ್ಟೇರ್ ಅಚ್ಚುಕಟ್ಟನ್ನು ಪೂರ್ವಸ್ಥಿತಿಗೆ ತರುವಲ್ಲಿ ವಿಫಲವಾದವು.**

**(ಕಂಡಿಕೆ: 3.3.13)**

**2002–03ರಿಂದ 2006–07ರವರೆಗಿನ ಅವಧಿಯಲ್ಲಿ ಮಾಡಲಾದ ನೀರಿನ ದರ ತಗಾದೆಯು, ರಾಷ್ಟ್ರೀಯ ಜಲ ನೀತಿಗೆ ಅನುಗುಣವಾಗಿಲ್ಲದಂತೆ ಆ ಅವಧಿಯ ನಿರ್ವಹಣೆ ವೆಚ್ಚದ ಶೇಕಡ ಆರರಷ್ಟನ್ನು ಮಾತ್ರ ಒಳಗೊಂಡಿತ್ತು.**

**(ಕಂಡಿಕೆ: 3.3.14)**

**ಅಗತ್ಯವಿದ್ದ 370 ನೀರು ಬಳಕೆದಾರರ ಸಮಿತಿಗಳ ಸ್ಥಾಪನೆಗೆ ಪ್ರತಿಯಾಗಿ ಮಾರ್ಚ್ 2008ರಲ್ಲಿದ್ದಂತೆ ಕೇವಲ 92 ಸ್ಥಾಪಿತವಾದವು ಮತ್ತು ಯಾವುದೂ ನೋಂದಣಿಯಾಗಿರಲಿಲ್ಲ.**

**(ಕಂಡಿಕೆ: 3.3.15)**

## 3.3.1 ಪರಿಚಯ

ರಾಜ್ಯದ ಭೌಗೋಳಿಕ ವಿಸ್ತೀರ್ಣವು 190.4 ಹೆಕ್ಟೇರ್‌ಗಳಾಗಿದೆ. ಭೂ ಜಲ ಸಂಪನ್ಮೂಲಗಳಿಂದ ಸಂಭಾವ್ಯ ನೀರಾವರಿಯು 45 ಲಕ್ಷ ಹೆಕ್ಟೇರುಗಳೆಂದು ನಿಷ್ಕರ್ಷಿಸಲಾಗಿದೆ. ಇವುಗಳಲ್ಲಿ 10 ಲಕ್ಷ ಹೆಕ್ಟೇರುಗಳನ್ನು ಭೂ ಮತ್ತು ಮಳೆ ನೀರನ್ನು ಉಪಯೋಗಿಸುವ ವಿವಿಧ ಸಣ್ಣ ನೀರಾವರಿ ಸೌಲಭ್ಯಗಳಾದ ಕೆರೆಗಳು, ಏತ ನೀರಾವರಿ ಯೋಜನೆಗಳು, ಬಂಧಾರಗಳು, ಪಿಕ್‌ಅಪ್‌ಗಳು ಮತ್ತು ಅಣೆಕಟ್ಟುಗಳ ಜಾಲದ ಮೂಲಕ ನೀರಾವರಿಗೊಳಪಡಿಸಬಹುದು. ಸಣ್ಣ ನೀರಾವರಿ ಇಲಾಖೆಯು 40 ಮತ್ತು 2,000 ಹೆಕ್ಟೇರ್ ನಡುವಿನ ಜಲಾನಯನ ಪ್ರದೇಶಗಳಿಗೆ ನೀರಾವರಿ ಒದಗಿಸುತ್ತದೆ. 92,570 ಹೆಕ್ಟೇರಿಗೆ ನೀರುಣಿಸುವ 435 ಏತ ನೀರಾವರಿ ಯೋಜನೆಗಳಿದ್ದವು (ಏಪ್ರಿಲ್ 2007). ಯಾವ ಎತ್ತರದ ಪ್ರದೇಶದಿಂದ ನೀರಾವರಿಗಾಗಿ ಕಾಲುವೆಗಳ ಮುಖಾಂತರ ನೀರು ಸರಬರಾಜಾಗುವುದೋ ಅಲ್ಲಿಗೆ ಒಂದು ಮೂಲದಿಂದ ನೀರೆತ್ತುವುದನ್ನು ಏತ ನೀರಾವರಿ ಯೋಜನೆಗಳು ತಿಳಿಸುತ್ತವೆ. ಭೌಗೋಳಿಕ ಪರಿಸ್ಥಿತಿಗಳು ಹರಿಯುವ ನೀರಾವರಿಗೆ ಸೂಕ್ತವಾಗಿಲ್ಲದೆಡೆ ಈ ಅನುಕೂಲವನ್ನು ಅವಲಂಬಿಸಲಾಗುವುದು. ಒಂದು ಮಾದರಿ ಏತ ನೀರಾವರಿ ಯೋಜನೆಯು ಸಂಗ್ರಹಾಗಾರ (ಒಳಹರಿವು ಕಾಲುವೆ ಮತ್ತು ಸಂಗ್ರಹ ಬಾವಿ), ಪಂಪ್‌ಹೌಸ್, ನೀರೆತ್ತುವ ಯಂತ್ರಗಳು, ಏರು ಕೊಳವೆ, ವಿತರಣಾ ಕೊಠಡಿ ಮತ್ತು ಕಾಲುವೆ ವಿತರಣಾ ಜಾಲವನ್ನು ಒಳಗೊಂಡಿರುತ್ತದೆ.

## 3.3.2 ಸಂಘಟನಾ ವ್ಯವಸ್ಥೆ

ಇಲಾಖೆಯ ಸಂಪೂರ್ಣ ಆಡಳಿತಾತ್ಮಕ ನಿಯಂತ್ರಣವು ಪ್ರಧಾನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಇವರ ಅಧಿಕಾರದಲ್ಲಿರುತ್ತದೆ. ಸಂಬಂಧಿತ ಅಧೀಕ್ಷಕ ಇಂಜಿನಿಯರ್‌ರವರ ಮೇಲ್ವಿಚಾರಣೆಯಲ್ಲಿ ಪ್ರತಿ ವಿಭಾಗಕ್ಕೆ ಓರ್ವ ಕಾರ್ಯನಿರ್ವಾಹಕ ಇಂಜಿನಿಯರ್ ಮುಖ್ಯಸ್ಥನಾಗಿರುವ 18 ಸಣ್ಣ ನೀರಾವರಿ ವಿಭಾಗಗಳ[13] ಮೂಲಕ ಇಲಾಖೆಯು ಏತ ನೀರಾವರಿ ಯೋಜನೆಗಳನ್ನು

[13] ಎರಡು ಗುಣನಿಯಂತ್ರಣ ವಿಭಾಗಗಳನ್ನೊಳಗೊಂಡು

ನಿರ್ಮಿಸುತ್ತದೆ ಮತ್ತು ನಿರ್ವಹಿಸುತ್ತದೆ. ಉತ್ತರ ಮತ್ತು ದಕ್ಷಿಣ ವಲಯಗಳಿಗೆ ಒಬ್ಬರಂತೆ ಇಬ್ಬರು ಮುಖ್ಯ ಇಂಜಿನಿಯರ್‌ರವರು ಇರುತ್ತಾರೆ. ಇದರ ಜೊತೆಗೆ ಅಧೀಕ್ಷಕ ಇಂಜಿನಿಯರ್‌ರವರು, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ, ಸಾಲದ ನಿಧಿಯಿಂದ (ನಬಾರ್ಡ್[14]) ಕಾರ್ಯಗತಗೊಂಡ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಸಮನ್ವಯದ ಜೊತೆ ಸಂಬಂಧ ಹೊಂದಿರುತ್ತಾರೆ ಮತ್ತು ಅವುಗಳ ಕಾರ್ಯಗತಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುತ್ತಾರೆ.

### 3.3.3 ಲೆಕ್ಕಪರಿಶೋಧನಾ ಉದ್ದೇಶಗಳು

ಇಲಾಖೆಯಿಂದ ಏತ ನೀರಾವರಿ ಯೋಜನೆಗಳ ಅನುಷ್ಠಾನದ ಮೇಲಣ ಕಾರ್ಯನಿರ್ವಹಣಾ ಸಮೀಕ್ಷೆಯನ್ನು ಈ ಕೆಳಗಿನವುಗಳನ್ನು ನಿರ್ಧರಿಸಲು ನಡೆಸಲಾಯಿತು:

- ಒದಗಿಸಿದ ನಿಧಿಗಳು ಸಾಕಷ್ಟಿದ್ದವೇ;
- ಸೃಜಿಸಲಾದ ಸಂಭಾವ್ಯ ನೀರಾವರಿಯು ಸೂಚಿತವಾಗಿದ್ದಂತ್ತಿತ್ತೇ ಮತ್ತು ಸೃಜಿಸಲಾದ ವ್ಯಾಪ್ತಿಯವರೆಗೂ ಬಳಕೆಯಾಯಿತೇ;
- ಒಂದು ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಭೂ ಸಮೀಕ್ಷೆ ಮತ್ತು ತನಿಖೆ ನಡೆಸಲಾಯಿತೇ; ಮತ್ತು
- ಕಾಮಗಾರಿಗಳು ಯೋಜಿಸಿದಂತೆ ನಿರ್ವಹಿಸಲ್ಪಟ್ಟವೇ ಮತ್ತು ಯೋಜನೆಗಳು ಮಿತವ್ಯಯ ಕಾರಿಯಾಗಿ, ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸಲ್ಪಟ್ಟವೇ.

### 3.3.4 ಲೆಕ್ಕಪರಿಶೋಧನಾ ಮಾನದಂಡ

ಲೆಕ್ಕಪರಿಶೋಧನಾ ಉದ್ದೇಶಗಳ ಸಾಧನೆಯನ್ನು ನಿರ್ಧರಿಸಲು ಕೆಳಗಿನ ಲೆಕ್ಕಪರಿಶೋಧನಾ ಮಾನದಂಡಗಳನ್ನು ಬಳಸಲಾಯಿತು.

- ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ
- ನೀರಾವರಿ ಕೈಪಿಡಿ ಮತ್ತು ಸಣ್ಣ ನೀರಾವರಿ ಕೆರೆ/ಏತ ನೀರಾವರಿ ಯೋಜನೆಯ ಮಾರ್ಗದರ್ಶಿ ಸೂತ್ರಗಳು
- ಕರ್ನಾಟಕ ನೀರಾವರಿ ಅಧಿನಿಯಮ, 1965
- ಸರ್ಕಾರೀ ಆದೇಶಗಳು
- ಸವಿವರ ಯೋಜನಾ ವರದಿಗಳು ಮತ್ತು ಮೌಲ್ಯಮಾಪನಾ ವರದಿಗಳು

### 3.3.5 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

2003–08ರ ಅವಧಿಯಲ್ಲಿ ಏತ ನೀರಾವರಿ ಯೋಜನೆಗಳ ಅನುಷ್ಠಾನವನ್ನು ವ್ಯಾಪಿಸುವ ಸಮೀಕ್ಷೆಯನ್ನು ಜನವರಿ 2008ರಿಂದ ಮೇ 2008ರವರೆಗೆ ಸಣ್ಣ ನೀರಾವರಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉತ್ತರ ಮತ್ತು ದಕ್ಷಿಣ ವಲಯಗಳ ಮುಖ್ಯ ಇಂಜಿನಿಯರ್‌ಗಳು, ಎಂಟು ಸಣ್ಣ ನೀರಾವರಿ ವಿಭಾಗಗಳ[15] ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಮತ್ತು ಧಾರವಾಡದಲ್ಲಿರುವ ಗುಣ ನಿಯಂತ್ರಣ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಹಾಗೂ ಗುಲ್ಬರ್ಗದಲ್ಲಿರುವ ಓರ್ವ ಅಧೀಕ್ಷಕ ಇಂಜಿನಿಯರ್, ಇವರ ಕಛೇರಿಗಳ ದಾಖಲೆಗಳ ಪರೀಕ್ಷಾ ತನಿಖೆಯಿಂದ ನಡೆಸಲಾಯಿತು.

2003–08ರ ಅವಧಿಯಲ್ಲಿ ಪೂರ್ಣಗೊಂಡ 47 ಕಾಮಗಾರಿಗಳ ಪೈಕಿ 17 ಕಾಮಗಾರಿಗಳನ್ನು ಪರೀಕ್ಷಾ ತನಿಖೆಗೆ ಆರಿಸಲಾಯಿತು. ಅದಲ್ಲದೆ 16 ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಸಹಾ ಕಾರ್ಯನಿರ್ವಹಣಾ ಸಮೀಕ್ಷೆಗೆ ತೆಗೆದುಕೊಳ್ಳಲಾಯಿತು. ಇದರ ಜೊತೆಗೆ ಹನ್ನೊಂದನೇ ಹಣಕಾಸು

[14] ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್

[15] ಬಳ್ಳಾರಿ, ಗುಲ್ಬರ್ಗ, ಬಿಜಾಪುರ, ಧಾರವಾಡ, ಮೈಸೂರು, ಚಿತ್ರದುರ್ಗ, ಬೆಳಗಾಂ ಮತ್ತು ಕುಷ್ಟಗಿ

ಆಯೋಗದ ಅನುದಾನದಡಿಯಲ್ಲಿ (2001–08) 256 ಏತ ನೀರಾವರಿ ಯೋಜನೆಗಳ ಪುನಶ್ಚೇತನ ಮತ್ತು ಏತ ನೀರಾವರಿ ಯೋಜನೆಗಳ ಮೇಲ್ವಿಚಾರಣೆ ಅಂಶಗಳನ್ನೂ ಪರೀಕ್ಷಿಸಲಾಯಿತು. ಏತ ನೀರಾವರಿ ಯೋಜನೆಗಳ ಸಂಖ್ಯೆ ಮತ್ತು ಮಾಡಲಾದ ವೆಚ್ಚವನ್ನು ಗಮನಿಸಿದಾಗ ಮಾದರಿ ಆಯ್ಕೆಯು ವಿವೇಚನೆಯಿಂದ ಕೂಡಿತ್ತು.

ಲೆಕ್ಕಪರಿಶೋಧನೆಯ ಉದ್ದೇಶಗಳು, ಮಾನದಂಡಗಳನ್ನು ಮುಖ್ಯ ಇಂಜಿನಿಯರ್‌ರವರ ಜೊತೆಗೆ ಪ್ರವೇಶ ಸಮಾವೇಶದಲ್ಲಿ (ಜನವರಿ 2008) ಚರ್ಚಿಸಲಾಯಿತು. ಲೆಕ್ಕಪರಿಶೋಧನ ತೀರ್ಮಾನಗಳನ್ನು ಲೆಕ್ಕಪರಿಶೋಧನಾ ಜ್ಞಾಪನ ಪತ್ರಗಳ ಮೂಲಕ ಲೆಕ್ಕಪರಿಶೋಧನಾ ಘಟಕಗಳಿಗೆ ತಿಳಿಸಲಾಯಿತು ಮತ್ತು 25 ಆಗಸ್ಟ್ 2008ರಂದು ನಡೆದ ನಿರ್ಗಮನ ಸಮಾವೇಶದಲ್ಲಿ ಪ್ರಧಾನ ಕಾರ್ಯದರ್ಶಿಗಳೊಡನೆ ಚರ್ಚಿಸಲಾಯಿತು. ವರದಿಯಲ್ಲಿ ತಿಳಿಸಿರುವ ತೀರ್ಮಾನಗಳನ್ನು ಇಲಾಖೆಯು ಒಪ್ಪಿತು. ಅದಲ್ಲದೆ ಏತ ನೀರಾವರಿ ಯೋಜನೆಗಳ ವಿಫಲತೆಯನ್ನು ಪ್ರಧಾನ ಕಾರ್ಯದರ್ಶಿಗಳು, ಏತ ನೀರಾವರಿ ಯೋಜನೆಗಳಿಗೆ ನೀರಿನ ಆಕರದ ಮೇಲೆ ದುಷ್ಪರಿಣಾಮ ಬೀರುವಂತಹ ರಾಜ್ಯದಲ್ಲಿನ ಬರಗಾಲದ ಪರಿಸ್ಥಿತಿ ಮತ್ತು ವಿದ್ಯುತ್ ಸರಬರಾಜಿನ ಕೊರತೆಗಳೆಂದು ಅಧ್ಯಾರೋಪಿಸಿದರು. ಅವರು ಮುಂದುವರೆದು ನಿಷ್ಕ್ರಿಯ ಏತ ನೀರಾವರಿ ಯೋಜನೆಗಳಲ್ಲಿನ ಯಂತ್ರಗಳನ್ನು ಇತರ ಕಾಮಗಾರಿಗಳಿಗೆ ವರ್ಗಾಯಿಸಲು ಮತ್ತು ಅನುಪಯುಕ್ತ ಯಂತ್ರಗಳನ್ನು ವಿಲೇವಾರಿ ಮಾಡಲು ಒಪ್ಪಿದರು. ಇತರ ನೀರಾವರಿ ಯೋಜನೆಗಳ ಜೊತೆಗೆ ಮೇಲು ವ್ಯಾಪಿಸುವ ಏತ ನೀರಾವರಿ ಯೋಜನೆಗಳ ವರ್ಗಾವಣೆಯ ಕಾರ್ಯವನ್ನು ಚುರುಕುಗೊಳಿಸಲು ಸಹ ಅವರು ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು.

### 3.3.6 ಹಂಚಿಕೆ ಮತ್ತು ವೆಚ್ಚ

2003–08ರ ಅವಧಿಯಲ್ಲಿ ಏತ ನೀರಾವರಿ ಯೋಜನೆಗಳಿಗಾಗಿ ಇಲಾಖೆಗೆ ಯೋಜನೆ (ನಬಾರ್ಡ್ ಸೇರಿ) ಮತ್ತು ಯೋಜನೇತರ ವಲಯಗಳಲ್ಲಿ ಹಂಚಿಕೆಯಾದ ನಿಧಿಗಳ ಮತ್ತು ಅದಕ್ಕೆ ಪ್ರತಿಯಾಗಿ ಆದ ವೆಚ್ಚದ ವರ್ಷಾವಾರು ಸ್ಥಿತಿಯು ಕೆಳಗಿನಂತಿತ್ತು:

**ಕೋಷ್ಟಕ 1: ಆಯವ್ಯಯ ಹಂಚಿಕೆ ಮತ್ತು ವೆಚ್ಚ**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ಆಯವ್ಯಯ ಹಂಚಿಕೆ | | ವೆಚ್ಚ | | ನಿಧಿಗಳ ಬಳಕೆಯಲ್ಲಿ ಕೊರತೆಯ ಶೇಕಡಾವಾರು | |
|---|---|---|---|---|---|---|
| | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ |
| 2003–04 | 8.00 | 12.57 | 12.13 | 7.22 | – | 43 |
| 2004–05 | 17.05 | 15.04 | 13.78 | 7.96 | 19 | 47 |
| 2005–06 | 10.23 | 12.70 | 8.64 | 13.33 | 16 | –5 |
| 2006–07 | 49.86 | 34.46 | 18.95 | 23.21 | 62 | 33 |
| 2007–08 | 71.42 | 22.74 | 18.43 | 17.93 | 74 | 21 |
| **ಒಟ್ಟು** | **156.56** | **97.51** | **71.93** | **69.65** | **54** | **29** |

ನಿಧಿಗಳ ಬಳಕೆಯಲ್ಲಿ ಕೊರತೆಗೆ ಕಾರಣಗಳನ್ನು ಅಂದಾಜುಗಳ ತಯಾರಿಕೆ, ಮಂಜೂರಾತಿ ಪಡೆಯುವಿಕೆ, ಮುಂತಾದ ಹೊಸ ಕಾಮಗಾರಿಗಳ ಮಂಜೂರಾತಿ ಪಡೆಯುವಲ್ಲಿ ಇರುವ ದೀರ್ಘ ಕಾರ್ಯವಿಧಿಗಳಿಗೆ ಇಲಾಖೆಯು ಅಧ್ಯಾರೋಪಿಸಿತು.

### 3.3.7 ಸಂಭಾವ್ಯ ನೀರಾವರಿಯ ಬಳಕೆಯಲ್ಲಿ ಯೋಜನೆಗಳ ಕಾರ್ಯ ನಿರ್ಧರಣೆ

ಡಿಸೆಂಬರ್ 2007ರಲ್ಲಿದ್ದಂತೆ ರಾಜ್ಯವು 435 ಏತ ನೀರಾವರಿ ಯೋಜನೆಗಳನ್ನು ಹೊಂದಿತ್ತು. ಇಲಾಖೆಯು 256 ರೋಗಪೀಡಿತ ಮತ್ತು ಜಡ ಏತ ನೀರಾವರಿ ಯೋಜನೆಗಳನ್ನು ಭಾರತ ಸರ್ಕಾರದಿಂದ ಪಡೆದ ವಿಶೇಷ ವಿಪತ್ತು ಅನುದಾನಗಳಿಂದ ಪುನಶ್ಚೇತನಗೊಳಿಸಿತು (2001–05). 2002–03ರಿಂದ 2006–07ರ ಅವಧಿಯಲ್ಲಿ ಏತ ನೀರಾವರಿ ಯೋಜನೆಗಳ ವಿನ್ಯಾಸಿತ ನೀರಾವರಿ ಸಾಮರ್ಥ್ಯ ಮತ್ತು ಪ್ರತಿ ವರ್ಷದಲ್ಲಿಯೂ ಬಳಸಲಾದ ವಾಸ್ತವಿಕ ಸಾಮರ್ಥ್ಯವು ಕೆಳಕಂಡಂತಿತ್ತು:

**ಕೋಷ್ಟಕ 2 : ನೀರಾವರಿ ಸಾಮರ್ಥ್ಯದ ಬಳಕೆ**

(ಲಕ್ಷ ಹೆಕ್ಟೇರ್‌ಗಳಲ್ಲಿ)

| ವರ್ಷ | ಯೋಜನೆಗಳ ಸಂಖ್ಯೆ | ವಿನ್ಯಾಸಿತ ನೀರಾವರಿ ಸಾಮರ್ಥ್ಯ[16] | ಬಳಕೆಯಾದ ನೀರಾವರಿ ಸಾಮರ್ಥ್ಯ | ಕೊರತೆಯ ಶೇಕಡಾವಾರು |
|---|---|---|---|---|
| 2002–03 | 463 | 1.04 | 0.08 | 92 |
| 2003–04 | 471 | 1.05 | 0.12 | 89 |
| 2004–05 | 463 | 1.06 | 0.17 | 84 |
| 2005–06 | 402 | 0.90 | 0.27 | 70 |
| 2006–07 | 435 | 0.93 | 0.18 | 81 |

**90 ಸಾವಿರದಿಂದ 1.06 ಲಕ್ಷ ಹೆಕ್ಟೇರ್‌ವರೆಗಿನ ವಿನ್ಯಾಸಿತ ನೀರಾವರಿ ಸಾಮರ್ಥ್ಯಕ್ಕೆ ಪ್ರತಿಯಾಗಿ ನೀರಾವರಿಗೊಳಿಸಿದ ಪ್ರದೇಶವು 8 ಸಾವಿರದಿಂದ 27 ಸಾವಿರ ಹೆಕ್ಟೇರ್‌ಗಳ ನಡುವೆ ಇದ್ದಿತು**

2002–03ರಿಂದ 2006–07ರ ಅವಧಿಯಲ್ಲಿ 90 ಸಾವಿರದಿಂದ 1.06 ಲಕ್ಷ ಹೆಕ್ಟೇರ್‌ವರೆಗಿದ್ದ ವಿನ್ಯಾಸಿತ ನೀರಾವರಿ ಸಾಮರ್ಥ್ಯಕ್ಕೆ ಪ್ರತಿಯಾಗಿ ನೀರಾವರಿಗೊಳಿಸಿದ ವಾಸ್ತವಿಕ ಪ್ರದೇಶವು ಶೇಕಡಾವಾರು 70ರಿಂದ 92ರವರೆಗೆ ಕೊರತೆಯಿದ್ದ 8 ಸಾವಿರದಿಂದ 27 ಸಾವಿರ ಹೆಕ್ಟೇರ್‌ವರೆಗಿತ್ತು. ಅಂದಾಜುಗಳಲ್ಲಿ ಪರಿಗಣಿಸಿದ 16 ಗಂಟೆಗಳಿಗೆ ಪ್ರತಿಯಾಗಿ ಏತ ನೀರಾವರಿ ಯೋಜನೆಗಳ ಸಂಬಂಧದಲ್ಲಿ ಸರಬರಾಜಾದ ವಿದ್ಯುತ್ತಿನ ಅವಧಿಯು ಪ್ರತಿ ದಿನ ಸುಮಾರು 4–6 ಗಂಟೆಗಳೆಂದು ಇಲಾಖಾ ದಾಖಲೆಗಳ ಪರೀಕ್ಷೆಯು ತಿಳಿಯಪಡಿಸಿತು. ರಾಜ್ಯ ವಿಧಾನಮಂಡಲದ ಅಂದಾಜುಗಳ ಸಮಿತಿಯು ತನ್ನ ವರದಿಯಲ್ಲಿ (ಜುಲೈ 2007) ಏತ ನೀರಾವರಿ ಯೋಜನೆಗಳ ಯಶಸ್ವೀ ಕಾರ್ಯಾಚರಣೆಗಾಗಿ ಪ್ರತಿ ಏತ ನೀರಾವರಿ ಯೋಜನೆಗೂ ಪ್ರತ್ಯೇಕ ವಿದ್ಯುತ್ ಮಾರ್ಗವನ್ನು ಒದಗಿಸಲು ಸರ್ಕಾರಕ್ಕೆ ಶಿಫಾರಸು ಮಾಡಿತು. ಇದರ ಬಗ್ಗೆ ತೆಗೆದುಕೊಂಡ ಯಾವುದೇ ಕ್ರಮಗಳ ವಿವರಗಳನ್ನು ಸಲ್ಲಿಸಲಿಲ್ಲ.

### *3.3.7.1 ನಿಷ್ಕ್ರಿಯ ಏತ ನೀರಾವರಿ ಯೋಜನೆಗಳು*

**42,115 ಹೆಕ್ಟೇರ್ ಅಚ್ಚುಕಟ್ಟು ಹೊಂದಿದ 211 ಏತ ನೀರಾವರಿ ಯೋಜನೆಗಳು 3ರಿಂದ 25 ವರ್ಷಗಳ ಅವಧಿಗೆ ನಿಷ್ಕ್ರಿಯವಾಗಿ ಉಳಿದಿದ್ದವು**

ಸ್ಥಿತಿ ವರದಿಯಂತೆ (2007), 42,115 ಹೆಕ್ಟೇರ್ ವಿನ್ಯಾಸಿತ ಅಚ್ಚುಕಟ್ಟಿನ[17] 211 ಏತ ನೀರಾವರಿ ಯೋಜನೆಗಳು ಹಲವಾರು ಕಾರಣಗಳಿಂದ ನೀರಿನ ಬೇಡಿಕೆಯಿಲ್ಲದಿರುವಿಕೆ (99 ಏತ ನೀರಾವರಿ ಯೋಜನೆಗಳು), ನೀರಿನ ಆಕರಗಳು ಇಲ್ಲದಿರುವಿಕೆ (65 ಏತ ನೀರಾವರಿ ಯೋಜನೆಗಳು), ವಿದ್ಯುತ್ ಸರಬರಾಜು ಇಲ್ಲದಿರುವಿಕೆ (27 ಏತ ನೀರಾವರಿ ಯೋಜನೆಗಳು) ಮತ್ತು ದುರಸ್ತಿಗಳು (20 ಏತ ನೀರಾವರಿ ಯೋಜನೆಗಳು) ಇವುಗಳಿಂದ 3ರಿಂದ 25 ವರ್ಷಗಳವರೆಗಿನ ಅವಧಿಗೆ ನಿಷ್ಕ್ರಿಯವಾಗಿ ಉಳಿದವು.

ಪರೀಕ್ಷಾ–ತನಿಖೆ ನಡೆಸಲಾದ ಎಂಟು ವಿಭಾಗಗಳಲ್ಲಿ ವಿನ್ಯಾಸಿತ 36,899 ಹೆಕ್ಟೇರ್ ಅಚ್ಚುಕಟ್ಟಿನ 165 ಏತ ನೀರಾವರಿ ಯೋಜನೆಗಳು ನೀರಿನ ಬೇಡಿಕೆಯಿಲ್ಲದಿರುವಿಕೆ (74 ಏತ ನೀರಾವರಿ ಯೋಜನೆಗಳು), ನೀರಿನ ಆಕರಗಳು ಇಲ್ಲದಿರುವಿಕೆ (59 ಏತ ನೀರಾವರಿ ಯೋಜನೆಗಳು), ವಿದ್ಯುತ್ ಸರಬರಾಜು ಇಲ್ಲದಿರುವಿಕೆ (15 ಏತ ನೀರಾವರಿ ಯೋಜನೆಗಳು) ಮತ್ತು ದುರಸ್ತಿಗಳು (17 ಏತ ನೀರಾವರಿ ಯೋಜನೆಗಳು) ಮುಂತಾದವುಗಳಿಂದ ನಿಷ್ಕ್ರಿಯವಾಗುಳಿದಿದ್ದವು. ಪರಿಣಾಮವಾಗಿ 91 ಏತ ನೀರಾವರಿ ಯೋಜನೆಗಳ ಅಡಿಯಲ್ಲಿನ 5,483 ಹೆಕ್ಟೇರ್ ಜಲಾನಯನ ಪ್ರದೇಶವು ನೀರಾವರಿ ಸೌಲಭ್ಯದಿಂದ ವಂಚಿತವಾದವು.

## 3.3.8 ಪ್ರಾಯೋಜನೆಗಳ ಯೋಜನೆ, ಸರ್ವೇಕ್ಷಣೆ ಮತ್ತು ತನಿಖೆ

### ದೋಷಯುಕ್ತ ಸರ್ವೇಕ್ಷಣೆ/ಪ್ರಾರಂಭಿಕ ತನಿಖೆ

**3.3.8.1** ಏತ ನೀರಾವರಿ ಯೋಜನೆ ಮಾರ್ಗದರ್ಶಿ ಸೂತ್ರಗಳಂತೆ ಯಾವುದೇ ಏತ ನೀರಾವರಿ ಯೋಜನೆಯನ್ನು ಪ್ರಸ್ತಾಪಿಸುವ ಮೊದಲು ಸೂಕ್ತ ಭೂ ಸರ್ವೇಕ್ಷಣೆ ಮತ್ತು ತನಿಖೆಯನ್ನು ಕೈಗೊಳ್ಳುವುದರ ಜೊತೆಗೆ ವಿನ್ಯಾಸಿತ ಬೆಳೆ ಅವಧಿಗೆ ಏತ ನೀರಾವರಿ ಯೋಜನೆಗೆ ಸಾಕಾಗುವಷ್ಟು ನೀರಿನ ಲಭ್ಯತೆ, ಫಲಾನುಭವಿಗಳಿಂದ ಬೇಡಿಕೆ, ಯೋಜನೆಗೆ ಭೂಮಿಯ ಲಭ್ಯತೆ, ಯೋಜನೆಯ ನಿವೇಶನದಲ್ಲಿ ಮೇಲು ಹರಿವಿನ/ಕೆಳ ಹರಿವಿನ ಬದ್ಧ ಸ್ಥಿತಿಗಳು, ಬೃಹತ್/ಮಧ್ಯಮ ನೀರಾವರಿ

[16] ಹದಿನಾರು ಘಂಟೆಗಳ ವಿದ್ಯುತ್ ಸರಬರಾಜಿನ ಆಧಾರದಂತೆ

[17] ನೀರಾವರಿಯಾಗಬಹುದಾದ ಪ್ರದೇಶ

ಜಲಾನಯನ ಪ್ರದೇಶದ ಅಸ್ತಿತ್ವ, ನಿವೇಶನದಲ್ಲಿ ವಿದ್ಯುಚ್ಛಕ್ತಿಯ ಲಭ್ಯತೆಯ ನಿಶ್ಚಯ, ಮುಂತಾದವುಗಳನ್ನು ನಿಶ್ಚಯಿಸಿಕೊಳ್ಳಬೇಕು. ಮುಂದುವರೆದು, ಯೋಜನೆಯ ಲಾಭಗಳು ಜಲಾನಯನ ಪ್ರದೇಶಕ್ಕೆ ಲಭ್ಯವಾಗಲು ಕಾಮಗಾರಿಗಳು ಸರಿಯಾದ ಸಮಯಕ್ಕೆ ಪೂರ್ಣಗೊಳ್ಳಬೇಕು.

**ಆರು ಏತ ನೀರಾವರಿ ಯೋಜನೆಗಳಡಿಯಲ್ಲಿ 2,013 ಹೆಕ್ಟೇರನ್ನು ಸಾಕಷ್ಟಿರದ ಭೂ ಸರ್ವೇಕ್ಷಣೆ ಮತ್ತು ತನಿಖೆಯಿಂದ ನೀರಾವರಿಗೊಳ ಪಡಿಸಲಾಗಲಿಲ್ಲ.**

ಆರು[18] ಏತ ನೀರಾವರಿ ಯೋಜನೆಗಳಲ್ಲಿ ಸಾಕಷ್ಟಿರದ ಭೂ ಸರ್ವೇಕ್ಷಣೆ ಮತ್ತು ತನಿಖೆಯನ್ನು ದಾಖಲೆಗಳ ಪರೀಕ್ಷೆಯು ತಿಳಿಯಪಡಿಸಿತು. ಮೊದಲ ಏತ ನೀರಾವರಿ ಯೋಜನೆಯಲ್ಲಿ ಕಾಮಗಾರಿಯನ್ನು ವಹಿಸಿದ ನಂತರ ಕೆಳಹರಿವಿನಲ್ಲಿ ಬಂದಾರದ ಉಪಸ್ಥಿತಿಯ ಕಾರಣದಿಂದ ಸಂಗ್ರಾಹಕ ಬಾವಿಯನ್ನು ಸ್ಥಳಾಂತರಿಸಿದ್ದು, ವಿನ್ಯಾಸದ ಬದಲಾವಣೆ ಮತ್ತು ಏರು ಕೊಳವೆಯ ಉದ್ದದಲ್ಲಿ ಏರಿಕೆಯತ್ತ ಒಯ್ದಿತು. ಎರಡನೆಯ ಏತ ನೀರಾವರಿ ಯೋಜನೆಯಲ್ಲಿ ಸಾಕಷ್ಟಿಲ್ಲದ ಜಲ ಆಕರದಿಂದ ಯಾವುದೇ ಅಚ್ಚುಕಟ್ಟನ್ನು ನೀರಾವರಿಗೊಳಿಸಲಾಗಲಿಲ್ಲ. ಮೂರನೆಯ ಏತ ನೀರಾವರಿ ಯೋಜನೆಯಲ್ಲಿ ಮೂಲದಲ್ಲಿ ವಿನ್ಯಾಸಿಸಲಾದ ಮತ್ತು ನಿರ್ವಹಿಸಲಾದ ಕಾಲುವೆ ಜಾಲವು ವಿನ್ಯಾಸಿತ ಅಚ್ಚುಕಟ್ಟನ್ನು ನೀರಾವರಿಗೊಳಿಸಲು ಸಾಲದು ಎನ್ನುವ ಆಧಾರದ ಮೇಲೆ ಇಲಾಖೆಯು ಕಾಲುವೆ ಜಾಲವನ್ನು ವಿಸ್ತರಿಸಲು ಪ್ರಸ್ತಾಪಿಸಿತು (ಫೆಬ್ರವರಿ 2008). ನಾಲ್ಕನೆಯ ಏತ ನೀರಾವರಿ ಯೋಜನೆಯಲ್ಲಿ ಯೋಜನೆಯ ಸಮೀಪದಲ್ಲಿ ವಿದ್ಯುತ್ ಮಾರ್ಗವಿಲ್ಲದಿರುವಿಕೆಯು ವಿದ್ಯುತ್ತನ್ನು 23 ಕಿ.ಮೀ.ದೂರದಿಂದ ಸೆಳೆಯುವ ಅಗತ್ಯ ಉಂಟು ಮಾಡಿದ್ದು ಕಾಮಗಾರಿಯ ವೆಚ್ಚದಲ್ಲಿ ಏರಿಕೆಯ ಜೊತೆಗೆ ಪ್ರತಿಕೂಲ ಲಾಭ–ವೆಚ್ಚ ಅನುಪಾತದಲ್ಲಿ ಫಲಿಸಿ ಕಾಮಗಾರಿಯು ಪೂರ್ಣಗೊಳ್ಳಲಿಲ್ಲ (ಮಾರ್ಚ್ 2008). ಉಳಿದ ಎರಡು ಏತ ನೀರಾವರಿ ಯೋಜನೆಗಳನ್ನು ಅವುಗಳ ವಿನ್ಯಾಸಿತ ಅಚ್ಚುಕಟ್ಟು ಇತರ ಯೋಜನೆಗಳ ಜಲಾನಯನ ಪ್ರದೇಶದಿಂದ ಮೇಲುವ್ಯಾಪಿತವಾಗಿದ್ದರೂ ಕೈಗೊಳ್ಳಲಾಯಿತು. ಪರಿಣಾಮವಾಗಿ ರೂ.10.03 ಕೋಟಿ ವೆಚ್ಚವನ್ನು ವ್ಯಯಿಸಿದ್ದಾಗ್ಯೂ 2,013 ಹೆಕ್ಟೇರ್ ಜಮೀನಿಗೆ ನೀರಾವರಿ ಒದಗಿಸಲು ಆಗಲಿಲ್ಲ.

**3.3.8.2** 1993–2000ದ ಅವಧಿಯಲ್ಲಿ ಕೈಗೊಳ್ಳಲಾದ ಆರು ಏತ ನೀರಾವರಿ ಯೋಜನೆಗಳು (ಹಾಸನದಲ್ಲಿ ಐದು ಮತ್ತು ಬಳ್ಳಾರಿ ವಿಭಾಗದಲ್ಲಿ ಒಂದು) ಸಿವಿಲ್ ಕಾಮಗಾರಿಗಳ ಮುಕ್ತಾಯದ ನಂತರ ಪರಿತ್ಯಜಿಸಲ್ಪಟ್ಟವು. ಇವುಗಳ ಪೈಕಿ ನಾಲ್ಕು ಏತ ನೀರಾವರಿ ಯೋಜನೆಗಳು ನೀರಿನ ಆಕರವು ಒಣಗಿಹೋಗಿವೆ ಎನ್ನುವ ವಾದದ ಮೇಲೆ ಮುಕ್ತಾಯದ ಮುನ್ನವೇ ಪರಿತ್ಯಜಿಸಲ್ಪಟ್ಟವು. ಮುಂದುವರೆದು ಯೋಜನೆಯ ಮುಕ್ತಾಯದಲ್ಲಿ ವಿಳಂಬದಿಂದ ನೀರಿಗೆ ಬೇಡಿಕೆಯಿಲ್ಲ ಮತ್ತು ರೈತರು ಬದಲೀ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು ಎನ್ನುವ ವಾದದ ಮೇಲೆ ಒಂದು ಏತ ನೀರಾವರಿ ಯೋಜನೆಯನ್ನು ಸಿವಿಲ್ ಕಾಮಗಾರಿಗಳ ಮುಕ್ತಾಯದ ನಂತರ ಪರಿತ್ಯಜಿಸಲಾಯಿತು. ಇನ್ನೊಂದು ಪ್ರಕರಣದಲ್ಲಿ ಏತ ನೀರಾವರಿ ಯೋಜನೆಯ ಅಚ್ಚುಕಟ್ಟು ಇನ್ನೊಂದು ಬೃಹತ್ ನೀರಾವರಿ ಯೋಜನೆಯ ಜಲಾನಯನ ಪ್ರದೇಶದಲ್ಲಿ ಬರುತ್ತಿತ್ತು ಎನ್ನುವ ಕಾರಣಕ್ಕಾಗಿ ಏತ ನೀರಾವರಿ ಯೋಜನೆಯನ್ನು ಕೈಬಿಡಲು ಪ್ರಸ್ತಾಪಿಸಲಾಯಿತು. ಪರಿಣಾಮವಾಗಿ ಈ ಕಾಮಗಾರಿಗಳ ಮೇಲೆ ಮಾಡಲಾದ ರೂ.83 ಲಕ್ಷ ವೆಚ್ಚವು ವ್ಯರ್ಥವಾಯಿತು.

**3.3.8.3** ಏತ ನೀರಾವರಿ ಯೋಜನೆ ಮಾರ್ಗದರ್ಶಿ ಸೂತ್ರಗಳಂತೆ ನಿರ್ಮಾಣಕ್ಕಾಗಿ ಪ್ರಸ್ತಾಪಿಸಲ್ಪಟ್ಟ ಒಂದು ಯೋಜನೆಯು ಒಂದು ವರ್ಷದಲ್ಲಿ ಕನಿಷ್ಠ ಎರಡು ಬೆಳೆ ಅವಧಿಗಳಿಗೆ ನೀರೊದಗಿಸಿದರೆ ಅದನ್ನು ಆರ್ಥಿಕವಾಗಿ ಕಾರ್ಯಸಾಧು ಎಂದು ಪರಿಗಣಿಸಲಾಗುವುದು. ಯೋಜನೆಯು ಆರ್ಥಿಕವಾಗಿ ಕಾರ್ಯಸಾಧು ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಯೋಜನೆಯ ಲಾಭ ವೆಚ್ಚ ಅನುಪಾತವು ಒಂದಕ್ಕಿಂತ ಕಡಿಮೆಯಿರಕೂಡದು. ಆದಾಗ್ಯೂ, ಕೇವಲ ಒಂದು ಬೆಳೆ ಅವಧಿಗೆ ನೀರೊದಗಿಸಲು ಐದು[19] ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು (2003–07), ಅವುಗಳು ಆರ್ಥಿಕವಾಗಿ ಕಾರ್ಯಸಾಧುವಾಗಿಲ್ಲದಿರುವತ್ತ ಒಯ್ದಿತು. ಮೂರು ಪ್ರಕರಣಗಳಲ್ಲಿ (ಜಾಲೀಹಾಳ, ಮೋತಿ ತಲಾಬ್ ಮತ್ತು ಸಲಾಂವಾಡಿ) ವೆಚ್ಚ ಹೆಚ್ಚಳದಿಂದ ಲಾಭ–ವೆಚ್ಚ ಅನುಪಾತವು ಒಂದಕ್ಕಿಂತ ಕಡಿಮೆ ಲೆಕ್ಕಾಚಾರವಾಗಿ ಈ ಏತ ನೀರಾವರಿ ಯೋಜನೆಗಳು ಆರ್ಥಿಕವಾಗಿ ಕಾರ್ಯಸಾಧುವಾಗಿಲ್ಲದಿರುವತ್ತ ಒಯ್ದಿತು.

[18] ಗೌರಾಪುರ, ಡಿ.ಬಿ.ಕೆರೆ, ಚಿಕ್ಕನಸಬಿ, ಸಲಾಂವಾಡಿ, ಮಲ್ಲಿಕ್‌ವಾಡ್ ಮತ್ತು ಪಟ್ಟಣಸೆರಗು

[19] ಅಗಸನಮಟ್ಟಿ, ಬದನಹಟ್ಟಿ, ಮೋತಿ ತಲಾಬ್, ಡಿಬಿ ಕೆರೆ ಮತ್ತು ಗೌರಾಪುರ

## 3.3.9 ಏತ ನೀರಾವರಿ ಯೋಜನೆ ಕಾಮಗಾರಿಗಳ ನಿರ್ವಹಣೆ

### 3.3.9.1 ಭೂ ಸ್ವಾಧೀನವಿಲ್ಲದೆಯೇ ಕಾಮಗಾರಿಯ ಮುಕ್ತಾಯದಲ್ಲಿ ವಿಳಂಬ

ವೆಚ್ಚ ಹೆಚ್ಚಳವಿರದ ಯೋಜನೆಗಳ ಸಕಾಲ ನಿರ್ವಹಣೆಗಾಗಿ ಕಾಮಗಾರಿಗಳು ಕ್ರಮವಾಗಿ ಸ್ವಾಧೀನಗೊಂಡ ಉದ್ದೇಶಿತ ಭೂಮಿಯಲ್ಲಿ ಮಾತ್ರ ಪ್ರಾರಂಭವಾಗತಕ್ಕದ್ದು ಎಂದು ಸಂಹಿತೆಯ ವಿಧಿಗಳು ಸೂಚಿಸುತ್ತವೆ. ಪರೀಕ್ಷಾ–ತನಿಖೆ ನಡೆಸಿದ ಆರು ವಿಭಾಗಗಳ 17 ಪ್ರಗತಿಯಲ್ಲಿರುವ ಕಾಮಗಾರಿಗಳ ಪೈಕಿ ಐದು ಏತ ನೀರಾವರಿ ಯೋಜನೆಗಳಲ್ಲಿ ಇಲಾಖೆಯು ಮೇಲಿನ ಷರತ್ತಿಗೆ ಬದ್ಧವಾಗಿರಲಿಲ್ಲ ಎನ್ನುವುದನ್ನು ದಾಖಲೆಗಳು ತಿಳಿಯಪಡಿಸಿದ್ದವು. **ಅನುಬಂಧ 3.9ರಲ್ಲಿ** ವಿವರಿಸಿರುವಂತೆ ಕಾಮಗಾರಿಯು ಕೈಗೆತ್ತಿಕೊಳ್ಳಲ್ಪಟ್ಟರೂ ಆರು ವರ್ಷಗಳ ಅಂತರದ ನಂತರ ಭೂ ಸ್ವಾಧೀನದ ಪ್ರಸ್ತಾವನೆಗಳು ಮಾಡಲಾದವು (ಎರಡು ಪ್ರಕರಣಗಳು), ಭೂ ಸ್ವಾಧೀನವಿಲ್ಲದೆಯೇ ಒಂದು ಕಾಮಗಾರಿಯು ಪ್ರಾರಂಭವಾಯಿತು, ಅಂದಾಜಿನಲ್ಲಿ ಅನುವು ಮಾಡಿರಲಿಲ್ಲ (ಒಂದು ಪ್ರಕರಣ) ಮತ್ತು ಜಮೀನುದಾರರಿಂದ ವ್ಯಾಜ್ಯದ ಕಾರಣ (ಎರಡು ಪ್ರಕರಣಗಳು). ಪರಿಣಾಮವಾಗಿ ಮೇಲಿನ ಕಾಮಗಾರಿಗಳು ರೂ.5.47 ಕೋಟಿ ವೆಚ್ಚದ ನಂತರವೂ ಯಾವುದೇ ಲಾಭವಿಲ್ಲದೇ ಅಪೂರ್ಣವಾಗಿ ಉಳಿದವು.

### 3.3.9.2 ಕಾಮಗಾರಿಗಳ ದೋಷಯುಕ್ತ ನಿರ್ವಹಣೆ/ಪರೀಕ್ಷಾ ಅಳತೆಗಳಲ್ಲಿ ನ್ಯೂನತೆ

**ಐದು ಏತ ನೀರಾವರಿ ಯೋಜನೆಗಳಲ್ಲಿ ದೋಷಯುಕ್ತ ಕಾಮಗಾರಿಗಳು ನಿರ್ವಹಿಸಲ್ಪಟ್ಟವು ಮತ್ತು ಅವುಗಳಿಗೆ ಪಾವತಿ ಮಾಡಲಾಯಿತು**

ಕಾಮಗಾರಿಗಳು ವಿಶಿಷ್ಟತೆಗಳಿಗೆ ಅನುಗುಣವಾಗಿ ನಿರ್ವಹಿಸಲ್ಪಡುತ್ತಿವೆ ಮತ್ತು ತಾಂತ್ರಿಕವಾಗಿ ದೃಢವಾಗಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ನಿರ್ವಹಣೆಯ ವಿವಿಧ ಹಂತಗಳಲ್ಲಿ ಇಲಾಖಾ ಅಧಿಕಾರಿಗಳಿಂದ ಕಾಮಗಾರಿಯ ಮೇಲ್ವಿಚಾರಣೆಯನ್ನು ಸಂಹಿತೆಯ ವಿಧಿಗಳು ತಿಳಿಸುತ್ತವೆ. ವಿಭಾಗೀಯ ಅಧಿಕಾರಿಗಳು ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಅಳೆಯತಕ್ಕದ್ದು ಮತ್ತು ಒಂದು ಅಳತೆಯ ವಹಿಯನ್ನು ಇಡತಕ್ಕದ್ದು ಎಂದೂ ಸಹ ಸಂಹಿತೆಯ ನಿಯಮಗಳು ಮತ್ತು ಇಲಾಖಾ ಸೂಚನೆಗಳು ತಿಳಿಸುತ್ತವೆ. ಐದು ವಿಭಾಗಗಳಲ್ಲಿ ಒಂಬತ್ತು ಏತ ನೀರಾವರಿ ಯೋಜನೆಗಳ ಸಂಬಂಧದಲ್ಲಿ ಹಾಜರುಪಡಿಸಲಾದ ದಾಖಲೆಗಳಲ್ಲಿ ಸಂಹಿತೆಯ ಅನುವುಗಳ ಉಲ್ಲಂಘನೆಯಿಂದ ಕಾಮಗಾರಿಗಳ ದೋಷಯುಕ್ತ/ಅನಾವಶ್ಯಕ ನಿರ್ವಹಣೆ ಮತ್ತು ಕಾಮಗಾರಿಗಳ ನಿರ್ವಹಣೆ ಇಲ್ಲದೆಯೇ ಪಾವತಿ ಮಾಡಿರುವುದು ಮುಂತಾದ ಪ್ರಕರಣಗಳನ್ನು ತಿಳಿಯಪಡಿಸಿತು. ವಿವರಗಳನ್ನು **ಅನುಬಂಧ 3.10ರಲ್ಲಿ** ನೀಡಲಾಗಿದೆ.

### 3.3.9.3 ಕಾಮಗಾರಿಯ ವಿವಿಧ ಅಂಶಗಳನ್ನು ಏಕೀಕೃತಗೊಳಿಸದಿರುವುದು

**ಏತ ನೀರಾವರಿ ಯೋಜನೆಗಳ ಕಾಮಗಾರಿಗಳ ವಿವಿಧ ಅಂಶಗಳ ನಿರ್ವಹಣೆಯ ಏಕೀಕೃತಗೊಳಿಸದೆ ಕಾಮಗಾರಿಗಳು ಪೂರ್ಣಗೊಳ್ಳುವಲ್ಲಿ ವಿಳಂಬವಾಯಿತು**

ಏತ ನೀರಾವರಿ ಯೋಜನೆಯ ಮಾರ್ಗದರ್ಶಿ ಸೂತ್ರಗಳಂತೆ ವಿವಿಧ ಅಂಶಗಳಾದ ಸಿವಿಲ್/ವಿದ್ಯುತ್/ಯಾಂತ್ರಿಕ ಮತ್ತು ವಿದ್ಯುತ್ ಸರಬರಾಜುಗಳ ನಿರ್ವಹಣೆಯನ್ನು ಯಾವುದೇ ಅಂಶಗಳ ವಿಳಂಬದಿಂದ ನಿಷ್ಕ್ರಿಯವಾಗದಂತೆ ಏಕೀಕೃತಗೊಳಿಸಿ ಏತ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸುವುದು. ಐದು ವಿಭಾಗಗಳಲ್ಲಿನ ದಾಖಲೆಗಳ ಪರೀಕ್ಷಾ–ತನಿಖೆಯಲ್ಲಿ ರೂ.9.54 ಕೋಟಿ ವೆಚ್ಚ ಕೂಡಿರುವ ಏತ ನೀರಾವರಿ ಯೋಜನೆಗಳ ವಿವಿಧ ಅಂಶಗಳಾದ ಸಿವಿಲ್ ಕಾಮಗಾರಿಗಳ ನಿರ್ವಹಣೆ, ಯಂತ್ರಗಳ ಸ್ಥಾಪಿಸುವಿಕೆ, ವಿದ್ಯುತ್ ಸರಬರಾಜು ಮುಂತಾದ ಇಚ್ಛಿತ ಲಾಭಗಳ ಸಾಧನೆಯತ್ತ ಒಯ್ಯುವಂತೆ ಏಕೀಕೃತಗೊಳಿಸಲಿಲ್ಲ ಎನ್ನುವುದನ್ನು ತಿಳಿಯಪಡಿಸಿತು. **ಅನುಬಂಧ 3.11ರಲ್ಲಿ** ವಿವರಗಳನ್ನು ನೀಡಲಾಗಿದೆ. ಆರು ಏತ ನೀರಾವರಿ ಯೋಜನೆಗಳ ವಿವಿಧ ಅಂಶಗಳನ್ನು ಏಕೀಕೃತ ಗೊಳಿಸದಿರುವುದರಿಂದ ರೂ.9.54 ಕೋಟಿ ವೆಚ್ಚವು ನಿಷ್ಫಲವಾಯಿತು.

### 3.3.9.4 ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟಿನ ಮೇಲು ವ್ಯಾಪಿಸುವಿಕೆ

**ಇತರ ನೀರಾವರಿ ಯೋಜನೆಗಳ ಜೊತೆ ಮೇಲುವ್ಯಾಪಿಸುತ್ತಿದ್ದ 55 ಏತ ನೀರಾವರಿ ಯೋಜನೆಗಳ ಜಲಾನಯನ ಪ್ರದೇಶವು ವರ್ಗಾವಣೆಗೊಳ್ಳಲಿಲ್ಲ.**

ಬಂಡವಾಳ ಹೂಡಿಕೆಯ ದ್ವಿಗುಣವನ್ನು ತಪ್ಪಿಸಲು ಬೃಹತ್/ಮಧ್ಯಮ ನೀರಾವರಿ ಯೋಜನೆಗಳಡಿಯಲ್ಲಿ ಬರುವ ಎಲ್ಲಾ ಪೂರ್ಣಗೊಂಡಿದ್ದ/ಪ್ರಗತಿಯಲ್ಲಿದ್ದ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟಿನ ನಿರ್ವಹಣೆ ಮತ್ತು ಮೇಲ್ವಿಚಾರಣೆ ವರ್ಗಾವಣೆಯ ಆದೇಶಗಳನ್ನು ಸರ್ಕಾರವು ನೀಡಿತು (ಏಪ್ರಿಲ್ 1982).

ಐದು ವಿಭಾಗಗಳಲ್ಲಿ[20] ದಾಖಲೆಗಳ ಪರೀಕ್ಷಾ ತನಿಖೆಯಲ್ಲಿ ಗಮನಿಸಲಾದ ಬೃಹತ್/ಮಧ್ಯಮ ನೀರಾವರಿ ಯೋಜನೆಗಳ ಜಲಾನಯನ ಪ್ರದೇಶದಲ್ಲಿ ಬರುತ್ತಿದ್ದ 17,479 ಹೆಕ್ಟೇರು ನೀರಾವರಿ ಉದ್ದೇಶಿತ 55 ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟು ಸಣ್ಣ ನೀರಾವರಿ ಇಲಾಖೆಯಿಂದ ಸಂಬಂಧಿತ ಯೋಜನಾ ಪ್ರಾಧಿಕಾರಗಳಿಗೆ ವರ್ಗಾಯಿಸಲ್ಪಡಲಿಲ್ಲ ಮತ್ತು ಅವುಗಳ ಪುನಶ್ಚೇತನ ಮತ್ತು ಮೆಲ್ವಿಚಾರಣೆಯ ಮೇಲೆ ವೆಚ್ಚ ಮಾಡುವಿಕೆಯು ಮುಂದುವರೆಯಿತು. 32 ಏತ ನೀರಾವರಿ ಯೋಜನೆಗಳ ಪುನಶ್ಚೇತನದ ಮೆಲೆ ರೂ.4.59 ಕೋಟಿ ವ್ಯಯಿಸಲಾಯಿತು (2001–05) ಇವುಗಳಲ್ಲಿ 16 ಪುನಶ್ಚೇತನವಾದ ಏತ ನೀರಾವರಿ ಯೋಜನೆಗಳ ಮೇಲಿನ ವೆಚ್ಚ ರೂ.2.30 ಕೋಟಿಯು ವ್ಯರ್ಥವಾಗುವಂತೆ ನಿಷ್ಕ್ರಿಯವಾದವು.

ಬೃಹತ್/ಮಧ್ಯಮ ನೀರಾವರಿ ಯೋಜನೆಗಳ ಜಲಾನಯನ ಪ್ರದೇಶದಡಿಯಲ್ಲಿ ಬರುವ ಏಳು ಹೊಸ ಏತ ನೀರಾವರಿ ಯೋಜನೆಗಳ ನಿರ್ಮಾಣವನ್ನೂ ರೂ.18.89 ಕೋಟಿ ವೆಚ್ಚದಲ್ಲಿ ಇಲಾಖೆಯು ಕೈಗೆತ್ತಿಕೊಂಡಿತು (2000–05). ಇವುಗಳ ಪೈಕಿ ನಾಲ್ಕು ಏತ ನೀರಾವರಿ ಯೋಜನೆಗಳು ಪೂರ್ಣಗೊಂಡಿದ್ದರೆ ಮೂರು ಏತ ನೀರಾವರಿ ಯೋಜನೆಗಳು ಪ್ರಗತಿಯಲ್ಲಿದ್ದವು. ಪೂರ್ಣಗೊಂಡ ಮೂರು ಏತ ನೀರಾವರಿ ಯೋಜನೆಗಳ ಸಂಬಂಧದಲ್ಲಿ ವಿನ್ಯಾಸಿತ 1,394 ಹೆಕ್ಟೇರ್ ಅಚ್ಚುಕಟ್ಟಿಗೆ ಪ್ರತಿಯಾಗಿ 164 ಹೆಕ್ಟೇರು ಅಚ್ಚುಕಟ್ಟಿಗೆ ಮಾತ್ರ ಒಂದು ವರ್ಷದಲ್ಲಿ ನೀರಾವರಿ ಒದಗಿಸಲ್ಪಟ್ಟಿತು ಎನ್ನುವುದನ್ನು ದಾಖಲೆಗಳು ತಿಳಿಸಿದವು.

## 3.3.10 ಗುತ್ತಿಗೆ ನಿಯಮಗಳಿಗೆ ಬದ್ಧವಾಗಿಲ್ಲದಿರುವುದು

### 3.3.10.1 ಅಧಿಕ ವೆಚ್ಚವನ್ನು ವಸೂಲು ಮಾಡದಿರುವುದು

ಮೊದಲ ಗುತ್ತಿಗೆದಾರನ ತಪ್ಪಿನಿಂದ ಅಧಿಕ ದರಗಳಲ್ಲಿ ಇತರ ಗುತ್ತಿಗೆದಾರರ ಮೂಲಕ ಕಾಮಗಾರಿಯ ನಿರ್ವಹಣೆಯಲ್ಲಿ ಸರ್ಕಾರದಿಂದಾದ ಅಧಿಕ ವೆಚ್ಚವು ಮೊದಲ ಗುತ್ತಿಗೆದಾರನಿಂದ ವಸೂಲಿ ಮಾಡತಕ್ಕದ್ದು ಎಂದು ಗುತ್ತಿಗೆ ನಿಯಮಗಳು ಹೇಳುತ್ತವೆ. ದಾಖಲೆಗಳಿಂದ ತಿಳಿದುಬಂದಂತೆ ಪರೀಕ್ಷಾ ತನಿಖೆ ನಡೆಸಲಾದ ಐದು ವಿಭಾಗಗಳಿಗೆ ಸಂಬಂಧಿಸಿದ ಐದು[21] ಏತ ನೀರಾವರಿ ಯೋಜನೆಗಳ ಪೈಕಿ ಮೂರರಲ್ಲಿ ಗುತ್ತಿಗೆಯು ಗುತ್ತಿಗೆದಾರನ ಜವಾಬ್ದಾರಿ ಮತ್ತು ವೆಚ್ಚದಲ್ಲಿ ರದ್ದುಗೊಳಿಸಲ್ಪಟ್ಟಿತು. ತಪ್ಪಿತಸ್ಥ ಗುತ್ತಿಗೆದಾರನ ಉಳಿಕೆ ಕಾಮಗಾರಿಗಳ ಮುಕ್ತಾಯದ ಮೇಲೆ ವ್ಯಯಿಸಲಾದ ಅಧಿಕ ವೆಚ್ಚವು ನಿಷ್ಕರ್ಷಿಸಲ್ಪಡಲಿಲ್ಲ ಮತ್ತು ವಸೂಲಾಗಲಿಲ್ಲ.

ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥ ಗುತ್ತಿಗೆದಾರರುಗಳು ವಿರುದ್ಧವಿದ್ದ ಬಾಕಿ ವಸೂಲಾತಿಗಳನ್ನು ಪರಾಮರ್ಶಿಸಲು ಮತ್ತು ಮೇಲ್ವಿಚಾರಣೆ ನಡೆಸಲು ವ್ಯವಸ್ಥೆಯಿರಲಿಲ್ಲ ಎನ್ನುವುದನ್ನು ಸೂಚಿಸುವಂತೆ ಗುತ್ತಿಗೆದಾರರುಗಳಿಂದ ವಸೂಲಾಗಬೇಕಿದ್ದ ಬಾಕಿಯನ್ನು ಗಮನಿಸಲು ದಾಖಲೆಗಳನ್ನು ಸಹಾ ನಿರ್ವಹಿಸಿರಲಿಲ್ಲ.

### 3.3.10.2 ಕಾಮಗಾರಿಯನ್ನು ವಹಿಸಿದ ನಂತರ ವ್ಯಾಪ್ತಿಯಲ್ಲಿ ಬದಲಾವಣೆ

ಕಾಮಗಾರಿಯ ಆರಂಭದ ಮುನ್ನವೇ ಕಾಮಗಾರಿಯ ವಿನ್ಯಾಸಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲ್ಪಡಬೇಕು ಮತ್ತು ಅನುಮೋದಿತ ನಕ್ಷೆಗಳು ಗುತ್ತಿಗೆಯ ಭಾಗವಾಗುವವು. ಏತ ನೀರಾವರಿ ಯೋಜನೆಗೆ ಸಂಬಂಧಿಸಿದ ನೀರೆತ್ತುವ ಯಂತ್ರ, ಕೊಳವೆಗಳು ಮತ್ತು ಉಪಸಾಧನಗಳ ವಿನ್ಯಾಸಗೊಳಿಸುವಿಕೆಯಲ್ಲಿ ಸೇರಿಸಿಕೊಳ್ಳಲು ಅನೇಕ ಅಳತೆಗೋಲುಗಳನ್ನು ಮಾರ್ಗದರ್ಶಿ ಸೂತ್ರಗಳು ಸೂಚಿಸುತ್ತವೆ. ಸರ್ಕಾರಕ್ಕೆ ಅಧಿಕ ಆರ್ಥಿಕ ಹೊರೆಯಾಗುವ ಕಾಮಗಾರಿಯ ವಿನ್ಯಾಸ/ವ್ಯಾಪ್ತಿಯ ಬದಲಾವಣೆಗೆ ನಿರ್ದೇಶನಗಳನ್ನು ಕಾಮಗಾರಿಯ ವಹಿಸುವಿಕೆಯ ನಂತರ ನೀಡಬಾರದೆಂದು ಸರ್ಕಾರವು ಸೂಚಿಸಿದೆ (1991). ಕಾಮಗಾರಿಯನ್ನು ವಹಿಸಿದ ನಂತರ ವ್ಯಾಪ್ತಿಯಲ್ಲಿ ಬದಲಾವಣೆಯಿದ್ದ ಅಧಿಕ ಅಂಶಗಳ ನಿರ್ವಹಣೆಯು ಸೇರಿದ್ದ ಒಂಬತ್ತು ಪ್ರಕರಣಗಳು ದಾಖಲೆಗಳಲ್ಲಿ ಕಂಡುಬಂದವು. ಮೂಲ ಅಂದಾಜುಗಳಲ್ಲಿ ಒದಗಿಸಿದ್ದ ರೂ.15.13 ಕೋಟಿಗೆ ಪ್ರತಿಯಾಗಿ ಈ ಕಾಮಗಾರಿಗಳ ಮೇಲೆ ರೂ.25.78 ಕೋಟಿ ವೆಚ್ಚ ಮಾಡಲಾಯಿತು. ಪರಿಣಾಮವಾಗಿ ಅಂದಾಜುಗಳು ರೂ.30.28 ಕೋಟಿಗೆ

[20] ಕುಷ್ಟಗಿ, ಬಳ್ಳಾರಿ, ಬೀದರ್, ಗುಲ್ಬರ್ಗ ಮತ್ತು ಬಿಜಾಪುರ

[21] ಅಂಕನಾಥಪುರ, ಅಂಕನಾಳುಪಾನಲ್, ಚಿಕ್ಕನಸಬಿ, ಗೌರಾಪುರ ಮತ್ತು ಪಟ್ಟಣಸೆರಗು

ಪರಿಷ್ಕೃತಗೊಂಡವು. ಕಾಮಗಾರಿಯ ವ್ಯಾಪ್ತಿಯಲ್ಲಿ ಬದಲಾವಣೆಯು ಐದು ಕಾಮಗಾರಿಗಳು ಪೂರ್ಣಗೊಳ್ಳುವಲ್ಲಿ ಎರಡರಿಂದ ಎಂಟು ವರ್ಷಗಳವರೆಗಿನ ವಿಳಂಬವಾಯಿತು ಮತ್ತು ಒಂಬತ್ತು ಪ್ರಕರಣಗಳಲ್ಲಿ **(ಅನುಬಂಧ 3.12)** ರೂ.15.15 ಕೋಟಿ ವೆಚ್ಚದ ಅಧಿಕ ಹರಿಯುವಿಕೆಯಲ್ಲಿ ಪರಿಣಮಿಸಿತು.

### 3.3.10.3 ಕೇಂದ್ರ ಅಬಕಾರಿ ಸುಂಕದ ವಿನಾಯಿತಿಯನ್ನು ಪಡೆಯುವಲ್ಲಿ ವಿಳಂಬ

**ಏತ ನೀರಾವರಿ ಯೋಜನೆ ಯಂತ್ರಗಳ ಖರೀದಿಗಳ ಮೇಲಿನ ಕೇಂದ್ರ ಅಬಕಾರಿ ಸುಂಕ ವಿನಾಯಿತಿಯ ಲಾಭವು ಇಲಾಖೆಗೆ ಪ್ರಾಪ್ತವಾಗಲಿಲ್ಲ**

ಭಾರತ ಸರ್ಕಾರವು ನೀರು ಸರಬರಾಜು ಸ್ಥಾವರಗಳನ್ನು ಸ್ಥಾಪಿಸಲು ಮತ್ತು ನೀರಾವರಿ ಹಾಗೂ ಕುಡಿಯುವ ಉದ್ದೇಶದ ನೀರು ಸರಬರಾಜಿಗೆ ಅಗತ್ಯವಿದ್ದ ಯಂತ್ರಗಳು, ಉಪಕರಣಗಳು, ಕೊಳವೆಗಳು, ಸಲಕರಣೆಗಳು ಮುಂತಾದ ಎಲ್ಲ ಅಂಶಗಳ ಮೇಲೆ ಕೇಂದ್ರ ಅಬಕಾರಿ ಸುಂಕವನ್ನು ಪೂರ್ಣವಾಗಿ ವಿನಾಯಿಸಿತು (8 ಜನವರಿ 2004). ಗುತ್ತಿಗೆದಾರನು ಕೇಂದ್ರ ಅಬಕಾರಿ ಸುಂಕ ವಿನಾಯಿತಿಯನ್ನು ಪಡೆಯಲು ಮತ್ತು ಲಾಭವನ್ನು ಇಲಾಖೆಗೆ ವರ್ಗಾಯಿಸಲು ಸಾಮಗ್ರಿಗಳು ಅಂದರೆ ನೀರು ಸರಬರಾಜು ಸ್ಥಾವರದ ಸ್ಥಾಪನೆಯಲ್ಲಿ ಉಪಯೋಗಿಸಲ್ಪಡುವ ಸ್ಥಾವರ ಮತ್ತು ಉಪಕರಣಗಳು ಉದ್ದೇಶಿತ ಉಪಯೋಗಕ್ಕಾಗಿದೆ ಎನ್ನುವ ಒಂದು ಪ್ರಮಾಣ ಪತ್ರವು ವಿಭಾಗೀಯ ಅಧಿಕಾರಿಗಳಿಂದ ನೀಡಲ್ಪಟ್ಟ ಪ್ರಮಾಣಪತ್ರದ ಮೇಲೆ ಆಧರಿಸಿ ಜಿಲ್ಲಾಧಿಕಾರಿಗಳಿಂದ ಕೊಡಲ್ಪಡಬೇಕಿತ್ತು.

ಜನವರಿ 2004ರ ನಂತರ ಅಂತಿಮಗೊಂಡ ರೂ.43.85 ಕೋಟಿ ವೆಚ್ಚದ (ರೂ.6.05 ಕೋಟಿ ಕೇಂದ್ರ ಅಬಕಾರಿ ಸುಂಕ ವಿನಾಯಿತಿ ಅಂಶ ಕೂಡಿರುವ) ಯಂತ್ರಗಳು/ಉಪಕರಣಗಳ ಖರೀದಿಯ 130 ಗುತ್ತಿಗೆಗಳ ಪರೀಕ್ಷಾ-ತನಿಖೆಯಲ್ಲಿ ತಿಳಿಯಪಡಿಸಿದ್ದಂತೆ ಕೇಂದ್ರ ಅಬಕಾರಿ ಸುಂಕವನ್ನು ಇಲಾಖೆಗೆ ವರ್ಗಾಯಿಸಲು ಗುತ್ತಿಗೆದಾರನನ್ನು ನಿರ್ಬಂಧಿಸುವ ಒಂದು ಸೂಕ್ತ ಕಲಂಅನ್ನು ಗುತ್ತಿಗೆಯಲ್ಲಿ ಸೇರಿಸಲು ಇಲಾಖೆಯು ವಿಫಲವಾಯಿತು. ಇಲಾಖೆಯು ಹನ್ನೊಂದು ಗುತ್ತಿಗೆಗಳಲ್ಲಿ ರೂ.13.18 ಕೋಟಿಯ ಕೇಂದ್ರ ಅಬಕಾರಿ ಸುಂಕ ವಿನಾಯಿತಿಯು ಸ್ವೀಕೃತವಾಗಿದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳದೇ ಶಿಫಾರಸುಗಳನ್ನು ಕೂಡ ನೀಡಿತು. ಗುತ್ತಿಗೆದಾರರಿಂದ ಕೇಂದ್ರ ಅಬಕಾರಿ ಸುಂಕ ವಿನಾಯಿತಿಯು ಪಡೆಯಲ್ಪಟ್ಟಿದೆಯೇ ಎನ್ನುವುದನ್ನು ಅವರ ಕಾಮಗಾರಿ ಬಿಲ್ಲುಗಳಲ್ಲಿ ಸರಿಹೊಂದಿಸುವ ಸಲುವಾಗಿ ನಿಶ್ಚಯಿಸಿಕೊಳ್ಳಲು, ಅನುಸರಣಾ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಒಂದು ಪ್ರಕರಣದಲ್ಲಿ ಗುತ್ತಿಗೆದಾರನು ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಧಾರವಾಡ, ಇವರ ಶಿಫಾರಸಿನ ಮೇಲೆ ಆಧರಿಸಿ ಕೇಂದ್ರ ಅಬಕಾರಿ ಸುಂಕ ವಿನಾಯಿತಿಯನ್ನು (ಸಾಮಗ್ರಿಗಳ ಮೌಲ್ಯ: ರೂ.1.54 ಲಕ್ಷ) ಪಡೆದರು, ಆದರೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಂತೆ (ಏಪ್ರಿಲ್ 2008) ಲಾಭವು ಇಲಾಖೆಗೆ ವರ್ಗಾವಣೆಯಾಗಲಿಲ್ಲ.

## 3.3.11 ಏತ ನೀರಾವರಿ ಯೋಜನೆಗಳ ನಿರ್ವಹಣೆಯಲ್ಲಿ ಕೊರತೆ

ನೀರಿನ ಮಟ್ಟವು ವಿನ್ಯಾಸಿತ ಮಟ್ಟಕ್ಕಿಂತ ಕೆಳಗೆ ಹೋಗಿ ಏತ ನೀರಾವರಿ ಯೋಜನೆಯು ನಿಷ್ಕ್ರಿಯವಾಗುವುದರಿಂದ ಏತ ನೀರಾವರಿ ಯೋಜನೆಯ ಕೆಳಹರಿವಿನ ನದೀ ಪಾತ್ರದಿಂದ ಮರಳು ತೆಗೆಯುವುದನ್ನು ತಪ್ಪಿಸಬೇಕು. ಮುಂದುವರೆದು, ನದೀ ಪಾತ್ರದಿಂದ ಅನಧಿಕೃತ/ಕಾನೂನುಬಾಹಿರವಾಗಿ ಮರಳು ಗಣಿಗಾರಿಕೆ ನಡೆಸುವುದನ್ನು ತನಿಖೆ ನಡೆಸುವುದು ಇಲಾಖೆಯ ಜವಾಬ್ದಾರಿಯಾಗಿತ್ತು.

ದಾಖಲೆಗಳಲ್ಲಿ ತಿಳಿದುಬಂದಂತೆ 1990 ಮತ್ತು 1995ರ ನಡುವೆ ನಿರ್ಮಾಣವಾದ ಎರಡು[22] ವಿಭಾಗಗಳಲ್ಲಿನ ನಾಲ್ಕು ಏತ ನೀರಾವರಿ ಯೋಜನೆಗಳು, ಏತ ನೀರಾವರಿ ಯೋಜನೆಯ ಪ್ರದೇಶದ ಸಮೀಪದಲ್ಲಿ ಕಾನೂನುಬಾಹಿರ ಮರಳು ಗಣಿಗಾರಿಕೆಯ ಕಾರಣ ಒಳಹರಿವು ಮಟ್ಟದ ಕೆಳಗೆ ನೀರಿನ ಖಾಲಿಯಾಗುವಿಕೆಯಿಂದ ನಿಷ್ಕ್ರಿಯವಾದವು. ಪರಿಣಾಮವಾಗಿ, ಏತ ನೀರಾವರಿ ಯೋಜನೆಗಳಿಗೆ ನೀರಿನ ಆಕರವನ್ನು ಪುನರ್ನೆಲೆಗೊಳಿಸಲು ಹೆಚ್ಚುವರಿ ಕಾಮಗಾರಿಗಳಾದ ಮಾರ್ಗಪಲ್ಲಟ ಕೋಡಿ, ಸಂಗ್ರಹಬಾವಿಯ ಸ್ಥಳಾಂತರ, ಬಂದಾರ, ಮುಂತಾದವುಗಳು 2002-04ರ ಅವಧಿಯಲ್ಲಿ ರೂ.2.13 ಕೋಟಿ ವೆಚ್ಚದಲ್ಲಿ ನಿರ್ವಹಿಸಿದ್ದು ಇವುಗಳನ್ನು ತಪ್ಪಿಸಬಹುದಿತ್ತು.

[22] ಬೆಂಗಳೂರು ಮತ್ತು ಮೈಸೂರು

## 3.3.12 ವಾರ್ಷಿಕ ನಿರ್ವಹಣಾ ವೆಚ್ಚ

ಏತ ನೀರಾವರಿ ಯೋಜನೆಯ ಸಂಹಿತೆಯನ್ನು ನಿರ್ವಹಿಸುವ ಅಗತ್ಯವಿದ್ದ ನಿರ್ವಹಣಾ ಕಾಮಗಾರಿಗಳ ದಾಖಲೆಯಾದ ಸೇವೆ, ಬಿಡಿಭಾಗಗಳ ಬದಲಾವಣೆ, ನೀರು ಸರಬರಾಜು, ಮುಂತಾದವುಗಳು ಪರೀಕ್ಷಾ–ತನಿಖೆ ನಡೆಸಿದ ಯಾವ ವಿಭಾಗಗಳಲ್ಲಿಯೂ ನಿರ್ವಹಿಸಲ್ಪಟ್ಟಿರಲಿಲ್ಲ. ಯಂತ್ರಗಳು ನಿರ್ವಹಿಸಲ್ಪಡುತ್ತಿದೆಡೆಯೆಲ್ಲಿ ಲಾಗ್ ಪುಸ್ತಕಗಳು, ಸೇವಾ ಅವಧಿ, ಮಾಡಲಾದ ದುರಸ್ತಿಗಳ ಸ್ವರೂಪ, ಪ್ರತಿ ಪಂಪಿನ ಕಾರ್ಯನಿರ್ವಹಣೆ, ಬಳಸಲಾದ ವಿದ್ಯುತ್ ಯೂನಿಟ್‌ಗಳು ಇತ್ಯಾದಿಗಳನ್ನು ಎಲ್ಲಾ ಕಾಲಂಗಳಲ್ಲಿ ಭರ್ತಿ ಮಾಡದಿರುವುದರಿಂದ ಪೂರ್ಣವಾಗಿ ಇಂದೀಕರಣವಾಗಿರಲಿಲ್ಲ.

### 3.3.12.1 ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮಂಜೂರಾತಿ ಇಲ್ಲದೆ ವೆಚ್ಚ ಮಾಡಿರುವುದು

**ಏತ ನೀರಾವರಿ ಯೋಜನೆಗಳ ನಿರ್ವಹಣಾ ವೆಚ್ಚವನ್ನು ಸಕ್ಷಮ ಅಧಿಕಾರಿಗಳ ಮಂಜೂರಾತಿ ಇಲ್ಲದೆ ಭರಿಸಲಾಯಿತು**

ಕಾಮಗಾರಿಗಳ ಪಾವತಿಯು ಮಂಜೂರಾದ ಅಂದಾಜುಗಳಿಗೆ ಪ್ರತಿಯಾಗಿ ಮಾತ್ರವೇ ವಿಭಾಗಾಧಿಕಾರಿಗಳಿಂದ ಆಗಬೇಕು ಎಂದು ಸಂಹಿತೆಯ ಉಪಬಂಧಗಳು ತಿಳಿಸುತ್ತವೆ. 2003–04ರಿಂದ 2006–07ರ ಅವಧಿಯಲ್ಲಿ ಆರು[23] ವಿಭಾಗಗಳಲ್ಲಿ ವಾರ್ಷಿಕ ನಿರ್ವಹಣಾ ವೆಚ್ಚಕ್ಕಾಗಿ ಭರಿಸಿದ ರೂ.12.90 ಕೋಟಿಯು ಸಕ್ಷಮ ಅಧಿಕಾರಿಗಳಿಂದ ಮಂಜೂರಾಗಿರಲಿಲ್ಲ ಮತ್ತು ರೂ.8.67 ಕೋಟಿಯನ್ನು ಮಂಜೂರಾಗಿದ್ದ ಮೊತ್ತಕ್ಕಿಂತ ಅಧಿಕವಾಗಿ ವೆಚ್ಚ ಮಾಡಲಾಗಿತ್ತು.

ಪರೀಕ್ಷಾ–ತನಿಖೆ ನಡೆಸಿದ 87 ಏತ ನೀರಾವರಿ ಯೋಜನೆಗಳಲ್ಲಿ ಹನ್ನೊಂದನೆಯ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಮಂಜೂರಾಗಿದ್ದ ರೂ.14.53 ಕೋಟಿಗೆ ಪ್ರತಿಯಾಗಿ ರೂ.16.76 ಕೋಟಿಯನ್ನು ವೆಚ್ಚ ಮಾಡಲಾಯಿತು. ಮಂಜೂರಾತಿಯ ಮೇಲಿನ ಅಧಿಕ ವೆಚ್ಚವು ರೂ.2.23 ಕೋಟಿಯಾಗಿತ್ತು.

### 3.3.12.2 ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ನಿರ್ವಹಣೆ

**ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ಮೇಲೆ ಅನಾವಶ್ಯಕವಾಗಿ ವೆಚ್ಚ ಮಾಡಲಾಯಿತು**

ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ನಿರ್ವಹಣೆಯ ಮೇಲೆ ಯಾವುದೇ ವೆಚ್ಚವನ್ನು ಮಾಡಬಾರದೆಂದು ಸರ್ಕಾರವು ಸೂಚನೆಗಳನ್ನು ನೀಡಿತ್ತು (ಮೇ 2005). ಮುಂದುವರೆದು, ವಿದ್ಯುತ್ ಸರಬರಾಜನ್ನೂ ಸಹ ತಕ್ಷಣ ತಪ್ಪಿಸುವ ಅಗತ್ಯವಿದ್ದಿತು. ಅಚ್ಚುಕಟ್ಟನ್ನು ಅಧಿಸೂಚನೆಯಿಂದ ತೆಗೆದುಹಾಕಿ ಏತ ನೀರಾವರಿ ಯೋಜನೆಗಳನ್ನು ಇಲಾಖಾ ಪಟ್ಟಿಯಿಂದ ತೆಗೆದುಹಾಕಬೇಕಿತ್ತು. ಅದರ ಜೊತೆಗೆ ಅಂತಹ ಅಧಿಸೂಚನೆಯಿಂದ ತೆಗೆದುಹಾಕುವವರೆಗೆ ಭೂಮಿ, ಕಟ್ಟಡಗಳು ಮತ್ತು ಯಂತ್ರಗಳನ್ನು ರಕ್ಷಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕಿತ್ತು.

ಇಲಾಖೆಯು 2003–07ರ ಅವಧಿಯಲ್ಲಿ 71 ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ನಿರ್ವಹಣೆಯ ಮೇಲೆ ರೂ.5.91 ಕೋಟಿ ವೆಚ್ಚ ಮಾಡಿತು. ಮುಂದುವರೆದು, ಉತ್ತರ ವಲಯದಲ್ಲಿನ 111 ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ಪೈಕಿ ಇಲಾಖೆಯು 63 ಏತ ನೀರಾವರಿ ಯೋಜನೆಗಳನ್ನು ಅವುಗಳನ್ನು ಶಾಶ್ವತವಾಗಿ ನಿಷ್ಕ್ರಿಯವೆಂದು ಘೋಷಿಸುವ ಸರ್ಕಾರದ ಆದೇಶಗಳನ್ನು ಪಡೆಯದೇ ಹಾಗೂ ಅಚ್ಚುಕಟ್ಟನ್ನು ಅಧಿಸೂಚನೆಯಿಂದ ತೆಗೆದುಹಾಕದೇ ಏತ ನೀರಾವರಿ ಯೋಜನೆಗಳ ಪಟ್ಟಿಯಿಂದ ಕೈಬಿಟ್ಟಿತು. ಇದರಿಂದ ಇಲಾಖೆಯು ಒಟ್ಟು ನೀರಾವರಿಗೊಳಪಡಿಸಬಹುದಾದ ಜಲಾನಯನ ಪ್ರದೇಶವನ್ನು ಅಧಿಕವಾಗಿ ತಿಳಿಸದಂತಾಯಿತು.

### 3.3.12.3 ವಿದ್ಯುಚ್ಛಕ್ತಿ ಶುಲ್ಕಗಳ ಪಾವತಿ

ಸಮೀಕ್ಷೆಯ ಅವಧಿಯಲ್ಲಿ ಒಟ್ಟು ನಿರ್ವಹಣಾ ವೆಚ್ಚದ ಶೇಕಡ 53ಕ್ಕೆ[24] ಲೆಕ್ಕಾಚಾರವಾಗುವಂತೆ ಏತ ನೀರಾವರಿ ಯೋಜನೆಗಳು ಆವರ್ತನ ನಿರ್ವಹಣಾ ವೆಚ್ಚ ಮತ್ತು ವಿದ್ಯುತ್ ಶುಲ್ಕಗಳನ್ನು ವ್ಯಯಿಸುತ್ತವೆ. ಏತ ನೀರಾವರಿ ಯೋಜನೆಗಳು ವರ್ಷದಲ್ಲಿ ಒಂದು ಅಥವಾ ಎರಡು ಬೆಳೆ ಅವಧಿಯಲ್ಲಿ ಮಾತ್ರ ನೀರನ್ನು ಎತ್ತಲು ವಿನ್ಯಾಸಿತವಾಗಿರುತ್ತದೆ. ವಿದ್ಯುಚ್ಛಕ್ತಿ ಶುಲ್ಕಗಳನ್ನು ವಾಸ್ತವಿಕ ಬಳಕೆ ಅಥವಾ ಕನಿಷ್ಟ ಶುಲ್ಕ ಇವುಗಳಲ್ಲಿ ಯಾವುದು ಅಧಿಕವೋ ಅದರ ಮೇಲೆ ಆಧರಿಸಿ ವಿಧಿಸಲಾಗುವುದು.

---

[23] ಬಿಜಾಪುರ, ಬೆಳಗಾವಿ, ಚಿತ್ರದುರ್ಗ, ಧಾರವಾಡ, ಗುಲ್ಬರ್ಗ ಮತ್ತು ಕುಷ್ಟಗಿ

[24] ಚಿತ್ರದುರ್ಗ ವಿಭಾಗವನ್ನು ಹೊರತುಪಡಿಸಿ

ಮುಂದುವರೆದು, ಸ್ಥಾವರ ಮತ್ತು ಯಂತ್ರಗಳು ಕ್ರಿಯಾಶೀಲವಾಗಿರದಿದ್ದರೂ ಮತ್ತು ವಿದ್ಯುತ್ ಬಳಕೆ ಇಲ್ಲದಿದ್ದರೂ ಸಹ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಜೊತೆಗಿನ ಒಪ್ಪಂದದ ನಿಯಮಗಳ ಚಾಲನೆಯಿಂದ ವಿದ್ಯುತ್ ಸಂಪರ್ಕವು ಕಡಿದು ಹಾಕಲ್ಪಡದಿದ್ದರೆ, ಕನಿಷ್ಟ ಶುಲ್ಕಗಳನ್ನು ವಿಧಿಸಲಾಗುವುದು.

ಪರೀಕ್ಷಾ–ತನಿಖೆ ನಡೆಸಿದ ಆರು[25] ವಿಭಾಗಗಳಲ್ಲಿನ 35 ನಿಷ್ಕ್ರಿಯ ಏತ ನೀರಾವರಿ ಯೋಜನೆಗಳಲ್ಲಿ ಇಲಾಖೆಯು ವಿದ್ಯುತ್ ಸಂಪರ್ಕವನ್ನು ಕಡಿದುಹಾಕುವುದರಲ್ಲಿನ ವಿಫಲತೆಯಿಂದ ರೂ.2.47 ಕೋಟಿ ಜವಾಬ್ದಾರಿಯನ್ನು ಕನಿಷ್ಟ ವಿದ್ಯುಚ್ಛಕ್ತಿ ಶುಲ್ಕಗಳ ಮೇಲೆ ವಹಿಸಿಕೊಂಡಿತು (2003–04ರಿಂದ 2007–08) ಎಂದು ದಾಖಲೆಗಳಿಂದ ಗಮನಿಸಲಾಯಿತು. ಇಲಾಖೆಯಲ್ಲಿ ಮಾಹಿತಿ ಇಲ್ಲದಿರುವುದರಿಂದ ಉಳಿದ ಏತ ನೀರಾವರಿ ಯೋಜನೆಗಳಲ್ಲಿ ಶೇಖರವಾಗಿರುವ ಜವಾಬ್ದಾರಿಯನ್ನು ನಿಶ್ಚಯಿಸಲಾಗಲಿಲ್ಲ.

### 3.3.12.4 ವಿದ್ಯುಚ್ಛಕ್ತಿ ಶುಲ್ಕಗಳ ಬಾಕಿ ಇರುವ ಪಾವತಿಗಳು

**ಏತ ನೀರಾವರಿ ಯೋಜನೆಗಳ ವಿದ್ಯುಚ್ಛಕ್ತಿ ಬಿಲ್ಲುಗಳ ನೈಜತೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ**

ಇಲಾಖೆಯ ದಾಖಲೆಗಳಂತೆ, ರೂ.10.61 ಕೋಟಿ ಮೊತ್ತದ ವಿದ್ಯುಚ್ಛಕ್ತಿ ಶುಲ್ಕಗಳ ಪಾವತಿಯ ಮೇಲಿನ ಬಿಲ್ಲುಗಳು ಮಾರ್ಚ್ 2003ರಲ್ಲಿದ್ದಂತೆ ಇತ್ಯರ್ಥವಾಗದೇ ಬಾಕಿಯಿದ್ದವು. ಅದರ ಜೊತೆಗೆ, 2003–08ರ ಅವಧಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಕೋರಲಾದ ರೂ.43.72 ಕೋಟಿ ಬೇಡಿಕೆಯ ಪೈಕಿ ರೂ.37.34 ಕೋಟಿಯು ಇಲಾಖೆಯಿಂದ ಪಾವತಿಯಾಯಿತು (ಮಾರ್ಚ್ 2008ರವರೆಗೆ) ಮತ್ತು ರೂ.9.74 ಕೋಟಿ ಮೊತ್ತದವರೆಗಿನ ಬಿಲ್ಲುಗಳು ಮಾರ್ಚ್ 2008ರ ಅಂತ್ಯದಲ್ಲಿದ್ದಂತೆ ಇತ್ಯರ್ಥವಾಗದೇ ಬಾಕಿಯಿದ್ದವು.

ದಾಖಲೆಗಳ ಪರಿಶೀಲನೆಯಲ್ಲಿ ಬಾಕಿಯಿದ್ದ ರೂ.ಒಂಬತ್ತು ಕೋಟಿಗೆ ಪ್ರತಿಯಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಎರಡು[26] ವಲಯ ಕಂಪನಿಗಳಿಂದ ರೂ.11.69 ಕೋಟಿ ಬೇಡಿಕೆ ಸಲ್ಲಿಸಲ್ಪಟ್ಟವು ಮತ್ತು ಸರ್ಕಾರದಿಂದ ಜನವರಿ 2007ರಲ್ಲಿ ಪಾವತಿಯಾದವು ಎಂದು ಗಮನಿಸಲಾಯಿತು. ರೂ.2.69 ಕೋಟಿ ಶಿಲ್ಕು ಮರುಪಾವತಿಯಾಗಿರಲಿಲ್ಲ (ಅಕ್ಟೋಬರ್ 2008). ಜೊತೆಗೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪುಸ್ತಕಗಳಲ್ಲಿ ಪ್ರತಿ ಏತ ನೀರಾವರಿ ಯೋಜನೆಯ ಪ್ರಕರಣದಲ್ಲಿ ಸರಿಹೊಂದಿಸಲಾದ ಮೊತ್ತಗಳ ವಿವರಗಳನ್ನು ಇಲಾಖೆಯು ಖಚಿತಪಡಿಸಿಕೊಳ್ಳಲಿಲ್ಲ. ಪರಿಣಾಮವಾಗಿ ವಿದ್ಯುಚ್ಛಕ್ತಿ ಶುಲ್ಕಗಳ ಬಾಕಿಯ ಸರಿ ಹೊಂದಾಣಿಕೆಯಿಲ್ಲದೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಕೋರಲಾದ ನಂತರದ ಬಾಕಿಗಳ ನೈಜತೆಯು ಇಲಾಖೆಯಿಂದ ಖಚಿತಗೊಳಿಸಲ್ಪಡಲಿಲ್ಲ.

ಮೈಸೂರು ವಿಭಾಗದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ರೂ.1.43 ಲಕ್ಷ ಮೊತ್ತದ ವಿದ್ಯುಚ್ಛಕ್ತಿ ಶುಲ್ಕಗಳ ಪಾವತಿಯ ಮಾಸಿಕ ಬೇಡಿಕೆಯು (ಮಾರ್ಚ್ 2006) ಎರಡು ಬಾರಿ ಸಲ್ಲಿಸಲ್ಪಟ್ಟಿತು (ಏಪ್ರಿಲ್ 2006 ಮತ್ತು ಮೇ 2006) ಹಾಗೂ ವಿಭಾಗೀಯ ಮಟ್ಟದಲ್ಲಿ ವಿದ್ಯುತ್ ಶುಲ್ಕಗಳ ಸಂಬಂಧವಾಗಿ ಸೂಕ್ತ ಪರೀಕ್ಷಾ ಕ್ರಮಗಳು ಮಾಡಲ್ಪಡಲಿಲ್ಲ ಎನ್ನುವುದನ್ನು ಸೂಚಿಸುವಂತೆ ಎರಡು ಪಾವತಿಯಲ್ಲಿ ಫಲಿಸುವಂತೆ ಇಲಾಖೆಯಿಂದ ಈ ಮೊತ್ತವು ಪಾವತಿಯಾಯಿತು (ನವೆಂಬರ್ 2006 ಮತ್ತು ಜನವರಿ 2007). ಇತರ ಪರೀಕ್ಷಾ ತನಿಖೆ ನಡಿಸಿದ ವಿಭಾಗಗಳಲ್ಲಿ ಈ ಉದ್ದೇಶ ಗಮನಿಸುವ ವಹಿಯನ್ನು ನಿರ್ವಹಿಸಿರಲಿಲ್ಲ.

## 3.3.13 ಹನ್ನೊಂದನೆಯ ಹಣಕಾಸು ಆಯೋಗದ ಅನುದಾನದಡಿಯಲ್ಲಿ ನಿಷ್ಕ್ರಿಯ ಮತ್ತು ರೋಗಗ್ರಸ್ತ ಏತ ನೀರಾವರಿ ಯೋಜನೆಗಳ ಪುನಶ್ಚೇತನ

ಹನ್ನೊಂದನೆಯ ಹಣಕಾಸು ಆಯೋಗದ ಶಿಫಾರಸುಗಳನ್ನು ಆಧರಿಸಿ ಭಾರತ ಸರ್ಕಾರವು ರೋಗಗ್ರಸ್ತ ಮತ್ತು ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ಪುನಶ್ಚೇತನಕ್ಕಾಗಿ 2000–05ರ ಅವಧಿಯನ್ನು ವ್ಯಾಪಿಸುವಂತೆ ಅನುದಾನವನ್ನು ಬಿಡುಗಡೆ ಮಾಡಿತು. ಸ್ಥಳ ಅಧ್ಯಯನ ಮತ್ತು ಫಲಾನುಭವಿಗಳ

[25] ಬಳ್ಳಾರಿ, ಗುಲ್ಬರ್ಗ, ಕುಷ್ಟಗಿ, ಚಿತ್ರದುರ್ಗ, ಬಿಜಾಪುರ ಮತ್ತು ಧಾರವಾಡ

[26] ಗುಲ್ಬರ್ಗ ಮತ್ತು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗಳು

ಜೊತೆ ಸಮಾಲೋಚನೆಯೊಂದಿಗೆ ಸ್ಥಳೀಯ ಅಗತ್ಯತೆಗಳ ನಿಷ್ಕರ್ಷೆಯ ನಂತರ ವಿಭಾಗೀಯ ಅಧಿಕಾರಿಗಳಿಂದ ಪುನಶ್ಚೇತನಗೊಳಿಸಬೇಕೆಂದು ಸರ್ಕಾರದಿಂದ ನೀಡಲಾದ (2002) ಮಾರ್ಗದರ್ಶಿ ಸೂತ್ರಗಳು ಸೂಚಿಸುತ್ತವೆ. ಮುಂದುವರೆದು, ನೀರಿನ ಲಭ್ಯತೆ ಮತ್ತು ಸಾಕಷ್ಟು ವಿದ್ಯುಚ್ಛಕ್ತಿಯನ್ನು ಖಚಿತಪಡಿಸಿಕೊಳ್ಳುವ ಅಗತ್ಯವಿದ್ದಿತು. ಈ ಉದ್ದೇಶಕ್ಕಾಗಿ ಏತ ನೀರಾವರಿ ಯೋಜನೆಗಳನ್ನು ಅತಿ ಹೆಚ್ಚಿನ ಬಳಕೆಗೆ ತರಲು ಪುನಶ್ಚೇತನದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಇಲಾಖೆಗೆ ಅನುಕೂಲವಾಗಲು ಏತ ನೀರಾವರಿ ಯೋಜನೆಯ ವರ್ತಮಾನ ಸ್ಥಿತಿ ಮತ್ತು ಕಾಲುವೆಗಳು ಸೇರಿದಂತೆ ಭಾಗಗಳ ದುರಸ್ತಿ/ಬದಲಾವಣೆಯ ಅಗತ್ಯವನ್ನು ಸೂಚಿಸುವ ಒಂದು ತಪಶೀಲು ಪಟ್ಟಿಯನ್ನು ತಯಾರಿಸುವ ಅಗತ್ಯವಿದ್ದಿತು. ಕಾಮಗಾರಿಗಳ ಹಕ್ಕುಬೇಡಿಕೆಗಳನ್ನು ಮಾರ್ಚ್ 2005ರ ಮೊದಲು ಸಲ್ಲಿಸಬೇಕಿತ್ತು.

**86 ಏತ ನೀರಾವರಿ ಯೋಜನೆಗಳನ್ನು ರೂ.12.34 ಕೋಟಿ ವೆಚ್ಚದಲ್ಲಿ ಪುನಶ್ಚೇತನಗೊಳಿಸಿದರೂ ನೀರು, ವಿದ್ಯುತ್, ದುರಸ್ತಿ ಮುಂತಾದವುಗಳ ಅಲಭ್ಯತೆಯಿಂದ ನಿಷ್ಕ್ರಿಯವಾಗಿ ಉಳಿದವು**

77,608 ಹೆಕ್ಟೇರ್ ಅಚ್ಚುಕಟ್ಟಿನ ಸ್ಥಿರೀಕರಣಕ್ಕಾಗಿ 308 ಕಾಮಗಾರಿಗಳು ಸೇರಿರುವ ರೂ.55.22 ಕೋಟಿಯ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯಿಂದ ಅನುಮೋದಿಸಲ್ಪಟ್ಟ (ಮಾರ್ಚ್ 2001) ಒಂದು ಕ್ರಿಯಾ ಯೋಜನೆಯ ಮೇಲೆ ಆಧರಿಸಿ ಸರ್ಕಾರವು 2000–01ರಿಂದ 2004–05ರವರೆಗಿನ ಅವಧಿಯಲ್ಲಿ ರೋಗಗ್ರಸ್ತ ಮತ್ತು ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ಪುನ:ಸ್ಥಾಪನೆ/ಪುನಶ್ಚೇತನವನ್ನು ಅನುಮೋದಿಸಿತು (ಫೆಬ್ರವರಿ 2002). ಇಲಾಖೆಯ ಮುಕ್ತಾಯದ ಪ್ರಮಾಣಪತ್ರದಂತೆ (ಆಗಸ್ಟ್ 2005) 256 ಕಾಮಗಾರಿಗಳು ರೂ.55.50 ಕೋಟಿ ವೆಚ್ಚದಲ್ಲಿ ಪುನಶ್ಚೇತನಗೊಂಡವು ಮತ್ತು 32,853 ಹೆಕ್ಟೇರು ಅಚ್ಚುಕಟ್ಟು ಪೂರ್ವಸ್ಥಿತಿಗೆ ತರಲಾಯಿತೆಂದು ಘೋಷಿತವಾದವು (ಆಗಸ್ಟ್ 2005).

ಲೆಕ್ಕಪರಿಶೋಧನೆಯು ಗಮನಿಸಿದಂತೆ ಮೇಲಿನ 256 ಏತ ನೀರಾವರಿ ಯೋಜನೆಗಳ ಕಾಮಗಾರಿಗಳ ಪೈಕಿ 19,581 ಹೆಕ್ಟೇರ್ ಅಚ್ಚುಕಟ್ಟನ್ನು ನೀರಾವರಿಗೊಳಿಸಲು ರೂ.12.34 ಕೋಟಿ ವೆಚ್ಚದಲ್ಲಿ ಪುನಶ್ಚೇತನವಾದ 86 ಏತ ನೀರಾವರಿ ಯೋಜನೆಗಳು ಕೆಳಗೆ ವಿವರಿಸಿರುವಂತಹ ಹಲವಾರು ಕಾರಣಗಳಿಂದ ಕ್ರಿಯಾಶೀಲವಾಗಿರಲಿಲ್ಲ.

**ಕೋಷ್ಟಕ 3 : ಪುನಶ್ಚೇತನವಾದ ನಿಷ್ಕ್ರಿಯ ಏತ ನೀರಾವರಿ ಯೋಜನೆಗಳು**

| ಏತ ನೀರಾವರಿ ಯೋಜನೆಗಳ ಸಂಖ್ಯೆ | ಅಚ್ಚುಕಟ್ಟು (ಹೆಕ್ಟೇರ್‌ಗಳಲ್ಲಿ) | ವೆಚ್ಚ (ಕೋಟಿ ರೂಪಾಯಿಗಳಲ್ಲಿ) | ನಿಷ್ಕ್ರಿಯತೆಗೆ ಕಾರಣಗಳು |
|---|---|---|---|
| 26 | 3,293 | 2.84 | ನೀರಿನ ಮೂಲವಿಲ್ಲ |
| 21 | 4,587 | 3.72 | ವಿದ್ಯುತ್ ಇಲ್ಲ |
| 15 | 4,864 | 1.92 | ದುರಸ್ತಿಗಳ ಅಗತ್ಯಕ್ಕಾಗಿ |
| 24 | 6,837 | 3.86 | ನೀರಿನ ಬೇಡಿಕೆಯಿಲ್ಲ/ಭಾರಿ/ಮಧ್ಯಮ ಯೋಜನೆಗಳ ಜೊತೆ ಅಚ್ಚುಕಟ್ಟಿನ ಮೇಲು ವ್ಯಾಪಿಸುವಿಕೆ |
| **86** | **19,581** | **12.34** | |

ಪರೀಕ್ಷಾ–ತನಿಖೆ ನಡೆಸಲಾದ ವಿಭಾಗಗಳಲ್ಲಿ ಮೈಸೂರು ವಿಭಾಗದ ವಿನಹ ತಪಶೀಲು ಪಟ್ಟಿಯು ದಾಖಲೆಯಲ್ಲಿರಲಿಲ್ಲ ಎನ್ನುವುದನ್ನು ಗಮನಿಸಲಾಯಿತು. ಚಿತ್ರದುರ್ಗ ವಿಭಾಗದಲ್ಲಿ ನೀರಿನ ಅಗತ್ಯತೆಯಿಂದ ನಿಷ್ಕ್ರಿಯವೆಂದು ಗುರುತಿಸಲಾದ ಏಳು ಏತ ನೀರಾವರಿ ಯೋಜನೆಗಳು ದುರಸ್ತಿಗಳು ಮತ್ತು ಯಂತ್ರಗಳ ಬದಲಾವಣೆಗಾಗಿ ರೂ.68 ಲಕ್ಷ ವೆಚ್ಚದಲ್ಲಿ ತೆಗೆದುಕೊಳ್ಳಲ್ಪಟ್ಟವು.

### 3.3.13.1 ನಿಧಿಗಳ ಮಾರ್ಗಪಲ್ಲಟ

**ಪುನಶ್ಚೇತನ ಕಾಮಗಾರಿಗಾಗಿ ಒದಗಿಸಿದ್ದ ನಿಧಿಗಳನ್ನು ಕೆರೆಗಳು ಮತ್ತು ಬಂದಾರಗಳ ನಿರ್ಮಾಣಕ್ಕಾಗಿ ಮಾರ್ಗಪಲ್ಲಟ ಮಾಡಲಾಯಿತು**

ಒಂದು ನಿಷ್ಕ್ರಿಯ ಯೋಜನೆಯ ನೀರೆತ್ತುವ ಸ್ಥಳವನ್ನು ಪುನ: ಸ್ಥಾಪಿಸುವ ಒಂದು ಬಂದಾರ ಅಥವಾ ಇತರ ಯಾವುದೇ ಕಟ್ಟಡವನ್ನು ನಿರ್ಮಿಸಲು ಹನ್ನೊಂದನೆಯ ಹಣಕಾಸು ಆಯೋಗದ ಮಾರ್ಗದರ್ಶಿ ಸೂತ್ರಗಳು ಅನುವು ಮಾಡಿವೆ. ಆದಾಗ್ಯೂ ಮೂರು[27] ವಿಭಾಗಗಳಿಂದ ಹನ್ನೊಂದನೆಯ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಕೆರೆ/ಬಂದಾರ ಕಾಮಗಾರಿಗಳು ಯಾವುದೇ ಅಸ್ತಿತ್ವದಲ್ಲಿರುವ ಏತ ನೀರಾವರಿ ಯೋಜನೆಗಳಿಗೆ ನೀರುಣಿಸುವುದಕ್ಕೆ ಸಂಬಂಧಿತವಲ್ಲದಿದ್ದರೂ ರೂ.10.71 ಕೋಟಿ ಒಟ್ಟು ಮೊತ್ತದ ನಾಲ್ಕು ಬಂದಾರಗಳು ಮತ್ತು ಆರು ಕೆರೆಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಯಿತು. ಇವುಗಳ ಪೈಕಿ ಮಾರ್ಚ್ 2005ಕ್ಕೆ ಮುಂಚಿತವಾಗಿ ಮುಕ್ತಾಯವಾದ ಒಂದು ಬಂದಾರ–ಸೇತುವೆಯ ಮೇಲೆ ರೂ.8.38 ಕೋಟಿ ವೆಚ್ಚ ಮಾಡಲಾಯಿತು ಮತ್ತು ಕಾಮಗಾರಿಯ ಅಂದಾಜು ವೆಚ್ಚವನ್ನು

[27] ಬಿಜಾಪುರ, ಬೆಳಗಾವಿ ಮತ್ತು ಗುಲ್ಬರ್ಗ

ರೂ.16.70 ಕೋಟಿಗೆ ಪರಿಷ್ಕರಿಸಿದ ನಂತರ (ಮೇ 2007), ಬಾಕಿ ವೆಚ್ಚ ರೂ.8.32 ಕೋಟಿಯನ್ನು ರಾಜ್ಯ ಆಯವ್ಯಯದಿಂದ ಮಾಡಲಾಯಿತು. ಮೈಸೂರು ವಿಭಾಗದಲ್ಲಿ ರೂ.5.27 ಲಕ್ಷ ಮೊತ್ತದ ಸಾದಿಲ್ವಾರು ವೆಚ್ಚಗಳು (ಬಾಡಿಗೆ, ದೂರವಾಣಿ ಬಿಲ್ಲುಗಳು, ವಿದ್ಯುಚ್ಛಕ್ತಿ ಬಿಲ್ಲುಗಳು, ಇತ್ಯಾದಿ) ಹನ್ನೊಂದನೆಯ ಹಣಕಾಸು ಆಯೋಗದ ನಿಧಿಗಳಿಂದ ಮಾಡಲ್ಪಟ್ಟವು.

## 3.3.14 ನೀರಿನ ದರಗಳು

ರಾಷ್ಟ್ರೀಯ ಜಲ ನೀತಿ, 2002ರ ಅಡಿಯಲ್ಲಿನ ಮಾರ್ಗದರ್ಶಿ ಸೂತ್ರಗಳಂತೆ ನೀರಿನ ಶುಲ್ಕಗಳು ಕನಿಷ್ಟಪಕ್ಷ ಪ್ರಾರಂಭದಲ್ಲಿ ಸೇವೆ ಒದಗಿಸುವ ಕಾರ್ಯಾಚರಣೆ ಮತ್ತು ನಿರ್ವಹಣಾ ಶುಲ್ಕಗಳು ಮತ್ತು ನಂತರದಲ್ಲಿ ಬಂಡವಾಳ ವೆಚ್ಚದ ಒಂದು ಭಾಗವನ್ನು ವ್ಯಾಪಿಸುವಂತೆ ನಿಗದಿಯಾಗಬೇಕು. ನೀರಿನ ದರಗಳು ಕರ್ನಾಟಕ ನೀರಾವರಿ ನಿಯಮ, 1965ರ ಅಡಿಯಲ್ಲಿ ಸರ್ಕಾರದಿಂದ ಈ ಹಿಂದೆ ಜುಲೈ 2000ದಲ್ಲಿ ಪರಿಷ್ಕೃತವಾದವು. ನಿಯಮದಂತೆ ಕಂದಾಯ ಇಲಾಖೆಯಿಂದ ವಸೂಲಾತಿಯಾಗಿ ಬೇಡಿಕೆ ಸಲ್ಲಿಸುವ ನಿರ್ದಿಷ್ಟ ದಿನಾಂಕದ[28] ಮೊದಲು ವಿಭಾಗೀಯ ಅಧಿಕಾರಿಯು ಒಂದು ಅಧಿಸೂಚನೆಯನ್ನು ನೀಡುವ ಅಗತ್ಯವಿದೆ. ಏತ ನೀರಾವರಿ ಯೋಜನೆಗಳ ಮೂಲಕ ಒದಗಿಸಲಾಗಿದ್ದ ನೀರಾವರಿಗೆ ನೀರಿನ ದರಗಳು ತರೀ ಬೆಳೆಗಳಾದ ಕಬ್ಬು, ಭತ್ತಕ್ಕೆ ಸಾಧಾರಣ ದರಗಳ[29] ಮೂರು ಪಟ್ಟು ಮತ್ತು ಇತರ ಬೆಳೆಗಳಿಗೆ ಸಾಧಾರಣ ದರಗಳ ಎರಡು ಪಟ್ಟು ನಿಗದಿಯಾಗಿದ್ದವು. 2002–03ರಿಂದ 2006–07ರವರೆಗಿನ ಅವಧಿಯಲ್ಲಿ ಮಾಡಲಾದ ನೀರಿನ ದರದ ಬೇಡಿಕೆ ಮತ್ತು ಮಾಡಲಾದ ನಿರ್ವಹಣಾ ವೆಚ್ಚದ ವರ್ಷಾವಾರು ಸ್ಥಿತಿಯು ಕೆಳಗಿನಂತಿತ್ತು.

**ಕೋಷ್ಟಕ 4 : ನೀರಿನ ದರದ ವರ್ಷಾವಾರು ಬೇಡಿಕೆ**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ನಿರ್ವಹಣಾ ವೆಚ್ಚ | ಮಾಡಲಾದ ಬೇಡಿಕೆ |
|---|---|---|
| 2002–03 | 11.10 | 0.31 |
| 2003–04 | 7.22 | 0.32 |
| 2004–05 | 7.96 | 0.95 |
| 2005–06 | 13.33 | 1.16 |
| 2006–07 | 23.21 | 1.20 |
| **ಒಟ್ಟು** | **62.82** | **3.94** |

2002–03ರಿಂದ 2006–07ರ ಅವಧಿಯಲ್ಲಿ ಮಾಡಲಾದ ಬೇಡಿಕೆಯು ರಾಷ್ಟ್ರೀಯ ಜಲನೀತಿಗೆ ಅನುಗುಣವಾಗಿರಲಿಲ್ಲ ಏಕೆಂದರೆ ಅದು 2002–07ರ ಅವಧಿಯ ನಿರ್ವಹಣಾ ವೆಚ್ಚದ ಶೇಕಡ ಆರರಷ್ಟು ಮಾತ್ರವೇ ಆಗಿತ್ತು.

ಪರೀಕ್ಷಾ–ತನಿಖೆ ನಡೆಸಿದ ಯಾವುದೇ ವಿಭಾಗಗಳು ನೀರಿನ ದರಗಳ ವಸೂಲಾತಿಯ ವಿವರಗಳನ್ನು ನಿರ್ವಹಿಸಿರಲಿಲ್ಲ.

### 3.3.14.1 ಕ್ರಿಯಾಶೀಲ ಏತ ನೀರಾವರಿ ಯೋಜನೆಗಳ ಸಂಬಂಧದಲ್ಲಿ ನೀರಿನ ದರ ಬೇಡಿಕೆಯಲ್ಲಿ ವಿಫಲತೆ

2003–08ರ ಅವಧಿಯಲ್ಲಿ ರೂ.94 ಲಕ್ಷ ವೆಚ್ಚದಲ್ಲಿ ನಿರ್ವಹಿಸಲ್ಪಟ್ಟ 10 ಕ್ರಿಯಾಶೀಲ ಏತ ನೀರಾವರಿ ಯೋಜನೆಗಳ ಸಂಬಂಧದಲ್ಲಿ ಬಳಕೆದಾರರ ವಿರುದ್ಧ ನೀರಿನ ದರ ಬೇಡಿಕೆಯನ್ನು ಸಲ್ಲಿಸಿರಲಿಲ್ಲ ಎಂಬುದನ್ನು ಪರೀಕ್ಷಾ–ತನಿಖೆ ನಡೆಸಲಾದ ಐದು ವಿಭಾಗಗಳ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಇದಕ್ಕೆ ಕಾರಣಗಳು ಲಭ್ಯವಿರಲಿಲ್ಲ. ಬಳ್ಳಾರಿ ವಿಭಾಗದಲ್ಲಿ ರೂ.1.11 ಲಕ್ಷ ಆದಾಯವನ್ನು ಬಿಟ್ಟುಬಿಡಲಾಯಿತು, ಏಕೆಂದರೆ 2003–08ರ ಅವಧಿಯಲ್ಲಿ ಮೂರು ಏತ ನೀರಾವರಿ ಯೋಜನೆಗಳ ಸಂಬಂಧದಲ್ಲಿ ನಿಯಮದಂತೆ ಅಗತ್ಯವಾಗಿದ್ದ ಅಧಿಸೂಚನೆಯು ವಿಭಾಗೀಯ ಅಧಿಕಾರಿಯಿಂದ ನೀಡಲ್ಪಡಲಿಲ್ಲ.

[28] ಮುಂಗಾರು (31 ಆಗಸ್ಟ್), ಹಿಂಗಾರು (31 ಡಿಸೆಂಬರ್) ಮತ್ತು ಬೇಸಿಗೆ (31 ಮಾರ್ಚ್)

[29] ಸಾಧಾರಣ ದರಗಳೆಂದರೆ ಕೆರೆಗಳು, ಬಂದಾರಗಳು ಮುಂತಾದವುಗಳ ಮೂಲಕ ನೀರಾವರಿಯಾಗುವುದಕ್ಕೆ ಅನ್ವಯಿಸುವ ದರಗಳು

ಗುಲ್ಬರ್ಗ ಮತ್ತು ಚಿತ್ರದುರ್ಗ ವಿಭಾಗಗಳಲ್ಲಿ (2006–07), ನೀರಿನ ದರವು ಸಾಧಾರಣ ದರದ ಜೊತೆ ದಂಡರೂಪದ ದರದಲ್ಲಿ (ಬೆಳೆ ಮಾದರಿಯ ಉಲ್ಲಂಘನೆಗಾಗಿ) ಬೇಡಿಕೆಯಾದವು. ಆದರೆ ಏತ ನೀರಾವರಿ ಯೋಜನೆಗಳ ನೀರಾವರಿ ಪ್ರದೇಶದಲ್ಲಿ ಬೆಳೆಸುವ ಬೆಳೆಗಳ ಪ್ರಕಾರಗಳು ಮತ್ತು ವ್ಯಾಪ್ತಿಯ ವಿವರಗಳನ್ನು ನಿರ್ವಹಿಸಿರಲಿಲ್ಲ. ಇದರ ಪರಿಣಾಮವಾಗಿ ಸಲ್ಲಿಸಿದ ಬೇಡಿಕೆಯ ನೈಜತೆಯನ್ನು ಪರಿಶೀಲಿಸಲಾಗಲಿಲ್ಲ.

### 3.3.14.2 ಬೆಳೆ ಮಾದರಿಯಲ್ಲಿ ಉಲ್ಲಂಘನೆ

ತರೀ ಬೆಳೆಗಳ ಸಂಬಂಧದಲ್ಲಿ ಪ್ರತಿ ಹೆಕ್ಟೇರಿಗೆ ನೀರಿನ ಅಗತ್ಯತೆಯು ಇತರ ಬೆಳೆಗಳೊಂದಿಗೆ ಹೋಲಿಸಿದಾಗ ಭಿನ್ನವಾಗಿರುತ್ತದೆ ಮತ್ತು ನೀರಿನ ದರಗಳು ಭಿನ್ನವಾಗಿ ನಿಗದಿಯಾಗುತ್ತಿದ್ದವು. ಬೆಳೆ ಮಾದರಿಯ ಉಲ್ಲಂಘನೆಯು ವಿನ್ಯಾಸಿತ ನಿರ್ದಿಷ್ಟವಾಗಿ ವ್ಯಾಪ್ತಿಯ ಅಂಚಿನ ಅಚ್ಚುಕಟ್ಟಿಗೆ ನೀರಿನ ಲಭ್ಯತೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡುತ್ತಿದ್ದ ಕಾರಣ ಉದ್ದೇಶಿತ ಫಲಾನುಭವಿಗಳ ಮಧ್ಯೆ ನೀರು ಅನುಕೂಲಕರವಾಗಿ ಹಂಚಿಕೆಯಾಗುವುದನ್ನು ಇಲಾಖೆಯು ನಿಶ್ಚಯಪಡಿಸಿಕೊಳ್ಳಬೇಕಿತ್ತು. ಮುಂದುವರೆದು, ಬೆಳೆ ಮಾದರಿಯ ಉಲ್ಲಂಘನೆಯ ಪ್ರಕರಣಗಳಲ್ಲಿ ಸಾಧಾರಣ ನೀರಿನ ದರದ ಐದು ಪಟ್ಟಿನಷ್ಟು ವಸೂಲಾತಿಯನ್ನು ಜಾರಿಗೊಳಿಸಬೇಕಾಗಿತ್ತು. ಪರೀಕ್ಷಾ–ತನಿಖೆ ನಡೆಸಲಾದ ಐದು[30] ವಿಭಾಗಗಳ ದಾಖಲೆಗಳ ಪರಿಶೀಲನೆಯು 6,923 ಹೆಕ್ಟೇರ್ ಅಚ್ಚುಕಟ್ಟಿನಲ್ಲಿ ಬೆಳೆ ಮಾದರಿಯ ಉಲ್ಲಂಘನೆಯ ಪ್ರಕರಣಗಳನ್ನು ತಿಳಿಯಪಡಿಸಿದವು. ಇಲಾಖೆಯು ನಾಲ್ಕು ವಿಭಾಗಗಳಲ್ಲಿ 5,467 ಹೆಕ್ಟೇರಿನಲ್ಲಿ ಬೆಳೆ ಮಾದರಿಯ ಉಲ್ಲಂಘನೆಗಾಗಿ ರೂ.1.63 ಕೋಟಿ ಮೊತ್ತದ ದಂಡವನ್ನು ವಿಧಿಸಿತು. ಆದರೆ ಆ ಮೊತ್ತದ ವಸೂಲಾತಿಯನ್ನು ಗಮನಿಸುತ್ತಿರಲಿಲ್ಲ.

## 3.3.15 ನೀರು ಬಳಕೆದಾರರ ಸಂಘಗಳ ರಚನೆಯಾಗದಿರುವಿಕೆ

ರಾಷ್ಟ್ರೀಯ ಜಲನೀತಿಯ ಮಾರ್ಗದರ್ಶಿ ಸೂತ್ರಗಳನುಸಾರ ನೀರು ಬಳಕೆದಾರರ ಸಂಘಗಳು ಸ್ಥಾಪನೆಯಾಗಬೇಕಾದ ಅಗತ್ಯತೆಯಿದ್ದಿತು ಮತ್ತು 1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ, 1960ರ ಅಡಿಯಲ್ಲಿ ನೋಂದಣಿಯಾಗಬೇಕಿತ್ತು. ಹನ್ನೊಂದನೆಯ ಹಣಕಾಸು ಆಯೋಗದ ಅನುದಾನಗಳಡಿಯಲ್ಲಿ ಪುನಶ್ಚೇತನಗೊಂಡ ಏತ ನೀರಾವರಿ ಯೋಜನೆಗಳು ಮುಂದಿನ ನಿರ್ವಹಣೆಗಾಗಿ ಮತ್ತು ನೀರಿನ ದರಗಳ ಸಂಗ್ರಹಣೆಗಾಗಿ ಈ ನೀರು ಬಳಕೆದಾರರ ಸಂಘಗಳಿಗೆ ಹಸ್ತಾಂತರವಾಗಬೇಕಿದ್ದವು.

ಅವಶ್ಯಕವಾಗಿದ್ದ 370 ನೀರು ಬಳಕೆದಾರರ ಸಂಘಗಳ ಸ್ಥಾಪನೆಗೆ ಪ್ರತಿಯಾಗಿ ಮಾರ್ಚ್ 2008ರಲ್ಲಿದ್ದಂತೆ ಕೇವಲ 92 ಸ್ಥಾಪನೆಯಾದವು ಮತ್ತು ಯಾವ ಸಂಘಗಳೂ ನೋಂದಣಿಯಾಗಿರಲಿಲ್ಲ. ಇದರಿಂದ 2003–04ರಿಂದ 2006–07ರ ಅವಧಿಗೆ ರೂ.51.72 ಕೋಟಿಗೆ ಲೆಕ್ಕ ಮಾಡಲಾದ ನಿರ್ವಹಣಾ ವೆಚ್ಚ ಭರಿಸಿರುವುದನ್ನು ಇಲಾಖೆಯು ಮುಂದುವರೆಸಿತು. ಯಾವುದೇ ಯೋಜನೆಗಳು ನಿರ್ವಹಣೆಗಾಗಿ ನೀರು ಬಳಕೆದಾರರ ಸಂಘಗಳಿಗೆ ಹಸ್ತಾಂತರವಾಗದ ಕಾರಣ, ರೈತರ ಸಕ್ರಿಯ ಭಾಗವಹಿಸುವಿಕೆಯಿಂದ ನೀರಿನ ಮೇಲ್ವಿಚಾರಣೆಗೆ ಮತ್ತು ಯೋಜನೆಗಳ ನಿರ್ವಹಣೆಯನ್ನು ಉತ್ತೇಜಿಸುವ ಉದ್ದೇಶವು ಈಡೇರಲಿಲ್ಲ.

## 3.3.16 ಇತರೆ ವಿಷಯಗಳು

### 3.3.16.1 ಸಾಕಷ್ಟಿಲ್ಲದ ಮತ್ತು ತರಬೇತಿ ರಹಿತ ಮಾನವಶಕ್ತಿ

ಯೋಜನೆಯ ಚಾಲನೆ ಮತ್ತು ನಿರ್ವಹಣೆಯ ಸ್ಥಾವರ, ಯಂತ್ರ, ಉಪಕರಣ ಇತ್ಯಾದಿಗಳು ತಾಸಿಗೊಮ್ಮೆ ಮತ್ತು ದಿನವಹಿ ಚಾಲನೆಯಿಂದ ಕೂಡಿರುತ್ತದೆ; ಇವು ಓರ್ವ ನಿರ್ವಾಹಕನಿಂದ ಅನುಸರಿಸಲ್ಪಡುವ ಅಗತ್ಯವಿರುತ್ತದೆ. ಈ ಉದ್ದೇಶಕ್ಕಾಗಿ ಕಾರ್ಯಭಾರ ವಹಿಸಲ್ಪಟ್ಟ ನಿರ್ವಾಹಕರುಗಳು ತರಬೇತಿ ಹೊಂದಿರಬೇಕು. ನೀರಿನ ಪರಿಣಾಮಕಾರಿ ಹಂಚಿಕೆಯನ್ನು ಖಚಿತಪಡಿಸಿಕೊಳ್ಳಲು ಸೌಡಿಗಳ[31]

[30] ಚಿತ್ರದುರ್ಗ, ಬಳ್ಳಾರಿ, ಬೆಳಗಾವಿ, ಕುಷ್ಟಗಿ ಮತ್ತು ಗುಲ್ಬರ್ಗ

[31] ನೀರಾವರಿಯಾಗಬಲ್ಲ ಪ್ರದೇಶಗಳಿಗೆ ನೀರಿನ ಸರಬರಾಜನ್ನು ನಿಯಂತ್ರಿಸಲು ಆಯೋಜಿಸಲ್ಪಟ್ಟ ವ್ಯಕ್ತಿಗಳು

ಸೇವೆಯು ಅವಶ್ಯಕವಾಗಿದೆ. ದಾಖಲೆಗಳು ತಿಳಿಯಪಡಿಸಿದಂತೆ ಮೇಲಿನ ಸಿಬ್ಬಂದಿಯ ಅವಶ್ಯಕತೆಯು ಇಲಾಖೆಯಿಂದ ನಿಷ್ಕರ್ಷಿಸಲ್ಪಡಲಿಲ್ಲ. ಕ್ರಿಯಾಶೀಲ 141 ಏತ ನೀರಾವರಿ ಯೋಜನೆಗಳಿಗೆ ಪ್ರತಿಯಾಗಿ 88 ಸೌಡಿಗಳ ಮತ್ತು 80 ಪಂಪು ನಿರ್ವಾಹಕರ ಸೇವೆಗಳು ಲಭ್ಯವಿದ್ದವು ಮತ್ತು ಅವರಲ್ಲಿ ಯಾರಿಗೂ ಏತ ನೀರಾವರಿ ಯೋಜನೆಗಳ ನಿರ್ವಹಣೆಯಲ್ಲಿ ತರಬೇತಿಯಾಗಿರಲಿಲ್ಲ.

### 3.3.16.2 ಆಸ್ತಿ ದಾಖಲೆ ವಹಿ

ಇಲಾಖೆಯ ವಿಲೇವಾರಿಯಲ್ಲಿರುವ ಆಸ್ತಿಗಳ ವಿವರಗಳನ್ನು ಒದಗಿಸುವಂತಹ ಅವುಗಳ ಪುಸ್ತಕ ಮೌಲ್ಯವನ್ನು ಸೂಚಿಸುವಂತಹ ಆಸ್ತಿ ದಾಖಲೆ ವಹಿಗಳನ್ನು ವಿಭಾಗಗಳು ನಿರ್ವಹಿಸಬೇಕಾದ ಅಗತ್ಯವಿದೆ. ನಿರ್ವಹಿಸಲಾಗಿದ್ದ ಆಸ್ತಿ ದಾಖಲೆ ವಹಿಗಳು ಆಸ್ತಿಗಳ ಬೆಲೆ ಮತ್ತು ಅವುಗಳಿಗೆ ಮಾಡಿದ ಸೇರ್ಪಡೆಗಳು ಅಥವಾ ಮಾರ್ಪಾಟುಗಳನ್ನು ಸೂಚಿಸಿರಲಿಲ್ಲ. ನಿಷ್ಕ್ರಿಯ ಏತ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಯಂತ್ರಗಳನ್ನು ಸರ್ಕಾರಕ್ಕೆ ಅತ್ಯುತ್ತಮ ಲಾಭವಾಗುವಂತೆ ವರ್ಗಾವಣೆ ಅಥವಾ ವಿಲೇವಾರಿ ಮಾಡಲು ಸರ್ಕಾರವು ಸೂಚನೆಗಳನ್ನು ನೀಡಿತು (ಮೇ 2005). ಆದರೆ, ನಿಷ್ಕ್ರಿಯ ಏತ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಯಂತ್ರಗಳ ಕಾರ್ಯಶೀಲ ಸ್ಥಿತಿಯು ಅವುಗಳನ್ನು ಮುಂದುವರೆಯುತ್ತಿರುವ ಕಾಮಗಾರಿಗಳಲ್ಲಿ ಬಳಸಲು ಅಥವಾ ಅವುಗಳನ್ನು ವಿಲೇವಾರಿ ಮಾಡಲು ನಿಷ್ಕರ್ಷಿತವಾಗಲಿಲ್ಲ. ಪರೀಕ್ಷಾ–ತನಿಖೆ ನಡೆಸಿದ ಯಾವುದೇ ವಿಭಾಗಗಳಲ್ಲಿ ಕಳಚಿದ ಯಂತ್ರಗಳಿಗಾಗಿ ಲೆಕ್ಕಪತ್ರಗಳನ್ನು ಕೂಡ ನಿರ್ವಹಿಸಿರಲಿಲ್ಲ. ಪರೀಕ್ಷಾ–ತನಿಖೆ ನಡೆಸಲಾದ ಎರಡು ವಿಭಾಗಗಳಲ್ಲಿ (ಬಿಜಾಪುರ ಮತ್ತು ಚಿತ್ರದುರ್ಗ) 47 ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ಸಂಬಂಧದಲ್ಲಿ ಯಂತ್ರಗಳು ಲಭ್ಯವಿರಲಿಲ್ಲವೆಂದು ವರದಿಯಾಯಿತು. ಆದಾಗ್ಯೂ, ಯಂತ್ರಗಳ ನಷ್ಟವನ್ನು ತನಿಖೆ ನಡೆಸುವ ಮತ್ತು ಜವಾಬ್ದಾರಿಯನ್ನು ನಿಗದಿಪಡಿಸುವ ಬಗ್ಗೆ ಯಾವುದೇ ಕ್ರಮವು ಪ್ರಾರಂಭವಾಗಿಲ್ಲ.

## 3.3.17 ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಸಂಹಿತೆಯ ಉಪಬಂಧಗಳು, ಇಲಾಖಾ ಸೂಚನೆಗಳು ಮತ್ತು ರಾಷ್ಟ್ರೀಯ ಜಲನೀತಿ 2002, ಇವು ಬಿಗಿಯಾದ ಆರ್ಥಿಕ ಶಿಸ್ತಿನ ಜಾರಿಗೊಳಿಸುವಿಕೆಯಿಂದ ಕಾಮಗಾರಿಗಳು ಸಕಾಲದಲ್ಲಿ ಮತ್ತು ಮಿತವ್ಯಯದಲ್ಲಿ ನಿರ್ವಹಣೆಯಾಗಲು ಯೋಜನೆಗಳ ನಿಕಟ ಉಸ್ತುವಾರಿ ಮತ್ತು ಮೇಲ್ವಿಚಾರಣೆಯನ್ನು ವಿಧಿಸುತ್ತವೆ. ಯೋಜನೆಗಳ ಯಶಸ್ಸು ಅಥವಾ ವಿಫಲತೆಯನ್ನು ತೀರ್ಮಾನಿಸಲು ಅಗತ್ಯವಾಗುವಂತಹ ಯೋಜನೆಯ ಸಾಮರ್ಥ್ಯ ಹಾಗೂ ಸಾಮಾಜಿಕ–ಆರ್ಥಿಕ ಪ್ರಭಾವದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವ ಒಂದು ವ್ಯವಸ್ಥೆಯಿರಬೇಕು.

ಎರಡು ಏತ ನೀರಾವರಿ ಯೋಜನೆ ನೀರಾವರಿ ಯೋಜನೆಗಳನ್ನು ಹೊರತುಪಡಿಸಿ ಯೋಜನೆಗಳ ಸಾಮಾಜಿಕ–ಆರ್ಥಿಕ ಪ್ರಭಾವದ ಮತ್ತು ಸಾಮರ್ಥ್ಯವನ್ನು ನಿಷ್ಕರ್ಷಿಸಲು ಮೌಲ್ಯಮಾಪನ ನಡೆಸಲಿಲ್ಲ ಎಂದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಬಾಹ್ಯ ಏಜೆನ್ಸಿಗಳಿಂದ ನಡೆಸಲ್ಪಟ್ಟ (2005–07) ಈ ಎರಡು ಯೋಜನೆಗಳ ಮೌಲ್ಯಮಾಪನ ವರದಿಯ ಪರಿಶೀಲನೆಯು ತಿಳಿಸಿದ್ದೇನೆಂದರೆ ಭೂ ಸರ್ವೇಕ್ಷಣೆ, ಅಂದಾಜು, ಉದ್ದೇಶಿತ ಮತ್ತು ಸಾಧಿಸಿದ ಅಚ್ಚುಕಟ್ಟಿನ ನಡುವೆ ಅಸಮತೆಯಲ್ಲಿನ ಕೊರತೆಗಳು ಏಜೆನ್ಸಿಗಳಿಗೆ ಉಲ್ಲೇಖಿಸಲ್ಪಟ್ಟಿದ್ದರೂ ಹೊರಬರಲಿಲ್ಲ. ಒಂದು ಪ್ರಕರಣದಲ್ಲಿ ಒಂದು ಬೃಹತ್ ನೀರಾವರಿ ಯೋಜನೆಯ ಜೊತೆ ಮೇಲುವ್ಯಾಪಿಸುತ್ತಿದ್ದ ಒಂದು ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಮೌಲ್ಯಮಾಪನ ನಡೆಸಲಾಯಿತು. ಏತ ನೀರಾವರಿ ಯೋಜನೆಗಳ ಆರ್ಥಿಕ ಕಾರ್ಯಸಾಧ್ಯತೆ ಮತ್ತು ದಕ್ಷತೆಯ ಬಗ್ಗೆ ಇಲಾಖೆಯಲ್ಲಿ ಮಾಹಿತಿ ದತ್ತಾಂಶಗಳು ಲಭ್ಯವಿರಲಿಲ್ಲ. ಏತ ನೀರಾವರಿ ಯೋಜನೆಗಳ ಕ್ರಿಯಾಶೀಲ ಸ್ಥಿತಿಯನ್ನು ನಿಷ್ಕರ್ಷಿಸಲು ಮಾರ್ಗದರ್ಶಿ ಸೂತ್ರಗಳಲ್ಲಿ ಸೂಚಿಸಿದ್ದಂತೆ ನಿಯತಕಾಲಿಕ ತನಿಖೆಗಳು ಸಹಾ ನಡೆಯಲಿಲ್ಲ.

## 3.3.18 ನಿರ್ಣಯ

ಹೊಸ ಏತ ನೀರಾವರಿ ಯೋಜನೆಗಳ ಅಂದಾಜಿನ ತಯಾರಿಕೆ ಮತ್ತು ಅನುಮೋದನೆಯಲ್ಲಿನ ವಿಳಂಬದಿಂದ ಇಲಾಖೆಯು ನಿಧಿಗಳನ್ನು ಪೂರ್ಣವಾಗಿ ಬಳಸಲಿಲ್ಲ. ಯೋಜನೆಗಳ ಪೂರ್ಣವಾಗದಿರುವಿಕೆ ಮತ್ತು ನೀರಿನ ಅಲಭ್ಯತೆ/ವಿದ್ಯುತ್ತಿನ ಕಡಿಮೆ ಸರಬರಾಜು, ದುರಸ್ತಿಗಳು ಹಾಗೂ ಇತರ ನೀರಾವರಿ ಯೋಜನೆಗಳ ಜೊತೆ ನೀರಾವರಿಯಾಗಬಹುದಾದ ಪ್ರದೇಶದ ಮೇಲು ವ್ಯಾಪಿಸುವಿಕೆಯಿಂದ ಪೂರ್ಣಗೊಂಡ ಯೋಜನೆಗಳು ನಿಷ್ಕ್ರಿಯವಾಗಿ ಉಳಿದ ಕಾರಣದಿಂದ ಏತ ನೀರಾವರಿ ಯೋಜನೆಗಳ ವಿನ್ಯಾಸಿತ ಸಂಭಾವ್ಯ ನೀರಾವರಿಯು ಸಾಧಿಸಲಾಗಲಿಲ್ಲ. ಭೂ ಸ್ವಾಧೀನದಲ್ಲಿ ವಿಳಂಬ, ಕಾಮಗಾರಿಗಳ ದೋಷಯುಕ್ತ ನಿರ್ವಹಣೆ, ಕಾಮಗಾರಿಗಳ ವಿವಿಧ ಅಂಶಗಳನ್ನು ಏಕೀಕೃತ ಮಾಡದಿರುವುದು, ಗುತ್ತಿಗೆದಾರರಿಗೆ ವಹಿಸಿದ ನಂತರ ಕಾಮಗಾರಿಗಳ ವ್ಯಾಪ್ತಿಯಲ್ಲಿ ಬದಲಾವಣೆ, ಇತ್ಯಾದಿಗಳು ಕಾಮಗಾರಿಗಳ ಮುಕ್ತಾಯವನ್ನು ವಿಳಂಬಿಸಿದವು. ಏತ ನೀರಾವರಿ ಯೋಜನೆಗಳ ವಿದ್ಯುತ್ ಸರಬರಾಜಿನ ಬಾಕಿಗಳ ನೈಜತೆಯು ಪರೀಕ್ಷಿಸಲ್ಪಡಲಿಲ್ಲ ಮತ್ತು ಮರು ಹೊಂದಾಣಿಕೆ ಆಗಲಿಲ್ಲ. ವಿಶೇಷ ವಿಪತ್ತು ಸಹಾಯ ಯೋಜನೆಯಡಿ ನಿಷ್ಕ್ರಿಯ ಏತ ನೀರಾವರಿ ಯೋಜನೆಗಳ ಪುನಶ್ಚೇತನವಾದರೂ ಬಹಳಷ್ಟು ಏತ ನೀರಾವರಿ ಯೋಜನೆಗಳು ನಿಷ್ಕ್ರಿಯವಾಗಿ ಉಳಿದವು. ನೀರಾವರಿಗೊಂಡ ಪ್ರದೇಶದ ನೀರಿನ ದರಗಳು ಸರಿಯಾಗಿ ನಿಷ್ಕರ್ಷಿಸಲ್ಪಡಲಿಲ್ಲ ಮತ್ತು ಅವುಗಳ ವಸೂಲಾತಿಗಳು ಮೇಲ್ವಿಚಾರಣೆಯಾಗಲಿಲ್ಲ. ರಾಷ್ಟ್ರೀಯ ಜಲ ನೀತಿಯಲ್ಲಿ ಸೂಚಿಸಿರುವಂತೆ ನೀರು ಬಳಕೆದಾರರ ಸಂಘಗಳು ರಚನೆಯಾಗಲಿಲ್ಲ. ಏತ ನೀರಾವರಿ ಯೋಜನೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿ ನಿಯಂತ್ರಣ ವ್ಯವಸ್ಥೆಯಿರಲಿಲ್ಲ. ಪರಿಣಾಮವಾಗಿ ಏತ ನೀರಾವರಿ ಮೂಲಕ ಭೂಮಿಯನ್ನು ನೀರಾವರಿಗೊಳಪಡಿಸುವ ಉದ್ದೇಶಿತ ಗುರಿಯ ಸಾಧನೆಯಾಗಲಿಲ್ಲ.

## 3.3.19 ಶಿಫಾರಸುಗಳು

ಸರ್ಕಾರವು ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳಬೇಕು

- ಅಂದಾಜುಗಳಿಗೆ ಸಕಾಲದಲ್ಲಿ ಮಂಜೂರಾತಿ ಪಡೆಯುವ ಮೂಲಕ ಏತ ನೀರಾವರಿ ಯೋಜನೆಗಳಿಗೆ ಒದಗಿಸಿದ್ದ ನಿಧಿಗಳು ಪೂರ್ಣವಾಗಿ ಬಳಕೆಯಾಗಿವೆ.
- ನೀರಿನ ಲಭ್ಯತೆ, ವಿದ್ಯುತ್ ಸರಬರಾಜು, ಇತ್ಯಾದಿಗಳನ್ನು ಖಚಿತಪಡಿಸಿಕೊಂಡು ಸೂಚಿತವಾದ ನೀರಾವರಿಯಾಗಬಹುದಾದ ಪ್ರದೇಶದ ನೀರಾವರಿಗೆ ಅವಶ್ಯಕ ಕ್ರಮ ತೆಗೆದುಕೊಳ್ಳಲಾಗಿದೆ.
- ಯೋಜನೆಗಳ ವೆಚ್ಚ ಮತ್ತು ಕಾಲದ ಅಧಿಕ ಹರಿಯುವಿಕೆಯನ್ನು ತಡೆಯಲು ಅನುಸೂಚಿತವಾದಂತೆ ನಿರ್ವಹಿಸಲ್ಪಟ್ಟಿವೆ ಮತ್ತು ಕಾಮಗಾರಿಯ ಎಲ್ಲ ಅಂಶಗಳೂ ಏಕೀಕೃತವಾಗುವಂತೆ ಏತ ನೀರಾವರಿ ಯೋಜನೆಗಳ ಕಾಮಗಾರಿಗಳ ನಿರ್ವಹಣೆಯು ಮೇಲ್ವಿಚಾರಣೆಯಾಗಬೇಕಿದೆ.
- ಇತರ ನೀರಾವರಿ ಯೋಜನೆಗಳ ಜೊತೆ ಮೇಲುವ್ಯಾಪಿಸಿರುವ ಏತ ನೀರಾವರಿ ಯೋಜನೆಗಳನ್ನು ಸಂಬಂಧಿಸಿದ ಯೋಜನೆ ಪ್ರಾಧಿಕಾರಗಳಿಗೆ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಲಾಗಿದೆ;
- ಏತ ನೀರಾವರಿ ಯೋಜನೆಗಳ ನಿರ್ವಹಣೆಯು ಸ್ವಯಂ ಶಕ್ತವಾಗಲು ನೀರು ಬಳಕೆದಾರರ ಸಂಘಗಳು ಉದ್ದೇಶಿಸಿದಂತೆ ರಚನೆಯಾಗಿವೆ.

ಈ ವಿಷಯವನ್ನು ಸರ್ಕಾರಕ್ಕೆ ಆಗಸ್ಟ್ 2008ರಲ್ಲಿ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

## ಸಹಕಾರ ಇಲಾಖೆ

## 3.4 ಕೃಷಿ ಸಾಲ ಮನ್ನಾ ಯೋಜನೆ ಮತ್ತು ಬಡ್ಡಿ ರಿಯಾಯಿತಿ ಯೋಜನೆಗಳು

### 3.4.1 ಪರಿಚಯ

ರೈತರು ಕೃಷಿ ಚಟುವಟಿಕೆಯ ಉದ್ದೇಶದಿಂದ ಪಡೆದ ಸಾಲದ ಮೇಲಿನ ಬಡ್ಡಿಯ ದರದಲ್ಲಿ ರಿಯಾಯಿತಿ ನೀಡಲು ಮತ್ತು ಸಾಲದ ಮೊತ್ತಕ್ಕಿಂತ ಹೆಚ್ಚಿಗೆ ಬಡ್ಡಿ ಹಣವನ್ನು ಪಾವತಿ ಮಾಡಿರುವ ಸಂದರ್ಭಗಳಲ್ಲಿ ಬಾಕಿ ಉಳಿದ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಲು ಹಾಗೂ ಒಂದು ನಿಗದಿತ ಅವಧಿಯಲ್ಲಿ ರೈತರು ಸಾಲದ ಅಸಲನ್ನು ಪೂರ್ಣವಾಗಿ ಮರುಪಾವತಿ ಮಾಡಿರುವಂತಹ ಸಂದರ್ಭಗಳಲ್ಲಿ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವ ಸಲುವಾಗಿ ಸರ್ಕಾರವು ಆದೇಶಗಳನ್ನು ಹೊರಡಿಸಿತು (ಡಿಸೆಂಬರ್ 2004–ಮೇ 2007). ರಾಜ್ಯದಲ್ಲಿ 2001–04ರ ಅವಧಿಯಲ್ಲಿ ಉಂಟಾದ ಸತತ ಬರಗಾಲ, 2006–07ರ ಅವಧಿಯಲ್ಲಿ ಉಂಟಾದ ಕೃಷಿ ಉತ್ಪನ್ನಗಳ ಬೆಲೆ ಕುಸಿತ, ಕೀಟ ಬಾಧೆ ಹಾಗೂ ಕೆಲವು ಬೆಳೆಗಳಿಗೆ ತಗಲಿದ್ದ ರೋಗಗಳಿಂದಾದ ಬೆಳೆ ನಷ್ಟ, ನೆರೆ ಮತ್ತು ಬರಗಾಲ ಇವುಗಳಿಂದಾಗಿ ರೈತರಿಗೊದಗಿದ ಸಂಕಷ್ಟಗಳ ನಿವಾರಣೆಗೆ ಈ ಆದೇಶಗಳನ್ನು ಹೊರಡಿಸಲಾಯಿತು. ಸಾಲ ಹಾಗೂ ಬಡ್ಡಿ ಮನ್ನಾ ಯೋಜನೆಗಳು ಕೆಲವೊಂದು ಷರತ್ತುಗಳಿಗೆ ಒಳಪಟ್ಟಿತ್ತು ಮತ್ತು ರೈತರಿಗೆ ಕೃಷಿ ಸಾಲ ವಿತರಿಸಿದ ಸಹಕಾರಿ ಸಂಘಗಳು ಮತ್ತು ಸಹಕಾರಿ ಬ್ಯಾಂಕುಗಳು ಸಹಕಾರ ಇಲಾಖೆಯು ನೇಮಿಸಿದ ಅಧಿಕಾರಿಗಳು ಪ್ರಮಾಣೀಕರಿಸಿ ಮೇಲು ರುಜು ಮಾಡಿದ ಪುನರ್ಭರ್ತಿ ಕ್ಲೈಮ್‌ಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಿತ್ತು. ಅನುಷ್ಠಾನಗೊಳಿಸಿದ ಯೋಜನೆಗಳು, ಪ್ರತಿ ಯೋಜನೆಯ ಅಡಿಯಲ್ಲಿ ಬಿಡುಗಡೆ ಮಾಡಿದ ಮೊತ್ತಗಳು, ವಿತರಿಸಿದ ರಿಯಾಯಿತಿ ಮತ್ತು ಬಾಕಿ ಉಳಿದಿರುವ ಕ್ಲೈಮ್‌ಗಳ ವಿವರಗಳನ್ನು **ಅನುಬಂಧ 3.13ರಲ್ಲಿ** ನೀಡಲಾಗಿದೆ.

ಸಹಕಾರ ಇಲಾಖೆಯ ಕಾರ್ಯದರ್ಶಿಗಳು ಇಲಾಖೆಯ ಆಡಳಿತಾತ್ಮಕ ಮುಖ್ಯಸ್ಥರಾಗಿದ್ದರು ಹಾಗೂ ಜಿಲ್ಲಾ ಮಟ್ಟದಲ್ಲಿ ಸಹಕಾರ ಸಂಘಗಳ ಉಪನಿಬಂಧಕರುಗಳ (ಡಿಆರ್‌ಸಿಎಸ್) ಸಹಾಯ ಹೊಂದಿದ್ದ ಸಹಕಾರ ಸಂಘಗಳ ನಿಬಂಧಕರು (ಆರ್‌ಸಿಎಸ್) ಸಾಲ ಮನ್ನಾ ಮತ್ತು ಬಡ್ಡಿ ರಿಯಾಯಿತಿ ಯೋಜನೆಗಳ ಅನುಷ್ಠಾನಕ್ಕೆ ಜವಾಬ್ದಾರರಾಗಿದ್ದರು. ಜಿಲ್ಲಾ ಮಟ್ಟದಲ್ಲಿ ಸಹಕಾರಿ ಲೆಕ್ಕಪರಿಶೋಧನಾ ಉಪನಿರ್ದೇಶಕರುಗಳ (ಡಿಡಿಸಿಎ) ಸಹಾಯ ಹೊಂದಿದ್ದ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು (ಡಿಸಿಎ) ಸಹಕಾರಿ ಸಂಘಗಳ ಮತ್ತು ಸಹಕಾರಿ ಬ್ಯಾಂಕ್‌ಗಳ ಕ್ಲೈಮ್‌ಗಳನ್ನು ಪ್ರಮಾಣೀಕರಿಸಲು ಜವಾಬ್ದಾರರಾಗಿದ್ದರು. ಹಣವನ್ನು ಮೊದಲು ಅಪೆಕ್ಸ್ ಬ್ಯಾಂಕ್‌ಗೆ ಬಿಡುಗಡೆ ಮಾಡಲಾಯಿತು; ನಂತರ ಅಪೆಕ್ಸ್ ಬ್ಯಾಂಕ್ ಹಣವನ್ನು ಜಿಲ್ಲಾ ಕೇಂದ್ರ ಸಹಕಾರೀ ಬ್ಯಾಂಕ್‌ಗಳು (ಡಿಸಿಸಿ) ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳ (ಕಾಸ್ಕಾರ್ಡ್) ಮೂಲಕ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿಗೂ (ಪಿಎಸಿಎಸ್) ಮತ್ತು ಪ್ರಾಥಮಿಕ ಸಹಕಾರೀ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿಗೂ (ಪೀಕಾರ್ಡ್) ಬಿಡುಗಡೆ ಮಾಡಲಾಯಿತು.

ಸರ್ಕಾರದ ನಿರ್ದಿಷ್ಟ ಕೋರಿಕೆಯ (ಫೆಬ್ರವರಿ 2008) ಮೇರೆಗೆ ಸರ್ಕಾರದ ಕಾರ್ಯದರ್ಶಿಗಳು, ಆರ್‌ಸಿಎಸ್ ಮತ್ತು 13 ಜಿಲ್ಲೆಗಳ[32]. ಪಿಎಸಿಎಸ್, ಪೀಕಾರ್ಡ್ ಬ್ಯಾಂಕ್‌ಗಳು, ಡಿಸಿಸಿ ಬ್ಯಾಂಕ್‌ಗಳು ಮತ್ತು ಕಾಸ್ಕಾರ್ಡ್ ಬ್ಯಾಂಕುಗಳು ಮುಂತಾದ ಸಹಕಾರೀ ಪತ್ತಿನ ಸಂಸ್ಥೆಗಳ ದಾಖಲೆಗಳನ್ನು ಪರೀಕ್ಷಾ–ತನಿಖೆ ನಡೆಸುವ ಮೂಲಕ 2004–08ರ ಅವಧಿಯಲ್ಲಿನ ಯೋಜನೆಗಳ ಅನುಷ್ಠಾನವನ್ನು ಸಮೀಕ್ಷಿಸಲಾಯಿತು (ಫೆಬ್ರವರಿ–ಜೂನ್ 2008). ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಸೆಪ್ಟೆಂಬರ್ 2008ರಲ್ಲಿ ನಡೆದ ನಿರ್ಗಮನ ಗೋಷ್ಠಿಯಲ್ಲಿ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಸಹಕಾರ ಇಲಾಖೆಯ ಕಾರ್ಯದರ್ಶಿಗಳೊಡನೆ ಚರ್ಚಿಸಲಾಯಿತು. ಅವಶ್ಯ ಪರಿಹಾರಕ ಕ್ರಮಗಳನ್ನು ಕೈಗೊಳ್ಳುವುದಾಗಿ ಕಾರ್ಯದರ್ಶಿಗಳು ಒಪ್ಪಿದರು.

---

[32] ಬಾಗಲಕೋಟೆ, ಬೆಳಗಾವಿ, ಬೀದರ್, ಬಿಜಾಪುರ, ದಕ್ಷಿಣಕನ್ನಡ, ಉಡುಪಿ, ಧಾರವಾಡ, ದಾವಣಗೆರೆ, ಗದಗ, ಹಾಸನ, ಹಾವೇರಿ, ಮಂಡ್ಯ ಮತ್ತು ಶಿವಮೊಗ್ಗ

## 3.4.2 ಹಣಕಾಸು ವೆಚ್ಚ

2004–08ರ ಅವಧಿಯಲ್ಲಿ ಯೋಜನಾವಾರು ಹಣದ ಬಿಡುಗಡೆಯ ವಿವರಗಳು, ವಿವಿಧ ಯೋಜನೆಗಳ ಅಡಿಯಲ್ಲಿ ಪಿಎಸಿಎಸ್ ಮತ್ತು ಪೀಕಾರ್ಡ್ ಬ್ಯಾಂಕ್‌ಗಳ ಕ್ಲೈಮ್‌ಗಳ ಇತ್ಯರ್ಥಗಳು ಈ ಕೆಳಗಿನಂತಿದ್ದವು.

**ಕೋಷ್ಟಕ 1 : ಯೋಜನಾವಾರು ಬಿಡುಗಡೆಯಾದ ಹಣ**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಯೋಜನೆ | ಕ್ಲೈಮ್‌ನ ಒಟ್ಟು ಮೊತ್ತ | ಬಿಡುಗಡೆಯಾದ ಮೊತ್ತ | | | | | ಬಾಕಿ ಉಳಿದಿರುವ ಕ್ಲೈಮ್‌ಗಳು |
|---|---|---|---|---|---|---|---|---|
| | | | 2004–05 | 2005–06 | 2006–07 | 2007–08 | ಒಟ್ಟು | |
| 1. | ಬಡ್ಡಿ ಸಹಾಯಧನ ಯೋಜನೆ | 354.25 | 45.00 | 80.00 | 76.50 | 152.63 | 354.13 | 0.12 |
| 2. | ಒಂದು ಸಲದ ಸಾಲ ಮನ್ನಾ ಯೋಜನೆ | 65.85 | 49.00 | – | – | – | 49.00 | 16.85 |
| 3. | ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಯೋಜನೆ | 1160.48 | – | 850.00 | 200.00 | 110.48 | 1160.48 | – |
| 4. | ಸಾಲ ಮನ್ನಾ ಯೋಜನೆ, 2007 | 1862.39 | – | – | 500.00 | 1239.88 | 1739.88 | 122.51 |
| | ಒಟ್ಟು | 3442.97 | 94.00 | 930.00 | 776.50 | 1502.99 | 3303.49 | 139.48 |

ವಿವಿಧ ಸಹಕಾರಿ ಸಂಘಗಳ ಮತ್ತು ಬ್ಯಾಂಕ್‌ಗಳ ಲೆಕ್ಕಪತ್ರಗಳ ಪ್ರಕಾರ ಅರ್ಹ ಕ್ಲೈಮ್‌ಗಳನ್ನು ಆಧರಿಸಿಯೇ ಹಣವನ್ನು ಬಿಡುಗಡೆ ಮಾಡಲಾಗಿದ್ದರೂ ಸಹ ರೂ.139.48 ಕೋಟಿ ಮೊತ್ತದ ಕ್ಲೈಮ್‌ಗಳು ಇನ್ನೂ ಪಾವತಿಯಾಗದೇ ಉಳಿದಿರುವುದಕ್ಕೆ ಕಾರಣಗಳು ದಾಖಲೆಗಳಲ್ಲಿರಲಿಲ್ಲ.

## 3.4.3 ಯೋಜನೆಗಳ ಅನುಷ್ಠಾನ

### 3.4.3.1 ಬಡ್ಡಿ ರಿಯಾಯಿತಿ ಯೋಜನೆ

ರೈತರಿಗೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ವಾರ್ಷಿಕ ಶೇಕಡ ಆರರ ಬಡ್ಡಿ ದರದಲ್ಲಿ ನೀಡಲು ಸರ್ಕಾರವು ಡಿಸೆಂಬರ್ 2004ರಲ್ಲಿ ಅನುಮೋದನೆ ನೀಡಿ, 1 ಏಪ್ರಿಲ್ 2004 ಮತ್ತು ನಂತರದಲ್ಲಿ ಪಡೆದ ಅವಧಿ ಸಾಲಗಳು ಮತ್ತು ಕೇವಲ ಕೃಷಿ ಸಾಲಗಳು ಈ ರಿಯಾಯಿತಿಗೆ ಅರ್ಹವಾಗಿದ್ದವು ಎಂಬ ಷರತನ್ನು ವಿಧಿಸಿತ್ತು. ಈ ಯೋಜನೆಯಲ್ಲಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳಿಗೆ ಸರ್ಕಾರದ ಪಾಲು ಶೇಕಡ 5.5 ಆಗಿದ್ದರೆ ರೈತರ ಪಾಲು ಶೇಕಡ ಆರು ಆಗಿದ್ದು ಉಳಿದ ಶೇಕಡ ಒಂದರಷ್ಟು ಬಡ್ಡಿ ರಿಯಾಯಿತಿಯ ಪಾಲನ್ನು ಸಾಲ ನೀಡುವ ಸಹಕಾರೀ ಸಂಘಗಳು/ಬ್ಯಾಂಕುಗಳೇ ಭರಿಸಬೇಕಾಗಿತ್ತು. ಸಹಕಾರಿ ಪತ್ತಿನ ಸಂಸ್ಥೆಗಳು ಶೇಕಡ ಒಂದರಷ್ಟು ಹೆಚ್ಚಿನ ಬಡ್ಡಿಯ ಪಾಲನ್ನು ದೀರ್ಘಾವಧಿ ಸಾಲಗಳ ಮೇಲೆ ಭರಿಸಬೇಕಾಗಿತ್ತು. ಮೇ 2006ರಲ್ಲಿ ಸರ್ಕಾರವು 1 ಏಪ್ರಿಲ್ 2006ರಂದು ಮತ್ತು ನಂತರ ವಿತರಿಸಿದ ಕೃಷಿ ಸಾಲದ ಮೇಲಿನ ಬಡ್ಡಿಯ ರೈತರ ಪಾಲನ್ನು ಶೇಕಡ 4ಕ್ಕೆ ಇಳಿಸಿ ತನ್ನ ಬಡ್ಡಿಯ ಪಾಲನ್ನು ಶೇಕಡ 7.50ಕ್ಕೆ ಹೆಚ್ಚಿಸಿಕೊಂಡಿತು. ಸಹಕಾರಿ ಬ್ಯಾಂಕ್‌ಗಳು ಸಾಲದ ಮೇಲೆ ವಿಧಿಸಿದ ಹೆಚ್ಚಿನ ದರದ ಬಡ್ಡಿಯ ಭಾರದಿಂದ ರೈತರಿಗೆ ಗಮನಾರ್ಹ ಪರಿಹಾರ ಒದಗಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿತ್ತು.

**ಅರ್ಹವಲ್ಲದ ಕ್ಲೈಮ್‌ಗಳನ್ನು ಅಂಗೀಕರಿಸಿ ಪೀಕಾರ್ಡ್ ಬ್ಯಾಂಕ್‌ಗಳಿಗೆ ರೂ.1.67 ಕೋಟಿ ರಿಯಾಯಿತಿಧನವನ್ನು ಅಕ್ರಮವಾಗಿ ಪಾವತಿ ಮಾಡಲಾಯಿತು**

ಪರೀಕ್ಷಾ–ತನಿಖೆಗೆ ಆಯ್ದುಕೊಂಡ ಜಿಲ್ಲೆಗಳಲ್ಲಿನ ಪೀಕಾರ್ಡ್ ಬಾಂಕ್‌ಗಳ ದಾಖಲೆಗಳ ಪ್ರಕಾರ ಈ ಬ್ಯಾಂಕ್‌ಗಳು ಸರ್ಕಾರದಿಂದ ಪುನರ್ಭರಣಕ್ಕಾಗಿ ಅರ್ಜಿ ಸಲ್ಲಿಸುವಾಗ ಕೃಷಿಯೇತರ ಚಟುವಟಿಕೆಗಳಾದ ದ್ವಿಚಕ್ರ ವಾಹನ ಖರೀದಿ, ಜಮೀನು ಖರೀದಿ, ಕೋಳಿ ಸಾಕಾಣಿಕೆ, ಅರಣ್ಯ ಚಟುವಟಿಕೆಗಳು ಮುಂತಾದ ಉದ್ದೇಶಗಳಿಗಾಗಿ ಪಡೆದ ಸಾಲಗಳ ಕ್ಲೈಮುಗಳನ್ನು ಒಳಗೊಂಡಿದ್ದವು ಎಂಬುದನ್ನು ಗಮನಿಸಲಾಯಿತು. ಇದು ಯೋಜನಾ ಮಾರ್ಗದರ್ಶಿ ಸೂತ್ರಗಳಿಗೆ ವಿರುದ್ಧವಾಗಿತ್ತು. ಆಯ್ದ ಜಿಲ್ಲೆಗಳಲ್ಲಿ 2004–08ರ ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ರೂ.1.67 ಕೋಟಿ ಮೊತ್ತದ 1.06 ಲಕ್ಷ ಕ್ಲೈಮುಗಳಲ್ಲಿ ಒಟ್ಟು 10,880 ಅನರ್ಹ ಕ್ಲೈಮುಗಳನ್ನು ಅಕ್ರಮವಾಗಿ ಸೇರಿಸಿರುವುದನ್ನು ಗಮನಿಸಲಾಯಿತು (**ಅನುಬಂಧ 3.14**). ಸಂಬಂಧಪಟ್ಟ ಡಿಡಿಸಿಎರವರು ಮತ್ತು ಡಿಆರ್‌ಸಿಎಸ್ ಅವರು ಈ ಕ್ಲೈಮ್‌ಗಳನ್ನು ಅಂಗೀಕರಿಸಿದ್ದರ ಪರಿಣಾಮವಾಗಿ ಪೀಕಾರ್ಡ್ ಬ್ಯಾಂಕ್‌ಗಳಿಗೆ ಹೆಚ್ಚಿನ ಸಹಾಯಧನ ಬಿಡುಗಡೆಯಾಯಿತು. ಡಿಡಿಸಿಎ ಮತ್ತು ಡಿಆರ್‌ಸಿಎಸ್ ಅವರುಗಳು ಈ ವಿಷಯದಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ವಿಫಲರಾದುದಕ್ಕೆ ಯಾವುದೇ ಕಾರಣಗಳನ್ನು ಸಲ್ಲಿಸಲಿಲ್ಲ.

### 3.4.3.2 ಬಾಕಿ ಉಳಿದ ಸಾಲಗಳ ಒಂದು ಸಲದ ಸಾಲ ಮನ್ನಾ

ದಿನಾಂಕ 31 ಮಾರ್ಚ್ 2004ರವರೆಗೆ ಪಾವತಿಸಿದ ಬಡ್ಡಿಯ ಮೊತ್ತವು ಅಸಲು ಮೊತ್ತಕ್ಕಿಂತ ಹೆಚ್ಚಾಗಿದ್ದು ಅವಧಿ ಸಾಲಗಳು ಇನ್ನೂ ಬಾಕಿ ಉಳಿದಿರುವ ಕಾರಣ ಸಂಕಷ್ಟಕ್ಕೊಳಗಾಗಿರುವ ರೈತರಿಗೆ ಸಹಾಯ ನೀಡುವ ದೃಷ್ಟಿಯಿಂದ ಸರ್ಕಾರವು ಮಾರ್ಚ್ 2005ರಲ್ಲಿ ಬಾಕಿ ಉಳಿದಿರುವ ಸಾಲಗಳ ಒಂದು ಸಲದ ಸಾಲ ಮನ್ನಾ ಯೋಜನೆಯನ್ನು ಪ್ರಕಟಿಸಿತು. ಈ ಯೋಜನೆಯು ರೈತರು ಸಹಕಾರಿ ಪತ್ತಿನ ಸಂಸ್ಥೆಗಳಿಂದ ಕೃಷಿ ಮತ್ತು ಕೃಷಿ ಸಂಬಂಧಿತ ಉದ್ದೇಶಗಳಿಗಾಗಿ ಮಾತ್ರ ಪಡೆದ ಎಲ್ಲ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳಿಗೆ ಅನ್ವಯವಾಗಿತ್ತು.

ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳಲ್ಲಿನ ಪೀಕಾರ್ಡ್ ಬ್ಯಾಂಕ್‌ಗಳ ಸಾಲದ ದಾಖಲೆಗಳ ಪರಿಶೀಲನೆಯಲ್ಲಿ ಕೆಳಕಂಡ ಅಂಶಗಳನ್ನು ಗಮನಿಸಲಾಯಿತು.

**ಅಸಲಿನ ಮೊತ್ತಕ್ಕಿಂತ ಕಡಿಮೆ ಬಡ್ಡಿ ಪಾವತಿಸಿರುವ ಕ್ಲೈಮ್‌ಗಳನ್ನು ಸೇರಿಸಿರುವುದು**

**ಅಂಕಿಅಂಶಗಳನ್ನು ಉಬ್ಬಿಸಿ ಮತ್ತು ಅರ್ಹವಲ್ಲದ ಕ್ಲೈಮುಗಳನ್ನು ಸೇರಿಸಿ ಪೀಕಾರ್ಡ್ ಬ್ಯಾಂಕ್‌ಗಳು ರೂ.85.07 ಲಕ್ಷವನ್ನು ಅಕ್ರಮವಾಗಿ ಕ್ಲೈಮ್ ಮಾಡಿದವು**

31 ಮಾರ್ಚ್ 2004ರ ನಂತರ ಬಡ್ಡಿ ಪಾವತಿ ಮಾಡಿದ ಪ್ರಕರಣಗಳು, ಅಂಚೆ ವೆಚ್ಚಗಳು, ಸಾಲ ವಸೂಲಾತಿ ವೆಚ್ಚಗಳು ಮುಂತಾದ ಅನರ್ಹ ಕ್ಲೈಮ್‌ಗಳು 119 ರೈತರ ಕ್ಲೈಮ್‌ಗಳಲ್ಲಿ ಸೇರಿಕೊಂಡಿದ್ದವು. ಈ ಪ್ರಕರಣಗಳಲ್ಲಿ ಹೀಗೆ ಮಾಡಿದ ಅನರ್ಹ ಕ್ಲೈಮ್‌ಗಳ ಮೊತ್ತ ರೂ.20.57 ಲಕ್ಷಗಳಾಗಿದ್ದು ಇದು ಪಾವತಿಸಿದ ಬಡ್ಡಿ ಹಣವು ಅಸಲಿಗಿಂತ ಕಡಿಮೆ ಇದ್ದರೂ ಕೇವಲ ಸಾಲ ಮನ್ನಾ ಯೋಜನೆಯ ಲಾಭ ಪಡೆಯುವ ಉದ್ದೇಶದಿಂದ ಕ್ಲೈಮನ್ನು ಉಬ್ಬಿಸಿ (ರೂ.4.93 ಲಕ್ಷ) ತೋರಿಸಲಾದ 30 ಪ್ರಕರಣಗಳನ್ನು ಒಳಗೊಂಡಿತ್ತು. ಅಸಲು ಮೊತ್ತಕ್ಕಿಂತ ಬಡ್ಡಿ ಹಣವು ಹೆಚ್ಚು ಸಂದಾಯವಾಗಿದೆ ಎಂದು ತೋರಿಸುವ ಉದ್ದೇಶದಿಂದ ಪೀಕಾರ್ಡ್ ಬ್ಯಾಂಕ್‌ಗಳು 235 ಪ್ರಕರಣಗಳಲ್ಲಿ 1994-2004ರ ಅವಧಿಯಲ್ಲಿ ಸರ್ಕಾರ ಘೋಷಿಸಿದ್ದ ಇದೇ ರೀತಿಯ ಯೋಜನೆಗಳಾದ ಬಡ್ಡಿ ಮನ್ನಾ ಹಾಗೂ ರಿಯಾಯಿತಿ ಬಡ್ಡಿ ಯೋಜನೆಯಡಿ ಫಲಾನುಭವಿಗಳಾದ ರೈತರ ಕ್ಲೈಮುಗಳನ್ನು ಸೇರಿಸಲಾಗಿತ್ತು. ಪೀಕಾರ್ಡ್ ಬ್ಯಾಂಕ್‌ಗಳ ಕ್ಲೈಮುಗಳನ್ನು ಪ್ರಮಾಣೀಕರಿಸುವಾಗ ಸಂಬಂಧಿತ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳು ಈ ಎಲ್ಲಾ ಕ್ಲೈಮುಗಳು ಮರುಪಾವತಿಗೆ/ಪುನರ್ಭರಣಕ್ಕೆ ಅನರ್ಹವೆಂದು ತಿರಸ್ಕರಿಸಬೇಕಿತ್ತು. ಈ ರೀತಿ ಕ್ಲೈಮ್ ಮಾಡಿದ ಹಾಗೂ ಬ್ಯಾಂಕ್‌ಗಳಿಗೆ ಮರುಪಾವತಿ ಮಾಡಿದ ಅನರ್ಹ ಕ್ಲೈಮ್‌ಗಳ ಮೊತ್ತ ರೂ.64.50 ಲಕ್ಷಗಳಷ್ಟಾಗಿತ್ತು.

**ಕೃಷಿಯೇತರ ಉದ್ದೇಶಗಳಿಗೆ ನೀಡಿದ ಸಾಲಗಳನ್ನು ಸೇರಿಸಿರುವುದು**

ಪೀಕಾರ್ಡ್ ಬ್ಯಾಂಕ್‌ಗಳು, ಗ್ರಾಮೀಣ ವಸತಿ ಯೋಜನೆ, ಕೋಳಿ ಸಾಕಾಣಿಕೆ, ಹಂದಿ ಸಾಕಣೆ, ಕೃಷಿಯೇತರ ಚಟುವಟಿಕೆಗಳಾದ ಹಿಟ್ಟಿನ ಗಿರಣಿ, ಸಿದ್ಧಪಡಿಸಿದ ಉಡುಪು ತಯಾರಿಕೆ, ಬೇಕರಿ ಮುಂತಾದ ಉದ್ದೇಶಗಳಿಗೆ ಪಡೆದ ಸಾಲವನ್ನು ಈ ಯೋಜನೆಯಡಿ ಸೇರಿಸಿ ಒಟ್ಟು ರೂ.ಎಂಟು ಕೋಟಿ ಮೊತ್ತವನ್ನು ಕ್ಲೈಮ್ ಮಾಡಿ ಅವುಗಳನ್ನು ಪುನರ್ಭರಣ ಮಾಡಿಕೊಂಡ ಅನರ್ಹ ಪ್ರಕರಣಗಳ ಸಂಖ್ಯೆಯು 2,181 ಆಗಿತ್ತು (**ಅನುಬಂಧ 3.15**)

**ಕ್ಲೈಮುಗಳ ಎರಡುಬಾರಿ ಮರುಪಾವತಿ**

ರೂ.36,768 ಮೊತ್ತದ ಮೂರು ಕ್ಲೈಮುಗಳು ಮತ್ತು ರೂ.15,071 ಮೊತ್ತದ ಒಂದು ಕ್ಲೈಮನ್ನು ಕ್ರಮವಾಗಿ ಮದ್ದೂರು ಮತ್ತು ಕುಂದಾಪುರಗಳ ಪೀಕಾರ್ಡ್ ಬ್ಯಾಂಕ್‌ಗಳು ಎರಡು ಬಾರಿ ಮಂಡಿಸಿದವು ಮತ್ತು ಅವುಗಳನ್ನು ಪುನರ್ಭರ್ತಿ ಮಾಡಲಾಯಿತು. ಯೋಜನೆಯ ಮಾರ್ಗದರ್ಶಿ ಸೂತ್ರಗಳನ್ವಯ ಕ್ಲೈಮುಗಳನ್ನು ನಿಯಂತ್ರಿಸುವಲ್ಲಿನ ವಿಫಲತೆಯ ಬಗ್ಗೆ ಇಲಾಖಾ ಅಧಿಕಾರಿಗಳ ಅಭಿಪ್ರಾಯವನ್ನು ನಿರೀಕ್ಷಿಸಲಾಗಿದೆ (ಅಕ್ಟೋಬರ್ 2008).

### 3.4.3.3 ಅವಧಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಯೋಜನೆ

ದಿನಾಂಕ 31 ಮಾರ್ಚ್ 2004ಕ್ಕೆ ಬಾಕಿಯಿರುವ ಕೃಷಿ ಅವಧಿ ಸಾಲಗಳ ಅಸಲನ್ನು 30 ಜೂನ್ 2005ರೊಳಗೆ ರೈತರು ಪೂರ್ಣವಾಗಿ ಮರುಪಾವತಿ ಮಾಡಿದರೆ ಸದರಿ ಸಾಲಗಳ ಮೇಲಿನ ದಿನಾಂಕ 31 ಮಾರ್ಚ್ 2005ರವರೆಗಿನ ಬಾಕಿ ಇರುವ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡುವಂತೆ ಸರ್ಕಾರವು ಆದೇಶಿಸಿತು (ಏಪ್ರಿಲ್ 2005). ಸಾಲಗಳ ಮರುಪಾವತಿಗೆ ಕೊನೆಯ ದಿನಾಂಕವನ್ನು ತದನಂತರ 31 ಮೇ 2006ರವರೆಗೆ ವಿಸ್ತರಿಸಲಾಯಿತು.

ಪಿಎಸಿಎಸ್ ಮತ್ತು ಪೀಕಾರ್ಡ್ ಬ್ಯಾಂಕ್‌ಗಳ ದಾಖಲೆಗಳ ಪರೀಕ್ಷಾ–ತನಿಖೆಯಿಂದ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

**ಪಿಎಸಿಎಸ್‌ಗಳು ವಾಸ್ತವಾಂಶಗಳನ್ನು ತಪ್ಪಾಗಿ ನಿರೂಪಿಸಿ ಅಕ್ರಮ ಕ್ಲೈಮುಗಳನ್ನು ಮಾಡಿರುವುದು**

**ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿನ ಪಿಎಸಿಎಸ್‌ಗಳು ವಾಸ್ತವಾಂಶಗಳನ್ನು ತಪ್ಪಾಗಿ ನಿರೂಪಿಸಿ ರೂ.36.04 ಕೋಟಿ ಕ್ಲೈಮ್ ಮಾಡಿದವು**

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳ ಪಿಎಸಿಎಸ್‌ಗಳು 34,674 ಪ್ರಕರಣಗಳಲ್ಲಿ (**ಅನುಬಂಧ 3.16**) ರೈತರು 31 ಮಾರ್ಚ್ 2004ರವರೆಗೆ ಬಾಕಿ ಇದ್ದ ಅಸಲನ್ನು ಪೂರ್ಣವಾಗಿ ಪಾವತಿಸಿದ್ದಾರೆಂದು ತಿಳಿಸಿ ರೂ.36.04 ಕೋಟಿ ಕ್ಲೈಮ್ ಮಾಡಿದರು. ಬ್ಯಾಂಕ್ ಸ್ಟ್ರೋಲ್‌ಗಳು ಮತ್ತು ಡಿಸಿಸಿ ಬ್ಯಾಂಕುಗಳಲ್ಲಿ ನಿರ್ವಹಿಸಿದ ಪಿಎಸಿಎಸ್‌ಗಳ ಸಾಲದ ಲೆಕ್ಕಪತ್ರಗಳೊಂದಿಗೆ ಕ್ಲೈಮ್ ಬಿಲ್ಲುಗಳ (ಪುನರ್ಭರ್ತಿ ಬಿಲ್ಲುಗಳು) ವಿವರಗಳನ್ನು ಪರಿಶೀಲಿಸಿದಾಗ ರೈತರಿಂದ ಸ್ವೀಕರಿಸಿದ ಪಾವತಿಗಳೆಂದು ಕ್ಲೈಮ್ ಬಿಲ್ಲುಗಳಲ್ಲಿ ತೋರಿಸಿದ ಮೊತ್ತಗಳನ್ನು, ಬ್ಯಾಂಕ್ ಸ್ಟ್ರೋಲ್‌ಗಳು ಅಂತಹ ಸಂದಾಯದ ಬಗ್ಗೆ ಖಚಿತಪಡಿಸಲಿಲ್ಲವಾದ್ದರಿಂದ, ಪಿಎಸಿಎಸ್‌ಗಳು ವಾಸ್ತವವಾಗಿ ಈ ಮೊತ್ತಗಳನ್ನು ಸಂದಾಯ ಮಾಡಿರಲಿಲ್ಲ ಎಂಬುದನ್ನು ತಿಳಿಯಪಡಿಸಿತು. ಕಡಿಮೆ ಹಣ ಸಂದಾಯದ ಮೊತ್ತವು ರೂ.63.05 ಕೋಟಿಗಳಾಗಿತ್ತು. ಪಿಎಸಿಎಸ್‌ಗಳು ತಮ್ಮದೇ ಆದ ಉಪನಿಯಮಗಳ ಪ್ರಕಾರ ರೈತರಿಂದ ಸ್ವೀಕರಿಸಿದ ಪಾವತಿಗಳನ್ನು ಒಂದು ಅಥವಾ ಎರಡು ದಿನಗಳಲ್ಲಿ ಡಿಸಿಸಿ ಬ್ಯಾಂಕ್‌ಗೆ ಜಮಾ ಮಾಡಬೇಕಿತ್ತಾದರೂ ರೈತರು ಪಾವತಿಸಿದ ದಿನದಿಂದ ಏಳು ದಿನಗಳ ನಂತರವೂ ಜಮಾ ಮಾಡಿರಲಿಲ್ಲ. ಈ ಸಂಬಂಧದಲ್ಲಿ ಲೆಕ್ಕಪರಿಶೋಧನಾ ಆಕ್ಷೇಪಣೆಗಳಿಗೆ ಉತ್ತರವಾಗಿ ಯಾವುದೇ ಇತರ ರುಜುವಾತನ್ನು ಪಿಎಸಿಎಸ್‌ಗಳು ನೀಡಲಿಲ್ಲ. ಕ್ಲೈಮ್‌ಗಳನ್ನು ಪ್ರಮಾಣೀಕರಿಸುವ ಮತ್ತು ಅಂಗೀಕರಿಸುವ ಸಂದರ್ಭದಲ್ಲಿ ಆಯಾ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳು ಈ ಕ್ಲೈಮ್‌ಗಳನ್ನು ನಿರಾಕರಿಸಲಿಲ್ಲ. ಯೋಜನೆಯ ಮಾರ್ಗದರ್ಶಿ ಸೂತ್ರಗಳನ್ವಯ ಕ್ಲೈಮ್‌ಗಳನ್ನು ನಿಯಂತ್ರಿಸುವಲ್ಲಿ ಆಗಿರುವ ಕರ್ತವ್ಯಲೋಪದ ಬಗ್ಗೆ ಇಲಾಖಾ ಅಧಿಕಾರಿಗಳ ಅಭಿಪ್ರಾಯಗಳನ್ನು ನಿರೀಕ್ಷಿಸಲಾಗಿದೆ (ಅಕ್ಟೋಬರ್ 2008).

**ನಿಗದಿತ ದಿನಾಂಕವನ್ನು ಪರಿಗಣಿಸುವಲ್ಲಿ ಅಕ್ರಮ**

**ಪೀಕಾರ್ಡ್ ಬ್ಯಾಂಕ್‌ಗಳು ನಿಗದಿತ ದಿನಾಂಕವನ್ನು 31 ಮಾರ್ಚ್ 2005 ಎಂದು ಅಕ್ರಮವಾಗಿ ಪರಿಗಣಿಸಿ ರೂ.51.78 ಕೋಟಿ ಕ್ಲೈಮ್ ಮಾಡಿದವು**

31 ಮಾರ್ಚ್ 2004ರಲ್ಲಿದ್ದಂತೆ ಬಾಕಿ ಇರುವ ಅಸಲನ್ನು ರೈತರು 31 ಮೇ 2006ರೊಳಗೆ ಪೂರ್ಣ ಮರುಪಾವತಿಸಿದಂತಹ ಪ್ರಕರಣಗಳು ಮಾತ್ರ ಈ ಯೋಜನೆಯಡಿಯಲ್ಲಿ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಪಡೆಯಲು ಅರ್ಹವಾಗಿರುತ್ತವೆ ಎಂಬುದನ್ನು ಈ ಯೋಜನೆಯಡಿ ಜಾರಿ ಮಾಡಿದ ಸರ್ಕಾರೀ ಆದೇಶವು ನಿಗದಿಪಡಿಸಿತ್ತು. ಆದಾಗ್ಯೂ ಕಾಸ್ಕಾರ್ಡ್ ಬ್ಯಾಂಕ್ ಪೀಕಾರ್ಡ್ ಬ್ಯಾಂಕ್‌ಗಳಿಗೆ ಹೊರಡಿಸಿದ ಸುತ್ತೋಲೆಗಳಲ್ಲಿ 31 ಮಾರ್ಚ್ 2005ರಂದು ಬಾಕಿ ಇರುವ ಅಸಲಿನ ಕಂತುಗಳು ದಿನಾಂಕ 31 ಮೇ 2006ರೊಳಗೆ ಮರುಪಾವತಿಯಾಗಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ದಿನಾಂಕ 31 ಮಾರ್ಚ್ 2005ರವರೆಗಿನ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಪಡೆಯಲು ಅರ್ಹವಾಗಿರುತ್ತವೆ ಎಂದು ಸೂಚಿಸಿತ್ತು (ಏಪ್ರಿಲ್ 2005). ತತ್ಪರಿಣಾಮವಾಗಿ ಪೀಕಾರ್ಡ್ ಬ್ಯಾಂಕ್‌ಗಳು 31 ಮಾರ್ಚ್ 2005ಕ್ಕೆ ಬಾಕಿ ಇರುವ ಅಸಲಿನ ಕಂತುಗಳನ್ನೂ ಸಹ ಪರಿಗಣಿಸಿ ಮರುಪಾವತಿಯ ಕ್ಲೈಮ್‌ಗಳನ್ನು ಲೆಕ್ಕ ಹಾಕಿದ್ದು, ಇದು ಸರ್ಕಾರಿ ಆದೇಶದ ಸ್ಪಷ್ಟ ಉಲ್ಲಂಘನೆಯಾಗಿತ್ತು. ಈ ರೀತಿಯಾಗಿ ಕ್ಲೈಮ್ ಮಾಡಿದ ಮೊತ್ತವು ರೂ.51.78 ಕೋಟಿಗಳಾಗಿದ್ದು ಕ್ಲೈಮುಗಳನ್ನು ಅಂಗೀಕರಿಸಿ ಪ್ರಮಾಣೀಕರಿಸುವ ಸಂದರ್ಭದಲ್ಲಿ ಆಯಾ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳು ಅವುಗಳನ್ನು ನಿರಾಕರಿಸುವಲ್ಲಿ ವಿಫಲರಾದರು. ಲೆಕ್ಕಪರಿಶೋಧನೆಯಲ್ಲಿ ಹೆಚ್ಚುವರಿ ಪಾವತಿಗಳನ್ನು ಗಮನಕ್ಕೆ ತಂದಾಗ (ಸೆಪ್ಟಂಬರ್ 2006 ಮತ್ತು ಜನವರಿ 2007) ಕಾಸ್ಕಾರ್ಡ್ ಬ್ಯಾಂಕ್‌ಗೆ ಮುಂದೆ ಬಿಡುಗಡೆಯಾಗಬೇಕಿದ್ದ ಹಣದಲ್ಲಿ ಸರ್ಕಾರವು ಹೆಚ್ಚುವರಿ ಪಾವತಿಗಳನ್ನು ಹೊಂದಾಣಿಕೆ ಮಾಡಿತು (ಜನವರಿ 2008). ಆದರೂ ಸಂಬಂಧಪಟ್ಟ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ.

### 3.4.3.4 ಬೆಳೆ ಸಾಲ ಮನ್ನಾ ಯೋಜನೆ – 2007

2006–07 ಅವಧಿಯಲ್ಲಿ ಬರಗಾಲ ಮತ್ತು ನೆರೆಯಿಂದ ರೈತರಿಗೆ ಉಂಟಾದ ಸಂಕಷ್ಟಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಸರ್ಕಾರವು 1 ಫೆಬ್ರವರಿ 2006 ಮತ್ತು ನಂತರದಲ್ಲಿ ಪಡೆದ ಹಾಗೂ 31 ಡಿಸೆಂಬರ್ 2006ರಂದು ಬಾಕಿ ಉಳಿದಿರುವ ರೂ.50,000 ಮತ್ತು ಅದಕ್ಕಿಂತಲೂ ಕಡಿಮೆ ಬೆಳೆ ಸಾಲ ಪಡೆದ ಸಂದರ್ಭಗಳಲ್ಲಿ ರೂ.25,000ಗಳನ್ನು ಮನ್ನಾ ಮಾಡುವ ಆದೇಶವನ್ನು ಹೊರಡಿಸಿತು (ಏಪ್ರಿಲ್ 2007). ಈ ಸಾಲ ಮನ್ನಾ ಯಾವ ರೈತರು ರೂ.25,000ಗಳಿಗಿಂತಲೂ ಅಧಿಕ ಬೆಳೆ ಸಾಲವನ್ನು ಪಡೆದು ರೂ.25,000ಕ್ಕಿಂತ ಹೆಚ್ಚಿನ ಅಸಲು ಹಣವನ್ನು 30 ಏಪ್ರಿಲ್ 2007ರ ಮೊದಲು

ಮರುಪಾವತಿಸಿರುತ್ತಾರೋ ಅಂತಹ ರೈತರಿಗೂ ಅನ್ವಯವಾಗಿತ್ತು. ಯಾವ ರೈತರು ಈಗಾಗಲೇ ಅಸಲನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿರುತ್ತಾರೋ ಅವರಿಗೂ ಕೂಡ ರೂ.25,000ದ ಮನ್ನಾ ಲಾಭವು ಅನ್ವಯವಾಗುತ್ತದೆ. ಆದರೆ ಅಂತಹ ಪ್ರಕರಣಗಳಲ್ಲಿ ವರ್ಷಕ್ಕೆ ಶೇಕಡ 4ರ ಬಡ್ಡಿಯೊಂದಿಗೆ ಮೂರು ವರ್ಷಗಳ ನಂತರ ಮರುಭರ್ತಿಯನ್ನು ಮಾಡಲಾಗುವುದು ಎಂದು ಸರ್ಕಾರಿ ಆದೇಶವು ತಿಳಿಸಿತ್ತು. ಬೆಳೆ ಸಾಲಗಳ ಮಂಜೂರಾತಿ ದಿನಾಂಕವನ್ನು ಮತ್ತು ರೂ.25,000ಕ್ಕೂ ಹೆಚ್ಚಿನ ಅಸಲಿನ ಮರುಪಾವತಿಯ ವಾಯಿದೆ ದಿನಾಂಕವನ್ನು ತದನಂತರ ಸರ್ಕಾರವು ಕ್ರಮವಾಗಿ 1 ಜನವರಿ 2006 ಮತ್ತು 31 ಮೇ 2007ಕ್ಕೆ ಸಡಿಲಿಸಿತಲ್ಲದೇ ಬೆಳೆ ಸಾಲದ ರೂ.50,000ದ ಗರಿಷ್ಠ ಮಿತಿಯನ್ನು ತೆಗೆದು ಹಾಕಿತು.

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳ ಪಿಎಸಿಎಸ್ ಮತ್ತು ಪೀಕಾರ್ಡ್ ಬ್ಯಾಂಕ್‌ಗಳ ದಾಖಲೆಗಳಿಂದ ಈ ಕೆಳಗಿನ ಅಕ್ರಮಗಳು ಕಂಡುಬಂದವು:

### ಕ್ಲೈಮ್‌ಗಳ ಪ್ರಾಮಾಣಿಕತನವನ್ನು ಪರಿಶೀಲಿಸದೇ ಪುನರ್ಭರ್ತಿ

**ಚಿಕ್ಕೋಡಿಯ ಪೀಕಾರ್ಡ್ ಬ್ಯಾಂಕ್ 290 ಪ್ರಕರಣಗಳಲ್ಲಿ ದಾಖಲೆಗಳಲ್ಲಿ ಹಸ್ತಕ್ಷೇಪ ಮಾಡಿ ರೂ.73.97 ಲಕ್ಷವನ್ನು ಕ್ಲೈಮ್ ಮಾಡಿತು**

ಚಿಕ್ಕೋಡಿಯ ಪೀಕಾರ್ಡ್ ಬ್ಯಾಂಕ್ 290 ರೈತರಿಗೆ ಮೇ, ಜೂನ್ ಮತ್ತು ಡಿಸೆಂಬರ್ 2006ರಲ್ಲಿ ಮಂಜೂರು ಮಾಡಿದ ರೂ.25,000 ಮತ್ತು ಮೇಲ್ಪಟ್ಟ ಬೆಳೆ ಸಾಲಗಳು 31 ಡಿಸೆಂಬರ್ 2006ರಲ್ಲಿದ್ದಂತೆ ಬಾಕಿ ಇದ್ದವು ಎನ್ನುವ ಆಧಾರದ ಮೇಲೆ ರೂ.73.97 ಲಕ್ಷವನ್ನು ಕ್ಲೈಮ್ ಮಾಡಿತು. ಆದರೆ ಕ್ಲೈಮ್‌ಗಳ ಲೆಕ್ಕಪರಿಶೋಧನೆಯು ಕೆಳಗಿನವುಗಳನ್ನು ತಿಳಿಯಪಡಿಸಿತು:

- 56 ಸಾಲದ ಪ್ರಕರಣಗಳಲ್ಲಿ ರೂ.25,000ಕ್ಕೂ ಹೆಚ್ಚಿನ ಸಾಲವನ್ನು ವಿತರಿಸಲಾಗಿದ್ದ ಪ್ರತಿಯೊಂದು ಬಾಬಿನಲ್ಲೂ (ಒಟ್ಟು ಸಾಲದ ಮೊತ್ತ ರೂ.50.75 ಲಕ್ಷ) ಬ್ಯಾಂಕ್ ರೂ.25,000 ಅಥವಾ ಅದಕ್ಕಿಂತ ಕಡಿಮೆಯ 148 ಸಾಲದ ಲೆಕ್ಕಗಳನ್ನು ಕೃತ್ತಿಮವಾಗಿ ಸೃಷ್ಟಿಸಿ ರೂ.52.72 ಲಕ್ಷದ ಸಾಲ ಮನ್ನಾ ಕ್ಲೈಮ್ ಮಾಡಿತು. ಈ ಪ್ರತ್ಯೇಕವಾದ ಸಾಲಗಳನ್ನು ಮಂಜೂರು ಮಾಡಿದ್ದಕ್ಕೆ ಸಮರ್ಥನೆಯಾಗಿ ನಗದು ಪುಸ್ತಕದ ನಮೂದುಗಳನ್ನು ಪ್ರಕ್ಷೇಪಗೊಳಿಸಿದ ಸಂಗತಿಯಿಂದ ಇದು ಸ್ಪಷ್ಟವಾಗಿದ್ದಿತು. ಈ ಎಲ್ಲ ಸಾಲಗಳನ್ನೂ ನಗದು ಪುಸ್ತಕದಲ್ಲಿ ನಿಯತಕಾಲಿಕ ಬ್ಯಾಂಕ್ ಸಾಲ ಯೋಜನೆಯಡಿ ಬಾಕಿಯಿರುವ ಸಾಲಗಳಿಗೆ ಪ್ರತಿಯಾಗಿ ಸರಿಹೊಂದಿಸಿರುವ ಸಾಲಗಳೆಂದು ಸೂಚಿಸಲಾಗಿತ್ತು. ಈ ಪ್ರತಿಯೊಬ್ಬ ರೈತನ ಸಂಬಂಧವಾಗಿ ಬ್ಯಾಂಕ್‌ನ ಇತರ ಫಲಾನುಭವಿಗಳಿಗೆ ಮಾಡಿದಂತೆ ವೈಯಕ್ತಿಕ ಉಳಿತಾಯ ಖಾತೆಗಳನ್ನು ಕೂಡ ನಿರ್ವಹಿಸಿರಲಿಲ್ಲ. ಈ ಪ್ರಕರಣಗಳಲ್ಲಿ ಸಾಲಗಳ ಮೇಲೆ ಬಡ್ಡಿ ರಿಯಾಯಿತಿ ಕ್ಲೈಮ್ ಮಾಡಿದ ಬಗ್ಗೆಯೂ ಯಾವುದೇ ಸಾಕ್ಷ್ಯಾಧಾರಗಳಿರಲಿಲ್ಲ.
- ಸಾಕ್ಷ್ಯಾಧಾರಗಳ ಪ್ರಕಾರ ವೈಯಕ್ತಿಕ ಉಳಿತಾಯ ಖಾತೆಯ ಮತ್ತು ಬಡ್ಡಿ ರಿಯಾಯಿತಿ ಕ್ಲೈಮ್ ಮಾಡಿದ್ದಕ್ಕೆ ಬಿಲ್ಲುಗಳು ಇಲ್ಲದ್ದು ಸಾಲ ವಿತರಣೆಯಾಗದಿದ್ದರೂ 72 ಪ್ರಕರಣಗಳಲ್ಲಿ ರೂ.17.50 ಲಕ್ಷ ಸಾಲ ಮನ್ನಾದ ಪ್ರಯೋಜನವನ್ನು ಕ್ಲೈಮ್ ಮಾಡಲಾಯಿತು.
- ಇತರ 14 ಪ್ರಕರಣಗಳಲ್ಲಿ 1 ಜನವರಿ 2006ರ ಮೊದಲು ಹಾಗೂ 31 ಡಿಸೆಂಬರ್ 2006ರ ನಂತರ ಸಾಲ ವಿತರಿಸಲಾಗಿದ್ದರೂ ಸಹ ಈ ಎಲ್ಲ ಸಾಲಗಳನ್ನು 1 ಜನವರಿ 2006ರಿಂದ 31 ಡಿಸೆಂಬರ್ 2006ರ ಅವಧಿಯಲ್ಲಿ ವಿತರಿಸಲಾಗಿದೆ ಎಂದು ತಪ್ಪಾಗಿ ತಿಳಿಸಿ ಕ್ಲೈಮ್‌ಗಳಲ್ಲಿ ಸೇರಿಸಲಾಗಿತ್ತು. ಹೀಗೆ ಸಲ್ಲಿಸಲಾದ ಕ್ಲೈಮ್‌ಗಳ ಮೊತ್ತ ರೂ.3.75 ಲಕ್ಷಗಳಾಗಿತ್ತು.

ಪೀಕಾರ್ಡ್ ಬ್ಯಾಂಕ್ ಸಾಲ ವಿತರಿಸಿದ ಬಗ್ಗೆ ಸ್ಪಷ್ಟ ದಾಖಲೆಗಳಿಲ್ಲದಿದ್ದಾಗ್ಯೂ ಮತ್ತು ಪೀಕಾರ್ಡ್ ಬ್ಯಾಂಕ್‌ನ ಸಂಬಂಧಿತ ಕಡತಗಳಲ್ಲಿ ಅನೇಕ ನ್ಯೂನತೆಗಳಿದ್ದಾಗ್ಯೂ ಬೆಳಗಾವಿ ಜಿಲ್ಲೆಯ ಡಿಡಿಸಿಎ ಮತ್ತು ಡಿಆರ್‌ಸಿಎಸ್ ರವರು ರೂ.73.97 ಲಕ್ಷ ಮೊತ್ತದ ಕ್ಲೈಮ್‌ಗಳನ್ನು ಹೇಗೆ ದೃಢೀಕರಿಸಿದರು ಮತ್ತು ಅಂಗೀಕರಿಸಿದರೆನ್ನುವ ಅಂಶ ಸ್ಪಷ್ಟವಾಗಲಿಲ್ಲ. ಈ ಬಗ್ಗೆ ನೀಡಿದ ಲೆಕ್ಕಪರಿಶೋಧನಾ ಆಕ್ಷೇಪಣೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಅಭಿಪ್ರಾಯಗಳನ್ನು ನಿರೀಕ್ಷಿಸಲಾಗಿದೆ (ಅಕ್ಟೋಬರ್ 2008)

### ಸಾಲ ವಹಿವಾಟುಗಳನ್ನು ವಿಪರ್ಯಿಸಿಸಿ ಅಕ್ರಮ ಕ್ಲೈಮ್‌ಗಳನ್ನು ಸಲ್ಲಿಸಿರುವುದು

**ಶಿಗ್ಗಾಂವ್‌ನ ಪೀಕಾರ್ಡ್ ಬ್ಯಾಂಕ್ ವಾಸ್ತವಾಂಶವನ್ನು ತಪ್ಪಾಗಿ ನಿರೂಪಿಸಿ ರೂ.86,573 ಕ್ಲೈಮ್ ಮಾಡಿತು**

ಹಾವೇರಿ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿನ ಪೀಕಾರ್ಡ್ ಬ್ಯಾಂಕ್ ಸಲ್ಲಿಸಿದ್ದ 33 ಕ್ಲೈಮ್ ಬಿಲ್ಲುಗಳಲ್ಲಿ ಕ್ಲೈಮ್‌ಗಳನ್ನು ಸಾಲದ ಖಾತೆಯೊಂದಿಗೆ ಪರಿಶೀಲಿಸಿದಾಗ ಮೂರು ಪ್ರಕರಣಗಳಲ್ಲಿ ರೈತರು 31 ಡಿಸೆಂಬರ್ 2006ಕ್ಕೆ ಮುಂಚಿತವಾಗಿಯೇ ಸಾಲವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿದ್ದರೂ ಸಹ ಅವರಿಂದ ಪಡೆದ ಕೊನೆಯ ಕಂತಿನ ಹಣವನ್ನು (ಮಾರ್ಚ್ 2007)

ವಿಪರ್ಯಾಸಿಸಿ ಅಮಾನತ್ತು ಖಾತೆಗೆ ತೆಗೆದುಕೊಂಡು (ಮೇ 2007) ಪುನ: ಆಯಾ ಲೆಕ್ಕಖಾತೆಗೆ ಮರುವರ್ಗಾವಣೆ ಮಾಡಿ ಸಾಲ ಮನ್ನಾ ಯೋಜನೆ 2007ರ ಅಡಿಯಲ್ಲಿ ಕ್ಲೈಮ್‌ಗಳನ್ನು ಬ್ಯಾಂಕ್ ಸಲ್ಲಿಸಿತು. ಇತರ ಐದು ಪ್ರಕರಣಗಳಲ್ಲಿ ರೈತರಿಂದ 30 ಏಪ್ರಿಲ್ 2007 ಮತ್ತು 2 ಮೇ 2007ರ ನಡುವೆ ಅಸಲಿನ ಬಾಬ್ತು ಮರುಪಾವತಿಯಾಗಿದ್ದರೂ ರೂ.607 ಗಳಷ್ಟು ಬಡ್ಡಿ ಮನ್ನಾ ಪ್ರಯೋಜನ ಪಡೆಯುವ ಉದ್ದೇಶದಿಂದ ಬ್ಯಾಂಕ್ ಅಸಲು ಮೊತ್ತವನ್ನು ಮೊದಲು ಅಮಾನತ್ತು ಖಾತೆಗೆ ವರ್ಗಾಯಿಸಿ ನಂತರ 31 ಮೇ 2007ರಂದು ಅವರ ಸಾಲ ಲೆಕ್ಕಖಾತೆಗೆ ಮರುವರ್ಗಾವಣೆ ಮಾಡಿತು. ಹೀಗೆ ಸಾಲ ಮನ್ನಾಕ್ಕಾಗಿ ಮಾಡಿದ/ಸಲ್ಲಿಸಿದ ಅಸಹಜ ಕ್ಲೈಮ್‌ಗಳ ಒಟ್ಟು ಮೊತ್ತವಾದ ರೂ.86,573ರಲ್ಲಿ ಸರ್ಕಾರೀ ಆದೇಶದ ಪ್ರಕಾರ ಅವಧಿಗೆ ಮುನ್ನವೇ ಬಿಡುಗಡೆಗೊಳಿಸಿದ ಹಣ ರೂ.78,617 ಆಗಿದ್ದು ಉಳಿದ ಹಣವನ್ನು ಬ್ಯಾಂಕ್ ಅಕ್ರಮವಾಗಿ ಕ್ಲೈಮ್ ಮಾಡಿತ್ತು. ಹಾವೇರಿ ಜಿಲ್ಲೆಯ ಡಿಡಿಸಿಎ ಮತ್ತು ಡಿಆರ್‌ಸಿಎಸ್ ಅವರು ಕ್ಲೈಮ್ ಬಿಲ್ಲುಗಳನ್ನು ದೃಢೀಕರಿಸುವ ಮತ್ತು ಅಂಗೀಕರಿಸುವ ಸಮಯದಲ್ಲಿ ಬ್ಯಾಂಕಿನ ಇತರೆ ಸಂಬಂಧಪಟ್ಟ ದಾಖಲೆಗಳೊಂದಿಗೆ ವಿಮರ್ಶಾತ್ಮಕ ಪರಿಶೀಲನೆ ನಡೆಸಿದ್ದಲ್ಲಿ ಈ ರೀತಿಯ ಅಕ್ರಮ ಕ್ಲೈಮ್‌ಗಳನ್ನು ತಡೆಯಬಹುದಾಗಿತ್ತು. ಈ ವಿಷಯದ ಬಗ್ಗೆ ಗಮನ ಸೆಳೆದಾಗ ಡಿಡಿಸಿಎ, ಹಾವೇರಿ ಜಿಲ್ಲೆ ಇವರು ಅಕ್ರಮಗಳಾಗಿರುವ ಬಗ್ಗೆ ದೃಢೀಕರಿಸಿ (ಅಕ್ಟೋಬರ್ 2008) ಕೆಲಸದ ಒತ್ತಡದಿಂದಾಗಿ ಕ್ಲೈಮ್‌ಗಳನ್ನು ದೃಢೀಕರಿಸುವಾಗ ಈ ಅಕ್ರಮ ಕ್ಲೈಮ್‌ಗಳನ್ನು ಕಂಡುಹಿಡಿಯಲು ಆಗಲಿಲ್ಲವೆಂದು ತಿಳಿಸಿರುತ್ತಾರೆ.

### ವಾಸ್ತವಿಕ ಅಂಶಗಳನ್ನು ತಪ್ಪಾಗಿ ನಿರೂಪಿಸಿ ಅಕ್ರಮ ಕ್ಲೈಮುಗಳ ಸಲ್ಲಿಕೆ

**ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಪೀಕಾರ್ಡ್ ಬ್ಯಾಂಕ್‌ಗಳು ವಾಸ್ತವಿಕ ಅಂಶಗಳನ್ನು ತಪ್ಪಾಗಿ ನಿರೂಪಿಸಿ ರೂ.56.49 ಕೋಟಿ ಕ್ಲೈಮ್ ಮಾಡಿದವು**

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಪಿಎಸಿಎಸ್‌ಗಳು ಪರೀಕ್ಷಾ–ತನಿಖೆಗೊಳಪಟ್ಟ 25,815 ಪ್ರಕರಣಗಳಲ್ಲಿ ಎಲ್ಲ ರೈತರೂ ನಿಗದಿತ ಅಂತಿಮ ದಿನಾಂಕದೊಳಗೆ ಅಸಲಿನ ಬಾಬ್ತು ರೂ.25,000 ಕ್ಕಿಂತಲೂ ಅಧಿಕ ಹಣವನ್ನು ಪಾವತಿಸಿದ್ದಾರೆಂದು ತಪ್ಪಾಗಿ ನಿರೂಪಿಸಿ ಅಕ್ರಮವಾಗಿ ರೂ.56.49 ಕೋಟಿ ಮೊತ್ತದ ಕ್ಲೈಮ್ ಸಲ್ಲಿಸಿದರು. ರೈತರು ಸಾಲವನ್ನು ನಿಗದಿತ ದಿನಾಂಕದೊಳಗೆ ಮರುಪಾವತಿ ಮಾಡಿದ್ದೇ ಆಗಿದ್ದರೆ ಪಿಎಸಿಎಸ್‌ಗಳು ಆ ಹಣವನ್ನು ಬ್ಯಾಂಕಿಗೆ ಜಮಾ ಮಾಡಬೇಕಿತ್ತು ಮತ್ತು ಇದರಿಂದ ಪುನರ್‌ಭರ್ತಿಗೆ ಅವರು ಮಾಡಿದ್ದ ಕ್ಲೈಮುಗಳು ಅಧಿಕೃತಗೊಳ್ಳುತ್ತಿದ್ದವು. ಆದರೆ ಬ್ಯಾಂಕ್ ಸ್ಕ್ರೋಲ್ ಮತ್ತು ಸಾಲ ಖಾತೆಗಳೊಂದಿಗೆ ಕ್ಲೈಮ್ ಬಿಲ್ಲುಗಳನ್ನು ಪರಿಶೀಲಿಸಿದಾಗ ಹಾಗೆ ಜಮೆ ಮಾಡಿಲ್ಲದಿರುವುದು ಕಂಡುಬಂದಿತು. ಹೀಗೆ ಕಡಿಮೆ ಜಮೆಯಾದ ಮೊತ್ತದ ಪರಿಮಾಣ ರೂ.91.52 ಕೋಟಿ ಆಗಿದ್ದಿತು. ಈ ಬಗ್ಗೆ ಲೆಕ್ಕಪರಿಶೋಧನೆಯು ಗಮನ ಸೆಳೆದಾಗ (ಜೂನ್–ಆಗಸ್ಟ್ 2008) ಈ ಎಲ್ಲ ಪ್ರಕರಣಗಳಲ್ಲಿ ಕ್ಲೈಮ್‌ಗಳನ್ನು ಸಮರ್ಥಿಸುವ ಯಾವುದೇ ಪುರಾವೆಗಳನ್ನು ಒದಗಿಸಲು ಪಿಎಸಿಎಸ್‌ಗಳು ವಿಫಲರಾದವು. ಸಂಬಂಧಪಟ್ಟ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳೂ ಸಹ ಕ್ಲೈಮ್‌ಗಳನ್ನು ದೃಢೀಕರಿಸುವಾಗ ಮತ್ತು ಅಂಗೀಕರಿಸುವಾಗ ಅಗತ್ಯ ತಪಾಸಣೆ ನಡೆಸುವಲ್ಲಿ ವಿಫಲರಾದ ಕಾರಣ ರೂ.56.49 ಕೋಟಿ (**ಅನುಬಂಧ 3.17**) ಹೆಚ್ಚುವರಿ ಪಾವತಿಗೆ ಕಾರಣವಾಯಿತು. ಈ ಸಂಬಂಧ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳ ಅಭಿಪ್ರಾಯಗಳನ್ನು ನಿರೀಕ್ಷಿಸಲಾಗಿದೆ (ಅಕ್ಟೋಬರ್ 2008).

### ನಿಗದಿತ ದಿನಾಂಕಕ್ಕೆ ಮೊದಲು ಮತ್ತು ನಂತರ ಪಡೆದ ಸಾಲಗಳ ಕ್ಲೈಮ್‌ಗಳನ್ನು ಅಕ್ರಮವಾಗಿ ಸೇರಿಸಿರುವುದು

ಬೀದರ್ ಜಿಲ್ಲೆಯ ಪಿಎಸಿಎಸ್ 1 ಜನವರಿ 2006ರ ಮೊದಲು ಅಥವಾ 31 ಡಿಸೆಂಬರ್ 2006ರ ನಂತರ ವಿತರಿಸಿದ ಸಾಲಗಳ ಒಟ್ಟು 117 ಪ್ರಕರಣಗಳಲ್ಲಿ ಕ್ಲೈಮ್‌ಗಳನ್ನು ಅಕ್ರಮವಾಗಿ ಸೇರಿಸಿತು. ದೃಢೀಕರಿಸುವ ಮತ್ತು ಅಂಗೀಕರಿಸುವ ಪ್ರಾಧಿಕಾರಗಳಿಂದ ನಿರಾಕರಿಸಲ್ಪಡದೆ ಪಾವತಿಯಾದ ಒಟ್ಟು ಮೊತ್ತ ರೂ.24.21 ಲಕ್ಷವಾಗಿತ್ತು. ಈ ಬಗ್ಗೆ ಗಮನ ಸೆಳೆದಾಗ (ಜುಲೈ 2008) ವ್ಯವಸ್ಥಾಪಕ ನಿರ್ದೇಶಕರು ಡಿಸಿಸಿ ಬ್ಯಾಂಕ್, ಬೀದರ್ ಇವರು ಹಣವನ್ನು ಪುನ: ಸರ್ಕಾರಕ್ಕೆ ಜಮಾ ಮಾಡಿದರು (ಅಕ್ಟೋಬರ್ 2008). ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಪೀಕಾರ್ಡ್ ಬ್ಯಾಂಕ್ 30 ನವೆಂಬರ್ 2005ರಂದು ವಿತರಿಸಿದ ಸಾಲದಲ್ಲಿ ರೂ.5,594ರ ಯೋಗ್ಯವಲ್ಲದ ಕ್ಲೈಮನ್ನು ಸೇರಿಸಿತ್ತು. ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಪೀಕಾರ್ಡ್ ಬ್ಯಾಂಕ್ 31 ಡಿಸೆಂಬರ್ 2006ರಂದು ವಿತರಿಸಿದ ಸಾಲದಲ್ಲಿ ರೂ.25,910 ರಷ್ಟು ಅರ್ಹವಲ್ಲದ ಕ್ಲೈಮನ್ನು ಸೇರಿಸಿತ್ತು.

**ಸಾಲ ಬಾಕಿ ಇಲ್ಲದ ಪ್ರಕರಣಗಳನ್ನು ಅಕ್ರಮವಾಗಿ ಸೇರಿಸಿರುವುದು**

ಯೋಜನೆಯ ಮಾರ್ಗದರ್ಶಿ ಸೂತ್ರಗಳನ್ವಯ 1 ಜನವರಿ 2006 ಮತ್ತು 31 ಡಿಸೆಂಬರ್ 2006ರ ಅವಧಿಯಲ್ಲಿ ಸಾಲ ಪಡೆದ ಹಾಗೂ 31 ಡಿಸೆಂಬರ್ 2006ರೊಳಗೆ ಅಸಲನ್ನು ಸಂಪೂರ್ಣವಾಗಿ ಮರುಪಾವತಿಸಿದ ಎಲ್ಲ ರೈತರೂ ರೂ.25,000ಗಳ ಸಾಲ ಮನ್ನಾ ಮತ್ತು ಸಾಲ ಮರುಪಾವತಿಸಿದ ದಿನಾಂಕದವರೆಗಿನ ಬಡ್ಡಿ ಮನ್ನಾದ ಲಾಭ ಪಡೆಯಲು ಅರ್ಹರಾಗಿರುತ್ತಾರೆ. ಆದಾಗ್ಯೂ ಮನ್ನಾ ಆಗಲು ಅರ್ಹವಾದ ಮೊತ್ತವನ್ನು ಖಜಾನೆಯಲ್ಲಿ ಠೇವಣಿ ಇಡಬೇಕಾಗಿದ್ದು ಮೂರು ವರ್ಷಗಳ ನಂತರ ವಾರ್ಷಿಕ ಶೇಕಡ ನಾಲ್ಕರ ಬಡ್ಡಿಯನ್ನು ಸೇರಿಸಿ ಆ ಹಣವನ್ನು ರೈತರಿಗೆ ಮರುಪಾವತಿಸಬೇಕಿತ್ತು. ಅದರಂತೆ ಆರ್‌ಸಿಎಸ್ ಅವರು ಇಂತಹ ಕ್ಲೈಮ್‌ಗಳನ್ನು ಪ್ರತ್ಯೇಕವಾಗಿ ನಮೂದಿಸುವಂತೆ ಸೂಚನೆಗಳನ್ನು ಹೊರಡಿಸಿದ್ದರು. ಹೀಗಿದ್ದರೂ ಬೀದರ್ ಜಿಲ್ಲೆಯ ಪಿಎಸಿಎಸ್‌ಗಳು ಅಂತಹ ಪ್ರಕರಣಗಳನ್ನು ಪ್ರತ್ಯೇಕವಾಗಿ ತೋರಿಸದೇ ತಮ್ಮ ಕ್ಲೈಮ್ ಬಿಲ್ಲುಗಳಲ್ಲಿ ಅಕ್ರಮವಾಗಿ ಸೇರಿಸಿ 30 ಪ್ರಕರಣಗಳಲ್ಲಿ ಒಟ್ಟು ರೂ.5.03 ಲಕ್ಷ ಮೊತ್ತವನ್ನು ಪಡೆದಿದ್ದನ್ನು ಗಮನಿಸಲಾಯಿತು. ಇದನ್ನು ಆಕ್ಷೇಪಿಸಲಾಗಿ (ಜುಲೈ 2008) ಡಿಸಿಸಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರು ಈ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿದರು (ಅಕ್ಟೋಬರ್ 2008).

**ಹೆಚ್ಚಿನ ದರದಲ್ಲಿ ಬಡ್ಡಿ ಕ್ಲೈಮ್ ಮಾಡಿರುವುದು**

ಬಡ್ಡಿ ರಿಯಾಯಿತಿ ಯೋಜನೆಯನ್ವಯ ಸಹಕಾರಿ ಪತ್ತಿನ ಸಂಸ್ಥೆಗಳು ಸರ್ಕಾರದ ಪಾಲಿನ ಬಡ್ಡಿಗೆ ಮಾತ್ರ ಕ್ಲೈಮ್ ಸಲ್ಲಿಸಲು ಅರ್ಹವಾಗಿರುತ್ತವೆ (ಅಲ್ಪಾವಧಿ ಮತ್ತು ಮಧ್ಯಮಾವಧಿ ಅಥವಾ ದೀರ್ಘಾವಧಿ ಕೃಷಿ ಸಾಲಗಳನ್ನು ಅವಲಂಬಿಸಿ ಶೇಕಡ 5.50ರಂತೆ ಮತ್ತು ಶೇಕಡ 7.50ರಂತೆ). ಆದಾಗ್ಯೂ ನವಲಗುಂದದ ಪೀಕಾರ್ಡ್ ಬ್ಯಾಂಕ್ 33 ಪ್ರಕರಣಗಳಲ್ಲಿ ಪೂರ್ಣ ಪ್ರಮಾಣದ ಬಡ್ಡಿಗೆ ಕ್ಲೈಮ್ ಸಲ್ಲಿಸಿದ್ದರಿಂದ ರೂ.23,367 ರಷ್ಟು ಅಧಿಕ ಕ್ಲೈಮಿನಲ್ಲಿ ಪರಿಣಮಿಸಿದ್ದನ್ನು ಗಮನಿಸಲಾಯಿತು.

**'ಯಶಸ್ವಿನಿ ಯೋಜನೆಯಡಿ' ಪಾವತಿಸಿದ ಆರೋಗ್ಯ ವಿಮೆಯನ್ನು ಅಕ್ರಮವಾಗಿ ಸೇರಿಸಿರುವುದು**

ಬೀದರ್ ಮತ್ತು ಬಿಜಾಪುರ ಜಿಲ್ಲೆಯ ಪಿಎಸಿಎಸ್‌ಗಳು 'ಯಶಸ್ವಿನಿ ಯೋಜನೆ' ಯಡಿಯಲ್ಲಿ ರೈತರು ಪಾವತಿಸಿದ ಆರೋಗ್ಯ ವಿಮಾ ಹಣವನ್ನು ಸಾಲದ ಕಂತು ಎಂದು ಪರಿಗಣಿಸಿ ಸರ್ಕಾರಕ್ಕೆ ಒಟ್ಟು ರೂ.52.19 ಲಕ್ಷಗಳ ಪುನರ್ಭರಣ ಬಿಲ್ಲಿನ ಕ್ಲೈಮ್ ಸಲ್ಲಿಸಿತು. ಸರ್ಕಾರದ ಆದೇಶಗಳಲ್ಲಿ ಈ ರೀತಿಯ ಸೌಲಭ್ಯಗಳನ್ನು ಒದಗಿಸಿಲ್ಲದ ಕಾರಣ ಪಿಎಸಿಎಸ್‌ಗಳ ಈ ಕ್ರಿಯೆಯೂ ಅಕ್ರಮವಾಗಿದ್ದು ಸಂಬಂಧಪಟ್ಟ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳು ಕ್ಲೈಮ್‌ಗಳ ತಪಾಸಣೆ ಮತ್ತು ಲೆಕ್ಕಪರಿಶೋಧನೆಯಲ್ಲಿ ಕ್ಲೈಮ್‌ಗಳನ್ನು ನಿರಾಕರಿಸಲು ವಿಫಲರಾದರು. ಇದರ ಫಲವಾಗಿ ಪಿಎಸಿಎಸ್‌ಗಳಿಗೆ ರೂ.52.79 ಲಕ್ಷಗಳು ಹೆಚ್ಚುವರಿ ಪಾವತಿಯಾಯಿತು. ಇದರ ಬಗ್ಗೆ ಗಮನ ಸೆಳೆದಾಗ (ಜುಲೈ 2008) ವ್ಯವಸ್ಥಾಪಕ ನಿರ್ದೇಶಕರು, ಡಿಸಿಸಿ ಬ್ಯಾಂಕ್, ಬೀದರ್ ಇವರು ರೂ.32.29 ಲಕ್ಷಗಳನ್ನು ಸರ್ಕಾರಕ್ಕೆ ಜಮೆ ಮಾಡಿದರು (ಅಕ್ಟೋಬರ್ 2008)

### 3.4.3.5 2006–07ನೇ ಸಾಲಿನ ಬಡ್ಡಿ ಮನ್ನಾ ಯೋಜನೆ

ರೈತರು 1 ಫೆಬ್ರವರಿ 2006ರಂದು ಅಥವಾ ನಂತರ ತೆಗೆದುಕೊಂಡ ಅವಧಿ ಕೃಷಿ ಸಾಲದ ಬಾಬ್ತು ದಿನಾಂಕ 30 ಏಪ್ರಿಲ್ 2007ರೊಳಗೆ ಅಸಲನ್ನು ಮರುಪಾವತಿಸಿದ್ದ ಸಂದರ್ಭದಲ್ಲಿ (ರೂ.50,000ಕ್ಕೂ ಮೀರದ ಅಲ್ಪಾವಧಿ ಕೃಷಿ ಸಾಲಗಳನ್ನು ಹೊರತುಪಡಿಸಿ) ಅಂತಹ ಎಲ್ಲ ಅವಧಿ ಕೃಷಿ ಸಾಲದ ಮೇಲಿನ 2006–07ನೇ ಸಾಲಿನ ಬಡ್ಡಿಯನ್ನು ಮನ್ನಾ ಮಾಡುವ ಆದೇಶವನ್ನು ಸರ್ಕಾರವು ಏಪ್ರಿಲ್ 2007ರಲ್ಲಿ ಹೊರಡಿಸಿತು. ಮೇ 2007ರಲ್ಲಿ ಆದೇಶದ ನಿಯಮಗಳನ್ನು ಸಡಿಲಗೊಳಿಸಿ ಯೋಜನೆಯ ಲಾಭವು ಅನ್ವಯವಾಗುವ ಗಡುವು ದಿನಾಂಕವನ್ನು ಹಾಗೂ ಅಸಲು ಮರುಪಾವತಿಯ ಅಂತಿಮ ದಿನಾಂಕವನ್ನು ಕ್ರಮವಾಗಿ 1 ಜನವರಿ 2006 ಮತ್ತು 31 ಮೇ 2007 ಎಂದು ನಿಗದಿಪಡಿಸಿತು. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳ ಪೀಕಾರ್ಡ್ ಬ್ಯಾಂಕ್‌ಗಳ ದಾಖಲೆಗಳು ಈ ಕೆಳಗಿನ ಅಂಶಗಳನ್ನು ತಿಳಿಯಪಡಿಸಿದವು:

### ಸಾಲ ಮನ್ನಾಕ್ಕಾಗಿ ಅನರ್ಹ ಕ್ಲೈಮುಗಳ ಸೇರ್ಪಡಿಕೆ

**ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಪೀಕಾರ್ಡ್ ಬ್ಯಾಂಕ್‌ಗಳು ಅನರ್ಹ ಕ್ಲೈಮುಗಳನ್ನು ಸೇರಿಸಿ ರೂ.38.43 ಲಕ್ಷವನ್ನು ಕ್ಲೈಮ್ ಮಾಡಿದವು**

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳ ಪೀಕಾರ್ಡ್ ಬ್ಯಾಂಕ್‌ಗಳು ಸರ್ಕಾರದ ಆದೇಶದಂತೆ ವಸತಿ, ಜಮೀನು ಖರೀದಿ, ಕೋಳಿ ಸಾಕಾಣಿಕೆ ಮುಂತಾದ ಕೃಷಿಯೇತರ ಚಟುವಟಿಕೆಗಳಿಗಾಗಿ ಪಡೆದ ಸಾಲಗಳನ್ನು ಈ ಯೋಜನೆಯಡಿಯಲ್ಲಿ ಸೇರಿಸಿ 903 ಅನರ್ಹ ಕ್ಲೈಮ್‌ಗಳನ್ನು ಒಟ್ಟು ರೂ.38.43 ಲಕ್ಷಗಳಿಗೆ ಸಲ್ಲಿಸಿದವು. ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳಿಂದ ಯಾವುದೇ ತಪಾಸಣೆಗೊಳಪಡದೇ ಈ ಕ್ಲೈಮ್‌ಗಳು ಸ್ವೀಕಾರವಾದ ಕಾರಣ ರೂ.38.43 ಲಕ್ಷಗಳ ಹೆಚ್ಚಿಗೆ ಮೊತ್ತ ಮನರ್ಭರಣವಾಯಿತು **(ಅನುಬಂಧ 3.18)**

### ವಿವಿಧ ರೀತಿಯ ಅಕ್ರಮ ಕ್ಲೈಮ್‌ಗಳು

**ಸಾಲ ಮನ್ನಾದಡಿಯಲ್ಲಿ ಇತರ ವಿವಿಧ ಅಕ್ರಮ ಕ್ಲೈಮುಗಳಾದ ಅಸಲು ಬಾಕಿ ಇಲ್ಲದಿರುವಿಕೆ, ಮೊದಲೇ ಪಡೆದ ಬಡ್ಡಿ ರಿಯಾಯಿತಿ ಹಾಗೂ ಪೀಕಾರ್ಡ್ ಬ್ಯಾಂಕ್‌ಗಳು ಭರಿಸಬೇಕಾದ ಬಡ್ಡಿಯೂ ಸೇರಿತ್ತು**

ಪರೀಕ್ಷಾ–ತನಿಖೆ ನಡೆಸಲಾದ ಜಿಲ್ಲೆಗಳ ಪೀಕಾರ್ಡ್ ಬ್ಯಾಂಕ್‌ಗಳ ದಾಖಲೆಗಳು ಈ ಕೆಳಗೆ ವಿವರಿಸಿರುವಂತೆ ರೂ.41.46 ಲಕ್ಷ ಮೊತ್ತದ ವಿವಿಧ ರೀತಿಯ ಅಕ್ರಮ ಕ್ಲೈಮ್‌ಗಳನ್ನು ತೋರಿಸಿದವು:

- ಬ್ಯಾಂಕುಗಳು 750 ಪ್ರಕರಣಗಳಲ್ಲಿ **(ಅನುಬಂಧ 3.19)** ಸಾಲದ ಮೇಲಿನ ಬಡ್ಡಿಯ ತಮ್ಮ ಪಾಲನ್ನು (ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳ ಮೇಲೆ ವಾರ್ಷಿಕ ಶೇಕಡ ಒಂದು ಹಾಗೂ ದೀರ್ಘಾವಧಿ ಸಾಲಗಳ ಮೇಲೆ ವಾರ್ಷಿಕ ಶೇಕಡ ಎರಡರಂತೆ) ಸರ್ಕಾರದ ಆದೇಶದ ಪ್ರಕಾರ ಹೊರತುಪಡಿಸದೇ ಕ್ಲೈಮು ಬಿಲ್ಲುಗಳಲ್ಲಿ ಅಕ್ರಮವಾಗಿ ಸೇರಿಸಿದ್ದು ರೂ.5.07 ಲಕ್ಷಗಳ ಹೆಚ್ಚುವರಿ ಕ್ಲೈಮ್ ಮಾಡುವಲ್ಲಿ ಪರಿಣಮಿಸಿತು.
- 2006–07ನೇ ಸಾಲಿನಲ್ಲಿ ವಸೂಲು ಮಾಡಲು ಬಾಕಿ ಇಲ್ಲದ ಅಸಲು ಮೊತ್ತವನ್ನು ಅಕ್ರಮವಾಗಿ 834 ಪ್ರಕರಣಗಳಲ್ಲಿ ಸೇರಿಸಿದ್ದು ಧಾರವಾಡ, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪೀಕಾರ್ಡ್ ಬ್ಯಾಂಕುಗಳಿಗೆ ರೂ.10.70 ಲಕ್ಷಗಳ ಹೆಚ್ಚುವರಿ ಮೊತ್ತದ ಮನರ್ಭರಣದಲ್ಲಿ ಪರಿಣಮಿಸಿತು.
- ಧಾರವಾಡ ಜಿಲ್ಲೆಯ ನವಲಗುಂದ ಹಾಗೂ ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿಯ ಪೀಕಾರ್ಡ್ ಬ್ಯಾಂಕ್‌ಗಳು ಸರ್ಕಾರದಿಂದ ಆಗಲೇ ಕೊಡಲ್ಪಟ್ಟಿದ್ದ ಬಡ್ಡಿ ರಿಯಾಯಿತಿ ಮೊತ್ತವನ್ನು ಅಕ್ರಮವಾಗಿ ಸೇರಿಸಿ ಕ್ಲೈಮ್ ಮಾಡಿದ್ದರ ಪರಿಣಾಮವಾಗಿ 334 ಪ್ರಕರಣಗಳಲ್ಲಿ ಒಟ್ಟು ರೂ.15.81 ಲಕ್ಷಗಳ ಎರಡು ಬಾರಿ ಮನರ್ಭರಣೆ ಆದಂತಾಯಿತು.
- 1 ಜನವರಿ 2006ಕ್ಕೆ ಮುನ್ನ ಅಥವಾ 31 ಡಿಸೆಂಬರ್ 2006ರ ನಂತರದಲ್ಲಿ ಸಾಲ ಮಂಜೂರು ಮಾಡಿದ 244 ಪ್ರಕರಣಗಳನ್ನು ಬ್ಯಾಂಕ್‌ಗಳು ಅಕ್ರಮವಾಗಿ ಸೇರಿಸಿದ್ದು ರೂ.9.88 ಲಕ್ಷಗಳ ಹೆಚ್ಚುವರಿ ಕ್ಲೈಮುಗಳಿಗೆ ಕಾರಣವಾಯಿತು **(ಅನುಬಂಧ 3.20)**

ಸಂಬಂಧಪಟ್ಟ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳು ಮೇಲಿನ ಕ್ಲೈಮುಗಳು ಸರಿಯಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳದಿದ್ದುದು ರೂ.41.46 ಲಕ್ಷ ಅಧಿಕ ಕ್ಲೈಮ್ ಮಾಡುವಲ್ಲಿ ಪರಿಣಮಿಸಿತು.

### 3.4.3.6 2007ರ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಯೋಜನೆ

31 ಡಿಸೆಂಬರ್ 2006ರಂತೆ ಅವಧಿ ಮೀರಿದ ಮತ್ತು 30 ಏಪ್ರಿಲ್ 2007ರೊಳಗೆ ಅಸಲು ಮರುಪಾವತಿಯಾಗಿರುವ ರೈತರು ಪಡೆದ ಎಲ್ಲಾ ಅವಧಿ ಕೃಷಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಲು ಏಪ್ರಿಲ್ 2007ರಲ್ಲಿ ಸರ್ಕಾರವು ಆದೇಶ ಹೊರಡಿಸಿತು. ಸರ್ಕಾರವು ಮೇ 2007ರಲ್ಲಿ ಇನ್ನೊಂದು ಆದೇಶವನ್ನು ಹೊರಡಿಸಿ ಮರುಪಾವತಿಯ ದಿನಾಂಕವನ್ನು 31 ಮೇ 2007ಕ್ಕೆ ಸಡಿಲಿಸಿತು.

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳ ಪಿಎಸಿಎಸ್ ಮತ್ತು ಪೀಕಾರ್ಡ್ ಬ್ಯಾಂಕ್‌ಗಳ ದಾಖಲೆಗಳ ಸಮೀಕ್ಷೆಯಿಂದ ಕೆಳಗಿನ ಅಂಶಗಳು ತಿಳಿದುಬಂದವು:

### ಅನರ್ಹ ಕ್ಲೈಮ್‌ಗಳನ್ನು ಸೇರಿಸಿರುವುದು

**ಕೃಷಿಯೇತರ ಚಟುವಟಿಕೆಗಳಿಗೆ ತೆಗೆದುಕೊಂಡ ರೂ.4.40 ಕೋಟಿ ಮೊತ್ತದ ಸಾಲಗಳನ್ನು ಕ್ಲೈಮ್‌ಗಳಲ್ಲಿ ಸೇರಿಸಲಾಗಿತ್ತು**

ಸಹಕಾರೀ ಪತ್ತಿನ ಸಂಸ್ಥೆಗಳು 2,188 ಪ್ರಕರಣಗಳಲ್ಲಿ ವಸತಿ, ಜಮೀನು ಖರೀದಿ, ಕೋಳಿ ಸಾಕಾಣಿಕೆ, ಹಂದಿ ಸಾಕಣೆ ಮುಂತಾದ ಕೃಷಿಯೇತರ ಸಾಲಗಳು ಮತ್ತು ಕೃಷಿಗೆ ಸಂಬಂಧವಿಲ್ಲದ ಸಾಲಗಳನ್ನು ಅಕ್ರಮವಾಗಿ ಸೇರಿಸಿ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಯೋಜನೆಯಡಿ ಒಟ್ಟು ರೂ.4.40 ಕೋಟಿಯ ಕ್ಲೈಮನ್ನು ಸಲ್ಲಿಸಿ ಮನರ್ಭರಿಸಿಕೊಂಡಿದ್ದವು. ಸಂಬಂಧಪಟ್ಟ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳಿಂದ ಈ ಕ್ಲೈಮುಗಳ ಸೂಕ್ಷ್ಮ ಪರಿಶೀಲನೆಯ ಕೊರತೆಯಿಂದಾಗಿ ರೂ.4.40 ಕೋಟಿ ಹೆಚ್ಚುವರಿ ಕ್ಲೈಮುಗಳನ್ನು ಅಂಗೀಕರಿಸುವಂತಾಯಿತು **(ಅನುಬಂಧ 3.21)**

### ವಾಸ್ತವಿಕ ಅಂಶಗಳನ್ನು ತಪ್ಪಾಗಿ ನಿರೂಪಿಸಿ ಅಕ್ರಮ ಕ್ಲೈಮ್ ಮಾಡಿರುವುದು

**ಶಿಗ್ಗಾಂವ್‌ನ ಪೀಕಾರ್ಡ್ ಬ್ಯಾಂಕ್ ವಾಸ್ತವಿಕ ಅಂಶಗಳನ್ನು ತಪ್ಪಾಗಿ ನಿರೂಪಿಸಿ ರೂ.3.12 ಲಕ್ಷ ಕ್ಲೈಮ್ ಮಾಡಿತು**

ರೈತರು ನಿಗದಿತ ದಿನಾಂಕದೊಳಗೆ ಅಸಲನ್ನು ಅಥವಾ ಬಡ್ಡಿಯನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದರೂ ಸಹ ಹಾವೇರಿ ಜಿಲ್ಲೆಯ ಶಿಗ್ಗಾಂವ್‌ನ ಪೀಕಾರ್ಡ್ ಬ್ಯಾಂಕ್ ರೂ.3.08 ಲಕ್ಷಗಳ ಅಂತಹ 11 ಪ್ರಕರಣಗಳನ್ನು ಕ್ಲೈಮ್‌ಗಳಲ್ಲಿ ಅಕ್ರಮವಾಗಿ ಸೇರಿಸಿತು. ಬಡ್ಡಿ/ಸುಸ್ತಿಬಡ್ಡಿ ಮನ್ನಾ ಯೋಜನೆಯ ಲಾಭ ಪಡೆಯುವ ಉದ್ದೇಶದಿಂದ ಮೇಲಿನ ಎಲ್ಲ ಪ್ರಕರಣಗಳಲ್ಲೂ ಬ್ಯಾಂಕ್, ರೈತರು ಪಾವತಿ ಮಾಡಿದ ಅಸಲು/ಬಡ್ಡಿಯ ಕೊನೆಯ ಕಂತನ್ನು ಅಮಾನತ್ತು ಖಾತೆಗೆ ವರ್ಗಾಯಿಸಿ 31 ಡಿಸೆಂಬರ್ 2006ಕ್ಕೆ ಅಸಲು/ಬಡ್ಡಿ ಬಾಕಿ ಇತ್ತೆಂದು ತೋರಿಸಿ ತದನಂತರ ಸಂಬಂಧಪಟ್ಟ ಸಾಲದ ಖಾತೆಗೆ ವರ್ಗಾಯಿಸಿ ರೈತರು 31ನೇ ಮೇ 2007ರೊಳಗೆ ಅಸಲು/ಬಡ್ಡಿಯ ಕಂತನ್ನು ಜಮಾ ಮಾಡಿದ್ದರೆಂದು ತೋರಿಸುವ ರೀತಿಯಲ್ಲಿ ಲೆಕ್ಕಪತ್ರಗಳಲ್ಲಿ ಬಿಂಬಿಸಿತು. ರೈತರು 24.4.2007ರಿಂದ 10 ಮೇ 2007ರ ಅವಧಿಯಲ್ಲಿ ಅಸಲು ಕಂತುಗಳನ್ನು ಪಾವತಿಸಿರುವ 12 ಪ್ರಕರಣಗಳಲ್ಲಿಯೂ ಸಹ ರೂ.4,335ರಷ್ಟು ಹೆಚ್ಚಿನ ಬಡ್ಡಿ ಮನ್ನಾ ಲಾಭ ಪಡೆಯುವ ಸಲುವಾಗಿ ಬ್ಯಾಂಕ್ ಈ ಪಾವತಿಗಳನ್ನು ಅಮಾನತ್ತು ಖಾತೆಗೆ ವರ್ಗಾಯಿಸಿ ಪುನ: 31 ಮೇ 2007ರಂದು ಸಂಬಂಧಪಟ್ಟ ಖಾತೆಗಳಿಗೆ ವರ್ಗಾಯಿಸಿ ಅಕ್ರಮ ಕ್ಲೈಮ್ ಸಲ್ಲಿಸಿತ್ತು. ಈ ಅಕ್ರಮ ಕ್ಲೈಮ್‌ಗಳನ್ನು ಹಾವೇರಿ ಜಿಲ್ಲೆಯ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳು ಗಮನಿಸದೇ ಇದ್ದುದರ ಪರಿಣಾಮವಾಗಿ ರೂ.31.2 ಲಕ್ಷಗಳು ಹೆಚ್ಚುವರಿ ಪುನರ್ಭರ್ತಿಯಾಯಿತು. ಈ ವಿಷಯದ ಬಗ್ಗೆ ಗಮನ ಸೆಳೆದಾಗ ಹಾವೇರಿ ಜಿಲ್ಲೆಯ ಡಿಡಿಸಿಎಯವರು ಅಕ್ರಮಗಳಾಗಿರುವ ಬಗ್ಗೆ ದೃಢಪಡಿಸಿ (ಅಕ್ಟೋಬರ್ 2008) ಕೆಲಸದ ಒತ್ತಡದಿಂದ ಕ್ಲೈಮ್‌ಗಳನ್ನು ದೃಢೀಕರಿಸುವಾಗ ಅಕ್ರಮ ಕ್ಲೈಮ್‌ಗಳನ್ನು ಕಂಡು ಹಿಡಿಯಲಾಗಲಿಲ್ಲವೆಂದು ತಿಳಿಸಿರುತ್ತಾರೆ.

### ಇತರೆ ವಿವಿಧ ರೀತಿಯ ಅಕ್ರಮ ಕ್ಲೈಮ್‌ಗಳು

**ಸಾಲ ಮನ್ನಾ ಯೋಜನೆಯಡಿಯಲ್ಲಿ ಇತರ ವಿವಿಧ ಅಕ್ರಮ ಕ್ಲೈಮ್‌ಗಳಾದ ಬಾಕಿ ಇಲ್ಲದ ಅಸಲು ಮೇಲಿನ ಬಡ್ಡಿ, ಕೇಂದ್ರ ಸರ್ಕಾರವು ಈಗಾಗಲೇ ಮನ್ನಾ ಮಾಡಿರುವ ಬಡ್ಡಿ ಇತ್ಯಾದಿಗಳ ಒಟ್ಟು ಮೊತ್ತ ರೂ.53.92 ಲಕ್ಷ ಸೇರಿದ್ದವು**

ಪರೀಕ್ಷಾ–ತನಿಖೆ ನಡೆಸಿದ ಹಾಸನ, ಚಿತ್ರದುರ್ಗ, ಉಡುಪಿ, ಧಾರವಾಡ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ಪೀಕಾರ್ಡ್ ಬ್ಯಾಂಕ್‌ಗಳ ದಾಖಲೆಗಳಿಂದ ಈ ಯೋಜನೆಯಡಿ ಸೇರಿಸಿದ್ದ ಕೆಳಕಂಡ ಅಕ್ರಮ ಕ್ಲೈಮ್‌ಗಳನ್ನು ಗಮನಿಸಲಾಯಿತು:

- ಅರಸೀಕೆರೆ, ಜಗಳೂರು ಮತ್ತು ಕುಂದಾಪುರಗಳ ಪೀಕಾರ್ಡ್ ಬ್ಯಾಂಕ್‌ಗಳು 31 ಡಿಸೆಂಬರ್ 2006ಕ್ಕೆ ಪಾವತಿಸಲು ಬಾಕಿ ಇದ್ದು ಆದರೆ ಅವಧಿ ಮೀರದ (ಸರ್ಕಾರಿ ಆದೇಶದ ಅನ್ವಯ ಬಡ್ಡಿ ಮತ್ತು ಸುಸ್ತಿಬಡ್ಡಿಯ ಮನ್ನಾಕ್ಕೆ ಅರ್ಹವಾಗಲು) ಅಸಲು ಮೊತ್ತವನ್ನೂ ಸಹ 1,780 ಪ್ರಕರಣಗಳಲ್ಲಿ ಸೇರಿಸಿರುವುದು ರೂ.51.09 ಲಕ್ಷ ಅಧಿಕ ಕ್ಲೈಮ್‌ನಲ್ಲಿ ಪರಿಣಮಿಸಿತು.
- ನವಲಗುಂದ ಮತ್ತು ಕಾರ್ಕಳದ ಪೀಕಾರ್ಡ್ ಬ್ಯಾಂಕ್‌ಗಳು 167 ಪ್ರಕರಣಗಳಲ್ಲಿ ಸರ್ಕಾರದ ಆದೇಶದ ಪ್ರಕಾರ ಈ ಯೋಜನೆಯಡಿ ತಾವು ಭರಿಸಬೇಕಾದ ಬಡ್ಡಿಯ ಪಾಲನ್ನೂ ಸಹ ಕ್ಲೈಮ್‌ನಲ್ಲಿ ಸೇರಿಸಿದ್ದು ರೂ.1.14 ಲಕ್ಷ ಅಧಿಕ ಕ್ಲೈಮ್‌ನಲ್ಲಿ ಪರಿಣಮಿಸಿತು.
- ದೇಶದಲ್ಲಿ ಆತ್ಮಹತ್ಯೆ ಪೀಡಿತ ಜಿಲ್ಲೆಗಳಿಗೆ ಪ್ರಧಾನ ಮಂತ್ರಿಗಳ ವಿಶೇಷ ಪುನರ್ವಸತಿ ಕಾರ್ಯಕ್ರಮ ಯೋಜನೆಯಡಿ ಭಾರತ ಸರ್ಕಾರದಿಂದ ಆಗಲೇ ಸಂಪೂರ್ಣ ಮನ್ನಾ ಆಗಿದ್ದ 1 ಜುಲೈ 2001ರಂದು ಬಡ್ಡಿ ಬಾಕಿ ಇರುವ 27 ಸಾಲ ಪ್ರಕರಣಗಳನ್ನು ಕರ್ನಾಟಕ ಸರ್ಕಾರದ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಶಿವಮೊಗ್ಗದ ಪೀಕಾರ್ಡ್ ಬ್ಯಾಂಕ್ ಅಕ್ರಮವಾಗಿ ಸೇರಿಸಿತು. ಇದು ರೂ.90,719 ರಷ್ಟು ಮೊತ್ತವನ್ನು ಎರಡುಬಾರಿ ಕ್ಲೈಮ್ ಮಾಡುವಲ್ಲಿ ಪರಿಣಮಿಸಿತು.

- 2006–07ರ ಅವಧಿಯಲ್ಲಿ ವಸೂಲಾತಿ ಬಾಕಿ ಇದ್ದ ಅಸಲಿನ ಪ್ರಕರಣಗಳಿಗೆ ಮಾತ್ರ ಯೋಜನೆಯು ಅನ್ವಯವಾಗುತ್ತಿತ್ತು. ಆದರೆ, ಉಡುಪಿಯ ಪೀಕಾರ್ಡ್ ಬ್ಯಾಂಕ್ 2006–07ರ ಅವಧಿಯಲ್ಲಿ ವಸೂಲಾತಿ ಬಾಕಿ ಇರದಿದ್ದ ಪ್ರಕರಣಗಳನ್ನೂ ಸಹ ಅಕ್ರಮವಾಗಿ ಸೇರಿಸಿತು. ಈ ರೀತಿ ಮೂರು ಪ್ರಕರಣಗಳಲ್ಲಿ ಮಾಡಿದ ಅಧಿಕ ಕ್ಲೈಮ್ ರೂ.20,992 ಆಗಿತ್ತು.
- ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ಪೀಕಾರ್ಡ್ ಬ್ಯಾಂಕ್ 31 ಡಿಸೆಂಬರ್ 2006ರಲ್ಲಿದ್ದಂತೆ ಯಾವ ಸಾಲವೂ ಬಾಕಿಯಿರದಿದ್ದ 15 ಪ್ರಕರಣಗಳ ಸಂಬಂಧದಲ್ಲಿ ರೂ.47,161ನ್ನು ಬಡ್ಡಿ ಮನ್ನವಾಗಿ ತಪ್ಪಾಗಿ ಕ್ಲೈಮ್ ಮಾಡಿತು.
- ಶಿವಮೊಗ್ಗ ಜಿಲ್ಲೆಯ ಸಾಗರದ ಪೀಕಾರ್ಡ್ ಬ್ಯಾಂಕ್ ಒಂದು ಪ್ರಕರಣದಲ್ಲಿ ಅಸಲಿನ ಕಂತನ್ನು ತಪ್ಪಾಗಿ ಬಡ್ಡಿಯ ಕಂತಿಗೆ ಸೇರಿಸಿ ಕ್ಲೈಮ್ ಮಾಡಿದ್ದು ರೂ.9,965 ಅಧಿಕ ಕ್ಲೈಮ್‌ನಲ್ಲಿ ಪರಿಣಮಿಸಿತು.

### 3.4.4 ನಿರ್ಣಯ

ಕರ್ನಾಟಕ ಸರ್ಕಾರದಿಂದ ವಿವರವಾದ ಮಾರ್ಗಸೂಚಿಗಳಿದ್ದರೂ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳಿಂದ ಕ್ಲೈಮ್‌ಗಳ ಸಮರ್ಥ ಪರಿಶೀಲನೆಯಾಗದ ಕಾರಣ ಸಾಲ/ಬಡ್ಡಿ ಮನ್ನಾ ಮತ್ತು ಬಡ್ಡಿ ರಿಯಾಯಿತಿ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಗೊಳ್ಳಲಿಲ್ಲ. ಸಹಕಾರೀ ಸಂಸ್ಥೆಗಳು ಸರ್ಕಾರದ ಆದೇಶಗಳಲ್ಲಿನ ನಿಬಂಧನೆಗಳು ಮತ್ತು ಷರತ್ತುಗಳನ್ನು ಸರಿಯಾಗಿ ಅನುಸರಿಸದೆ ಅನರ್ಹ ಕ್ಲೈಮ್‌ಗಳನ್ನು ಸಲ್ಲಿಸಿ ಹಾಗೂ ಅದನ್ನು ತಪ್ಪಿಸಿಕೊಳ್ಳಲು ವಾಸ್ತವಿಕ ಅಂಶಗಳನ್ನು ತಪ್ಪಾಗಿ ನಿರೂಪಿಸಿದ್ದೂ ಅಲ್ಲದೆ ಇದರ ಜೊತೆಗೆ ನಿಯಂತ್ರಣ ಅಧಿಕಾರಿಗಳಿಂದ ಸಾಕಷ್ಟು ಪ್ರಮಾಣದ ತನಿಖೆಗಳ ಅನುಪಸ್ಥಿತಿ ಇವೇ ಮೊದಲಾದ ನ್ಯೂನತೆಗಳಿಂದ ಪರೀಕ್ಷಾ–ತನಿಖೆ ನಡೆಸಿದ 13 ಜಿಲ್ಲೆಗಳಲ್ಲಿನ ಒಟ್ಟು 8,32,554 ಕ್ಲೈಮ್‌ಗಳ ಪೈಕಿ 81,838 ಕ್ಲೈಮ್‌ಗಳಲ್ಲಿ ಒಟ್ಟು ರೂ.110.40 ಕೋಟಿ ಮೊತ್ತವನ್ನು ಅಕ್ರಮವಾಗಿ ಪುನರ್ಭರ್ತಿ ಮಾಡುವಲ್ಲಿ ಪರಿಣಮಿಸಿತು. ತತ್ಪರಿಣಾಮವಾಗಿ ಸರ್ಕಾರದಿಂದ ಘೋಷಣೆಯಾದ ಅನೇಕ ಮನ್ನಾ ಹಾಗೂ ರಿಯಾಯಿತಿ ಯೋಜನೆಗಳನ್ನು ಸಹಕಾರಿ ಪತ್ತಿನ ಸಂಸ್ಥೆಗಳು ತಮ್ಮ ಆರ್ಥಿಕ ಹಿತಾಸಕ್ತಿಯನ್ನು ಬೆಳೆಸಿಕೊಳ್ಳುವ ಉದ್ದೇಶದಿಂದ ಶೋಷಣೆ ಮಾಡಿದವು.

### 3.4.5 ಶಿಫಾರಸುಗಳು

- ಸಹಕಾರೀ ಪತ್ತಿನ ಸಂಸ್ಥೆಗಳು ವಾಸ್ತವಾಂಶಗಳನ್ನು ತಪ್ಪಾಗಿ ನಿರೂಪಿಸಿ ಅನರ್ಹ ಕ್ಲೈಮುಗಳನ್ನು ಸೇರಿಸುವುದರ ಮೂಲಕ ಅಧಿಕ ಮೊತ್ತದ ಕ್ಲೈಮ್‌ಗಳನ್ನು ಸಲ್ಲಿಸಿದ್ದರ ಬಗ್ಗೆ ತನಿಖೆ ಮಾಡಲು ಮತ್ತು ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು.
- ಸಹಕಾರಿ ಸಂಘಗಳು ಮಾಡಿದ ಹೆಚ್ಚುವರಿ ಕ್ಲೈಮ್‌ಗಳನ್ನು ತಡೆಯಲು ನಿಗದಿತ ತನಿಖೆಗಳನ್ನು ಚಲಾಯಿಸುವಲ್ಲಿ ವಿಫಲರಾದ ಡಿಡಿಸಿಎ ಮತ್ತು ಡಿಆರ್‌ಸಿಎಸ್‌ಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.
- ಸಹಕಾರಿ ಪತ್ತಿನ ಸಂಸ್ಥೆಗಳು ಪಡೆದಿರುವ ಅಧಿಕ ಕ್ಲೈಮ್‌ಗಳನ್ನು ಅತಿ ಶೀಘ್ರವಾಗಿ ವಸೂಲು ಮಾಡಬೇಕು/ಮುಂದಿನ ಪಾವತಿಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕು.
- ಇಂತಹ ಅಕ್ರಮ ಕ್ಲೈಮ್‌ಗಳ ಪುನರಾವರ್ತನೆಯನ್ನು ತಪ್ಪಿಸಲು ಒಂದು ಸೂಕ್ತ ವ್ಯವಸ್ಥೆಯನ್ನು ರೂಪಿಸಬೇಕು.

ಈ ವಿಷಯಗಳನ್ನು ಸೆಪ್ಟಂಬರ್ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

# ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ

## 3.5 ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ರ ನಿರ್ವಹಣೆ

### 3.5.1 ಪರಿಚಯ

ಅರಣ್ಯಗಳನ್ನು ಸಂರಕ್ಷಿಸುವ ಹಾಗೂ ಪ್ರತಿಕೂಲ ಪರಿಸರ ಪ್ರಭಾವ ಮತ್ತು ಜೈವಿಕ ಸ್ಥಿರತೆಗೆ ಅಪಾಯವನ್ನು ಕುಗ್ಗಿಸುವ ದೃಷ್ಟಿಯಿಂದ, ಕೇಂದ್ರ ಸರ್ಕಾರವು ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ನ್ನು ಜಾರಿಗೊಳಿಸಿತು. ಅಧಿನಿಯಮವು ಅರಣ್ಯಗಳ ಮೀಸಲು ತೆರವುಗೊಳಿಸುವುದರ ಮತ್ತು ಅರಣ್ಯೇತರ ಉದ್ದೇಶಗಳಿಗಾಗಿ ಅರಣ್ಯ ಭೂ ಬಳಕೆಯ ಮೇಲೆ ಹಲವು ನಿರ್ಬಂಧಗಳನ್ನು ವಿಧಿಸಿತ್ತು.

ಅರಣ್ಯ ಸಂರಕ್ಷಣೆ ಅಧಿನಿಯಮವು ಅನಿವಾರ್ಯವಾದ ವಿವಿಧ ಅಭಿವೃದ್ಧಿಪರ ಉದ್ದೇಶಗಳಿಗಾಗಿ ಅರಣ್ಯ ಭೂಬಳಕೆಯನ್ನು ಅನುಮತಿಸುತ್ತದೆ. ಅಧಿನಿಯಮವು ನಿಯಂತ್ರಣ ರೂಪದಲ್ಲಿದ್ದು, ಉತ್ತಮ ಪರಿಸರ, ಆರೋಗ್ಯ ಮತ್ತು ಆರ್ಥಿಕಸ್ಥಿತಿಗೆ ಸಹಾಯವಾಗುವ ದೇಶದ ನಿರಂತರ ಅಭಿವೃದ್ಧಿ ಅಗತ್ಯಗಳಿಗೆ ಅನುಕೂಲಗೊಳಿಸುತ್ತದೆ.

ಅಧಿನಿಯಮದನ್ವಯ, ರಾಜ್ಯ ಸರ್ಕಾರ ಅಥವಾ ಇತರ ಯಾವುದೇ ಪ್ರಾಧಿಕಾರ, ಭಾರತ ಸರ್ಕಾರದ ಪೂರ್ವಾನುಮತಿಯ ವಿನಹ, ಯಾವುದೇ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕಾಗಿ ಮಾರ್ಗಪಲ್ಲಟ ಮಾಡತಕ್ಕದ್ದಲ್ಲ. ಭಾರತ ಸರ್ಕಾರವು ಅರಣ್ಯೇತರ ಉದ್ದೇಶಕ್ಕಾಗಿ ಅರಣ್ಯ ಭೂಮಿಯ ಮಾರ್ಗಪಲ್ಲಟಕ್ಕೆ ಎರಡು ಹಂತಗಳಲ್ಲಿ ಅನುಮತಿ ನೀಡುತ್ತದೆ. ಮೊದಲನೆಯ ಹಂತದಲ್ಲಿ ಯಾವ ಬಳಕೆದಾರ ಸಂಸ್ಥೆಗೆ ಅರಣ್ಯ ಭೂಮಿಯನ್ನು ಹಸ್ತಾಂತರ ಮಾಡುವ ಉದ್ದೇಶವಿದೆಯೋ, ಆ ಸಂಸ್ಥೆಯು ಈಡೇರಿಸಬೇಕಾದ ಷರತ್ತುಗಳನ್ನು ವಿಶಿಷ್ಟಪಡಿಸಿ ತಾತ್ವಿಕವಾಗಿ ಕೊಡುವ ಒಪ್ಪಿಗೆಯನ್ನೂ ಒಳಗೊಂಡಿರುತ್ತದೆ. ಮೊದಲನೆಯ ಹಂತದಲ್ಲಿ ವಿಶಿಷ್ಟಪಡಿಸಲಾಗಿದ್ದ ಷರತ್ತುಗಳ ಪಾಲನೆಯನ್ನು ಖಚಿತಪಡಿಸಿಕೊಂಡು ಯೋಜನೆಗೆ ಕೊಡುವ ಅಂತಿಮ ಒಪ್ಪಿಗೆ ಎರಡನೇ ಹಂತದದಲ್ಲಿರುತ್ತದೆ. ಎರಡನೆಯ ಹಂತದ ಒಪ್ಪಿಗೆಯ ನಂತರ ಅರಣ್ಯ ಭೂಮಿಯು ಬಳಕೆದಾರ ಸಂಸ್ಥೆಗೆ ಹಸ್ತಾಂತರವಾಗುವುದು. ಬಳಕೆದಾರ ಸಂಸ್ಥೆಯಿಂದ ಅರಣ್ಯ ಜಮೀನಿನ ಯಾವುದೇ ಅನಧಿಕೃತ ಉಪಯೋಗವನ್ನು ತಡೆಯಲು ಅರಣ್ಯ ಇಲಾಖೆಯು, ಮಾರ್ಗಪಲ್ಲಟವಾದ ಪ್ರದೇಶದ ಕ್ಷೇತ್ರ ಭೂಪಟಗಳು, ಅರಣ್ಯ ಸರ್ವೆ ಸಂಖ್ಯೆಗಳು, ಇತ್ಯಾದಿಗಳ ಉಲ್ಲೇಖದೊಂದಿಗೆ ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡುವ ಮತ್ತು ಈ ಸಂಬಂಧದಲ್ಲಿ ಯಾವುದೇ ಲೋಪವನ್ನು ಭಾರತ ಸರ್ಕಾರಕ್ಕೆ ವರದಿ ಮಾಡುವ ಅಗತ್ಯವಿದೆ.

### 3.5.2 ಲೆಕ್ಕ ಪರಿಶೋಧನಾ ವ್ಯಾಪ್ತಿ

ಅರಣ್ಯ ಮುಖ್ಯ ಸಂರಕ್ಷಕರು (ಅರಣ್ಯ ಸಂರಕ್ಷಣೆ), ಬೆಂಗಳೂರು, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಶಿರಸಿಯಲ್ಲಿನ ಅರಣ್ಯ ಸಂರಕ್ಷಕರು ಹಾಗೂ ಉಪ ಅರಣ್ಯ ಸಂರಕ್ಷಕರು ಮುಖ್ಯಸ್ಥರಾಗಿರುವ ಒಂಬತ್ತು ವಿಭಾಗಗಳಲ್ಲಿನ[33] ಕಛೇರಿಯ ದಾಖಲೆಗಳನ್ನು ಜನವರಿ/ಏಪ್ರಿಲ್ 2008ರ ಅವಧಿಯಲ್ಲಿ ಪರೀಕ್ಷಾ ತನಿಖೆ ಮಾಡಲಾಯಿತು. ಅರಣ್ಯ ಸಂರಕ್ಷಣೆ ಅಧಿನಿಯಮದ ನಿರ್ವಹಣೆಯಲ್ಲಿ ಗಮನಿಸಿದ ಲೋಪಗಳನ್ನು ಕೆಳಗೆ ಚರ್ಚಿಸಲಾಗಿದೆ.

[33] ಚಿಕ್ಕಮಗಳೂರು (ಪ್ರಾದೇಶಿಕ), ಚಿಕ್ಕಮಗಳೂರು (ವನ್ಯಜೀವಿ), ಕಾರವಾರ, ಕೊಪ್ಪ, ಸಾಗರ, ಶಿವಮೊಗ್ಗ, ಶಿರಸಿ, ತುಮಕೂರು ಮತ್ತು ಯಲ್ಲಾಪುರ

### 3.5.3 ಅರಣ್ಯ (ಸಂರಕ್ಷಣೆ) ಅಧಿನಿಯಮದ ಉಲ್ಲಂಘನೆಗಳು

ಅರಣ್ಯ ಸಂರಕ್ಷಣಾ ಅಧಿನಿಯಮದ ಸೆಕ್ಷನ್ 3ಎ ಮತ್ತು 3ಬಿ ನಲ್ಲಿ ವಿಧಿಸಿರುವಂತೆ, ಅರಣ್ಯ ಭೂಮಿಯ ಅನಧಿಕೃತ ಬಳಕೆಯೂ ಸೇರಿದಂತೆ ಅಧಿನಿಯಮದ ಉಲ್ಲಂಘನೆಗಳು ದಂಡನಾ ಕ್ರಮವನ್ನು ಆಕರ್ಷಿಸುತ್ತವೆ. ಮೇಲ್ನೋಟಕ್ಕೆ ಉಲ್ಲಂಘನೆಯ ದೋಷವು ಕಂಡುಬಂದ ವ್ಯಕ್ತಿ/ಪ್ರಾಧಿಕಾರ/ಇಲಾಖೆಯ ವಿರುದ್ಧ ಅಧಿಕಾರವ್ಯಾಪ್ತಿಯ ನ್ಯಾಯಾಲಯದಲ್ಲಿ ದಾವಾ ಹಾಕಲು ಅರಣ್ಯ ಸಂರಕ್ಷಕರ ಹುದ್ದೆಗೆ ಕಡಿಮೆಯಿಲ್ಲದ ಓರ್ವ ಅಧಿಕಾರಿಗೆ ಭಾರತ ಸರ್ಕಾರವು ಅಧಿಕಾರ ನೀಡಿರುತ್ತದೆ. ಅದರ ಜೊತೆಗೆ, ಉಲ್ಲಂಘನೆಯಲ್ಲಿ ಕಾರ್ಯಗತವಾದ/ಬಳಸಲಾದ ಅರಣ್ಯ ಭೂಮಿಯ ಮೇಲೆ ದಂಡರೂಪದ ಪರಿಹಾರಾತ್ಮಕ ಅರಣ್ಯೀಕರಣ ಶುಲ್ಕಗಳು[34] ವಿಧಿಸಲ್ಪಡಬೇಕಾಗಿದ್ದವು.

ಪರೀಕ್ಷಾ ತನಿಖೆ ನಡೆಸಲಾದ ಒಂಭತ್ತು ವಿಭಾಗಗಳ[35] ದಾಖಲೆಗಳಂತೆ, 60 ಪ್ರಕರಣಗಳ ಪೈಕಿ ಒಂಬತ್ತರಲ್ಲಿ 1984 ಮತ್ತು 2006ರ ನಡುವೆ ಆದ ಅಧಿನಿಯಮದ ವಿಧಿಗಳ ಉಲ್ಲಂಘನೆಯನ್ನು ಗಮನಿಸಲಾಯಿತು. ಏಳು ಬಳಕೆದಾರ ಸಂಸ್ಥೆಗಳು ಅರಣ್ಯೇತರ ಉದ್ದೇಶಗಳಿಗಾಗಿ 342.35 ಹೆಕ್ಟೇರಿನ ಬಳಕೆಗಾಗಿ ಅನುಮತಿಯನ್ನು ಕೋರಿದ್ದರು. ಆದರೆ **ಅನುಬಂಧ 3.22**ರಲ್ಲಿ ವಿವರಿಸಿರುವಂತೆ, ಭಾರತ ಸರ್ಕಾರದ ಅನುಮತಿಯನ್ನು ಪಡೆಯುವ ಮೊದಲೇ 391.71 ಹೆಕ್ಟೇರು ಅರಣ್ಯ ಭೂಮಿಯ ಬಳಕೆಯಾಗಿತ್ತು. ಬೀದರ್ ಮತ್ತು ಮಂಗಳೂರು ವಿಭಾಗಗಳ ಎರಡು ಪ್ರಕರಣಗಳಲ್ಲಿ ಮಾರ್ಗಪಲ್ಲಟಕ್ಕೆ ಕೋರಿದ್ದ/ಅನುಮತಿಸಿದ್ದಕಿಂತಲೂ 49.36 ಹೆಕ್ಟೇರು ಅಧಿಕ ಅರಣ್ಯ ಭೂಮಿಯ ಬಳಕೆಯು ಸೇರಿತ್ತು.

ಅರಣ್ಯ ಭೂಮಿಯ ಅನಧಿಕೃತ ಬಳಕೆಯು, ಅಧಿನಿಯಮದ ನಿರ್ವಹಣೆಯಲ್ಲಿ ಆದ ಇಲಾಖೆಯ ವಿಫಲತೆಯನ್ನು ಸೂಚಿಸಿತ್ತು. ಇಲಾಖೆಯು ಮಂಗಳೂರು ಮತ್ತು ಬಾಗಲಕೋಟೆಯ ಎರಡು ಪ್ರಕರಣಗಳಲ್ಲಿ ಸೂಚನೆಗಳನ್ನು ನೀಡುವುದನ್ನು ಬಿಟ್ಟರೆ, ಯಾವುದೇ ದಂಡನಾ ಕ್ರಮಗಳನ್ನೂ ತೆಗೆದುಕೊಳ್ಳಲಿಲ್ಲ ಅಥವಾ ವಿಷಯವನ್ನು ಭಾರತ ಸರ್ಕಾರಕ್ಕೆ ವರದಿ ಮಾಡಲೂ ಇಲ್ಲ. ನಾಲ್ಕು ಬಳಕೆದಾರ ಸಂಸ್ಥೆಗಳಿಂದ[36] ರೂ.1.84 ಕೋಟಿ ದಂಡರೂಪದ ಪರಿಹಾರಾತ್ಮಕ ಅರಣ್ಯೀಕರಣ ಶುಲ್ಕಗಳು ವಸೂಲಾಗಿರಲೂ ಇಲ್ಲ ಮತ್ತು ಇವುಗಳಿಗೆ ಕಾರಣಗಳು ದಾಖಲೆಯಲ್ಲಿರಲಿಲ್ಲ.

### 3.5.4 ಭಾರತ ಸರ್ಕಾರದ ಷರತ್ತುಗಳನ್ನು ಪಾಲಿಸದಿರುವುದು

**ಭಾರತ ಸರ್ಕಾರದ ಅನುಮತಿಯ ದಿನಾಂಕದಿಂದ 2 ರಿಂದ 27 ವರ್ಷಗಳು ಕಳೆದರೂ ಭಾರತ ಸರ್ಕಾರದಿಂದ ವಿಧಿಸಲಾಗಿದ್ದ ಷರತ್ತುಗಳ ಪಾಲನೆಯನ್ನು ಖಾತ್ರಿಪಡಿಸಿಕೊಳ್ಳಲಿಲ್ಲ.**

ಅರಣ್ಯ ಸಂರಕ್ಷಣೆ ಅಧಿನಿಯಮ 1980ರಂತೆ ಭಾರತ ಸರ್ಕಾರದ ಮಾರ್ಗದರ್ಶಿ ಸೂತ್ರಗಳ ಅಧ್ಯಾಯ 4ರ ಕಂಡಿಕೆ 4.15ರಂತೆ, ನೋಡಲ್ ಅಧಿಕಾರಿಯು[37] ಭಾರತ ಸರ್ಕಾರದ ಷರತ್ತುಗಳನ್ನು ಪಾಲಿಸದಿರುವುದನ್ನು ಪರಿಸರ ಮತ್ತು ಅರಣ್ಯಗಳ ಮಂತ್ರಾಲಯದ ಪ್ರಾದೇಶಿಕ ಕಛೇರಿಗೆ ತಿಳಿಸತಕ್ಕದ್ದು; ಇವರು ನಂತರ ಕಾಲ ಕಾಲದಲ್ಲಿ ನಿವೇಶನವನ್ನು ತನಿಖೆ ಮಾಡತಕ್ಕದ್ದು. ಭಾರತ ಸರ್ಕಾರದ ಷರತ್ತುಗಳ ಪಾಲನೆಯ ಸಂಬಂಧದಲ್ಲಿ ತ್ರೈಮಾಸಿಕ ಪ್ರಗತಿ ವರದಿಗಳು ನೋಡಲ್ ಅಧಿಕಾರಿಯಿಂದ ಪರಿಸರ ಮತ್ತು ಅರಣ್ಯಗಳ ಮಂತ್ರಾಲಯದ ಉಸ್ತುವಾರಿ ಕೋಶದ ಅರಣ್ಯ ಸಂರಕ್ಷಣೆ ನಿರ್ದೇಶಕರಿಗೆ ಸಲ್ಲಿಕೆಯಾಗುವ ಅಗತ್ಯವಿದೆ. 3,198 ಹೆಕ್ಟೇರು ಪ್ರದೇಶವಿದ್ದ, ಅರಣ್ಯೇತರ ಉದ್ದೇಶಗಳಾದ ನೀರಾವರಿ, ಮಾರುತ ಶಕ್ತಿ, ಗಣಿಗಾರಿಕೆ, ವಿದ್ಯುತ್ ಪ್ರಸರಣ ಮಾರ್ಗ ಮತ್ತು ರಸ್ತೆ ಕಾಮಗಾರಿ ಯೋಜನೆಗಳಿಗಾಗಿ ಅರಣ್ಯ ಜಮೀನಿನ ಮಾರ್ಗಪಲ್ಲಟದ 19 ಪ್ರಕರಣಗಳಲ್ಲಿ, ಭಾರತ ಸರ್ಕಾರದಿಂದ ಒಪ್ಪಿಗೆ ಮಂಜೂರಾದ ದಿನಾಂಕದಿಂದ 2 ರಿಂದ 27 ವರ್ಷಗಳು ಕಳೆದರೂ ಭಾರತ ಸರ್ಕಾರದಿಂದ ವಿಧಿಸಲಾಗಿದ್ದ ಷರತ್ತುಗಳ ಪಾಲನೆಯನ್ನು, **ಅನುಬಂಧ 3.23**ರಲ್ಲಿ ವಿವರಿಸಿರುವಂತೆ, ಖಾತ್ರಿಪಡಿಸಿಕೊಳ್ಳಲಿಲ್ಲ. ಇವುಗಳಲ್ಲಿ ಓರ್ವ ಬಳಕೆದಾರ ಸಂಸ್ಥೆಯಿಂದ ಬೆಳಗಾವಿ ವಿಭಾಗದಲ್ಲಿ ತುಂಡು ನೆಡುತೋಪು ಕಡೆಗಿನ ವೆಚ್ಚವಾದ ರೂ.1.83 ಕೋಟಿಯ ವಸೂಲಾಗದಿರುವುದು ಮತ್ತು ಶಿವಮೊಗ್ಗ ವಿಭಾಗದಲ್ಲಿ ರೂ.120.42 ಕೋಟಿಯ ಅಚ್ಚುಕಟ್ಟು

---

[34] ರಾಜ್ಯ ಸರ್ಕಾರದಿಂದ ನಿಗದಿಯಾದಂತೆ, ಪ್ರತಿ ಹೆಕ್ಟೇರಿಗೆ ರೂ.54,200 ರ ಒಂದೂವರೆಯಷ್ಟು ಲೆಕ್ಕ ಹಾಕಲಾಗುವುದು

[35] ಚಿಕ್ಕಮಗಳೂರು, ಬಾಗಲಕೋಟೆ, ಶಿವಮೊಗ್ಗ, ಬೀದರ್, ಯಲ್ಲಾಪುರ, ಕಾರವರ, ಹಳಿಯಾಳ, ಕೊಪ್ಪ ಮತ್ತು ಮಂಗಳೂರು ವಿಭಾಗಗಳು

[36] ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಪೆಟ್ರೋನೆಟ್ ಎಂಎಚ್‌ಬಿ ನಿಯಮಿತ ಮತ್ತು ಚಿಕ್ಕಮಗಳೂರು ಗಾಲ್ಫ್ ಕ್ಲಬ್

[37] ಅರಣ್ಯ ಮುಖ್ಯ ಸಂರಕ್ಷಕರು (ಅರಣ್ಯ ಸಂರಕ್ಷಣೆ), ಬೆಂಗಳೂರು

ಪ್ರದೇಶ ಸಂಸ್ಕರಣೆ ಯೋಜನೆಯ ನಿರ್ವಹಣೆಯಲ್ಲಿ ಕೊರತೆಯು ಸೇರಿದ್ದವು. ಭಾರತ ಸರ್ಕಾರವು ಪರಿಸರದ ಮೇಲಿನ ಪ್ರತಿಕೂಲ ಪ್ರಭಾವವನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ಈ ಷರತ್ತುಗಳನ್ನು ಬಳಕೆದಾರ ಸಂಸ್ಥೆಗಳಿಂದ ಪಾಲನೆಗಾಗಿ ವಿಧಿಸಿತ್ತು.

ಮುಂದುವರೆದು, ಯಾವ ಉದ್ದೇಶಕ್ಕಾಗಿ ಅನುಮತಿ ನೀಡಲಾಗಿತ್ತೋ ಅದರ ವಿನಹ; ಬೇರೆ ಉದ್ದೇಶಗಳಿಗಾಗಿ ಮಾರ್ಗಪಲ್ಲಟವಾದ ಭೂಮಿಯನ್ನು ಉಪಯೋಗಿಸಬಾರದೆನ್ನುವುದು ಅರಣ್ಯೇತರ ಉದ್ದೇಶಗಳಿಗಾಗಿ ಅರಣ್ಯ ಭೂಮಿಯ ಬಳಕೆಯನ್ನು ಒಪ್ಪುವ ಸಂದರ್ಭದಲ್ಲಿ ಭಾರತ ಸರ್ಕಾರದಿಂದ ವಿಧಿಸಲ್ಪಟ್ಟಿದ್ದ ಷರತ್ತುಗಳಲ್ಲಿ ಒಂದಾಗಿತ್ತು. ಇಲಾಖೆಯು ಯಾವುದೇ ಬಳಕೆಯಾಗದ ಅರಣ್ಯ ಭೂಮಿಯನ್ನು ಹಿಂಪಡೆಯಬೇಕಿತ್ತು. ಆದರೆ, ನಾಲ್ಕು ವಿಭಾಗಗಳ[38] ಐದು ಪ್ರಕರಣಗಳಲ್ಲಿ 540.38 ಹೆಕ್ಟೇರು ಬಳಕೆಯಾಗದ ಅರಣ್ಯ ಭೂಮಿಯ ವಿಷಯದಲ್ಲಿ ಇಲಾಖೆಯು ಈ ರೀತಿ ಮಾಡಲಿಲ್ಲ.

ಒಂದು ಪ್ರಕರಣದಲ್ಲಿ, ಕಾರವಾರದಲ್ಲಿನ ಸೀಬರ್ಡ್ ಯೋಜನೆಯ ಸ್ಥಳಾಂತರಿಸಲ್ಪಟ್ಟ ಕುಟುಂಬಗಳ ಪುನರ್ವಸತಿಗಾಗಿ ಮಂಜೂರಾದ (ಡಿಸೆಂಬರ್ 1995/ಸೆಪ್ಟೆಂಬರ್ 1996) 594.10 ಹೆಕ್ಟೇರು ಅರಣ್ಯ ಭೂಮಿಯ ಪೈಕಿ, ಕೇವಲ 182.94 ಹೆಕ್ಟೇರು ಭೂಮಿಯು ಬಳಕೆಯಾಯಿತು. ಉಳಿದ 411.16 ಹೆಕ್ಟೇರು ಭೂ ಪ್ರದೇಶದ ಪೈಕಿ ಮರ ಕಡಿಯಲಾದ (ಅಕ್ಟೋಬರ್ 2000) 277 ಹೆಕ್ಟೇರು ಪ್ರದೇಶವು ನಂತರ 2002 ರಿಂದ 2004ರವರೆಗಿನ ಅವಧಿಯಲ್ಲಿ ರೂ.45.49 ಲಕ್ಷ ವೆಚ್ಚದಲ್ಲಿ ಪುನಃ ಸ್ವಾಧೀನವಾಗದೆ ಅರಣ್ಯೀಕರಣವಾಯಿತು.

ಮುಂದುವರೆದು, ಐದು ವಿಭಾಗಗಳಲ್ಲಿ ಅರಣ್ಯ ಭೂಮಿಯ ಮಾರ್ಗಪಲ್ಲಟಕ್ಕೆ ಮಂಜೂರಾತಿ ನೀಡುವಾಗ ವಿಧಿಸಿದ್ದ ಷರತ್ತುಗಳು ಪಾಲನೆಯಾಗದಿದ್ದುದು ಈ ಕೆಳಗಿನಂತೆ ಪರಿಹಾರಾತ್ಮಕ ಅರಣ್ಯೀಕರಣ ಮತ್ತು ಇತರ ಶುಲ್ಕಗಳ ಕಡೆ ರೂ.4.71 ಕೋಟಿ ವಸೂಲಾಗದಿರುವುದರಲ್ಲಿ ಪರಿಣಮಿಸಿತು:

**ಕೋಷ್ಟಕ 1: ಪರಿಹಾರಾತ್ಮಕ ಅರಣ್ಯೀಕರಣ ವೆಚ್ಚಗಳು ವಸೂಲಾಗದಿರುವುದು**

| ವಿಭಾಗ | ಪ್ರದೇಶ ಹೆಕ್ಟೇರುಗಳಲ್ಲಿ | ಉದ್ದೇಶ | ಅವಧಿ | ವಸೂಲಿಯಾಗದ ಆದಾಯ |
|---|---|---|---|---|
| ಕಾರವಾರ | 330.21 | ಪ್ರಸರಣ ಮಾರ್ಗ | 2003 | ರೂ.3.61 ಲಕ್ಷದ ಕಾಮಗಾರಿ ನಿರ್ವಹಣೆಯ ಒಟ್ಟು ವೆಚ್ಚದ ಶೇಕಡ 10ರಷ್ಟು ಮೇಲ್ವಿಚಾರಣೆ ಶುಲ್ಕಗಳು ಬಳಕೆದಾರ ಸಂಸ್ಥೆಯಿಂದ ವಸೂಲಾಗಲಿಲ್ಲ. |
| ಬೆಳಗಾವಿ | 1.00 | ಸೂಕ್ಷ್ಮ ತರಂಗ ನಿಲಯ | 2006 | ಬಳಕೆದಾರ ಏಜೆನ್ಸಿಯ ವೆಚ್ಚದಲ್ಲಿ ಪರಿಹಾರಾತ್ಮಕ ಅರಣ್ಯೀಕರಣವು 1.60 ಹೆಕ್ಟೇರು ಅಪವರ್ಗಿತ ಅರಣ್ಯ ಪ್ರದೇಶದಲ್ಲಿ ಆಗಬೇಕಾಗಿದ್ದಿತು. ರೂ.8.67 ಲಕ್ಷ ದಂಡರೂಪದ ಪರಿಹಾರಾತ್ಮಕ ಅರಣ್ಯೀಕರಣ ಶುಲ್ಕಗಳು ವಸೂಲಾಗಲಿಲ್ಲ |
| ಗದಗ | 65.74 | ಮಾರುತ ಶಕ್ತಿ | 2004 | ರೂ.32.93 ಲಕ್ಷದ ಶುಲ್ಕಗಳು ಬಳಕೆದಾರ ಸಂಸ್ಥೆಯಿಂದ ಇನ್ನೂ ವಸೂಲಾಗಬೇಕಾಗಿದೆ. |
| ಹೊನ್ನಾವರ | 427.62 | ಶರಾವತಿ ಟೈಲ್‌ರೇಸ್ ಯೋಜನೆ | 1993 | ಬಳಕೆದಾರ ಸಂಸ್ಥೆಯು ಮರ ಕೀಳಿಸುವಿಕೆಯ ವೆಚ್ಚವನ್ನು ಭರಿಸಬೇಕಾಗಿದ್ದಿತು. ಇಲಾಖೆಯು ಕೀಳಿಸುವಿಕೆಯ ಕಡೆಗೆ ರೂ.2.89 ಕೋಟಿ ವ್ಯಯಿಸಿತು. ಇದನ್ನು ಬಳಕೆದಾರ ಸಂಸ್ಥೆಯಿಂದ ವಸೂಲು ಮಾಡಿರಲಿಲ್ಲ. |
| ಶಿರಸಿ | 74.00 | ಶರಾವತಿ ಟೈಲ್‌ರೇಸ್ ಯೋಜನೆ | 1993 | ಮರ ಕೀಳಿಸುವಿಕೆಯ ವೆಚ್ಚವಾದ ರೂ.1.37 ಕೋಟಿಯು ಬಳಕೆದಾರ ಸಂಸ್ಥೆಯಿಂದ ವಸೂಲಾಗಿರಲಿಲ್ಲ |
| | **898.57** | | | |

ನೋಡಲ್ ಅಧಿಕಾರಿಯು ಈ ಪ್ರಕರಣಗಳಲ್ಲಿ ಭಾರತ ಸರ್ಕಾರದ ಷರತ್ತುಗಳ ಪಾಲನೆಯ ಮೇಲ್ವಿಚಾರಣೆಯನ್ನೂ ಮಾಡಲಿಲ್ಲ ಅಥವಾ ಪ್ರತಿಕೂಲ ಪ್ರಭಾವವನ್ನು ನಿಷ್ಕರ್ಷಿಸಲೂ ಇಲ್ಲ. ಭಾರತ ಸರ್ಕಾರದಿಂದ ವಿಧಿಸಲ್ಪಟ್ಟ ಷರತ್ತುಗಳ ಪಾಲನೆಯ ಮೇಲೆ ತ್ರೈಮಾಸಿಕ ಪ್ರಗತಿ ವರದಿಗಳು ಸಹಾ ಸಲ್ಲಿಸಲ್ಪಡಲಿಲ್ಲ.

[38] ಕಾರವಾರ, ದಕ್ಷಿಣ ಕನ್ನಡ, ಮಂಡ್ಯ ಮತ್ತು ಬೆಂಗಳೂರು (ಗ್ರಾಮಾಂತರ)

## 3.5.5 ಗುತ್ತಿಗೆಯ ಪುನರ್ನವೀಕರಣವಿಲ್ಲದೇ ಅರಣ್ಯ ಭೂಮಿಯ ಬಳಕೆ

ಮಾರ್ಗದರ್ಶಿ ಸೂತ್ರಗಳ ಕೈಪಿಡಿ ಮತ್ತು ಭಾರತ ಸರ್ಕಾರದಿಂದ ನೀಡಲ್ಪಟ್ಟ ಅರಣ್ಯ ಸಂರಕ್ಷಣೆ ಅಧಿನಿಯಮದ ಮೇಲಿನ ಸ್ಪಷ್ಟೀಕರಣಗಳಂತೆ, ಗುತ್ತಿಗೆಗಳ ಪುನರ್ನವೀಕರಣದ ಪ್ರಸ್ತಾವನೆಗಳು ಭಾರತ ಸರ್ಕಾರಕ್ಕೆ ಗುತ್ತಿಗೆ ಅವಧಿಯ ಮುಕ್ತಾಯದ ಒಂದು ವರ್ಷದ ಮೊದಲೇ ಸಲ್ಲಿಸಬೇಕಾಗಿದ್ದವು. ಇಪ್ಪತ್ತೆರಡು ಪ್ರಕರಣಗಳಲ್ಲಿ, ವಿವಿಧ ಉದ್ದೇಶಗಳಾದ ಶಿಕ್ಷಣ, ವ್ಯವಸಾಯ, ಇತ್ಯಾದಿಗಳಿಗಾಗಿ ಅರಣ್ಯ ಭೂಮಿಯ ಗುತ್ತಿಗೆಯ ಪುನರ್ನವೀಕರಣದ ಪ್ರಸ್ತಾವನೆಗಳು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ಭಾರತ ಸರ್ಕಾರಕ್ಕೆ, **ಅನುಬಂಧ 3.24**ರಲ್ಲಿ ವಿವರಿಸಿರುವಂತೆ ಒಂದರಿಂದ ನಲವತ್ತೈದು ವರ್ಷಗಳು ಗತಿಸಿದ್ದರೂ ಸಹ, ರವಾನಿಸಲ್ಪಡಲಿಲ್ಲ. ಬೇರೆ ಎರಡು ಪ್ರಕರಣಗಳಲ್ಲಿ ಗುತ್ತಿಗೆಯ ಪುನರ್ನವೀಕರಣವು ಭಾರತ ಸರ್ಕಾರದಿಂದ ತಿರಸ್ಕೃತವಾದರೂ 24.90 ಹೆಕ್ಟೇರು ಭೂ ಪ್ರದೇಶವು ವಾಪಸ್ಸು ತೆಗೆದುಕೊಳ್ಳಲ್ಪಡಲಿಲ್ಲ. ವಿಭಾಗೀಯ ದಾಖಲೆಗಳಿಂದ ಪರಿಶೀಲಿಸಿದಂತೆ ಈ ಎಲ್ಲ ಪ್ರಕರಣಗಳಲ್ಲಿ ಬಳಕೆದಾರ ಏಜೆನ್ಸಿಗಳು ಅರಣ್ಯ ಭೂಮಿಯ ಬಳಕೆಯನ್ನು ಅನಧಿಕೃತವಾಗಿ ಮುಂದುವರೆಸಿದ್ದವು.

## 3.5.6 ಅರಣ್ಯ ಭೂಮಿಯ ಉಪಗುತ್ತಿಗೆ

ಭಾರತ ಸರ್ಕಾರದ ಮಾರ್ಗದರ್ಶಿ ಸೂತ್ರಗಳಂತೆ (ಏಪ್ರಿಲ್ 2005) ಬಳಕೆದಾರ ಸಂಸ್ಥೆಗಳು ಉಪಗುತ್ತಿಗೆಯನ್ನು ಭಾರತ ಸರ್ಕಾರದ ಪೂರ್ವಾನುಮತಿಯಿಲ್ಲದೇ ಮಾಡತಕ್ಕದ್ದಲ್ಲ. ಈ ಉದ್ದೇಶಕ್ಕಾಗಿ, ಮೂಲ ಬಳಕೆದಾರ ಸಂಸ್ಥೆಯು ಆ ರೀತಿಯ ವರ್ಗಾವಣೆಗಾಗಿ ನಿರಾಕ್ಷೇಪಣ ಪತ್ರವನ್ನು ಸಲ್ಲಿಸುವ ಅಗತ್ಯವಿತ್ತು ಮತ್ತು ಹೊಸ ಬಳಕೆದಾರ ಸಂಸ್ಥೆಯು, ಮೂಲ ಬಳಕೆದಾರ ಸಂಸ್ಥೆಗೆ ಯಾವ ಷರತ್ತುಗಳ ಮೇಲೆ ಅರಣ್ಯ ಭೂಮಿಯನ್ನು ಗುತ್ತಿಗೆಗೆ ನೀಡಲಾಯಿತೋ ಅ ಎಲ್ಲ ಷರತ್ತುಗಳಿಗೆ ಮತ್ತು ಭವಿಷ್ಯದಲ್ಲಿ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರದಿಂದ ವಿಧಿಸಲಾಗುವ ಬೇರೆ ಯಾವುದೇ ಷರತ್ತುಗಳಿಗೆ ತಾವೂ ಬದ್ಧರಾಗಿರುವುದಾಗಿ ಒಂದು ಮುಚ್ಚಳಿಕೆಯನ್ನು ನೀಡಬೇಕಿತ್ತು.

ಪರೀಕ್ಷಾ ತನಿಖೆಯಲ್ಲಿ ಗಮನಿಸಿದಂತೆ, ಎರಡು ಬಳಕೆದಾರ ಸಂಸ್ಥೆಗಳು 158.62 ಹೆಕ್ಟೇರು ಅರಣ್ಯ ಭೂಮಿಯನ್ನು, ಚಿತ್ರದುರ್ಗ ಮತ್ತು ಹಾಸನ ವಿಭಾಗಗಳಲ್ಲಿ, ಆಗಸ್ಟ್ 2005 ಮತ್ತು ಜುಲೈ 2007ರಲ್ಲಿ, ಭಾರತ ಸರ್ಕಾರದ ಪೂರ್ವಾನುಮತಿಯಲ್ಲದೇ ಉಪಗುತ್ತಿಗೆ ನೀಡಿದ್ದವು. ನೋಡಲ್ ಅಧಿಕಾರಿಯು ವಿಷಯವನ್ನು ಪರಿಸರ ಮತ್ತು ಅರಣ್ಯಗಳ ಮಂತ್ರಾಲಯಕ್ಕೆ ವರದಿ ಮಾಡಿರಲಿಲ್ಲ.

## 3.5.7 ಕಂದಾಯ ಇಲಾಖೆಯಿಂದ ಅರಣ್ಯ ಭೂಮಿಯ ಮಂಜೂರಾತಿ

**483.52 ಎಕರೆ ಅರಣ್ಯ ಭೂಮಿಯು ಭಾರತ ಸರ್ಕಾರದ ಅನುಮೋದನೆಯಿಲ್ಲದೆ ಕಂದಾಯ ಇಲಾಖೆಯಿಂದ ವರ್ಗಾಯಿಸಲ್ಪಟ್ಟಿತು**

ಕರ್ನಾಟಕ ಅರಣ್ಯ ಅಧಿನಿಯಮ 1963ರ ಸೆಕ್ಷನ್ 17ರಂತೆ ಒಂದು ಪ್ರದೇಶವು ರಕ್ಷಿತ ಅರಣ್ಯವೆಂದು ಘೋಷಿಸಲ್ಪಟ್ಟ ಕೂಡಲೇ, ಕಂದಾಯ ಅಧಿಕಾರಿಗಳು, ಪ್ರದೇಶವು ರಕ್ಷಿತ ಅರಣ್ಯವಾಗಿ ಘೋಷಿಸಲ್ಪಟ್ಟಿದೆ ಎಂದು ಪುಷ್ಟೀಕರಿಸುವುದಕ್ಕೆ ಕಂದಾಯ ದಾಖಲೆಗಳಲ್ಲಿ ಅನುರೂಪ ನಮೂದುಗಳನ್ನು ಮಾಡುವುದರ ಮೂಲಕ ಅರಣ್ಯ ಭೂಮಿಯ ಹಕ್ಕುಬದಲಾವಣೆಯನ್ನು ಜಾರಿಗೆ ತರುವ ಅಗತ್ಯವಿದ್ದಿತು. ಕಂದಾಯ ದಾಖಲೆಗಳಲ್ಲಿ ಸೂಕ್ತ ನಮೂದುಗಳ ಜೊತೆ ಹಕ್ಕು ಬದಲಾವಣೆಯನ್ನು ಖಚಿತಪಡಿಸಿಕೊಳ್ಳಲು ಅರಣ್ಯ ಸಿಬ್ಬಂದಿಯು ಕಂದಾಯ ಅಧಿಕಾರಿಗಳ ಜೊತೆ ಸಮನ್ವಯ ಮಾಡುವ ಅಗತ್ಯವಿತ್ತು. ಹಕ್ಕು ಬದಲಾವಣೆಯ ಉದ್ದೇಶವು ಕಂದಾಯ ಇಲಾಖೆಯಿಂದ ಅರಣ್ಯ ಭೂಮಿಯ ಅನಧಿಕೃತ ವರ್ಗಾವಣೆಯನ್ನು ತಡೆಯುವುದಾಗಿತ್ತು.

ಮೂರು ವಿಭಾಗಗಳಲ್ಲಿ, ಅರಣ್ಯ ಸಂರಕ್ಷಣೆ ಅಧಿನಿಯಮದಂತೆ ಭಾರತ ಸರ್ಕಾರದ ಅನುಮತಿಯಿಲ್ಲದೆ 483.52 ಎಕರೆ ಅರಣ್ಯ ಭೂಮಿಯು 1980 ಮತ್ತು 2007ರ ನಡುವೆ 157 ವ್ಯಕ್ತಿಗಳಿಗೆ ಈ ಕೆಳಗೆ ತಿಳಿಸಿರುವಂತೆ ಕಂದಾಯ ಇಲಾಖೆಯಿಂದ ವರ್ಗಾಯಿಸಲ್ಪಟ್ಟಿತು ಎಂಬುದನ್ನು ಪರೀಕ್ಷಾ–ತನಿಖೆಯಲ್ಲಿ ಗಮನಿಸಲಾಯಿತು.

**ಕೋಷ್ಟಕ 2: ಕಂದಾಯ ಇಲಾಖೆಯಿಂದ ವರ್ಗಾಯಿಸಲ್ಪಟ್ಟ ಅರಣ್ಯ ಭೂಮಿ**

| ಕ್ರ.ಸಂ. | ವಿಭಾಗದ ಹೆಸರು | ಕಂದಾಯ ಇಲಾಖೆಯಿಂದ ವರ್ಗಾಯಿಸಲ್ಪಟ್ಟ ಅರಣ್ಯ ಭೂಮಿಯ ವ್ಯಾಪ್ತಿ (ಎಕರೆಗಳಲ್ಲಿ) | ವರ್ಗಾವಣೆಯ ದಿನಾಂಕ | ಷರಾ |
|---|---|---|---|---|
| 1 | ಯಲ್ಲಾಪುರ | 243.38 | ಮೇ 2006 ರಿಂದ ಜನವರಿ 2007 | ಭೂಮಿಯು ಭೂರಹಿತ ರೈತರಿಗೆ ಕೃಷಿಗಾಗಿ ಗುತ್ತಿಗೆಯಾಗಿತ್ತು (ಏಪ್ರಿಲ್ 1969). ನಂತರ, ಮೂಲ ಗುತ್ತಿಗೆದಾರರಿಂದ ಅವು ಉಪಯೋಗಿಸಲ್ಪಡದ ಕಾರಣ, ಗುತ್ತಿಗೆ ಭೂಮಿಯು ಇತರ ಕೃಷಿಕರಿಂದ ಬಳಸಲ್ಪಟ್ಟಿತು. ಕಂದಾಯ ಇಲಾಖೆಯು ಭೂಮಿಯನ್ನು ಮೂಲ ಗುತ್ತಿಗೆದಾರರ ಸುಳಿವಿರಲಿಲ್ಲ ವಾದ್ದರಿಂದ ಈಗಿನ ಕೃಷಿಕರಿಗೆ ವರ್ಗಾಯಿಸಿತು. |
| 2 | ಚಿಕ್ಕಮಗಳೂರು (ಪ್ರಾದೇಶಿಕ) | 107.54 | 1980 ರಿಂದ 1995 | ಸರಗೋಡು ರಕ್ಷಿತ ಅರಣ್ಯದಲ್ಲಿ ಅರಣ್ಯ ಭೂಮಿಯು 34 ಕೃಷಿಕರಿಗೆ 1.8.1964ರ ಸರ್ಕಾರಿ ಆದೇಶದಂತೆ ವರ್ಗಾಯಿಸಲ್ಪಟ್ಟಿತು. ವಾಸ್ತವಿಕ ವರ್ಗಾವಣೆಯು ಅರಣ್ಯ ಸಂರಕ್ಷಣೆ ಅಧಿನಿಯಮದ ನಂತರ ಆಯಿತು ಆದ್ದರಿಂದ ಘೋಷಣೆ ತೆರವಿಗೆ ಮತ್ತು ಭಾರತ ಸರ್ಕಾರದ ಪೂರ್ವಾನುಮತಿಗೆ ಒಳಪಟ್ಟಿತ್ತು. |
| 3 | | 70.14 | 1980 ರಿಂದ 2003 | ಮಸಗಾಲಿ ರಕ್ಷಿತ ಅರಣ್ಯದಲ್ಲಿ ಅರಣ್ಯ ಪ್ರದೇಶವನ್ನು ಒಂಬತ್ತು ವ್ಯಕ್ತಿಗಳು ಒತ್ತುವರಿ ಮಾಡಿದರು. ನಂತರ ಕಂದಾಯ ಇಲಾಖೆಯು ಅದನ್ನು ಹಸ್ತಾಂತರ ಮಾಡುವ ಮೂಲಕ ಸಕ್ರಮಗೊಳಿಸಿತು; ಆದರೆ ಇದು ಅರಣ್ಯ ಸಂರಕ್ಷಣೆ ಅಧಿನಿಯಮದ ವಿಧಿಗಳ ಉಲ್ಲಂಘನೆಯಾಗಿತ್ತು. |
| 4 | ಚಿಕ್ಕಮಗಳೂರು (ವನ್ಯಜೀವಿ) | 62.46 | 1982 ರಿಂದ 2001 | ಕಂದಾಯ ಇಲಾಖೆಯು ಕುಂದೂರು ಕಿರು ಅರಣ್ಯದ ಭೂಮಿಯನ್ನು 23 ಕೃಷಿಕರಿಗೆ, ಅರಣ್ಯ ಸಂರಕ್ಷಣೆ ಅಧಿನಿಯಮದಂತೆ ಪೂರ್ವಾನುಮತಿ ಇಲ್ಲದೆಯೇ, ವರ್ಗಾಯಿಸಿತು. |

ಹೀಗೆ, ಅರಣ್ಯ ಮತ್ತು ಕಂದಾಯ ಇಲಾಖೆಗಳ ನಡುವಿನ ಸಮನ್ವಯದ ಕೊರತೆಯು, ಅರಣ್ಯ ಪ್ರದೇಶಗಳು ಅನಧಿಕೃತವಾಗಿ ಮತ್ತು ಭಾರತ ಸರ್ಕಾರದ ಪೂರ್ವಾನುಮತಿ ಇಲ್ಲದೆಯೇ ವರ್ಗಾವಣೆಗೊಳ್ಳುವಲ್ಲಿ ಪರಿಣಮಿಸಿತು.

### 3.5.8 ಅರಣ್ಯೇತರ ಭೂಮಿಯನ್ನು ರಕ್ಷಿತ ಅರಣ್ಯವೆಂದು ಘೋಷಿಸುವುದರಲ್ಲಿ ವಿಳಂಬ

**ಪರಿಹಾರಾತ್ಮಕ ಅರಣ್ಯೀಕರಣದ ಅಡಿಯಲ್ಲಿ ತರಲಾದ ಅರಣ್ಯೇತರ ಪ್ರದೇಶವು ನಿಗದಿಯಂತೆ ಘೋಷಿತವಾಗಲಿಲ್ಲ**

ಭಾರತ ಸರ್ಕಾರದ ಸೂಚನೆಗಳಂತೆ, ಅರಣ್ಯಗಳ ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಮತ್ತು ಅರಣ್ಯೀಕೃತ ಪ್ರದೇಶವನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡುವಂತೆ ಅರಣ್ಯ ಇಲಾಖೆಗೆ ಅನುಕೂಲ ಮಾಡಲು, ಮಾರ್ಗಪಲ್ಲಟದ ಅನುಮೋದನೆಯ ದಿನಾಂಕದಿಂದ ಆರು ತಿಂಗಳ ಅವಧಿಯ ಒಳಗೆ, ಪರಿಹಾರಾತ್ಮಕ ಅರಣ್ಯೀಕರಣದಡಿಗೆ ತರಲಾದ ಅರಣ್ಯೇತರ ಭೂಮಿಯನ್ನು ರಕ್ಷಿತ ಅರಣ್ಯವೆಂದು ಅಧಿಸೂಚನೆ ಹೊರಡಿಸುವ ಅಗತ್ಯವಿತ್ತು. ಅಧಿಸೂಚನೆ ಮಾಡುವಲ್ಲಿನ ವಿಳಂಬ/ನೀಡದಿರುವಿಕೆಯು ಕಂದಾಯ ಇಲಾಖೆಯಿಂದ ಅಂತಹ ಪ್ರದೇಶಗಳ ಹಸ್ತಾಂತರ ಅಥವಾ ಅವುಗಳ ಒತ್ತುವರಿಯಾಗುವಲ್ಲಿ ಪರಿಣಮಿಸಬಹುದಾಗಿತ್ತು.

ಬಳ್ಳಾರಿ ಮತ್ತು ಚಿತ್ರದುರ್ಗ ವಿಭಾಗಗಳಲ್ಲಿನ ದಾಖಲೆಗಳ ಪರೀಕ್ಷಾ ತನಿಖೆಯಲ್ಲಿ ಗಮನಿಸಿದಂತೆ 2,039.27 ಹೆಕ್ಟೇರು ಅರಣ್ಯ ಪ್ರದೇಶವು, ಮಾರ್ಚ್ 2008ರಲ್ಲಿದ್ದಂತೆ, ರಕ್ಷಿತ ಅರಣ್ಯವೆಂದು ಇನ್ನೂ ಘೋಷಿತವಾಗಬೇಕಾಗಿತ್ತು. ಇಲಾಖೆಯಿಂದ ಅಧಿಸೂಚನೆಗಾಗಿ ಪ್ರಸ್ತಾವನೆಯ ಸಲ್ಲಿಸದಿರುವಿಕೆಯು 1 ರಿಂದ 25 ವರ್ಷಗಳವರೆಗಿನ ವಿಳಂಬಕ್ಕೆ ಕಾರಣವಾಯಿತೆಂದು ಬಳ್ಳಾರಿಯ ಅರಣ್ಯ ಸಂರಕ್ಷಕರು ಅಧ್ಯಾರೋಪಿಸಿದರು.

ಚಿಕ್ಕಮಗಳೂರು ವಿಭಾಗದಲ್ಲಿ, ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಸೂಚಿತವಾದ 843.44 ಹೆಕ್ಟೇರು ಅರಣ್ಯ ಪ್ರದೇಶದ ಪೈಕಿ 510 ಹೆಕ್ಟೇರು, ಮಾರ್ಚ್ 2008ರವರೆಗೆ ಅರಣ್ಯ ಇಲಾಖೆಯ ಪರವಾಗಿ ಹಕ್ಕು ಬದಲಾವಣೆಯಾಗಿದ್ದು ರಕ್ಷಿತ ಅರಣ್ಯವೆಂದು ಇನ್ನೂ ಘೋಷಿತವಾಗಬೇಕಾಗಿತ್ತು.

ಬಳ್ಳಾರಿ ಜಿಲ್ಲೆಯಲ್ಲಿನ ಒಂದು ಸಂಸ್ಥೆಯ ಪರವಾಗಿ ಮಾರ್ಗಪಲ್ಲಟಗೊಳಿಸಲ್ಪಟ್ಟ 125.5 ಹೆಕ್ಟೇರು ಅರಣ್ಯ ಭೂಮಿಯ ಬದಲಿಗೆ ಇಲಾಖೆಯು ಬೆಂಗಳೂರಿನಲ್ಲಿ 126.25 ಹೆಕ್ಟೇರು ಪ್ರದೇಶದಲ್ಲಿ ಪರಿಹಾರಾತ್ಮಕ ಅರಣ್ಯೀಕರಣವನ್ನು (ವೆಚ್ಚ ರೂ.29.27 ಲಕ್ಷ) 1995–99ರ ಅವಧಿಯಲ್ಲಿ ಕೈಗೊಂಡಿತು. ಈ ಪ್ರದೇಶವು ರಕ್ಷಿತ ಅರಣ್ಯವೆಂದು ಘೋಷಿತವಾಗಲಿಲ್ಲ. ಸಸಿ ನೆಡಲಾದ 54 ಹೆಕ್ಟೇರು ಪ್ರದೇಶವನ್ನು ಬೆಂಗಳೂರು ಮಹಾನಗರ ಪಾಲಿಕೆಯು, ಅರಣ್ಯ ಇಲಾಖೆಯು ತಿಳಿದಿದ್ದಂತೆ ಅಪಾಯಕಾರಿ ಕಸವನ್ನು ಎಸೆಯಲು ಉಪಯೋಗಿಸಿತು (ಜೂನ್ 2004). ಇಲಾಖೆಯು ಬೆಂಗಳೂರು ಮಹಾನಗರ ಪಾಲಿಕೆಯಿಂದ ನೆಡುತೋಪುಗಳ ನಷ್ಟದ ಕಡೆಗೆ ರೂ.20 ಲಕ್ಷವನ್ನು ಸ್ವೀಕರಿಸಿತು (ಜುಲೈ 2005). ಆದರೆ ಕನಿಷ್ಠ 0.25 ಸಸ್ಯ ಸಾಂದ್ರತೆಯೊಂದಿಗಿನ ಅರಣ್ಯ ಪ್ರದೇಶದ ನಿವ್ವಳ ಪ್ರಸ್ತುತ ಮೌಲ್ಯವು ರೂ.3.13 ಕೋಟಿಯಷ್ಟಾಗಿತ್ತು. ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಅರಣ್ಯೇತರ ಪ್ರದೇಶವು ಇನ್ನೂ ಸೂಚಿತವಾಗಬೇಕಾಗಿದೆ. ಪರಿಹಾರಾತ್ಮಕ ಅರಣ್ಯೀಕರಣವನ್ನು ಕೈಗೊಂಡ ಅರಣ್ಯೇತರ ಪ್ರದೇಶವನ್ನು ರಕ್ಷಿತ ಅರಣ್ಯವೆಂದು ಘೋಷಿಸುವಲ್ಲಿನ ವಿಳಂಬವು ಈ ಪ್ರದೇಶದ 54 ಹೆಕ್ಟೇರನ್ನು ಬೆಂಗಳೂರು ಮಹಾನಗರ ಪಾಲಿಕೆಯು ಅನಧಿಕೃತವಾಗಿ ಬಳಸುವುದರಲ್ಲಿ ಪರಿಣಮಿಸಿತು.

### 3.5.9 ಮಾರ್ಗಪಲ್ಲಟಗೊಂಡ ಅರಣ್ಯ ಪ್ರದೇಶಗಳ ಗಡಿ ಗುರುತಿಸುವಿಕೆಯಿಲ್ಲದಿರುವುದು ಮತ್ತು ತಪಾಸಣೆಯ ಕೊರತೆ

ಅಧಿನಿಯಮದ ವಿಧಿಗಳಂತೆ, ಒತ್ತುವರಿಗಳನ್ನು ತಡೆಯಲು, ಮಾರ್ಗಪಲ್ಲಟಗೊಂಡ ಅರಣ್ಯ ಪ್ರದೇಶಗಳನ್ನು ಬಳಕೆದಾರ ಸಂಸ್ಥೆಗಳ ವೆಚ್ಚದಲ್ಲಿ ಆರ್‌ಸಿಸಿ ಕಂಬಗಳೊಂದಿಗೆ ಗಡಿ ಗುರುತಿಸಲ್ಪಡಬೇಕಿದ್ದವು.

ಪರೀಕ್ಷಾ ತನಿಖೆಯಲ್ಲಿ ಗಮನಿಸಿದಂತೆ ಏಳು ವಿಭಾಗಗಳಲ್ಲಿ[39] ಹರಡಿದ್ದ ಮಾರುತ ಶಕ್ತಿ ಮತ್ತು ನೀರಾವರಿ ಯೋಜನೆಗಳಿಗಾಗಿ ಮಾರ್ಗಪಲ್ಲಟವಾಗಿದ್ದ 1,042 ಹೆಕ್ಟೇರು ಅರಣ್ಯ ಭೂಮಿಯಲ್ಲಿ, ನಾಲ್ಕು ಬಳಕೆದಾರ ಸಂಸ್ಥೆಗಳ ವೆಚ್ಚದಲ್ಲಿ ಆರ್‌ಸಿಸಿ ಕಂಬಗಳೊಡನೆ ಅರಣ್ಯ ಭೂಮಿಯ ಗಡಿ ಗುರುತಿಸುವಿಕೆಯನ್ನು, ಭಾರತ ಸರ್ಕಾರದಿಂದ ಯೋಜನೆಗಳಿಗಾಗಿ ಅಂತಿಮ ಮಂಜೂರಾತಿ ನೀಡಿದ ದಿನಾಂಕದಿಂದ ಒಂದರಿಂದ ಏಳು ವರ್ಷಗಳು ಗತಿಸಿದ್ದರೂ, ಖಚಿತಪಡಿಸಿಕೊಂಡಿರಲಿಲ್ಲ.

### 3.5.10 ಅರಣ್ಯ ಪ್ರದೇಶಗಳ ತಪ್ಪಾದ ಗುರುತಿಸುವಿಕೆ

ಭಾರತ ಸರ್ಕಾರವು ಶಿವಮೊಗ್ಗ ಅರಣ್ಯ ವಿಭಾಗದಲ್ಲಿ ಶರಾವತಿ ನದಿಗೆ ಅಡ್ಡವಾಗಿ ಅಣೆಕಟ್ಟು ನಿರ್ಮಿಸಲು ಮತ್ತು ಕಡೂರು–ಚಿಕ್ಕಮಗಳೂರು–ಸಕಲೇಶಪುರದ ನಡುವೆ ರೈಲ್ವೇ ಹಳಿ ಹಾಕಲು, ಸಮನಾದ ವ್ಯಾಪ್ತಿಯ ಅರಣ್ಯೇತರ ಭೂಮಿಯಲ್ಲಿ ಪರಿಹಾರಾತ್ಮಕ ಅರಣ್ಯೀಕರಣ ಕೈಗೊಳ್ಳಬೇಕು ಎನ್ನುವ ಷರತ್ತಿನೊಂದಿಗೆ, 722.70 ಹೆಕ್ಟೇರು ಅರಣ್ಯ ಭೂಮಿಯ ಮಾರ್ಗಪಲ್ಲಟವನ್ನು ಅನುಮೋದಿಸಿತು[40]. ಗುರುತಿಸಲ್ಪಟ್ಟ ಅರಣ್ಯೇತರ ಪ್ರದೇಶಗಳು ವಾಸ್ತವವಾಗಿ ಘೋಷಿಸಲ್ಪಟ್ಟ ಅರಣ್ಯ ಪ್ರದೇಶಗಳಾಗಿದ್ದವು ಮತ್ತು ಆ ಕಾರಣದಿಂದ ಮಾರ್ಗಪಲ್ಲಟವಾದ ಅರಣ್ಯ ಪ್ರದೇಶದ ಎರಡರಷ್ಟು ವ್ಯಾಪ್ತಿಯ ಅರಣ್ಯ ಪ್ರದೇಶಗಳಲ್ಲಿ ಪರಿಹಾರಾತ್ಮಕ ಅರಣ್ಯೀಕರಣವನ್ನು ಕೈಗೊಳ್ಳಬೇಕಾಗಿತ್ತು. ಇವು ರೂ.89.29 ಲಕ್ಷ ಪರಿಹಾರಾತ್ಮಕ ಅರಣ್ಯೀಕರಣ ಶುಲ್ಕಗಳ ಕಡಿಮೆ ವಸೂಲಾತಿಯಲ್ಲಿ ಮತ್ತು ಪರಿಹಾರಾತ್ಮಕ ಅರಣ್ಯೀಕರಣ ಮಾಡುವಲ್ಲಿ 722.70 ಹೆಕ್ಟೇರುಗಳಷ್ಟು ಕೊರತೆಯಾಗುವಲ್ಲಿ ಪರಿಣಮಿಸಿತು ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು (ಏಪ್ರಿಲ್ 2008). ಇದನ್ನು ಬಳಕೆದಾರ ಸಂಸ್ಥೆಯಿಂದ ವಸೂಲು ಮಾಡಲು ಅವಶ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ಚಿಕ್ಕಮಗಳೂರಿನ ವಿಭಾಗೀಯ ಅಧಿಕಾರಿಗಳು ತಿಳಿಸಿದರು.

[39] ಹಾಸನ, ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ತುಮಕೂರು ಹಾಗೂ ಬೆಳಗಾವಿ

[40] 1993: 700 ಹೆಕ್ಟೇರ್ 2006: 22.70 ಹೆಕ್ಟೇರ್

## 3.5.11 ಮಾರ್ಗಪಲ್ಲಟವಾದ ಅರಣ್ಯ ಪ್ರದೇಶಗಳ ಬದಲಿಗೆ ಪರಿಹಾರಾತ್ಮಕ ಅರಣ್ಯೀಕರಣ

**5,732.97 ಎಕರೆಯಲ್ಲಿ ಪರಿಹಾರಾತ್ಮಕ ಅರಣ್ಯೀಕರಣವನ್ನು ತೆಗೆದುಕೊಳ್ಳಲಿಲ್ಲ**

ಅರಣ್ಯ ಸಂರಕ್ಷಣೆ ಅಧಿನಿಯಮದಡಿ ಭಾರತ ಸರ್ಕಾರದ ಮಾರ್ಗದರ್ಶಿ ಸೂತ್ರಗಳಂತೆ, ಅರಣ್ಯೇತರ ಉದ್ದೇಶಕ್ಕಾಗಿ ಮಾರ್ಗಪಲ್ಲಟವಾದ ಅರಣ್ಯ ಪ್ರದೇಶದ ಬದಲಿಗೆ ಸಮನಾದ ವಿಸ್ತೀರ್ಣದ ಅರಣ್ಯೇತರ ಪ್ರದೇಶದಲ್ಲಿ ಪರಿಹಾರಾತ್ಮಕ ಅರಣ್ಯೀಕರಣ ಮಾಡುವ ಅಗತ್ಯವಿದೆ. ಅರಣ್ಯೇತರ ಭೂಮಿಯ ಅಲಭ್ಯತೆಯ ಸಂದರ್ಭದಲ್ಲಿ, ಮಾರ್ಗಪಲ್ಲಟಗೊಳ್ಳುತ್ತಿರುವ ಪ್ರದೇಶದ ಎರಡರಷ್ಟು ವ್ಯಾಪ್ತಿಯ ನಶಿಸಿರುವ ಅರಣ್ಯ ಪ್ರದೇಶದಲ್ಲಿ ಪರಿಹಾರಾತ್ಮಕ ಅರಣ್ಯೀಕರಣವನ್ನು ಮಾಡಬೇಕು. ಆದರೆ ಅರಣ್ಯ ಪ್ರದೇಶದ ಮಾರ್ಗಪಲ್ಲಟವು ಒಂದು ಹೆಕ್ಟೇರು ಅಥವಾ ಕಡಿಮೆ ಇದ್ದಲ್ಲಿ ಪರಿಹಾರಾತ್ಮಕ ಅರಣ್ಯೀಕರಣದ ಅವಶ್ಯಕತೆಯಿರುವುದಿಲ್ಲ.

39,974.86 ಹೆಕ್ಟೇರು[41] ಅರಣ್ಯ ಪ್ರದೇಶವು ನೀರಾವರಿ ಯೋಜನೆಗಳ ನಿರ್ಮಾಣ, ಜಲ/ಮಾರುತ ಶಕ್ತಿ ಯೋಜನೆಗಳು, ಪ್ರಸರಣ ಮತ್ತು ರೈಲ್ವೆ ಮಾರ್ಗಗಳ ಅಳವಡಿಕೆ, ಗಣಿಗಾರಿಕೆ/ಕಲ್ಲು ಗಣಿಗಾರಿಕೆ, ಕಟ್ಟಡಗಳ ನಿರ್ಮಾಣ, ಇತ್ಯಾದಿಗಳಿಗಾಗಿ 1980 ಮತ್ತು ಜೂನ್ 2007ರ ನಡುವೆ ಮಾರ್ಗಪಲ್ಲಟವಾಯಿತು. ಇಲಾಖೆಯು ತನ್ನ ವರದಿಯಲ್ಲಿ, 986.29 ಹೆಕ್ಟೇರು ಉಳಿಕೆಯನ್ನು ಬಿಟ್ಟು 38,988.57 ಹೆಕ್ಟೇರು ವ್ಯಾಪ್ತಿಯಲ್ಲಿ ಪರಿಹಾರಾತ್ಮಕ ಅರಣ್ಯೀಕರಣವು ಕೈಗೊಳ್ಳಲ್ಪಟ್ಟಿದೆಯೆಂದು ಸೂಚಿಸಿತು. ಆದರೆ, ಪರಿಹಾರಾತ್ಮಕ ಅರಣ್ಯೀಕರಣ ಕೈಗೊಳ್ಳಲಾದ ವ್ಯಾಪ್ತಿಯು 9,493.36 ಹೆಕ್ಟೇರು ನಶಿಸಿರುವ ಅರಣ್ಯದಿಂದ ಕೂಡಿತ್ತಾದ್ದರಿಂದ ಮಾಡಲಾದ ಅರಣ್ಯೀಕರಣವು 4,746.68 ಹೆಕ್ಟೇರಿನಷ್ಟು ಕಡಿಮೆಯಿತ್ತು ಎನ್ನುವುದು ಅಭಿಪ್ರಾಯವಾಗುತ್ತದೆ. ಹೀಗಾಗಿ ಪರಿಹಾರಾತ್ಮಕ ಅರಣ್ಯೀಕರಣವು ವಾಸ್ತವವಾಗಿ ಇನ್ನೂ 5,732.97 ಹೆಕ್ಟೇರಿನಲ್ಲಿ ಆಗಬೇಕಾಗಿದ್ದಿತು. ಹೀಗೆ ಇಲಾಖೆಯು ಪರಿಹಾರಾತ್ಮಕ ಅರಣ್ಯೀಕರಣದ ವ್ಯಾಪ್ತಿಯ ಸರಿಯಾದ ನಿಷ್ಕರ್ಷೆ ಮಾಡುವಲ್ಲಿ ವಿಫಲವಾಯಿತು.

ಪರೀಕ್ಷಾ ತನಿಖೆ ನಡೆಸಲಾದ ಏಳು ವಿಭಾಗಗಳಲ್ಲಿ[42] **ಅನುಬಂಧ 3.25**ರಲ್ಲಿ ವಿವರಿಸಿರುವಂತೆ 1,624 ಹೆಕ್ಟೇರು ವ್ಯಾಪ್ತಿಯ ಅರಣ್ಯ ಪ್ರದೇಶದ ಮಾರ್ಗಪಲ್ಲಟಗಳಿದ್ದ 16 ಪ್ರಕರಣಗಳಲ್ಲಿ 1–25 ವರ್ಷಗಳು ಗತಿಸಿದ ನಂತರ ಪರಿಹಾರಾತ್ಮಕ ಅರಣ್ಯೀಕರಣವನ್ನು ಕೈಗೊಳ್ಳಲಾಗಿತ್ತು. ಪರಿಹಾರಾತ್ಮಕ ಅರಣ್ಯೀಕರಣ ಕಾಮಗಾರಿಗಳಿಗಾಗಿ ಕಾಲದ ಮಿತಿಯು ನಿಗದಿಯಾಗಿರಲಿಲ್ಲ. ಇಲಾಖೆಯಿಂದ, ನೀರಾವರಿ ಯೋಜನೆಗಳ ನಿರ್ಮಾಣ, ಗಣಿಗಾರಿಕೆ, ವಿದ್ಯುತ್ ಯೋಜನೆಗಳು, ಕಟ್ಟಡಗಳ ನಿರ್ಮಾಣ, ಮುಂತಾದ ಅರಣ್ಯೇತರ ಉದ್ದೇಶಗಳಿಗಾಗಿ ಅರಣ್ಯ ಪ್ರದೇಶದ ಮಾರ್ಗಪಲ್ಲಟದಿಂದಾದ ಜೈವಿಕ ವ್ಯವಸ್ಥೆಯ ಮೇಲಿನ ಪ್ರಭಾವವನ್ನು ನಿಶ್ಚಯಿಸಲು ಅಧ್ಯಯನವು ಮಾಡಲ್ಪಡಲಿಲ್ಲ.

ನಿರಂತರ ಅಭಿವೃದ್ಧಿ ಅಗತ್ಯಗಳಿಗೆ ಪ್ರತಿಯಾಗಿ ಪರಿಹಾರಾತ್ಮಕ ಅರಣ್ಯೀಕರಣ ಕೈಗೊಳ್ಳುವಲ್ಲಿ ಇದ್ದ ಕೊರತೆ ಮತ್ತು ಉಂಟಾದ ವಿಳಂಬ ಹಾಗೂ ಅರಣ್ಯ ಸಂರಕ್ಷಣೆ ಮೇಲೆ ಇವುಗಳ ಪ್ರತಿಕೂಲ ಪ್ರಭಾವಗಳನ್ನು ನಿರ್ಧರಿಸಲಿಲ್ಲ.

## 3.5.12 ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಅರಣ್ಯೇತರ ಪ್ರದೇಶಗಳ ಗುರುತಿಸುವಿಕೆ

ಅರಣ್ಯ ಸಂರಕ್ಷಣೆ ಅಧಿನಿಯಮ 1980ರ ಅಡಿಯಲ್ಲಿನ ಭಾರತ ಸರ್ಕಾರದ ಮಾರ್ಗದರ್ಶಿ ಸೂತ್ರಗಳ ಪ್ರಕಾರ, ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಅರಣ್ಯೇತರ ಪ್ರದೇಶವು, ಹೊಸದಾಗಿ ಸಸಿ ನೆಡಲಾದ ಪ್ರದೇಶದ ಪರಿಣಾಮಕಾರಿಯಾದ ಇಲಾಖಾ ಉಸ್ತುವಾರಿಗೆ ಅನುಕೂಲ ಮಾಡಲು, ರಕ್ಷಿತ ಅರಣ್ಯಕ್ಕೆ ನಿಕಟವಾಗಿ ಅಥವಾ ಸಮೀಪದಲ್ಲಿ ಗುರುತಿಸಲ್ಪಡಬೇಕಿತ್ತು. ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಜಿಲ್ಲೆಯೊಳಗೇ ಅರಣ್ಯೇತರ ಪ್ರದೇಶದ ಅಲಭ್ಯತೆಯ ಸಂದರ್ಭದಲ್ಲಿ, ಪ್ರದೇಶದ ಸೂಕ್ಷ್ಮ ಜೀವಿ ಪರಿಸ್ಥಿತಿ ಶಾಸ್ತ್ರದ ಮೇಲಿನ ಪ್ರತಿಕೂಲ ಪ್ರಭಾವವನ್ನು ಕನಿಷ್ಠಗೊಳಿಸಲು ಮಾರ್ಗಪಲ್ಲಟದ ಸ್ಥಳಕ್ಕೆ ಸಾಧ್ಯವಿದ್ದಷ್ಟು ಹತ್ತಿರದಲ್ಲಿರುವಂತೆ ರಾಜ್ಯದ ಯಾವುದೇ ಭಾಗದಲ್ಲಿನ ಸ್ಥಳವನ್ನು ಗುರುತಿಸಬೇಕು. 1980 ರಿಂದ ಜೂನ್ 2007ರ ಅವಧಿಯಲ್ಲಿ, ಪರಿಹಾರಾತ್ಮಕ ಅರಣ್ಯೀಕರಣವನ್ನು 29,495.21 ಹೆಕ್ಟೇರು ಅರಣ್ಯೇತರ

---

[41] 40,076.86 ಹೆಕ್ಟೇರು ಕಳೆಯಿರಿ ಪ್ರತಿ ಪ್ರಕರಣದಲ್ಲಿ ಒಂದು ಹೆಕ್ಟೇರಿಗಿಂತ ಕಡಿಮೆ ಇರುವ ಅರಣ್ಯ ಪ್ರದೇಶದ ಮಾರ್ಗಪಲ್ಲಟದ 102 ಹೆಕ್ಟೇರು

[42] ಕಾರವಾರ, ದಕ್ಷಿಣ ಕನ್ನಡ, ಬೆಳಗಾವಿ, ಬೆಂಗಳೂರು ಗ್ರಾಮಾಂತರ ಮತ್ತು ನಗರ, ಮಂಡ್ಯ ಹಾಗೂ ಬೀದರ್

ಪ್ರದೇಶಗಳಲ್ಲಿ ಕೈಗೊಳ್ಳಲಾಯಿತು. ರಕ್ಷಿತ ಅರಣ್ಯಕ್ಕೆ ಅರಣ್ಯೇತರ ಪ್ರದೇಶದ ನಿಕಟತೆ/ಸಾಮೀಪ್ಯತೆಯ ದತ್ತವು ಲಭ್ಯವಿರಲೂ ಇಲ್ಲ ಅಥವಾ ನೋಡಲ್ ಅಧಿಕಾರಿಗಳ ಮಟ್ಟದಲ್ಲಿ ಮೇಲ್ವಿಚಾರಣೆಯೂ ಆಗಲಿಲ್ಲ.

ಮೂರು[43] ವಿಭಾಗಗಳಲ್ಲಿ, 2002–07ರ ಅವಧಿಯಲ್ಲಿ 235 ಹೆಕ್ಟೇರು ವಿಸ್ತೀರ್ಣದ ಅರಣ್ಯ ಪ್ರದೇಶವು ಮಾರ್ಗಪಲ್ಲಟವಾಯಿತು; ಕಂದಾಯ ಇಲಾಖೆಯಿಂದ ಗುರುತಿಸಲಾದಂತೆ ಅರಣ್ಯೀಕರಣಕ್ಕಾಗಿ ಅದೇ ಜಿಲ್ಲೆಯಲ್ಲಿ ಅರಣ್ಯೇತರ ಪ್ರದೇಶದ ಲಭ್ಯವಿದ್ದರೂ, ಇತರ ಜಿಲ್ಲೆಗಳಲ್ಲಿ ಸಮಾನ ವ್ಯಾಪ್ತಿಯ ಅರಣ್ಯೇತರ ಪ್ರದೇಶವನ್ನು ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಅನುಮೋದಿಸಲಾಯಿತು. ಬಳ್ಳಾರಿ ಜಿಲ್ಲೆಯಲ್ಲಿ, ಗಣಿಗಾರಿಕೆ ಮತ್ತಿತರ ಉದ್ದೇಶಗಳಿಗಾಗಿ 1980ರಿಂದ ಮಾರ್ಗಪಲ್ಲಟವಾದ 4,306 ಹೆಕ್ಟೇರು ಅರಣ್ಯ ಪ್ರದೇಶಕ್ಕೆ ಪ್ರತಿಯಾಗಿ, ಕೇವಲ 2,740 ಹೆಕ್ಟೇರಿನ ಪರಿಹಾರಾತ್ಮಕ ಅರಣ್ಯೀಕರಣವು ಮಾಡಲ್ಪಟ್ಟಿತು. ಇವುಗಳಲ್ಲಿ, ಭೂಬ್ಯಾಂಕಿನ ಕಂದಾಯ ದಾಖಲೆಗಳಿಂದ ಸ್ಪಷ್ಟವಾದಂತೆ 8,951 ಹೆಕ್ಟೇರು ಅರಣ್ಯೇತರ ಪ್ರದೇಶವು ಅದೇ ಜಿಲ್ಲೆಯಲ್ಲಿ ಲಭ್ಯವಿದ್ದರೂ, ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಕೇವಲ 698 ಹೆಕ್ಟೇರು ಅರಣ್ಯೇತರ ಪ್ರದೇಶವು ಗುರುತಿಸಲ್ಪಟ್ಟಿತು.

ರಕ್ಷಿತ ಅರಣ್ಯದ ನಿಕಟ/ಸಮೀಪದಲ್ಲಿಲ್ಲದ ಅರಣ್ಯೇತರ ಪ್ರದೇಶಗಳಲ್ಲಿ ಪರಿಹಾರಾತ್ಮಕ ಅರಣ್ಯೀಕರಣದ ನಿರ್ವಹಣೆಯು ಸೂಚಿತ ಮಾರ್ಗದರ್ಶಿಸೂತ್ರಗಳ ಉಲ್ಲಂಘನೆಯಾಗಿತ್ತು. ಇದರಿಂದಾದ ಪ್ರತಿಕೂಲ ಪ್ರಭಾವವು ನಿಷ್ಕರ್ಷಿಸಲ್ಪಟ್ಟಿರಲಿಲ್ಲ.

### 3.5.13 ಬಳಕೆದಾರ ಸಂಸ್ಥೆಗಳಿಂದ ನಿವ್ವಳ ಪ್ರಸ್ತುತ ಮೌಲ್ಯದ ವಸೂಲಾತಿಯಾಗದಿರುವುದು

**23 ಬಳಕೆದಾರ ಸಂಸ್ಥೆಗಳಿಂದ ರೂ.17.09 ಕೋಟಿಯ ನಿವ್ವಳ ಪ್ರಸ್ತುತ ಮೌಲ್ಯವು ವಸೂಲಾತಿಯಾಗದೇ ಉಳಿದಿತ್ತು**

ಭಾರತ ಸರ್ಕಾರವು ಅರಣ್ಯದ ಸ್ವರೂಪ, ಸಾಂದ್ರತೆ ಮತ್ತು ಮಾರ್ಗಪಲ್ಲಟಕ್ಕೆ ಪ್ರಸ್ತಾವಿತ ಅರಣ್ಯ ಪ್ರದೇಶದಲ್ಲಿನ ಸಸ್ಯಜಾತಿಗಳ ಪ್ರಕಾರಗಳ ಮೇಲೆ ಆಧರಿಸಿ ಪ್ರತಿ ಹೆಕ್ಟೇರಿಗೆ ರೂ.5.80 ಲಕ್ಷದಿಂದ ರೂ.9.20 ಲಕ್ಷದವರೆಗೆ ವಿಭಿನ್ನ ದರಗಳಲ್ಲಿ ನಿವ್ವಳ ಪ್ರಸ್ತುತ ಮೌಲ್ಯದ ವಸೂಲಾತಿ/ಸಂಗ್ರಹಕ್ಕಾಗಿ ಮಾರ್ಗದರ್ಶಕ ಸೂತ್ರಗಳನ್ನು ನೀಡಿತ್ತು (ಸೆಪ್ಟೆಂಬರ್ 2003). ಅದು ರಾಜ್ಯ ಸರ್ಕಾರ/ನೋಡಲ್ ಅಧಿಕಾರಿಯು ಬಳಕೆದಾರ ಸಂಸ್ಥೆಗಳಿಂದ ನಿವ್ವಳ ಪ್ರಸ್ತುತ ಮೌಲ್ಯವನ್ನು ವಸೂಲು ಮಾಡಲು ಮತ್ತು ವಸೂಲಾದ ಮೊತ್ತವನ್ನು ಪರಿಹಾರಾತ್ಮಕ ಅರಣ್ಯೀಕರಣ ನಿಧಿಯ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರದೊಂದಿಗೆ ಠೇವಣಿ ಇಡಲು ನಿರ್ದೇಶಿಸಿತ್ತು (ಸೆಪ್ಟೆಂಬರ್/ಅಕ್ಟೋಬರ್ 2007). 30 ಅಕ್ಟೋಬರ್ 2002ಕ್ಕೆ[44] ಮುಂಚಿತವಾಗಿ ನೀಡಲಾದ ಮೊದಲನೇ ಹಂತದ ಮಂಜೂರಾತಿಯ (ತಾತ್ವಿಕವಾಗಿ) ಪ್ರಕರಣಗಳಲ್ಲಿ ಸಹಾ ನಿವ್ವಳ ಪ್ರಸ್ತುತ ಮೌಲ್ಯದ ವಸೂಲಾತಿಯಾಗಬೇಕಿತ್ತು.

ಪರೀಕ್ಷಾ ತನಿಖೆಯಲ್ಲಿ ಗಮನಿಸಿದಂತೆ ಅರಣ್ಯೇತರ ಉದ್ದೇಶಗಳಾದ ಪ್ರಸರಣ ಮಾರ್ಗಗಳ, ರೈಲ್ವೆ ಮಾರ್ಗಗಳ ನಿರ್ಮಾಣ ನೀರಿನ ಕೊಳವೆದಾರಿಗಳ ಜೋಡಣೆ, ಜಲ/ಮಾರುತ ಶಕ್ತಿ ಯೋಜನೆಗಳ ನಿರ್ಮಾಣ, ಕಟ್ಟಡಗಳ ನಿರ್ಮಾಣ, ಗುತ್ತಿಗೆಗಳ ಪುನರ್ನವೀಕರಣ, ಮುಂತಾದವುಗಳಿಗಾಗಿ ಮಾರ್ಗಪಲ್ಲಟವಾದ 294.70 ಹೆಕ್ಟೇರು ಅರಣ್ಯ ಪ್ರದೇಶ ಒಳಗೊಂಡಂತೆ 23 ಬಳಕೆದಾರ ಸಂಸ್ಥೆಗಳ ಸಂಬಂಧದಲ್ಲಿ ನಿವ್ವಳ ಪ್ರಸ್ತುತ ಮೌಲ್ಯದ ವಸೂಲತಿಯು 15 ವಿಭಾಗಗಳಲ್ಲಿ[45] ಬಾಕಿ ಇದ್ದವು. ಪ್ರತಿ ಹೆಕ್ಟೇರಿಗೆ ಕನಿಷ್ಠ ದರವಾದ ರೂ.5.80 ಲಕ್ಷ ಅಂಗೀಕರಿಸಿದರೂ, ವಸೂಲಾತಿಯಾಗಬೇಕಿದ್ದ ನಿವ್ವಳ ಪ್ರಸ್ತುತ ಮೌಲ್ಯವು ರೂ.17.09 ಕೋಟಿಯಷ್ಟಾಗುತ್ತಿತ್ತು. ವಸೂಲಾಗದಿರುವುದಕ್ಕೆ ಕಾರಣಗಳು ದಾಖಲೆಯಲ್ಲಿರಲಿಲ್ಲ.

ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಡಿಸಂಬರ್ 2007ರಲ್ಲಿ ವಸೂಲಾತಿಗೆ ನಿರ್ದೇಶನವನ್ನು ಹೊರಡಿಸಿರುವುದಾಗಿ ಉತ್ತರಿಸಿದರು (ಜುಲೈ 2008).

[43] ಬೀದರ್, ಗುಲ್ಬರ್ಗ ಮತ್ತು ಗದಗ

[44] ನಿವ್ವಳ ಪ್ರಸ್ತುತ ಮೌಲ್ಯದ ಸಂಗ್ರಹಣೆಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ದಿನಾಂಕ

[45] ಬಾಗಲಕೋಟೆ, ಉಡುಪಿ, ಮೈಸೂರು, ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಮಡಿಕೇರಿ, ಬೆಳಗಾಂ, ಚಿಕ್ಕಮಗಳೂರು, ತುಮಕೂರು, ಹೊನ್ನಾವರ, ರಾಯಚೂರು, ಕಾರವಾರ, ಹಳಿಯಾಳ ಮತ್ತು ಬಳ್ಳಾರಿ

## 3.5.14 ನೋಡಲ್ ಅಧಿಕಾರಿಯಿಂದ ಮೇಲ್ವಿಚಾರಣೆ

ನೋಡಲ್ ಅಧಿಕಾರಿಯು ವಿವಿಧ ಯೋಜನೆಗಳಿಗಾಗಿ ಅರಣ್ಯ ಪ್ರದೇಶದ ಮಾರ್ಗಪಲ್ಲಟವನ್ನು ಒಪ್ಪುವ ಸಮಯದಲ್ಲಿ ಭಾರತ ಸರ್ಕಾರದಿಂದ ವಿಧಿಸಲ್ಪಟ್ಟಿದ್ದ ಷರತ್ತುಗಳ ಪಾಲನೆಯ ಮೇಲ್ವಿಚಾರಣೆ ಮಾಡಬೇಕಾಗಿದ್ದಿತು. ಅವರು ನಿಯತಕಾಲಿಕ ತಪಾಸಣೆಗಳನ್ನು ಮಾಡಿದ ನಂತರ ಬಳಕೆದಾರ ಸಂಸ್ಥೆಗಳಿಂದ ವಿಧಿಸಲ್ಪಟ್ಟಿದ್ದ ಷರತ್ತುಗಳ ಪಾಲಿಸದಿರುವಿಕೆಯ ಮೇಲೆ ತ್ರೈಮಾಸಿಕ ವರದಿಗಳನ್ನು ಭಾರತ ಸರ್ಕಾರಕ್ಕೆ ಸಲ್ಲಿಸಬೇಕಾಗಿದ್ದಿತು. ಜೊತೆಗೆ, ಅವರುಮಾಡಲಾದ ಪರಿಹಾರಾತ್ಮಕ ಅರಣ್ಯೀಕರಣದ ನೆಡುತೋಪುಗಳಲ್ಲಿ ಗಿಡಗಳ ಬದುಕು ಉಳಿಯುವಿಕೆಯ ಅನುಪಾತವನ್ನು ಮತ್ತು ಅವುಗಳ ಸ್ಥಿತಿಯನ್ನು ಸಹ ಮೇಲ್ವಿಚಾರಣೆ ಮಾಡಬೇಕಾಗಿತ್ತು. ರಾಜ್ಯ ಸರ್ಕಾರದಿಂದ ಸ್ವೀಕೃತವಾದ ಅರ್ಜಿಗಳ ಮತ್ತು ಅವುಗಳ ಸಂಸ್ಕರಣದ ಮೇಲೆ ಒಂದು ಮಾಸಿಕ ವರದಿಯನ್ನು ಪ್ರಾದೇಶಿಕ ಅಧಿಕಾರಿ/ಅರಣ್ಯಗಳ ಸಹಾಯಕ ಇನ್ಸ್‌ಪೆಕ್ಟರ್ ಜನರಲ್ (ಅರಣ್ಯ ಸಂರಕ್ಷಣೆ)/ಮೇಲ್ವಿಚಾರಣಾ ಕೋಶದ ಪ್ರಭಾರದಲ್ಲಿನ ನಿರ್ದೇಶಕರಿಗೆ ಸಲ್ಲಿಸಬೇಕಾಗಿದ್ದಿತು.

ಬದುಕು ಉಳಿಯುವಿಕೆಯ ಸ್ಥಿತಿಯ ಮೇಲ್ವಿಚಾರಣೆಗೆ ಸಂಬಂಧಿಸಿದ ನೋಡಲ್ ಅಧಿಕಾರಿಗಳ ತಪಾಸಣಾ ವರದಿಗಳು ಸಲ್ಲಿಸಲ್ಪಡಲಿಲ್ಲ. ನಿಗದಿ ಪಡಿಸಿದ ಮಾಸಿಕ ಮತ್ತು ತ್ರೈಮಾಸಿಕ ವರದಿಗಳು ಸಹ ಸಲ್ಲಿಸಲ್ಪಡಲಿಲ್ಲ. ಇದರಿಂದ, ನೋಡಲ್ ಅಧಿಕಾರಿಯಿಂದ ಆದ ಅರಣ್ಯ ಸಂರಕ್ಷಣ ಅಧಿನಿಯಮದ ಜಾರಿಯ ಮೇಲ್ವಿಚಾರಣೆಯ ವ್ಯಾಪ್ತಿಯನ್ನು ಲೆಕ್ಕಪರಿಶೋಧನೆಯಲ್ಲಿ ನಿಷ್ಕರ್ಷಿಸಲಾಗಲಿಲ್ಲ.

## 3.5.15 ನಿರ್ಣಯ

ಅರಣ್ಯಗಳನ್ನು ಸಂರಕ್ಷಿಸುವ ಮತ್ತು ಪ್ರತಿಕೂಲ ಪರಿಸರ ಪ್ರಭಾವ ಹಾಗೂ ಜೈವಿಕ ಸ್ಥಿರತೆಯ ಅಪಾಯವನ್ನು ಕನಿಷ್ಠಗೊಳಿಸುವ ಉದ್ದೇಶದಿಂದ ಅರಣ್ಯ (ಸಂರಕ್ಷಣೆ) ಅಧಿನಿಯಮ, 1980 ರಲ್ಲಿ ಅಧಿಸೂಚಿತವಾಯಿತು. ಅಧಿನಿಯಮದಡಿಯಲ್ಲಿ ಮುಂದುವರೆಯುತ್ತಿದ್ದ ಉಲ್ಲಂಘನೆಗಳು, ಭಾರತ ಸರ್ಕಾರದ ಷರತ್ತುಗಳನ್ನು ಪಾಲಿಸದಿರುವುದು, ಕಂದಾಯ ಇಲಾಖೆಯಿಂದ ಗುತ್ತಿಗೆಗೆ ಬಹು ವ್ಯಾಪ್ತಿಯ ಅರಣ್ಯ ಭೂಮಿಯ ಬಿಡುಗಡೆ ಮತ್ತು ಗುತ್ತಿಗೆ ಅವಧಿಯ ಮುಕ್ತಾಯದ ನಂತರ ಅರಣ್ಯ ಪ್ರದೇಶಗಳನ್ನು ಹಿಂಪಡೆಯದಿರುವುದನ್ನು ಗಮನಿಸಲಾಯಿತು. ಇತರ ಉದ್ದೇಶಗಳಿಗಾಗಿ ಅರಣ್ಯ ಪ್ರದೇಶದ ಮಾರ್ಗಪಲ್ಲಟದಿಂದ ಜೈವಿಕ ಸ್ಥಿರತೆಯ ಮೇಲೆ ಆದ ಪ್ರತಿಕೂಲ ಪರಿಸರ ಪ್ರಭಾವವು ಸರ್ಕಾರದಿಂದ ನಿಷ್ಕರ್ಷಿಸಲ್ಪಡಲಿಲ್ಲ. ಕೆಲವು ಪ್ರಕರಣಗಳಲ್ಲಿ, ಪರಿಹಾರಾತ್ಮಕ ಅರಣ್ಯೀಕರಣದ ನೆಡುತೋಪುಗಳನ್ನು ಬೆಳೆಸಲಾದ ಅರಣ್ಯೇತರ ಪ್ರದೇಶವು ಅರಣ್ಯ ಅಧಿನಿಯಮದಡಿಯಲ್ಲಿ ಘೋಷಿತವಾಗಲಿಲ್ಲ. ಹಲವು ಪ್ರಕರಣಗಳಲ್ಲಿ ನಿವ್ವಳ ಪ್ರಸ್ತುತ ಮೌಲ್ಯವು ಸಹಾ ವಸೂಲಾತಿಯಾಗಲಿಲ್ಲ. ಮೇಲ್ವಿಚಾರಣೆಯಲ್ಲಿನ ಕೊರತೆ ಮತ್ತು ಅರಣ್ಯ ಗಡಿ ಕ್ರೋಢೀಕರಣದಲ್ಲಿ ಆದ ವಿಫಲತೆಯು ಅರಣ್ಯ ಪ್ರದೇಶವನ್ನು ಒತ್ತುವರಿಗಳಿಗೆ ಮತ್ತು ಅನಧಿಕೃತ ಮಾರ್ಗಪಲ್ಲಟಕ್ಕೆ ಅನುವು ಮಾಡಿತು.

## 3.5.16 ಶಿಫಾರಸುಗಳು

- ಬಳಕೆದಾರ ಸಂಸ್ಥೆಗಳಿಂದ ಆದ ಅರಣ್ಯ (ಸಂರಕ್ಷಣೆ) ಅಧಿ ನಿಯಮ, 1980ರ ಉಲ್ಲಂಘನೆಗೆ ದಂಡನಾ ಕ್ರಮವನ್ನು ಆರಂಭಿಸಬೇಕು.
- ಪರಿಸರದ ಮೇಲೆ ಆಗುವ ಪ್ರತಿಕೂಲ ಪ್ರಭಾವವನ್ನು ಮಿತಿಗೊಳಿಸಲು ಭಾರತ ಸರ್ಕಾರದಿಂದ ವಿಧಿಸಲಾದ ಷರತ್ತುಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳಬೇಕು.
- ಗುತ್ತಿಗೆ ಅವಧಿಯ ಮುಕ್ತಾಯದ ನಂತರ ಅರಣ್ಯ ಪ್ರದೇಶವನ್ನು ವಾಪಸ್ಸು ಪಡೆದು ಅರಣ್ಯೀಕರಣ ಮಾಡಬೇಕು.
- ಪರಿಹಾರಾತ್ಮಕ ಅರಣ್ಯೀಕರಣದ ನೆಡುತೋಪುಗಳನ್ನು ಬೆಳೆಸಲಾದ ಎಲ್ಲ ಅರಣ್ಯೇತರ ಪ್ರದೇಶವು ಅರಣ್ಯ ಅಧಿನಿಯಮದಡಿಯಲ್ಲಿ ರಕ್ಷಿತ ಅರಣ್ಯವೆಂದು ಘೋಷಿಸಲ್ಪಡಬೇಕು.
- ಬಳಕೆದಾರ ಸಂಸ್ಥೆಗಳಿಂದ ನಿವ್ವಳ ಪ್ರಸ್ತುತ ಮೌಲ್ಯದ ವಸೂಲಾತಿಯನ್ನು ಖಚಿತಪಡಿಸಿಕೊಳ್ಳಬೇಕು.

# ಅಧ್ಯಾಯ 4

# ವಹಿವಾಟುಗಳ ಲೆಕ್ಕಪರಿಶೋಧನೆ

- ಅಧಿಕ ಪಾವತಿ/ವ್ಯರ್ಥ/ನಿಷ್ಫಲ ವೆಚ್ಚ
- ಗುತ್ತಿಗೆ ಒಪ್ಪಂದಗಳ ಉಲ್ಲಂಘನೆ, ಗುತ್ತಿಗೆದಾರರಿಗೆ ಅನುಚಿತ ಒಲವು ಮತ್ತು ತಪ್ಪಿಸಬಹುದಾಗಿದ್ದ ವೆಚ್ಚ
- ಕ್ರಮಬದ್ಧತೆ ವಿಷಯಗಳು ಮತ್ತು ಇತರೆ ಅಂಶಗಳು
- ಸಾಮಾನ್ಯ

# ಅಧ್ಯಾಯ 4

# ವಹಿವಾಟುಗಳ ಲೆಕ್ಕಪರಿಶೋಧನೆ

ಸರ್ಕಾರದ ಇಲಾಖೆಗಳ, ಅವುಗಳ ಕ್ಷೇತ್ರೀಯ ರಚನೆಗಳ ಹಾಗೂ ಸ್ವಾಯತ್ತ ಸಂಸ್ಥೆಗಳ ವಹಿವಾಟುಗಳ ಲೆಕ್ಕಪರಿಶೋಧನೆಯು ಸಂಪನ್ಮೂಲಗಳ ನಿರ್ವಹಣೆಯಲ್ಲಿನ ಲೋಪಗಳ ಹಾಗೂ ಮಾದರಿ ಸೂತ್ರಕ್ಕೆ ತಕ್ಕಂತೆ ಕ್ರಮಬದ್ಧತೆ, ಔಚಿತ್ಯತೆ ಮತ್ತು ಮಿತವ್ಯಯಗಳನ್ನು ಪಾಲಿಸುವಲ್ಲಿನ ವೈಫಲ್ಯತೆಗಳ ಹಲವಾರು ನಿದರ್ಶನಗಳನ್ನು ಹೊರತಂದಿತು. ಇವುಗಳನ್ನು ಮುಂದಿನ ಕಂಡಿಕೆಗಳಲ್ಲಿ ಸ್ಥೂಲ ಉದ್ದೇಶ ಶೀರ್ಷಿಕೆಗಳ ಅಡಿಯಲ್ಲಿ ಮಂಡಿಸಲಾಗಿದೆ.

## 4.1 ಅಧಿಕ ಪಾವತಿ/ವ್ಯರ್ಥ/ನಿಷ್ಫಲ ವೆಚ್ಚ

**ಉನ್ನತ ಶಿಕ್ಷಣ ಇಲಾಖೆ**

### 4.1.1 ಮನೆ ಬಾಡಿಗೆ ಭತ್ಯೆಯ ಅಧಿಕ ಪಾವತಿ

**ಚಾಲ್ತಿಯಲ್ಲಿರುವ ಸರ್ಕಾರೀ ಆದೇಶಗಳ ಪ್ರಕಾರ ಮನೆ ಬಾಡಿಗೆ ಭತ್ಯೆಯನ್ನು ನಿಯಂತ್ರಿತಗೊಳಿಸುವಲ್ಲಿನ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇವುಗಳ ಅಧಿಕಾರಿಗಳ ವಿಫಲತೆಯು ರೂ.45.76 ಲಕ್ಷ ಅಧಿಕ ಪಾವತಿಯಲ್ಲಿ ಪರಿಣಮಿಸಿತು.**

ತನ್ನ ಉದ್ಯೋಗಿಗಳಿಗೆ ಪಾವತಿ ಮಾಡುವ ಮನೆ ಬಾಡಿಗೆ ಭತ್ಯೆಯ ದರಗಳನ್ನು ಅವರುಗಳು ಕಾರ್ಯ ನಿರ್ವಹಿಸುವ ಸ್ಥಳದ ಆಧಾರದ ಮೇಲೆ ಸರ್ಕಾರವು ಪರಿಷ್ಕರಿಸಿತು (ಆಗಸ್ಟ್ 1999) ಹಾಗೂ ಪಟ್ಟಣಗಳನ್ನು ಮತ್ತು ಇತರೆ ಸ್ಥಳಗಳನ್ನು ಆರು ವರ್ಗಗಳಾಗಿ ವಿಂಗಡಿಸಿತು. ಅದರಂತೆ 25,000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಸ್ಥಳಗಳನ್ನು 'ಇ' ಪ್ರವರ್ಗ ಎಂದು ವರ್ಗೀಕರಿಸಲಾಯಿತು ಮತ್ತು ಈ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುವ ಉದ್ಯೋಗಿಗಳು ತಮ್ಮ ಮೂಲ ವೇತನದ ಶೇಕಡಾ ಮೂರರಷ್ಟು ಮನೆ ಬಾಡಿಗೆ ಭತ್ಯೆಗೆ ಅರ್ಹರಾಗಿದ್ದರು. ಈ ದರವನ್ನು 1 ಏಪ್ರಿಲ್ 2002ರಿಂದ ಜಾರಿಗೆ ಬರುವಂತೆ ಶೇಕಡಾ ನಾಲ್ಕಕ್ಕೆ ಪರಿಷ್ಕರಿಸಲಾಯಿತು.

ಕರ್ನಾಟಕ ವಿಶ್ವವಿದ್ಯಾನಿಲಯ, ಹಂಪಿ ಮತ್ತು ಬೆಳಗಾವಿ ಜಿಲ್ಲೆಯ ಭೂತರಾಮನಹಟ್ಟಿಯಲ್ಲಿರುವ ಕರ್ನಾಟಕ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ಕೇಂದ್ರ ಇವುಗಳಲ್ಲಿನ ಉದ್ಯೋಗಿಗಳ ವೇತನ ಬಿಲ್ಲುಗಳನ್ನು ಪರಿಶೀಲಿಸಲಾಗಿ (ಮೇ 2007/ಮಾರ್ಚ್ 2008) ಈ ವಿಶ್ವವಿದ್ಯಾನಿಲಯಗಳು 'ಇ' ಪ್ರವರ್ಗದಲ್ಲಿವೆ ಎಂದು ವರ್ಗೀಕರಿಸಲಾದ ಸ್ಥಳಗಳಲ್ಲಿದ್ದರೂ ಸಹ, ಉದ್ಯೋಗಿಗಳಿಗೆ 1 ಆಗಸ್ಟ್ 1999 ಮತ್ತು 1 ಏಪ್ರಿಲ್ 2002ರಿಂದ ಅನುಕ್ರಮವಾಗಿ ಅಂಗೀಕಾರಾರ್ಹವಾಗಿದ್ದ ಶೇಕಡ ಮೂರು ಮತ್ತು ಶೇಕಡ ನಾಲ್ಕಕ್ಕೆ ಪ್ರತಿಯಾಗಿ ಅವರ ಮೂಲ ವೇತನದ ಶೇಕಡಾ 7.5ರಷ್ಟನ್ನು ಮನೆ ಬಾಡಿಗೆ ಭತ್ಯೆಯನ್ನಾಗಿ ಪಾವತಿ ಮಾಡಿರುವುದು ತಿಳಿದುಬಂದಿತು. ಈ ಸ್ಥಳಗಳಲ್ಲಿನ ಪೌರ ಮೂಲಸೌಕರ್ಯಗಳ ಕೊರತೆಗಳು ಉದ್ಯೋಗಿಗಳನ್ನು ಹೊಸಪೇಟೆ ಮತ್ತು ಬೆಳಗಾವಿಗಳಿಂದ (ಕಮಲಾಪುರ ಮತ್ತು ಭೂತರಾಮನಹಟ್ಟಿ) ಓಡಾಡುವಂತೆ ಮಾಡಿದ್ದವು ಎಂಬುದು ಅಧಿಕ ದರದ ಮನೆ ಬಾಡಿಗೆ ಭತ್ಯೆಯನ್ನು ಮಂಜೂರು ಮಾಡಲು ನೀಡಿದ ಕಾರಣವಾಗಿದ್ದಿತು. ಆದರೆ, ಈ ವಿಶ್ವವಿದ್ಯಾನಿಲಯಗಳು ತೆಗೆದುಕೊಂಡ ಕ್ರಮವನ್ನು ಅನುಸಮರ್ಥನೆ ಮಾಡಲು ಸರ್ಕಾರಕ್ಕೆ ಕಳುಹಿಸಿದ (ಏಪ್ರಿಲ್ 1993 ಮತ್ತು ಡಿಸೆಂಬರ್ 2004) ಪ್ರಸ್ತಾವನೆಗಳು ಅನುಮೋದನೆಯಾಗಿರಲಿಲ್ಲ (ಜುಲೈ 2008). ಆದುದರಿಂದ, ಸರ್ಕಾರದ ಪೂರ್ವಾನುಮತಿಯಿಲ್ಲದೆ ಈ ವಿಶ್ವವಿದ್ಯಾನಿಲಯಗಳು ತೆಗೆದುಕೊಂಡ ಕ್ರಮಗಳು ಸರಿಯಾಗಿರಲಿಲ್ಲ.

ಕನ್ನಡ ವಿಶ್ವವಿದ್ಯಾನಿಲಯ, ಕಮಲಾಪುರ, ಇಲ್ಲಿ 1 ಏಪ್ರಿಲ್ 2003ರಿಂದ 31 ಮಾರ್ಚ್ 2008ರವರೆಗೆ ಮತ್ತು ಭೂತರಾಮನಹಟ್ಟಿಯಲ್ಲಿನ ಸ್ನಾತಕೋತ್ತರ ಪದವಿ ಕೇಂದ್ರದಲ್ಲಿ 1 ಏಪ್ರಿಲ್ 2002ರಿಂದ 31 ಜುಲೈ 2007ರವರೆಗೆ ನೀಡಿದ ಅಧಿಕ ಪಾವತಿಗಳು ರೂ.45.76 ಲಕ್ಷವಾಗಿದ್ದಿತು **(ಅನುಬಂಧ 4.1)** ಲೆಕ್ಕಪರಿಶೋಧನೆಯ ದೃಷ್ಟಾಂತದ ಮೇರೆಗೆ ವಿಶ್ವವಿದ್ಯಾನಿಲಯವು (ಸ್ನಾತಕೋತ್ತರ ಪದವಿ ಕೇಂದ್ರ) ಅಧಿಕ ದರದ ಮನೆ ಬಾಡಿಗೆ ಭತ್ಯೆಯ ಪಾವತಿಯನ್ನು ನಿಲ್ಲಿಸಿ ಆಗಸ್ಟ್ 2007ರಿಂದ ಅವರಿಗೆ ಅನ್ವಯಿಸುವ ಕಡಿಮೆ ದರವನ್ನು ಅಳವಡಿಸಿಕೊಂಡಿತು. ಪ್ರತಿಯೋರ್ವ ಉದ್ಯೋಗಿಗೂ ಇರುವ ಸೇವಾ

ಅವಧಿಯನ್ನಾಧರಿಸಿ ಅವಧಿಬದ್ಧ ರೀತಿಯಲ್ಲಿ ಅಧಿಕ ಪಾವತಿಗಳನ್ನು ವಸೂಲು ಮಾಡಲು ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಈ ವಿಷಯವನ್ನು ಜುಲೈ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

**ಜಲ ಸಂಪನ್ಮೂಲಗಳ ಇಲಾಖೆ – ಸಣ್ಣ ನೀರಾವರಿ**

## 4.1.2 ನಿರ್ಜಲೀಕರಣಗೊಳಿಸುವ ವೆಚ್ಚಗಳ ಅಂಗೀಕರಿಸಲಾಗದ ಪಾವತಿ

**ಸೇತುವೆ–ಬಂದಾರವೊಂದರ ನಿರ್ಮಾಣಕ್ಕಾಗಿ ನಿರ್ಜಲೀಕರಣಗೊಳಿಸಲು ಗುತ್ತಿಗೆ ಒಪ್ಪಂದದ ಷರತ್ತುಗಳನ್ನು ಉಪೇಕ್ಷಿಸಿ ಗುತ್ತಿಗೆದಾರನಿಗೆ ರೂ.52.40 ಲಕ್ಷ ಪಾವತಿ ಮಾಡಲಾಯಿತು.**

ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಂಕರವಾಡಿ ಗ್ರಾಮದ ಬಳಿ 1,383 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಕಾಗಿನ ನದಿಯ ಮೇಲೆ ರೂ.7.52 ಕೋಟಿ ವೆಚ್ಚದಲ್ಲಿ ಸೇತುವೆ–ಬಂದಾರವೊಂದರ ನಿರ್ಮಾಣವನ್ನು, ಜನವರಿ 2007ರ ಒಳಗೆ ಪೂರ್ಣಗೊಳಿಸುವಂತೆ, ಓರ್ವ ಗುತ್ತಿಗೆದಾರನಿಗೆ ವಹಿಸಲಾಯಿತು (ಜನವರಿ 2006). ನದಿಯ ತಳವನ್ನು ಸಮೀಪಿಸಲು ಇರುವ ಅಡಚಣೆಗಳನ್ನು ದೂರ ಮಾಡುವ, ಮುಂಗವಚ ಗೋಡೆ ಹಾಗೂ ಮಾರ್ಗದರ್ಶಕ ಗೋಡೆಗಳ ನಿರ್ಮಾಣ, ಆಸರೆಗೋಡೆಯ ಹಿಂದೆ ಕಲ್ಲುಗುಂಡುಗಳನ್ನು ತುಂಬುವ ಮತ್ತು ನಿರ್ಜಲೀಕರಣ ಗೊಳಿಸುವಂತಹ ಹೆಚ್ಚುವರಿ ಕಾಮಗಾರಿಗಳನ್ನು ಅದೇ ಗುತ್ತಿಗೆದಾರನಿಂದಲೇ ನಿರ್ವಹಿಸಲು ತಾಂತ್ರಿಕ ಅಂದಾಜು ಸಮಿತಿ (ಟಿಎಸಿ) ಸಲಹೆ ಮಾಡಿತ್ತು (ನವೆಂಬರ್ 2006). ಸರ್ಕಾರದ ಅನುಮೋದನೆಯನ್ನು ಪಡೆದು (ಜೂನ್ 2007) ಹೆಚ್ಚುವರಿ ಕಾಮಗಾರಿಗಳಿಗಾಗಿ ರೂ.4.33 ಕೋಟಿಯ ಪೂರಕ ಒಪ್ಪಂದಕ್ಕೆ ಸಹಿ ಮಾಡಲಾಯಿತು. ಗುತ್ತಿಗೆದಾರನಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ರೂ.11.84 ಕೋಟಿಗಳನ್ನು ಪಾವತಿಸಲಾಯಿತು (ಅಕ್ಟೋಬರ್ 2007).

ಪೂರಕ ಒಪ್ಪಂದದಲ್ಲಿ ನಿರ್ಜಲೀಕರಣಕ್ಕಾಗಿ ರೂ.8.82 ಲಕ್ಷಗಳ ಅವಕಾಶ ಮಾಡಲಾಗಿತ್ತು ಮತ್ತು ಅಕ್ಟೋಬರ್ 2007ರ 17ನೇ ಚಾಲ್ತಿ ಲೆಕ್ಕ ಬಿಲ್ಲಿನ ಪ್ರಕಾರ ಗುತ್ತಿಗೆದಾರನಿಗೆ ರೂ.52.39 ಲಕ್ಷಗಳನ್ನು ಪಾವತಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು (ಏಪ್ರಿಲ್ 2008). ನಿರ್ಜಲೀಕರಣದ ವೆಚ್ಚವು ಉಲ್ಲೇಖಿಸಿದ ದರಗಳಲ್ಲಿ ಸೇರಿಕೊಂಡಿದೆ ಎಂದು ಪರಿಗಣಿಸಬೇಕು ಮತ್ತು ಹೆಚ್ಚುವರಿಯಾಗಿ ನೀಡಬಾರದು ಎಂದು ಮೂಲ ಒಪ್ಪಂದದಲ್ಲಿ ನಿಗದಿಪಡಿಸಲಾಗಿದ್ದರಿಂದ ಪೂರಕ ಒಪ್ಪಂದದಲ್ಲಿ ನಿರ್ಜಲೀಕರಣದ ವೆಚ್ಚವನ್ನು ಸೇರಿಸುವುದು ಅನವಶ್ಯಕವಾಗಿತ್ತು. ಮುಂದುವರೆದು, ಕಾಫರ್ ಡ್ಯಾಮ್/ರಿಂಗ್ ಬಂಡ್ ಬಾಬ್ತುಗಳಿಗೆ ಪ್ರತ್ಯೇಕವಾಗಿ ಪಾವತಿಸಲಾಗುತ್ತಿದ್ದು ನಿರ್ಜಲೀಕರಣದ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂಬ ಆಧಾರದ ಮೇಲೆ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರು ಕೂಡ ನಿರ್ಜಲೀಕರಣದ ವೆಚ್ಚವನ್ನು ಪ್ರತ್ಯೇಕವಾಗಿ ಪಾವತಿಸಬೇಕೆಂಬ ಗುತ್ತಿಗೆದಾರರ ಬೇಡಿಕೆಯನ್ನು ತಳ್ಳಿ ಹಾಕಿದ್ದರು (ಫೆಬ್ರವರಿ 2007). ಸೋರುವಿಕೆ ರೂಪದಲ್ಲಿ ಶೇಖರಿಸಿದಂತಹ ಯಾವುದೇ ನೀರನ್ನು ತೆರವುಗೊಳಿಸುವ ವೆಚ್ಚವನ್ನು ಒಳಗೊಂಡ ಅಗೆತಕ್ಕೆ ಟೆಂಡರ್ ದರದಲ್ಲೇ ನಿರ್ಜಲೀಕರಣವನ್ನು ಮಾಡಿಸಬೇಕಾಗಿತ್ತು. ಅದಲ್ಲದೆ 0.00 ಮೀ.ನಿಂದ 150 ಮೀ.ವರೆಗೆ ನಿರ್ಜಲೀಕರಣಕ್ಕೆ ಯಾವುದೇ ಪಂಪ್‌ಗಳನ್ನು ತೊಡಗಿಸಿರಲಿಲ್ಲ. ಆದುದರಿಂದ ಒಪ್ಪಂದದ ಷರತ್ತುಗಳನ್ನು ಉಪೇಕ್ಷಿಸಿ ಗುತ್ತಿಗೆದಾರನಿಗೆ ನಿರ್ಜಲೀಕರಣಕ್ಕೆ ಮಾಡಿದ ರೂ.52.39 ಲಕ್ಷ ಪಾವತಿಯು ಅನರ್ಹವಾಗಿದ್ದಿತು.

ಟಿಎಸಿಯ ಸಲಹೆಯಂತೆ ನಿರ್ಜಲೀಕರಣದ ವೆಚ್ಚವನ್ನು ಪಾವತಿಸಲಾಯಿತು ಎಂದು ವಿಭಾಗೀಯ ಅಧಿಕಾರಿಗಳು ಉತ್ತರಿಸಿದರು. ಆದರೆ, ಹೆಚ್ಚುವರಿ ಬಾಬ್ತುಗಳನ್ನು ನಿರ್ವಹಿಸುವಾಗ ಒಪ್ಪಂದದಲ್ಲಿ ನಿಗದಿಪಡಿಸಿರುವಂತೆ ಮಾತ್ರ ಕ್ರಮ ತೆಗೆದುಕೊಳ್ಳಬೇಕೆಂದು ಟಿಎಸಿ ಸ್ಪಷ್ಟವಾಗಿ ತಿಳಿಸಿ ಸಲಹೆ ನೀಡಿದ್ದರಿಂದ ಉತ್ತರವು ಸಮರ್ಥನೀಯವಾಗಿರಲಿಲ್ಲ. ಕಾರ್ಯನಿರ್ವಾಹಕ ಇಂಜಿನಿಯರ್‌ರವರು ನೀರಿನ ಶೇಖರಣೆಯ ಕಾರಣಗಳು ಹಾಗೂ ಗುತ್ತಿಗೆದಾರನ ಕರ್ತವ್ಯಲೋಪದ ಬಗ್ಗೆ ಅರಿತಿದ್ದರಾದ್ದರಿಂದ ನಿರ್ಜಲೀಕರಣದ ವೆಚ್ಚವನ್ನು ಪಾವತಿಸಬೇಕಾಗಿರಲಿಲ್ಲ.

ಈ ವಿಷಯವನ್ನು ಜೂನ್ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

### 4.1.3 ಅಧಿಕ ದರದಲ್ಲಿ ಪಾವತಿ

**ಅಗೆದು–ತೆಗೆದ ಸಾಧಾರಣ ಬಂಡೆಯನ್ನು ಗಟ್ಟಿ ಬಂಡೆ ಎಂದು ತಪ್ಪಾಗಿ ವರ್ಗೀಕರಿಸಿದ್ದು ಸೇತುವೆ–ಬಂದಾರವೊಂದರ ನಿರ್ಮಾಣದಲ್ಲಿ ರೂ.89.47 ಲಕ್ಷ ಅಧಿಕ ಪಾವತಿಯಲ್ಲಿ ಪರಿಣಮಿಸಿತು.**

ಪಿಡಬ್ಲ್ಯುಜಿ 65ರ ಖಂಡ 7(ಎ) ಅನ್ವಯ ಗುತ್ತಿಗೆದಾರನಿಗೆ ಸಲ್ಲುವ ಬಟವಾಡೆಯನ್ನು ಟೆಂಡರಿನ ಪರಿಮಾಣದ ಒಪ್ಪಿಕೊಂಡ ದರಕ್ಕೆ ನಿಯಮಿತಗೊಳಿಸಬೇಕು. ಮುಂದುವರೆದು, ಒಪ್ಪಂದದ ಖಂಡ 13(ಸಿ) ಅನ್ವಯ ಮಾರ್ಪಡಿಸಿದ ಬಾಬ್ತುಗಳಿಗೆ ದರವನ್ನು ದರಸೂಚಿಯಂತೆ ನಿಗದಿಪಡಿಸಬೇಕು. ಗುಲ್ಬರ್ಗ ಜಿಲ್ಲೆಯ ಮೀಣ್ಣಾಬಾಳ್ ಗ್ರಾಮದ ಬಳಿ ಕಾಗಿನ ನದಿಯ ಮೇಲೆ ಸೇತುವೆ–ಬಂದಾರದ ನಿರ್ಮಾಣವನ್ನು ಸರ್ಕಾರವು ಅನುಮೋದಿಸಿತು (ಡಿಸೆಂಬರ್ 2003) ಹಾಗೂ ಮುಖ್ಯ ಇಂಜಿನಿಯರ್‌ರವರಿಂದ ರೂ.5.50 ಕೋಟಿಗಳಿಗೆ ತಾಂತ್ರಿಕವಾಗಿ ಮಂಜೂರಾಯಿತು. ಕಾಮಗಾರಿಯನ್ನು ರೂ.6.14 ಕೋಟಿಗಳಿಗೆ (2003–04ರ ದರಪಟ್ಟಿಯ ಮೇಲೆ ಶೇಕಡ 12ರಷ್ಟು ಅಧಿಕಗೊಳಿಸಿ), ಏಪ್ರಿಲ್ 2005ರೊಳಗೆ ಪೂರ್ಣಗೊಳಿಸುವಂತೆ, ಓರ್ವ ಗುತ್ತಿಗೆದಾರನಿಗೆ ವಹಿಸಲಾಯಿತು (ಮಾರ್ಚ್ 2004).

ಬಂಡೆಯ ತಪ್ಪು ವರ್ಗೀಕರಣದಿಂದ ಅಧಿಕ ಪಾವತಿಯಾಗಿರುವುದು ಗುಲ್ಬರ್ಗದ ಸಣ್ಣ ನೀರಾವರಿ ವಿಭಾಗದ ದಾಖಲೆಗಳ ಲೆಕ್ಕಪರಿಶೋಧನೆಯಿಂದ (ಮಾರ್ಚ್ 2008) ತಿಳಿದುಬಂದಿತು. ಬಂಡೆಗಳ ಪದರುಗಳ ಅಗೆತಕ್ಕೆ ಅವುಗಳ ಕಠಿಣತೆಯ ಆಧಾರದ ಮೇಲೆ ಸ್ಫೋಟದ ಅವಶ್ಯಕತೆಯಿರುವ ಗಟ್ಟಿ ಬಂಡೆ, ಮಧ್ಯಮ ಬಂಡೆ, ಸಾಧಾರಣ ಬಂಡೆ ಹಾಗೂ ಅಗೆತದ ಆಳವನ್ನೊಳಗೊಂಡ ಆಧಾರದ ಮೇಲೆ ದರಪಟ್ಟಿಯು ವಿವಿಧ ದರಗಳನ್ನು ಒಳಗೊಂಡಿತ್ತು. ದರಪಟ್ಟಿಯಲ್ಲಿನ ವಿವರಣಾತ್ಮಕ ಟಿಪ್ಪಣಿಯ ಅನ್ವಯ ಸುಣ್ಣದ ಕಲ್ಲನ್ನು ಸಾಧಾರಣ ಬಂಡೆಯೆಂದು ವರ್ಗೀಕರಿಸಲಾಗಿದೆ. ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಗುಲ್ಬರ್ಗ, ಇವರು 36,570 ಘನಮೀಟರ್ ಅಗೆತಕ್ಕಾಗಿ ಸ್ಫೋಟದ ಅವಶ್ಯಕತೆಯಿರುವ ಗಟ್ಟಿ ಬಂಡೆಗೆ ಅನ್ವಯಿಸುವ ದರಪಟ್ಟಿಯ ಅನುಸಾರ ರೂ.1.40 ಕೋಟಿಗಳನ್ನು ಪಾವತಿಸಿದ್ದರು (ಜೂನ್ 2007). ಭೂ ವಿಜ್ಞಾನಿಯ ವರದಿಯಂತೆ (ಮೇ 2004) ಆ ಪ್ರದೇಶವು ಪ್ರಧಾನವಾಗಿ ಸುಣ್ಣದ ಕಲ್ಲಿನಿಂದ ಕೂಡಿರುತ್ತದೆ ಎಂದು ಗಮನಿಸಲಾಯಿತು. ಅಗೆತದ ವಸ್ತು ಸುಣ್ಣದ ಕಲ್ಲೆಂದು ಗುಣಮಟ್ಟ ನಿಯಂತ್ರಣ ಪರೀಕ್ಷೆಯಿಂದ ಕೂಡ ತಿಳಿದುಬಂದಿತು (ಜೂನ್ 2007) ಹಾಗೂ ಗುತ್ತಿಗೆದಾರರು ದಿನಾಂಕ 10 ಜುಲೈ 2007ರ ತಮ್ಮ ಪತ್ರದಲ್ಲಿ ಅಗೆತದ ಬಂಡೆ ಸುಣ್ಣದ ಕಲ್ಲೆಂದು ಒಪ್ಪಿಕೊಂಡಿರುತ್ತಾರೆ. 1.5 ಮೀಟರ್‌ನಿಂದ 3 ಮೀಟರ್‌ಗಳ ಆಳದಲ್ಲಿ ಸುಣ್ಣದ ಕಲ್ಲಿನ (ಸಾಧಾರಣ ಬಂಡೆ) ಅಗೆತಕ್ಕೆ ಅಂಗೀಕೃತವಾದ ದರಗಳು ಪ್ರತಿ ಘನ ಮೀಟರ್‌ಗೆ ರೂ.110ರಿಂದ ರೂ.160ರ ವ್ಯಾಪ್ತಿಯಲ್ಲಿದ್ದವು; ಅದಕ್ಕೆ ಪ್ರತಿಯಾಗಿ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಪ್ರತಿ ಘನಮೀಟರ್‌ಗೆ ರೂ.381ರ ದರದಲ್ಲಿ ಗುತ್ತಿಗೆದಾರರಿಗೆ ಪಾವತಿ ಮಾಡಿದ್ದರು. 36,570 ಘನ ಮೀಟರ್ ಸುಣ್ಣದ ಕಲ್ಲಿನ ಅಗೆತಕ್ಕೆ ಮಾಡಿದ ಅಧಿಕ ಪಾವತಿ ರೂ.89.47 ಲಕ್ಷದಷ್ಟಾಗಿತ್ತು. ಹೀಗೆ ಸುಣ್ಣದ ಕಲ್ಲನ್ನು ಗಟ್ಟಿ ಬಂಡೆ ಎಂದು ತಪ್ಪಾಗಿ ವರ್ಗೀಕರಿಸಿದ್ದು ಮತ್ತು ಹೆಚ್ಚಿನ ದರದಲ್ಲಿ ಪಾವತಿ ಮಾಡಿದ್ದು ಗುತ್ತಿಗೆದಾರನಿಗೆ ಅಧಿಕ ಪಾವತಿಯಾಗುವಲ್ಲಿ ಪರಿಣಮಿಸಿತು.

ಈ ವಿಷಯವನ್ನು ಜೂನ್ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

**ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ – ಸಂಪರ್ಕ ಮತ್ತು ಕಟ್ಟಡಗಳು**

### 4.1.4 ನಿಷ್ಫಲ ವೆಚ್ಚ

**ಕಾಮಗಾರಿಯನ್ನು ಗುತ್ತಿಗೆದಾರನಿಗೆ ವಹಿಸಿ 16 ವರ್ಷಗಳು ಕಳೆದರೂ ಸಹ ಬೀದರ್ ಜಿಲ್ಲೆಯ ಎರಡು ಗ್ರಾಮಗಳಿಗೆ ಸಂಪರ್ಕ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಸಾಧಿಸಲಾಗಲಿಲ್ಲ.**

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ 209ರ ಅನ್ವಯ ಕಾಮಗಾರಿಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೇ ಹಾಗೂ ಹಣದ ವ್ಯವಸ್ಥೆಯ ಸಕಾರಣ ಪ್ರತೀಕ್ಷೆ ಇದೆ ಎಂದು ಖಚಿತಪಡಿಸಿಕೊಳ್ಳದೇ ಯಾವುದೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತಿಲ್ಲ. ಕಾಮಗಾರಿಗಳನ್ನು

ಕಾರ್ಯಗತಗೊಳಿಸವ ಏಜೆನ್ಸಿಗಳಿಗೆ ವಹಿಸುವ ಮುನ್ನ ರೂಪುರೇಷೆ ಮತ್ತು ನಕ್ಷೆಗಳು ಅನುಮೋದಿತವಾಗಿರಬೇಕು. ಗುತ್ತಿಗೆ ಒಪ್ಪಂದಗಳ ಷರತ್ತುಗಳ ಪ್ರಕಾರ ಗುತ್ತಿಗೆದಾರನು ಅನುಸೂಚಿಯ ಅನ್ವಯ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾರ್ಯಸೂಚಿಯೊಂದನ್ನು ಒದಗಿಸಬೇಕು. ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಅಧೀಕ್ಷಕ ಇಂಜಿನಿಯರ್‌ರವರು ಕಾಮಗಾರಿಯ ಪ್ರಗತಿಯನ್ನು ನಿಯತಕಾಲಿಕವಾಗಿ ತಪಾಸಣೆ ಹಾಗೂ ಮೇಲ್ವಿಚಾರಣೆ ನಡೆಸಬೇಕಿತ್ತು.

ಡಿಸೆಂಬರ್ 2007ರಲ್ಲಿ ಬೀದರ್ ಲೋಕೋಪಯೋಗಿ ವಿಭಾಗದ ದಾಖಲೆಗಳ ಪರಿಶೀಲನೆಯಲ್ಲಿ ಸಂಪರ್ಕ ರಸ್ತೆಗಳೂ ಸೇರಿದಂತೆ ಸೇತುವೆಗಳ ನಿರ್ಮಾಣದಲ್ಲಿ ಈ ಕೆಳಗೆ ಚರ್ಚಿಸಿದಂತೆ ವಿಳಂಬಗಳು ಕಂಡುಬಂದವು:

ಕರ್ನಾಟಕ ಹಾಗೂ ಆಂಧ್ರಪ್ರದೇಶ ಗಡಿಯಲ್ಲಿ ಎರಡು ಗ್ರಾಮಗಳ (ಚಿಲ್ಲರ್ಗಿ ಮತ್ತು ಕುಂದಗೋಳ್) ರಸ್ತೆ ಸಂಪರ್ಕವು ಆಂಧ್ರಪ್ರದೇಶದ ಸಿಂಗೂರ್ ಯೋಜನೆಯ ಪ್ರವಾಹದಿಂದ ಕಡಿದುಹೋಯಿತು (1978). ರಸ್ತೆ ಸಂಪರ್ಕವನ್ನು ಪೂರ್ವ ಸ್ಥಿತಿಗೆ ತರುವುದಕ್ಕಾಗಿ ಆಂಧ್ರಪ್ರದೇಶ ಸರ್ಕಾರವು ಎರಡು ಸೇತುವೆಗಳ ನಿರ್ಮಾಣದ ವೆಚ್ಚವನ್ನು ಭರಿಸಲು ಒಪ್ಪಿತು. ಮೇಲಿನ ಎರಡು ಹಳ್ಳಿಗಳಿಗೆ ಸಂಪರ್ಕ ಒದಗಿಸಲು ಕರ್ನಾಟಕದಲ್ಲಿ ಎರಡು ಸೇತುವೆಗಳ ನಿರ್ಮಾಣಕ್ಕಾಗಿ ಆಂಧ್ರಪ್ರದೇಶ ಸರ್ಕಾರವು 1988 ಹಾಗೂ 2008ರ ನಡುವೆ ರೂ.19.50 ಕೋಟಿಗಳ ಠೇವಣಿ ಇಟ್ಟಿತು. ರೂ.5.30 ಕೋಟಿಗಳಿಗೆ ಅಂದಾಜನ್ನು ಸಿದ್ಧಪಡಿಸಲಾಯಿತು. ಗುತ್ತಿಗೆ ನೀಡಲು ಇಲಾಖೆಯು ಮೂರು ವರ್ಷಗಳಿಗೂ ಹೆಚ್ಚು ಸಮಯ ತೆಗೆದುಕೊಂಡಿತು. ಅಂತಿಮವಾಗಿ ರೂ.7.64 ಕೋಟಿಗೆ ಕಾಮಗಾರಿಯನ್ನು ಗುತ್ತಿಗೆದಾರನಿಗೆ ವಹಿಸಲಾಯಿತು (ಜನವರಿ 1992). ಎರಕ ಹುಯ್ಯುವ ಪ್ರಾಂಗಣಕ್ಕಾಗಿ ಭೂಮಿಯನ್ನು ಹಸ್ತಾಂತರಿಸುವಲ್ಲಿ, ರೂಪುರೇಷೆ ಹಾಗೂ ನಕ್ಷೆಗಳ ಪೂರೈಕೆಯಲ್ಲಿ, ಸಿದ್ಧತಾ ಮುಂಗಡದ ಪಾವತಿಯಲ್ಲಿ, ಸಿಮೆಂಟ್ ಹಾಗೂ ಉಕ್ಕಿನ ಪೂರೈಕೆಯಲ್ಲಿ, ಬಿಲ್ಲುಗಳ ಪಾವತಿಯಲ್ಲಿ, ಇತ್ಯಾದಿಗಳಲ್ಲಿ ಆದ ವಿಳಂಬದಿಂದ ಕಾಮಗಾರಿಯ ಪ್ರಗತಿಯಲ್ಲಿ ವಿಳಂಬವಿದ್ದಿತು. ಇಲಾಖೆಯಿಂದ ಉಂಟಾದ ವಿಳಂಬದಿಂದಾಗಿ ಪರಿಷ್ಕೃತ ದರಗಳನ್ನು ಒತ್ತಾಯಿಸಿ ಗುತ್ತಿಗೆದಾರನು ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದರಿಂದ ಕಾಮಗಾರಿಯ ಪ್ರಗತಿ ಕುಂಠಿತಗೊಂಡಿತು. ಕುಂದಗೋಳ್ ಸೇತುವೆಯ ನಿರ್ವಹಣೆಯ ಸಮಯದಲ್ಲಿ ಆರು ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಗರ್ಡರ್‌ಗಳು ಗುತ್ತಿಗೆದಾರನು ಡಯಾಫ್ರಮ್ ಬೀಮ್‌ಗಳಿಂದ ಅವುಗಳನ್ನು ಭದ್ರಪಡಿಸದ ಕಾರಣ ಅವುಗಳು ತಮ್ಮ ಸ್ಥಾನದಿಂದ ಜಾರಿ (ಮೇ 2006) ನದಿಯಲ್ಲಿ ಬಿದ್ದವು. ಹೊಸ ಗರ್ಡರ್‌ಗಳನ್ನು ನಿರ್ಮಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರಕ್ಕೆ ರೂ.31 ಲಕ್ಷದ ಒಂದು ಪ್ರಸ್ತಾವವನ್ನು ಸಲ್ಲಿಸಿದ್ದು (ನವೆಂಬರ್ 2006) ವಿಷಯವು ತನಿಖೆಯಲ್ಲಿದೆ.

ಕಾಮಗಾರಿಗಾಗಿ ರೂ.17.10 ಕೋಟಿಗಳ ವೆಚ್ಚವಾದಾಗ್ಯೂ ಸೇತುವೆಗಳನ್ನು ಉಪಯೋಗಿಸಲು ಸಾಧ್ಯವಿರಲಿಲ್ಲ. ಬಿದ್ದಂತಹ ಗರ್ಡರ್‌ಗಳು ಹಾಗೂ ಸಂಪರ್ಕಿಸಬಹುದಾದ ರಸ್ತೆಗಳ ಕಾಮಗಾರಿ ಇನ್ನೂ ಪೂರ್ಣಗೊಳ್ಳಬೇಕಿತ್ತು (ಅಕ್ಟೋಬರ್ 2008). ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಆದ ವಿಳಂಬದ ಪರಿಣಾಮವಾಗಿ ರೂ.14.20 ಕೋಟಿ ಅಧಿಕ ವೆಚ್ಚ ಹಾಗೂ 13 ವರ್ಷಗಳ ಅಧಿಕ ಸಮಯ ವ್ಯಯವಾಯಿತು (ಅಕ್ಟೋಬರ್ 2008). ಇಲಾಖೆಯ ವಿವಿಧ ಮಟ್ಟದಲ್ಲಿ ಆಗಬೇಕಿದ್ದ ಕಾಮಗಾರಿಯ ಪ್ರಗತಿಯ ಪರಿಶೀಲನೆಯಲ್ಲಿನ ನ್ಯೂನತೆಗಳು ಹಾಗೂ ತನ್ನ ಕಾಮಗಾರಿಯನ್ನು ಜಾರಿಗೊಳಿಸಲು ಬದ್ಧವಾಗಿರದ ಗುತ್ತಿಗೆದಾರನ ವಿಫಲತೆಯ ಪರಿಣಾಮವಾಗಿ ಎರಡು ಹಳ್ಳಿಗಳಿಗೆ ಪುನ: ಸಂಪರ್ಕ ತರುವ ಉದ್ದೇಶವು ಕಾಮಗಾರಿಯ ಆರಂಭದಿಂದ ರೂ.17.10 ಕೋಟಿ ವೆಚ್ಚ ಮಾಡಿ 16 ವರ್ಷಗಳಾದರೂ ಸಹ ಸಾಧಿಸಲಾಗಲಿಲ್ಲ.

ಈ ವಿಷಯವನ್ನು ಜುಲೈ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

## 4.2 ಗುತ್ತಿಗೆ ಒಪ್ಪಂದಗಳ ಉಲ್ಲಂಘನೆ, ಗುತ್ತಿಗೆದಾರರಿಗೆ ಅನುಚಿತ ಒಲವು ಮತ್ತು ತಪ್ಪಿಸಬಹುದಾಗಿದ್ದ ವೆಚ್ಚ

**ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ – ಸಂಪರ್ಕ ಮತ್ತು ಕಟ್ಟಡಗಳು**

### 4.2.1 ಗುತ್ತಿಗೆದಾರನಿಗೆ ಅಧಿಕ ಪಾವತಿ

**ಟೆಂಡರ್ ಒಪ್ಪಂದದ ಉಪಬಂಧಗಳ ಅನುಸಾರ ಕಾಮಗಾರಿಯ ಹೆಚ್ಚಿನ ಪರಿಮಾಣಗಳಿಗೆ ಪಾವತಿ ಮಾಡುವಲ್ಲಿನ ಇಲಾಖೆಯ ವಿಫಲತೆಯು ರೂ.23 ಲಕ್ಷ ತಪ್ಪಿಸಬಹುದಿದ್ದ ಅಧಿಕ ಪಾವತಿಯಲ್ಲಿ ಪರಿಣಮಿಸಿತು.**

ಸರ್ಕಾರವು ಬೆಂಗಳೂರು ಜಿಲ್ಲೆಯ ಅತ್ತಿಬೆಲೆಯಲ್ಲಿ ವಾಹನಗಳ ಚಲನೆಗಾಗಿ ಬೇಕಾದ ಗಡುಸಾದ ಕಲ್ಲು ಹಾಸಿಗೆಯ ನಿರ್ಮಾಣ ಒಳಗೊಂಡಂತೆ ಆಧುನಿಕ ಸಮಗ್ರ ಗಣಕೀಕೃತ ಚೆಕ್‌ಪೋಸ್ಟ್‌ನ ನಿರ್ಮಾಣವನ್ನು ರೂ.31.95 ಕೋಟಿ ಅಂದಾಜು ವೆಚ್ಚದಲ್ಲಿ ಅನುಮೋದಿಸಿತು (ಮೇ 2003). ಕಾಮಗಾರಿಯನ್ನು ಟೆಂಡರು ಆಧಾರದ ಮೇಲೆ 2003–04ನೇ ಅನುಸೂಚಿ ದರಕ್ಕಿಂತ ಶೇಕಡ 14.5 ಅಧಿಕವಾಗಿ ರೂ.37.32 ಕೋಟಿಗೆ ಒಂದು ಸಂಸ್ಥೆಗೆ ಗುತ್ತಿಗೆ ನೀಡಲಾಯಿತು (ಆಗಸ್ಟ್ 2005). ಗುತ್ತಿಗೆದಾರನೊಂದಿಗಿನ ಒಪ್ಪಂದದ ಖಂಡ 13ರ ಅನ್ವಯ ಟೆಂಡರ್ ಪರಿಮಾಣದ ಶೇಕಡ 125ಕ್ಕಿಂತ ಅಧಿಕವಾಗಿ ನಿರ್ವಹಿಸಿದ ಕಾಮಗಾರಿಯ ಬಾಬ್ತಿನ ದರ ಅಧಿಕವಾಗಿ ನಿರ್ವಹಿಸಿದ ವರ್ಷದಲ್ಲಿ ಚಾಲ್ತಿಯಲ್ಲಿದ್ದ ಅನುಸೂಚಿ ದರ ಹಾಗೂ ಟೆಂಡರ್ ಪ್ರತಿಶತದ ಸಂಕಲನ ಅಥವಾ ವ್ಯವಕಲನದ ಅನುಸಾರ ಇರಬೇಕೆಂದು ನಿಗದಿಪಡಿಸಿತ್ತು. ಕಾಮಗಾರಿ ಪೂರ್ಣಗೊಳ್ಳಲು ನಿಗದಿಪಡಿಸಿದ ಅವಧಿ 13 ತಿಂಗಳುಗಳಾಗಿತ್ತು (ಸೆಪ್ಟಂಬರ್ 2006). ಡಿಸೆಂಬರ್ 2005ರಲ್ಲಿ ಕಾಮಗಾರಿಯನ್ನು ಆರಂಭಿಸಲಾಗಿ ಇನ್ನೂ ಪ್ರಗತಿಯಲ್ಲಿತ್ತು (ಮಾರ್ಚ್ 2008) ಹಾಗೂ ಡಿಸೆಂಬರ್ 2007ರ ಅಂತ್ಯಕ್ಕೆ ಸಂಸ್ಥೆಗೆ ರೂ.26.15 ಕೋಟಿ ಪಾವತಿ ಮಾಡಲಾಗಿತ್ತು.

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು, ಇವರಿಂದ ಅಂದಾಜುಗಳನ್ನು ತಯಾರಿಸುವ ಸಮಯದಲ್ಲಿ ಒಡ್ಡು ರಚನೆಗಾಗಿ ಕಾಮಗಾರಿಯ ಪ್ರಮಾಣದ ತಪ್ಪು ನಿರ್ಧಾರಣೆಯ ಕಾರಣದಿಂದ ಕಾಮಗಾರಿಯ ಪರಿಮಾಣ 30,500 ಘನಮೀಟರ್‌ನಿಂದ 1,90,433 ಘನ ಮೀಟರ್‌ನಷ್ಟು ಹೆಚ್ಚಾಯಿತು. ಟೆಂಡರು ಪರಿಮಾಣದ 125 ಪ್ರತಿಶತ ಅಧಿಕ ನಿರ್ವಹಣೆಗಾಗಿ (1,52,308 ಘನ ಮೀಟರ್–ಜನವರಿ 2006) ಸಂಸ್ಥೆಗೆ ಪ್ರತಿ ಘನಮೀಟರ್‌ಗೆ ಸ್ವೀಕಾರಾರ್ಹ ದರ ರೂ.132.25ರ ಬದಲು ರೂ.147.35ರಂತೆ ಪಾವತಿಸಲಾಯಿತು. ಇದರ ಪರಿಣಾಮವಾಗಿ ರೂ.23 ಲಕ್ಷ ಅಧಿಕ ಪಾವತಿಯಾದಂತಾಯಿತು.

ಈ ವಿಷಯವನ್ನು ಏಪ್ರಿಲ್ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

### 4.2.2 ತಪ್ಪಿಸಬಹುದಾಗಿದ್ದ ಅಧಿಕ ವೆಚ್ಚ

**ಮಾನದಂಡಗಳ ಸಂಚಿತ ಸಂಚಾರಗಳಿಗಾಗಿ ಅಂಗೀಕರಿಸಿದ ಮಾನದಂಡಗಳ ತಪ್ಪಾದ ಮೌಲ್ಯಗಳಿಂದಾಗಿ ಡಾಂಬರೀಕೃತ ಜಲ್ಲಿಕಲ್ಲು ಒದಗಿಸುವಲ್ಲಿ ರೂ.28.93 ಲಕ್ಷ ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು.**

ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ವಿಶಿಷ್ಟತೆ 37ರ ಅನ್ವಯ ರಸ್ತೆಯ ವಿವಿಧ ಪದರುಗಳ ಮೇಲ್ಭಾಗದ ದಪ್ಪ ಹಾಗೂ ರಚನೆ ಎರಡು ಮಾನದಂಡಗಳಾದ ಸಬ್‌ಗ್ರೇಡ್‌ನ ಶಕ್ತಿ[1] (ಸಿಬಿಆರ್) ಹಾಗೂ ಮಿಲಿಯನ್ ಸ್ಟಾಂಡರ್ಡ್ ಆಕ್ಸೆಲ್ಸ್ (ಎಮ್‌ಎಸ್‌ಎ)ನಲ್ಲಿ ವ್ಯಕ್ತಪಡಿಸಿದ ವಾಣಿಜ್ಯ ವಾಹನಗಳ ಸಂಚಿತ ಸಂಚಾರದ ಮೇಲೆ ಪ್ರಧಾನವಾಗಿ ಆಧರಿಸಿವೆ. ಸಂಚಿತ ಸಂಚಾರವನ್ನು ಲೆಕ್ಕ ಮಾಡಲು ಹಿಂದಿನ ಗಣತಿಯ ಅನುಸಾರ ಪ್ರತಿದಿನಕ್ಕೆ ಮೂರು ಟನ್ ಅಥವಾ ಅಧಿಕವಾದ ವಾಣಿಜ್ಯ ವಾಹನಗಳು

[1] ಕ್ಯಾಲಿಫೋರ್ನಿಯಾ ಬೇರಿಂಗ್ ಅನುಪಾತ

(ಸಿವಿಪಿಡಿ), ವರ್ಷಗಳಲ್ಲಿ ಜೀವ ವಿನ್ಯಸಿತ ಸಂಚಾರ ಬೆಳವಣಿಗೆಯ ಪ್ರಮಾಣ ಹಾಗೂ ಐಆರ್‌ಸಿ 37ರ ವಿಶಿಷ್ಟತೆಯ ಅನುಸಾರ ವಾಹನದ ಹಾನಿ ಅಂಶಗಳು ಮಾನದಂಡಗಳಾಗಿದ್ದವು.

ಮಸ್ಕಿ–ಮುದಗಲ್ ರಸ್ತೆಯ 165 ಹಾಗೂ 169.50 ಕಿ.ಮೀ.ನಡುವೆ ಸುಧಾರಣೆ ಹಾಗೂ 171 ಹಾಗೂ 173 ಕಿ.ಮೀ.ನಡುವೆ ಅಗಲೀಕರಣ ಕಾಮಗಾರಿಗಳನ್ನು ಮುಖ್ಯ ಇಂಜಿನಿಯರ್ ರೂ.60 ಲಕ್ಷಕ್ಕೆ ಮಂಜೂರು ಮಾಡಿದರು (ಜೂನ್ 2005). ಮಂಜೂರಾದ ಅಂದಾಜಿನ ಅನುಸಾರ, ಸಂಚಿತ ಸಂಚಾರಕ್ಕೆ ಅಂಗೀಕರಿಸಿದ ಮೌಲ್ಯಗಳು 1.89 ಎಮ್‌ಎಸ್‌ಎ (ಪೂರ್ಣಾಂಕ ಎರಡು ಎಮ್‌ಎಸ್‌ಎಗಳಿಗೆ) ಹಾಗೂ ಸಬ್‌ಗ್ರೇಡ್ ಶಕ್ತಿ ನಾಲ್ಕು ಹಾಗೂ ಏಳು ಡಾಂಬರೀಕೃತ ಜಲ್ಲಿಕಲ್ಲುಗಳು ಕಾಮಗಾರಿಯ ವ್ಯಾಪ್ತಿ ಶೋಲ್ಡರ್‌ಗಳ ರಚನೆ, ಡಾಂಬರೀಕೃತ ಜಲ್ಲಿಕಲ್ಲುಗಳು ಹಾಗೂ ಸವೆತದ ಮಾರ್ಗದಂತೆ ಮಿಶ್ರಿತ ಸೀಲ್ ಸೇವೆಗಳನ್ನು ಒಳಗೊಂಡಿತ್ತು. ಕಾಮಗಾರಿಯನ್ನು ಒಬ್ಬ ಗುತ್ತಿಗೆದಾರನಿಗೆ ರೂ.51.19 ಲಕ್ಷಗಳಿಗೆ ವಹಿಸಲಾಯಿತು (ನವೆಂಬರ್ 2005). ಕಾಮಗಾರಿಯು ಪೂರ್ಣಗೊಂಡಿತು (ಮಾರ್ಚ್ 2006) ಹಾಗೂ ಗುತ್ತಿಗೆದಾರನಿಗೆ ರೂ.54.72 ಲಕ್ಷ ಪಾವತಿಸಲಾಯಿತು.

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ವಿಭಾಗ ಬೀದರ್ ಇವರ ಲೆಕ್ಕಪರಿಶೋಧನೆಯಲ್ಲಿ (ಜನವರಿ 2008) ತಿಳಿದುಬಂದಿದ್ದೇನೆಂದರೆ ತಪ್ಪಾದ ಮೌಲ್ಯಗಳನ್ನು ಮಾನದಂಡ ಅಂಗೀಕರಿಸಿದ ಕಾರಣ ಸುಧಾರಣಾ ಕಾಮಗಾರಿಗೆ ಲೆಕ್ಕಮಾಡಿ 1.89 ಎಮ್‌ಎಸ್‌ಎ (ಪೂರ್ಣಾಂಕ ಎರಡು ಎಮ್‌ಎಸ್‌ಎಗಳಿಗೆ) ತಪ್ಪಾಗಿತ್ತು. ಮಾನದಂಡಗಳಾದ 191 ಸಿವಿಪಿಡಿ, ಶೇಕಡ 3.5 ವಾಹನ ಹಾನಿ ಅಂಶಗಳು (ವಿಡಿಎಫ್) ಹಾಗೂ ಐದು ವರ್ಷಗಳ ಜೀವ ವಿನ್ಯಾಸಿತಗಳಿಗೆ ಪ್ರತಿಯಾಗಿ ವಾಸ್ತವ ಮೌಲ್ಯಗಳಾದ 63 ಸಿವಿಪಿಡಿ, ಶೇಕಡ 1.5 ವಿಡಿಎಫ್ ಹಾಗೂ 10 ವರ್ಷಗಳ ಜೀವ ವಿನ್ಯಸಿತಗಳಿಗೆ ಅಂದರೆ ಒಂದು ಎಮ್‌ಎಸ್‌ಎಗೂ ಕೆಳಗೆ 0.56 ಎಮ್‌ಎಸ್‌ಎ ಆಗುತ್ತದೆ. ಇಂಡಿಯನ್ ರೋಡ್ ಕಾಂಗ್ರೆಸ್‌ನ 37ರ ಅನ್ವಯ ಒಂದು ಅಥವಾ ಒಂದಕ್ಕಿಂತ ಕಡಿಮೆ ಎಮ್‌ಎಸ್‌ಎಗೆ ಡಾಂಬರೀಕೃತ ಜಲ್ಲಿಕಲ್ಲನ್ನು ಒದಗಿಸಲು ತಿಳಿಸುವುದಿಲ್ಲ. ಹೀಗೆ ಸಂಚಿತ ಸಂಚಾರ ಲೆಕ್ಕ ಮಾಡಲು ಅಂಗೀಕರಿಸಿದ ಮಾನದಂಡಗಳ ತಪ್ಪಾದ ಮೌಲ್ಯಗಳ ಪರಿಣಾಮವಾಗಿ ಡಾಂಬರೀಕೃತ ಜಲ್ಲಿಕಲ್ಲುಗಳನ್ನು ಒದಗಿಸುವಲ್ಲಿ ತಪ್ಪಿಸಬಹುದಾದ ರೂ.28.93 ಲಕ್ಷ ವೆಚ್ಚವಾಯಿತು.

ಸಂಚಾರ ಎಣಿಕೆಯ ಅನುಸಾರ ದಾಖಲಿಸಿದ 63 ಸಿವಿಪಿಡಿಯನ್ನು ಸರಿಸಮನಾದ ಅಂಶಗಳನ್ನು ಉಪಯೋಗಿಸಿ ಪ್ರಯಾಣಿಕ ಕಾರು ಘಟಕಗಳಾಗಿ ಪರಿವರ್ತಿಸಲಾಯಿತು. 189 ಪ್ರಯಾಣಿಕ ಕಾರು ಘಟಕವಾಯಿತು ಹಾಗು ತದನುಸಾರವಾಗಿ 3.5 ವಿಡಿಎಫ್‌ಅನ್ನು ಅಂಗೀಕರಿಸಲಾಯಿತು ಎಂದು ಕಾರ್ಯ ನಿರ್ವಾಹಕ ಇಂಜಿನಿಯರ್‌ರವರು ಉತ್ತರಿಸಿದರು (ಜೂನ್ 2008). ಐಆರ್‌ಸಿ 37ರ ಖಂಡ 3.3.6.1ರ ಅನುಸಾರ ಅಂತಿಮ ಎಣಿಕೆಯಂತೆ ಕೇವಲ ವಾಣಿಜ್ಯ ವಾಹನಗಳ ಸಂಖ್ಯೆಗಳನ್ನಷ್ಟೇ ಪರಿಗಣಿಸಬೇಕಾಗಿರುವುದರಿಂದ ಉತ್ತರವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ಈ ವಿಷಯವನ್ನು ಏಪ್ರಿಲ್ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

## ನಗರಾಭಿವೃದ್ಧಿ ಇಲಾಖೆ

### 4.2.3 ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿ

**ಸಾರ್ವಜನಿಕ ಹರಾಜಿಗೆ ಮೊದಲು, ನಿವೇಶನಗಳ ಹಕ್ಕುಪತ್ರಗಳ ಪರಿಶೀಲನೆ ಮಾಡುವಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಫಲತೆಯು ತಪ್ಪಿಸಬಹುದಾಗಿದ್ದ ದಾವೆ ಹಾಗೂ ರೂ.77.09 ಲಕ್ಷ ಬಡ್ಡಿ ಸಹಿತ ಠೇವಣಿ ಮರುಪಾವತಿಯಲ್ಲಿ ಪರಿಣಮಿಸಿತು.**

ಬೆಂಗಳೂರಿನ ಕೋರಮಂಗಲ ಬಡಾವಣೆಯ ಶಿವಾಗಿಲು ಕೆರೆ ಅಂಗಳದ ಬಡಾವಣೆಯಲ್ಲಿ ಆಗಸ್ಟ್ 2003 ಮತ್ತು ಫೆಬ್ರವರಿ 2004ರಲ್ಲಿ ನಡೆದ ಎರಡು ಪ್ರತ್ಯೇಕ ಸಾರ್ವಜನಿಕ ಹರಾಜಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಪ್ರಾಧಿಕಾರ) ಐದು ನಡುವಿನ ನಿವಾಸಿ ನಿವೇಶನಗಳನ್ನು ವಿಲೇವಾರಿ ಮಾಡಿತು ಹಾಗೂ ರೂ.1.16 ಕೋಟಿ ಠೇವಣಿಯನ್ನು ಸಂಗ್ರಹಿಸಿತು. ಪ್ರಾಧಿಕಾರದ ವಿರುದ್ಧ ಮೂಲ ಭೂ ಮಾಲೀಕರಿಂದ ಸಿಟಿ ಸಿವಿಲ್ ಕೋರ್ಟ್, ಬೆಂಗಳೂರಿನಲ್ಲಿ ಸಲ್ಲಿಸಿದ್ದ ದಾವೆ ಇತ್ಯರ್ಥವಾಗದೇ ಉಳಿದ ಕಾರಣ ಈ ನಿವೇಶನಗಳನ್ನು ನಿವೇಶನದಾರರು ಸ್ವಾಧೀನಕ್ಕೆ ಪಡೆದುಕೊಳ್ಳಲಾಗಲಿಲ್ಲ. ಪ್ರಾಧಿಕಾರ

ವ್ಯಾಜ್ಯಗಳ ಇತ್ಯರ್ಥ ಮಾಡಲು ವಿಫಲವಾದ್ದರಿಂದ ಈ ನಿವೇಶನದಾರರು ನಿವೇಶನಗಳ ಸ್ವಾಧೀನ ಪಡೆಯಲು ಉಚ್ಚ ನ್ಯಾಯಾಲಯವನ್ನು ಮೊರೆ ಹೊಕ್ಕರು (2005). ಉಚ್ಚ ನ್ಯಾಯಾಲಯವು ಪ್ರಾಧಿಕಾರ ಅಕ್ರಮವಾಗಿ ನಿವೇಶನಗಳ ಹರಾಜು ಮಾಡಿದ್ದರಿಂದ ಬಡ್ಡಿ ಸಹಿತ ಠೇವಣಿ, ಮುದ್ರಾಂಕ ಶುಲ್ಕಗಳು ಹಾಗೂ ನೋಂದಣಿ ವೆಚ್ಚಗಳನ್ನು ಮರುಪಾವತಿಸುವಂತೆ ಪ್ರಾಧಿಕಾರಕ್ಕೆ ನಿರ್ದೇಶಿಸುತ್ತಾ ಪ್ರಕರಣವನ್ನು ಇತ್ಯರ್ಥ ಮಾಡಿತು (ಆಗಸ್ಟ್ 2007). ಉಚ್ಚ ನ್ಯಾಯಾಲಯದ ತೀರ್ಮಾನದ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸದೇ ಇರುವಂತೆ ತೀರ್ಮಾನವನ್ನು ತೆಗೆದುಕೊಂಡ ನಂತರ ಪ್ರಾಧಿಕಾರ ಅದನ್ನು ರೂ.77.09 ಲಕ್ಷ ಬಡ್ಡಿ ಸಹಿತ (ಆಗಸ್ಟ್ 2003ರಿಂದ ಅಕ್ಟೋಬರ್ 2007) ಮರುಪಾವತಿಸಿತು (ಸೆಪ್ಟಂಬರ್–ಅಕ್ಟೋಬರ್ 2007).

ಪ್ರಾಧಿಕಾರವು ಈ ನಿವೇಶನಗಳು ಶಿವಾಗಿಲು ಕೆರೆ ಅಂಗಳದ ಬಡಾವಣೆಯ ಸರ್ವೆ ನಂಬರ್ 13ರ ಅಡಿ ಬರುತ್ತವೆಂಬ ತನ್ನ ಇಂಜಿನಿಯರಿಂಗ್ ವಿಭಾಗದಿಂದ ಬಂದ ತಪ್ಪು ವರದಿಯ ಆಧಾರದ ಮೇಲೆ ಅವುಗಳನ್ನು ಹರಾಜು ಮಾಡಿತ್ತು ಎಂದು ಲೆಕ್ಕಪರಿಶೋಧನಾ ಪರಿಶೀಲನೆಯಲ್ಲಿ (ಡಿಸೆಂಬರ್ 2007) ತಿಳಿದುಬಂದಿತು. ಪ್ರಾಧಿಕಾರವು ನಡೆಸಿದ ನಂತರದ ಸರ್ವೆಯಲ್ಲಿ (ಜುಲೈ 2004) ಹರಾಜು ಮಾಡಿದ ನಿವೇಶನಗಳು ಈಜಿಪುರ ಬಡಾವಣೆಯ ಸರ್ವೆ ನಂಬರ್ 19ರ ಅಡಿ ಬರುತ್ತಿದ್ದು ಪ್ರಾಧಿಕಾರದ ಬಳಿ ಈ ಭೂಮಿಯ ಹಕ್ಕು ಪತ್ರಗಳು ಇರಲಿಲ್ಲವೆಂಬುದನ್ನು ಗಮನಿಸಲಾಯಿತು.

ಪ್ರಾಧಿಕಾರದ ಸದಸ್ಯರು ವ್ಯಾಜ್ಯದ ಇತ್ಯರ್ಥ ಬಾಕಿ ಇರುವಾಗಲೇ ಮರುಪಾವತಿ ಮಾಡುವಂತೆ ಸಲಹೆ ನೀಡಿದಾಗ್ಯೂ (ಡಿಸೆಂಬರ್ 2004) ಸಹ ನಿವೇಶನದಾರರುಗಳಿಗೆ ಠೇವಣಿಯ ಮರುಪಾವತಿಗಾಗಿ ಕ್ರಮ ಕೈಗೊಂಡಿರಲಿಲ್ಲ. ಠೇವಣಿಯನ್ನು 2004ರಲ್ಲಿಯೇ ಮರುಪಾವತಿಸಿದ್ದರೆ ಅದರ ಬಡ್ಡಿಯ ಪಾವತಿಯನ್ನು ತಪ್ಪಿಸಬಹುದಿತ್ತು. ಇಂಜಿನಿಯರಿಂಗ್ ವಿಭಾಗದ ಲೋಪಗಳಿಂದಾಗಿ ಅಕ್ರಮ ಸಾರ್ವಜನಿಕ ಹರಾಜು ಮಾಡಿದ ಬಗ್ಗೆ ತನಿಖೆ ನಡೆಸಲು ಕೈಗೊಂಡ ಕ್ರಮದ ಬಗ್ಗೆ ವಿವರಗಳಿಲ್ಲ.

ಹೀಗೆ ಸಾರ್ವಜನಿಕ ಹರಾಜಿಗೆ ಮೊದಲು ನಿವೇಶನಗಳ ಹಕ್ಕುಪತ್ರಗಳ ಪರಿಶೀಲನೆ ಮಾಡುವಲ್ಲಿನ ಪ್ರಾಧಿಕಾರದ ವಿಫಲತೆಯ ಪರಿಣಾಮವಾಗಿ ತಪ್ಪಿಸಬಹುದಾಗಿದ್ದ ವ್ಯಾಜ್ಯ ಹಾಗೂ ರೂ.77.09 ಲಕ್ಷ ಬಡ್ಡಿಯ ಪಾವತಿಯಲ್ಲಿ ಪರಿಣಮಿಸಿತು.

ಈ ವಿಷಯವನ್ನು ಮಾರ್ಚ್ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

### 4.2.4 ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿ

**ನಗರ ಸ್ಥಳೀಯ ಸಂಸ್ಥೆಗಳ ಮೂಲ ಸೌಲಭ್ಯಗಳ ಸುಧಾರಣೆಗಾಗಿನ ಸಾಲ ಮರುಪಾವತಿಗಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸಕಾಲಕ್ಕೆ ರಾಜ್ಯ ಹಣಕಾಸು ಆಯೋಗದ ಅನುದಾನವನ್ನು ಬಿಡುಗಡೆ ಮಾಡುವಲ್ಲಿನ ಸರ್ಕಾರದ ವಿಫಲತೆಯು ರೂ.9.71 ಕೋಟಿ ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿಯಲ್ಲಿ ಪರಿಣಮಿಸಿತು.**

ನಗರ ಸ್ಥಳೀಯ ಸಂಸ್ಥೆಗಳಡಿ ಬರುವ ಪಟ್ಟಣ/ನಗರಗಳಲ್ಲಿ ಮೂಲ ಸೌಲಭ್ಯಗಳನ್ನು ಸುಧಾರಿಸಲು ರೂ.130 ಕೋಟಿ ವೆಚ್ಚದಲ್ಲಿ "ನಗರ ಸ್ಥಳೀಯ ಸಂಸ್ಥೆಗಳ ಸಮಗ್ರ ಮೂಲ ಸೌಲಭ್ಯಗಳ ಅಭಿವೃದ್ಧಿ" ಯೋಜನೆಯನ್ನು ಸರ್ಕಾರವು ಮಂಜೂರು ಮಾಡಿತು (ಮೇ 2000). ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು (ಮಂಡಳಿ) ಯೋಜನೆಯನ್ನು ಜಾರಿಗೊಳಿಸಲು ನೋಡಲ್ ಏಜೆನ್ಸಿಯಾಗಿತ್ತು ಹಾಗೂ ಸರ್ಕಾರವು ನೀಡಿದ ಖಾತರಿಯ ಮೇಲೆ ವಸತಿ ಮತ್ತು ನಗರಾಭಿವೃದ್ಧಿ ನಿಗಮದಿಂದ (ಹುಡ್ಕೋ) ರೂ.130 ಕೋಟಿ ಸಾಲವನ್ನು ಪಡೆಯಲು ಅಧಿಕಾರ ಪಡೆದಿತ್ತು. ತನ್ನ ಸ್ವಂತ ಸಂಪನ್ಮೂಲಗಳು ಹಾಗೂ ಹಣಕಾಸು ಇಲಾಖೆಯಿಂದ ಮಂಡಳಿಯು ಸ್ವೀಕರಿಸಿದ ನಗರ ಸ್ಥಳೀಯ ಸಂಸ್ಥೆಗಳ ವಂತಿಗೆಗಳಿಂದ ರಾಜ್ಯ ಹಣಕಾಸು ಆಯೋಗ ಕೊಡಮಾಡಿದ ಅನುದಾನದ ಪೈಕಿ ಮಂಡಳಿಯು ಬಡ್ಡಿಯೊಂದಿಗೆ ಸಾಲದ ಮರುಪಾವತಿಯನ್ನು ಖಚಿತ ಪಡಿಸಿಕೊಳ್ಳಬೇಕಿತ್ತು. ಹುಡ್ಕೋದೊಂದಿಗಿನ ಎರಡು ಪ್ರತ್ಯೇಕ ಒಪ್ಪಂದಗಳಡಿ ಮಂಡಳಿಯು ರೂ.100 ಕೋಟಿಯ ಸಾಲವನ್ನು (ಮೇ 2001–ಮಾರ್ಚ್ 2002) ಮತ್ತು ರೂ.25 ಕೋಟಿಯ ಮತ್ತೊಂದು ಸಾಲವನ್ನು (ಡಿಸೆಂಬರ್ 2002) ಸೆಳೆಯಿತು. ಎರಡೂ ಸಾಲಗಳನ್ನು ಕ್ರಮವಾಗಿ ಮಾರ್ಚ್ 2002 ಮತ್ತು ಡಿಸೆಂಬರ್ 2002ರಿಂದ ಪ್ರಾರಂಭಿಸಿ ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಿತ್ತು

ಹಾಗೂ ಅದಕ್ಕೆ ತಪ್ಪಿದಲ್ಲಿ ಅಸಲು ಮತ್ತು ಬಾಕಿ ಬಡ್ಡಿ ಹಣದ ಮೇಲೆ ವಾರ್ಷಿಕ ಶೇಕಡ ಮೂರರಂತೆ ದಂಡಬಡ್ಡಿಯನ್ನು ಪಾವತಿ ಮಾಡಬೇಕಿತ್ತು.

ಹಣಕಾಸು ಇಲಾಖೆಯು ರಾಜ್ಯ ಹಣಕಾಸು ಆಯೋಗದ ಅನುದಾನಗಳನ್ನು ಬಿಡುಗಡೆ ಮಾಡದಿದ್ದುದರಿಂದ ಮಂಡಳಿಯು ಮೊದಲ ನಾಲ್ಕು ಕಂತುಗಳನ್ನು ಪಾವತಿಸಿದ (2002–03) ನಂತರ ಮೊದಲ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವುದನ್ನು ಖಚಿತಪಡಿಸಿಕೊಳ್ಳಲಿಲ್ಲ ಎಂಬುದು ಮಂಡಳಿಯ ದಾಖಲೆಗಳಿಂದ ತಿಳಿದುಬಂದಿತು (ಜೂನ್ 2006). ಮಂಡಳಿಯು ಪದೇ ಪದೇ ಮಾಡಿದ ಮನವಿಗಳಿಗೆ (ಸೆಪ್ಟೆಂಬರ್ 2003ರಿಂದ ಫೆಬ್ರವರಿ 2004) ಸರ್ಕಾರವು ಪ್ರತಿಕ್ರಿಯೆ ತೋರದಿದ್ದರಿಂದ ಡಿಸೆಂಬರ್ 2003ರಲ್ಲಿದ್ದಂತೆ ಸಾಲದ ಬಾಕಿಯು ರೂ.28.37 ಕೋಟಿಗಳಿಗೆ ಸಂಚಯಿತವಾಗಿತ್ತು. ಮಂಡಳಿಯು ಸಾಲದ ಮರುಪಾವತಿಯನ್ನು ಮರುಸೂಚಿತಗೊಳಿಸಲು ಹುಡ್ಕೋವನ್ನು ಕೋರಿತು (ಮಾರ್ಚ್ 2004) ಮತ್ತು ಅದನ್ನು ಕೆಳಗೆ ತಿಳಿಸಿರುವಂತೆ ಮರುಸೂಚಿಸಲಾಯಿತು (ಆಗಸ್ಟ್ 2004):

| ಸಾಲ ಒಪ್ಪಂದ ಸಂಖ್ಯೆ ಮತ್ತು ದಿನಾಂಕ | ಸೆಳೆದ ಸಾಲ (ಕೋಟಿ ರೂಪಾಯಿಗಳಲ್ಲಿ) | ಮೂಲ ಪಾವತಿ ಅನುಸೂಚಿ | | ಪರಿಷ್ಕೃತ ಪಾವತಿ ಅನುಸೂಚಿ | |
|---|---|---|---|---|---|
| | | ತ್ರೈಮಾಸಿಕ ಕಂತುಗಳ ಸಂಖ್ಯೆ | ಪ್ರತಿ ಕಂತಿನ ಮೊತ್ತ | ತ್ರೈಮಾಸಿಕ ಕಂತುಗಳ ಸಂಖ್ಯೆ | ಪ್ರತಿ ಕಂತಿನ ಮೊತ್ತ |
| ಮೊದಲನೇ ಸಾಲ | | | | | |
| 1281 ದಿನಾಂಕ 26.3.2001 | 100 | 56 (31.3.2002 ರಿಂದ 31.12.2015) | (1) ರೂ.178.58 ಲಕ್ಷ x 8 ಕಂತುಗಳು (2) ರೂ. 178.57 ಲಕ್ಷ x 48 ಕಂತುಗಳು | 47 (30.6.2004 ರಿಂದ 31.12.2015) | (1) ರೂ.208.97 ಲಕ್ಷ x 46 ಕಂತುಗಳು (2) ರೂ. 208.80 ಲಕ್ಷ x 1 ಕಂತು |
| ಎರಡನೇ ಸಾಲ | | | | | |
| 1345 ದಿನಾಂಕ 15.7.2002 | 25 | 53 (31.12.2002 ರಿಂದ 31.12.2015) | (1) ರೂ.47.16 ಲಕ್ಷ x 52 ಕಂತುಗಳು (2) ರೂ. 47.68 ಲಕ್ಷ x 1 ಕಂತು | 39 (30.6.2004 ರಿಂದ 31.12.2013) | (1) ರೂ.64.10 ಲಕ್ಷ x 38 ಕಂತುಗಳು (2) ರೂ. 64.20 ಲಕ್ಷ x 1 ಕಂತು |

ಮಂಡಳಿಯು ಹುಡ್ಕೋಗೆ ರೂ.31 ಲಕ್ಷ ಮರುಸೂಚಿತಗೊಳಿಸಿದ ವೆಚ್ಚವನ್ನು ಪಾವತಿಸಿತು (ಜೂನ್ 2004). ಸಕಾಲಕ್ಕೆ ರಾಜ್ಯ ಹಣಕಾಸು ಆಯೋಗದ ಅನುದಾನಗಳನ್ನು ಸರ್ಕಾರವು ಮಂಡಳಿಗೆ ಬಿಡುಗಡೆ ಮಾಡದಿದ್ದುದಕ್ಕೆ ಕಾರಣಗಳು ತಿಳಿದುಬರಲಿಲ್ಲ.

2002–04ರ ಅವಧಿಯಲ್ಲಿ ಮಂಡಳಿಗೆ ರಾಜ್ಯ ಹಣಕಾಸು ಆಯೋಗದ ಅನುದಾನಗಳನ್ನು ನಿಯಮಿತವಾಗಿ ಬಿಡುಗಡೆ ಮಾಡುವಲ್ಲಿನ ಸರ್ಕಾರದ ವಿಫಲತೆಯು ರೂ.9.71 ಕೋಟಿಯ (**ಅನುಬಂಧ 4.2**) ಹೆಚ್ಚುವರಿ ಬಡ್ಡಿಯ ಹೊಣೆಗಾರಿಕೆಗೆ ಗುರಿ ಮಾಡಿತು ಮತ್ತು ರೂ.31 ಲಕ್ಷ ಮರುಸೂಚಿತ ವೆಚ್ಚ ಪಾವತಿಸುವಲ್ಲಿ ಪರಿಣಮಿಸಿತು. ತನ್ನ ಸ್ವಂತ ಸಂಪನ್ಮೂಲಗಳಿಂದ ಸಾಲವನ್ನು ತೀರಿಸುವ ಸ್ಥಿತಿಯಲ್ಲಿ ತಾನಿರಲಿಲ್ಲವೆಂದು ಮತ್ತು ಹೀಗಾಗಿ ಸಕಾಲಕ್ಕೆ ಕಂತುಗಳ ಪಾವತಿಯನ್ನು ಮಾಡಲಾಗಲಿಲ್ಲವೆಂದು ಮಂಡಳಿಯು ತಿಳಿಸಿತು (ಜುಲೈ 2008).

ಈ ವಿಷಯವನ್ನು ಮಾರ್ಚ್ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

**ಕೃಷಿ ಇಲಾಖೆ**

## 4.2.5 ಕೇಂದ್ರದ ನೆರವಿನ ನಷ್ಟ

**ಏಕ ಶ್ರೇಣಿಯ ಬೆಳೆ ಇಳುವರಿ ಅಂದಾಜುಗಳನ್ನು ಸಿದ್ಧಪಡಿಸುವಲ್ಲಿನ ಕೃಷಿ ಇಲಾಖೆಯ ವಿಫಲತೆಯು ಕೇಂದ್ರ ಸರ್ಕಾರದ ಪಾಲಾದ ರೂ.62.22 ಲಕ್ಷ ಬೆಳೆ ವಿಮಾ ವೆಚ್ಚವು ಪುನರ್ಭರ್ತಿಯಾಗದಿರುವಲ್ಲಿ ಪರಿಣಮಿಸಿತು.**

ನೈಸರ್ಗಿಕ ವಿಕೋಪಗಳು, ಕೀಟಬಾದೆ ಮತ್ತು ರೋಗಗಳಿಂದ ಅಧಿಸೂಚಿತ ಬೆಳೆಗಳು ವಿಫಲವಾದಲ್ಲಿ ರೈತರಿಗೆ ಹಣಕಾಸು ನೆರವು ಮತ್ತು ವಿಮಾ ಕವಚವನ್ನು ಒದಗಿಸಲು ಭಾರತ ಸರ್ಕಾರವು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಪ್ರಾರಂಭಿಸಿತು (ಜುಲೈ 1999). ಭಾರತದ ಕೃಷಿ ವಿಮಾ ಕಂಪನಿಯು

ಗೊತ್ತುಪಡಿಸಿದ ಅನುಷ್ಠಾನ ಏಜೆನ್ಸಿಯಾಗಿತ್ತು. ವಿಮಾ ಯೋಜನೆಗಾಗಿ ರೈತರಿಂದ ಸ್ವೀಕರಿಸಿದ ವಿಮಾ ಕಂತಿನ ಶೇಕಡಾ 100ರಷ್ಟು ವಿಮಾ ಹಕ್ಕೊತ್ತಾಯಗಳನ್ನು ಇತ್ಯರ್ಥ ಮಾಡಲು ಅನುಷ್ಠಾನ ಏಜೆನ್ಸಿಯು ಬಾಧ್ಯವಾಗಿದ್ದರೆ ವಿಮಾ ಕಂತಿನ ಶೇಕಡಾ 100ಕ್ಕಿಂತ ಹೆಚ್ಚಿಗೆ ಬರುವ ಹಕ್ಕೊತ್ತಾಯಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸರಿಸಮನಾಗಿ ಹಂಚಿಕೊಂಡಿದ್ದವು. ಯೋಜನಾ ಮಾರ್ಗದರ್ಶಿ ಸೂತ್ರಗಳು ಒದಗಿಸಿದ್ದಂತೆ ರಾಜ್ಯ ಸರ್ಕಾರವು ಎಲ್ಲಾ ಅಧಿಸೂಚಿತ ಬೆಳೆಗಳಿಗೆ ಅವಶ್ಯವಿರುವ ಸಂಖ್ಯೆಯ ಬೆಳೆ ಕಟಾವು ಪ್ರಯೋಗಗಳನ್ನು ಯೋಜಿಸುವುದು ಹಾಗು ನಡೆಸುವುದು ಮತ್ತು ತಾಲ್ಲೂಕು/ ತಹಸೀಲ್‌ಗಳಲ್ಲಿ, ಮಂಡಲ/ಹೋಬಳಿಗಳಲ್ಲಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ ನಡೆಸುವ ಬೆಳೆ ಕಟಾವು ಪ್ರಯೋಗಗಳನ್ನು ಏಕಶ್ರೇಣಿಯಾಗಿ ಹಾಗೂ ಬೆಳೆ ಉತ್ಪಾದನೆ ಮತ್ತು ಬೆಳೆ ವಿಮೆ ಎರಡಕ್ಕೂ ಫಲಿಸುವ ಇಳುವರಿಯ ಅಂದಾಜುಗಳನ್ನು ನಿರ್ವಹಿಸಬೇಕಿತ್ತು. ನಿಗದಿತ ದಿನಾಂಕಗಳ ಅನುಸಾರ ರಾಜ್ಯ ಸರ್ಕಾರವು ಒದಗಿಸಿದ ಇಳುವರಿ ಮಾಹಿತಿಯ ಆಧಾರದ ಮೇಲೆ ಅನುಷ್ಠಾನ ಏಜೆನ್ಸಿಯೇ ಹಕ್ಕೊತ್ತಾಯಗಳನ್ನು ಲೆಕ್ಕಾಚಾರ ಮಾಡಿ ಇತ್ಯರ್ಥಗೊಳಿಸಬೇಕಿತ್ತು.

2004–05ರ ಹಿಂಗಾರು/ಬೇಸಿಗೆ ಬೆಳೆಗಳಿಗೆ ರಾಜ್ಯದಲ್ಲಿ ರೈತರ ಹಕ್ಕೊತ್ತಾಯಗಳನ್ನು ಲೆಕ್ಕ ಮಾಡುವಲ್ಲಿ ಇಲಾಖೆಯು ಬೆಳೆ ಉತ್ಪಾದನೆ ಹಾಗೂ ಬೆಳೆ ವಿಮಾ ಎರಡರ ಅಂದಾಜಿಗೆ ನಿಗದಿತ ಏಕಶ್ರೇಣಿಯ ಬೆಳೆ ಕಟಾವು ಪ್ರಯೋಗಗಳನ್ನು ನಿರ್ವಹಿಸುವ ವಿಧಾನವನ್ನು ಪಾಲಿಸಿರಲಿಲ್ಲವೆಂದು ಕೃಷಿ ಆಯುಕ್ತರು, ಬೆಂಗಳೂರು ಇವರ ದಾಖಲೆಗಳ ಪರಿಶೀಲನೆಯಲ್ಲಿ ಗಮನಿಸಲಾಯಿತು (ಏಪ್ರಿಲ್ 2008). ತಾಲ್ಲೂಕು ಮಟ್ಟದಲ್ಲಿ ನಡೆಸಿದ ಬೆಳೆ ಕಟಾವು ಪ್ರಯೋಗಗಳನ್ನು ಬೆಳೆ ಉತ್ಪಾದನೆಯ ಅಂದಾಜನ್ನು ಮಾಡಲು ಅಂಗೀಕರಿಸಿದರೆ ಬೆಳೆ ವಿಮಾ ಕೋರಿಕೆಗಳ ಉದ್ದೇಶಕ್ಕಾಗಿ ಹೋಬಳಿ ಮಟ್ಟದಲ್ಲಿ ನಡೆಸಿದ ಬೆಳೆ ಕಟಾವು ಪ್ರಯೋಗಗಳನ್ನು ಅಂಗೀಕರಿಸಲಾಗುತ್ತಿತ್ತು. ತದನುಸಾರವಾಗಿ ಹೋಬಳಿ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಲೆಕ್ಕ ಮಾಡಿದ ಕೋರಿಕೆಗಳು ಕ್ರಮವಾಗಿ ರೂ.4.02 ಕೋಟಿ ಹಾಗೂ ರೂ.2.49 ಕೋಟಿಗಳಾಗಿತ್ತು. ಆದರೆ, ಭಾರತ ಸರ್ಕಾರವು ಈ ವಿಧಾನವನ್ನು ಅನುಮೋದಿಸದೆ (ಜುಲೈ 2006) ತಾಲ್ಲೂಕು ಮಟ್ಟದಲ್ಲಿ ರೂ.2.49 ಕೋಟಿ ಎಂದು ಲೆಕ್ಕಾಚಾರ ಮಾಡಿ ರಾಜ್ಯ ಸರ್ಕಾರಕ್ಕೆ ಹೋಬಳಿ ಮಟ್ಟದಲ್ಲಿ ಲೆಕ್ಕ ಮಾಡಿದಂತೆ ರೈತರ ಕೋರಿಕೆಗಳನ್ನು ತಾವೇ ವ್ಯತ್ಯಾಸದ ವೆಚ್ಚವನ್ನು (ಹೋಬಳಿ ಹಾಗೂ ತಾಲ್ಲೂಕು ಮಟ್ಟದಲ್ಲಿ ನಿಗದಿ ಮಾಡಿದ) ಭರಿಸಿ ಪಾವತಿ ಮಾಡಬೇಕೆಂದು ನಿರ್ದೇಶಿಸಿತು. ಸಂಗ್ರಹಿಸಿದ ರೂ.3.01 ಕೋಟಿ ವಿಮಾ ಕಂತಿಗೆ ಪ್ರತಿಯಾಗಿ ಅನುಷ್ಠಾನ ಏಜೆನ್ಸಿಯು ರೂ.2.78 ಕೋಟಿ ನೀಡಿದ ಸಂದರ್ಭದಲ್ಲಿ ಭಾರತ ಸರ್ಕಾರದ ಪಾಲಿನ ರೂ.62.22 ಲಕ್ಷವನ್ನು ಒಳಗೊಂಡಂತೆ ರಾಜ್ಯ ಸರ್ಕಾರವು ಉಳಿದ ರೂ.1.24 ಕೋಟಿಯನ್ನು ಭರಿಸಿತು (ಮಾರ್ಚ್ 2007).

ಹೀಗೆ ಭಾರತ ಸರ್ಕಾರವು ನಿಗದಿಪಡಿಸಿದಂತೆ ಏಕ ಶ್ರೇಣಿಯ ಬೆಳೆ ಇಳುವರಿ ಅಂದಾಜುಗಳನ್ನು ತಯಾರಿಸಬೇಕೆಂದು ಮಾರ್ಗಸೂಚಿಯ ಅನುಪಾಲನೆಯಲ್ಲಿ ಇಲಾಖೆಯು ವಿಫಲವಾದ ಪರಿಣಾಮದಿಂದಾಗಿ ರೂ.62.22 ಲಕ್ಷ ಕೇಂದ್ರದ ಸಹಾಯವನ್ನು ಬಿಟ್ಟುಕೊಡುವಂತಾಯಿತು.

ಈ ವಿಷಯವನ್ನು ಜುಲೈ 2008ರಲ್ಲಿ ಸರ್ಕಾರಕ್ಕೆ ತಿಳಿಸಲಾಯಿತು; ಉತ್ತರ ಬಂದಿರುವುದಿಲ್ಲ (ಅಕ್ಟೋಬರ್ 2008).

## 4.3 ಕ್ರಮಬದ್ಧತೆ ವಿಷಯಗಳು ಮತ್ತು ಇತರೆ ಅಂಶಗಳು

**ಶಿಕ್ಷಣ ಇಲಾಖೆ**

### 4.3.1 ಕಂಪ್ಯೂಟರ್ ನೆರವುಳ್ಳ ಕಲಿಕಾ ಕೇಂದ್ರಗಳ ಉದ್ದೇಶಗಳನ್ನು ಸಾಧಿಸದಿರುವುದು

**ಸರ್ವರ್‌ಗಳ ಕಾರ್ಯಾಚರಣೆಯಲ್ಲಿ ಶಿಕ್ಷಕರ ಅಪರಿಚತೆ, ಬಗೆಹರಿಸಲಾಗದ ತಾಂತ್ರಿಕ ಸಮಸ್ಯೆಗಳು ಮತ್ತು ಸಾಕಷ್ಟಿಲ್ಲದ ತಾಂತ್ರಿಕ ಬೆಂಬಲ ಇವುಗಳ ಕಾರಣದಿಂದ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕಂಪ್ಯೂಟರ್ ಸಾಕ್ಷರತೆಯನ್ನು ನೀಡುವ ಉದ್ದೇಶವನ್ನು ಸಾಧಿಸಲಾಗಲಿಲ್ಲ.**

ಪ್ರಾಥಮಿಕ ಶಾಲಾ ಮಕ್ಕಳಿಗೆ ಕಂಪ್ಯೂಟರ್ ಸಾಕ್ಷರತೆಯನ್ನು ನೀಡುವ ಉದ್ದೇಶದಿಂದ 2001–05ರ ಅವಧಿಯಲ್ಲಿ ರಾಜ್ಯ ಶಿಕ್ಷಣ ಇಲಾಖೆಯು ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ 775 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ್ ನೆರವುಳ್ಳ ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಿತು.

ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡಲು ಪ್ರತಿ ಶಾಲೆಗೆ ಮೂರರಿಂದ ಐದು ಡೆಸ್ಕ್‌ಟಾಪ್ ವೈಯಕ್ತಿಕ ಕಂಪ್ಯೂಟರ್‌ಗಳನ್ನು ಒದಗಿಸಲಾಯಿತು. 2005–06 ಮತ್ತು 2006–07ರ ವರ್ಷಗಳಿಗೆ ವ್ಯಾಪಿಸಿದ ಯೋಜನೆಯ ಎರಡನೇ ಹಂತದಲ್ಲಿ ಕಂಪ್ಯೂಟರ್ ನೆರವುಳ್ಳ ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಲು ಹೆಚ್ಚುವರಿ 1,000 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಲಾಯಿತು. ಎರಡನೇ ಹಂತದಲ್ಲಿ ಆಯ್ಕೆಯಾದ 1,000 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ತಾಂತ್ರಿಕ ಸಲಹಾ ಸಮಿತಿಯ ಸರ್ವರ್–ಥಿನ್ ಕ್ಲೈಂಟ್ ಮಾದರಿಗಳನ್ನು ಆಯ್ಕೆ ಮಾಡಬಹುದೆಂಬ ಶಿಫಾರಸಿನಂತೆ (ಅಕ್ಟೋಬರ್ 2006) ಡೆಸ್ಕಟಾಪ್ ವೈಯಕ್ತಿಕ ಕಂಪ್ಯೂಟರ್‌ಗಳ ಬದಲಾಗಿ ಸರ್ವರ್–ಥಿನ್ ಕ್ಲೈಂಟ್‌ಗಳನ್ನು ಒದಗಿಸುವುದೆಂದು ತೀರ್ಮಾನಿಸಲಾಯಿತು. ಅದರಂತೆ 60 ದಿನಗಳೊಳಗೆ 1,000 ಸರ್ವರ್‌ಗಳನ್ನು, 4,000 ಥಿನ್ ಕ್ಲೈಂಟ್‌ಗಳನ್ನು, ತಂತ್ರಾಂಶ/ಉಪಸಾಧನೆಗಳ ಸರಬರಾಜು/ಸ್ಥಾಪನೆ ಮಾಡಲು ಒಟ್ಟು ರೂ.15.75 ಕೋಟಿ ವೆಚ್ಚದಲ್ಲಿ ವಿಪ್ರೋ ನಿಯಮಿತ ಅವರಿಗೆ ಆದೇಶ ನೀಡಲಾಯಿತು (ಏಪ್ರಿಲ್ 2007). ಜೂನ್–ಆಗಸ್ಟ್ 2007ರ ನಡುವೆ ಹಾರ್ಡ್‌ವೇರ್‌ನ ಸರಬರಾಜನ್ನು ಪೂರ್ಣಗೊಳಿಸಲಾಗಿದ್ದು ರೂ.10.39 ಕೋಟಿ ಮೊತ್ತವನ್ನು ಇದುವರೆಗೆ ಪಾವತಿ ಮಾಡಲಾಗಿದೆ (ಸೆಪ್ಟಂಬರ್ 2008).

ಲೆಕ್ಕಪರಿಶೋಧನೆಯಲ್ಲಿ ಕೆಳಗಿನವುಗಳನ್ನು ಗಮನಿಸಲಾಯಿತು:

- 1,000 ಶಾಲೆಗಳ ಪೈಕಿ 810 ಶಾಲೆಗಳಲ್ಲಿ ಮೇ 2008ರವರೆಗೆ ಒದಗಿಸಿದ ಸೌಲಭ್ಯಗಳಲ್ಲಿ ಯಾವುದರ ಬಳಕೆಯನ್ನೂ ಮಾಡಲಾಗಲಿಲ್ಲ. ಪ್ರಧಾನವಾಗಿ ಸರ್ವರ್‌ಗಳ ಬಳಕೆಯಲ್ಲಿ ಶಿಕ್ಷಕರು ಅಪರಿಚಿತರಾಗಿದ್ದರಿಂದ ಕಂಪ್ಯೂಟರ್ ಸರ್ವರ್‌ಗಳ ಮತ್ತು ಥಿನ್ ಕ್ಲೈಂಟ್‌ಗಳ ಬಳಸುವಿಕೆ ಶೂನ್ಯವಾಗಿತ್ತು. ಮೂಲ ಸೌಲಭ್ಯಗಳನ್ನು ಬಳಸಿದ 190 ಶಾಲೆಗಳ ಪೈಕಿ 122 ಶಾಲೆಗಳಲ್ಲಿ ಸ್ಥಾಪನೆಯಾದಾಗಿನಿಂದ ಅವುಗಳ ಬಳಕೆಯು 20 ಘಂಟೆಗಳಿಗೂ ಕಡಿಮೆಯಿದ್ದುದನ್ನು ಗಮನಿಸಲಾಯಿತು. ತತ್ಪರಿಣಾಮವಾಗಿ ಖರೀದಿಸಿದ ಹಾರ್ಡ್‌ವೇರನ್ನು ಕಂಪ್ಯೂಟರ್ ಶಿಕ್ಷಣ ನೀಡಲು ಕೇವಲ 68 ಶಾಲೆಗಳಲ್ಲಿ ಮಾತ್ರ ಉಪಯೋಗಿಸಲಾಯಿತು ಮತ್ತು ಇದು ಸರಬರಾಜಾದ ಹಾರ್ಡ್‌ವೇರ್‌ನ ಶೇಕಡ 10ರಷ್ಟನ್ನು ಮಾತ್ರ ಬಳಸಲಾಗಿತ್ತೆಂದು ಸೂಚಿಸಿತು.

- ಸರಬರಾಜುದಾರನ ಬಳಿ ನೋಂದಾಯಿಸಲಾಗಿದ್ದ ಹೆಚ್ಚಿನ ಸಂಖ್ಯೆಯ ದೂರುಗಳು ಸರ್ವರ್‌ಗಳು/ಥಿನ್–ಕ್ಲೈಂಟ್‌ಗಳು ಕಾರ್ಯ ನಿರ್ವಹಿಸದೇ ಇದ್ದ ಕಾರಣ ಹಲವಾರು ಶಾಲೆಗಳಲ್ಲಿ ವ್ಯವಸ್ಥೆಯನ್ನು ಉಪಯೋಗಿಸಲಾಗಲಿಲ್ಲವೆಂದು ಸೂಚಿಸಿತು. ಜೂನ್ 2007ರಿಂದ ಡಿಸೆಂಬರ್ 2007ರವರೆಗಿನ ಅವಧಿಯಲ್ಲಿ ಸ್ಥಾಪಿಸಿದ ಸಮಯದಿಂದ ಮಾರಾಟಗಾರನ ಬಳಿ ನೋಂದಾಯಿಸಿದ ದೂರುಗಳು ಪ್ರತಿ ತಿಂಗಳಿಗೆ 10ರಿಂದ 169 ಆಗಿತ್ತು. ಡಿಸೆಂಬರ್ 2007ರಿಂದ ನವೆಂಬರ್ 2008ರ 12 ತಿಂಗಳ ಅವಧಿಗೆ ಸ್ವೀಕರಿಸಿದ ದೂರುಗಳು, ದೂರುಗಳು ಹೆಚ್ಚಾಗುತ್ತಿದ್ದವು ಹಾಗೂ ಆಗಸ್ಟ್ 2008ರಲ್ಲಿ ಶಾಲೆಗಳಿಂದ 285 ದೂರುಗಳನ್ನು ಸ್ವೀಕರಿಸಲಾಗಿತ್ತು ಎಂದು ಸೂಚಿಸಿದವು. ತಾಂತ್ರಿಕ ಸಹಾಯ ಒದಗಿಸುವಲ್ಲಿನ ತೊಂದರೆ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಮಸ್ಯೆಗಳನ್ನು ಅಧಿಕಗೊಳಿಸಿತ್ತು.

- ಫೆಬ್ರವರಿ 2008ರಲ್ಲಿ ಸರ್ವ ಶಿಕ್ಷಣ ಅಭಿಯಾನದಿಂದ ಕ್ರೋಢೀಕರಿಸಿದ ವರದಿಗಳು, 13 ಸಂದರ್ಭಗಳಲ್ಲಿ ತಾಂತ್ರಿಕ ಸಹಾಯ ಎರಡರಿಂದ ಎಂಟು ತಿಂಗಳ ಅವಧಿಯ ನಂತರವೇ ಲಭ್ಯವಿತ್ತೆಂದು ತಿಳಿಯಪಡಿಸಿದವು.

- ಲೆಕ್ಕಪರಿಶೋಧನೆಯಲ್ಲಿ ರಾಜ್ಯಾದ್ಯಂತ ಪರೀಕ್ಷಾ–ತನಿಖೆಗಾಗಿ ಆಯ್ಕೆ ಮಾಡಿದಂತಹ 21 ಶಾಲೆಗಳಲ್ಲಿ ಕೇವಲ ಎರಡು ಶಾಲೆಗಳಲ್ಲಿ ವ್ಯವಸ್ಥೆಯು ಸಂಪೂರ್ಣವಾಗಿ ಕಾರ್ಯ ನಿರ್ವಹಿಸುತ್ತಿದ್ದವೆಂದು ತಿಳಿಯಪಡಿಸಿತು. ಏಳು ಶಾಲೆಗಳಲ್ಲಿ ವ್ಯವಸ್ಥೆಯು ಕಾರ್ಯ ನಿರ್ವಹಿಸುತ್ತಿರಲಿಲ್ಲ ಹಾಗೂ ನಿರ್ಣಯಿಸದ ತಾಂತ್ರಿಕ ಸಮಸ್ಯೆಗಳಿಂದಾಗಿ ಮತ್ತೆ ಏಳು ಶಾಲೆಗಳಲ್ಲಿ ಅವು ಪಾರ್ಶ್ವವಾಗಿ ಕಾರ್ಯ ನಿರ್ವಹಿಸುತ್ತಿದ್ದವು (ಒಂದು ಅಥವಾ ಎರಡು ಥಿನ್–ಕ್ಲೈಂಟ್‌ಗಳು ಕಾರ್ಯ ನಿರ್ವಹಿಸುತ್ತಿರಲಿಲ್ಲ). ವಿದ್ಯುಚ್ಛಕ್ತಿಯ ಕೊರತೆ, ಶಿಕ್ಷಕರ ಕೊರತೆ, ದೋಷಯುಕ್ತ ಯೂಪಿಎಸ್‌ಗಳು ಹಾಗೂ/ಅಥವಾ ಜಾಲ ವ್ಯವಸ್ಥೆ ಇತ್ಯಾದಿಗಳ ಕಾರಣದಿಂದಾಗಿ ಉಳಿದ ಐದು ಶಾಲೆಗಳಲ್ಲಿ ಕಾರ್ಯ ವ್ಯವಸ್ಥೆಯು ನಿಷ್ಪ್ರಯೋಜಕವಾಗಿತ್ತು. ಕೆಲವೊಂದು ಸ್ಥಳಗಳಲ್ಲಿ ಥಿನ್–ಕ್ಲೈಂಟ್‌ಗಳನ್ನು ಸಾಪೇಕ್ಷಿಸಲಾಗದೇ ಇದ್ದುದರಿಂದ ಮಕ್ಕಳಿಗೆ ಬಹುಮಾಧ್ಯಮ ವಿಷಯಗಳನ್ನು ತೋರಿಸಲು ಸರ್ವರ್‌ಗಳನ್ನಷ್ಟೆ ಉಪಯೋಗಿಸಲಾಗುತ್ತಿತ್ತು.

ಹೀಗೆ ಸರ್ವರ್–ಥಿನ್ ಕ್ಲೈಂಟ್‌ಗಳ ಕಾರ್ಯನಿರ್ವಹಣೆಯ ಪರಿಚಯವಿಲ್ಲದಿರುವುದು, ಬಗೆಹರಿಸಲಾಗದ ತಾಂತ್ರಿಕ ತೊಂದರೆಗಳು ಮತ್ತು ಸೇವೆಯ ಅಲಭ್ಯತೆಗಳ ಕಾರಣದಿಂದ ಬಹಳಷ್ಟು ಶಾಲೆಗಳು ವ್ಯವಸ್ಥೆಯ ಬಳಕೆಯನ್ನು ಮಾಡಲಾಗದೇ ಯೋಜನೆಯ ಉದ್ದೇಶವು ಸಾಧನೆಯಾಗಲಿಲ್ಲ.

ಅವಶ್ಯಕತೆಗಳನ್ನು ಸಂಪೂರ್ಣವಾಗಿ ಪೂರೈಸಲಾಗಿದೆ ಎಂದು ತಾಂತ್ರಿಕ ಸಮಿತಿಯನ್ನು ಮನಗಾಣಿಸಿದ ನಂತರವೇ ಥಿನ್ ಕ್ಲೈಂಟ್‌ಗಳನ್ನು ಆಯ್ಕೆ ಮಾಡಲಾಯಿತೆಂದು, ಸರ್ವರ್ ಮತ್ತು ಥಿನ್ ಕ್ಲೈಂಟ್‌ಗಳೊಂದಿಗೆ ಕಾರ್ಯ ನಿರ್ವಹಿಸುವಲ್ಲಿ ಶಿಕ್ಷಕರು ಪರಿಚಿತರಾಗಿದ್ದರೆಂದು ಮತ್ತು ಎಲ್ಲ ಶಾಲೆಗಳು ಅವುಗಳನ್ನು ಬಳಸುತ್ತಿವೆಯೆಂದು ಸರ್ಕಾರವು ಉತ್ತರಿಸಿತು (ಸೆಪ್ಟಂಬರ್ 2008). ಅನೇಕ ಶಾಲೆಗಳು ವ್ಯವಸ್ಥೆಯನ್ನು ಅಪರಿಚತೆ, ಸಂಕೀರ್ಣ ವಾತಾವರಣ ಮತ್ತು ತಾಂತ್ರಿಕ ಸಹಾಯದ ಕೊರತೆಯಿಂದ ಬಳಸಲಾಗಲಿಲ್ಲ ಎಂದು ಸರ್ವ ಶಿಕ್ಷಣ ಅಭಿಯಾನವು ತಾನೇ ಸಂಕಲಿಸಿದ ಬಳಕೆ ವರದಿಗಳಲ್ಲಿ ದೃಢಪಡಿಸಿದ್ದರಿಂದ ಸರ್ಕಾರದ ಉತ್ತರವು ಸಮರ್ಥನೀಯವಾಗಿರಲಿಲ್ಲ.

## 4.4 ಸಾಮಾನ್ಯ

## 4.4.1 ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಸರಣೆ

### 4.4.1.1 ಕ್ರಮ ತೆಗೆದುಕೊಂಡ ಟಿಪ್ಪಣಿಗಳು

ಲೆಕ್ಕಪರಿಶೋಧನಾ ಅಭಿಪ್ರಾಯಗಳ ಶೀಘ್ರ ಇತ್ಯರ್ಥಕ್ಕಾಗಿ ಆರ್ಥಿಕ ಇಲಾಖೆಯಿಂದ 2001ರಲ್ಲಿ ಜಾರಿ ಮಾಡಲ್ಪಟ್ಟ ಸೂಚನೆಗಳ ಕೈಪಿಡಿ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕಾರ್ಯವಿಧಾನ ನಿಯಮಾವಳಿಗಳು (ಆಂತರಿಕ ವ್ಯವಹಾರ), 1999, ಸರ್ಕಾರದ ಎಲ್ಲ ಇಲಾಖೆಗಳಿಂದ ಲೆಕ್ಕಪರಿಶೋಧನಾ ವರದಿಗಳಲ್ಲಿ ನಿರೂಪಿಸಲಾದ ಅಭಿಪ್ರಾಯಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳ (ಎಟಿಎನ್‌ಗಳ) ರೂಪದಲ್ಲಿ ವಿವರವಾದ ಸ್ಪಷ್ಟೀಕರಣಗಳನ್ನು ಅವು ವಿಧಾನಮಂಡಲಕ್ಕೆ ಮಂಡನೆಯಾದ ನಾಲ್ಕು ತಿಂಗಳುಗಳ ಒಳಗಾಗಿ ಲೆಕ್ಕಪರಿಶೋಧನಾ ಕಛೇರಿಗೆ ಅವುಗಳ ಪ್ರತಿಗಳೊಂದಿಗೆ ಕರ್ನಾಟಕ ವಿಧಾನಮಂಡಲದ ಸಚಿವಾಲಯಕ್ಕೆ ಸಲ್ಲಿಸಬೇಕೆಂದು ಉಪಬಂಧಿಸುತ್ತವೆ.

1995–96, 1996–97, 1997–98, 1998–99, 1999–2000, 2000–01, 2001–02, 2002–03, 2003–04, 2004–05 ಮತ್ತು 2005–06ರ ವರ್ಷಗಳಿಗಾಗಿನ ಲೆಕ್ಕಪರಿಶೋಧನಾ ವರದಿಗಳನ್ನು ರಾಜ್ಯ ವಿಧಾನ ಮಂಡಲದಲ್ಲಿ ಅನುಕ್ರಮವಾಗಿ 27 ಮಾರ್ಚ್ 1997, 14 ಮೇ 1998, 1 ಜುಲೈ 1999, 3 ಮೇ 2000, 24 ಜುಲೈ 2001, 22 ಮಾರ್ಚ್ 2002, 28 ಮಾರ್ಚ್ 2003, 21 ಜುಲೈ 2004, 18 ಜುಲೈ 2005, 28 ಮಾರ್ಚ್ 2006 ಮತ್ತು 24 ಜುಲೈ 2007ರಂದು ಮಂಡಿಸಲಾಯಿತು. ಅಕ್ಟೋಬರ್ 2008ರಲ್ಲಿದ್ದಂತೆ, 26 ಇಲಾಖೆಗಳು, **ಅನುಬಂಧ 4.3ರಲ್ಲಿ** ವಿವರಿಸಿರುವಂತೆ 68 ಕಂಡಿಕೆಗಳಿಗೆ ಎಟಿಎನ್‌ಗಳನ್ನು ಸಲ್ಲಿಸಿರಲಿಲ್ಲ. ಇವುಗಳು, 1999–2000ರಿಂದ 2005–06ರವರೆಗಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಅಡಕವಾಗಿರುವ, ಈ ಕೆಳಗಿನ ಮುಖ್ಯ ಅಕ್ರಮಗಳನ್ನು ಒಳಗೊಂಡಿದ್ದವು, ವಿಳಂಬವು 11ರಿಂದ 83 ತಿಂಗಳುಗಳಿಗೂ ಮೇಲ್ಪಟ್ಟಿತ್ತು.

**ಲೆಕ್ಕಪರಿಶೋಧನಾ ವರದಿ 1999–2000**

**ಕಂಡಿಕೆ ಸಂಖ್ಯೆ 3.2: ನಾಲ್ಕನೆಯ ರಾಷ್ಟ್ರೀಯ ಕ್ರೀಡೆಗಳು–ಯುವಜನ ಸೇವೆಗಳು ಮತ್ತು ಕ್ರೀಡಾ ಇಲಾಖೆ**

ರಾಜ್ಯ ಸರ್ಕಾರವು ಮೇ–ಜೂನ್ 1997ರಲ್ಲಿ ನಾಲ್ಕನೆಯ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸಿತು. ಅದರಿಂದ ಆಯವ್ಯಯ ಬೆಂಬಲವನ್ನು ಒದಗಿಸುವುದರಲ್ಲಿನ ವಿಳಂಬದಿಂದಾಗಿ ವೆಚ್ಚದ ಬಹುಭಾಗವನ್ನು ಬ್ಯಾಂಕುಗಳಿಂದ ಪಡೆದ ಓವರ್‌ಡ್ರಾಫ್ಟ್‌ಗಳ ಮೂಲಕ ಭರಿಸಿದ ಕಾರಣದಿಂದ ರೂ.18.59 ಕೋಟಿ ಬಡ್ಡಿಯ ನಿಷ್ಫಲ ಪಾವತಿಯಲ್ಲಿ ಪರಿಣಮಿಸಿತು.

**ಲೆಕ್ಕಪರಿಶೋಧನಾ ವರದಿ 2000–01**

**ಕಂಡಿಕೆ ಸಂಖ್ಯೆ 6.3: ಗುತ್ತಿಗೆದಾರನೊಬ್ಬನಿಗೆ ಗುತ್ತಿಗೆ ಬಾಹಿರ/ಅಧಿಕ ಪಾವತಿಗಳು ಮತ್ತು ಅನುಚಿತ ಅನುಗ್ರಹ – ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ**

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಸದಸ್ಯರು/ಮುಖ್ಯ ಅಭಿವೃದ್ಧಿ ಅಧಿಕಾರಿಗಳು ಗುತ್ತಿಗೆಯ ಉಪಬಂಧಗಳನ್ನು ಜಾರಿಗೊಳಿಸಲಿಲ್ಲ. ಇದು, ಇಲಾಖಾ ಲೋಪ ಸಂಕೀರ್ಣತೆಯಿಂದ ಗುತ್ತಿಗೆದಾರನಿಗೆ ರೂ.17.97 ಕೋಟಿಯ ಮೊತ್ತವಾಗುವ ಅಧಿಕ ಪಾವತಿಗಳು ಮತ್ತು ಅನುಚಿತ ಅನುಗ್ರಹಕ್ಕೆ ಅನುವು ಮಾಡಿದ್ದು ಮಂಡಳಿಗೆ ಭಾರೀ ಆರ್ಥಿಕ ನಷ್ಟವನ್ನು ಉಂಟುಮಾಡಿತು.

**ಲೆಕ್ಕಪರಿಶೋಧನಾ ವರದಿ 2002–03**

**ಕಂಡಿಕೆ ಸಂಖ್ಯೆ 4.1.8: ಅನಧಿಕೃತ ಕಾಮಗಾರಿಗಳು – ಜಲ ಸಂಪನ್ಮೂಲಗಳ ಇಲಾಖೆ**

ಒಂದು ನೀರಾವರಿ ಕಾಲುವೆಯ ಮೇಲೆ ಅಕ್ರಮ ವೆಚ್ಚ ವಹಿಸಿದ ಚೀಫ್ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್, ಅವರ ಕ್ರಮವು ಸರ್ಕಾರಕ್ಕೆ ರೂ.1.86 ಕೋಟಿಯ ಅನಪೇಕ್ಷಿತ ಆರ್ಥಿಕ ಹೊರೆಗೆ ಈಡು ಮಾಡಿತು.

**ಲೆಕ್ಕಪರಿಶೋಧನಾ ವರದಿ 2003–04**

**ಕಂಡಿಕೆ ಸಂಖ್ಯೆ 4.4.8: ಭೂ ಸ್ವಾಧೀನದ ಮೇಲೆ ತಪ್ಪಿಸಬಹುದಾಗಿದ್ದ ವೆಚ್ಚ– ಜಲ ಸಂಪನ್ಮೂಲಗಳ ಇಲಾಖೆ**

ಭೂ ಸ್ವಾಧೀನ ಪ್ರಸ್ತಾವನೆಗಳನ್ನು ಸಲ್ಲಿಸುವಲ್ಲಿನ ಅತಿಯಾದ ವಿಳಂಬ ಮತ್ತು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳದೇ ಭೂ ಪರಿಹಾರದ ಮೇಲೆ ಬಡ್ಡಿ ಪಾವತಿ ಮಾಡುವ ಜಲ ಸಂಪನ್ಮೂಲ ಇಲಾಖೆಯ ಅಸಮಂಜಸ ಕ್ರಮವು ರೂ.75.17 ಲಕ್ಷದ ತಪ್ಪಿಸಬಹುದಾಗಿದ್ದ ವೆಚ್ಚವೊಂದರಲ್ಲಿ ಮತ್ತು ರೂ.83.09 ಲಕ್ಷದ ಅಧಿಕತಮ ಬಡ್ಡಿ ಪಾವತಿಯಲ್ಲಿ ಪರಿಣಮಿಸಿತು.

**ಲೆಕ್ಕಪರಿಶೋಧನಾ ವರದಿ 2004–05**

**ಕಂಡಿಕೆ ಸಂಖ್ಯೆ 4.2.1: ಮಾಸ್ಟರ್ ಪ್ಲಾನ್ ತಯಾರಿಕೆಯಲ್ಲಿ ನಿಷ್ಫಲ ವೆಚ್ಚ**

ಮಾಹಿತಿ ತಂತ್ರಜ್ಞಾನ ಕುರಿತಾದ ವಿಶೇಷ ಶಾಸಕಾಂಗ ಮಂಜೂರಾತಿಯಿಲ್ಲದೇ ಮಾಸ್ಟರ್ ಪ್ಲಾನ್ ತಯಾರಿಸುವ ಕಾಮಗಾರಿಯನ್ನು ವಹಿಸಿದ್ದು ಮತ್ತು ಮಾಸ್ಟರ್ ಪ್ಲಾನ್ ಯೋಜನೆಯೊಂದಿಗೆ ಹೊಂದಿಕೆಯಿಲ್ಲದ ನಿರ್ಮಾಣ ಚಟುವಟಿಕೆಯನ್ನು ತಡೆಯುವುದರಲ್ಲಿನ ವೈಫಲ್ಯವು ಒಂದು ಸಂಸ್ಥೆಗೆ ಪಾವತಿಸಿದ ರೂ.1.34 ಕೋಟಿ ಶುಲ್ಕವು ನಿಷ್ಫಲವಾಗುವುದರಲ್ಲಿ ಪರಿಣಮಿಸಿತು.

**ಲೆಕ್ಕಪರಿಶೋಧನಾ ವರದಿ 2005–06**

**ಕಂಡಿಕೆ ಸಂಖ್ಯೆ 4.2.3: ಗುತ್ತಿಗೆದಾರನಿಗೆ ಅಧಿಕ ಪಾವತಿ – ಜಲ ಸಂಪನ್ಮೂಲಗಳ ಇಲಾಖೆ (ಸಣ್ಣ ನೀರಾವರಿ)**

ಗುತ್ತಿಗೆಯ ಷರತ್ತುಗಳನ್ನು ಜಾರಿಗೆ ತರುವಲ್ಲಿ ಮತ್ತು ಅದರಂತೆ ಪಾವತಿಗಳನ್ನು ಕ್ರಮಬದ್ಧಗೊಳಿಸುವಲ್ಲಿನ ವಿಭಾಗಾಧಿಕಾರಿಯ ವಿಫಲತೆಯು ಗುತ್ತಿಗೆದಾರನಿಗೆ ಹೆಚ್ಚುವರಿ ನಿರ್ಜಲೀಕರಣದ, ನೀರನ್ನು ವಿಪಥನಗೊಳಿಸುವ ಮತ್ತು ಉತ್ಖನನಗೊಳಿಸಿದ ಗಟ್ಟಿ ಬಂಡಯ ಸಾಗಾಣಿಕೆ, ಇವುಗಳಿಗಾಗಿ ರೂ.3.58 ಕೋಟಿ ಅಧಿಕ ಪಾವತಿಯಲ್ಲಿ ಪರಿಣಮಿಸಿತು.

**4.4.1.2 ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಾಗಿರುವ ಕಂಡಿಕೆಗಳು**

1989–90 ಮತ್ತು ನಂತರದ ವರ್ಷಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ನಿರೂಪಿಸಿರುವ ಧನವಿನಿಯೋಗ ಲೆಕ್ಕಗಳ ಮೇಲಿನ ಟೀಕೆಗಳು ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಗಾಗಿ ಉಳಿದಿವೆ. ಅಕ್ಟೋಬರ್ 2008ರಲ್ಲಿದ್ದಂತೆ ಚರ್ಚೆಗಾಗಿ ಉಳಿದಿರುವ ಕಂಡಿಕೆಗಳ (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) ವಿವರಗಳನ್ನು **ಅನುಬಂಧ 4.4**ರಲ್ಲಿ ವಿಶದೀಕರಿಸಲಾಗಿದೆ.

### 4.4.2 ಅಸ್ವೀಕೃತ ಉಗ್ರಾಣ ಮತ್ತು ದಾಸ್ತಾನು ಲೆಕ್ಕಪತ್ರಗಳು

ವಿವಿಧ ಇಲಾಖೆಗಳಿಂದ ಉಗ್ರಾಣ ಮತ್ತು ದಾಸ್ತಾನಿನ ಕ್ರೋಢೀಕೃತ ವಾರ್ಷಿಕ ಲೆಕ್ಕಪತ್ರಗಳು ಅದರ ಮುಂದಿನ ವರ್ಷದ ಜೂನ್ 15ರ ವೇಳೆಗೆ ಮಹಾಲೇಖಪಾಲರಿಗೆ ಸಲ್ಲಿಸಲ್ಪಡಬೇಕಾಗಿದೆ. ಉಗ್ರಾಣ ಮತ್ತು ದಾಸ್ತಾನಿನ ಲೆಕ್ಕಪತ್ರಗಳ ಸ್ವೀಕೃತಿಯಲ್ಲಿನ ವಿಳಂಬಗಳನ್ನು ಪರಂಪರಾನುಗತ ಲೆಕ್ಕಪರಿಶೋಧನಾ ವರದಿಗಳಲ್ಲಿ ಟೀಕಿಸಲಾಗುತ್ತಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯು (1978–80) ಫೆಬ್ರವರಿ 1980ರಲ್ಲಿ ಮಂಡಿಸಿದ ತನ್ನ ಮೊದಲ ವರದಿಯಲ್ಲಿ (ಆರನೇ ವಿಧಾನಸಭೆ) ಇಲಾಖೆಗಳಿಂದ ಲೆಕ್ಕಪತ್ರಗಳ ಸಕಾಲಿಕ ಸಲ್ಲಿಕೆಯ ಮಹತ್ವವನ್ನು ಒತ್ತಿಹೇಳಿದೆ. ಆದಾಗ್ಯೂ, ವಿಳಂಬಗಳು ಮುಂದುವರೆಯುತ್ತಲೇ ಇವೆ. ಅಕ್ಟೋಬರ್ 2008ರಲ್ಲಿದ್ದಂತೆ ಉಗ್ರಾಣ ಮತ್ತು ದಾಸ್ತಾನು ಲೆಕ್ಕಪತ್ರಗಳು ಲೆಕ್ಕಪರಿಶೋಧನದಿಂದ ಸ್ವೀಕೃತಿಯಾಗಿರದ ಇಲಾಖೆಗಳನ್ನು ಕೆಳಗೆ ತಿಳಿಸಲಾಗಿದೆ:

| ಕ್ರಮ ಸಂಖ್ಯೆ | ಇಲಾಖೆ | ಲೆಕ್ಕಪತ್ರಗಳು ಬಾಕಿ ಇರುವ ವರ್ಷ |
|---|---|---|
| 1. | ಕೃಷಿ – ಕೃಷಿ ನಿರ್ದೇಶಕರು | 2007–08 |
| 2. | ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳು – ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಆಯುಕ್ತರು | 2007–08 |
| 3. | ವಾಣಿಜ್ಯ ಮತ್ತು ಕೈಗಾರಿಕೆ ನಿರ್ದೇಶಕರು, ಕೈಗಾರಿಕೆಗಳು ಮತ್ತು ವಾಣಿಜ್ಯ | 2006–07 & 2007–08 |
| 4. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | |
| | (1) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | 2007–08 |
| | (2) ಕರ್ನಾಟಕ ರಾಜ್ಯ ಔಷಧಿಗಳ ಮತ್ತು ಉಗ್ರಾಣ ಸಹಕಾರ ಸಂಘ | 2007–08 |
| | (3) ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ | 2007–08 |
| 5. | ಗೃಹ – ಬಂದೀಖಾನೆಗಳ ಮಹಾ ನಿರೀಕ್ಷಕರು | 2007–08 |
| 6. | ವಾರ್ತಾ ಮತ್ತು ಪ್ರಚಾರ ವಾರ್ತಾ ಮತ್ತು ಪ್ರಚಾರದ ನಿರ್ದೇಶಕರು | 2007–08 |
| 7. | ಶಿಕ್ಷಣ – ಮುದ್ರಣ ಮತ್ತು ಲೇಖನಸಾಮಗ್ರಿಗಳ ನಿರ್ದೇಶಕರು | 2007–08 |
| 8. | ಕಂದಾಯ (ನೋಂದಣಿ) – ನೋಂದಣಿ ಮಹಾನಿರೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು | 2001–02ರಿಂದ 2007–08 |
| 9. | ಲೋಕೋಪಯೋಗಿ | 2005–06ರಿಂದ 2007–08* |
| 10. | ಜಲ ಸಂಪನ್ಮೂಲಗಳು | 2005–06ರಿಂದ 2007–08# |
| 11. | ಸಣ್ಣ ನೀರಾವರಿ | 2004–05ರಿಂದ 2007–08@ |

*** ಲೋಕೋಪಯೋಗಿ ಇಲಾಖೆಯಿಂದ ಬಾಕಿ ಇರುವ ಲೆಕ್ಕಪತ್ರಗಳು**

| | | |
|---|---|---|
| (ಎ) | ಒಂದು ವಿಭಾಗ | ಆರು ಅರ್ಧವಾರ್ಷಿಕ ಅವಧಿಗಳಿಗೆ (2005–06, 2006–07 ಮತ್ತು 2007–08) |
| (ಬಿ) | ಒಂದು ವಿಭಾಗ | ಐದು ಅರ್ಧವಾರ್ಷಿಕ ಅವಧಿಗಳಿಗೆ (ಅಕ್ಟೋಬರ್ 2005ರಿಂದ ಮಾರ್ಚ್ 2006, 2006–07 ಮತ್ತು 2007–08 |
| (ಸಿ) | ಮೂರು ವಿಭಾಗಗಳು | ನಾಲ್ಕು ಅರ್ಧವಾರ್ಷಿಕ ಅವಧಿಗಳಿಗೆ (2006–07 ಮತ್ತು 2007–08) |
| (ಡಿ) | ಎಂಟು ವಿಭಾಗಗಳು | ಮೂರು ಅರ್ಧವಾರ್ಷಿಕ ಅವಧಿಗಳಿಗೆ (ಅಕ್ಟೋಬರ್ 2006ರಿಂದ ಮಾರ್ಚ್ 2007 ಮತ್ತು 2007–08) |
| (ಇ) | 12 ವಿಭಾಗಗಳು | ಎರಡು ಅರ್ಧವಾರ್ಷಿಕ ಅವಧಿಗಳಿಗೆ ((2007–08) |
| (ಎಫ್) | 11 ವಿಭಾಗಗಳು | ಒಂದು ಅರ್ಧವಾರ್ಷಿಕ ಅವಧಿಗೆ (ಅಕ್ಟೋಬರ್ 2007ರಿಂದ ಮಾರ್ಚ್ 2008) |

**# ಜಲ ಸಂಪನ್ಮೂಲಗಳ ಇಲಾಖೆಯಿಂದ ಬಾಕಿ ಇರುವ ಲೆಕ್ಕಪತ್ರಗಳು**

| | | |
|---|---|---|
| (ಎ) | ನಾಲ್ಕು ವಿಭಾಗಗಳು | ಐದು ಅರ್ಧವಾರ್ಷಿಕ ಅವಧಿಗಳಿಗೆ (ಅಕ್ಟೋಬರ್ 2005ರಿಂದ ಮಾರ್ಚ್ 2006, 2006–07 ಮತ್ತು 2007–08) |
| (ಬಿ) | ಮೂರು ವಿಭಾಗಗಳು | ನಾಲ್ಕು ಅರ್ಧವಾರ್ಷಿಕ ಅವಧಿಗಳಿಗೆ (2006–07 ಮತ್ತು 2007–08) |
| (ಸಿ) | ಮೂರು ವಿಭಾಗಗಳು | ಮೂರು ಅರ್ಧವಾರ್ಷಿಕ ಅವಧಿಗಳಿಗೆ (ಅಕ್ಟೋಬರ್ 2006ರಿಂದ ಮಾರ್ಚ್ 2007 ಮತ್ತು 2007–08) |
| (ಡಿ) | 10 ವಿಭಾಗಗಳು | ಎರಡು ಅರ್ಧವಾರ್ಷಿಕ ಅವಧಿಗಳಿಗೆ (2007–08) |
| (ಇ) | ಐದು ವಿಭಾಗಗಳು | ಒಂದು ಅರ್ಧವಾರ್ಷಿಕ ಅವಧಿಗೆ (ಅಕ್ಟೋಬರ್ 2007ರಿಂದ ಮಾರ್ಚ್ 2008) |

**@ ಸಣ್ಣ ನೀರಾವರಿ ಇಲಾಖೆಯಿಂದ ಬಾಕಿ ಇರುವ ಲೆಕ್ಕಪತ್ರಗಳು**

| | | |
|---|---|---|
| (ಎ) | ಒಂದು ವಿಭಾಗ | ಎಂಟು ಅರ್ಧವಾರ್ಷಿಕ ಅವಧಿಗಳಿಗೆ (2004–05, 2005–06. 2006–07 ಮತ್ತು 2007–08) |
| (ಬಿ) | ಒಂದು ವಿಭಾಗ | ಆರು ಅರ್ಧವಾರ್ಷಿಕ ಅವಧಿಗಳಿಗೆ (2005–06, 2006–07 ಮತ್ತು 2007–08) |
| (ಸಿ) | ಎರಡು ವಿಭಾಗಗಳು | ನಾಲ್ಕು ಅರ್ಧವಾರ್ಷಿಕ ಅವಧಿಗಳಿಗೆ (2006–07 ಮತ್ತು 2007–08) |
| (ಡಿ) | ನಾಲ್ಕು ವಿಭಾಗಗಳು | ಮೂರು ಅರ್ಧವಾರ್ಷಿಕ ಅವಧಿಗಳಿಗೆ (ಅಕ್ಟೋಬರ್ 2006ರಿಂದ ಮಾರ್ಚ್ 2007 ಮತ್ತು 2007–08) |
| (ಇ) | ಆರು ವಿಭಾಗಗಳು | ಎರಡು ಅರ್ಧವಾರ್ಷಿಕ ಅವಧಿಗಳಿಗೆ ((2007–08) |
| (ಎಫ್) | ನಾಲ್ಕು ವಿಭಾಗಗಳು | ಒಂದು ಅರ್ಧವಾರ್ಷಿಕ ಅವಧಿಗೆ (ಅಕ್ಟೋಬರ್ 2007ರಿಂದ ಮಾರ್ಚ್ 2008) |

### 4.4.3 ಬಾಕಿ ಇರುವ ತಪಾಸಣಾ ವರದಿಗಳು

**ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆಯ ಕೊರತೆ**

ಲೆಕ್ಕಪರಿಶೋಧನೆಯ ಅಭಿಪ್ರಾಯಗಳ ತ್ವರಿತಗತಿಯ ಇತ್ಯರ್ಥಕ್ಕಾಗಿ ಆರ್ಥಿಕ ಇಲಾಖೆಯಿಂದ ಹೊರಡಿಸಲ್ಪಟ್ಟಿರುವ (ಜನವರಿ 1974) ಸೂಚನೆಗಳ ಕೈಪಿಡಿಯು ನಿಗದಿಪಡಿಸಿದ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸರಣೆಯಿಂದ ಸರಿಪಡಿಕೆ ಕ್ರಮಗಳ ಮತ್ತು ತಪಾಸಣೆಯಲ್ಲಿ ಗಮನಿಸಿದ ನ್ಯೂನತೆಗಳು, ಲೋಪಗಳು, ಮುಂತಾದವುಗಳಿಗಾಗಿ ಹೊಣೆಗಾರಿಕೆಯನ್ನು ಖಾತರಿಪಡಿಸಿಕೊಳ್ಳಲು ಮಹಾಲೇಖಪಾಲರಿಂದ (ಎಜಿ) ನೀಡಲ್ಪಟ್ಟ ತಪಾಸಣಾ ವರದಿಗಳಿಗೆ (ಐಆರ್‌ಗಳು) ಕಾರ್ಯಾಂಗದಿಂದ ಚುರುಕಾದ ಪ್ರತಿಕ್ರಿಯೆಗಾಗಿ ಉಪಬಂಧಿಸುತ್ತವೆ. ಕಛೇರಿಗಳ ಮುಖ್ಯಸ್ಥರುಗಳು ಮತ್ತು ನಂತರದ ಮೇಲಧಿಕಾರಿಗಳು ಐಆರ್‌ಗಳಲ್ಲಿರುವ ಅಭಿಪ್ರಾಯಗಳನ್ನು ಅನುಸರಿಸಬೇಕು, ಲೋಪದೋಷಗಳನ್ನು ತತ್‌ಕ್ಷಣ ಸರಿಪಡಿಸಬೇಕು ಮತ್ತು ಎಜಿಯವರಿಗೆ – ಅವರು ಲೆಕ್ಕಪರಿಶೋಧನಾ ಅಭಿಪ್ರಾಯಗಳ ಮೇಲ್ವಿಚಾರಣೆಗೆ ಅನುವಾಗಲು ಬಾಕಿ ಇರುವ ಐಆರ್‌ಗಳ ಅರ್ಧವಾರ್ಷಿಕ ವರದಿಯೊಂದನ್ನು ಇಲಾಖೆಯ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾರೆ – ಅವುಗಳ ಅನುಸರಣೆಯನ್ನು ವರದಿ ಮಾಡಬೇಕು.

30 ಜೂನ್ 2008ರಲ್ಲಿದ್ದಂತೆ ಕನ್ನಡ ಮತ್ತು ಸಂಸ್ಕೃತಿ, ಜಲ ಸಂಪನ್ಮೂಲಗಳು, ಸಣ್ಣ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳ 815 ತಪಾಸಣಾ ವರದಿಗಳು (3,772 ಕಂಡಿಕೆಗಳು) ಬಾಕಿ ಉಳಿದಿವೆ. ಬಾಕಿ ಇರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳನ್ನು **ಅನುಬಂಧ 4.5**ರಲ್ಲಿ ನೀಡಲಾಗಿದೆ.

ಉತ್ತರ ಬಾರದೇ ಬಾಕಿ ಉಳಿದಿರುವ ಈ ಮೂರು ಇಲಾಖೆಗಳ ಐಆರ್‌ಗಳ ಪರಿಶೀಲನೆಯು, ಈ ಕೆಳಗೆ ವಿವರಿಸಿರುವಂತೆ, ಕಛೇರಿಗಳ ಮುಖ್ಯಸ್ಥರು, ಕೆಳಗೆ ವಿವರಿಸಿರುವಂತೆ, 1987–88 ಮತ್ತು 2007–08ರ ನಡುವೆ ಜಾರಿ ಮಾಡಿದ 949 ಕಂಡಿಕೆಗಳನ್ನೊಳಗೊಂಡ 96 ಐಆರ್‌ಗಳಿಗೆ ಪ್ರಾಥಮಿಕ ಉತ್ತರಗಳನ್ನೂ ಸಹ ಕಳುಹಿಸಲಿಲ್ಲವೆಂದು ಬಹಿರಂಗಗೊಳಿಸಿತು.

| ಕ್ರಮ ಸಂಖ್ಯೆ | ಇಲಾಖೆ | ಪ್ರಾಥಮಿಕ ಉತ್ತರಗಳು ಬಂದಿಲ್ಲದಿರುವುದು | |
|---|---|---|---|
| | | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
| 1. | ಕಂದಾಯ | 12 | 61 |
| 2. | ಜಲ ಸಂಪನ್ಮೂಲಗಳು | 32 | 347 |
| 3. | ಲೋಕೋಪಯೋಗಿ | 52 | 541 |
| **ಒಟ್ಟು** | | **96** | **949** |

ಸರ್ಕಾರವು ಈ ಬಗ್ಗೆ ಗಮನ ಹರಿಸಬೇಕು ಮತ್ತು (ಎ) ಐಆರ್‌ಗಳಿಗೆ/ಕಂಡಿಕೆಗಳಿಗೆ ನಿಗದಿಪಡಿಸಿದ ಕಾಲಕ್ರಮದ ಉತ್ತರಗಳನ್ನು ಕಳುಹಿಸಲು ವಿಫಲರಾದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು (ಬಿ) ಕಾಲಮಿತಿಯೊಳಗೆ ನಷ್ಟ/ಹೆಚ್ಚುವರಿ ಪಾವತಿಯ ವಸೂಲಿಗೆ ಕ್ರಮ ಜರುಗಿಸಲು; ಮತ್ತು (ಸಿ) ಇಲಾಖೆಗಳಲ್ಲಿ ಲೆಕ್ಕಪರಿಶೋಧನಾ ಅಭಿಪ್ರಾಯಗಳಿಗೆ ಸೂಕ್ತ ಪ್ರತಿಕ್ರಿಯೆಗಾಗಿ ವ್ಯವಸ್ಥೆಯನ್ನು ಬಲಪಡಿಸುವುದು, ಇವುಗಳಿಗಾಗಿ ಕಾರ್ಯವಿಧಾನದ ಲಬ್ಧತೆಯನ್ನು ಖಚಿತಪಡಿಸಿಕೊಳ್ಳಲು ಶಿಫಾರಸು ಮಾಡಲಾಗಿದೆ.

# ಅಧ್ಯಾಯ 5

# ಆಂತರಿಕ ನಿಯಂತ್ರಣ ವ್ಯವಸ್ಥೆ

# ಅಧ್ಯಾಯ 5

# ಆಂತರಿಕ ನಿಯಂತ್ರಣ ವ್ಯವಸ್ಥೆ

## ಹಣಕಾಸು ಇಲಾಖೆ

## 5.1 ಹಣಕಾಸು ಇಲಾಖೆಯಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ

**ಮುಖ್ಯಾಂಶಗಳು**

ಹಣಕಾಸು ಇಲಾಖೆಯು ರಾಜಸ್ವಗಳನ್ನು ಹಾಗೂ ಇತರ ಹಣಕಾಸು ಮೂಲಗಳನ್ನು ಸಜ್ಜುಗೊಳಿಸುವುದು ಮತ್ತು ಸಂಗ್ರಹಿಸುವುದು, ಆಯವ್ಯಯದ ಅಂದಾಜು ಪತ್ರಗಳನ್ನು ತಯಾರಿಸುವುದು ಹಾಗೂ ಲಭ್ಯವಿರುವ ಸಂಪನ್ಮೂಲಗಳನ್ನು ಖರ್ಚುಗಳ ಹಾಗೂ ದಿನ-ನಿತ್ಯದ ನಗದು-ಶಿಲ್ಕುಗಳ ನಿರ್ವಹಣೆಯ ಬೇಡಿಕೆಗಳನ್ನು ಈಡೇರಿಸುವುದಕ್ಕಾಗಿ ಸರಿಯಾದ ರೀತಿಯಲ್ಲಿ ವಿತರಿಸುವುದು ಇವೇ ಮುಂತಾದವುಗಳನ್ನು ಒಳಗೊಂಡಂತೆ ರಾಜ್ಯ ಹಣಕಾಸುಗಳ ಒಟ್ಟಾರೆ ನಿರ್ವಹಣೆಗೆ ಜವಾಬ್ದಾರಿಯುತವಾಗಿದೆ. ಇಲಾಖೆಯ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಸಮೀಕ್ಷಿಸಲಾಗಿ, ಆಯವ್ಯಯ, ವೆಚ್ಚ ಹಾಗೂ ಆಡಳಿತಾತ್ಮಕ ನಿಯಂತ್ರಣಗಳು ನ್ಯೂನತೆಗಳಿಂದ ಕೂಡಿದ್ದು ಆಯವ್ಯಯದ ಅಂದಾಜು ಪತ್ರಗಳಲ್ಲಿ ಹೆಚ್ಚುವರಿ ಹಣಕಾಸು ಒದಗಿಸುವಲ್ಲಿಗೆ, ಹೆಚ್ಚಿನ ಪ್ರಮಾಣದಲ್ಲಿ ಹಣಕಾಸುಗಳನ್ನು ಮಾರ್ಗಪಲ್ಲಟ ಮಾಡುವಲ್ಲಿಗೆ ಹಾಗೂ ಮುಕ್ತ ಮಾರುಕಟ್ಟೆಯಲ್ಲಿ ವಿವೇಚನೆ ಇಲ್ಲದ ಸಾಲ ಮಾಡುವಿಕೆ ಇವುಗಳಿಗೆ ದಾರಿ ಮಾಡಿ ಕೊಟ್ಟಿತು ಎಂಬುದು ತಿಳಿದು ಬಂದಿತು.

**2003-07ರ ಅವಧಿಯಲ್ಲಿ ಇಲಾಖೆಗಳ ಅಂದಾಜುಗಳನ್ನು ಪರಿಶೀಲಿಸುವಲ್ಲಿನ ಹಣಕಾಸು ಇಲಾಖೆಯ ವಿಫಲತೆಯ ಕಾರಣ ನಿರಂತರ ಉಳಿತಾಯಗಳಿದ್ದವು. ಹಣಕಾಸು ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿದ್ದ ಇಲಾಖೆಗಳ ಉಳಿತಾಯಗಳೇ 31 ಮಾರ್ಚ್ 2007ಕ್ಕೆ ಅಂತ್ಯಗೊಂಡಂತೆ ರೂ.2,322.58 ಕೋಟಿಯಷ್ಟಿದ್ದವು.**

**(ಕಂಡಿಕೆ : 5.1.6.4)**

**ಹಣಕಾಸು ಇಲಾಖೆಯ ವೆಚ್ಚ ನಿಯಂತ್ರಣಗಳ ಅನುಪಸ್ಥಿತಿಯಲ್ಲಿ, ವಾಣಿಜ್ಯ ಹಾಗೂ ಕೈಗಾರಿಕೆಗಳ ಇಲಾಖೆಯು ಇಲಾಖಾ ಸಂಸ್ಥೆಗಳಿಗೆ ಹಾಗೂ ಒಂದು ಶಾಸನಬದ್ಧ ನಿಗಮಕ್ಕೆ ರೂ.402.04 ಕೋಟಿಯನ್ನು ಅಕ್ರಮವಾಗಿ ಬಿಡುಗಡೆ ಮಾಡಿತು ಹಾಗೂ ಅದು ರೂ.149.69 ಕೋಟಿ ಮೊತ್ತದಷ್ಟು ಸರ್ಕಾರದ ಹಣವನ್ನು ದಿಗ್ಬಂಧನಗೊಳಿಸುವಲ್ಲಿ ಪರಿಣಮಿಸಿತು.**

**(ಕಂಡಿಕೆ 5.1.7.2)**

**ಹಣಕಾಸು ಇಲಾಖೆಯ ಯಾವುದೇ ರೀತಿಯ ನಿಯಂತ್ರಣಗಳ ಅನುಪಸ್ಥಿತಿಯಲ್ಲಿ, ಪರೀಕ್ಷಾ-ತನಿಖೆ ಮಾಡಲ್ಪಟ್ಟ ಇಲಾಖೆಗಳು ರೂ.80.02 ಕೋಟಿ ಮೊತ್ತವನ್ನು, ಹಣವು ಕೈತಪ್ಪಿಹೋಗುವುದನ್ನು ತಡೆಗಟ್ಟಲು ಇಲಾಖಾ ಸಂಸ್ಥೆಗಳಿಗೆ ಅಥವಾ ಬ್ಯಾಂಕುಗಳ ಉಳಿತಾಯ ಖಾತೆಗಳಿಗೆ ಅಕ್ರಮವಾಗಿ ಮಾರ್ಗಪಲ್ಲಟ ಮಾಡಿದವು.**

**(ಕಂಡಿಕೆ : 5.1.7.3)**

**ಹಣಕಾಸು ಇಲಾಖೆಯು ಇಲಾಖಾ ಸಂಸ್ಥೆಗಳಿಗೆ ತನ್ನ ಬಾಧ್ಯತೆಗೂ ಮೀರಿ ಹೆಚ್ಚಾಗಿ ರೂ.4.25 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿತು.**

**(ಕಂಡಿಕೆ 5.1.7.1)**

**ದತ್ತಿ ಇಲಾಖೆಗೆ ರೂ.22.40 ಕೋಟಿ ಮೊತ್ತವನ್ನು ವಿವೇಚನೆ ಇಲ್ಲದೇ ಬಿಡುಗಡೆ ಮಾಡಿದುದು ಮಾರ್ಚ್ 2008ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಬಳಿ ರೂ.42.57 ಕೋಟಿ ಮೊತ್ತವು ಶೇಖರಣೆಯಾಗುವುದಕ್ಕೆ ಮಾರ್ಗ ಮಾಡಿಕೊಟ್ಟಿತು.**

**(ಕಂಡಿಕೆ 5.1.7.3)**

**ಸರ್ಕಾರವು ತನ್ನ ಹಣಕಾಸಿನ ಪರಿಸ್ಥಿತಿಯು ನಿರಾತಂಕವಾಗಿತ್ತಾದರೂ, 2005–08ರ ಅವಧಿಯಲ್ಲಿ ರೂ.1,164.92 ಕೋಟಿ ಮೊತ್ತದಷ್ಟು ಮುಕ್ತ ಮಾರುಕಟ್ಟೆಯ ಸಾಲಗಳಿಗೆ ಮೊರೆ ಹೋಯಿತು.**

**(ಕಂಡಿಕೆ 5.1.8.1)**

## 5.1.1 ಪರಿಚಯ

ಆಂತರಿಕ ನಿಯಂತ್ರಣಗಳು, ಕಾರ್ಯಾಚರಣೆಗಳನ್ನು ದಕ್ಷತೆಯಿಂದ ಹಾಗೂ ಪರಿಣಾಮಕಾರಿಯಾಗಿ ಮಾಡುವ, ಹಣಕಾಸಿನ ವರದಿಗಳು ಹಾಗೂ ಕಾರ್ಯಾಚರಣೆಯ ದತ್ತಾಂಶಗಳು ವಿಶ್ವಾಸಾರ್ಹವಾಗಿರುವ ಹಾಗೂ ಅನ್ವಯಗೊಳ್ಳಲ್ಪಡುವ ಕಾನೂನುಗಳು ಮತ್ತು ವಿಧಿ–ವಿಧಾನಗಳು ಸಂಸ್ಥೆಯ ಉದ್ದೇಶಗಳನ್ನು ಸಾಧಿಸುವ ರೀತಿಯಲ್ಲಿ ಅನುಸರಣೀಯವಾಗಿವೆ ಎಂಬುದನ್ನು ಔಚಿತ್ಯಪೂರ್ಣವಾಗಿ ಭರವಸೆ ನೀಡುವುದಕ್ಕಾಗಿ ಸ್ಥಾಪಿಸಿದ ಒಂದು ಸಂಸ್ಥೆಯ ಆಡಳಿತ ಪ್ರಕ್ರಿಯೆಗಳ ಒಂದು ಅವಿಭಾಜ್ಯ ಅಂಗ. ಹಣಕಾಸು ಇಲಾಖೆಯು ರಾಜಸ್ವಗಳನ್ನು ಹಾಗೂ ಇತರ ಹಣಕಾಸು ಮೂಲಗಳನ್ನು ಸಜ್ಜುಗೊಳಿಸುವುದು ಹಾಗೂ ಸಂಗ್ರಹಿಸುವುದು, ಆಯವ್ಯಯದ ಅಂದಾಜು ಪತ್ರಗಳನ್ನು ತಯಾರಿಸುವುದು ಹಾಗೂ ಖರ್ಚುಗಳ ಬೇಡಿಕೆಗಳನ್ನು ಈಡೇರಿಸುವುದಕ್ಕಾಗಿ ಸರಿಯಾದ ರೀತಿಯಲ್ಲಿ ವಿತರಿಸುವುದು, ನಿರ್ದಿಷ್ಟ ಉದ್ದೇಶಗಳಿಗಾಗಿ ಸಂಪನ್ಮೂಲಗಳನ್ನು ದಕ್ಷತೆಯಿಂದ ಖರ್ಚು ಮಾಡುವುದು, ಹಣಕಾಸಿನ ಹೊರ ಹರಿವನ್ನು ಜಾಗರೂಕತೆಯಿಂದ ನಿಯಂತ್ರಿಸುವುದು, ಸಾಧ್ಯವಾದಷ್ಟು ಮಟ್ಟಿಗೆ ಸಾಲಗಳನ್ನು ಪಡೆಯುವುದನ್ನು ಹಾಗೂ ಓವರ್‌ಡ್ರಾಫ್ಟ್ ತಪ್ಪಿಸುವುದಕ್ಕಾಗಿ ಹಣದ ಶಿಲ್ಕುಗಳ ದಿನ–ನಿತ್ಯದ ನಿರ್ವಹಣೆ ಇವೇ ಮುಂತಾದವುಗಳನ್ನು ಒಳಗೊಂಡಂತೆ ರಾಜ್ಯ ಹಣಕಾಸುಗಳ ಒಟ್ಟಾರೆ ನಿರ್ವಹಣೆಗೆ ಜವಾಬ್ದಾರಿಯುತವಾಗಿದೆ.

## 5.1.2 ಸಂಘಟನಾ ವ್ಯವಸ್ಥೆ

ಪ್ರಧಾನ ಕಾರ್ಯದರ್ಶಿಯವರು ಹಣಕಾಸು ಇಲಾಖೆಯ ಮುಖ್ಯಸ್ಥರಾಗಿದ್ದು ಇವರಿಗೆ ಸಹಾಯಕರಾಗಿ ಆಯವ್ಯಯ ಅಂದಾಜು ಪತ್ರಗಳು ಹಾಗೂ ಸಂಪನ್ಮೂಲಗಳು, ವೆಚ್ಚಗಳು ಮತ್ತು ಯೋಜನಾ ಮೇಲ್ವಿಚಾರಣೆಗಳನ್ನು ನಿರ್ವಹಿಸುವುದಕ್ಕಾಗಿ ಮೂರು ಕಾರ್ಯದರ್ಶಿಗಳಿದ್ದಾರೆ. ಇದಲ್ಲದೆ, ನಿಯಂತ್ರಕರು (ಲೆಕ್ಕಪತ್ರಗಳ ನಿರ್ವಹಣೆ), ಇಬ್ಬರು ಜಂಟಿ ಕಾರ್ಯದರ್ಶಿಗಳು, ಎಂಟು ಉಪ ಕಾರ್ಯದರ್ಶಿಗಳು, ಆರು ವಿಶೇಷ ಅಧಿಕಾರಿಗಳು ಹಾಗೂ 11 ಆಂತರಿಕ ಆರ್ಥಿಕ ಸಲಹೆಗಾರರು ರಾಜ್ಯ ಹಣಕಾಸುಗಳ ದಿನನಿತ್ಯದ ನಿರ್ವಹಣೆಯಲ್ಲಿ ಪ್ರಧಾನ ಕಾರ್ಯದರ್ಶಿಯವರಿಗೆ ಸಹಾಯ ಮಾಡುತ್ತಾರೆ. ಅಲ್ಲದೇ, ಹಣಕಾಸು ಇಲಾಖೆಯು ಆರು[1] ಇತರ ಇಲಾಖೆಗಳ ಮೇಲೆ ಆಡಳಿತಾತ್ಮಕ ನಿಯಂತ್ರಣವನ್ನು ಚಲಾಯಿಸುತ್ತದೆ.

## 5.1.3 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಹಣಕಾಸು ಇಲಾಖೆಯ ಆಂತರಿಕ ನಿಯಂತ್ರಣಗಳನ್ನು ಸಮೀಕ್ಷಿಸಲಾಯಿತು:

- ಆಯವ್ಯಯ ಹಾಗೂ ವೆಚ್ಚ ಮತ್ತು ಸಾಲಗಳ ಮರುಪಾವತಿ, ಮುಕ್ತ ಮಾರುಕಟ್ಟೆಯಲ್ಲಿ ಪಡೆದ ಸಾಲಗಳು ಹಾಗೂ ಸಾಂಸ್ಥಿಕ ಸಾಲಗಳಿಗೆ ನೀಡಿದ ಸರ್ಕಾರದ ಖಾತರಿಗಳ, ಮೇಲಿನ ನಿಯಂತ್ರಣಗಳ ಪರಿಣಾಮಕಾರಿತ್ವ;

[1] ವಾಣಿಜ್ಯ ತೆರಿಗೆ ಇಲಾಖೆ, ಖಜಾನೆ ಇಲಾಖೆ, ರಾಜ್ಯ ಅಬಕಾರಿ ಇಲಾಖೆ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ರಾಜ್ಯ ಲೆಕ್ಕಪತ್ರ ಇಲಾಖೆ ಹಾಗೂ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿಇಲಾಖೆ

- ಕರ್ನಾಟಕ ಹಣಕಾಸು ಕೈಪಿಡಿ, ಕರ್ನಾಟಕ ಆಯವ್ಯಯ ಕೈಪಿಡಿ, ಸಾದಿಲ್ವಾರು ವೆಚ್ಚಗಳ ಕೈಪಿಡಿ, ಹಾಗೂ ಕರ್ನಾಟಕ ಹಣಕಾಸು ಹೊಣೆಗಾರಿಕೆ ಅಧಿನಿಯಮ, 2002, ಇವುಗಳ ಪಾಲನೆ; ಹಾಗೂ
- ಆಂತರಿಕ ಲೆಕ್ಕಪರಿಶೋಧನೆಯ ಮೇಲ್ವಿಚಾರಣೆ ಮತ್ತು ಅದರ ಪರ್ಯಾಪ್ತತೆಗಾಗಿರುವ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳುವುದು

## 5.1.4 ಲೆಕ್ಕಪರಿಶೋಧನಾ ಮಾನದಂಡ

ಈ ಕೆಳಗಿನವುಗಳು ಲೆಕ್ಕಪರಿಶೋಧನೆಯ ಮಾನದಂಡಗಳಾಗಿದ್ದವು:

- ಕರ್ನಾಟಕ ಹಣಕಾಸು ಸಂಹಿತೆ,
- ಕರ್ನಾಟಕ ಆಯವ್ಯಯ ಕೈಪಿಡಿ,
- ಸಾದಿಲ್ವಾರು ಖರ್ಚುಗಳ ಕೈಪಿಡಿ,
- ಕರ್ನಾಟಕ ಹಣಕಾಸು ಹೊಣೆಗಾರಿಕೆ ಅಧಿನಿಯಮ, 2002, ಮತ್ತು
- ಕರ್ನಾಟಕ ಸರ್ಕಾರದ ಖಾತರಿಗಳ ಮೇಲಿನ ಪರಮಾವಧಿ ಅಧಿನಿಯಮ, 1994.

## 5.1.5 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಿವಿಧಾನ

ಹಣಕಾಸು ಇಲಾಖೆಯಿಂದ ಚಲಾಯಿಸಲ್ಪಡುತ್ತಿದ್ದ ಆಯವ್ಯಯ ನಿಯಂತ್ರಣಗಳು, ವೆಚ್ಚ ನಿಯಂತ್ರಣಗಳು ಹಾಗೂ ಆಡಳಿತಾತ್ಮಕ ನಿಯಂತ್ರಣಗಳ ಸಮರ್ಪಕತೆಯನ್ನು ಪರೀಕ್ಷಿಸುವ ಸಲುವಾಗಿ ಹಣಕಾಸು ಇಲಾಖೆಯ ಹಾಗೂ ಇತರ ಆಯ್ದ ಇಲಾಖೆಗಳ[2] ದಾಖಲೆಗಳ ಪರೀಕ್ಷಾ–ತನಿಖೆ (ಏಪ್ರಿಲ್–ಆಗಸ್ಟ್ 2008) ಮಾಡುವುದರ ಮೂಲಕ 2003–08ರ ಅವಧಿಗೆ ಸಮೀಕ್ಷೆಯನ್ನು ನಡೆಸಲಾಯಿತು. ಜೂನ್ 2008ರಲ್ಲಿ ನಡೆಸಲಾದ ಆರಂಭಿಕ ಸಮಾಲೋಚನಾ ಸಭೆಯಲ್ಲಿ ಲೆಕ್ಕಪರಿಶೋಧನೆಯ ಉದ್ದೇಶಗಳನ್ನು ಕಾರ್ಯದರ್ಶಿಯವರಿಗೆ (ಆಯವ್ಯಯ ಹಾಗೂ ಸಂಪನ್ಮೂಲಗಳು) ವಿವರಿಸಲಾಯಿತು ಹಾಗೂ ನವೆಂಬರ್ 2008ರಲ್ಲಿ ನಡೆಸಲಾದ ಮುಕ್ತಾಯ ಸಮಾಲೋಚನಾ ಸಭೆಯಲ್ಲಿ ಲೆಕ್ಕಪರಿಶೋಧನಾ ಸಮೀಕ್ಷೆಯಲ್ಲಿ ಕಂಡುಬಂದ ಅಂಶಗಳನ್ನು ಪ್ರಧಾನ ಕಾರ್ಯದರ್ಶಿಯವರ ಜೊತೆ ಚರ್ಚಿಸಲಾಯಿತು. ಪ್ರಧಾನ ಕಾರ್ಯದರ್ಶಿಯವರು ಈ ಅಂಶಗಳ ಬಗ್ಗೆ ಅಗತ್ಯ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳಲು ಒಪ್ಪಿಕೊಂಡರು. ಸರ್ಕಾರದ ಉತ್ತರಗಳನ್ನು (ನವೆಂಬರ್ 2008) ಈ ಸಮೀಕ್ಷೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

## ಲೆಕ್ಕಪರಿಶೋಧನೆಯಲ್ಲಿ ಕಂಡುಬಂಡ ಅಂಶಗಳು

## 5.1.6 ಆಯವ್ಯಯ ನಿಯಂತ್ರಣಗಳು

### 5.1.6.1 ಇಲಾಖಾ ಮುಖ್ಯಸ್ಥರುಗಳಿಂದ ಮುಂಗಡ ಅಂದಾಜುಗಳನ್ನು ಒದಗಿಸುವಲ್ಲಿನ ವಿಳಂಬ

ಇಲಾಖಾ ಮುಖ್ಯಸ್ಥರುಗಳು ನಿಗದಿತ ನಮೂನೆಗಳಲ್ಲಿ ಹಾಗೂ ನಿಗದಿತ ದಿನಾಂಕಗಳೊಳಗೆ ಒದಗಿಸಿದ ಅಂದಾಜುಗಳ ಆಧಾರದ ಮೇರೆಗೆ ಹಣಕಾಸು ಇಲಾಖೆಯು ಆಯವ್ಯಯ ಮುಂಗಡ ಪತ್ರವನ್ನು ತಯಾರಿಸಬೇಕೆಂದು ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 21 ನಿರ್ದಿಷ್ಟಪಡಿಸಿದೆ. ಹಣಕಾಸು

[2] ಸಹಕಾರ, ವಾಣಿಜ್ಯ ಮತ್ತು ಕೈಗಾರಿಕೆ, ಇಂಧನ, ಗೃಹ ಮತ್ತು ಸಾರಿಗೆ, ವಸತಿ, ನಗರಾಭಿವೃದ್ಧಿ ಹಾಗೂ ವಾರ್ತೆ, ಯುವಜನ ಸೇವೆಗಳು ಮತ್ತು ಕ್ರೀಡೆಗಳು,

ಇಲಾಖೆಯು ಅಂದಾಜುಗಳ ಪ್ರತೀ ಬಾಬ್ತನ್ನೂ ಇಲಾಖಾ ಮುಖ್ಯಸ್ಥರು ಒದಗಿಸಿದ ವಿವರಗಳನ್ನು ಮತ್ತು ಸಂಬಂಧಿತ ಆಡಳಿತಾತ್ಮಕ ಇಲಾಖೆಗಳ ಶಿಫಾರಸುಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಬೇಕೆಂದು ಇದೇ ಕೈಪಿಡಿಯ ಕಂಡಿಕೆ 187 ನಿಗದಿಪಡಿಸಿದೆ.

**ಹಣಕಾಸು ಇಲಾಖೆಯಲ್ಲಿ ಮುಂಗಡಪತ್ರ ಅಂದಾಜುಗಳ ಸ್ವೀಕೃತಿಯಲ್ಲಿನ ವಿಳಂಬ ಮುಂಗಡ ಪತ್ರದ ಸಮಯೋಚಿತ ತಯಾರಿಕೆಯ ಮೇಲೆ ಪ್ರಭಾವ ಬೀರಿತು**

ಆದಾಗ್ಯೂ, ಪರೀಕ್ಷಾ–ತನಿಖೆ ಕೈಗೊಂಡ ಎಂಟು ಇಲಾಖೆಗಳ ಪೈಕಿ ನಾಲ್ಕು[3] ಇಲಾಖೆಗಳಿಂದ 2003–08ರ ಅವಧಿಗೆ ಮುಂಗಡಪತ್ರಗಳ ಅಂದಾಜುಗಳನ್ನು ಸಲ್ಲಿಸುವಲ್ಲಿ 10 ರಿಂದ 66 ದಿನಗಳಷ್ಟು ವಿಳಂಬವಾಗಿದ್ದವು ಎಂಬುದನ್ನು ಗಮನಿಸಲಾಯಿತು. ಹಣಕಾಸು ಇಲಾಖೆಯು ಇಲಾಖೆಗಳಿಂದ ಮುಂಗಡ ಪತ್ರಗಳ ಅಂದಾಜುಗಳ ಸಮಯೋಚಿತ ಸ್ವೀಕೃತಿಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ನಿಯಂತ್ರಣ ವಹಿಯನ್ನು ಇಟ್ಟಿರಲಿಲ್ಲ. 2003–07ರ ಅವಧಿಗಳಲ್ಲಿ ಸ್ವೀಕರಿಸಲ್ಪಟ್ಟ ಇಲಾಖಾ ಮುಖ್ಯಸ್ಥರುಗಳ ಮುಂಗಡ ಪತ್ರಗಳ ಅಂದಾಜುಗಳು ಹಾಗೂ ಆಡಳಿತಾತ್ಮಕ ಇಲಾಖೆಗಳ ಶಿಫಾರಸುಗಳನ್ನು ಲೆಕ್ಕಪರಿಶೋಧನೆಯ ಪರಿಶೀಲನೆಗೆ ಒದಗಿಸಲಿಲ್ಲ. ತತ್ಪರಿಣಾಮವಾಗಿ, ಇವುಗಳು ಮುಂಗಡ ಪತ್ರಗಳ ಅಂದಾಜುಗಳನ್ನು ತಯಾರಿಸುವ ಮೊದಲು ಹಣಕಾಸು ಇಲಾಖೆಯಲ್ಲಿ ಪರಿಶೀಲಿಸಲ್ಪಟ್ಟವೋ ಅಥವಾ ಇಲ್ಲವೋ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿ ಕೊಳ್ಳಲಾಗಲಿಲ್ಲ. ಸರ್ಕಾರವು ಒಂದು ವೀಕ್ಷಣಾ ವಹಿಯನ್ನು ನಿರ್ವಹಿಸಲು ಒಪ್ಪಿಕೊಂಡಿತು.

### 5.1.6.2 ಇಲಾಖಾ ಅಂದಾಜುಗಳ ಪರಿಶೀಲನೆಯ ಕೊರತೆಯಿಂದಾಗಿ ಸಂಭವಿಸಿದ ಹೆಚ್ಚುವರಿ ಅನುವು

**ಹಣಕಾಸು ಇಲಾಖೆಯು ರೂ.10.49 ಕೋಟಿಯ ಅನರ್ಹ ಪ್ರಸ್ತಾವನೆಗಳನ್ನು ಪರಿಶೀಲಿಸದೆ ಮುಂಗಡ ಪತ್ರದಲ್ಲಿ ಸೇರಿಸಿತು**

ಪ್ರವಾಸೋದ್ಯಮ ಇಲಾಖೆಯು 2004–05ರ ತನ್ನ ಪೂರಕ ಅನುದಾನಗಳಿಗೆ ಸಂಬಂಧಿಸಿದ ಆಯವ್ಯಯ ಪ್ರಸ್ತಾಪನೆಗಳಲ್ಲಿ ರೂ.10.49 ಕೋಟಿ ಮೊತ್ತಕ್ಕೆ ಪ್ರಸ್ತಾವನೆಗಳನ್ನು ಪುನರಾವರ್ತನೆ ಮಾಡಿದ (ಒಂದು ಪ್ರಕರಣದಲ್ಲಿ ರೂ.2.88 ಕೋಟಿ), ಹೆಚ್ಚುವರಿಯಾಗಿ ಕೋರಿದ (10 ಪ್ರಕರಣಗಳು–ರೂ.2.42 ಕೋಟಿ) ಹಾಗೂ ಎರಡು ಬಾರಿ ಬೇಡಿದ (ಆರು ಪ್ರಕರಣಗಳು–ರೂ.5.19 ಕೋಟಿ) ಅನರ್ಹ ಪ್ರಸ್ತಾವನೆಗಳನ್ನು ಸೇರಿಸಿತ್ತು ಎಂಬುದು ದಾಖಲೆಗಳಿಂದ ತಿಳಿದುಬಂದಿತು. ಈ ನ್ಯೂನತೆಗಳನ್ನು, ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 187ರ ಅನ್ವಯ ಅಗತ್ಯವಿರುವಂತೆ ಹಣಕಾಸು ಇಲಾಖೆಯು ಸೂಕ್ಷ್ಮವಾಗಿ ಪರಿಶೀಲಿಸಲಿಲ್ಲ ವಾದ್ದರಿಂದ ಹೆಚ್ಚುವರಿ ಹಣವನ್ನು ಅನುವು ಮಾಡುವಲ್ಲಿ ಪರಿಣಮಿಸಿತು. ಆದಾಗ್ಯೂ ಇಲಾಖೆಯು ಹೆಚ್ಚುವರಿ ಹಣವನ್ನು ಅಧ್ಯರ್ಪಣೆ ಮಾಡಲಿಲ್ಲ ಅಥವಾ ಹಣಕಾಸು ಇಲಾಖೆಯು ಈ ಹಣವನ್ನು ಅಗತ್ಯವಿರುವ ಬೇರೆ ಇಲಾಖೆಗಳಿಗೆ ಮರುಹಂಚಿಕೆ ಮಾಡಲು ಹಿಂತೆಗೆದುಕೊಳ್ಳಲೂ ಇಲ್ಲ.

### 5.1.6.3 ಇಲಾಖಾ ಅಂದಾಜುಗಳ ನ್ಯೂನತೆಗಳ ಕಾರಣ ನಿಧಿಯನ್ನು ಹೆಚ್ಚುವರಿಯಾಗಿ ಅನುವು ಮಾಡಿದ್ದು

**ಹಣಕಾಸು ಇಲಾಖೆಯ ಆಯವ್ಯಯ ಅಂದಾಜಿನಲ್ಲಿ ತಪ್ಪುಗಳನ್ನು ಪತ್ತೆ ಮಾಡುವಲ್ಲಿನ ವಿಫಲತೆಯು ಹೆಚ್ಚುವರಿ ನಿಧಿಗಳ ಅವಕಾಶದಲ್ಲಿ ಪರಿಣಮಿಸಿತು**

ನೇಕಾರರು ಸಹಕಾರಿ ಸಾಲ ಸಂಸ್ಥೆಗಳಿಂದ ಪಡೆದಿದ್ದ ಸಾಲಗಳ ಒಂದು ಭಾಗವನ್ನು ಮನ್ನಾ ಮಾಡುವ ಉದ್ದೇಶದಿಂದ ಹಣಕಾಸು ಇಲಾಖೆಯು ಕೈಮಗ್ಗ ಮತ್ತು ವಸ್ತ್ರಗಳ ಇಲಾಖೆಗೆ ರೂ.38.04 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿತು (2006–08), ಪ್ರತಿಯಾಗಿ ಕೈಮಗ್ಗ ಮತ್ತು ವಸ್ತ್ರಗಳ ಇಲಾಖೆಯು ಈ ಮೊತ್ತವನ್ನು ಸಹಕಾರಿ ಸಾಲ ಸಂಸ್ಥೆಗಳಿಗೆ ವಿತರಿಸುವುದಕ್ಕಾಗಿ ಸಹಕಾರಿ ಸಂಘಗಳ ನಿಬಂಧಕರಿಗೆ ಬಿಡುಗಡೆ ಮಾಡಿತು. ಸಹಕಾರಿ ಸಂಘಗಳ ನಿಬಂಧಕರು ರೂ.35.10 ಕೋಟಿ ಮೊತ್ತವನ್ನು ಮಾತ್ರ ಬಿಡುಗಡೆ ಮಾಡಿದರು ಹಾಗೂ ಉಳಿದ ರೂ.2.94 ಕೋಟಿ ಮೊತ್ತವನ್ನು ತಮ್ಮ ವೈಯಕ್ತಿಕ ಠೇವಣಿ ಖಾತೆಯಲ್ಲಿ ಉಳಿಸಿಕೊಂಡರು. ಈ ಸಂಬಂಧವಾಗಿ ಸರ್ಕಾರದ ನಿಖರ ಬಾಧ್ಯತೆಯು ರೂ.33.06 ಕೋಟಿ ಮಾತ್ರ ಇದ್ದಾಗ್ಯೂ ಇಲಾಖೆಯು ಅನುದಾನದ ಅಗತ್ಯತೆಯನ್ನು ಹೆಚ್ಚುವರಿಯಾಗಿ ಅಂದಾಜಿಸಿತು ಎಂಬುದು ದಾಖಲೆಗಳಿಂದ ತಿಳಿದುಬಂದಿತು. ಸಹಕಾರಿ ಸಾಲ ಸಂಸ್ಥೆಗಳು ಉಳಿದ ರೂ.2.04 ಕೋಟಿಯನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡದೆ ತಮ್ಮಲ್ಲೇ ಉಳಿಸಿಕೊಂಡವು. ಈ ರೀತಿ ಮುಂಗಡ

[3] ವಾರ್ತಾ, ಯುವಜನ ಸೇವೆಗಳು ಹಾಗೂ ಕ್ರೀಡೆಗಳು, ವಾಣಿಜ್ಯ ಹಾಗೂ ಕೈಗಾರಿಕೆಗಳು, ಸಹಕಾರ ಸಂಘಗಳ ನಿಬಂಧಕರು

ಪತ್ರಗಳಲ್ಲಿ ಅನುವುಗಳನ್ನು ಮಾಡುವ ಮೊದಲು ಅಂದಾಜುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವಲ್ಲಿ ಹಣಕಾಸು ಇಲಾಖೆಯು ಕೂಡಾ ವಿಫಲವಾಯಿತು ಹಾಗೂ ಅದು ರೂ.4.98 ಕೋಟಿ ಉಳಿತಾಯವಾಗುವಲ್ಲಿ ಮತ್ತು ಅದನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡದಿರುವದಲ್ಲಿ ಪರಿಣಮಿಸಿತು. ಈ ಸಂಪೂರ್ಣ ಮೊತ್ತವನ್ನು ತನ್ನ ಲೆಕ್ಕಕ್ಕೆ ಜಮಾ ಮಾಡಿಕೊಳ್ಳುವುದಾಗಿ ಸರ್ಕಾರವು ಉತ್ತರಿಸಿತು.

### 5.1.6.4 ನಿರಂತರವಾಗಿದ್ದ ಉಳಿತಾಯಗಳು

**ಇಲಾಖಾ ಅಂದಾಜುಗಳ ಸೂಕ್ಷ್ಮ ಪರಿಶೀಲನೆ ಮಾಡದ ಕಾರಣ ನಿರಂತರ ಉಳಿತಾಯಗಳಿದ್ದವು**

ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 108ರ ಪ್ರಕಾರ ಅಂದಾಜುಗಳು ಸಾಧ್ಯವಾದಷ್ಟು ಮಟ್ಟಿಗೆ ನೈಜತೆಗೆ ಸಮೀಪವಾಗಿ ಹಾಗೂ ಕರಾರುವಾಕ್ಕಾಗಿ ಇರಬೇಕು ಹಾಗೂ ಸೇರಿಸಬೇಕಾಗಿರುವ ಅನುವುಗಳು ಆ ವರ್ಷದಲ್ಲಿ ನಿಖರವಾಗಿ ಪಾವತಿಸಬೇಕಾಗಿರುವ ಅಥವಾ ಖರ್ಚು ಮಾಡಬೇಕಾಗಿರುವ ಅಂಶಗಳನ್ನು ಆಧರಿಸಿರಬೇಕು. ಒಂದು ಅಂದಾಜಿನಲ್ಲಿ ಮಾಡಿದ ಯಾವುದೇ ತಪ್ಪಿಸಬಹುದಾದ ಹೆಚ್ಚುವರಿ ಅನುವು ಮಂಜೂರಾದ ಅಂದಾಜನ್ನು ಮೀರಿ ಮಾಡಿದ ವೆಚ್ಚದಷ್ಟೇ ಗುರುತರವಾದ ಆರ್ಥಿಕ ಅಕ್ರಮವೆನಿಸಿಕೊಳ್ಳುತ್ತದೆ.

ಈ ಕೆಳಗಿನ ಇಲಾಖೆಗಳಲ್ಲಿ 2003–07ರ ಅವಧಿಯಲ್ಲಿ ಮೇಲಿನ ಅನುವುಗಳಿಗೆ ವಿರುದ್ಧವಾಗಿ ಉಳಿತಾಯಗಳು ನಿರಂತರವಾಗಿದ್ದವು:

**ಕೋಷ್ಟಕ 1 : ಆಯ್ದ ಇಲಾಖೆಗಳಲ್ಲಿ ನಿರಂತರವಾಗಿದ್ದ ಉಳಿತಾಯ**

(ಕೋಟಿ ರೂಪಾಯಿಗಳಲ್ಲಿ)

| ಅನುದಾನದ ಹೆಸರು | 2003–04 | | 2004–05 | | 2005–06 | | 2006–07 | |
|---|---|---|---|---|---|---|---|---|
| | ಉಳಿತಾಯ | ಮುಂಗಡ ಪತ್ರಗಳ ಹಂಚಿಕೆಗೆ ಶೇಕಡಾವಾರು | ಉಳಿತಾಯ | ಮುಂಗಡ ಪತ್ರಗಳ ಹಂಚಿಕೆಗೆ ಶೇಕಡಾವಾರು | ಉಳಿತಾಯ | ಮುಂಗಡ ಪತ್ರಗಳ ಹಂಚಿಕೆಗೆ ಶೇಕಡಾವಾರು | ಉಳಿತಾಯ | ಮುಂಗಡ ಪತ್ರಗಳ ಹಂಚಿಕೆಗೆ ಶೇಕಡಾವಾರು |
| ಕೃಷಿ ಹಾಗೂ ತೋಟಗಾರಿಕೆ | 154.26 | 20.54 | 209.63 | 21 | 428.75 | 39 | 394.01 | 31.06 |
| ಹಣಕಾಸು | 921.18 | 32 | 1354.93 | 25 | 1586.10 | 28 | 2322.58 | 38 |
| ಆಡಳಿತ ಸುಧಾರಣಾ ಇಲಾಖೆ | 51.67 | 23.75 | 55.60 | 21.68 | 44.61 | 19.86 | 91.57 | 24.89 |
| ಮೂಲ ಸೌಕರ್ಯಗಳು | 118.05 | 65 | 40.49 | 30 | 20.85 | 9.13 | 125.35 | 32.37 |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 586.93 | 48 | 198.12 | 13 | 260.17 | 13.70 | 455.91 | 18.38 |
| ಅರಣ್ಯ ಹಾಗೂ ಪರಿಸರ | 106.86 | 28.59 | 79.82 | 23.43 | 52.85 | 16.16 | 69.62 | 16.54 |
| ನಗರಾಭಿವೃದ್ಧಿ | 352.83 | 20.38 | 224.71 | 15.48 | 376.66 | 19.17 | 1175.07 | 29.43 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 145.19 | 13.17 | 141.59 | 12.40 | 276.39 | 19.98 | 311.25 | 19.25 |
| ಕನ್ನಡ ಮತ್ತು ಸಂಸ್ಕೃತಿ | 5.93 | 12.90 | 8.98 | 25.10 | 5.78 | 11.85 | 16.90 | 14.02 |
| ಯೋಜನೆ ಹಾಗೂ ಸಂಖ್ಯಾ ಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ | 6.40 | 23.11 | 20.96 | 17.98 | 88.82 | 25.02 | 69.52 | 13.30 |

ಈ ಇಲಾಖೆಗಳಲ್ಲಿ 2003–07 ಸಾಲುಗಳಾದ್ಯಂತ ಉಳಿತಾಯ ನಿರಂತರವಾಗಿತ್ತು ಹಾಗೂ ಹಣಕಾಸು ಇಲಾಖೆಯೊಂದರಲ್ಲೇ ಉಳಿತಾಯ ರೂ.921.18 ಕೋಟಿಯಿಂದ ರೂ.2,322.58 ಕೋಟಿಯಷ್ಟು ಸಂಭವಿಸಿತ್ತು. ಇಲಾಖೆಗಳ ಆಯವ್ಯಯ ಅಂದಾಜು ಪ್ರಸ್ತಾವನೆಗಳ ಪರಿಣಾಮಕಾರಿಯಾದ ಪರಿಶೀಲನೆ ಹಾಗೂ ಖರ್ಚುಗಳ ಮಾಸಿಕ ಸಮೀಕ್ಷೆ ಮತ್ತು ಹಣಕಾಸು ವರ್ಷದ ಉಳಿದ ಭಾಗಕ್ಕೆ ಇದ್ದ ಬಾಧ್ಯತೆ ಹಾಗೂ ಹೊಣೆಗಾರಿಕೆಗಳ ಸೂಕ್ಷ್ಮ ಅಂದಾಜುಗಳನ್ನು ಹಣಕಾಸು ಇಲಾಖೆಯು ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 187 ಹಾಗೂ 263ರ ಪ್ರಕಾರ ಮಾಡಲಿಲ್ಲವಾದ್ದರಿಂದ ಅದು ವರ್ಷವರ್ಷವೂ ಉಳಿತಾಯವಾಗುವಲ್ಲಿ ಪರಿಣಮಿಸಿತು.

ಉಳಿತಾಯಕ್ಕೆ ಸಹಾಯವಾದ ಕೆಳಗಿನ ಅಂಶಗಳನ್ನು ಸಹ ಗಮನಿಸಲಾಯಿತು.

### ಇಲಾಖೆಯಿಂದ ಯಾವುದೇ ಪ್ರಸ್ತಾವನೆ ಇಲ್ಲದೇ ಮುಂಗಡ ಪತ್ರದಲ್ಲಿ ಅನುವು ಮಾಡಿದ ಕಾರಣ ಸಂಭವಿಸಿದ ಉಳಿತಾಯ

ಇಲಾಖೆಯ ಯಾವುದೇ ನಿರ್ಧಿಷ್ಟ ಪ್ರಸ್ತಾವನೆ ಇಲ್ಲದೆಯೇ ಹಣಕಾಸು ಇಲಾಖೆಯು ರಾಜ್ಯ ಅಬಕಾರಿ ಇಲಾಖೆಯ ಆಧುನೀಕರಣ ಹಾಗೂ ಪುನರ್–ರಚನೆಗಾಗಿ ರೂ.26.44 ಕೋಟಿ ಮೊತ್ತವನ್ನು (2007–08) ಅನುವು ಮಾಡಿತು ಹಾಗೂ ಅದಕ್ಕೆ ಪ್ರತಿಯಾಗಿ ಮಾರ್ಚ್ 2008ರ ಅಂತ್ಯಕ್ಕೆ ರೂ.63.68 ಲಕ್ಷ ಮೊತ್ತವನ್ನು ಮಾತ್ರ ಬಳಸಿಕೊಳ್ಳಲಾಯಿತು. ಪುನರ್–ರಚನೆಗಾಗಿ ಇಲಾಖೆಯು ಕ್ರಿಯಾ–ಯೋಜನೆಯನ್ನು ತಯಾರಿಸಿರಲಿಲ್ಲ. ಇಲಾಖೆಯಿಂದ ಮುಂಗಡ ಪತ್ರ ಅಂದಾಜುಗಳನ್ನು ಪಡೆದುಕೊಳ್ಳುವಲ್ಲಿನ ಹಾಗೂ ಅದನ್ನು ಪರಿಶೀಲಿಸುವಲ್ಲಿನ ಹಣಕಾಸು ಇಲಾಖೆಯ ವಿಫಲತೆಯು, ಇತರ ಉದ್ದೇಶಗಳಿಗೆ ಲಾಭದಾಯಕವಾಗಿ ಬಳಸಿಕೊಳ್ಳಬಹುದಾಗಿದ್ದ ಹಣಕಾಸಿನ ಅನಗತ್ಯ ಅನುವುಗಳನ್ನು ಮಾಡುವಲ್ಲಿ ಪರಿಣಮಿಸಿತು. ಸರ್ಕಾರವು ಆಯವ್ಯಯದ ಮುಂಗಡ ಪತ್ರದಲ್ಲಿನ ಹೆಚ್ಚುವರಿ ಅನುದಾನವನ್ನು ಸಮರ್ಥಿಸಿಕೊಳ್ಳಲಾಗಲಿಲ್ಲ.

### ಬಳಕೆಯಲ್ಲಿಲ್ಲದ ಖರ್ಚುಗಳ ಬಾಬ್ತುಗಳಿಗೆ ಮುಂಗಡ ಪತ್ರದಲ್ಲಿ ಅನುವು ಮಾಡಿದ್ದು

ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 109ರ ಅನ್ವಯ ಅಂದಾಜು ಮಾಡುವ ಅಧಿಕಾರಿಯು ಪ್ರತೀ ಬಾಬಿಗೂ ಸೂಕ್ಷ್ಮವಾದ ವೈಯಕ್ತಿಕ ಗಮನವನ್ನು ನೀಡಬೇಕು ಹಾಗೂ ಬಳಕೆಯಲ್ಲಿಲ್ಲದ[4] ವೆಚ್ಚಗಳ ಬಾಬ್ತುಗಳನ್ನು ಕೈಬಿಡಬೇಕು. ಮುಂದುವರಿದು, ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 114ರಂತೆ ತಡೆಹಿಡಿದಿರುವ ಅಥವಾ ಅವಿರತವಾಗಿ ಖಾಲಿ ಇರುವ ಹುದ್ದೆಗಳಿಗೆ ಮುಂಗಡ ಪತ್ರದಲ್ಲಿ ಅನುವುಗಳನ್ನು ತಪ್ಪಿಸಲು ಕಾರ್ಯತತ್ಪರರಾಗಿರಬಹುದಾದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಂಬಳವನ್ನು ಮಾತ್ರ ಅಂದಾಜು ಮಾಡಿ ಮಂಜೂರಾದ ಸಂಖ್ಯಾಬಲವನ್ನು ಗಣನೆಗೆ ತೆಗೆದುಕೊಳ್ಳದೇ ಪ್ರತಿಯೊಬ್ಬರಿಗೂ ಕೊಡಬೇಕಾಗಿರುವ ವಾಸ್ತವಿಕ ಸಂಬಳದ ಅಂದಾಜುಗಳನ್ನು ತಯಾರಿಸಬೇಕು.

**ಬಳಕೆಯಲ್ಲಿಲ್ಲದ ಖರ್ಚುಗಳ ಬಾಬ್ತುಗಳು ಮತ್ತು ಖಾಲಿ ಹುದ್ದೆಗಳ ಮೇಲೆ ರೂ.105.84 ಕೋಟಿಯಿಂದ ರೂ.815.98 ಕೋಟಿಯಷ್ಟು ಅವಕಾಶವನ್ನು ಆಯವ್ಯಯದಲ್ಲಿ ಮಾಡಲಾಗಿತ್ತು**

ಈ ಅನುವುಗಳಿಗೆ ವ್ಯತಿರಿಕ್ತವಾಗಿ, 2004–07ರ ಅವಧಿಯಲ್ಲಿ ಬಳಕೆಯಲ್ಲಿಲ್ಲದ ಹಾಗೂ ಖಾಲಿ ಇದ್ದ ಹುದ್ದೆಗಳಿಗೆ ಸಂಬಂಧಿಸಿದಂತೆ ಹಣಕಾಸು ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲೇ ಇದ್ದ ಇಲಾಖೆಗಳಿಗೆ ಸಂಬಂಧಿಸಿದಂತೆ ಮುಂಗಡ ಪತ್ರದಲ್ಲಿ ರೂ.105.84 ಕೋಟಿಯಿಂದ ರೂ.815.98 ಕೋಟಿಯವರೆಗೆ ಅನುವು ಮಾಡಲ್ಪಟ್ಟಿತ್ತು. ಹಿಂದಿನ ವರ್ಷಗಳಲ್ಲಿ ಬಳಕೆಯಲ್ಲಿಲ್ಲದ ಈ ಬಾಬ್ತುಗಳ ಅಡಿಯಲ್ಲಿ ಮಾಡಿದ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಮುಂಗಡ ಪತ್ರದಲ್ಲಿನ ಪ್ರಾಸ್ತಾವನೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಹಣಕಾಸನ್ನು ಹೆಚ್ಚುವರಿಯಾಗಿ ಅನುವು ಮಾಡುವುದನ್ನು ತಪ್ಪಿಸುವ ವ್ಯವಸ್ಥೆಯು ಇರಲಿಲ್ಲ. ಈ ಅನುವುಗಳನ್ನು ಅಧ್ಯರ್ಪಣೆ ಮಾಡಿ ಅಗತ್ಯವಿರುವ ವಿಭಾಗಗಳಿಗೆ ಪುನರ್–ಹಂಚುವ ಕ್ರಮವನ್ನೂ ಸಹ ಕೈಗೊಳ್ಳಲಿಲ್ಲ. ಪೂರಕ ಅಂದಾಜುಗಳನ್ನು ತಪ್ಪಿಸಲು ಈ ಅನುವುಗಳು ಅಗತ್ಯವಾಗಿದ್ದವು ಎಂದು ಸರ್ಕಾರವು ವಾದಿಸಿತು. ಆದರೆ, ಈ ಕ್ರಮವು ಕೈಪಿಡಿಯ ಅನುವುಗಳಿಗೆ ವ್ಯತಿರಿಕ್ತವಾಗಿದ್ದು ಉಳಿತಾಯಗಳಿಗೆ ಮಾರ್ಗ ಮಾಡಿಕೊಟ್ಟಿತ್ತು.

[4] ಬಳಕೆಯಲ್ಲಿಲ್ಲದ ಬಾಬ್ತುಗಳೆಂದರೆ ಹಿಂದಿನ ವರ್ಷಗಳಲ್ಲಿ ಯಾವುದೇ ಖರ್ಚುಗಳನ್ನು ಮಾಡದಿದ್ದರೂ ಅನುಕ್ರಮಿತವಾಗಿ ಮುಂಗಡ ಪತ್ರದಲ್ಲಿ ಅನುವು ಮಡಿದ್ದ ಬಾಬ್ತುಗಳು

**ಹೆಚ್ಚುವರಿ ಉಳಿತಾಯದಲ್ಲಿ ಪರಿಣಮಿಸಿದ ಅನಗತ್ಯ ಪೂರಕ ಅನುವುಗಳು**

**ಹಣಕಾಸು ಇಲಾಖೆಯು ರೂ.2,022 ಕೋಟಿ ಪೂರಕ ಅನುದಾನವನ್ನು ಅಗತ್ಯತೆ ಇಲ್ಲದೆಯೇ ಬಿಡುಗಡೆ ಮಾಡಿತು**

ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 283 ಹಾಗೂ 284ರಂತೆ ಧನ ವಿನಿಯೋಗ ಅಧಿನಿಯಮದಡಿ ಆ ವರ್ಷಕ್ಕೆ ಮಂಜೂರು ಮಾಡಲ್ಪಟ್ಟ ಅನುದಾನ ಅಥವಾ ವಿನಿಯೋಜನೆಯಲ್ಲಿ ಸೇರಿಸಲ್ಪಟ್ಟಿದ್ದ ಮೊತ್ತವು ಸಾಕಾಗುವುದಿಲ್ಲವೆಂದು ಕಂಡುಬಂದಲ್ಲಿ ಪೂರಕ ಅನುದಾನಗಳನ್ನು ಅನುವು ಮಾಡತಕ್ಕದ್ದು ಹಾಗೂ ಸಂಬಂಧಿಸಿದ ಅಧಿಕಾರಿಯು ಮೂಲ ಇಲಾಖಾ ಅಂದಾಜುಗಳನ್ನು ತಯಾರಿಸುವ ಸಮಯದಲ್ಲಿ ಹೆಚ್ಚುವರಿ ಅನುವನ್ನು ಮುಂಚಿತವಾಗಿ ಗ್ರಹಿಸಲು ಸಾಧ್ಯವಿರಲಿಲ್ಲ ಹಾಗೂ ಅಂತಹ ಪೂರಕ ಅನುವುಗಳು ಸಾರ್ವಜನಿಕರ ಅತ್ಯುತ್ತಮ ಹಿತದೃಷ್ಟಿಯಿಂದ ಕೂಡಿದ್ದವು ಎಂಬುದನ್ನು ಸಮರ್ಥಿಸಿಕೊಂಡಲ್ಲಿ ಮಾತ್ರ ಪೂರಕ ಅನುದಾನಗಳನ್ನು ಅನುವು ಮಾಡಬೇಕು.

ಈ ಅನುವುಗಳಿಗೆ ವ್ಯತಿರಿಕ್ತವಾಗಿ ಹಣಕಾಸು ಇಲಾಖೆಯು ತನ್ನದೇ ಆಡಳಿತಾತ್ಮಕ ನಿಯಂತ್ರಣವಿರುವ ಇಲಾಖೆಗಳಿಗೆ 2003–07ರ ಅವಧಿಯಲ್ಲಿ ರೂ.2,022 ಕೋಟಿ ಮೊತ್ತದಷ್ಟು ಪೂರಕ ಅನುದಾನಗಳನ್ನು ಅನುವು ಮಾಡಿತು. ಮೂಲ ಅನುವುಗಳ ಮೊತ್ತ ರೂ.20,111.59 ಕೋಟಿ ಸೇರಿದಂತೆ ಒಟ್ಟು ಅನುವು ರೂ.22,133.59 ಕೋಟಿಯಷ್ಟಾಗಿತ್ತು. ಆದರೆ ಒಟ್ಟು ವೆಚ್ಚ ಕೇವಲ ರೂ.15,963.23 ಕೋಟಿ ಮೊತ್ತದಷ್ಟು ಮಾತ್ರವಾಗಿತ್ತಾದ್ದರಿಂದ ಪೂರಕ ಅನುದಾನಗಳ ಅನುವು ಸಂಪೂರ್ಣವಾಗಿ ಅಸಮರ್ಥನೀಯವಾಗಿತ್ತು. ತನ್ನ ಆಡಳಿತಾತ್ಮಕ ನಿಯಂತ್ರಣದಲ್ಲಿದ್ದ ಇಲಾಖೆಗಳ ಮಾಸಿಕ ವೆಚ್ಚಗಳ ತಃಖ್ತೆಗಳನ್ನು ಸಮೀಕ್ಷಿಸುವ ಮೂಲಕ ಖರ್ಚುಗಳ ಪ್ರಗತಿಯನ್ನು ಸೂಕ್ಷ್ಮವಾಗಿ ಮೇಲ್ವಿಚಾರಣೆ ಮಾಡುವಲ್ಲಿನ ಹಣಕಾಸು ಇಲಾಖೆಯ ವಿಫಲತೆಯು ಹೆಚ್ಚಿನ ಉಳಿತಾಯಗಳಿಗೆ ಮಾರ್ಗ ಮಾಡಿಕೊಟ್ಟಿತು. ಆ ಅವಧಿಯಲ್ಲಿ ಒಟ್ಟಾರೆ ಪೂರಕ ಅನುವುಗಳು ರೂ.483.31 ಕೋಟಿಯಷ್ಟು ಮಾತ್ರ ಇದ್ದವು ಎಂದು ಸರ್ಕಾರವು ಸಾಧಿಸಿತು. ಆದಾಗ್ಯೂ, ಮೇಲಿನ ಅವಧಿಗೆ ವಿನಿಯೋಜನಾ ಲೆಕ್ಕಗಳ (ಅನುದಾನ ಸಂಖ್ಯೆ 3) ಪ್ರಕಾರ ಪೂರಕ ಅನುದಾನಗಳು ರೂ.2,022 ಕೋಟಿಯಷ್ಟಿದ್ದವು.

### 5.1.6.5 ಉಳಿತಾಯಗಳನ್ನು ಅಧ್ಯರ್ಪಣೆ ಮಾಡದಿರುವುದು

ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 264 ಹಾಗೂ ಕರ್ನಾಟಕ ಹಣಕಾಸು ಸಂಹಿತೆಯ ಅನುಚ್ಛೇದ 314, ಇವು ನಿಯಂತ್ರಣ ಅಧಿಕಾರಿಗಳಿಂದ ನಿರೀಕ್ಷಿಸಲ್ಪಟ್ಟ ಎಲ್ಲಾ ಉಳಿತಾಯಗಳ ಬಗ್ಗೆ ಇವುಗಳನ್ನು ನಿರೀಕ್ಷಿಸಿದ ಕೂಡಲೇ ಪೂರ್ಣ ವಿವರಗಳು ಹಾಗೂ ಕಾರಣಗಳೊಂದಿಗೆ ಹಣಕಾಸು ಇಲಾಖೆಗೆ ವರದಿ ಸಲ್ಲಿಸಬೇಕೆಂದು ಅನುವು ಮಾಡಿವೆ. ಹಣಕಾಸು ಇಲಾಖೆಯು ಮರುಹಂಚಿಕೆ ಹಾಗೂ ಪೂರಕ ಅನುದಾನಗಳಿಗಾಗಿ ಅರ್ಜಿಗಳನ್ನು ವ್ಯವಹರಿಸುವ ವೇಳೆಯಲ್ಲಿ ಇದನ್ನು ಹಣಕಾಸು ವರ್ಷದ ಅಂತ್ಯದ ಒಳಗೆ ಅಗತ್ಯವಿರುವ ಇತರ ಇಲಾಖೆಗಳಿಗೆ ಮರು ಹಂಚಿಕೆ ಮಾಡಲು ಸಾಧ್ಯವಾಗುವಂತೆ ಉಳಿತಾಯವನ್ನು ಅಧ್ಯರ್ಪಣ ಮಾಡಲು ದಿನಾಂಕಗಳನ್ನು ನಿಗಧಿಗೊಳಿಸುವ ಮೂಲಕ ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿತ್ತು.

**ಒಟ್ಟಾರೆ ರೂ.23,300.20 ಕೋಟಿ ಉಳಿತಾಯಕ್ಕೆ ಪ್ರತಿಯಾಗಿ ಇಲಾಖೆಗಳು ಕೇವಲ ರೂ.7,124.39 ಕೋಟಿಯಷ್ಟು ಅಧ್ಯರ್ಪಣೆ ಮಾಡಿದವು**

ನಿರೀಕ್ಷಿತ ಉಳಿತಾಯಗಳನ್ನು ಅಧ್ಯರ್ಪಣೆ ಮಾಡಲು ನಿಯಂತ್ರಣಾಧಿಕಾರಿಗಳಿಗೆ ಹಣಕಾಸು ಇಲಾಖೆಯು ಯಾವುದೇ ನಿಗಧಿತ ದಿನಾಂಕವನ್ನೂ ನಿಗಧಿಪಡಿಸಲಿಲ್ಲ ಎಂಬುದು ದಾಖಲೆಗಳಿಂದ ತಿಳಿದುಬಂದಿತು. ಇದಕ್ಕೆ ವ್ಯತಿರಿಕ್ತವಾಗಿ, ಹಣಕಾಸು ಇಲಾಖೆಯೇ ಉಳಿತಾಯಗಳನ್ನು 15 ಏಪ್ರಿಲ್ 2008ರ ಒಳಗೆ ಅಧ್ಯರ್ಪಣೆ ಮಾಡುವಂತೆ ನಿಯಂತ್ರಣಾಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಿತು (ಏಪ್ರಿಲ್ 2008). ತತ್ಪರಿಣಾಮವಾಗಿ, ಉಳಿತಾಯಗಳು ಇಲಾಖೆಗಳಿಂದ ವರ್ಷವು ಮುಕ್ತಾಯವಾದ ನಂತರ ತಿಳಿಸಲ್ಪಟ್ಟವು ಹಾಗೂ ಇದು ಪುನರ್–ವಿನಿಯೋಜನೆಯನ್ನು ಪರಿಣಾಮಕಾರಿಯಾಗದಿರುವಂತೆ ಮಾಡಿತು. 2003–07ರ ಅವಧಿಯಲ್ಲಿನ ಒಟ್ಟಾರೆ ಉಳಿತಾಯ ರೂ.23,300.20 ಕೋಟಿಯಷ್ಟಾಗಿತ್ತಾದರೂ, ನೈಜವಾಗಿ ಪುನರ್–ಒಪ್ಪಿಸಲ್ಪಟ್ಟ ಮೊತ್ತವು ರೂ.7,124.39 ಕೋಟಿಗಳಷ್ಟು ಮಾತ್ರವಾಗಿತ್ತು ಎಂಬುದನ್ನು ಗಮನಿಸಲಾಯಿತು. ಇವುಗಳ ಪೈಕಿ, ಹಣಕಾಸು ಇಲಾಖೆಗೆ ಸಂಬಂಧಿಸಿದ ಉಳಿತಾಯಗಳು ರೂ.6,184.80 ಕೋಟಿಗಳಷ್ಟಿದ್ದವು ಹಾಗೂ ಹಣಕಾಸು ಇಲಾಖೆಯಿಂದ ಅಧ್ಯರ್ಪಣೆ ಮಾಡಿದ ಮೊತ್ತವು ಕೇವಲ ರೂ.2,557.35 ಕೋಟಿಯಾಗಿದ್ದಿತು. ಹೊಂದಾಣಿಕೆಯಾಗಲ್ಪಟ್ಟ ವೆಚ್ಚಗಳ

ಅಂಕಿಗಳು ಹಾಗೂ ಉಳಿತಾಯಗಳು ಹಣಕಾಸು ವರ್ಷದ ಕೊನೆಯ ವೇಳೆಗೂ ಲಭ್ಯವಿಲ್ಲದೇ ಇದ್ದುದರಿಂದ ಇದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಸರ್ಕಾರವು ತಿಳಿಸಿತು. ಕೈಪಿಡಿ/ಸಂಹಿತೆಗಳ ಅನುವುಗಳ ಪ್ರಕಾರ ಅಗತ್ಯವಿದ್ದ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯವಿದ್ದಿತಾದ್ದರಿಂದ ಉತ್ತರವು ಸಮರ್ಥನೀಯವಾಗಿರಲಿಲ್ಲ.

## 5.1.7 ವೆಚ್ಚ ನಿಯಂತ್ರಣಗಳು

ಸರ್ಕಾರದ ಹಣದಿಂದ ಮಾಡುವ ಖರ್ಚುಗಳನ್ನು ನಿಯಂತ್ರಿಸುವ ನಿಯಮಗಳು ತತ್‌ಕ್ಷಣ ವಿತರಿಸಲು ಅಗತ್ಯವಿರದ ಹೊರತು ಖಜಾನೆಯಿಂದ ಯಾವುದೇ ಹಣವನ್ನು ತೆಗೆಯಬಾರದು ಹಾಗೂ ಆಯವ್ಯಯದ ಅನುದಾನಗಳು ಕೈಬಿಟ್ಟು ಹೋಗುವುದನ್ನು ತಡೆಯಲು ಹಣವನ್ನು ತೆಗೆಯುವುದು ಅನುಚಿತ ನಡವಳಿಕೆಯಾಗುತ್ತದೆ ಎಂದು ಅನುವು ಮಾಡಿರುತ್ತವೆ. ತಕ್ಷಣದ ಬಳಕೆಗೆ ಅಗತ್ಯವಿರುವ ಹಣವನ್ನು ಹಣ ತೆಗೆಯುವ ಹಾಗೂ ವಿತರಿಸುವ ಅಧಿಕಾರಿಯು ನಿರ್ಧಿಷ್ಟಪಡಿಸಿದ ಖಜಾನೆ ಬಿಲ್ಲುಗಳ ಮೇಲೆ ತೆಗೆಯಬೇಕು. ಸರ್ಕಾರದ ಹಣವನ್ನು ಬ್ಯಾಂಕುಗಳ ಉಳಿತಾಯ ಖಾತೆಗಳಲ್ಲಿ ಇಡುವುದು ಕರ್ನಾಟಕ ಹಣಕಾಸು ಸಂಹಿತೆಯ ಅಡಿಯಲ್ಲಿ ನಿಷೇಧಿತವಾಗಿದೆ. ವೆಚ್ಚಗಳ ಮೇಲೆ ಇದ್ದ ಹಣಕಾಸು ಇಲಾಖೆಯ ನಿಯಂತ್ರಣಗಳ ಕೊರತೆಯು ಇಲಾಖಾ ಸಂಸ್ಥೆಗಳಿಗೆ ಹೆಚ್ಚುವರಿಯಾಗಿ ಹಣವನ್ನು ಬಿಡುಗಡೆ ಮಾಡುವಲ್ಲಿಗೆ ಹಾಗೂ ಅನುದಾನವು ಕೈಬಿಟ್ಟು ಹೋಗುವುದನ್ನು ತಪ್ಪಿಸಿಕೊಳ್ಳಲು ಸರ್ಕಾರದ ಹಣವನ್ನು ಬ್ಯಾಂಕುಗಳಲ್ಲಿ ಇಡುವಲ್ಲಿಗೆ ಈ ಕೆಳಗೆ ವಿವರಿಸಿರುವಂತೆ ದಾರಿ ಮಾಡಿಕೊಟ್ಟವು.

### 5.1.7.1 ಹಣವನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿದ್ದು

**ಹಣಕಾಸು ಇಲಾಖೆಯು ರೂ.4.25 ಕೋಟಿಯಷ್ಟು ಅಧಿಕ ಹಣವನ್ನು ಬಿಎಮ್‌ಆರ್‌ಡಿಎ ಟೆಕ್‌ಸಾಕ್ ಹಾಗೂ ಸೀಡಾಕ್‌ಗಳಿಗೆ ಬಿಡುಗಡೆ ಮಾಡಿತು**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985, ಇದರ ಅಡಿಯಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು (ಬಿಎಮ್‌ಆರ್‌ಡಿಎ) ತನ್ನದೇ ಆದ ಸಂಪನ್ಮೂಲಗಳಿಂದ ವೆಚ್ಚವನ್ನು ಭರಿಸಲು ಸಾಧ್ಯವಾಗುವವರೆಗೂ ಅದರ ಆಡಳಿತಾತ್ಮಕ ಖರ್ಚುಗಳನ್ನು ಸರ್ಕಾರವೇ ತುಂಬಿಸಿಕೊಡಬೇಕಾಗಿತ್ತು. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ಆ ಅವಧಿಯಲ್ಲಿ ಸಾಕಷ್ಟು ಆಂತರಿಕ ಸಂಪನ್ಮೂಲಗಳನ್ನು (ರೂ.15.83 ಕೋಟಿ) ಗಳಿಸಿ ತನ್ನ ಆಡಳಿತಾತ್ಮಕ ಖರ್ಚುಗಳನ್ನು (ರೂ.3.26 ಕೋಟಿ) ತಾನೇ ಭರಿಸಲು ಸಾಧ್ಯವಾಗಿತ್ತಾದರೂ ಹಣಕಾಸು ಇಲಾಖೆಯು ರೂ.1.93 ಕೋಟಿ ಮೊತ್ತವನ್ನು ಬಿಎಮ್‌ಆರ್‌ಡಿಎಗೆ ಬಿಡುಗಡೆ ಮಾಡಿತು (2003–08). ಅದರ ವಾರ್ಷಿಕ ವರದಿಗಳು ಹಾಗೂ ಹಣಕಾಸಿನ ಸ್ಥಿತಿ–ಗತಿಗಳ ತ:ಖ್ತೆಗಳು ಹಣದ ಲಭ್ಯತೆಯನ್ನು ತೋರಿಸುತ್ತಿದ್ದವಾದರೂ, ಹಣಕಾಸು ಇಲಾಖೆಯು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹಣಕಾಸಿನ ಸ್ಥಿತಿಗತಿಗಳನ್ನು ಪರೀಕ್ಷಿಸಲಿಲ್ಲ. ಅಂತೆಯೇ, ಕರ್ನಾಟಕ ತಾಂತ್ರಿಕ ಸಲಹಾ ಸೇವೆಗಳು[5] (ಟೆಕ್‌ಸಾಕ್) ಇವರಿಗೆ ಆಡಳಿತಾತ್ಮಕ ಖರ್ಚುಗಳಿಗಾಗಿ ಹಣಕಾಸು ಇಲಾಖೆಯಿಂದ (ವರ್ಷ ಒಂದಕ್ಕೆ ರೂ.ಮೂರು ಲಕ್ಷದಂತೆ) ಒಪ್ಪಂದವಾಗಿದ್ದ (ಆಗಸ್ಟ್ 1976) ರೂ.15 ಲಕ್ಷಗಳಿಗೆ ಪ್ರತಿಯಾಗಿ ರೂ.1.40 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಯಿತು ಹಾಗೂ ಅದು ರೂ.1.25 ಕೋಟಿ ಮೊತ್ತದಷ್ಟು ಹೆಚ್ಚುವರಿ ಬಿಡುಗಡೆ ಆಗುವಲ್ಲಿ ಪರಿಣಮಿಸಿತು. ಟೆಕ್‌ಸಾಕ್‌ಗೆ ವಾಣಿಜ್ಯ ಹಾಗೂ ಕೈಗಾರಿಕೆಗಳ ಇಲಾಖೆಯಿಂದ ಮಾಡಲ್ಪಟ್ಟ ಬಿಡುಗಡೆಗಳನ್ನು ಸೂಕ್ಷ್ಮವಾಗಿ ಮೇಲ್ವಿಚಾರಣೆ ಮಾಡುವುದರ ಮೂಲಕ ಬಿಡುಗಡೆಯಾಗಬೇಕಾದ ಮೊತ್ತವನ್ನು ಒಪ್ಪಂದವಾಗಿದ್ದ ಮೊತ್ತಕ್ಕೆ ಸೀಮಿತಗೊಳಿಸುವ ಹಣಕಾಸು ಇಲಾಖೆಯ ವಿಫಲತೆಯು ಬಿಡುಗಡೆಗಳನ್ನು ಹೆಚ್ಚುವರಿಯಾಗಿ ಮಾಡುವಲ್ಲಿ ಪರಿಣಮಿಸಿತು.

ಆಡಳಿತಾತ್ಮಕ ಖರ್ಚುಗಳನ್ನು ತುಂಬಿಕೊಡುವ ಮತ್ತೊಂದು ದೃಷ್ಟಾಂತದಲ್ಲಿ (2003–08), ಕರ್ನಾಟಕದ ವಾಣಿಜ್ಯೋದ್ಯಮ ಅಭಿವೃದ್ಧಿ ಕೇಂದ್ರ, ಧಾರವಾಡ, ಇದಕ್ಕೆ ಒಪ್ಪಂದವಾಗಿದ್ದ ರೂ.22.50 ಲಕ್ಷ ಮೊತ್ತಕ್ಕೆ ಪ್ರತಿಯಾಗಿ ರೂ.1.30 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಯಿತು ಹಾಗೂ ಇದು ಸರ್ಕಾರದ ಮೇಲೆ ಹೆಚ್ಚುವರಿ ಆರ್ಥಿಕ ಹೊರೆಯನ್ನು ಹೇರುವಲ್ಲಿ ಕಾರಣವಾಯಿತು.

[5] ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಗೆ ಸಲಹಾ ಸೇವೆಯನ್ನು ನೀಡುತ್ತಿರುವ ಒಂದು ಇಲಾಖಾ ಸಂಸ್ಥೆ

### 5.1.7.2 ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯಿಂದ ಹಣದ ಅನಧಿಕೃತ ಬಿಡುಗಡೆ

ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯಿಂದ ಹಣಕಾಸು ಇಲಾಖೆಯ ಒಪ್ಪಿಗೆ ಇಲ್ಲದೇ ಈ ಕೆಳಕಂಡ ಸಂಸ್ಥೆಗಳಿಗೆ ಹಣವು ಬಿಡುಗಡೆ ಮಾಡಲ್ಪಟ್ಟಿತ್ತು ಹಾಗೂ ಅದು ಈ ಕೆಳಗೆ ವಿವರಿಸಿರುವಂತೆ ಹಣವನ್ನು ಸರ್ಕಾರದ ಲೆಕ್ಕದ ಹೊರಗೆ ಇಡುವಲ್ಲಿ ಪರಿಣಮಿಸಿತು:

**ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಅಕ್ರಮವಾಗಿ ರೂ.402.04 ಕೋಟಿಯನ್ನು ಕೆಯುಎಮ್, ಕೆಸಿಟಿಯು ಮತ್ತು ಕೆಎಸ್‌ಎಫ್‌ಸಿ ಗಳಿಗೆ ಬಿಡುಗಡೆ ಮಾಡಿದ್ದರಿಂದ ಸರ್ಕಾರದ ಹಣ ರೂ.149.69 ಕೋಟಿ ತಡೆ ಹಿಡಿಯುವಲ್ಲಿ ಪರಿಣಮಿಸಿತು**

- ತಂತ್ರಜ್ಞಾನ ವರ್ಗಾವಣೆ, ಗುಣಮಟ್ಟ ನಿರ್ವಹಣೆ ಹಾಗೂ ತಂತ್ರಜ್ಞಾನದ ಮೇಲ್ದರ್ಜೆಗೊಳಿಸುವಿಕೆಗೆ ಸಂಬಂಧಿಸಿದಂತೆ ಕಾರ್ಯಾಗಾರಗಳನ್ನು ಹಾಗೂ ವಿಚಾರ ಸಂಕೀರ್ಣಗಳನ್ನು ನಡೆಸುವುದಕ್ಕಾಗಿ ರೂ.5.94 ಕೋಟಿ ಮೊತ್ತವು ತಂತ್ರಜ್ಞಾನದ ಮೇಲ್ದರ್ಜೆಗೊಳಿಸುವಿಕೆಗಾಗಿ ಕರ್ನಾಟಕ ತಂತ್ರಜ್ಞಾನ ಮೇಲ್ದರ್ಜೆ ಸಲಹಾ ಮಂಡಳಿಗೆ (ಕೆಸಿಟಿಯು) 2003–08ರ ಅವಧಿಯಲ್ಲಿ ಬಿಡುಗಡೆ ಮಾಡಲ್ಪಟ್ಟಿತು. ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯಿಂದ ಮಾಡಿದ ಹಣದ ಬಿಡುಗಡೆಯು ಅಗತ್ಯತೆಯನ್ನು ಆಧಾರಿಸಿರಲಿಲ್ಲ. ತತ್ಪರಿಣಾಮವಾಗಿ ಉಳಿತಾಯಗಳು ಕ್ರೋಢೀಕೃತವಾಗಲು (ರೂ.3.25 ಕೋಟಿ) ಹಾಗೂ ಅವುಗಳನ್ನು ಸಂಸ್ಥೆಯು ಅವಧಿ ಠೇವಣಿಗಳಲ್ಲಿ ಹೂಡುವಲ್ಲಿ ಹಾಗೂ ಬಡ್ಡಿಯನ್ನು (ರೂ.1.38 ಕೋಟಿ) ಸ್ವಂತಕ್ಕಾಗಿ ಬಳಸಿಕೊಳ್ಳುವಲ್ಲಿ ಪರಿಣಮಿಸಿತು. ಹಣದ ಬಿಡುಗಡೆ, ಅದರ ಬಳಕೆ ಹಾಗೂ ತಂತ್ರಜ್ಞಾನ ಮೇಲ್ದರ್ಜೆ ಸಲಹಾ ಮಂಡಳಿಯಲ್ಲಿ ಉಳಿದ ಹೆಚ್ಚುವರಿ ಮೊತ್ತಗಳು ಹಣಕಾಸು ಇಲಾಖೆಗೆ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆ ಹಾಗೂ ತಂತ್ರಜ್ಞಾನ ಮೆಲ್ದರ್ಜೆ ಸಲಹಾ ಮಂಡಳಿಯಿಂದ ಮಂಜೂರಾದ ಕ್ರಿಯಾ ಯೋಜನೆಗಳು, ಬಿಡುಗಡೆ ಆದೇಶಗಳು, ವಾರ್ಷಿಕ ವರದಿಗಳು, ಇವೇ ಮುಂತಾದವುಗಳ ಮೂಲಕ ವರದಿಯಾಗಲ್ಪಡುತ್ತಿದ್ದವು. ಆದಾಗ್ಯೂ, ಹಣಕಾಸು ಇಲಾಖೆಯು ಸರ್ಕಾರದ ಹಣವನ್ನು ಖಜಾನೆಯಿಂದ ಹೊರಗೆ ಇಡಲು ದಾರಿ ಮಾಡಿಕೊಟ್ಟ ಅಂತಹ ಅಕ್ರಮ ಬಿಡುಗಡೆಗಳ ಪ್ರತಿಯಾಗಿ ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.
- ತಂತ್ರಜ್ಞಾನದ ಆಧುನೀಕತೆ ಹಾಗೂ ತರಬೇತಿ ಉದ್ದೇಶಗಳಿಗಾಗಿ ವಾಣಿಜ್ಯ ಹಾಗೂ ಕೈಗಾರಿಕೆಗಳ ಇಲಾಖೆಯಿಂದ ಒಂದು ಕೋಟಿ ರೂಪಾಯಿಗಳನ್ನು ಒಂದು ಇಲಾಖಾ ಸಂಸ್ಥೆಯಾದ ಕರ್ನಾಟಕ ಉದ್ಯೋಗ ಮಿತ್ರ (ಕೆಯುಎಮ್) ಇದಕ್ಕೆ ನೀಡಲ್ಪಟ್ಟಿತು. ಹಣಕಾಸು ಇಲಾಖೆಯ ಒಪ್ಪಿಗೆಯನ್ನು ಪಡೆದಿರಲಿಲ್ಲವಾದ್ದರಿಂದ ಈ ಬಿಡುಗಡೆಗಳು ಸರ್ಕಾರದಿಂದ ಮಂಜೂರಾಗಿರಲಿಲ್ಲ ಹಾಗೂ ಕೆಯುಎಮ್‌ನಿಂದ ಹಣವನ್ನು ನಿರ್ದಿಷ್ಟ ಉದ್ದೇಶಕ್ಕೆ ಬಳಸಿಕೊಳ್ಳಲ್ಪಡಲಿಲ್ಲ. ಸರ್ಕಾರದ ಹಣದಿಂದ ಅಂತಹ ಅನಧಿಕೃತ ಬಿಡುಗಡೆಗಳನ್ನು ಪತ್ತೆ ಮಾಡುವಲ್ಲಿನ ಹಣಕಾಸು ಇಲಾಖೆಯ ವಿಫಲತೆಯು, ಪುರಸ್ಕೃತ ಅನುದಾನಗಳನ್ನು ಮಾರ್ಗಪಲ್ಲಟ ಮಾಡುವಲ್ಲಿ ಪರಿಣಮಿಸಿತು.
- 19,555 ಗುರುತಿಸಲ್ಪಟ್ಟ ಕೈಗಾರಿಕಾ ಘಟಕಗಳಿಗೆ ಕೈಗಾರಿಕಾ ಸಹಾಯ ಧನವನ್ನು ಬಟವಾಡೆ ಮಾಡುವುದಕ್ಕಾಗಿ ವಾಣಿಜ್ಯ ಹಾಗೂ ಕೈಗಾರಿಕೆಗಳ ಇಲಾಖೆಯ ಪರವಾಗಿ ಹಣಕಾಸು ಇಲಾಖೆಯ ಒಪ್ಪಿಗೆಯೊಂದಿಗೆ ರೂ.395.10 ಕೋಟಿ[6] ಮೊತ್ತವನ್ನು ಕರ್ನಾಟಕ ರಾಜ್ಯ ಹಣಕಾಸು ನಿಗಮಕ್ಕೆ (ಕೆಎಸ್‌ಎಫ್‌ಸಿ) ಬಿಡುಗಡೆ ಮಾಡಲಾಯಿತು (2004–08). ಆದಾಗ್ಯೂ, ಕೆಎಸ್‌ಎಫ್‌ಸಿ ಮಾರ್ಚ್ 2008ರ ಅಂತ್ಯದ ವೇಳೆಗೆ ಕೇವಲ ರೂ.249.65 ಕೋಟಿ ಮೊತ್ತದಷ್ಟು ಸಹಾಯ ಧನವನ್ನು ಬಟವಾಡೆ ಮಾಡಿತ್ತು ಹಾಗೂ ಉದ್ದೇಶಿತ ಸಹಾಯ ಧನದ ಹಕ್ಕುಗಳು ಸಂಪೂರ್ಣವಾಗಿ ಇತ್ಯರ್ಥಪಡಿಸಿರಲಿಲ್ಲವಾದರೂ ಉಳಿದ ಮೊತವನ್ನು (ರೂ.145.44 ಕೋಟಿ) ತನ್ನಲ್ಲೇ ಉಳಿಸಿಕೊಂಡಿತ್ತು. ಖರ್ಚುಗಳ ಅಸಮರ್ಪಕ ಮೇಲ್ವಿಚಾರಣೆಯು ಕೆಎಸ್‌ಎಫ್‌ಸಿ ಬಳಿ ಹಣವು ಹೆಚ್ಚುವರಿಯಾಗಿ ಕ್ರೋಢೀಕೃತವಾಗುವಲ್ಲಿ ಪರಿಣಮಿಸಿತು.

---

6 2004–05–ರೂ.146 ಕೋಟಿ, 2005–06–ರೂ.84.10 ಕೋಟಿ, 2006–07–ರೂ.30 ಕೋಟಿ, 2007–08–ರೂ.135 ಕೋಟಿ

### 5.1.7.3 ಹಣವು ಕೈತಪ್ಪಿಹೋಗುವುದನ್ನು ತಡೆಗಟ್ಟಲು ಅದನ್ನು ಸರ್ಕಾರಿ ಖಜಾನೆಯಿಂದ ವರ್ಗಾಯಿಸಿದ್ದು.

ಕರ್ನಾಟಕ ಹಣಕಾಸು ಸಂಹಿತೆಯ ಪರಿಚ್ಛೇದ 161(2) ಹಾಗೂ ಸಾದಿಲ್ವಾರು ಖರ್ಚುಗಳ ಕೈಪಿಡಿಯ ನಿಯಮ 17ರಲ್ಲಿ ಅನುವು ಮಾಡಿರುವಂತೆ ಅಗತ್ಯತೆ ತಕ್ಕಂತೆ ಹಣ ಬಿಡುಗಡೆಯನ್ನು ಪರಿಮಿತಿಗೊಳಿಸುವಲ್ಲಿನ ಹಣಕಾಸು ಇಲಾಖೆಯ ವಿಫಲತೆಯು, ಈ ಕೆಳಗೆ ನೀಡಿರುವ ದೃಷ್ಟಾಂತಗಳಂತೆ ಇಲಾಖೆಗಳು ಹಣವು ಕೈತಪ್ಪಿ ಹೋಗುವುದನ್ನು ತಡೆಗಟ್ಟಲು ಅದನ್ನು ಖಜಾನೆಯಿಂದ ಸೆಳೆದು ಸರ್ಕಾರಿ ಲೆಕ್ಕದ ಹೊರಗೆ ಇಡುವಲ್ಲಿ ಪರಿಣಮಿಸಿತು.

**ಹಣವನ್ನು ಉಳಿತಾಯ ಖಾತೆಗಳಿಗೆ ವರ್ಗಾಯಿಸಿದ್ದು**

**ಸರ್ಕಾರದ ಇಲಾಖೆಗಳು ರೂ.12.61 ಕೋಟಿಯನ್ನು ಅಕ್ರಮವಾಗಿ ಬ್ಯಾಂಕುಗಳ ಉಳಿತಾಯ ಖಾತೆಗಳಲ್ಲಿ ಠೇವಣಿಯಾಗಿಟ್ಟವು**

ಓರ್ವ ಸರ್ಕಾರಿ ನೌಕರನು ತನ್ನ ಅಧಿಕಾರಯುತ ಸಾಮರ್ಥ್ಯದಲ್ಲಿ ಒಂದು ಬ್ಯಾಂಕಿನಲ್ಲಿ ಒಂದು ಖಾತೆಯನ್ನು ತೆರೆಯುವುದನ್ನು ಕರ್ನಾಟಕ ಹಣಕಾಸು ಸಂಹಿತೆಯ ಪರಿಚ್ಛೇದ 76 ಪ್ರತಿಬಂಧಿಸುತ್ತದೆ. ಇದರ ಜೊತೆಗೆ ಹಣಕಾಸು ಇಲಾಖೆಯ ಅನುಮತಿ ಇಲ್ಲದೇ ಬ್ಯಾಂಕುಗಳಲ್ಲಿ ಉಳಿತಾಯ ಖಾತೆಗಳನ್ನು ತೆರೆಯದಂತೆ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಿ ಸರ್ಕಾರದಿಂದ ನಿರ್ದಿಷ್ಟ ಆದೇಶಗಳು ನೀಡಲ್ಪಟ್ಟಿದ್ದವು (ಜುಲೈ 2003).

ಹಣಕಾಸು ಇಲಾಖೆಯ ಅನುಮತಿ ಇಲ್ಲದೇ ಭಾರೀ ಮೊತ್ತದ ಸರ್ಕಾರಿ ಹಣದೊಡನೆ ಬ್ಯಾಂಕುಗಳಲ್ಲಿ ಉಳಿತಾಯ ಖಾತೆಗಳನ್ನು ಕಾರ್ಯಾಚರಣೆ ಮಾಡುತ್ತಿದ್ದ ಈ ಕೆಳಗಿನ ದೃಷ್ಟಾಂತಗಳು ದಾಖಲೆಗಳಿಂದ ತಿಳಿದುಬಂದವು.

- ರಾಜ್ಯ ಶಿಕ್ಷಣ, ಸಂಶೋಧನೆ ಹಾಗೂ ತರಬೇತಿ ನಿರ್ದೇಶನಾಲಯವು ಬ್ಯಾಂಕುಗಳಲ್ಲಿ ಎಂಟು ಉಳಿತಾಯ ಖಾತೆಗಳನ್ನು ಕಾರ್ಯಾಚರಣೆ ಮಾಡುತ್ತಿತ್ತು ಹಾಗೂ ಮಾರ್ಚ್ 2008ರ ಅಂತ್ಯಕ್ಕೆ ಈ ಉಳಿತಾಯ ಖಾತೆಗಳಲ್ಲಿನ ಅಂತಿಮ ಶಿಲ್ಕು ರೂ.8.69 ಕೋಟಿಯಷ್ಟಿತ್ತು.
- ಯುವಜನ ಸೇವೆಗಳ ಇಲಾಖೆಯು ಐದು ಉಳಿತಾಯ ಖಾತೆಗಳನ್ನು ನಿರ್ವಹಿಸುತ್ತಿದ್ದು ಮಾರ್ಚ್ 2008ರ ಅಂತ್ಯಕ್ಕೆ ಈ ಖಾತೆಗಳಲ್ಲಿ ಇದ್ದ ಅಂತಿಮ ಶಿಲ್ಕು ರೂ.3.92 ಕೋಟಿಯಷ್ಟಿತ್ತು.

ಖಜಾನೆಯ ಹೊರಗೆ ಇಡಲ್ಪಟ್ಟಿದ್ದ ಸರ್ಕಾರದ ಹಣವನ್ನು ಪರಿಣಾಮಕಾರಿಯಾಗಿ ಗಮನಿಸಲು ಉಳಿತಾಯ ಖಾತೆಗಳ ನಿರ್ವಹಣೆಯ ಬಗ್ಗೆ ನಿಯತಕಾಲಿಕ ಸಲ್ಲಿಕೆಗಳು, ಅವುಗಳ ನಿರ್ವಹಣೆಗೆ ಕಾರಣಗಳು, ಹಣಕಾಸು ವರ್ಷದ ಅಂತ್ಯದಲ್ಲಿ ಉಳಿತಾಯ ಖಾತೆಗಳಲ್ಲಿ ಇದ್ದ ಮೊತ್ತ, ಖರ್ಚು ಮಾಡದೇ ಉಳಿದ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡದಿರುವ ಕಾರಣಗಳು ಇವೇ ಮುಂತಾದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಹಣಕಾಸು ಇಲಾಖೆ ರೂಪಿಸಿರಲಿಲ್ಲ. ತತ್ಪರಿಣಾಮವಾಗಿ, ಅಂತಹ ಹಣದ ಮೇಲೆ ಹಣಕಾಸು ಇಲಾಖೆಯ ಪರಿಣಾಮಕಾರಿ ನಿಯಂತ್ರಣವಿರಲಿಲ್ಲವಾದ್ದರಿಂದ ಅದು ದುರ್ಬಳಕೆಯ ಸಂಭವಕ್ಕೆ ಗುರಿಯಾಗುವ ಅಪಾಯವಿದ್ದಿತು.

**ಹಣವನ್ನು ಇತರ ಇಲಾಖೆಗಳಿಗೆ/ಸಂಸ್ಥೆಗಳಿಗೆ ವರ್ಗಾವಣೆ ಮಾಡಿದ್ದು**

ಸರ್ಕಾರಿ ಇಲಾಖೆಗಳು ತೆಗೆದ ಹಣವು, ಅದು ಕೈತಪ್ಪಿ ಹೋಗುವುದನ್ನು ತಡೆಗಟ್ಟಲು ಈ ಕೆಳಗೆ ವಿವರಿಸಿರುವಂತೆ ಇತರ ಇಲಾಖೆಗಳಿಗೆ/ಸಂಸ್ಥೆಗಳಿಗೆ ವರ್ಗಾಯಿಸಲ್ಪಟ್ಟಿತ್ತು:

**ರೂ.31.42 ಕೋಟಿ ಕೈತಪ್ಪಿ ಹೋಗುವುದನ್ನು ತಪ್ಪಿಸಲು ಇತರ ಇಲಾಖೆ/ಸಂಸ್ಥೆಗಳಿಗೆ ಮಾರ್ಗಪಲ್ಲಟ ಮಾಡಲಾಯಿತು**

- ವಾಣಿಜ್ಯ ಹಾಗೂ ಕೈಗಾರಿಕೆಗಳ ಇಲಾಖೆಯು ವಿವಿಧ ಯೋಜನೆಗಳನ್ನು ಕಾರ್ಯಗತಗೊಳಿಸಲು ಬಿಡುಗಡೆ ಮಾಡಲ್ಪಟ್ಟಿದ್ದ ರೂ.21.54 ಕೋಟಿಯಷ್ಟು (2003–08) ಸರ್ಕಾರಿ ಹಣವನ್ನು ಕರ್ನಾಟಕದ ತಾಂತ್ರಿಕ ಸಲಹಾ ಸೇವೆಗಳು, ಇವರ ಬಳಿ ಇಟ್ಟಿತ್ತು. ಹಣವು ಕೈತಪ್ಪಿ ಹೋಗುವುದನ್ನು ತಡೆಗಟ್ಟಲು ವಾಣಿಜ್ಯ ಹಾಗೂ ಕೈಗಾರಿಕೆಗಳ ಇಲಾಖೆ ಸ್ವೀಕೃತಿ ರಸೀದಿಯ ಆಧಾರದ ಮೇಲೆ ಖಜಾನೆಯಿಂದ ಸೆಳೆದು ಕರ್ನಾಟಕ ತಾಂತ್ರಿಕ ಸಲಹಾ ಸೇವೆಗಳು, ಇವರಲ್ಲಿ ಇಟ್ಟಿತು. ಕರ್ನಾಟಕ ತಾಂತ್ರಿಕ ಸಲಹಾ ಸೇವೆಗಳು, ಇವರು ಈ ಹಣವನ್ನು ಅವಧಿ ಠೇವಣಿಗಳಲ್ಲಿ

ಹೂಡಿ ಅವುಗಳ ಮೇಲೆ ಬಡ್ಡಿಯನ್ನೂ ಗಳಿಸಿದರು. ಕರ್ನಾಟಕ ತಾಂತ್ರಿಕ ಸಲಹಾ ಸೇವೆಗಳು, ಇವರಲ್ಲಿ ಮಾರ್ಚ್ 2008ರ ಅಂತ್ಯಕ್ಕೆ ಖರ್ಚಾಗದೇ ಉಳಿದಿದ್ದ ಹಣವು ರೂ.12.19 ಕೋಟಿ ಹಾಗೂ ಅದರ ಮೇಲೆ ಅವರು ಗಳಿಸಿರುವ ಬಡ್ಡಿಯು ರೂ.1.53 ಕೋಟಿಯಷ್ಟಾಗಿದ್ದಿತು. ಅದನ್ನು ಸರ್ಕಾರದ ಲೆಕ್ಕಕ್ಕೆ ಇಲಾಖೆಯು ಜಮಾ ಮಾಡಿರಲಿಲ್ಲ.

- ಯುವಜನ ಸೇವೆಗಳ ಇಲಾಖೆಯು, ರಾಜೀವ್‌ಗಾಂಧಿ ಯುವ ಶಕ್ತಿ ಕಾರ್ಯಕ್ರಮದಡಿಯಲ್ಲಿ, ರಾಜೀವ್‌ಗಾಂಧಿ ಯುವ ಶಕ್ತಿ ಸಂಘಗಳಿಗೆ, ಕ್ರೀಡೆಗಳು, ಸಾಂಸ್ಕೃತಿಕ ಹಾಗೂ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಪ್ರತಿ ಸಂಘಕ್ಕೆ ರೂ.10,000ದಂತೆ ರಾಜ್ಯದಲ್ಲಿನ ವಿವಿಧ ಜಿಲ್ಲಾಧಿಕಾರಿಗಳಿಗೆ ರೂ.10.54 ಕೋಟಿ ಮೊತ್ತವನ್ನು (2003–07) ಬಿಡುಗಡೆ ಮಾಡಿತು. ಹಣವನ್ನು ಸ್ವೀಕೃತಿ ರಸೀದಿಯ ಆಧಾರದ ಮೇಲೆ ಒಂದೇ ಕಂತಿನಲ್ಲಿ ತೆಗೆಯಲಾಯಿತು ಹಾಗೂ ಜಿಲ್ಲಾಧಿಕಾರಿಗಳಿಗೆ ವರ್ಗಾಯಿಸಲಾಯಿತು. ಮಾರ್ಚ್ 2008ರ ಅಂತ್ಯಕ್ಕೆ ಕೇವಲ ರೂ.5.39 ಕೋಟಿ ಮೊತ್ತವು ಮಾತ್ರ ಖರ್ಚಾಗಿ ಉಳಿದ ರೂ.5.15 ಕೋಟಿ ಮೊತ್ತವು ಜಿಲ್ಲಾಧಿಕಾರಿಗಳ ಬಳಿ ಇದ್ದಿತು.
- ಕೈಮಗ್ಗ ಹಾಗೂ ಜವಳಿ ಇಲಾಖೆಯು ವಿದ್ಯುತ್ ಮಗ್ಗಗಳನ್ನು ಸ್ಥಾಪಿಸುವುದಕ್ಕಾಗಿ ರೂ.45 ಲಕ್ಷವನ್ನು ಖಜಾನೆಯಿಂದ ಸೆಳೆದು (2004–06) ಸಂಪೂರ್ಣ ಮೊತ್ತವನ್ನು ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸಿತು. ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮವು ಕೇವಲ 8.53 ಲಕ್ಷವನ್ನು ಮಾತ್ರ ಖರ್ಚು ಮಾಡಲು ಸಾಧ್ಯವಾಯಿತು ಹಾಗೂ ಉಳಿದ ಮೊತ್ತವನ್ನು (ರೂ.36.47 ಲಕ್ಷ) ಅದು ಸರ್ಕಾರಕ್ಕೆ ಹಿಂತಿರುಗಿಸಲಿಲ್ಲ (ಮಾರ್ಚ್ 2008).
- ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವೆಗಳ ಇಲಾಖೆಯು, ಪ್ರವಾಸೋದ್ಯಮದ ಅಭಿವೃದ್ಧಿಗಾಗಿ, ಭಾರತ ಸರ್ಕಾರದಿಂದ ಪಡೆದಿದ್ದ ರೂ.34.88 ಕೋಟಿ ಮೊತ್ತವನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಹಣಕಾಸು ಇಲಾಖೆಯ ಸಮ್ಮತಿಯೊಂದಿಗೆ ಬಿಡುಗಡೆ ಮಾಡಿತು (ಮಾರ್ಚ್ 2005). ಅನುದಾನವು ಪ್ರವಾಸೋದ್ಯಮ ಅಭಿವೃದ್ಧಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಉದ್ದೇಶ ಹೊಂದಿದ್ದು ಪ್ರವಾಸೋದ್ಯಮ ಇಲಾಖೆಗೆ ಹಣವನ್ನು 30 ಜೂನ್ 2005ರ ಒಳಗೆ ಖರ್ಚು ಮಾಡುವಂತೆ ನಿರ್ದೇಶನ ನೀಡಲಾಗಿತ್ತು. ಇಲಾಖೆಯು, ಆದಾಗ್ಯೂ, ರೂ.21.16 ಕೋಟಿಯನ್ನು ಮಾತ್ರ ಖರ್ಚು ಮಾಡಲು ಸಾಧ್ಯವಾಯಿತು ಹಾಗೂ ಉಳಿದ ರೂ.13.72 ಕೋಟಿ ಮೊತ್ತವು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ತನ್ನಲ್ಲಿಯೇ ಉಳಿಸಿಕೊಂಡಿತ್ತು (ಮಾರ್ಚ್ 2008). ಹಣಕಾಸು ವರ್ಷದ ಕೊನೆಯಲ್ಲಿ ಭಾರೀ ಮೊತ್ತಗಳನ್ನು ಸರ್ಕಾರದ ಲೆಕ್ಕದ ಹೊರಗೆ ಇಡುವ ಅನುವುಗಳೊಡನೆ ಬಿಡುಗಡೆ ಮಾಡುವಲ್ಲಿನ ಹಣಕಾಸು ಇಲಾಖೆಯ ವಿವೇಚನೆ ಇಲ್ಲದ ಕ್ರಮವು ಸರ್ಕಾರಿ ಹಣದ ದುರುಪಯೋಗದ ಸಂಭವದ ಅಪಾಯದ ಜೊತೆಗೆ ಸುಸ್ಥಿತ ಹಣಕಾಸು ನಿರ್ವಹಣೆಯ ಸಿದ್ಧಾಂತಗಳಿಗೆ ವಿರುದ್ಧವಾಗಿತ್ತು.

### 5.1.7.4 ಆರಾಧನಾ ಯೋಜನೆಯ ಅಡಿಯಲ್ಲಿ ವಿವೇಚನೆ ಇಲ್ಲದೆ ಹಣದ ಬಿಡುಗಡೆ

**ಹಣಕಾಸು ಇಲಾಖೆಯು ರೂ.22.40 ಕೋಟಿಯನ್ನು ವಿವೇಚನೆ ಇಲ್ಲದೆ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದರಿಂದ ರೂ.42.57 ಕೋಟಿ ನಿಧಿ ಶೇಖರಣೆಯಗುವಲ್ಲಿ ಪರಿಣಮಿಸಿತು**

ಕರ್ನಾಟಕ ಹಣಕಾಸು ಸಂಹಿತೆಯ ಪರಿಚ್ಛೇದ 161(2)ರ ಪ್ರಕಾರ ಒಂದು ಹಣಕಾಸು ವರ್ಷದಲ್ಲಿ ಖರ್ಚು ಮಾಡಬಹುದಾದಷ್ಟು ಅನುದಾನವನ್ನು ಮಾತ್ರ ಸರ್ಕಾರದಿಂದ ಪಾವತಿಸಬೇಕು. ಸರ್ಕಾರವು, ಆರಾಧನಾ ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜನರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಪ್ರಾರ್ಥನಾ ಸ್ಥಳಗಳ ದುರಸ್ತಿ, ನವೀಕರಣ ಹಾಗೂ ನಿರ್ಮಾಣಗಳಿಗಾಗಿ ರೂ.47.55 ಕೋಟಿ ಮೊತ್ತವನ್ನು ಅನುದಾನವಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿತು (2003–08). ಆರಾಧನಾ ಸಮಿತಿಗಳನ್ನು ರಚಿಸದಿದ್ದುದು, ದೇವಸ್ಥಾನಗಳನ್ನು ನಿರ್ಮಿಸಲು ಸ್ಥಳಗಳನ್ನು ಆಯ್ಕೆ ಮಾಡದಿದ್ದುದು, ಅಂದಾಜುಗಳನ್ನು ತಯಾರಿಸದಿದ್ದುದು, ಇವೇ ಮುಂತಾದ ಕಾರಣಗಳಿಂದ ಹಣವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಲಿಲ್ಲ ಹಾಗೂ ರೂ.20.75 ಕೋಟಿ ಮೊತ್ತವು ಮಾರ್ಚ್ 2007ರ ಅಂತ್ಯಕ್ಕೆ ಖರ್ಚಾಗದೇ ಉಳಿದಿತ್ತು ಎಂಬುದು ದಾಖಲೆಗಳಿಂದ ತಿಳಿದುಬಂದಿತು. ವಾಸ್ತವಾಂಶವೆಂದರೆ,

ಸರ್ಕಾರವು ಖರ್ಚಾಗದೇ ಉಳಿದ ಹಣವನ್ನು ಅಧ್ಯರ್ಪಣೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿತು (ಮಾರ್ಚ್ 2007). ಆದರೆ, ಜಿಲ್ಲಾಧಿಕಾರಿಗಳು ಆದೇಶಗಳನ್ನು ಅನುಸರಿಸಲಿಲ್ಲ. ಆದಾಗ್ಯೂ, ಸರ್ಕಾರವು 2007–08ರಲ್ಲಿ ರೂ.22.40 ಕೋಟಿ ಮೊತ್ತದಷ್ಟು ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿತು. ಖರ್ಚು ಮಾಡಲಾದ ಮೊತ್ತವು ರೂ.58 ಲಕ್ಷ ಮಾತ್ರವಾಗಿತ್ತು ಹಾಗೂ ಉಳಿದ ರೂ.42.57 ಕೋಟಿ ಮೊತ್ತವು ಜಿಲ್ಲಾಧಿಕಾರಿಗಳ ಬಳಿ ಉಳಿದಿತ್ತು (ಮಾರ್ಚ್ 2008).

ಸರ್ಕಾರವು, ಮೇಲಿನ ಕಂಡಿಕೆಗಳು 5.1.7.1 ರಿಂದ 5.1.7.4 ರವರೆಗೆ ಉತ್ತರಿಸುತ್ತಾ, ಉಳಿತಾಯ ಖಾತೆಗಳು/ಅವಧಿ ಠೇವಣಿಗಳಲ್ಲಿ ಲಭ್ಯವಿರುವ ಹಣವನ್ನು ಹಿಂತೆಗೆದು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡಿಕೊಳ್ಳಲು ತತ್‌ಕ್ಷಣದ ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿತು.

## 5.1.8 ಆಡಳಿತಾತ್ಮಕ ನಿಯಂತ್ರಣಗಳು

2003–08ರ ಅವಧಿಯಲ್ಲಿ ಶಾಸನಬದ್ಧ ಮಂಡಳಿ ಹಾಗೂ ನಿಗಮಗಳಿಂದ ತೆಗೆಯಲ್ಪಟ್ಟ ಸಾಲಗಳಿಗೆ ಖಾತರಿಯಾಗಿ ನಿಲ್ಲುವುದರ ಜೊತೆಗೆ ಸಾರ್ವಜನಿಕ ಖರ್ಚುಗಳಿಗಾಗಿ ಹಣವನ್ನು ಸಂಗ್ರಹಣೆ ಮಾಡುವ ಸಲುವಾಗಿ ಸರ್ಕಾರವು ಮುಕ್ತ ಮಾರುಕಟ್ಟೆಯ ಸಾಲಗಳಿಗೆ ಮೊರೆ ಹೋಯಿತು. ಹಣಕಾಸು ಇಲಾಖೆಯು ಸಾಮಾನ್ಯ ರೀತಿಯ ಲೆಕ್ಕ ಪದ್ಧತಿಯು ಸೂಕ್ತವಲ್ಲವೆಂದು ಕಂಡುಬಂದ ಕಡೆಯಲ್ಲಿ ವೈಯಕ್ತಿಕ ಠೇವಣಿ ಲೆಕ್ಕಗಳ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನೂ ಹೊಂದಿತ್ತು. ಈ ಕ್ಷೇತ್ರಗಳಲ್ಲಿ ಆಡಳಿತಾತ್ಮಕ ನಿಯಂತ್ರಣಗಳನ್ನು ಚಲಾಯಿಸುವಲ್ಲಿನ ಹಣಕಾಸು ಇಲಾಖೆಯ ವಿಫಲತೆಯು, ಮುಕ್ತ ಮಾರುಕಟ್ಟೆಯಲ್ಲಿ ವಿವೇಕರಹಿತ ಸಾಲಗಳನ್ನು ಮಾಡುವಲ್ಲಿ, ಹಣಕಾಸು ಸಂಸ್ಥೆಗಳು ಸರ್ಕಾರಿ ಖಾತರಿಯನ್ನು ನಗದೀಕರಣ ಮಾಡುವಲ್ಲಿ ಹಾಗೂ ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಸರ್ಕಾರದ ಹಣವನ್ನು ಅಕ್ರಮವಾಗಿ ಉಳಿಸಿಕೊಳ್ಳುವಲ್ಲಿ ಈ ಕೆಳಗಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಪರಿಣಮಿಸಿತು.

### 5.1.8.1 ತಡೆಗಟ್ಟಬಹುದಾಗಿದ್ದ ಮಾರುಕಟ್ಟೆ ಸಾಲಗಳು

**ತೃಪ್ತಿಕರವಾದ ಹಣಕಾಸು ಸ್ಥಿತಿಯಿದ್ದರೂ ಸಹ ಸರ್ಕಾರವು ರೂ.1,164.92 ಕೋಟಿ ಮುಕ್ತ ಮಾರುಕಟ್ಟೆ ಸಾಲಗಳಿಗೆ ಮೊರೆ ಹೋಯಿತು**

ಸಾಲಗಳನ್ನು ವಿವೇಕಯುತ ಮಟ್ಟಗಳಲ್ಲಿ ನಿರ್ವಹಿಸದೆ ಹಾಗೂ ದಿನನಿತ್ಯದ ಖರ್ಚುಗಳಿಗೆ ಉಪಯೋಗಿಸದಂತೆ ಸಾಲ ಪಡೆದ ಮೊತ್ತಗಳನ್ನು ಉತ್ಪಾದಕ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ ಎಂಬುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂದು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002 ಅನುವು ಮಾಡಿದೆ. ಈ ಅನುವುಗಳಿಗೆ ವ್ಯತಿರಿಕ್ತವಾಗಿ, ಹಣಕಾಸು ಇಲಾಖೆಯು, ಮೇ 2005 ಹಾಗು ಮಾರ್ಚ್ 2008ರ ನಡುವೆ ಸರ್ಕಾರದ ನಗದು ಸ್ಥಿತಿ 1 ಏಪ್ರಿಲ್ 2005ರಲ್ಲಿದ್ದಂತೆ ರೂ.2,029.83 ಕೋಟಿ ಮತ್ತು 1 ಮಾರ್ಚ್ 2008ರಲ್ಲಿದ್ದಂತೆ ರೂ.2,907.19 ಕೋಟಿಯಷ್ಟಿದ್ದು ತೃಪ್ತಿಕರವಾಗಿತ್ತಾದರೂ ಮುಕ್ತ ಮಾರುಕಟ್ಟೆಯ ಮೂಲಕ ರೂ.1164.92 ಕೋಟಿ ಮೊತ್ತದಷ್ಟು ಸಾಲಗಳನ್ನು ತೆಗೆದುಕೊಂಡಿತು. ಮಾರ್ಚ್ 2008ರ ಅಂತ್ಯದ ವೇಳೆಗೆ ಆರ್ಥಿಕ ಹೊಣೆಗಾರಿಕೆ ರೂ.8,271 ಕೋಟಿಗಳಷ್ಟಿತ್ತಾದ್ದರಿಂದ ಸಾಲಗಳಿಗೆ ಮೊರೆ ಹೋಗುವುದು ಆವಶ್ಯಕವಾಗಿತ್ತು ಎಂದು ಇಲಾಖೆಯು ಉತ್ತರಿಸಿತು. ಸರ್ಕಾರವು ಮಾರ್ಚ್ 2008ರಲ್ಲಿ ರೂ.572.98 ಕೋಟಿ ಮೊತ್ತವನ್ನು ಖಜಾನೆ ಬಿಲ್ಲುಗಳಲ್ಲಿ ಹೂಡಿದ್ದರಿಂದ ಹಾಗೂ 31 ಮಾರ್ಚ್ 2008ರಲ್ಲಿದ್ದಂತೆ ನಗದು ಸ್ಥಿತಿಗತಿಯು ರೂ.3,480.16 ಕೋಟಿಯಷ್ಟಿದ್ದಿತಾದ್ದರಿಂದ ಉತ್ತರವು ಸಮರ್ಥನೀಯವಾಗಿರಲಿಲ್ಲ. ಸಾಲಗಳನ್ನು ಉತ್ಪಾದಕ ಉದ್ದೇಶಗಳಿಗೇ ಬಳಸಲಾಯಿತು ಎಂಬುದನ್ನು ಸಮರ್ಥಿಸಿಕೊಳ್ಳಲು ಸರ್ಕಾರವು ವಿವರಗಳನ್ನು ಸಹ ಒದಗಿಸಲಿಲ್ಲ.

### 5.1.8.2 ಸರ್ಕಾರದಿಂದ ನೀಡಲ್ಪಟ್ಟ ಖಾತರಿಗಳು

ಸರ್ಕಾರದ ಇಲಾಖೆಗಳು, ಸಾರ್ವಜನಿಕ ವಲಯದ ಕಂಪನಿಗಳು, ಸ್ಥಳೀಯ ಪ್ರಾಧಿಕಾರಗಳು, ಶಾಸನಬದ್ಧ ಮಂಡಳಿಗಳು ಹಾಗೂ ನಿಗಮಗಳು ಮತ್ತು ಸಹಕಾರಿ ಸಂಸ್ಥೆಗಳ ಪರವಾಗಿ ಸರ್ಕಾರದಿಂದ

ನೀಡಲ್ಪಟ್ಟ ಖಾತರಿಗಳು ಮಾರ್ಚ್ 2007ರ ಅಂತ್ಯಕ್ಕೆ ರೂ.9,879.47 ಕೋಟಿಯಷ್ಟಿದ್ದವು. ದಾಖಲೆಗಳ ಸಮೀಕ್ಷೆಯಿಂದ ಈ ಕೆಳಗಿನವುಗಳು ತಿಳಿದುಬಂದವು:

**ಖಾತರಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಇಡದಿದ್ದುದು**

ಹಣಕಾಸು ಇಲಾಖೆಯೇ ಆಗಲೀ ಅಥವಾ ಸಂಬಂಧಿತ ಆಡಳಿತಾತ್ಮಕ ಇಲಾಖೆಗಳೇ ಆಗಲೀ ವಿವಿಧ ಸಂಸ್ಥೆಗಳು ಪಡೆದಿದ್ದ ಸಾಲಕ್ಕೆ ಸರ್ಕಾರದಿಂದ ನೀಡಲ್ಪಟ್ಟಿದ್ದ ಖಾತರಿಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನೂ ಇಟ್ಟಿರಲಿಲ್ಲ. ಸಾಲ ಪಡೆದಿದ್ದ ಸಂಸ್ಥೆಗಳಿಂದ ಒದಗಿಸಿದ ವಿವರಗಳ ಆಧಾರದ ಮೇರೆಗೆ ಈ ಮಾಹಿತಿಯನ್ನು ಹಣಕಾಸು ಇಲಾಖೆಯು ಮುಂಗಡ ಪತ್ರದ ಬಿನ್ನವತ್ತಳೆಗಾಗಿ ಸಂಗ್ರಹಿಸುತ್ತಿತ್ತು ಹಾಗೂ ಆ ಮಾಹಿತಿಗಳು ಮೌಢ್ಯರೋಧಕವಾಗಿರಲಿಲ್ಲ. ತತ್ಪರಿಣಾಮವಾಗಿ, ಹಣಕಾಸು ಇಲಾಖೆಯು ಮುಂಗಡ ಪತ್ರದ ಬಿನ್ನವತ್ತಳೆಯಲ್ಲಿ ಸೇರಿಸಲಾದ ಮಾಹಿತಿಯು ಅಧಿಕೃತವಾಗಿತ್ತೆಂಬುದನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ.

**ಆಸ್ತಿಗಳು ಹಾಗೂ ಜವಾಬ್ದಾರಿಗಳ ತ:ಖ್ತೆಯನ್ನು ಸಲ್ಲಿಸದಿದ್ದುದು**

ಸಾಲಪಡೆಯುವ ಇಲಾಖೆಗಳು ಆಡಳಿತಾತ್ಮಕ ಇಲಾಖೆಗಳಿಗೆ ಹಾಗೂ ಹಣಕಾಸು ಇಲಾಖೆಗೆ ಆಸ್ತಿ ಮತ್ತು ಜವಾಬ್ದಾರಿಗಳ ನಿಯತಕಾಲಿಕ ತ:ಖ್ತೆಯನ್ನು ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಬೇಕೆಂಬ ಷರತ್ತು ಕರ್ನಾಟಕ ಸರ್ಕಾರೀ ಖಾತರಿಗಳ ಮೇಲಿನ ಮಿತಿ ಅಧಿನಿಯಮ, 1999 ಒಳಗೊಂಡಿದೆ. ಪರೀಕ್ಷಾ–ತನಿಖೆ ಮಾಡಲ್ಪಟ್ಟ ಆರು[7] ಸಂಸ್ಥೆಗಳಲ್ಲಿ ಆಡಳಿತಾತ್ಮಕ ಇಲಾಖೆಗೆ ಹಾಗೂ ಹಣಕಾಸು ಇಲಾಖೆಗೆ ಅಂತಹ ನಿಯತಕಾಲಿಕ ತ:ಖ್ತೆಗಳನ್ನು ಸಲ್ಲಿಸಿರಲಿಲ್ಲ ಮತ್ತು ಈ ಸಂಬಂಧವಾಗಿ ಹಣಕಾಸು ಇಲಾಖೆಯು ಸಾಲ ಪಡೆದ ಸಂಸ್ಥೆಗಳಿಗೆ ಯಾವುದೇ ಸೂಚನೆಗಳನ್ನೂ ಕೊಟ್ಟಿರಲಿಲ್ಲ.

**ಸರ್ಕಾರದಿಂದ ಖಾತರಿಯ ಮೇಲೆ ಪಡೆದ ಸಾಲದ ಮರುಪಾವತಿಯಲ್ಲಿ ಕರ್ತವ್ಯಲೋಪ**

**ಸಾಲ ಮರುಪಾವತಿ ಮಾಡದ ಕಾರಣ ಹಣಕಾಸು ಸಂಸ್ಥೆಗಳು ಸರ್ಕಾರಿ ಖಾತರಿಗಳಿಗೆ ಮೊರೆ ಹೋದವು**

ಸರ್ಕಾರದ ಖಾತರಿಯ ಮೇಲೆ ಗುಲ್ಬರ್ಗ ಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತವು ಪಡೆದ ಸಾಲವೊಂದಕ್ಕೆ ಸಂಬಂಧಿಸಿದಂತೆ ಭಾರತೀಯ ಕೈಗಾರಿಕಾ ಹಣಕಾಸು ನಿಗಮ ಹಾಗೂ ಭಾರತೀಯ ಕೈಗಾರಿಕಾ ಬ್ಯಾಂಕು, ಬೆಂಗಳೂರು, ಇವು ಸಾಲ ವಸೂಲಾತಿ ನ್ಯಾಯಮಂಡಳಿ, ಬೆಂಗಳೂರು ಇವರಿಂದ ಒಂದು ಜಪ್ತಿ ಆದೇಶವನ್ನು ತಂದವು (ಜುಲೈ 2004) ಹಾಗೂ ಸಹಕಾರಿ ಇಲಾಖೆಯಿಂದ ರೂ.49.94 ಲಕ್ಷ ಮೊತ್ತವನ್ನು ವಸೂಲಿ ಮಾಡಿದವು. ಈ ಸತ್ಯಾಂಶವನ್ನು ಹಣಕಾಸು ಇಲಾಖೆಗೆ ಕೂಡ ತಿಳಿಸಲಾಯಿತು (ಸೆಪ್ಟಂಬರ್ 2004) ಹಾಗೂ ಮಾರ್ಚ್ 1999ರ ಸಾಲಿನ ಅಂತ್ಯಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ [ಕಂಡಿಕೆ 3.6.2(ii) ಹಾಗೂ (iii)] ಖಾತರಿಗಳನ್ನು ಸಾಲಪಡೆಯುವ ಸಂಸ್ಥೆಗಳ ಹಣಕಾಸಿನ ಸ್ಥಿತಿಗತಿಗಳ/ಸಾಲ ತೀರಿಸಬಲ್ಲ ಶಕ್ತಿಯನ್ನು ಖಚಿತಪಡಿಸಿಕೊಳ್ಳದೆಯೇ ವಾಡಿಕೆಯಂತೆ ಕೊಡಲ್ಪಟ್ಟಿದ್ದವು ಎಂಬುದನ್ನು ಪ್ರಸ್ತಾಪಿಸಲಾಗಿತ್ತಾದರೂ ಹಣಕಾಸು ಇಲಾಖೆಯು ಯಾವುದೇ ಕ್ರಮವನ್ನೂ ಕೈಗೊಳ್ಳಲಿಲ್ಲ.

ಸರ್ಕಾರಿ ಖಾತರಿಗಳನ್ನು ನಿಯಂತ್ರಣಗೊಳಿಸುವ ಉದ್ದೇಶದಿಂದ ಹಣಕಾಸು ಇಲಾಖೆಯಲ್ಲಿ ಹೂಡಿಕೆ ಅನುಸರಣೆ ಹಾಗೂ ವಸೂಲಾತಿ ನಿರ್ದೇಶನಾಲಯ ಎಂಬ ಒಂದು ಪ್ರತ್ಯೇಕ ಇಲಾಖೆಯನ್ನು 2007–08ರಲ್ಲಷ್ಟೇ ಸೃಷ್ಟಿಸಲಾಯಿತು.

---

7 ಪೌರಾಡಳಿತ ನಿರ್ದೇಶನಾಲಯ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಸಹಕಾರಿ ಸಂಘಗಳ ನಿಬಂಧಕರು

### 5.1.8.3 ವೈಯಕ್ತಿಕ ಠೇವಣಿ ಖಾತೆಗಳು

ಕರ್ನಾಟಕ ಹಣಕಾಸು ಸಂಹಿತೆಯ ಪರಿಚ್ಛೇದ 286ರ ಪ್ರಕಾರ ವಾಡಿಕೆಯಲ್ಲಿರುವ ಲೆಕ್ಕಪತ್ರ ವ್ಯವಸ್ಥೆಯು ವ್ಯವಹಾರಗಳಿಗೆ ಸೂಕ್ತವಲ್ಲವೆಂದು ಕಂಡುಬಂದಲ್ಲಿ ಸರ್ಕಾರದ ವಿಶೇಷ ಅನುಮತಿಯೊಡನೆ ವೈಯಕ್ತಿಕ ಠೇವಣಿ ಖಾತೆಗಳನ್ನು ತೆರೆಯಬಹುದು. ಆದಾಗ್ಯೂ, ವೈಯಕ್ತಿಕ ಠೇವಣಿ ಖಾತೆಗಳ ನಿರ್ವಹಣಾಧಿಕಾರಿಗಳು ವರ್ಷದ ಕೊನೆಯಲ್ಲಿ ಸಂಚಿತ ನಿಧಿಗೆ ಅಂತಿಮ ಶಿಲ್ಕನ್ನು ವರ್ಗಾಯಿಸಲು ಅನುವಾಗುವಂತೆ ಅದನ್ನು ಖಜಾನಾಧಿಕಾರಿಗಳಿಗೆ ತಿಳಿಸುವ ಮೂಲಕ ಮುಕ್ತಾಯಗೊಳಿಸಬೇಕು.

**ಖರ್ಚಾಗದೇ ಉಳಿದ ಶಿಲ್ಕನ್ನು ಅಧ್ಯರ್ಪಣೆ ಮಾಡದಿದ್ದುದು**

**ಕರ್ನಾಟಕ ಹಣಕಾಸು ಸಂಹಿತೆಗೆ ವ್ಯತಿರಿಕ್ತವಾಗಿ ಭಾರಿ ಪ್ರಮಾಣದ ಶಿಲ್ಕುಗಳನ್ನು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿಸಿಕೊಂಡಿದ್ದರು**

ಪೌರಾಡಳಿತ ನಿರ್ದೇಶಕರು ಹಾಗೂ ಆಯುಕ್ತರು, ರಾಜ್ಯ ಅಬಕಾರಿ ಇಲಾಖೆ, ಇವರುಗಳ ವೈಯಕ್ತಿಕ ಠೇವಣಿ ಖಾತೆಗಳ ಸಮೀಕ್ಷೆಯು, ತಮ್ಮ ವೈಯಕ್ತಿಕ ಠೇವಣಿ ಖಾತೆಯಲ್ಲಿ 2005–08ರ ಅವಧಿಯಲ್ಲಿ ರೂ.7.10 ಕೋಟಿಯಿಂದ ರೂ.32.19 ಕೋಟಿವರೆಗೂ[8] ಕ್ರೋಢೀಕರಿಸಿದ್ದರು ಎಂಬುದನ್ನು ತಿಳಿಯ ಪಡಿಸಿತು. ಅಂತೆಯೇ ರಾಜ್ಯ ಅಬಕಾರಿ ಇಲಾಖೆಯ ಆಯುಕ್ತರು ರೂ.70.79 ಲಕ್ಷವನ್ನು ತಮ್ಮ ವೈಯಕ್ತಿಕ ಠೇವಣಿ ಖಾತೆಯಲ್ಲಿ ಜೂನ್ 2006ರಿಂದಲೂ ನಿಯಮಗಳ ಅಡಿಯಲ್ಲಿ ಅಗತ್ಯವಿರುವಂತೆ ಅವುಗಳನ್ನು ಸಂಚಿತ ನಿಧಿಗೆ ವರ್ಗಾಯಿಸುವಂತೆ ಖಜಾನೆ ಅಧಿಕಾರಿಗಳಿಗೆ ತಿಳಿಸದೆಯೇ ಅಕ್ರಮವಾಗಿ ಉಳಿಸಿಕೊಂಡಿದ್ದರು. ಅಬಕಾರಿ ಆಯುಕ್ತರವರ ವೈಯಕ್ತಿಕ ಠೇವಣಿ ಖಾತೆಯಲ್ಲಿ ಇರುವ ಮೊತ್ತವನ್ನು ಸಂಚಿತ ನಿಧಿಗೆ ತತ್‌ಕ್ಷಣವೇ ವರ್ಗಾಯಿಸುವುದಾಗಿ ಸರ್ಕಾರವು ತಿಳಿಸಿತು.

**ವೈಯಕ್ತಿಕ ಠೇವಣಿ ಖಾತೆಗಳಿಗೆ ಹೆಚ್ಚಾಗಿ ಹಾಕಿದ್ದ ಮೊತ್ತವನ್ನು ಹಿಂಪಡೆಯದಿದ್ದುದು.**

ರಾಜ್ಯ ಹುಜೂರ್ ಖಜಾನೆಯು ಪೌರಾಡಳಿತ ನಿರ್ದೇಶಕರ ವೈಯಕ್ತಿಕ ಠೇವಣಿ ಖಾತೆಗೆ ರೂ.50.00 ಲಕ್ಷಗಳನ್ನು (2004–05) ಹಾಗೂ ರಾಜ್ಯ ಲೆಕ್ಕಪತ್ರಗಳ ನಿಯಂತ್ರಕರ ವೈಯಕ್ತಿಕ ಠೇವಣಿ ಖಾತೆಗೆ ರೂ.7.07 ಲಕ್ಷಗಳನ್ನು(2004–05) ಹೆಚ್ಚುವರಿಯಾಗಿ ಜಮೆ ಮಾಡಿತ್ತು. ಆದಾಗ್ಯೂ, ಮೂರು ವರ್ಷಗಳೇ ಕಳೆದರೂ ಹೆಚ್ಚುವರಿಯಾಗಿ ಜಮೆ ಮಾಡಿದ ಮೊತ್ತಗಳನ್ನು ಹಿಂಪಡೆಯಲು ಹಾಗೂ ಅವುಗಳನ್ನು ಸಂಚಿತ ನಿಧಿಗೆ ವರ್ಗಾಯಿಸಲು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ.

## 5.1.9 ನಿರ್ಣಯ

ಆಯವ್ಯಯ, ವೆಚ್ಚ ಹಾಗೂ ಆಡಳಿತಾತ್ಮಕ ನಿಯಂತ್ರಣಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಿಲ್ಲ. ಹಣಕಾಸು ಇಲಾಖೆಯಿಂದ 2003–07ರ ಅವಧಿಯಲ್ಲಿ ಇಲಾಖೆಗಳ ಅಂದಾಜುಗಳನ್ನು ಪರಿಶೀಲಿಸುವಲ್ಲಿನ ಕೊರತೆಯ ಕಾರಣ ನಿರಂತರ ಉಳಿತಾಯಗಳಿದ್ದವು. ನಿಗದಿತ ನಿಯಮಗಳನ್ನು ಮತ್ತು ಕಾರ್ಯವಿಧಾನಗಳನ್ನು ಅನುಸರಿಸದಿದ್ದುದು ಹಣವನ್ನು ಸಂಚಿತ ನಿಧಿಯಿಂದ ತೆಗೆದು ಅದನ್ನು ಸರ್ಕಾರದ ಲೆಕ್ಕಪತ್ರಗಳಿಂದ ಹೊರಗಿಟ್ಟು ದುರುಪಯೋಗದ ಸಂಭವಕ್ಕೆ ತೆರೆದಿಡುವ ಅಪಾಯದಲ್ಲಿ ಪರಿಣಮಿಸಿತು. ಸರ್ಕಾರದ ಹಣಕಾಸಿನ ಸ್ಥಿತಿಗತಿಗಳು ತೃಪ್ತಿಕರವಾಗಿದ್ದಾಗ ಮುಕ್ತ ಮಾರುಕಟ್ಟೆಯ ಸಾಲಗಳಿಗೆ ಮೊರೆ ಹೋದದ್ದು ಒಂದು ಸ್ವಸ್ಥ ಹಣಕಾಸಿನ ನಿರ್ವಹಣೆಯ ಮೂಲತತ್ವಗಳಿಗೆ ವಿರುದ್ದವಾಗಿದ್ದಿತು. ಕರ್ನಾಟಕ ಹಣಕಾಸು ಸಂಹಿತೆಯ ಅನುವುಗಳಿಗೆ ವ್ಯತಿರಿಕ್ತವಾಗಿ ಭಾರೀ ಪ್ರಮಾಣದ ಶಿಲ್ಕುಗಳನ್ನು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿಸಿಕೊಳ್ಳಲಾಗಿತ್ತು.

[8] 31–3–2006– ರೂ.7.10 ಕೋಟಿ, 31–3–2007–ರೂ.11.54 ಕೋಟಿ, 31–3–2008–ರೂ.32.19 ಕೋಟಿ

## 5.1.10 ಶಿಫಾರಸುಗಳು

- ಹಣಕಾಸುಗಳನ್ನು ಹೆಚ್ಚುವರಿಯಾಗಿ ಅನುವು ಮಾಡುವುದನ್ನು ತಪ್ಪಿಸುವುದಕ್ಕಾಗಿ ಹಣಕಾಸು ಇಲಾಖೆಯು ಕರ್ನಾಟಕ ಆಯವ್ಯಯ ಕೈಪಿಡಿಯ ಪ್ರಕಾರ ಆಯವ್ಯಯ ಅಂದಾಜುಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು.
- ಲಭ್ಯವಿರುವ ಹಣಕಾಸು ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ, ಹಣಕಾಸು ಇಲಾಖೆಯಿಂದ ಮರು ಹಂಚಿಕೆಗಳನ್ನು ಸಮಯಯೋಚಿತವಾಗಿ ಮಾಡಲು ಅನುಕೂಲವಾಗುವಂತೆ ಎಲ್ಲಾ ನಿಯಂತ್ರಣ ಅಧಿಕಾರಿಗಳೂ ಉಳಿತಾಯಗಳನ್ನು ಸಾಕಷ್ಟು ಮುಂಚಿತವಾಗಿಯೇ ಅಧ್ಯರ್ಪಣೆ ಮಾಡುವುದನ್ನು ಹಣಕಾಸು ಇಲಾಖೆಯು ಖಚಿತಪಡಿಸಿಕೊಳ್ಳಬೇಕು.
- ಹಣವು ಕೈ ತಪ್ಪಿಹೋಗುವುದನ್ನು ತಡೆಗಟ್ಟುವ ದೃಷ್ಟಿಯಿಂದ ಇಲಾಖೆಗಳು ಸರ್ಕಾರದ ಹಣವನ್ನು ಒಂದೇ ಕಂತಿನಲ್ಲಿ ಒಟ್ಟಾರೆಯಾಗಿ ತೆಗೆಯದಿರುವುದನ್ನು ಹಾಗೂ ತಮ್ಮ ಸಂಸ್ಥೆಗಳಿಗೆ ಅಥವಾ ಉಳಿತಾಯ ಖಾತೆಗಳಿಗೆ ಮಾರ್ಗಪಲ್ಲಟ ಮಾಡದಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಹಣಕಾಸು ಇಲಾಖೆಯು ಸೂಕ್ತ ವೆಚ್ಚ ನಿಯಂತ್ರಣಗಳನ್ನು ಚಲಾಯಿಸಬೇಕು.
- ಬಾಕಿ ಇರುವ ಎಲ್ಲಾ ಖಾತರಿಗಳನ್ನು ಸಮೀಕ್ಷಿಸಲು ಹಾಗೂ ರಾಜ್ಯದ ರಾಜಸ್ವಗಳ ಮೇಲೆ ಬರಬಹುದಾದ ಬಾಧ್ಯತೆಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ನಿಯತಕಾಲಿಕ ಸಲ್ಲಿಕೆಗಳನ್ನು ನಿಗದಿಪಡಿಸುವುದಕ್ಕಾಗಿ ಹಣಕಾಸು ಇಲಾಖೆಯು ತತ್‌ಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು.

**ಬೆಂಗಳೂರು** **(ಉಷಾ ಶಂಕರ್)**
**ದಿನಾಂಕ** **ಪ್ರಧಾನ ಮಹಾಲೇಖಪಾಲರು**
**(ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ)**

**ಮೇಲುರುಜುಮಾಡಿದೆ**

**ನವದೆಹಲಿ** **(ವಿನೋದ್ ರೈ)**
**ದಿನಾಂಕ** **ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

**ಅನುಬಂಧ 1.1 – ಭಾಗ 'ಎ'**

**ಸರ್ಕಾರಿ ಲೆಕ್ಕಗಳ ರೂಪರೇಷೆ ಮತ್ತು ನಮೂನೆ**

**(ಉಲ್ಲೇಖ: ಕಂಡಿಕೆ 1.1 ಪುಟ 3)**

## I. ರೂಪರೇಷೆ

ರಾಜ್ಯ ಸರ್ಕಾರದ ಲೆಕ್ಕಗಳನ್ನು (1) ಸಂಚಿತ ನಿಧಿ, (2) ಸಾದಿಲ್ವಾರು ನಿಧಿ ಮತ್ತು (3) ಸಾರ್ವಜನಿಕ ಲೆಕ್ಕ ಎಂಬ ಮೂರು ಭಾಗಗಳಲ್ಲಿ ಇಡಲಾಗುತ್ತದೆ.

### ಭಾಗ 1: ಸಂಚಿತ ನಿಧಿ

ರಾಜ್ಯ ಸರ್ಕಾರದ ರಾಜಸ್ವ, ಸಾಲ ಮತ್ತು ಸಾಲ ವಸೂಲಾತಿಯಿಂದ ಸಂಗ್ರಹಿಸಲಾದ ಎಲ್ಲಾ ಜಮೆಗಳೂ ಭಾರತ ಸಂವಿಧಾನದ 266(1)ನೇ ಅನುಚ್ಛೇದದ ಪ್ರಕಾರ ಸ್ಥಾಪಿಸಲಾಗಿರುವ ರಾಜ್ಯ ಸಂಚಿತ ನಿಧಿಗೆ ಜಮೆಯಾಗುತ್ತವೆ. ಸರ್ಕಾರದ ಎಲ್ಲಾ ವೆಚ್ಚಗಳನ್ನೂ ಈ ನಿಧಿಯಿಂದಲೇ ಭರಿಸಲಾಗುತ್ತದೆ ಮತ್ತು ಅದರಿಂದ ರಾಜ್ಯ ವಿಧಾನಮಂಡಲದ ಪೂರ್ವಾನುಮತಿಯಿಲ್ಲದೆ ಹಣವನ್ನು ಪಡೆಯಲಾಗುವುದಿಲ್ಲ. ಈ ವಿಭಾಗವು ರಾಜಸ್ವ ಲೆಕ್ಕ (ರಾಜಸ್ವ ಜಮೆಗಳು ಮತ್ತು ರಾಜಸ್ವ ವೆಚ್ಚ) ಮತ್ತು ಬಂಡವಾಳ ಲೆಕ್ಕ (ಬಂಡವಾಳ ಜಮೆ, ಬಂಡವಾಳ ವೆಚ್ಚ, ಸಾರ್ವಜನಿಕ ಋಣ ಮತ್ತು ಸಾಲಗಳು ಇತ್ಯಾದಿಗಳು) ಎಂಬ ಎರಡು ಮುಖ್ಯ ವಿಭಾಗಗಳನ್ನು ಹೊಂದಿದೆ.

### ಭಾಗ 2: ಸಾದಿಲ್ವಾರು ನಿಧಿ

ಭಾರತದ ಸಂವಿಧಾನದ ಅನುಚ್ಛೇದ 267(2) ಪ್ರಕಾರ ಸ್ಥಾಪಿಸಲಾದ ಸಾದಿಲ್ವಾರು ನಿಧಿಯು ಮುಂಗಡ ರೂಪದಲ್ಲಿದ್ದು, ರಾಜ್ಯದ ರಾಜ್ಯಪಾಲರ ವಿಲೇವಾರಿಯಲ್ಲಿದ್ದು ಜರೂರು ಸಂದರ್ಭಗಳಲ್ಲಿ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ರಾಜ್ಯ ವಿಧಾನಮಂಡಲದ ಪೂರ್ವಾನುಮೋದನೆಯನ್ನು ಬಾಕಿ ಉಳಿಸಿಕೊಂಡು ಈ ನಿಧಿಯಿಂದ ಹಣವನ್ನು ಪಡೆಯಲಾಗುತ್ತದೆ. ತದನಂತರ ಅಂತಹ ವೆಚ್ಚಕ್ಕೆ ರಾಜ್ಯ ಶಾಸಕಾಂಗದ ಅನುಮೋದನೆಯನ್ನು ಪಡೆದು ಆ ವೆಚ್ಚಕ್ಕೆ ಸಮನಾದ ಮೊತ್ತವನ್ನು ಸಂಚಿತ ನಿಧಿಯಿಂದ ಸಾದಿಲ್ವಾರು ನಿಧಿಗೆ ವರ್ಗಾಯಿಸಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ವಿಧಾನ ಮಂಡಲದಿಂದ ಅನುಮೋದಿಸಲ್ಪಟ್ಟ ಸಾದಿಲ್ವಾರು ನಿಧಿಯ ಮೂಲಧನವು ರೂ.80 ಕೋಟಿ ಇದ್ದಿತು.

### ಭಾಗ 3: ಸಾರ್ವಜನಿಕ ಲೆಕ್ಕ

ಸಂಚಿತ ನಿಧಿಯ ಭಾಗವಾಗದ ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು, ಠೇವಣಿಗಳು, ಮೀಸಲು ನಿಧಿಗಳು, ಅಮಾನತ್ತು, ಇರಸಾಲುಗಳು ಮುಂತಾದವುಗಳ ಜಮೆಗಳು ಮತ್ತು ಖರ್ಚುಗಳನ್ನು 'ಸಾರ್ವಜನಿಕ ಲೆಕ್ಕ'ದಲ್ಲಿ ಇಡಲಾಗುತ್ತದೆ ಮತ್ತು ರಾಜ್ಯ ವಿಧಾನಮಂಡಲದ ಅನುಮೋದನೆಗೆ ಒಳಪಟ್ಟಿರುವುದಿಲ್ಲ.

## II. ವಾರ್ಷಿಕ ಲೆಕ್ಕಗಳ ನಮೂನೆಗಳು

ರಾಜ್ಯ ಸರ್ಕಾರದ ಲೆಕ್ಕಗಳನ್ನು ಹಣಕಾಸು ಲೆಕ್ಕ ಮತ್ತು ಧನವಿನಿಯೋಗ ಲೆಕ್ಕ ಎಂಬ ಎರಡು ಸಂಪುಟಗಳಲ್ಲಿ ತಯಾರಿಸಲಾಗುತ್ತದೆ. ಹಣಕಾಸಿನ ಲೆಕ್ಕವು, ರಾಜ್ಯದ ಜಮೆ ಖರ್ಚುಗಳ ವಹಿವಾಟಿನ ವಿವರಗಳನ್ನು ಸೂಕ್ತ ಶೀರ್ಷಿಕೆಗಳಡಿಯಲ್ಲಿ ತೋರಿಸುತ್ತದೆ. ಧನವಿನಿಯೋಗ ಲೆಕ್ಕವು ವಿಧಾನ ಮಂಡಲದಿಂದ ಅನುಮೋದಿಸಲ್ಪಟ್ಟ ಆಯವ್ಯಯದಲ್ಲಿನ ಅಂದಾಜುಗಳಿಗೆ ಮುಖಾಮುಖಿಯಾಗಿ ರಾಜ್ಯ ಸರ್ಕಾರದ ವೆಚ್ಚದ ವಿವರಗಳನ್ನು ನೀಡುತ್ತದೆ. ಯಾವುದೇ ಅನುದಾನಗಳಲ್ಲಿನ ವೆಚ್ಚವು ಅನುಮೋದಿತ ಅಂದಾಜಿಗಿಂತಲೂ ಅಧಿಕವಾಗಿದ್ದಲ್ಲಿ ಈ ಹೆಚ್ಚಿನ ವೆಚ್ಚವು ವಿಧಾನಮಂಡಲದಿಂದ ಸಕ್ರಮಗೊಳಿಸಲ್ಪಡಬೇಕಾಗುತ್ತದೆ.

**ಅನುಬಂಧ 1.1 – ಭಾಗ 'ಬಿ'**
**ಹಣಕಾಸು ಲೆಕ್ಕದ ವಿನ್ಯಾಸ**
**(ಉಲ್ಲೇಖ: ಕಂಡಿಕೆ 1.1 ಪುಟ 3)**

| | |
|---|---|
| **ತಃಖ್ತೆ–1** | ರಾಜ್ಯ ಸರ್ಕಾರದ ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳಡಿಯ ಜಮೆಗಳು ಮತ್ತು ವೆಚ್ಚಗಳು, ರಾಜಸ್ವ ಮತ್ತು ಬಂಡವಾಳ, ಸಾರ್ವಜನಿಕ ಋಣ ಜಮೆಗಳು ಮತ್ತು ವಿತರಣೆಗಳು ಮುಂತಾದವುಗಳ ವಹಿವಾಟುಗಳ ಸಾರಾಂಶವನ್ನು ನೀಡುವುದರೊಂದಿಗೆ ಭಾರಿ ಮತ್ತು ಪ್ರಮುಖ ವ್ಯತ್ಯಯಗಳನ್ನೊಳಗೊಂಡ ಪ್ರಕರಣಗಳೊಂದಿಗೆ ವಹಿವಾಟುಗಳ ತುಲನಾತ್ಮಕ ಸಾರಾಂಶವನ್ನು ವಿವರಣೆಯೊಂದಿಗೆ ನೀಡುತ್ತದೆ. |
| **ತಃಖ್ತೆ–2** | 2007–08ರ ಅಂತ್ಯದಲ್ಲಿನ ಒಟ್ಟು ಪ್ರಗತಿಯನ್ನು ತೋರಿಸುವ ರಾಜಸ್ವ ಲೆಕ್ಕದ ಹೊರಗಿನ ಬಂಡವಾಳ ವೆಚ್ಚದ ಸಂಕ್ಷಿಪ್ತ ಸ್ಥಿತಿಯನ್ನು ಸೂಚಿಸುತ್ತದೆ. |
| **ತಃಖ್ತೆ–3** | ವಿದ್ಯುಚ್ಛಕ್ತಿ ಹಾಗೂ ನೀರಾವರಿ ಯೋಜನೆಗಳ ಆರ್ಥಿಕ ಫಲಿತಾಂಶಗಳನ್ನು ನೀಡುತ್ತದೆ. |
| **ತಃಖ್ತೆ–4** | ಆಂತರಿಕ ಋಣ, ಭಾರತ ಸರ್ಕಾರದಿಂದ ಪಡೆದ ಸಾಲಗಳು, ಇತರೆ ಹೊಣೆಗಳು ಮತ್ತು ಋಣ ತೀರಿಕೆಗಳೂ ಸೇರಿದಂತೆ ರಾಜ್ಯದ ಋಣಸ್ಥಿತಿಯ ಸಾರಾಂಶವನ್ನು ನೀಡುತ್ತದೆ. |
| **ತಃಖ್ತೆ–5** | ಪ್ರಸಕ್ತ ವರ್ಷದಲ್ಲಿ ರಾಜ್ಯ ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು, ಸಾಲ ವಸೂಲಿ, ಬಾಕಿ ಇರುವ ಸಾಲ ಮರುಪಾವತಿ ಇತ್ಯಾದಿಗಳ ಸಾರಾಂಶವನ್ನು ನೀಡುತ್ತದೆ. |
| **ತಃಖ್ತೆ–6** | ಶಾಸನಬದ್ಧ ನಿಗಮಗಳು, ಸರ್ಕಾರಿ ಕಂಪನಿಗಳು, ಸ್ಥಳೀಯ ಸಂಸ್ಥೆಗಳು ಮತ್ತು ಇತರೆ ಸಂಸ್ಥೆಗಳ ಸಾಲಗಳ ಮರುಪಾವತಿಗೆ ಸರ್ಕಾರ ನೀಡಿದ ಖಾತರಿಗಳ ಸಾರಾಂಶವನ್ನು ನೀಡುತ್ತದೆ. |
| **ತಃಖ್ತೆ–7** | ನಗದು ಶಿಲ್ಕು ಮತ್ತು ಅಂತಹ ಶಿಲ್ಕುಗಳಿಂದ ಮಾಡಿದ ಬಂಡವಾಳ ಹೂಡಿಕೆಗಳ ಸಾರಾಂಶವನ್ನು ನೀಡುತ್ತದೆ. |
| **ತಃಖ್ತೆ–8** | 31 ಮಾರ್ಚ್ 2008ರಂದು ಇದ್ದಂತೆ ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಶಿಲ್ಕಿನ ಸಾರಾಂಶವನ್ನು ನೀಡುತ್ತದೆ. |
| **ತಃಖ್ತೆ–9** | 2007–08ನೇ ಸಾಲಿನಲ್ಲಿ ವಿವಿಧ ಶೀರ್ಷಿಕೆಗಳಡಿಯಲ್ಲಿ ಜಮೆ ಮತ್ತು ಖರ್ಚುಗಳನ್ನು ಒಟ್ಟು ಜಮೆ/ಖರ್ಚಿನ ಶೇಕಡಾ ಪ್ರಮಾಣವನ್ನು ತೋರಿಸುತ್ತದೆ. |
| **ತಃಖ್ತೆ–10** | ಪ್ರಸಕ್ತ ವರ್ಷದಲ್ಲಿ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳಿಗಾದ ಹಂಚಿಕೆಯನ್ನು ಸೂಚಿಸುತ್ತದೆ. |
| **ತಃಖ್ತೆ–11** | ರಾಜಸ್ವ ಜಮೆಗಳು ಮತ್ತು ಬಂಡವಾಳ ಜಮೆಗಳ ವಿವರಗಳನ್ನು ಒಳಶೀರ್ಷಿಕೆಯ ಹಂತದವರೆಗೂ ನೀಡುತ್ತದೆ. |
| **ತಃಖ್ತೆ–12** | ಯೋಜನೆ ಮತ್ತು ಯೋಜನೇತರ ರಾಜಸ್ವ ವೆಚ್ಚದ ವಿವರಗಳನ್ನು ಒಳಶೀರ್ಷಿಕೆಯ ಹಂತದವರೆಗೂ, ಯೋಜನೆ ಮತ್ತು ಯೋಜನೇತರ ಬಂಡವಾಳ ವೆಚ್ಚದ ವಿವರಗಳನ್ನು ಪ್ರಧಾನ ಲೆಕ್ಕಶೀರ್ಷಿಕೆಯ ಅನುಸಾರ ನೀಡುತ್ತದೆ. |
| **ತಃಖ್ತೆ–13** | 2007–08ರಲ್ಲಿ ಮತ್ತು ಆ ಸಾಲಿನ ಅಂತ್ಯದವರೆಗಿನ ಬಂಡವಾಳ ವೆಚ್ಚದ ವಿವರಗಳನ್ನು ನೀಡುತ್ತದೆ. |
| **ತಃಖ್ತೆ–14** | 2007–08ರ ಅಂತ್ಯಕ್ಕೆ ಶಾಸನಬದ್ಧ ನಿಗಮಗಳಲ್ಲಿ, ಸರ್ಕಾರಿ ಕಂಪನಿಗಳಲ್ಲಿ, ಇತರೆ ಕೂಡು ಬಂಡವಾಳ ಕಂಪನಿಗಳಲ್ಲಿ ಮತ್ತು ಸಹಕಾರಿ ಬ್ಯಾಂಕು ಮತ್ತು ಸಹಕಾರಿ ಸಂಘಗಳಲ್ಲಿನ ರಾಜ್ಯ ಸರ್ಕಾರದ ಹೂಡಿಕೆಗಳ ವಿವರಗಳನ್ನು ನೀಡುತ್ತದೆ. |
| **ತಃಖ್ತೆ–15** | 2007–08ರ ಅಂತ್ಯಕ್ಕೆ ಬಂಡವಾಳ ಮತ್ತು ಇತರೆ ವೆಚ್ಚಗಳನ್ನು (ರಾಜಸ್ವ ಲೆಕ್ಕವನ್ನು ಹೊರತುಪಡಿಸಿ) ಮತ್ತು ಈ ವೆಚ್ಚಗಳನ್ನು ಒದಗಿಸಿದ್ದ ಅವಕಾಶದ ಪ್ರಮುಖ ಆಕರಗಳನ್ನು ಸೂಚಿಸುತ್ತದೆ. |
| **ತಃಖ್ತೆ–16** | ಋಣ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳ ಶೀರ್ಷಿಕೆಗಳಿಗೆ ಸಂಬಂಧಿಸಿದ ಜಮೆಗಳು, ವಿತರಣೆಗಳು ಮತ್ತು ಶಿಲ್ಕುಗಳ ವಿವರಗಳನ್ನು ನೀಡುತ್ತದೆ. |
| **ತಃಖ್ತೆ–17** | ಸರ್ಕಾರದ ಋಣಗಳ ಮತ್ತು ಇತರೆ ಬಡ್ಡಿಸಹಿತ ಹೊಣೆಗಳ ವಿವರವಾದ ಲೆಕ್ಕಗಳನ್ನು ನೀಡುತ್ತದೆ. |
| **ತಃಖ್ತೆ–18** | ಸರ್ಕಾರವು ನೀಡಿರುವ ಸಾಲಗಳು ಮತ್ತು ಮುಂಗಡಗಳು, ಪ್ರಸಕ್ತ ವರ್ಷದಲ್ಲಿ ಆದ ಸಾಲಗಳ ಮರು ಪಾವತಿಗಳು ಮತ್ತು 31 ಮಾರ್ಚ್ 2008ರ ಅಂತ್ಯದಲ್ಲಿನ ಶಿಲ್ಕು ಮತ್ತು ಜಮೆಯಾದ ಬಡ್ಡಿಯ ಮೊತ್ತದ ವಿವರಗಳನ್ನು ನೀಡುತ್ತದೆ. |
| **ತಃಖ್ತೆ–19** | ಮೀಸಲಿಟ್ಟ ಶಿಲ್ಕುಗಳ ವಿವರಗಳನ್ನು ನೀಡುತ್ತದೆ. |

**ಅನುಬಂಧ 1.1 – ಭಾಗ 'ಸಿ'**

**ಅಧ್ಯಾಯ–1ರಲ್ಲಿ ಉಪಯೋಗಿಸಿರುವ ಪದಗಳ ಪಟ್ಟಿ ಮತ್ತು ಅವುಗಳ ಲೆಕ್ಕಾಚಾರದ ಆಧಾರಗಳು**

**(ಉಲ್ಲೇಖ: ಕಂಡಿಕೆ 1.2 ಪುಟ 5)**

| ಪದಗಳು | ಲೆಕ್ಕಾಚಾರದ ಆಧಾರ |
|---|---|
| ಒಂದು ಪ್ರಮಿತಿಯ ಪ್ಲವನತೆ | ಪ್ರಮಿತಿಯ ವೃದ್ಧಿಯ ದರ<br>ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿ |
| ಒಂದು ಪ್ರಮಿತಿಯ ಪ್ಲವನತೆಯೊಂದಿಗೆ (x) ಇನ್ನೊಂದು ಪ್ರಮಿತಿಯ ಪ್ಲವನತೆ (y) | ಒಂದು ಪ್ರಮಿತಿಯ ಪ್ಲವನತೆ (x)<br>ಇನ್ನೊಂದು ಪ್ರಮಿತಿಯ ಪ್ಲವನತೆ (y) |
| ವೃದ್ಧಿಯ ದರ | [(ಪ್ರಸಕ್ತ ವರ್ಷದ ಮೊತ್ತ/ಹಿಂದಿನ ವರ್ಷದ ಮೊತ್ತ)–1]*100 |
| ಅಭಿವೃದ್ಧಿ ವೆಚ್ಚ | ಸಾಮಾಜಿಕ ಸೇವೆಗಳು + ಆರ್ಥಿಕ ಸೇವೆಗಳು |
| ರಾಜ್ಯದಿಂದ ಪಾವತಿಸಲ್ಪಟ್ಟ ಬಡ್ಡಿಯ ಸರಾಸರಿ | ಬಡ್ಡಿ ಸಂದಾಯಗಳು/[(ಹಿಂದಿನ ವರ್ಷದ ವಿತ್ತೀಯ ಹೊಣೆಗಳ ಮೊತ್ತ + ಪ್ರಸಕ್ತ ವರ್ಷದ ವಿತ್ತೀಯ ಹೊಣೆಗಳು)/2]*100 |
| ಬಡ್ಡಿಯ ಹರಡುವಿಕೆ | ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿ – ನಿರ್ಧಾರಿತ ಬಡ್ಡಿ ದರ |
| ಹರಡಿದ ಪ್ರಮಾಣ | ಋಣ ನಿಧಿ * ಬಡ್ಡಿಯ ಹರಡುವಿಕೆ |
| ಬಾಕಿ ಇರುವ ಸಾಲಗಳಿಗೆ ಸ್ವೀಕರಿಸಿದ ಬಡ್ಡಿಯ ಶೇಕಡಾವಾರು | ಸ್ವೀಕರಿಸಿದ ಬಡ್ಡಿ [(ಆರಂಭಿಕ ಶಿಲ್ಕು + ಸಾಲಗಳು ಮತ್ತು ಮುಂಗಡಗಳ ಅಂತಿಮ ಶಿಲ್ಕು)/2]*100 |
| ರಾಜಸ್ವ ಕೊರತೆ | ರಾಜಸ್ವ ಜಮೆ – ರಾಜಸ್ವ ವೆಚ್ಚ |
| ವಿತ್ತೀಯ ಕೊರತೆ | (ರಾಜಸ್ವ ವೆಚ್ಚ + ಬಂಡವಾಳ ವೆಚ್ಚ + ನಿವ್ವಳ ಸಾಲಗಳು ಮತ್ತು ಮುಂಗಡಗಳು) – (ರಾಜಸ್ವ ಜಮೆಗಳು–ವಿವಿಧ ಬಂಡವಾಳ ಜಮೆಗಳು) |
| ಪ್ರಾಥಮಿಕ ಕೊರತೆ | ವಿತ್ತೀಯ ಕೊರತೆ – ಬಡ್ಡಿ ಪಾವತಿಗಳು |
| ಪ್ರಸಕ್ತ ವರ್ಷದ ರಾಜಸ್ವದಲ್ಲಿನ ಉಳಿಕೆ (ಬಿಸಿಆರ್) | ರಾಜಸ್ವ ಜಮೆ–ಪ್ರಧಾನ ಶೀರ್ಷಿಕೆ '2048–ಋಣವನ್ನು ಕಡಿಮೆ ಮಾಡಲು ಅಥವಾ ನಿವಾರಿಸಲು ವಿನಿಯೋಗ' ಅಡಿಯಲ್ಲಿ ದಾಖಲಿಸಿದ ವೆಚ್ಚಗಳನ್ನು ಹೊರತುಪಡಿಸಿ ಎಲ್ಲ ಯೋಜನಾ ಅನುದಾನಗಳು ಮತ್ತು ಯೋಜನೇತರ ರಾಜಸ್ವ ವೆಚ್ಚ |

## ಅನುಬಂಧ 1.2
## 31 ಮಾರ್ಚ್ 2008ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ
## (ಉಲ್ಲೇಖ: ಕಂಡಿಕೆ 1.2, ಪುಟ 5)

(ಕೋಟಿ ರೂಪಾಯಿಗಳಲ್ಲಿ)

| 31.3.2007ರಂದು ಇದ್ದಂತೆ | | ಜವಾಬ್ದಾರಿಗಳು | | 31.3.2008ರಂದು ಇದ್ದಂತೆ |
|---|---|---|---|---|
| **32,645.86** | | **ಆಂತರಿಕ ಋಣ*** | | **33,316.33** |
| | 11,700.41 | ಬಡ್ಡಿಸಹಿತ ಮಾರುಕಟ್ಟೆ ಸಾಲಗಳು | 11,988.42 | |
| | 2.05 | ಬಡ್ಡಿರಹಿತ ಮಾರುಕಟ್ಟೆ ಸಾಲಗಳು | 1.52 | |
| | 678.27 | ಭಾರತೀಯ ಜೀವ ವಿಮಾ ನಿಗಮದಿಂದ ಪಡೆದ ಸಾಲಗಳು | 643.68 | |
| | 959.87 | ಇತರೆ ಸಂಸ್ಥೆಗಳಿಂದ ಪಡೆದ ಸಾಲಗಳು | 1,168.11 | |
| | 19,305.26 | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಸಾಲಗಳು – ಕೇಂದ್ರ ಸರ್ಕಾರದ ರಾಷ್ಟ್ರೀಯ ಉಳಿತಾಯ ನಿಧಿಗೆ ಕೊಟ್ಟ ವಿಶೇಷ ಭದ್ರತೆಗಳು | 19,514.60 | |
| **9,199.64** | | **ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು** | | **9,557.08** |
| | 0.07 | 1984–85ನೇ ಸಾಲಿನ ಹಿಂದಿನ ವರ್ಷದ ಸಾಲಗಳು | 0.07 | |
| | 112.36 | ಯೋಜನೇತರ ಸಾಲಗಳು | 105.63 | |
| | 8,886.85 | ರಾಜ್ಯ ಯೋಜನೆ ಕಾರ್ಯಕ್ರಮಗಳಿಗಾಗಿ ಸಾಲಗಳು | 9,250.82 | |
| | 36.53 | ಕೇಂದ್ರ ಯೋಜನೆ ಕಾರ್ಯಕ್ರಮಗಳಿಗಾಗಿ ಸಾಲಗಳು | 32.84 | |
| | 163.83 | ಕೇಂದ್ರ ಪುರಸ್ಕೃತ ಯೋಜನೆಗಳಿಗಾಗಿ ಸಾಲಗಳು | 167.72 | |
| **66.72** | | **ಸಾದಿಲ್ವಾರು ನಿಧಿ** | | **80.00** |
| **7,784.93** | | **ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಇತ್ಯಾದಿ** | | **8,533.31** |
| **4,130.07** | | **ಮೀಸಲು ನಿಧಿಗಳು** | | **4,879.61** |
| **4,264.87** | | **ಠೇವಣಿಗಳು** | | **4,199.29** |
| **1,658.30** | | **ಅಮಾನತ್ತು ಮತ್ತು ಸಂಕೀರ್ಣ ಶಿಲ್ಕುಗಳು** | | **3,056.25** |
| **517.65** | | **ಇರಸಾಲುಗಳು** | | – |
| **60,268.04** | | **ಒಟ್ಟು** | | **63,621.87** |

| | | ಆಸ್ತಿಗಳು | | |
|---|---|---|---|---|
| **44,504.05** | | **ಸ್ಥಿರ ಆಸ್ತಿಗಳ ಮೇಲಿನ ಒಟ್ಟು ಬಂಡವಾಳ ವೆಚ್ಚ** | | **53,152.98** |
| | 18,697.01 | ಕಂಪನಿಗಳು, ನಿಗಮಗಳು ಇತ್ಯಾದಿಗಳ ಷೇರುಗಳಲ್ಲಿ ಹೂಡಿಕೆಗಳು | 22,277.96 | |
| | 25,807.04 | ಇತರೆ ಬಂಡವಾಳ ವೆಚ್ಚ | 30,875.02 | |
| **6,240.82** | | **ಸಾಲಗಳು ಮತ್ತು ಮುಂಗಡಗಳು** | | **6,945.50** |
| | 1,246.84 | ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ಸಾಲಗಳು | 1,245.73 | |
| | 4,986.02 | ಇತರೆ ಅಭಿವೃದ್ಧಿ ಸಾಲಗಳು | 5,699.46 | |
| | 7.96 | ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ಸಂಕೀರ್ಣ ಸಾಲಗಳು | 0.31 | |
| – | | **ಇರಸಾಲುಗಳು** | | **310.91** |
| **15.45** | | **ಇತರೆ ಮುಂಗಡಗಳು** | | **12.30** |
| **6,104.77** | | **ನಗದು** | | **3,919.45** |
| | --- | ಖಜಾನೆಗಳಲ್ಲಿನ ನಗದು | -- | |
| | 5.92 | ಖಾಯಂ ಮುಂಗಡಗಳು ಸೇರಿದಂತೆ ಇಲಾಖಾ ನಗದು ಶಿಲ್ಕು | 5.91 | |
| | 231.87 | ರಿಜರ್ವ್ ಬ್ಯಾಂಕ್ ಠೇವಣಿಗಳು | 89.89 | |
| | 0.01 | ರವಾನೆಯಲ್ಲಿರುವ ಇರಸಾಲುಗಳು | 0.01 | |
| | 5,523.77 | ನಗದು ಶಿಲ್ಕು ಹೂಡಿಕೆಗಳು | 3,480.49 | |
| | 343.20 | ಮೀಸಲು ನಿಧಿಗಳಿಂದ ಹೂಡಿಕೆಗಳು | 343.15 | |
| **3,402.95** | | **ಸರ್ಕಾರಿ ಲೆಕ್ಕಗಳ ಮೇಲಿನ ಕೊರತೆ/ಹೆಚ್ಚಳ** | | **(–) 719.27** |
| | 7,601.54 | ಸಂಚಿತ ಕೊರತೆ | 3,402.95 | |
| | 4,151.51 | ರಾಜಸ್ವ ಅಧಿಕವನ್ನು ಕಳೆಯಿರಿ | 3,776.37 | |
| | 47.08 | ಇತರೆ ಹೊಂದಾಣಿಕೆಗಳನ್ನು ಕಳೆಯಿರಿ | 100.07 | |
| | | ಬಂಡವಾಳ ರಾಜಸ್ವವನ್ನು ಕಳೆಯಿರಿ | 245.78 | |
| **60,268.04** | | **ಒಟ್ಟು** | | **63,621.87** |

* ಮೇಲೆ ಕಾಣಿಸಿದ ಜವಾಬ್ದಾರಿಗಳಲ್ಲಿ ಆಯವ್ಯಯ ಹೊರಗಿನ ಸಾಲಗಳು ಸೇರಿಲ್ಲ.

# ಅನುಬಂಧ 1.3
## ಜಮೆಗಳ ಮತ್ತು ವಿತರಣೆಗಳ ಸಾರಾಂಶ
## (ಉಲ್ಲೇಖ : ಕಂಡಿಕೆ 1.2, ಪುಟ 5)

| 2006–07 | ಜಮೆಗಳು | 2007–08 | 2006–07 | ವಿತರಣೆಗಳು | | | | 2007–08 |
|---|---|---|---|---|---|---|---|---|
| | | | | | ಯೋಜನೇತರ | ಯೋಜನೆ | ಒಟ್ಟು | |
| | | | ಭಾಗ – ಎ: ರಾಜಸ್ವ | | | | | |
| **37,586.94** | **I. ರಾಜಸ್ವ ಜಮೆಗಳು** | **41,151.14⊕** | **33,435.43** | **I. ರಾಜಸ್ವ ವೆಚ್ಚ –** | **29,061.95** | **8,312.82** | | **37,374.77^** |
| 23,301.03 | ತೆರಿಗೆ ರಾಜಸ್ವ 25,986.76 | | **10,419.42** | ಸಾಮಾನ್ಯ ಸೇವೆಗಳು | **10,786.54** | **85.24** | **10,871.78** | |
| 4,098.41 | ತೆರಿಗೆಯೇತರ ರಾಜಸ್ವ 3,357.66 | | | ಸಾಮಾಜಿಕ ಸೇವೆಗಳು | | | | |
| 5,374.33 | ಕೇಂದ್ರದ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು 6779.23 | | 5,703.21 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 5,401.81 | 1,409.40 | 6,811.21 | |
| 2,224.37 | ಯೋಜನೇತರ ಅನುದಾನಗಳು 1530.93 | | 1,206.66 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 1,021.50 | 456.44 | 1,477.94 | |
| 1,284.30 | ರಾಜ್ಯ ಯೋಜನೆ ಕಾರ್ಯಕ್ರಮಗಳಿಗಾಗಿ ಅನುದಾನಗಳು 1916.25 | | 1,205.44 | ನೀರು ಪೂರೈಕೆ, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 107.77 | 1,385.29 | 1,493.06 | |
| 1,304.50 | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗಾಗಿ ಅನುದಾನಗಳು 1580.31 | | 27.19 | ವಾರ್ತಾ ಮತ್ತು ಪ್ರಸಾರ | 22.45 | 7.02 | 29.47 | |
| | | | 925.71 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | 413.10 | 820.56 | 1,233.66 | |
| | | | 95.35 | ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ | 56.86 | 86.92 | 143.78 | |
| | | | 1,684.87 | ಸಮಾಜ ಕಲ್ಯಾಣ ಮತ್ತು ಪೌಷ್ಟಿಕತೆ | 1,230.42 | 603.47 | 1,833.89 | |
| | | | 88.28 | ಇತರೆ | 85.68 | 14.99 | 100.67 | |
| | | | **10,936.71** | **ಒಟ್ಟು** | **8,339.59** | **4,784.09** | **13,123.68** | |
| | | | | **ಆರ್ಥಿಕ ಸೇವೆಗಳು** | | | | |
| | | | 3,140.84 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 2,920.42 | 1,597.63 | 4,518.05 | |
| | | | 906.79 | ಗ್ರಾಮೀಣಾಭಿವೃದ್ಧಿ | 399.82 | 559.58 | 959.40 | |
| | | | 348.52 | ವಿಶೇಷ ಪ್ರದೇಶ ಕಾರ್ಯಕ್ರಮಗಳು | 171.36 | 155.68 | 327.04 | |
| | | | 294.42 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 156.72 | 121.80 | 278.52 | |
| | | | 2,402.01 | ಇಂಧನ | 2,299.03 | 8.73 | 2,307.76 | |
| | | | 365.86 | ಕೈಗಾರಿಕೆ ಮತ್ತು ಖನಿಜಗಳು | 368.68 | 302.96 | 671.64 | |
| | | | 1,563.98 | ಸಾರಿಗೆ | 745.62 | 579.91 | 1,325.53 | |
| | | | 16.33 | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 0.01 | 27.46 | 27.47 | |
| | | | 1,401.49 | ಸಾಮಾನ್ಯ ಆರ್ಥಿಕ ಸೇವೆಗಳು | 948.16 | 89.74 | 1,037.90 | |
| | | | **10,440.24** | **ಒಟ್ಟು** | **8,009.82** | **3,443.49** | **11,453.31** | |
| | | | 1,639.06 | ಅನುದಾನಗಳು ಮತ್ತು ವಂತಿಗೆಗಳು | 1,926.00 | –– | 1,926.00 | |
| | | | **2,311.16** | **II. ರಾಜಸ್ವ ಅಧಿಕ ಭಾಗ 'ಬಿ' ಗೆ ಮುಂದುವರೆಸಿದ್ದು** | | | | **3,776.37** |
| **37,586.94** | **ಒಟ್ಟು** | **41,151.14** | **37,586.94** | **ಒಟ್ಟು** | | | | **41,151.14** |

| 2006–07 | ಜಮೆಗಳು | 2007–08 | 2006–07 | ವಿತರಣೆಗಳು | | | | 2007–08 |
|---|---|---|---|---|---|---|---|---|
| | | | | | ಯೋಜನೇತರ | ಯೋಜನೆ | ಒಟ್ಟು | |
| | | | | **ಭಾಗ ಬಿ – ಬಂಡವಾಳ ಮತ್ತು ಇತರೆ** | | | | |
| **4,606.64** | **II. ಆರಂಭಿಕ ಶಿಲ್ಕು ಒಳಗೊಂಡಂತೆ ಖಾಯಂ ಮುಂಗಡಗಳು, ನಗದು ಶಿಲ್ಕಿನ ಹೂಡಿಕೆಗಳು ಮತ್ತು ಮೀಸಲಿಟ್ಟ ನಿಧಿಗಳಿಂದ ಹೂಡಿಕೆಗಳೂ ಸೇರಿದಂತೆ ಆರಂಭಿಕ ನಗದು ಶಿಲ್ಕು** | **6,104.77** | | | | | | **8,648.94**[ℵ] |
| --- | **III. ಇತರೆ ಬಂಡವಾಳ ಜಮೆಗಳು** | **245.78** | **8,542.57** | **III. ಬಂಡವಾಳ ವೆಚ್ಚ** | **1,450.14** | **7,198.80** | | |
| | | | **320.94** | ಸಾಮಾನ್ಯ ಸೇವೆಗಳು | **55.00** | **284.02** | **339.02** | |
| | | | | ಸಾಮಾಜಿಕ ಸೇವೆಗಳು | | | | |
| | | | 54.98 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 6.95 | 113.82 | **120.77** | |
| | | | 142.95 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | – | 354.24 | **354.24** | |
| | | | 925.48 | ನೀರು ಪೂರೈಕೆ, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 183.94 | 1,247.59 | **1,431.53** | |
| | | | 2.00 | ವಾರ್ತಾ ಮತ್ತು ಪ್ರಸಾರ | –– | 1.04 | **1.04** | |
| | | | 164.40 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | –– | 201.25 | **201.25** | |
| | | | 2.74 | ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ | –– | 19.57 | **19.57** | |
| | | | 0.07 | ಇತರೆ ಸಾಮಾಜಿಕ ಸೇವೆಗಳು | –– | 19.28 | **19.28** | |
| | | | **1,292.62** | **ಒಟ್ಟು ಸಾಮಾಜಿಕ ಸೇವೆಗಳು** | **190.89** | **1,956.79** | **2,147.68** | |
| | | | | **ಆರ್ಥಿಕ ಸೇವೆಗಳು** | | | | |
| | | | 33.15 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | –1.21* | 80.14 | **78.93** | |
| | | | 176.34 | ಗ್ರಾಮೀಣಾಭಿವೃದ್ಧಿ | 0.82 | 136.09 | **136.91** | |
| | | | 4,115.74 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 928.51 | 2,512.99 | **3,441.50** | |
| | | | 430.47 | ಇಂಧನ | 112.90 | 320.00 | **432.90** | |
| | | | 63.72 | ಕೈಗಾರಿಕೆ ಮತ್ತು ಖನಿಜಗಳು | – 21.33* | 107.23 | **85.90** | |
| | | | 1,823.50 | ಸಾರಿಗೆ | 129.96 | 1,381.66 | **1,511.62** | |
| | | | 286.09 | ಸಾಮಾನ್ಯ ಆರ್ಥಿಕ ಸೇವೆಗಳು | 54.60 | 419.88 | **474.48** | |
| | | | **6,929.01** | **ಒಟ್ಟು ಆರ್ಥಿಕ ಸೇವೆಗಳು** | **1,204.25** | **4,957.99** | **6,162.24** | |
| **59.97** | **IV. ಸಾಲಗಳು ಮತ್ತು ಮುಂಗಡಗಳ ವಸೂಲಾತಿಗಳು** | **52.07** | **357.23** | **IV. ಸಾಲಗಳು ಮತ್ತು ಮುಂಗಡಗಳ ವಿತರಣೆ** | **5.31** | **751.43** | | **756.74** |
| 1.86 | ವಿದ್ಯುಚ್ಛಕ್ತಿ ಯೋಜನೆಗಳಿಂದ 6.66 | –– | –– | ವಿದ್ಯುಚ್ಛಕ್ತಿ ಯೋಜನೆಗಳಿಗೆ | –– | 5.55 | 5.55 | |
| 6.48 | ಸರ್ಕಾರಿ ನೌಕರರಿಂದ 5.13 | –– | 1.89 | ಸರ್ಕಾರಿ ನೌಕರರಿಗೆ | 0.29 | 0.08 | 0.37 | |
| 51.63 | ಇತರರಿಂದ 40.28 | | 355.34 | ಇತರರಿಗೆ | 5.02 | 745.80 | 750.82 | |
| **3,545.94** | **V. ಸಾರ್ವಜನಿಕ ಋಣ ಜಮೆಗಳು** | **2,356.68** | **1,749.37** | **V. ಸಾರ್ವಜನಿಕ ಋಣ ಮರುಪಾವತಿ** | | | | **1,328.77** |
| 2,891.48 | ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 1,472.55 | 1012.34 | ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 802.08 | – | **802.08** | |

| 2006–07 | ಜಮೆಗಳು | | 2007–08 | 2006–07 | ವಿತರಣೆಗಳು | | | | 2007–08 |
|---|---|---|---|---|---|---|---|---|---|
| | | | | | | ಯೋಜನೇತರ | ಯೋಜನೆ | ಒಟ್ಟು | |
| -- | ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅರ್ಥೋಪಾಯ ಮುಂಗಡಗಳು | 78.13 | | – | ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅರ್ಥೋಪಾಯ ಮುಂಗಡಗಳು | 78.13 | -- | **78.13** | |
| 654.46 | ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 806.00 | | 737.03 | ಕೇಂದ್ರ ಸರ್ಕಾರಕ್ಕೆ ಸಾಲಗಳ ಮತ್ತು ಮುಂಗಡಗಳ ಮರುಪಾವತಿ | 448.56 | -- | **448.56** | |
| --- | **VI. ಸಾದಿಲ್ವಾರು ನಿಧಿ (ಪುನರ್ಭರ್ತಿ)** | | **13.28** | **13.28** | **VI. ಸಾದಿಲ್ವಾರು ನಿಧಿ** | -- | -- | -- | -- |
| **47,040.04** | **VII. ಸಾರ್ವಜನಿಕ ಲೆಕ್ಕ ಜಮೆಗಳು** | | **56,159.75** | **42,636.88** | **VII. ಸಾರ್ವ ಜನಿಕ ಲೆಕ್ಕ ವಿತರಣೆಗಳು** | | | | **54,054.80** |
| 1,748.07 | ಸಣ್ಣ ಉಳಿತಾಯ ಗಳು, ಭವಿಷ್ಯ ನಿಧಿಗಳು ಇತ್ಯಾದಿ | 1,993.69 | | 1088.70 | ಸಣ್ಣ ಉಳಿತಾಯ ಗಳು, ಭವಿಷ್ಯ ನಿಧಿಗಳು ಇತ್ಯಾದಿ | | | 1,245.31 | |
| 1,656.35 | ಮೀಸಲು ನಿಧಿಗಳು | 1,034.10 | | 468.10 | ಮೀಸಲು ನಿಧಿಗಳು | | | 284.57 | |
| 19,072.96 | ಠೇವಣಿಗಳು ಮತ್ತು ಮುಂಗಡಗಳು | 19,898.29 | | 17,267.84 | ಠೇವಣಿಗಳು ಮತ್ತು ಮುಂಗಡಗಳು | | | 19,960.71 | |
| 20,772.01 | ಅಮಾನತ್ತು ಮತ್ತು ಸಂಕೀರ್ಣಗಳು | 3,0714.20 | | 20,535.09 | ಅಮಾನತ್ತು ಮತ್ತು ಸಂಕೀರ್ಣಗಳು | | | 29,216.19 | |
| 3,790.65 | ಇರಸಾಲುಗಳು | 2,519.47 | | 3,277.15 | ಇರಸಾಲುಗಳು | | | 3,348.02 | |
| **4,151.51** | **VIII . ರಾಜಸ್ವ ಅಧಿಕ ಭಾಗ 'ಎ'ಯಿಂದ ತೆಗೆದುಕೊಂಡದ್ದು** | | **3776.37** | **6,104.77** | **VIII. ಅಂತಿಮ ನಗದು ಶಿಲ್ಕು** | | | | **3,919.45** |
| | | | | 0.01 | ಖಜಾನೆಗಳಲ್ಲಿನ ನಗದು ಮತ್ತು ಸ್ಥಳೀಯ ಇರಸಾಲುಗಳು | | | 0.01 | |
| | | | | 231.87 | ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳು | | | 89.89 | |
| | | | | 5.92 | ಖಾಯಂ ಮುಂಗಡಗಳೂ ಸೇರಿದಂತೆ ಇಲಾಖಾ ನಗದು ಶಿಲ್ಕು | | | 5.91 | |
| | | | | 5,523.77 | **ನಗದು ಶಿಲ್ಕು ಹೂಡಿಕೆ** | | | 3,480.49 | |
| | | | | 343.20 | **ಉದ್ದೇಶಿತ ನಿಧಿಗಳಿಂದ ಹೂಡಿಕೆಗಳು** | | | 343.15 | |
| **59,404.10** | **ಒಟ್ಟು** | | **68,708.70** | **59,404.10** | **ಒಟ್ಟು** | | | | **68,708.70** |

ಟಿಪ್ಪಣಿ : 2007–08ರಲ್ಲಿ ಬಂಡವಾಳ ಲೆಕ್ಕದಡಿ ಜಮೆ ಮತ್ತು ವಸೂಲಾತಿಗಳನ್ನು ಪ್ರತಿನಿಧಿಸುತ್ತದೆ.

⊕ ಪ್ರಸಕ್ತ ವರ್ಷದ ರಾಜಸ್ವ ಜಮೆಗಳು ಸಾರ್ವಜನಿಕ ಲೆಕ್ಕಕ್ಕೆ ವರ್ಗಾವಣೆಯಾದ ಸ್ಥಳೀಯ ನಿಧಿಗಳು/ಪಂಚಾಯತ್ ಸಂಸ್ಥೆಗಳ ನಿಧಿಗಳ ಠೇವಣಿಗಳಡಿಯಲ್ಲಿ 31.3.2007ರ ಅಂತ್ಯಕ್ಕೆ ಉಳಿದಿದ್ದ ಧನಾತ್ಮಕ ಶಿಲ್ಕು ರೂ.749.06 ಕೋಟಿಗಳನ್ನು ಒಳಗೊಂಡಿತ್ತು. ಇದು ರಾಜ್ಯ ಸರ್ಕಾರವು ಪ್ರಸಕ್ತ ವರ್ಷದಲ್ಲಿ ಪಡೆದ ಸಾಲಗಳ ಮೇಲಿನ ಋಣ ಪರಿಹಾರ ಲಾಭದ ರೂ.358.31 ಕೋಟಿಗಳನ್ನೂ ಒಳಗೊಂಡಿದೆ. ಈ ಮೊತ್ತವನ್ನು ಪ್ರಧಾನ ಶೀರ್ಷಿಕೆ '6004–ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು' ಇದಕ್ಕೆ ಖರ್ಚು ಹಾಕಿದ್ದನ್ನು ಸರಿತೂಗಿಸಲು ಪ್ರಧಾನ ಶೀರ್ಷಿಕೆ '0075–ಸಂಕೀರ್ಣ ಸಾಮಾನ್ಯ ಸೇವೆಗಳು' ಇದಕ್ಕೆ ಜಮೆ ಮಾಡಲಾಗಿದೆ.

^ ರಾಜಸ್ವ ವೆಚ್ಚವು ಯೋಜನೇತರ ವೆಚ್ಚವಾಗಿ ಸಾರ್ವಜನಿಕ ಲೆಕ್ಕದಡಿ ಕೇಂದ್ರ ರಸ್ತೆ ನಿಧಿಗೆ ವರ್ಗಾವಣೆಯಾಗಬೇಕಿದ್ದ ರೂ.125.16 ಕೋಟಿಯನ್ನು ಒಳಗೊಂಡಿದ್ದರೆ ಆ ಅನುದಾನವನ್ನು ಯೋಜನಾ ಅನುದಾನವಾಗಿ ಬಿಡುಗಡೆ/ಲೆಕ್ಕ ಮಾಡಲಾಗಿತ್ತು. ಇದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಎನ್‌ಎಸ್‌ಎಸ್‌ಎಫ್‌ಗೆ ನೀಡಿದ ವಿಶೇಷ ಭದ್ರತೆಗಳಿಗೆ ಸಂಬಂಧಪಟ್ಟ ಬಡ್ಡಿಯಾದ ರೂ.39.43 ಕೋಟಿಗಳನ್ನೂ (2001–02) ಸಹ ಒಳಗೊಂಡಿದೆ. ಇದು ಪ್ರಸಕ್ತ ವರ್ಷದಲ್ಲಿ ಪ್ರಧಾನ ಲೆಕ್ಕಶೀರ್ಷಿಕೆ '3604'ರ ಅಡಿಯಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವ 2002–03ಕ್ಕೆ ಸಂಬಂಧಪಟ್ಟ ರೂ.0.24 ಕೋಟಿಯನ್ನು ಒಳಗೊಂಡಿದೆ.

% ರಾಜಸ್ವ ವರ್ಗದ ಸಾಮಾಜಿಕ ಸೇವೆಗಳಡಿಯಲ್ಲಿ ತೋರಿಸಿರುವ ವೆಚ್ಚವನ್ನು ರೂ.541.64 ಕೋಟಿಗಳಷ್ಟು ಕಡಿಮೆ ತೋರಿಸಲಾಗಿದೆ. ಈ ಮೇಲಿನ ವೆಚ್ಚವು ಈಗ ಪ್ರಧಾನ ಲೆಕ್ಕಶೀರ್ಷಿಕೆ '2425'ರ ಅಡಿಯ ಆರ್ಥಿಕ ಸೇವೆಗಳಡಿಯಲ್ಲಿ ವರ್ಗೀಕೃತವಾಗಿದೆ. ಆದರೆ ಈ ವೆಚ್ಚವನ್ನು ತಿದ್ದುಪಡಿ ಚೀಟಿ 620 ದಿನಾಂಕ 17–7–2007ರ ಪ್ರಕಾರ ಪ್ರಧಾನ ಶೀರ್ಷಿಕೆ '2235–ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ' ಅಡಿಯಲ್ಲಿ ವರ್ಗೀಕರಿಸಬೇಕಿತ್ತು.

ℵ ಆಯವ್ಯದ ಹೊರಗಿನ ಸಾಲಗಳಡಿಯಲ್ಲಿ ಶೀರಿಕೆಯಾದ ರೂ.1,507 ಕೋಟಿಗಳನ್ನು ಒಳಗೊಂಡಿದೆ

# ಅನುಬಂಧ 1.4
## ನಿಧಿಗಳ ಆಕರಗಳು ಮತ್ತು ಅನ್ವಯಗಳು
**(ಉಲ್ಲೇಖ : ಕಂಡಿಕೆ 1.2, ಪುಟ 5)**

**(ಕೋಟಿ ರೂಪಾಯಿಗಳಲ್ಲಿ)**

| ಆಕರಗಳು | | | | |
|---|---|---|---|---|
| **2006–07** | | | **2007–08** | |
| **37,586.94** | | **1. ರಾಜಸ್ವ ಜಮೆಗಳು** | | **41,151.14** |
| **--** | | **2. ಬಂಡವಾಳ ಜಮೆಗಳು** | | **245.78** |
| **59.97** | | **3. ಸಾಲಗಳು ಮತ್ತು ಮುಂಗಡಗಳ ವಸೂಲಾತಿ** | | **52.07** |
| **1,796.57** | | **4. ಸಾರ್ವಜನಿಕ ಋಣದಲ್ಲಿನ ಹೆಚ್ಚಳ** | | **1,027.91** |
| **4,403.16** | | **5. ಸಾರ್ವಜನಿಕ ಲೆಕ್ಕದಿಂದ ನಿವ್ವಳ ಜಮೆಗಳು** | | **2,104.95** |
| | 659.37 | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಇವುಗಳಲ್ಲಿನ ವೃದ್ಧಿ | 748.38 | |
| | 1,805.12 | ಠೇವಣಿಗಳು ಮತ್ತು ಮುಂಗಡಗಳಲ್ಲಿನ ನಿವ್ವಳ ಮೊತ್ತ | – 62.42 | |
| | 1,188.25 | ಮೀಸಲು ನಿಧಿಗಳಲ್ಲಿನ ವೃದ್ಧಿ | 749.53 | |
| | 236.92 | ಅಮಾನತ್ತು ಮತ್ತು ಸಂಕೀರ್ಣ ವಹಿವಾಟಿನ ನಿವ್ವಳ ಪರಿಣಾಮ | 1,498.01 | |
| | 513.50 | ಇರಸಾಲು ವಹಿವಾಟಿನ ನಿವ್ವಳ ಪರಿಣಾಮ | – 828.55 | |
| **---** | | **6. ಸಾದಿಲ್ವಾರು ನಿಧಿಯ ವಹಿವಾಟಿನ ನಿವ್ವಳ ಪರಿಣಾಮ** | | **13.28** |
| **43,846.64** | | **ಒಟ್ಟು** | | **44,595.13** |

| ಅನ್ವಯಗಳು | | | | |
|---|---|---|---|---|
| **33,435.43** | | 1. ರಾಜಸ್ವ ವೆಚ್ಚಗಳು | | **37,374.77** |
| **357.23** | | 2. ಅಭಿವೃದ್ಧಿ ಮತ್ತು ಇತರೆ ಉದ್ದೇಶಗಳಿಗೆ ಸಾಲ ನೀಡಿಕೆ | | **756.74** |
| **8,542.57** | | 3. ಬಂಡವಾಳ ವೆಚ್ಚ | | **8,648.94** |
| **1,498.13** | | 4. ನಗದು ಶಿಲ್ಕಿನಲ್ಲಿನ ಇಳಿಕೆ | | **2,185.32** |
| **13.28** | | 5. ಸಾದಿಲ್ವಾರು ನಿಧಿಯ ವಹಿವಾಟಿನ ನಿವ್ವಳ ಪರಿಣಾಮ | | **--** |
| **43,846.64** | | **ಒಟ್ಟು** | | **44,595.13** |

## <u>ಅನುಬಂಧ 1.2, 1.3 ಮತ್ತು 1.4 ಇವುಗಳಿಗೆ ವಿವರಣಾತ್ಮಕ ಟಿಪ್ಪಣಿಗಳು :</u>

1. ಮೇಲಿನ ಸಂಕ್ಷಿಪ್ತ ಲೆಕ್ಕಗಳನ್ನು ಸರ್ಕಾರದ ಹಣಕಾಸಿನ ಲೆಕ್ಕಗಳಲ್ಲಿನ ವ್ಯಾಖ್ಯಾನ ಮತ್ತು ವಿವರಣೆಗಳೊಂದಿಗೆ ಓದಬೇಕು.

2. ಸರ್ಕಾರದ ಲೆಕ್ಕಗಳು ಮುಖ್ಯವಾಗಿ ನಗದು ಆಧಾರಿತವಾಗಿದ್ದು, ಅನುಬಂಧ 1.2ರಲ್ಲಿ ನಮೂದಿಸಲಾದ ಸರ್ಕಾರದ ಲೆಕ್ಕಗಳಲ್ಲಿನ ಕೊರತೆಯ ಸ್ಥಿತಿಯು ನಗದು ಆಧಾರಿತವಾಗಿ ವಾಣಿಜ್ಯ ಮಾದರಿಯ ಲೆಕ್ಕಕ್ಕೆ ವ್ಯತಿರಿಕ್ತವಾಗಿರುತ್ತದೆ. ತತ್ಪರಿಣಾಮವಾಗಿ ಸಂದಾಯವಾಗಬೇಕಾದ, ವಸೂಲಾಗಬೇಕಾದ ಬಾಬ್ತುಗಳು, ಸವಕಳಿ ಅಥವಾ ದಾಸ್ತಾನು ಅಂಕಿಗಳಲ್ಲಿನ ವ್ಯತ್ಯಾಸ ಇತ್ಯಾದಿ ಅಂಶಗಳು ಈ ಲೆಕ್ಕಗಳಲ್ಲಿ ವ್ಯಕ್ತವಾಗಿರುವುದಿಲ್ಲ.

3. ಅಮಾನತ್ತು ಮತ್ತು ಸಂಕೀರ್ಣಗಳಲ್ಲಿನ ಶಿಲ್ಕುಗಳು ಪಾವತಿಯಾಗದೇ ಉಳಿದ ಚೆಕ್ಕುಗಳ ಮೊತ್ತಗಳು, ಇತ್ಯರ್ಥವಾಗದೇ ಉಳಿದಿರುವ ರಾಜ್ಯದ ಹಾಗೂ ಇತರರ ಪರವಾದ ಪಾವತಿಗಳು, ಇವುಗಳನ್ನು ಒಳಗೊಂಡಿರುತ್ತದೆ.

4. ಲೆಕ್ಕಗಳಲ್ಲಿ 'ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳು' ಶೀರ್ಷಿಕೆಯಲ್ಲಿ ನಮೂದಾಗಿರುವ ಅಂಕಿಗಳಿಗೂ ಮತ್ತು ರಿಸರ್ವ್ ಬ್ಯಾಂಕಿನಿಂದ ತಿಳಿಸಲ್ಪಟ್ಟ ಅಂಕಿಗಳಿಗೂ ರೂ.68.78 ಕೋಟಿ (ಜಮೆ) ನಿವ್ವಳ ವ್ಯತ್ಯಾಸ ಕಂಡುಬಂದಿದೆ. ನಿವ್ವಳ ವ್ಯತ್ಯಾಸ ರೂ.41.05 ಕೋಟಿಗಳನ್ನು (ಜಮೆ) ಹೊಂದಾಣಿಕೆ ಮಾಡಲಾಗಿದೆ. ಉಳಿದ ವ್ಯತ್ಯಾಸವಾದ ರೂ.27.73 ಕೋಟಿಯನ್ನು (ಜಮೆ) ಹೊಂದಾಣಿಕೆ ಮಾಡಲಾಗುತ್ತಿದೆ.

# ಅನುಬಂಧ 1.5
## ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು
## (ಉಲ್ಲೇಖ : ಕಂಡಿಕೆ 1.2, ಪುಟ 5)

(ಕೋಟಿ ರೂಪಾಯಿಗಳಲ್ಲಿ)

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| **ಭಾಗ ಎ – ಜಮೆಗಳು** | | | | | | |
| **1. ರಾಜಸ್ವ ಜಮೆಗಳು** | **16,169** | **20,760** | **26,570** | **30,352** | **37,587** | **41,151** |
| **(ಎ) ತೆರಿಗೆ ರಾಜಸ್ವ** | **10,440(65)** | **12,570 (61)** | **16,072(60)** | **18,632(61)** | **23,301 (62)** | **25,987(63)** |
| ಕೃಷಿ ಆದಾಯದ ಮೇಲಿನ ತೆರಿಗೆ | 1 (–) | 1 (–) | 2 | 2 | 1(–) | 3(–) |
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆ | 5,474 (52) | 6,649 (53) | 8,700(54) | 9,870(53) | 11,762(50) | 13,894(**53**) |
| ರಾಜ್ಯ ಅಬಕಾರಿ | 2,094 (20) | 2,334 (19) | 2,806(17) | 3,397(18) | 4,495(19) | 4,767(**18**) |
| ವಾಹನಗಳ ಮೇಲಿನ ತೆರಿಗೆಗಳು | 676 (6) | 800 (6) | 983(6) | 1,105(6) | 1,374(6) | 1,650(**6**) |
| ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳು | 1,115 (11) | 1,356 (11) | 1,760(11) | 2,213(12) | 3,206(14) | 3,409(**13**) |
| ಭೂ ಕಂದಾಯ | 60 (1) | 68 (–) | 118(1) | 117(1) | 109(–) | 145(**1**) |
| ಇತರೆ ತೆರಿಗೆಗಳು | 1,020 (10) | 1,362 (11) | 1,703(11) | 1,928(10) | 2,354(11) | 2,119(**8**) |
| **(ಬಿ) ತೆರಿಗೆಯೇತರ ರಾಜಸ್ವ** | **1,278 (8)** | **2,958 (14)** | **4,473(17)** | **3,875(13)** | **4,099(11)** | **3,358(9)** |
| **(ಸಿ) ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು** | **2,786 (17)** | **3,245 (15)** | **3,878(15)** | **4,213(14)** | **5,374(14)** | **6,779(17)** |
| **(ಡಿ) ಭಾರತ ಸರ್ಕಾರದ ಸಹಾಯಾನುದಾನಗಳು** | **1,665 (10)** | **1,987 (10)** | **2,147(8)** | **3,632(12)** | **4,813(13)** | **5,027(12)** |
| **2. ಸಂಕೀರ್ಣ ಬಂಡವಾಳ ಜಮೆಗಳು (ಸಾಲವಲ್ಲದ್ದು)** | ಓಟ | ಓಟ | ಓಟ | ಓಟ | ಓಟ(–) | 246 |
| **3. ಒಟ್ಟು ರಾಜಸ್ವ ಮತ್ತು ಸಾಲವಲ್ಲದ ಬಂಡವಾಳ ಜಮೆಗಳು (1+2)** | **16,169** | **20,760** | **26,570** | **30,352** | **37,587** | **41,397** |
| **4. ಸಾಲ ಮತ್ತು ಮುಂಗಡಗಳ ವಸೂಲಾತಿ** | 928 | 64 | 47 | 124 | 60 | 52 |
| **5. ಸಾರ್ವಜನಿಕ ಋಣ ಜಮೆಗಳು** | **5,433** | **7,988** | **8,509** | **5,664** | **3,546** | **2,279** |
| ಆಂತರಿಕ ಋಣ (ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್ ಹೊರತುಪಡಿಸಿ) | 3,889 (72) | 6,531 (82) | 6,953(82) | 4,995(88) | 2,892(82) | 1,473(**65**) |
| ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು | 1,544 (28) | 1,457 (18) | 1,556(18) | 669(12) | 654(18) | 806(**35**) |
| **6. ಸಂಚಿತ ನಿಧಿಯಲ್ಲಿನ ಒಟ್ಟು ಜಮೆಗಳು (3+4+5)** | **22,530** | **28,812** | **35,126** | **36,140** | **41,193** | **43,728** |
| **7. ಸಾದಿಲ್ವಾರು ನಿಧಿ ಜಮೆಗಳು** | 8 | –– | 41 | 39 | – | 13 |
| **8. ಸಾರ್ವಜನಿಕ ಲೆಕ್ಕ ಜಮೆಗಳು** | 27,879 | 30,513 | 36,325 | 38,025 | 47,040 | 56,160 |
| **9. ರಾಜ್ಯದ ಒಟ್ಟು ಜಮೆಗಳು (6+7+8)** | **50,417** | **59,325** | **71,492** | **74,204** | **88,233** | **99,901** |
| **ಭಾಗ ಬಿ – ವೆಚ್ಚ/ವಿತರಣೆ** | | | | | | |
| **10. ರಾಜಸ್ವ ವೆಚ್ಚ** | **18,815** | **21,285** | **24,932** | **28,041** | **33,435** | **37,375** |
| ಯೋಜನೆ | 3,245 (17) | 3,553 (17) | 5,125(21) | 5,069(18) | 7,852(23) | 8,313(**22**) |
| ಯೋಜನೇತರ | 15,570 (83) | 17,732 (83) | 19,807(79) | 22,972(82) | 25,583(77) | 29,062(**78**) |
| ಸಾಮಾನ್ಯ ಸೇವೆಗಳು (ಬಡ್ಡಿ ಪಾವತಿಗಳನ್ನೂ ಒಳಗೊಂಡು) | 7,112 (38) | 9,039 (42) | 9,900(40) | 10,036(36) | 10,419(31) | 10,872(**29**) |
| ಸಾಮಾಜಿಕ ಸೇವೆಗಳು | 6,326 (34) | 6,965 (33) | 7,723(31) | 8,899(32) | 10,937(33) | 13,124(**35**) |
| ಆರ್ಥಿಕ ಸೇವೆಗಳು | 4,803 (25) | 4,652 (22) | 6,511(26) | 7,947(28) | 10,440(31) | 11,453(**31**) |
| ಸಹಾಯಾನುದಾನಗಳು ಮತ್ತು ವಂತಿಗೆಗಳು | 574 (3) | 629 (3) | 798(3) | 1,159(4) | 1,639(5) | 1,926(**5**) |
| **11. ಬಂಡವಾಳ ವೆಚ್ಚ** | **2,936** | **3,029** | **4,674** | **5,822** | **8,543** | **8,649** |
| ಯೋಜನೆ | 2,734 (93) | 2,930 (97) | 4,586(98) | 5,806(100) | 8,411(98) | 7,199(**83**) |
| ಯೋಜನೇತರ | 202 (7) | 99 (3) | 88(2) | 16 | 132(2) | 1,450(**17**) |
| ಸಾಮಾನ್ಯ ಸೇವೆಗಳು | 76 (3) | 128 (4) | 136(3) | 218(4) | 321(4) | 339(**4**) |
| ಸಾಮಾಜಿಕ ಸೇವೆಗಳು | 295 (10) | 427 (14) | 486(10) | 1,105(19) | 1,293(15) | 2,148(**25**) |
| ಆರ್ಥಿಕ ಸೇವೆಗಳು | 2,565 (87) | 2,474 (82) | 4,052(87) | 4,499(77) | 6,929(81) | 6,162(**71**) |
| **12. ಸಾಲ ಮತ್ತು ಮುಂಗಡಗಳ ವಿತರಣೆ** | **628** | **1,011** | **611** | **300** | **357** | **757** |
| **13. ಒಟ್ಟು (10+11+12)** | **22,379** | **25,325** | **30,217** | **34,163** | **42,335** | **46,781** |
| **14. ಸಾರ್ವಜನಿಕ ಋಣದ ಮರುಪಾವತಿಗಳು** | **1,696** | **3,441** | **4,029** | **811** | **1,749** | **1,251** |
| ಆಂತರಿಕ ಋಣ (ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್ ಹೊರತುಪಡಿಸಿ) | 287 (17) | 780 (23) | 622(15) | 393(48) | 1,012(58) | 802(64) |
| ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳಡಿ ನಿವ್ವಳ ವಹಿವಾಟು | –– | –– | –– | – | – | –– |
| ಕೇಂದ್ರ ಸರ್ಕಾರದಿಂದ ಸಾಲ ಮತ್ತು ಮುಂಗಡಗಳು* | 1,409 (83) | 2,661 (77) | 3,407(85) | 418(52) | 737(42) | 449(36) |
| **15. ಸಾದಿಲ್ವಾರು ನಿಧಿಗೆ ವಿನಿಯೋಗ** | –– | –– | –– | – | – | –– |
| **16. ಸಂಚಿತ ನಿಧಿಯಿಂದ ಒಟ್ಟು ವಿತರಣೆ (13+14+15)** | 24,075 | 28,766 | 34,246 | 34,974 | 44,084 | 48032 |
| **17. ಸಾದಿಲ್ವಾರು ನಿಧಿಯಿಂದ ವಿತರಣೆಗಳು** | –– | 41 | 39 | –– | 13 | –– |
| **18. ಸಾರ್ವಜನಿಕ ಲೆಕ್ಕ ವಿತರಣೆಗಳು** | 26,825 | 30,665 | 35,463 | 36,702 | 42,637 | 54055 |
| **19. ರಾಜ್ಯದ ಒಟ್ಟು ವಿತರಣೆಗಳು (16+17+18)** | 50,900 | 59,472 | 69,748 | 71,676 | 86,734 | 1,02,087 |

| | 2002–03 | 2003–04 | 2004–05 | 2005–06 | 2006–07 | 2007–08 |
|---|---|---|---|---|---|---|
| **ಭಾಗ ಸಿ – ಕೊರತೆಗಳು/ಹೆಚ್ಚಳಗಳು** | | | | | | |
| **20. ರಾಜಸ್ವ ಕೊರತೆ (10–1)** | 2,646 | 525 | -- | --- | --- | -- |
| **ರಾಜಸ್ವ ಅಧಿಕ (1–10)** | -- | -- | 1,638 | 2,311 | 4,152 | 3,776 |
| **21. ವಿತ್ತೀಯ ಕೊರತೆ (3+4–13)** | 5,282 | 4,501 | 3,600 | 3,687 | 4,688 | 5,332 |
| **22. ಪ್ರಾಥಮಿಕ ಕೊರತೆ (21–23)** | 1,990 | 791 | --- | --- | 452 | 826 |
| **ಪ್ರಾಥಮಿಕ ಅಧಿಕ (23–21)** | --- | --- | 194 | 78 | --- | -- |
| **ಭಾಗ ಡಿ – ಇತರೆ ಮಾಹಿತಿಗಳು** | | | | | | |
| **23. ಬಡ್ಡಿ ಪಾವತಿಗಳು (ರಾಜಸ್ವ ವೆಚ್ಚದಲ್ಲಿ ಸೇರಿದೆ)** | 3,292 | 3,710 | 3,794 | 3,765 | 4,236 | 4,506 |
| **24. ಬಾಕಿ ಇರುವ ರಾಜಸ್ವ (ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ ಜಮೆಗಳ ಶೇಕಡಾ ಪ್ರಮಾಣ)** | 3,390 (29) | 3,104 (20) | 3.604 (18) | 3,620 (16) | 5,026 (18) | 4,729(16)@ |
| **25. ಸ್ಥಳೀಯ ಸಂಸ್ಥೆಗಳು ಮುಂತಾದವುಗಳಿಗೆ ಆರ್ಥಿಕ ನೆರವು** | 7,675 | 7,780 | 8,728 | 11,183 | 13,915 | 16,725 |
| **26. ಅರ್ಥೋಪಾಯ ಮುಂಗಡಗಳು/ಓವರ್‌ಡ್ರಾಫ್ಟ್ ಪಡೆದದ್ದು (ದಿನಗಳು)** | 171 | 196 | 61 | -- | --- | 4 |
| **27. ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್ ಮೇಲಿನ ಬಡ್ಡಿ** | 5.23 | 8.85 | 1.20 | – | --- | 0.04 |
| **28. ಜಿಎಸ್‌ಡಿಪಿ** | 1,17,919 | 1,29,181 | 1,49,854 | 1,67,975 | 1,88,274⊕ | 2,15,282♣ |
| **29. ಬಾಕಿ ಉಳಿದಿರುವ ಋಣ (ವರ್ಷಾಂತ್ಯದಲ್ಲಿ)** | 37,234 | 41,967 | 46,940 | 52,236 | 57,682 | 60,142 |
| **30. ಬಾಕಿ ಇರುವ ಖಾತರಿಗಳು (ವರ್ಷಾಂತ್ಯದಲ್ಲಿ)** | 13,314 | 14,179 | 11,574 | 8,984 | 9,879 | 10,786 |
| **31. ಖಾತರಿ ನೀಡಿರುವ ಗರಿಷ್ಠ ಮೊತ್ತ (ವರ್ಷಾಂತ್ಯದಲ್ಲಿ)** | 20,973 | 21,225 | 19,910 | 20,107 | 19,793 | 23,109 |
| **32. ಅಪೂರ್ಣ ಯೋಜನೆಗಳ ಸಂಖ್ಯೆ (ಹಣಕಾಸು ಲೆಕ್ಕಗಳಲ್ಲಿರುವ ಮಾಹಿತಿಯಂತೆ)** | 35 | 70 | 238 | 120 | 261 | 429 |
| **33. ಅಪೂರ್ಣ ಯೋಜನೆಗಳಲ್ಲಿ ತೊಡಗಿಸಿದ ಬಂಡವಾಳ** | 6,141 | 8,813 | 9,496 | 3,450 | 1,174 | 1,480 |

ಸೂಚನೆ : ಆವರಣದೊಳಗಿನ ಅಂಕಿಗಳು ಪ್ರತಿ ಉಪಶೀರ್ಷಿಕೆಗೆ ಶೇಕಡಾವಾರನ್ನು (ಪೂರ್ಣಾಂಕಗೊಳಿಸಲಾಗಿದೆ) ಸೂಚಿಸುತ್ತವೆ.

* – ಭಾರತ ಸರ್ಕಾರದ ಅರ್ಥೋಪಾಯ ಮುಂಗಡಗಳನ್ನು ಒಳಗೊಂಡಿಲ್ಲ

⊕ – ತ್ವರಿತ ಅಂದಾಜುಗಳು

♣ – ನಿರೀಕ್ಷಿತ ಅಂದಾಜುಗಳು

@ – ವಾಣಿಜ್ಯ ತೆರಿಗೆ ಇಲಾಖೆಯಿಂದ ಮತ್ತು ವಿದ್ಯುತ್ ನಿರೀಕ್ಷಣಾ ಕಛೇರಿ ಮತ್ತು ಅಬಕಾರಿ ಇಲಾಖೆಯಿಂದ ವರದಿ ಮಾಡಲ್ಪಟ್ಟ ಬಾಕಿಗಳು

## ಅನುಬಂಧ 1.6
## ರಾಜ್ಯದ ಸ್ವಂತ ಆರ್ಥಿಕ ಸುಧಾರಣಾ ಮಾರ್ಗದ ಫಲಿತಾಂಶ ಸೂಚಕಗಳು (ಮೂಲ: ಹಣಕಾಸು ಇಲಾಖೆ)
(ಉಲ್ಲೇಖ : ಕಂಡಿಕೆ 1.2.3, ಪುಟ 7)

| | ಮೂಲ ಲೆಕ್ಕ ವರ್ಷ 2003–04 | 2004–05 ಆಯವ್ಯಯ ಅಂದಾಜು | 2005–06 ಆಯವ್ಯಯ ಅಂದಾಜು | 2006–07 ಪ್ರಕ್ಷೇಪಣೆ | 2007–08 ಪ್ರಕ್ಷೇಪಣೆ | 2008–09 ಪ್ರಕ್ಷೇಪಣೆ |
|---|---|---|---|---|---|---|
| ಎ. ರಾಜ್ಯ ರಾಜಸ್ವ ಲೆಕ್ಕ | | | | | | |
| 1. ಸ್ವಂತ ತೆರಿಗೆ ರಾಜಸ್ವ | 12570 | 14958 | 18680 | 20865 | 23417 | 26488 |
| 2. ಸ್ವಂತ ತೆರಿಗೆಯೇತರ ರಾಜಸ್ವ | 2958 | 4486 | 4090 | 4516 | 5009 | 5491 |
| 3. ಸ್ವಂತ ತೆರಿಗೆ + ತೆರಿಗೆಯೇತರ ರಾಜಸ್ವ (1+2) | 15528 | 19444 | 22770 | 25381 | 28426 | 31979 |
| 4. ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿನ ಪಾಲು | 3245 | 3760 | 3760 | 4136 | 4550 | 5005 |
| 5. ಅನುದಾನಗಳು | 1987 | 2306 | 2688 | 2954 | 3306 | 3530 |
| 6. ಒಟ್ಟು ಕೇಂದ್ರೀಯ ವರ್ಗಾವಣೆಗಳು (4 + 5) | 5232 | 6066 | 6448 | 7090 | 7856 | 8535 |
| 7. ಒಟ್ಟು ರಾಜಸ್ವ ಜಮೆಗಳು (3+6) | 20760 | 25510 | 29218 | 32471 | 36282 | 40514 |
| 8. ಯುಎಲ್‌ಬಿಗಳಿಗೆ ಸುಂಕಗಳಲ್ಲಿನ ಪಾಲು | 629 | 799 | 1160 | 1428 | 1743 | 2130 |
| 9. ಭಾರಿ ಕಾರ್ಯಾಚರಣೆ ಮತ್ತು ನಿರ್ವಹಣೆ (ರಸ್ತೆಗಳು, ಸೇತುವೆಗಳು ಮತ್ತು ನೀರಾವರಿ) | 251 | 401 | 513 | 970 | 1021 | 1078 |
| 10. ವೇತನಗಳು | 5523 | 5751 | 6169 | 6539 | 6907 | 8740 |
| 11. ಪಿಂಚಣಿಗಳು | 1901 | 2214 | 2427 | 2661 | 3209 | 3518 |
| 12. ಬಡ್ಡಿ ಪಾವತಿಗಳು | 3710 | 3920 | 4029 | 4492 | 5053 | 5640 |
| 13. ಸಹಾಯಾನುದಾನಗಳು (ಆಹಾರ, ಸಾರಿಗೆ, ವಸತಿ ಮತ್ತು ಕೈಗಾರಿಕೆ) | 525 | 905 | 1573 | 1203 | 1258 | 1317 |
| 14. ಸಹಾಯಾನುದಾನಗಳು (ವಿದ್ಯುತ್) | 1675 | 1400 | 1750 | 1750 | 2100 | 2100 |
| 15. ಇತರೆ ಭಾರಿ ಕಾರ್ಯಾಚರಣೆ ಮತ್ತು ನಿರ್ವಹಣೆ (ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ನೀರು ಸರಬರಾಜು, ಕೃಷಿ ಮತ್ತು ಅರಣ್ಯ) | 2197 | 2444 | 2530 | 3155 | 3836 | 4641 |
| 16. ಆಡಳಿತಾತ್ಮಕ ವೆಚ್ಚ | 440 | 442 | 559 | 589 | 621 | 654 |
| 17. ಇತರೆ ರಾಜಸ್ವ ವೆಚ್ಚ | 4434 | 7163 | 7654 | 8296 | 8913 | 9251 |
| 18. ಒಟ್ಟು ರಾಜಸ್ವ ವೆಚ್ಚ (8ರಿಂದ 17) | **21285** | **25439** | **28364** | **31083** | **34661** | **39069** |
| 19. ವೇತನ + ಬಡ್ಡಿ + ಪಿಂಚಣಿಗಳು (10+11+12) | 11134 | 11185 | 12625 | 13692 | 15169 | 17898 |
| 20. ರಾಜಸ್ವ ಸ್ವೀಕೃತಿಗಳ ಶೇಕಡಾವಾರಾಗಿ (19/7) | 54 | 47 | 43 | 42 | 42 | 44 |
| 21. ರಾಜಸ್ವ ಅಧಿಕ/ಕೊರತೆ (7–18) | 525 | –71 | –854 | –1388 | –1621 | –1445 |
| ಬಿ. ಸಂಚಿತ ರಾಜಸ್ವ ಲೆಕ್ಕ | | | | | | |
| 1. ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಗಳು ಮತ್ತು ಪಿಎಸ್‌ಯುಗಳು/ಎಸ್‌ಪಿಯುಗಳು ಆಯವ್ಯಯದ ಹೊರಗೆ ಮಾಡಿದ ಎಸ್‌ಪಿವಿ ಸಾಲಗಳು | 801 | 638 | 791 | 1203 | 817 | 480 |
| 2. ಸಂಚಿತ ರಾಜಸ್ವ ಕೊರತೆ | 1326 | 567 | 63 | 185 | 804 | 965 |
| ಸಿ. ಸಂಚಿತ ಋಣ | | | | | | |
| ಒಟ್ಟು ಋಣ ಆಸ್ತಿ | 42954 | 48384 | 53185 | 60465 | 66340 | 72823 |
| ಡಿ. ಬಂಡವಾಳ ಲೆಕ್ಕ | | | | | | |
| 1. ಬಂಡವಾಳ ವೆಚ್ಚ | 2937 | 2502 | 3774 | 4316 | 5346 | 6300 |
| 2. ಸಾಲ ಮತ್ತು ಮುಂಗಡಗಳ ವಸೂಲಾತಿ | 64 | 30 | 30 | 100 | 100 | 100 |
| ಇ. ಒಟ್ಟು ವಿತ್ತೀಯ ಕೊರತೆ | 4501 | 4247 | 4714 | 5603 | 5875 | 6483 |

## ಅನುಬಂಧ 1.7
## 31 ಮಾರ್ಚ್ 2008ರಲ್ಲಿದ್ದಂತೆ ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳು
## (ಉಲ್ಲೇಖ : ಕಂಡಿಕೆ 1.5.5, ಪುಟ 23)

(ಮೊತ್ತ: ಲಕ್ಷ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಇಲಾಖೆ | ಅನುದಾನವನ್ನು ಪಾವತಿ ಮಾಡಿದ ವರ್ಷ | ಪಾವತಿ ಮಾಡಿದ ಒಟ್ಟು ಅನುದಾನ | | ಬಳಕೆ ಪ್ರಮಾಣ ಪತ್ರಗಳು | | | |
|---|---|---|---|---|---|---|---|---|
| | | | | | ಸ್ವೀಕರಿಸಿದ್ದು | | ಬಾಕಿ ಇರುವುದು | |
| | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| (1) | (2) | (3) | (4) | (5) | (6) | (7) | (8) | (9) |
| **I** | **ಶಿಕ್ಷಣ** | | | | | | | |
| | 2203 – ತಾಂತ್ರಿಕ ಶಿಕ್ಷಣ | 1992–93 | 11 | 6.60 | 8 | 5.27 | 3 | 1.33 |
| | **ಒಟ್ಟು** | | **11** | **6.60** | **8** | **5.27** | **3** | **1.33** |
| **II** | **ವಾರ್ತಾ, ಕ್ರೀಡೆ ಮತ್ತು ಯುವಜನ ಸೇವೆಗಳು** | | | | | | | |
| 1 | 2204 – ಕ್ರೀಡೆ ಮತ್ತು ಯುವಜನ ಸೇವೆಗಳು | 1989–90 | 12 | 5.93 | – | – | 12 | 5.93 |
| | | 1990–91 | 1 | 0.10 | – | – | 1 | 0.10 |
| | | 1998–99 | 2 | 94.75 | – | – | 2 | 94.75 |
| | **ಒಟ್ಟು** | | **15** | **100.78** | **–** | **–** | **15** | **100.78** |
| 2 | 2220– ವಾರ್ತಾ ಮತ್ತು ಪ್ರಸಾರ | 2006–07 | 13 | 39.35 | 12 | 36.35 | 1 | 3.00 |
| | **ಒಟ್ಟು** | | **13** | **39.35** | **12** | **36.35** | **1** | **3.00** |
| **III** | **ಕನ್ನಡ ಮತ್ತು ಸಂಸ್ಕೃತಿ** | | | | | | | |
| 1 | 2205 – ಕಲೆ ಮತ್ತು ಸಂಸ್ಕೃತಿ | 1986-87 | 3 | 5.30 | – | – | 3 | 5.30 |
| | | 1987–88 | 5 | 5.01 | – | – | 5 | 5.01 |
| | | 1988–89 | 23 | 19.48 | – | – | 23 | 19.48 |
| | | 1990–91 | 21 | 63.70 | – | – | 21 | 63.70 |
| | | 1991–92 | 3 | 2.25 | – | – | 3 | 2.25 |
| | | 1993–94 | 25 | 52.48 | – | – | 25 | 52.48 |
| | | 1999–00 | 9 | 159.65 | – | – | 9 | 159.65 |
| | | 2000–01 | 04 | 2.07 | – | – | 04 | 2.07 |
| | | 2003–04 | 131 | 778.40 | – | – | 131 | 778.40 |
| | | 2004–05 | 23 | 69.81 | – | – | 23 | 69.81 |
| | | 2005–06 | 534 | 1521.68 | – | – | 534 | 1521.68 |
| | | 2006–07 | 978 | 6890.08 | 195 | 1685.36 | 783 | 5204.72 |
| | **ಒಟ್ಟು** | | **1759** | **9569.91** | **195** | **1685.36** | **1564** | **7884.55** |
| 2 | 2235 – ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ | 1986–87 | 1 | 1.27 | – | – | 1 | 1.27 |
| | | 1992–93 | 1 | 0.31 | – | – | 1 | 0.31 |
| | | 1993–94 | 4 | 1.61 | – | – | 4 | 1.61 |
| | | 1994–95 | 2 | 0.19 | – | – | 2 | 0.19 |
| | **ಒಟ್ಟು** | | **8** | **3.38** | **–** | **–** | **8** | **3.38** |
| **IV** | **ನಗರಾಭಿವೃದ್ಧಿ** | | | | | | | |
| | 2217 – ನಗರಾಭಿವೃದ್ಧಿ | 1993–94 | 6 | 271.52 | – | – | 6 | 271.52 |
| | | 2001–02 | 5 | 293.84 | – | – | 5 | 293.84 |
| | | 2002–03 | 2 | 638.00 | – | – | 2 | 638.00 |
| | | 2003–04 | 8 | 8355.00 | – | – | 8 | 8355.00 |
| | | 2004–05 | 30 | 35705.60 | | | 30 | 35705.60 |
| | | 2005–06 | 26 | 14683.59 | | | 26 | 14683.59 |
| | | 2006–07 | 9 | 2352.08 | 1 | 769.48 | 8 | 1,582.60 |
| | **ಒಟ್ಟು** | | **86** | **62299.63** | **1** | **769.48** | **85** | **61,530.15** |
| **V** | **ಸಹಕಾರ** | | | | | | | |
| | 3475 – ಇತರೆ ಸಾಮಾನ್ಯ ಆರ್ಥಿಕ ಸೇವೆಗಳು | 1997–98 | 1 | 979.13 | – | – | 1 | 979.13 |
| | | 1998–99 | 2 | 371.34 | – | – | 2 | 371.34 |
| | | 2001–02 | 5 | 120.41 | – | – | 5 | 120.41 |
| | | 2002–03 | 11 | 243.40 | – | – | 11 | 243.40 |
| | **ಒಟ್ಟು** | | **19** | **1714.28** | **–** | **–** | **19** | **1,714.28** |

| ಕ್ರಮ ಸಂಖ್ಯೆ | ಇಲಾಖೆ | ಅನುದಾನವನ್ನು ಪಾವತಿ ಮಾಡಿದ ವರ್ಷ | ಪಾವತಿ ಮಾಡಿದ ಒಟ್ಟು ಅನುದಾನ | | ಬಳಕೆ ಪ್ರಮಾಣ ಪತ್ರಗಳು | | | |
|---|---|---|---|---|---|---|---|---|
| | | | | | ಸ್ವೀಕರಿಸಿದ್ದು | | ಬಾಕಿ ಇರುವುದು | |
| | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| (1) | (2) | (3) | (4) | (5) | (6) | (7) | (8) | (9) |
| **VI** | **ಕೃಷಿ ಮತ್ತು ತೋಟಗಾರಿಕೆ** | | | | | | | |
| | 2515 – ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು | 1990–91 | 6 | 156.58 | 2 | 1.21 | 4 | 155.37 |
| | | 1991–92 | 39 | 1233.84 | 6 | 914.57 | 33 | 319.27 |
| | | 1992–93 | 6 | 96.22 | – | – | 6 | 96.22 |
| | | 1993–94 | 33 | 1419.37 | 9 | 1068.59 | 24 | 350.78 |
| | | 1994–95 | 61 | 2327.86 | 9 | 1187.33 | 52 | 1,140.53 |
| | | 2001–02 | 66 | 6167.50 | – | – | 66 | 6,167.50 |
| | | 2002–03 | 23 | 2331.53 | 5 | 954.42 | 18 | 1,377.11 |
| | | 2003–04 | 11 | 133.46 | – | – | 11 | 133.46 |
| | | 2004–05 | 2 | 18.76 | – | – | 2 | 18.76 |
| | | 2005–06 | 11 | 1295.20 | 1 | 7.00 | 10 | 1,288.20 |
| | | 2006–07 | 49 | 3837.01 | – | – | 49 | 3,837.01 |
| | **ಒಟ್ಟು** | | **307** | **19017.33** | **32** | **4133.12** | **275** | **14,884.21** |
| **VII** | **ಯೋಜನೆ, ಸಂಖ್ಯಾಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ** | | | | | | | |
| | 3425 – ಇತರ ವಿಜ್ಞಾನ ಸಂಶೋಧನೆಗಳು | 2002–03 | 2 | 13.50 | – | – | 2 | 13.50 |
| | | 2003–04 | 3 | 27.82 | – | – | 3 | 27.82 |
| | | 2005–06 | 37 | 804.34 | 37 | 804.34 | – | – |
| | | 2006–07 | 18 | 109.50 | – | – | 18 | 109.50 |
| | **ಒಟ್ಟು** | | **60** | **955.16** | **37** | **804.34** | **23** | **150.82** |
| **VIII** | **ವಾಣಿಜ್ಯ ಮತ್ತು ಕೈಗಾರಿಕೆ** | | | | | | | |
| | 2851– ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು | 2006–07 | 12 | 93.66 | – | – | 12 | 93.66 |
| | **ಒಟ್ಟು** | | **12** | **93.66** | – | – | **12** | **93.66** |
| | **ಒಟ್ಟು ಮೊತ್ತ** | | **2290** | **93800.08** | **285** | **7433.92** | **2005** | **83,366.16** |

**ಅನುಬಂಧ 1.8**
**ಲೆಕ್ಕಪತ್ರಗಳನ್ನು ಸಲ್ಲಿಸದಿರುವುದು**
**(ಉಲ್ಲೇಖ : ಕಂಡಿಕೆ 1.5.6, ಪುಟ 23)**

| ಕ್ರಮ ಸಂಖ್ಯೆ | ಇಲಾಖೆ | ಲೆಕ್ಕಪತ್ರಗಳನ್ನು ಸಲ್ಲಿಸಿರದ ವರ್ಷಗಳು | ಬಾಕಿ ಇರುವ ಲೆಕ್ಕಪತ್ರಗಳ ಸಂಖ್ಯೆ |
|---|---|---|---|
| 1. | ಸಹಕಾರ | 1980–81 ರಿಂದ 1982–83, 1983–84 ರಿಂದ 1985–86 ಮತ್ತು 1993–94 ರಿಂದ 2007–08 | 317 |
| 2. | ವಾಣಿಜ್ಯ ಮತ್ತು ಕೈಗಾರಿಕೆ | 2000–01 ರಿಂದ 2007–08 | 95 |
| 3. | ಶಿಕ್ಷಣ | 1992–93 ರಿಂದ 2007–08 | 484 |
| 4. | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ | 2007–08 | 36 |
| 5. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | 1999–2000 ರಿಂದ 2007–08 | 27 |
| 6. | ಕಾರ್ಮಿಕ | 1999–2000 ರಿಂದ 2007–08 | 09 |
| 7. | ಕಾನೂನು | 2001–02 ರಿಂದ 2007–08 | 07 |
| 8. | ಯೋಜನೆ | 2000–01 ರಿಂದ 2007–08 | 23 |
| 9. | ಲೋಕೋಪಯೋಗಿ ಮತ್ತು ಕಾಡಾ | 2000–01 ರಿಂದ 2007–08 | 11 |
| 10. | ಕಂದಾಯ | 2001–02 ರಿಂದ 2003–04 | 03 |
| 11. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ | 2000–01 ರಿಂದ 2007–08 | 08 |
| 12. | ವಿಜ್ಞಾನ ಮತ್ತು ತಂತ್ರಜ್ಞಾನ (ರಾಜ್ಯ) | 2000–01 ರಿಂದ 2007–08 | 12 |
| 13. | ನಗರಾಭಿವೃದ್ಧಿ | 1994–95 ರಿಂದ 2007–08 | 95 |
| 14. | ಯುವಜನ ಸೇವೆಗಳು ಮತ್ತು ಕ್ರೀಡೆಗಳು | 1999–2000 ರಿಂದ 2007–08 | 25 |
| 15. | ಪಶು ಸಂಗೋಪನೆ ಮತ್ತು ಮೀನುಗಾರಿಕೆ | 2003–04 ರಿಂದ 2007–08 | 20 |
| 16. | ಸಮಾಜ ಕಲ್ಯಾಣ | 2003–04 ರಿಂದ 2007–08 | 11 |
| | **ಒಟ್ಟು** | | **1183** |

## ಅನುಬಂಧ 1.9
## ಸ್ವಾಯತ್ತ ಸಂಸ್ಥೆಗಳ ಕಾರ್ಯನಿರ್ವಹಣೆಯ ಲೆಕ್ಕಪರಿಶೋಧನೆ
## (ಉಲ್ಲೇಖ: ಕಂಡಿಕೆ 1.5.7, ಪುಟ 23)

| ಕ್ರಮ ಸಂಖ್ಯೆ | ಸ್ವಾಯತ್ತ ಸಂಸ್ಥೆಗಳು | ವಹಿಸಿದ ಅವಧಿ | ವಹಿಸಿದ ದಿನಾಂಕ | ಲೆಕ್ಕಪತ್ರಗಳು ಬಾಕಿ ಇರುವ ವರ್ಷಗಳು | ಲೆಕ್ಕಪತ್ರಗಳನ್ನು ಯಾವ ವರ್ಷದವರೆಗೆ ಸ್ವೀಕರಿಸಲಾಗಿದೆ | ಯಾವ ವರ್ಷದವರೆಗೆ ಲೆಕ್ಕಪರಿಶೋಧನಾ ವರದಿಯನ್ನು ಜಾರಿ ಮಾಡಲಾಗಿದೆ |
|---|---|---|---|---|---|---|
| 1. | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು | 2004–05ರಿಂದ 2008–09 | 19–1–2005 | 2007–08 | 2007–08 | 2006–07 |
| 2. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು | 2007–08ರಿಂದ 2009–10 | 7–8–08 | 2007–08 | 2007–08 | 2006–07 |
| 3. | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು | 2007–08ರಿಂದ 2009–10 | 21–02–08 | 2007–08 | 2007–08 | 2006–07 |
| 4. | ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ, ಬೆಂಗಳೂರು | 2004–05ರಿಂದ 2008–09 | 21–4–05 | 2007–08 | 2007–08 | 2006–07 |
| 5. | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ | 1994ರಲ್ಲಿ ತಿದ್ದುಪಡಿ ಮಾಡಿದ ಕೆಎಸ್‌ಎಲ್‌ಎಸ್ ಅಧಿನಿಯಮ, 1987 | –– | 2007–08 | 2007–08 | 2006–07 |
| 6. | ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು | 2007–08ರಿಂದ 2011–12 | 28–05–08 | 2007–08 | 2007–08 | 2006–07 |
| 7. | ಕರ್ನಾಟಕ ಗೃಹ ಮಂಡಳಿ, ಬೆಂಗಳೂರು | 2006–07ರಿಂದ 2010–11 | 27.9.2007 | 2007–08 | 2007–08 | 2006–07 |
| 8. | ಕರ್ನಾಟಕ ಜೈವಿಕ ಮಂಡಳಿ | 2003–04ರಿಂದ 2007–08 | 12–06–06 | 2007–08 | 2007–08 | 2007–08 |

## ಅನುಬಂಧ 1.10

## ದುರುಪಯೋಗ, ನಷ್ಟಗಳು ಮತ್ತು ಅಪವಿನಿಯೋಗಗಳ ಇಲಾಖಾವಾರು ವಿವರಗಳು

**(ಉಲ್ಲೇಖ: ಕಂಡಿಕೆ 1.5.8, ಪುಟ 23)**

**(ಲಕ್ಷ ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ಇಲಾಖೆ | ಪ್ರಕರಣಗಳ ಸಂಖ್ಯೆ | ಮೊತ್ತ |
|---|---|---|---|
| 1 | ತೋಟಗಾರಿಕೆ | 7 | 41.20 |
| 2 | ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳು | 1 | 1.10 |
| 3 | ವಾಣಿಜ್ಯ ಮತ್ತು ಕೈಗಾರಿಕೆ | 8 | 20.18 |
| 4 | ಕಾರ್ಮಿಕ | 7 | 13.92 |
| 5 | ಕಾನೂನು ಮತ್ತು ಸಂಸದೀಯ ವ್ಯವಹಾರಗಳು | 9 | 3.49 |
| 6 | ಶಿಕ್ಷಣ | 6 | 1.91 |
| 7 | ಹಣಕಾಸು | 5 | 6.28 |
| 8 | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ | 12 | 267.14 |
| 9 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 20 | 20.18 |
| 10 | ಗೃಹ | 4 | 86.55 |
| 11 | ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | 14 | 32.04 |
| 12 | ಯೋಜನೆ | 1 | 1.55 |
| 13 | ಲೋಕೋಪಯೋಗಿ | 26 | 236.13 |
| 14 | ಜಲ ಸಂಪನ್ಮೂಲಗಳು | 72 | 256.13 |
| 15 | ಕಂದಾಯ | 10 | 10.18 |
| 16 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 9 | 0.37 |
| 17 | ಸಮಾಜ ಕಲ್ಯಾಣ | 2 | 2.94 |
| 18 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 3 | 0.88 |
| | **ಒಟ್ಟು** | **216** | **1,002.17** |

## ಅನುಬಂಧ 1.11

## 2007–08ರಲ್ಲಿ ವಜಾ ಮಾಡಿದ ಪ್ರಕರಣಗಳ ಇಲಾಖಾವಾರು ವಿವರಗಳು

**(ಉಲ್ಲೇಖ: ಕಂಡಿಕೆ 1.5.9, ಪುಟ 23)**

| ಕ್ರಮ ಸಂಖ್ಯೆ | ಇಲಾಖೆ | ವಜಾವನ್ನು ಮಂಜೂರು ಮಾಡಿದ ಅಧಿಕಾರಿ | ಸಂಕ್ಷಿಪ್ತ ವಿವರಗಳು | ಪ್ರಕರಣಗಳ ಸಂಖ್ಯೆ | ಮೊತ್ತ (ರೂಪಾಯಿಗಳಲ್ಲಿ) |
|---|---|---|---|---|---|
| 1. | ಸಹಕಾರ | ರಿಜಿಸ್ಟ್ರಾರ್, ಸಹಕಾರ ಸಂಘಗಳು | ಲೆಕ್ಕಪರಿಶೋಧನಾ ಶುಲ್ಕ ರೂ.355 ಮತ್ತು ಸರ್ಕಾರದ ಪಾಲು ರೂ.1.00 ಲಕ್ಷದ ವಜಾ | 01 | 1,00,355.00 |
| 2 | ಆಹಾರ ಮತ್ತು ನಾಗರೀಕ ಸರಬರಾಜು | ಹೆಚ್ಚುವರಿ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು | ಕೋಲಾರದಿಂದ ಸಾಗಿಸುವಾಗ ಮೈಲೋನ ಕೊರತೆ | 01 | 27,419.00 |
| 3 | ಆಹಾರ ಮತ್ತು ನಾಗರೀಕ ಸರಬರಾಜು | ಸಿಐಓ, ಬೆಂಗಳೂರು, ಆಹಾರ ಮತ್ತು ನಾಗರೀಕ ಸರಬರಾಜುಗಳು | ಚೆನ್ನೈನಿಂದ ಚಿತ್ರದುರ್ಗಕ್ಕೆ ಸಾಗಿಸುವಾಗ ಆಂಧ್ರ ಅಕ್ಕಿಯ ಕೊರತೆ (67 ಟನ್, 939 ಕೇಜಿ) | 01 | 40,794.75 |
| 4 | ಭೂ ಕಂದಾಯ | ಅಧೀನ ಕಾರ್ಯದರ್ಶಿ, ಭೂ ಕಂದಾಯ | ಸಾಕಷ್ಟಿರದ ಮಳೆಯ ಕಾರಣದಿಂದ ಕಡಿಮೆ ಇಳುವರಿಯಿಂದ ಭೂ ಕಂದಾಯದ ವಜಾ | 01 | 1,82,663.28 |
| 5 | ಭೂ ಕಂದಾಯ | ಅಧೀನ ಕಾರ್ಯದರ್ಶಿ, ಭೂ ಕಂದಾಯ | ಸಾಕಷ್ಟಿರದ ಮಳೆಯ ಕಾರಣದಿಂದ ಕಡಿಮೆ ಇಳುವರಿಯಿಂದ ಭೂ ಕಂದಾಯದ ವಜಾ | 01 | 1,03,491.12 |
| 6 | ಭೂ ಕಂದಾಯ | ಅಧೀನ ಕಾರ್ಯದರ್ಶಿ, ಭೂ ಕಂದಾಯ | ಸಾಕಷ್ಟಿರದ ಮಳೆಯ ಕಾರಣದಿಂದ ಕಡಿಮೆ ಇಳುವರಿಯಿಂದ ಭೂ ಕಂದಾಯದ ವಜಾ | 01 | 9,06,267.13 |
| 7 | ಭೂ ಕಂದಾಯ | ಅಧೀನ ಕಾರ್ಯದರ್ಶಿ, ಭೂ ಕಂದಾಯ | ಸಾಕಷ್ಟಿರದ ಮಳೆಯ ಕಾರಣದಿಂದ ಕಡಿಮೆ ಇಳುವರಿಯಿಂದ ಭೂ ಕಂದಾಯದ ವಜಾ | 01 | 1,14,211.12 |
| 8 | ಮಹಿಳಾ ಮತ್ತು ಮಕ್ಕಳ ಕಲ್ಯಾಣ | ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಇಲಾಖೆ | 1979ರಲ್ಲಿ ನೌಕರಿಯಲ್ಲಿರುವ ಮಹಿಳೆಯರಿಗೆ ದಕ್ಷಿಣ ಕ್ಷೇತ್ರೀಯ ಸಮ್ಮೇಳನಕ್ಕೆ ನೀಡಿದ ಅನುದಾನಗಳು | 01 | 10,000.00 |
| 9 | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ | ಅರಣ್ಯಗಳ ಪ್ರಧಾನ ಸಂರಕ್ಷಕರು, ಬೆಂಗಳೂರು | ಶಿವಮೊಗ್ಗ ಜಿಲ್ಲೆಯ ಸಾಗರದ ಅರಣ್ಯ ಉಪಸಂರಕ್ಷಣಾಧಿಕಾರಿಗಳ ಕಛೇರಿಯಲ್ಲಿ ಲಾಗಿಂಗ್ ಕಂಟ್ರಾಕ್ಟರ್‌ಗಳಿಂದ ಅಧಿಕ ವೆಚ್ಚದ ವಸೂಲಾತಿ | 01 | 20,493.82 |
| | **ಒಟ್ಟು** | | | **09** | **15,05,695.22** |

## ಅನುಬಂಧ 2.1
## ಹೆಚ್ಚು ಮೊತ್ತದ ಬಳಕೆಯಾಗದ ಅವಕಾಶಗಳು ಸಂಭವಿಸಿದ ಪ್ರಧಾನ ಲೆಕ್ಕ ಶೀರ್ಷಿಕೆಗಳು
### (ಉಲ್ಲೇಖ: ಕಂಡಿಕೆ 2.3.1, ಪುಟ 40)

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನ ಸಂಖ್ಯೆ | ಲೆಕ್ಕ ಶೀರ್ಷಿಕೆ | ಹೆಚ್ಚು ಮೊತ್ತದ ಬಳಕೆಯಾಗದ ಅವಕಾಶಗಳು ಒದಗಿದ ಕ್ಷೇತ್ರಗಳು | ಬಳಕೆಯಾಗದ ಅವಕಾಶ |
|---|---|---|---|---|
| 1 | 2 | 3 | 4 | 5 |
| 1 | 1 | 2401 | ಬೆಳೆ ಸಂಗೋಪನೆ – ನಿರ್ದೇಶನ ಮತ್ತು ಆಡಳಿತ –ಕೃಷಿ ಇಲಾಖೆ | 22.22 |
| | | | ಬೆಳೆ ಸಂಗೋಪನೆ – ನಿರ್ದೇಶನ ಮತ್ತು ಆಡಳಿತ – ತೋಟಗಾರಿಕೆ ಇಲಾಖೆ | 44.78 |
